ಇತಿಹಾಸ ಸಂಶೋಧಕ
ಪ್ರೊ. ಲಕ್ಷ್ಮಣ್ ತೆಲಗಾವಿ : ಒಂದು ಸಮಗ್ರ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಚರಿತ್ರೆ ವಿಭಾಗಕ್ಕೆ
ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು
ಬಸವರಾಜ .ಸಿ

ಮಾರ್ಗದರ್ಶಕರು
ಡಾ. ವಿರೂಪಾಕ್ಷಿ ಪೂಜಾರಹಳ್ಳಿ
ಪ್ರಾಧ್ಯಾಪಕರು
ಚರಿತ್ರೆ ವಿಭಾಗ

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೬

ಇತಿಹಾಸ ಸಂಶೋಧಕ
ಪ್ರೊ. ಲಕ್ಷ್ಮಣ್ ತೆಲಗಾವಿ : ಒಂದು ಸಮಗ್ರ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಚರಿತ್ರೆ ವಿಭಾಗಕ್ಕೆ
ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು
ಬಸವರಾಜ .ಸಿ

ಮಾರ್ಗದರ್ಶಕರು
ಡಾ. ವಿರೂಪಾಕ್ಷಿ ಪೂಜಾರಹಳ್ಳಿ
ಪ್ರಾಧ್ಯಾಪಕರು
ಚರಿತ್ರೆ ವಿಭಾಗ

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೬

ಮಾರ್ಗದರ್ಶಕರ ದೃಢೀಕರಣ ಪತ್ರ

ಬಸವರಾಜ .ಸಿ ಅವರು **ಇತಿಹಾಸ ಸಂಶೋಧಕ ಪ್ರೊ. ಲಕ್ಷ್ಮಣ್ ತೆಲಗಾವಿ : ಒಂದು ಸಮಗ್ರ ಅಧ್ಯಯನ** ಎಂಬ ಶೀರ್ಷಿಕೆಯ ಪಿಎಚ್.ಡಿ. ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯ, ಚರಿತ್ರೆ ವಿಭಾಗಕ್ಕೆ ಸಲ್ಲಿಸುತ್ತಿರುವ ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 8.7.22
ಸ್ಥಳ : ವಿದ್ಯಾರಣ್ಯ

ಡಾ. ವಿರೂಪಾಕ್ಷಿ ಪೂಜಾರಹಳ್ಳಿ
ಪ್ರಾಧ್ಯಾಪಕರು ಹಾಗೂ ಮಾರ್ಗದರ್ಶಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬

ಸಂಶೋಧಕರ ಪ್ರಮಾಣ ಪತ್ರ

ಇತಿಹಾಸ ಸಂಶೋಧಕ ಪ್ರೊ. ಲಕ್ಷ್ಮಣ್ ತೆಲಗಾವಿ : ಒಂದು ಸಮಗ್ರ ಅಧ್ಯಯನ ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ, ಚರಿತ್ರೆ ವಿಭಾಗಕ್ಕೆ ಸಲ್ಲಿಸಲು **ಡಾ. ವಿರೂಪಾಕ್ಷಿ ಪೂಜಾರಹಳ್ಳಿ,** ಪ್ರಾಧ್ಯಾಪಕರು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಪ್ರಬಂಧವನ್ನು ಈ ಮೊದಲು ಯಾವ ಪದವಿಗೂ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : 04/02/2016
ಸ್ಥಳ : ವಿದ್ಯಾರಣ್ಯ

ಬಸವರಾಜ .ಸಿ.
ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಈವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ, ಮಹತ್ವ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಈವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ ಮಹತ್ವ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

ಪ್ರವೇಶ

ಚರಿತ್ರೆ ಬರವಣಿಗೆ ಕ್ರಮ ಆರಂಭವಾದಂದಿನಿಂದ ಇಲ್ಲಿಯವರೆಗೆ ಮಾನವ ಬದುಕಿನ ಹಲವು ಮಜಲು - ಮಗ್ಗಲು ಮತ್ತು ಘಟನೆಗಳನ್ನು ಸಂಸ್ಕೃತಿ ಎಂಬ ಹೆಸರಿನಲ್ಲಿ ನಿರೂಪಿಸಲಾಗಿದೆ. ಈ ಪ್ರಕ್ರಿಯೆಯು ಸಮಾಜೋ-ಸಾಂಸ್ಕೃತಿಕ ವಿಕಾಸದ ಸ್ಮೃತಿಪಟಲದಲ್ಲಿ ಸೇರಿತು. ಕೆಲವು ಸನ್ನಿವೇಶ, ಸಂದರ್ಭ, ಸಂಬಂಧಗಳನ್ನೇ ಗತಕಾಲವೆಂದು ಬಿಂಬಿಸಲಾಗಿದೆ. ಗತದ ಬಗ್ಗೆ ಸಾಮುದಾಯಿಕ ಆಧಾರವನ್ನು ಮೌಖಿಕವಾಗಿಯೇ ಅಭಿವ್ಯಕ್ತಗೊಳಿಸಲಾಗುತ್ತಿದೆ. ಈ ಪ್ರಕ್ರಿಯೆ ಸಾಂಸ್ಕೃತಿಕತೆಯ ವಿವಿಧ ರೂಪಗಳಲ್ಲಿ ರೂಢಿಗತವಾಗಿ ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿನತ್ತ ವರ್ಗಾವಣೆಗೊಂಡು ಪಲ್ಲಟಗಳನ್ನು ಸೃಷ್ಟಿಸಿದೆ. ಆಗಾಗ ಜೀವಂತಿಕೆ ಪಡೆದು ಸಮಾಜದಲ್ಲಿ ಹೊಸ ಹೊಸ ಆಯಾಮಗಳನ್ನು ಸೃಷ್ಟಿಸುತ್ತದೆ. ನಾಗರಿಕ ಸಮಾಜದಲ್ಲಿ ಅಕ್ಷರ ಲೋಕದಿಂದ ದೂರವಿದ್ದವರ ಮಾನವನ ಬದುಕಿನ ಚಿತ್ರಣವನ್ನು ತಕ್ಕಮಟ್ಟಿಗೆ ಮೌಖಿಕ ಪರಂಪರೆಯಲ್ಲಿ ಉಳಿಸಿದ್ದು ದಾಖಲಾಗಿದೆ. ಅಂದರೆ ಲಾವಣಿ, ಜಾನಪದ, ಪುರಾಣ, ಮಹಾಕಾವ್ಯ, ಕಥೆ, ಗಾದೆ, ಒಡಪು ಮುಂತಾದವುಗಳ ಮೂಲಕ ಹಾಗೆಯೇ ತಮ್ಮ ಮನಃಸ್ಥಿತಿಗೆ ತಕ್ಕಂತೆ ಅರಿವು ಮತ್ತು ಅನುಭವದಿಂದ ಮುನ್ನೋಟದ ಮುಖೇನ ಚರಿತ್ರೆ ರೂಪಿತಗೊಳ್ಳುತ್ತದೆ. ಆದರೆ ಕಾಲಗತಿಶೀಲವಾಗುತ್ತಲೇ ಬರಹಗಾರನ ಆಸಕ್ತಿ, ಅಭಿರುಚಿ ವಿಸ್ತಾರವಾಗಿದ್ದರ ಪರಿಣಾಮ ಚರಿತ್ರೆಯ ನೋಟ ಬದಲಾಯಿತು. ಆ ನೋಟ ಯಾವುದು? ಆ ಬರಹ ಯಾವುದು? ಮಾನವ ಬೆಳೆದು ಬಂದ ಹಿಂದಿನ ಹೆಜ್ಜೆಗಳನ್ನು ಗುರುತಿಸುವ ಪ್ರಕ್ರಿಯೆ ಇಂದು ನಡೆಯಬೇಕಾಗಿದೆ.

ಹೆರೋಡೋಟಸ್ ಮತ್ತು ಥ್ಯೂಸಿಡೈಡೆಸ್ಸರು ಮಾನವನ ಬದುಕಿನ ವಿವಿಧ ಮಜಲುಗಳನ್ನು ತಮ್ಮದೇ ಆದ ದೃಷ್ಟಿಕೋನಗಳ ಮೂಲಕ ಚರಿತ್ರೆಯ ದಾಖಲೀಕರಣ ಪ್ರಕ್ರಿಯೆಗೆ ಮುನ್ನುಡಿ ಬರೆದರು. ನಂತರ ಚರಿತ್ರೆ ಬರವಣಿಗೆ ಕ್ರಮಗಳು ಗ್ರೀಕ್, ರೋಮನ್, ಅರಬ್, ಚರ್ಚ್ ಮೊದಲಾದ ಪರಿಕಲ್ಪನೆ, ಉದ್ದೇಶ ಮತ್ತು ವಿನ್ಯಾಸಗಳೊಂದಿಗೆ ಸಫಲತೆ ಕಂಡಿತು. ಅಂಥವರಲ್ಲಿ

ರ್ಯಾಂಕೆ, ಸ್ಪೆಂಗ್ಲರ್, ವಾಲ್ಟೇರ್, ಎಡ್ವರ್ಡ್‌ಗಿಬ್ಬನ, ಆಗಸ್ಟ್‌ಕಾಮ್ಟೆ, ಅರ್ನಾಲ್ಡ್ ಟಾಯ್ನಾಬಿ, ಕಾರ್ಲೈಲ್, ಕಾರ್ಲ್‌ಮಾರ್ಕ್ಸ್ ಮೊದಲಾದವರು ಹೊಸ ರೀತಿಯ ದೃಷ್ಟಿಕೋನ ನೀಡಿ ಪಾರಂಪರಿಕ ಚರಿತ್ರೆಯ ರಚನೆಗೆ ಪರ್ಯಾಯ ದೃಷ್ಟಿಕೋನ ನೀಡುವುದರೊಂದಿಗೆ ಹೊಸ ಸಂಚಲವನ್ನೇ ಸೃಷ್ಟಿಸಿದರು.

ಚರಿತ್ರೆ ರಚನೆ ಪರಂಪರೆ ಮತ್ತಷ್ಟು ವೈಜ್ಞಾನಿಕ, ವಸ್ತುನಿಷ್ಟ ಮತ್ತು ಶಿಸ್ತುಬದ್ಧ ಚೌಕಟ್ಟಿನಡಿಯಲ್ಲಿ ದಾಖಲಾಗಿದ್ದು ಮಾತ್ರ ೨೦ನೇ ಶತಮಾನದಲ್ಲಿ. ಇದರ ಫಲವೆಂಬಂತೆ ೨೧ನೇ ಶತಮಾನದಲ್ಲಿ ಮತ್ತಷ್ಟು ಸೂಕ್ಷ್ಮ ಮತ್ತು ಸಮಗ್ರ ಅಧ್ಯಯನಗಳಾದವು. ಹಲವು ದೃಷ್ಟಿಯಿಂದ ಚರಿತ್ರೆಯನ್ನು ವಿವಿಧ ಆಯಾಮಗಳಲ್ಲಿ ವಿಂಗಡಿಸಿ ಅದನ್ನು ಆಧುನಿಕವಾದ, ಆಧುನಿಕೋತ್ತರವಾದ, ನವಚಾರಿತ್ರಿಕವಾದ, ಸಬಾಲ್ಟ್ರನ್‌ವಾದ, ಪ್ರಾದೇಶಿಕ, ಸ್ಥಳೀಯ, ನಗರ, ಮೌಖಿಕ, ಸ್ತ್ರೀವಾದಿ, ರಾಷ್ಟ್ರೀಯವಾದಿ, ಮಾರ್ಕ್ಸ್‌ವಾದಿ, ಓರಿಯಂಟಲಿಸ್ಟ್ ಎಂದು ವಿಭಾಗಿಸಿ ಅಧ್ಯಯನ ಕೈಗೊಳ್ಳಲಾಗಿದೆ. ಪರಿಣಾಮವೆಂಬಂತೆ ಜೇಮ್ಸ್‌ಪ್ರಿನ್ಸೆಪ್, ಬಿ.ಎಲ್. ರೈಸ್, ಮೆಕಾಲೆ, ಮನ್ರೋ, ಸಿವೆಲ್, ಫ್ಲೀಟ್, ಟಾಜೋಸ್, ಮೆಕೆಂಜಿ, ಮೋರೇಸ್, ಟೇಲರ್ ಮುಂತಾದವರು ಆರಂಭದಲ್ಲಿ ಚರಿತ್ರೆಗೆ ಒಂದು ಹೊಸ ಆಯಾಮವನ್ನು ಕೊಟ್ಟರು

ಭಾರತದ ದೇಶಿ ನೆಲೆಯಲ್ಲಿ ಕರ್ನಾಟಕದ ಚರಿತ್ರೆಯನ್ನು ಆರ್. ನರಸಿಂಹಚಾರ್, ಎಂ.ಎಚ್. ಕೃಷ್ಣ, ಸಾಲೆತೊರೆ, ಶ್ರೀಕಂಠಶಾಸ್ತ್ರಿ, ಎಸ್. ಜೋಷಿ, ನಾಗರಾಜರಾವ್, ಆರ್.ಎಸ್. ಪಂಚಮುಖಿ, ಕೇಶವಭಟ್ಟ, ಎಂ.ಎಂ. ಕಲಬುರ್ಗಿ, ಷೇಕ್‌ಅಲಿ, ಶೆಟ್ಟರು, ಚಿದಾನಂದಮೂರ್ತಿ ಮೊದಲಾದ ಸಂಶೋಧಕರು ಕನ್ನಡ ನಾಡಿನ ಚರಿತ್ರೆಯನ್ನು ಕುರಿತು ಸಂಶೋಧನೆ ಮತ್ತು ಅಧ್ಯಯನ ಮಾಡಿದ್ದಾರೆ.

ಚರಿತ್ರೆಯ ಮತ್ತೊಂದು ಮುಖವಾದ ಸಾಹಿತ್ಯದ ನೆಲೆಗಟ್ಟಿನ ಆಧಾರದ ಮೇಲೆ ಶಂಬಾ ಜೋಶಿ, ಗೋವಿಂದ ಪೈ ಅಂಥವರು ಅಧ್ಯಯನ ನಡೆಸಿದರೆ, ಸಾಂಸ್ಕೃತಿಕ ನೆಲೆಗಟ್ಟಿನ ಮೇಲೆ ಹುಲ್ಲೂರು ಶ್ರೀನಿವಾಸ ಜೋಯಿಸ್, ರಘುನಾಥಭಟ್ಟ, ಎಂ.ವಿ. ಶ್ರೀನಿವಾಸ, ಎಸ್. ರಾಜಶೇಖರ, ಬಿ. ಸುರೇಂದ್ರರಾವ್, ಲಕ್ಷ್ಮಣ್ ತೆಲಗಾವಿ ಮೊದಲಾದ ಸಂಶೋಧಕರು ಮೌಖಿಕ, ಜಾನಪದೀಯ, ಪ್ರಾದೇಶಿಕ ಹಾಗೂ ಸ್ಥಳೀಯಕ್ಕೆ ಹೆಚ್ಚಿನ ಆದ್ಯತೆ ನೀಡಿ ಹೊಸ ಪ್ರಯತ್ನದ ಮೂಲಕ ಚರಿತ್ರೆಯ ವಿಭಿನ್ನ ನೋಟವನ್ನು ವಿಸ್ತರಿಸಿದ್ದಾರೆ.

ಕರ್ನಾಟಕದಲ್ಲಿ ಈವರೆಗೆ ಸಾಹಿತಿ, ಸಂಶೋಧಕರ ಬಗ್ಗೆ ಅಲ್ಲಲ್ಲಿ ವಿರಳ ಅಧ್ಯಯನಗಳಾಗಿದ್ದು ಬಿಟ್ಟರೆ ಚರಿತ್ರೆಕಾರರನ್ನು ಕುರಿತು ಸಂಶೋಧನೆ ಮಾಡಿರುವುದು ಕಡಿಮೆ ಎಂದೇ ಹೇಳಬಹುದು. ಕರ್ನಾಟಕದಲ್ಲಿ ಪಿ.ಬಿ. ದೇಸಾಯಿ, ಆರ್.ಎಸ್. ಪಂಚಮುಖಿ, ಜಿ.ಎಸ್. ದೀಕ್ಷಿತ್, ಬಿ. ಷೇಕ್‌ಅಲಿ, ಎಸ್. ಶೆಟ್ಟರ್, ಎಸ್. ರಾಜಶೇಖರ, ಎಚ್. ಚಂದ್ರಶೇಖರ್, ಎಚ್.ಆರ್. ಭಟ್ ಮೊದಲಾದ ಇತಿಹಾಸಕಾರರನ್ನು ಅವಲೋಕಿಸಿದರೆ ಗಮನಾರ್ಹವಾದ ಸಂಶೋಧನೆಗಳು ಆಗಿರುವುದು ವಿರಳ ಎಂದು ತಿಳಿಯಬಹುದು.

ಪ್ರಸ್ತುತ ಅಧ್ಯಯನದ ಕೇಂದ್ರಬಿಂದು ಪ್ರೊ. ಲಕ್ಷ್ಮಣ್ ತೆಲಗಾವಿಯವರು. ಸ್ಥಳೀಯ, ಪ್ರಾದೇಶಿಕ ಮತ್ತು ರಾಷ್ಟ್ರೀಯ ಚರಿತ್ರೆ ಸಂಶೋಧನೆ ಹಾಗೂ ರಚನೆಗೆ ತಮ್ಮದೇ ಕಾಣಿಕೆ ನೀಡಿದವರು ಇವರು ಸ್ಥಳೀಯ ಮತ್ತು ಪ್ರಾದೇಶಿಕ ಚರಿತ್ರೆ ಮೂಲಕ ಪಾಳೆಯಗಾರರನ್ನು ಅಧ್ಯಯನ ಮಾಡಿ ಆ ಕ್ಷೇತ್ರಕ್ಕೆ ಹೊಸ ಕೊಡುಗೆಯನ್ನು ನೀಡಿದ್ದು ಗಮನಾರ್ಹ. ಯಾರು ಚರಿತ್ರೆ ಬಲ್ಲರೋ ಅವರಿಂದ ಮಾತ್ರ ಚರಿತ್ರೆ ರಚನೆ ಸಾಧ್ಯ ಎಂಬ ಬಿ.ಆರ್. ಅಂಬೇಡ್ಕರ್ ಮಾತು ನಿಜ. ಇಲ್ಲಿ ಲಕ್ಷ್ಮಣ್ ತೆಲಗಾವಿಯವರು ಹಾಗೆಯೇ ಮೊದಲು ಚರಿತ್ರೆಯನ್ನು ಆಳವಾಗಿ ಅಧ್ಯಯನ ಮಾಡಿ ಆನಂತರ ಬರವಣಿಗೆ ಮಾಡಿದ್ದು ನಿಜ. ಹೀಗೆ ಚರಿತ್ರೆಕಾರನಾಗಲು ಮೊದಲು ಚರಿತ್ರೆಯನ್ನು ಅರಿತವರಲ್ಲಿ ಲಕ್ಷ್ಮಣ್ ತೆಲಗಾವಿಯವರು ಕೂಡ ಒಬ್ಬರು.

ಲಕ್ಷ್ಮಣ್ ತೆಲಗಾವಿಯವರು ಸಾಹಿತ್ಯ ಸಂಶೋಧಕ, ಹವ್ಯಾಸಿ ಸಂಶೋಧಕರೊಂದಿಗೆ ತಮ್ಮ ಪ್ರತ್ಯೇಕತೆಯನ್ನು ಕಾಪಾಡಿಕೊಂಡಿದ್ದರು. ತಮ್ಮದೇ ಆದ ಶಿಸ್ತಿನ ಚರಿತ್ರೆ ರಚನೆ ಮಾರ್ಗದಲ್ಲಿ ಅನೇಕ ಏರು-ಪೇರುಗಳನ್ನು ಎದುರಿಸಿದರೂ, ಸಂಶೋಧನೆಯಲ್ಲಿ ಯುಗ ಪರಿವರ್ತನೆ ಮಾಡುವಂಥ, ತತ್‌ಕ್ಷಣ ಸಮಾಜದಲ್ಲಿ ಪಲ್ಲಟನೆ ಆಗುವಂತ ಸಂಶೋಧನೆಗಳಿಂದ ದೂರ ಉಳಿದರು. ಎಲ್ಲೂ ಸಂಘರ್ಷಕ್ಕೂ ಆಸ್ಪದ ನೀಡುತ್ತಿರಲಿಲ್ಲ. ಸಹನೆ, ತಾಳ್ಮೆ ಆಳವಾದ ಅಧ್ಯಯನದಿಂದ ಇವರು ಸಮಸ್ಯೆಗೆ ಪರಿಹಾರವನ್ನು ಹುಡುಕಿದ್ದು ಶ್ಲಾಘನೀಯ.

ಲಕ್ಷ್ಮಣ್ ತೆಲಗಾವಿಯವರು ಚರಿತ್ರೆ ರಚನೆಗೆ ಬೇಕಾದ ಆಕರ ಮತ್ತು ಸಿದ್ಧಾಂತಗಳ ಮೂಲಕ ತಮ್ಮದೇ ಆದ ತತ್ವಗಳನ್ನು ಸಮಾಜಕ್ಕೆ ತಿಳಿಸುವ ಪ್ರಯತ್ನ ಮಾಡುತ್ತಿರುವರು. ಚಿತ್ರದುರ್ಗ ಪರಿಸರದಲ್ಲಿ ಶೋಧನೆ ಮತ್ತು ಸಂಶೋಧನೆಯಲ್ಲಿ ಲಕ್ಷ್ಮಣ್ ತೆಲಗಾವಿಯವರಿಗೆ ಸರಿಸಾಟಿ ಯಾರು ಇಲ್ಲ ಎನ್ನಬಹುದು. ಏಕೆಂದರೆ ಲಕ್ಷ್ಮಣ್ ತೆಲಗಾವಿಯವರು ಏಕಾಂಗಿಯಾಗಿ ಅಮೂರ್ತವಾದ ಘಟನೆ, ಸಂಗತಿ, ಪ್ರಾಚ್ಯಾವಶೇಷಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಆದರೆ ಇವರು ಅಂತರಶಿಸ್ತು, ಬಹುಶಿಸ್ತು ಬಳಸಿದರೂ ಯಾವುದೇ ಒಂದು ಸಿದ್ಧಾಂತಕ್ಕೆ ಮೀಸಲಾಗಿಲ್ಲ ಎಂಬುದು ಗಮನಾರ್ಹ. ಚರಿತ್ರೆ ಶಿಸ್ತಿನ ಮೂಲಕ ಸರ್ವಸಂಗತಿ ಚಿಂತನೆ, ಶೋಧನೆ ಮಾಡಿದ್ದು ಇವರ ಹೆಗ್ಗಳಿಕೆಯಾಗಿದೆ.

ಅಧ್ಯಯನದ ಉದ್ದೇಶ

* ಲಕ್ಷ್ಮಣ್ ತೆಲಗಾವಿಯವರ ಬದುಕು-ವೃತ್ತಿ-ಪ್ರವೃತ್ತಿ ಹಾಗೂ ಸಂಶೋಧನೆಯು ಏಕಕಾಲಕ್ಕೆ ಹೇಗೆ ಸಾಧ್ಯ ಎಂಬುದನ್ನು ಇಲ್ಲಿ ಅವಲೋಕಿಸಲಾಗುವುದು. ಇವರ ಸೃಜನಶೀಲ, ಸಾಹಿತ್ಯ, ಅಭಿನಯಾತ್ಮಕ ಹವ್ಯಾಸಗಳನ್ನು, ಸಾಂದರ್ಭಿಕ, ಪರಿಚಯಾತ್ಮಕ ಅವಲೋಕನದಿಂದ ಸಂಶೋಧನಾತ್ಮಕ ವಲಯಕ್ಕೆ ತರುವುದು ಅಧ್ಯಯನದ ಮೂಲ ಉದ್ದೇಶವಾಗಿದೆ.

* ಒಬ್ಬ ಚರಿತ್ರೆಕಾರನ ಸಾಧನೆ-ಶ್ರೇಯಸ್ಸು ಮತ್ತು ಸಂಗತಿಗಳನ್ನು ವೈಜ್ಞಾನಿಕವಾಗಿ, ತಾತ್ವಿಕವಾಗಿ ವಿಶ್ಲೇಷಿಸುವ ಇಲ್ಲಿ ಪ್ರಯತ್ನವಿದೆ.

* ರಾಜಪ್ರಭುತ್ವದಿಂದ ಪ್ರಜಾಪ್ರಭುತ್ವದ ತನಕವೂ ಚಿಂತನಾ ನೆಲೆಗಳ ಬಹು ವ್ಯಾಪಕತೆಯನ್ನು ಅನಾವರಣಗೊಳಿಸಿ, ಜನಮುಖಿ ಸಂಶೋಧನವನ್ನಾಗಿಸುವ ಉದ್ದೇಶ ಹೊಂದಿದೆ. ಬಯಲು ಸೀಮೆಯ ಜೀವನದ ಪ್ರಸ್ತುತೆಯೊಂದಿಗೆ ಅವರ ಅಧ್ಯಯನದ ಶಿಸ್ತು, ಸಂಶೋಧನಾ ಶಿಸ್ತಿನ ಹಿನ್ನೆಲೆಯ ಮೇಲೆ–ಸಮಾಜ, ಸಂಸ್ಕೃತಿ, ಚರಿತ್ರೆ, ರಾಜಕೀಯ, ಆರ್ಥಿಕ ಒತ್ತಡಗಳಿಗೆ ಹೇಗೆ ಮುಖಾಮುಖಿಯಾದರು ಎಂಬುದನ್ನು ಈ ಸಂಶೋಧನೆಯ ಮೂಲಕ ತಿಳಿಸುವುದಾಗಿದೆ.

* ಇವರ ಬರಹಗಳು ಸಮಗ್ರವಾಗಿ ಯಾವ ತಳಹದಿಯ ಮೇಲೆ ನಿಂತಿವೆ ಎಂಬುದು ಹಾಗೂ ಚದುರಿ ಹೋದ ಬರಹಗಳನ್ನು ಒಂದೆಡೆ ಸೇರಿಸಿ ಅವುಗಳ ಸಮಗ್ರ ಒಳನೋಟಗಳನ್ನು ನೀಡಿರುವ ಯಾವುದೇ ಅಧ್ಯಯನಗಳು ಈವರೆಗೂ ನಡೆದಿಲ್ಲ. ಈ ಅಧ್ಯಯನದ ಕೊರತೆಯನ್ನು ನೀಗಿಸುವುದು. ಅಂದರೆ ಬಿಡಿ ಬಿಡಿಯಾಗಿರುವ ಲೇಖನಗಳನ್ನು ಇಡಿಯಾಗಿ ತೋರಿಸುವುದು ಪ್ರಸ್ತುತ ಅಧ್ಯಯನದ ಮುಖ್ಯ ಉದ್ದೇಶಗಳಲ್ಲೊಂದಾಗಿದೆ.

* ಲಕ್ಷ್ಮಣ್ ತೆಲಗಾವಿಯವರ ಕೌಟುಂಬಿಕ ಚಿತ್ರಣದೊಂದಿಗೆ ಹುಟ್ಟು, ಬಾಲ್ಯ, ವಿದ್ಯಾಭ್ಯಾಸ, ಹವ್ಯಾಸ, ಸಂಶೋಧನೆ, ಸಂಪಾದನೆ, ಸೃಜನಶೀಲಸಾಹಿತ್ಯದ ಅವಲೋಕನ, ಅಭಿನಯ ಎಲ್ಲವನ್ನು ನಿರೂಪಿಸಲಾಗುತ್ತದೆ. ಹಾಗೆಯೇ ಅವರ ಸಂಶೋಧನೆ ಹಾಗೂ ಚರಿತ್ರೆಯನ್ನು ಕಟ್ಟುವಲ್ಲಿ ಶ್ರಮಸಾಧನೆಯ ಪರಿಚಯ ಮಾಡುವುದು, ಅವರಿಗೆ ಸಂದ ಪ್ರಶಸ್ತಿ, ಪುರಸ್ಕಾರಗಳು, ಸನ್ಮಾನ, ಗೌರವಗಳನ್ನು ಸಂದರ್ಭೋಚಿತವಾಗಿ ಬಳಸಿಕೊಂಡು ಚರಿತ್ರೆಯ ನಿರ್ಮಾಣದಲ್ಲಿ ಚರಿತ್ರೆಕಾರರ ಸಾಲಿನಲ್ಲಿ ಅವರ ಸ್ಥಾನಮಾನ ಗುರುತಿಸಲಾಗುವುದು.

* ಸಾಮಾಜಿಕ ಪರಿವರ್ತನೆಯನ್ನು ಅರ್ಥೈಸಿ ಅದಕ್ಕೊಂದು ಚೌಕಟ್ಟು ನಿರ್ಮಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ. ಇದರಿಂದ ಸಾಮಾಜಿಕ ನಿಯಂತ್ರಣ ಸಾಧಿಸಲು ಹಾಗೂ ವ್ಯಕ್ತಿಗಳ ನಡವಳಿಕೆಯನ್ನು ಹತೋಟಿಯಲ್ಲಿಡಲು ಸಂಶೋಧನೆ ಮೂಲಕ ಮನಗಾಣಲು ನೆರವಾಗುವುದು.

* ಚರಿತ್ರೆ ಸಂಶೋಧನೆಯಲ್ಲಿ ಹೊಸ ತತ್ವ ಸಿದ್ಧಾಂತಗಳನ್ನು ಪ್ರತಿಪಾದಿಸಲ್ಪಡುವ ವಾತಾವರಣ ನಿರ್ಮಿಸಿದಲ್ಲದೆ, ವಿಜ್ಞಾನ-ತಂತ್ರಜ್ಞಾನ-ಪರಿಣಿತಿಗಳ ಸರ್ವತೋಮುಖ ಅಭಿವೃದ್ಧಿಗೆ ಇವರ ಸಂಶೋಧನೆಯೆ ಮೂಲಭೂತ ಸಾಧನವೆಂದು ಬೆಳಕಿಗೆ ತರಲಾಗುವುದು.

* ಚಾರಿತ್ರಿಕ ಸಂಶೋಧನೆಗೆ ಬಳಸಿಕೊಂಡ ಮಾದರಿ, ಸ್ವರೂಪ, ತಾರ್ಕಿಕತೆ ಹಾಗೂ ವಾಸ್ತವಿಕ ನೆಲೆಗಟ್ಟನ್ನು ಗುರುತಿಸುವುದಾಗಿದೆ.

* ಸಂಶೋಧನೆಗೆ ಕೆಲವು ಮೂಲ ಮಾದರಿಗಳಿದ್ದು, ಅವುಗಳನ್ನು ಒಪ್ಪಿ, ಅಪ್ಪಿಯೂ–ತಪ್ಪಿಸಿಯೂ ಹೊಸ ತಾತ್ವಿಕ ನೆಲೆಯನ್ನು ಪರಿಶೋಧಿಸಿ ಅಧ್ಯಯನದ ಅಸ್ತಿತ್ವ ಸ್ಥಾಪಿಸಿಕೊಂಡಿದ್ದಾರೆಂಬುದನ್ನು ಸಂಶೋಧನಾ ಲೋಕಕ್ಕೆ ಹೇಗೆಲ್ಲಾ ದರ್ಶಿಸಿದ್ದಾರೆಂದು ಮನಗಾಣಿಸುವುದಾಗಿದೆ.

* ಈಗಾಗಲೇ ಸಂಶೋಧನೆಗಳಿಂದ ಬೆಳಕಿಗೆ ಬಂದ ಫಲಿತಗಳು, ನಿಯಮತತ್ವ ಹಾಗೂ ಸಿದ್ಧಾಂತಗಳಲ್ಲಿನ ತಿದ್ದುಪಡಿಯ ಹೊಸ ಮಾರ್ಪಾಡುಗಳಿಗೆ ಕೊಡುಗೆ ನೀಡುವುದು. ಆ ಮೂಲಕ ಹೊಸ ತರದ ಅನ್ವೇಷಣೆ, ಅವಿಷ್ಕಾರ ಕಂಡುಕೊಳ್ಳುವುದು.

* ಚರಿತ್ರೆಯ ಅಧ್ಯಯನ ಸ್ವರೂಪ ತಿಳಿಸುವಂತೆ ಹೊಸ ಸತ್ಯಗಳು ಹಾಗೂ ಜ್ಞಾನದ ಪರಧಿಯನ್ನು ವಿಸ್ತಾರ ಮಾಡುವ ಮತ್ತು ವಿಶಿಷ್ಟತೆಯನ್ನು ಕುರಿತು ಮಹಾಪ್ರಬಂಧದಲ್ಲಿ ವಿಶ್ಲೇಷಿಸಲಾಗುವುದು.

ಈವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಪ್ರೊ. ಲಕ್ಷ್ಮಣ್ ತೆಲಗಾವಿ ಅವರು ರಾಷ್ಟ್ರೀಯ, ಅಂತಾರಾಷ್ಟ್ರೀಯ ಇತಿಹಾಸಕಾರರಲ್ಲದಿದ್ದರೂ ಪ್ರಾದೇಶಿಕ ಇತಿಹಾಸದಲ್ಲಿ ವಿಶೇಷವಾಗಿ ಗುರುತಿಸಿಕೊಂಡವರು. ಕರ್ನಾಟಕದ ಇತಿಹಾಸಕಾರ ಮತ್ತು ಬಹು ದೊಡ್ಡ ಸಂಶೋಧಕ ಎಂಬುದರಲ್ಲಿ ಎರಡು ಮಾತಿಲ್ಲ. ಇವರ ಸಮಕಾಲೀನ ಸಂಶೋಧಕ, ಸಾಹಿತಿ, ಕಾದಂಬರಿಕಾರ, ಚರಿತ್ರೆಕಾರರ ಬಗ್ಗೆ ಸಂಶೋಧನೆಗಳಾಗಿದ್ದು ಸ್ಪಷ್ಟ ಆದರೆ ಲಕ್ಷ್ಮಣ್ ತೆಲಗಾವಿಯವರ ಬಗ್ಗೆ ಈವರೆಗೆ ಯಾವುದೇ ಸಂಶೋಧನೆ ಆಗದಿರುವುದು ಖೇದದ (ದುಃಖ) ಸಂಗತಿ. ಈವರೆಗೆ ನಡೆದಿರುವ ಕಿರು ಅಧ್ಯಯನಗಳನ್ನು ಇಲ್ಲಿ ಅವಲೋಕಿಸಲಾಗಿದೆ.

೧೯೯೭ರಲ್ಲಿ ರಿಗ್ರೆಟ್ ಅಯ್ಯಾರ್‌ರವರು ಪ್ರಕಟಿಸಿದ "ಚಿತ್ರದುರ್ಗ ಸಂಶೋಧನ ತಂಡ : ಪಕ್ಷಿನೋಟ" ಎಂಬ ಕಿರುಹೊತ್ತಿಗೆ ಇವರ ಸಂಶೋಧನ ಆಸಕ್ತಿಗೆ ಹಿಡಿದ ಕನ್ನಡಿಯಾಗಿದೆ.

೧೯೯೯ರಲ್ಲಿ ಚಿತ್ರದುರ್ಗ ನಗರಸಭೆಯು ಲಕ್ಷ್ಮಣ್ ತೆಲಗಾವಿ ಅವರಿಗೆ ನೀಡಿದ ಪೌರ ಸನ್ಮಾನ ಸಂದರ್ಭದ ನೆನಪಿನ ಪ್ರಕಟಣೆಯನ್ನು ಎಸ್.ಆರ್. ಗುರುನಾಥ್ ಹಾಗೂ ಕ.ಮ. ರವಿಶಂಕರ್ ಅವರು "ಪ್ರೊ. ಲಕ್ಷ್ಮಣ್ ತೆಲಗಾವಿ ಅವರ ಜೀವನ ವಿವರ" ಎಂಬ ಪುಸ್ತಿಕೆಯನ್ನು ಪ್ರಕಟಿಸಿದ್ದಾರೆ.

೨೦೦೬ರಲ್ಲಿ ಡಾ. ವಿರೂಪಾಕ್ಷಿ ಪೂಜಾರಹಳ್ಳಿಯವರು "ವಾಲ್ಮೀಕಿ ಸಿರಿ" ಎಂಬ ಸಂಪಾದನಾ ಕೃತಿಯಲ್ಲಿ ಲಕ್ಷ್ಮಣ್ ತೆಲಗಾವಿಯವರ ಜೀವನ ಕುರಿತು ಸೂಕ್ಷ್ಮವಾಗಿ ಪರಿಚಯ ಮಾಡಿದ್ದಾರೆ ಹಾಗೂ ೨೬.೧೦.೨೦೦೬ ಹೂಡೇಂನಲ್ಲಿ ನಡೆದ ಕೂಡ್ಲಿಗಿ ತಾಲೂಕು ಮಟ್ಟದ ವಾಲ್ಮೀಕಿ ಜಯಂತಿಯಲ್ಲಿ ಗೌರವಿಸಿ, ಸನ್ಮಾನಿಸಲಾಯಿತು.

೨೦೧೨ರಲ್ಲಿ ಎಸ್.ಆರ್. ಗುರುನಾಥ್ ಅವರು ಪ್ರೊ. ಲಕ್ಷ್ಮಣ್ ತೆಲಗಾವಿ ಅವರ ಬದುಕಿನ ಕೆಲವು ನೋಟಗಳನ್ನೊಳಗೊಂಡ "ದುರ್ಗಾಭಿಜಾತ" ಹಾಗೂ ಲಕ್ಷ್ಮಣ್ ತೆಲಗಾವಿ ಅವರ ಸಂವಾದ ಕುರಿತಂತೆ "ತೆಲಗಾವಿಜನ್" ಎಂಬ ಎರಡು ಕೃತಿಗಳನ್ನು ಪ್ರಕಟಿಸಿದ್ದಾರೆ.

ಡಾ. ಅಮರೇಶ ಯತಗಲ್ ಅವರು ರಾಯಚೂರು ವಾರಪತ್ರಿಕೆಯಲ್ಲಿ "ಪ್ರೊ. ಲಕ್ಷ್ಮಣ್ ತೆಲಗಾವಿ ಅವರ "ಸಂಶೋಧನೆ ಕುರಿತ ವಿಮರ್ಶೆ" ಎಂಬ ವಿಷಯ ಕುರಿತಂತೆ "ಸಂಶೋಧನ ನಿಧಿ" ಎಂಬ ಲೇಖನವನ್ನು ೨೦೧೨ರಲ್ಲಿ ಪ್ರಕಟಿಸಿದ್ದಾರೆ.

ಲಕ್ಷ್ಮಣ್ ತೆಲಗಾವಿಯವರ ಸ್ನೇಹಿತರಾದ ಡಾ. ಕೆ.ಎಂ. ಸುರೇಶ್ ಅವರು ಸಂಪಾದಿಸಿರುವ "History of Culture" (Prof. Laxman Telagavi Felicitation Volume) ಎಂಬ ಅಭಿನಂದನಾ ಗ್ರಂಥ ಪ್ರಕಟಣೆ ಹಂತದಲ್ಲಿದೆ.

ಮಲ್ಲೇಶ್ ಎಂಬ ಸ್ನಾತಕೋತ್ತರ ವಿದ್ಯಾರ್ಥಿಯು ದಾವಣಗೆರೆ ವಿಶ್ವವಿದ್ಯಾಲಯದ ಇತಿಹಾಸ ವಿಭಾಗಕ್ಕೆ ೨೦೧೨ರಲ್ಲಿ "ಪ್ರೊ. ಲಕ್ಷ್ಮಣ್ ತೆಗಾವಿ ಅವರ ಬದುಕು-ಬರಹ" ಎಂಬ ಕಿರುಪ್ರಬಂಧ ಸಿದ್ಧಪಡಿಸಿ ಸಲ್ಲಿಸಿದ್ದಾರೆ. ದಿನಪತ್ರಿಕೆ ಹಾಗೂ ಮಾಸಪತ್ರಿಕೆಗಳಲ್ಲೂ ಇವರ ಕುರಿತಂತೆ ಲೇಖನಗಳು ಪ್ರಕಟವಾಗಿರುವುದು ಸ್ಮರಣೀಯ.

ಅಧ್ಯಯನದ ಮಹತ್ವ

ಒಬ್ಬ ಚರಿತ್ರೆಕಾರನ ಚರಿತ್ರೆಯನ್ನು ಹೊಸ ಪ್ರಯತ್ನದ ಮೂಲಕ ಕಟ್ಟಿಕೊಡುವುದು ಈ ಸಂಶೋಧನೆಯ ಪ್ರಮುಖ ಧ್ಯೇಯವಾಗಿದ್ದು ಕರ್ನಾಟಕದಲ್ಲಿ ಚರಿತ್ರೆಕಾರರನ್ನು ಕುರಿತು ಸಂಶೋಧನೆ ಮಾಡಿರುವುದು ಕಡಿಮೆ. ಇದೊಂದು ರೀತಿಯಲ್ಲಿ ಲಕ್ಷಿತ ಕ್ಷೇತ್ರವಾಗಿದೆ ಎಂದರೆ ತಪ್ಪಲ್ಲ. ಈ ಕೆಳಗಿನಂತೆ ಈ ಅಧ್ಯಯನವು ಮಹತ್ವ ಪಡೆದುಕೊಂಡಿದೆ.

* ಚಿಂತಕ ಪ್ರೊ. ಲಕ್ಷ್ಮಣ್ ತೆಲಗಾವಿಯವರು ಕೈಗೊಂಡ ಅಧ್ಯಯನದ ಫಲಿತ - ಸಾಧನೆಗಳು, ಮರೆಯಾಗುವ ಮೊದಲು ಅವರ ಅಧ್ಯಯನದ ಜ್ಞಾನದಿಂದ ಸಮಾಜಕ್ಕೆ ಆಗಬೇಕಾದ ಅನಿವಾರ್ಯ ಮತ್ತು ಅಗತ್ಯವಿರುವುದರಿಂದ ಈ ಅಧ್ಯಯನವು ಮಹತ್ವವನ್ನು ಪಡೆದುಕೊಳ್ಳುತ್ತದೆ.

* ಈ ಮೊದಲೇ ಹೇಳಿದಂತೆ ಲಕ್ಷ್ಮಣ್ ತೆಲಗಾವಿಯವರ ಅಧ್ಯಯನಗಳು ಬಹು ವಿಸ್ತಾರವಾಗಿದ್ದು, ಕೆಲವು ಸಾಹಿತಿಗಳು, ವಿಶ್ವವಿದ್ಯಾಲಯಗಳು, ಟ್ರಸ್ಟ್‌ಗಳು, ಪ್ರಾಧಿಕಾರಗಳು, ಸಂಘಸಂಸ್ಥೆಗಳು ಸಂದರ್ಭಕ್ಕೆ ತಕ್ಕಂತೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಬಳಸಿಕೊಂಡು, ಕೃತಿ ಅಥವಾ ಲೇಖನ ರೂಪದಲ್ಲಿ ಪ್ರಕಟಿಸಿದ್ದಾರೆ. ಆದರೆ ಅವರ ಅಧ್ಯಯನದ ಒಟ್ಟು ಫಲಿತಗಳು ಒಂದೆಡೆ ದರ್ಶಿಸುವುದು ಸಾಧ್ಯವಾಗಿಲ್ಲದ ಕಾರಣ ಈ ಸಂಶೋಧನೆಯು ಅಂತಹ ಕೊರತೆ ನೀಗಿಸುವ ಕಾರಣಕ್ಕಾಗಿ ಪ್ರಾಮುಖ್ಯತೆ ಪಡೆದುಕೊಂಡಿದೆ.

* ಚರಿತ್ರೆಯನ್ನಷ್ಟೇ ಲಕ್ಷ್ಮಣ್ ತೆಲಗಾವಿಯವರು ಅಧ್ಯಯನ ಮಾಡದೆ, ಅದರಾಚೆಗಿನ ಬಹು ವಿಷಯಗಳ ಅಧ್ಯಯನ ಅವರಿಂದ ಹೇಗೆ ಸಾಧ್ಯವಾಯಿತೆಂದು ಸಂಶೋಧಿಸಿ ದಾಖಲಿಸಿ ರುವುದರಿಂದ ಪ್ರಸ್ತುತ ಸಂಶೋಧನೆ ಪ್ರಾಮುಖ್ಯತೆ ಪಡೆದುಕೊಂಡಿದೆ.

* ತಮ್ಮ ಇಡೀ ಜೀವಿತದ ಬದುಕಿನಲ್ಲಿ ಸಂಭವಿಸಿದ, ವಿವಿಧ ಕಾಲಗಳಲ್ಲಿ ಎದುರಾದ ಸಾಮಾಜಿಕ ಸಂಗತಿಗಳೊಂದಿಗೆ ಹೇಗೆ ಎದುರಾದರು ಮತ್ತು ಅದರೊಂದಿಗೆ ಚರಿತ್ರೆಯನ್ನು ಹೇಗೆ ದಾಖಲಿಸಲು ಸಾಧ್ಯವಾಯಿತೆಂಬುದು ತೋರಿಸುವುದು ಅಧ್ಯಯನದ ಪ್ರಾಮುಖ್ಯತೆಯಾಗಿದೆ.

* ಸಮಕಾಲೀನ ಸಂದರ್ಭ, ಸವಾಲು, ಸಮಸ್ಯೆಗಳಿಗೆ-ಸಂಶೋಧನೆಯ ಮೂಲಕ ವ್ಯವಸ್ಥೆಯನ್ನು ಬದಲಾಯಿಸುವುದು ಅಥವಾ ಪರಿಹಾರ ಸಾಧ್ಯವೆಂಬುದನ್ನು, ಸಂಶೋಧಕರ, ಸಂಶೋಧನೆ ಯಿಂದಲೇ, ಸಂಶೋಧಿಸಿ ದಾಖಲಿಸಿರುವುದರಿಂದ ಪ್ರಾಮುಖ್ಯತೆ ಪಡೆದುಕೊಂಡಿದೆ.

ಅಧ್ಯಯನದ ವ್ಯಾಪ್ತಿ

ಒಬ್ಬ ವ್ಯಕ್ತಿ ತನ್ನ ಜೀವಮಾನದಲ್ಲಿ ಮಾಡಿದ ಸಾಧನೆ, ಹೋರಾಟ, ಚಳವಳಿ, ಸಂಶೋಧನೆಯನ್ನು ಅಧ್ಯಯನದ ವ್ಯಾಪ್ತಿಗೊಳಪಡಿಸಲಾಗಿದೆ. ಆ ಮೂಲಕ ಕರ್ನಾಟಕದ ಚರಿತ್ರೆಕಾರರನ್ನು ಗಮನಿಸುವುದರೊಂದಿಗೆ ಲಕ್ಷ್ಮಣ್ ತೆಲಗಾವಿಯವರನ್ನು ವಿಶೇಷವಾಗಿ ಅಧ್ಯಯನ ಮಾಡಲಾಗುವುದು. ಏಕೆಂದರೆ ಇವರ ಬರಹ ಮತ್ತು ವ್ಯಕ್ತಿತ್ವ ಎರಡು ವಿಶಿಷ್ಟವಾದವು. ಆದುದರಿಂದ ಚರಿತ್ರೆಕಾರನನ್ನು ಅಲಕ್ಷಿತ ರಚನೆ ಮೂಲಕ ವಿಶ್ಲೇಷಿಸಲಾಗುವುದು.

ಪ್ರಸ್ತುತ ಅಧ್ಯಯನದ ವ್ಯಾಪ್ತಿಯು ಲಕ್ಷ್ಮಣ್ ತೆಲಗಾವಿಯವರ ಹುಟ್ಟು, ಬಾಲ್ಯ, ಪ್ರೌಢ, ಯೌವ್ವನ, ಬದುಕು ಹಾಗೂ ಸಾಧನೆಯನ್ನು ಕಾಲಾನುಕ್ರಮವಾಗಿ ವಿಶ್ಲೇಷಿಸಲಾಗುವುದು.

ಕರ್ನಾಟಕ ಚರಿತ್ರೆಯ ಸಂಶೋಧನೆ, ಬರಹ, ಲೇಖನ, ಕೃತಿ, ಭಾಷಣ, ಗ್ರಂಥ ಸಂಪಾದನೆ ಸೃಜನ ಮತ್ತು ಸೃಜನೇತರ ಸಾಹಿತ್ಯ-ಸಂಶೋಧನೆ ಮೊದಲಾದ ಕ್ಷೇತ್ರಗಳೊಂದಿಗೆ ಲಕ್ಷ್ಮಣ್ ತೆಲಗಾವಿಯವರು ಹೊಂದಿದ್ದ ನಂಟು ಹಾಗೂ ಕಮಿಟ್‌ಮೆಂಟ್‌ನ್ನು ಇಲ್ಲಿ ಗುರುತಿಸಲಾಗುವುದು.

ಚರಿತ್ರೆ ಬರೆದವರ ಬದುಕನ್ನು ಬೆಳಕಿಗೆ ತಂದಿದ್ದು ವಿರಳ. ಚರಿತ್ರೆಕಾರನ ಚರಿತ್ರೆಯನ್ನು ಅಧ್ಯಯನ ಮಾಡುವುದೆಂದರೆ ಅದು ದೊಡ್ಡ ಸಾಹಸವೇ ಸರಿ. ನೊಂದವರ ನೋವು, ಅಲಕ್ಷಿತರ ಸಂಕಟ, ರಾಜರ ವೈಭವ ಹೀಗೆ ಏನೆಲ್ಲಾ ವಿಷಯಗಳನ್ನು ತಿಳಿಸಿದವರ ಬಗ್ಗೆ ಬೆಳಕು ಹಾಯಿಸಲಿಲ್ಲ ಎಂದರೆ ನಾವು ಚರಿತ್ರೆಯನ್ನು ಅಪಮಾನ ಮಾಡಿದಂತೆ. ಚರಿತ್ರೆಯನ್ನು ಗೌರವಿಸಬೇಕು ಮತ್ತು ಚರಿತ್ರೆಕಾರರನ್ನು ಗೌರವಿಸಬೇಕು. ಹೀಗಾಗಿ ಜ್ಞಾನಭಂಡಾರವನ್ನು ಚರಿತ್ರೆಯ ಮೂಲಕ ಧಾರೆಯೆರೆದ ಲಕ್ಷ್ಮಣ್ ತೆಲಗಾವಿಯವರ ಸಂಶೋಧನಾ ಬದುಕು ಮಹಾಪ್ರಬಂಧದ ರಚನೆಗೆ ಪ್ರೇರಣೆಯಾಗಿದೆ.

ಅಧ್ಯಯನದ ವಿಧಾನ

ಒಬ್ಬ ನಾವಿಕನಿಗೆ ಹೇಗೆ ದಿಕ್ಸೂಚಿ ಎಂಬುದು ಗುರಿ ಮುಟ್ಟಿಸುವ ಸಾಧನವಾಗಿದೆಯೋ, ಅದೇ ರೀತಿಯಾಗಿ ಒಬ್ಬ ಸಂಶೋಧಕನಾದವನು ತನ್ನ ಸಂಶೋಧನೆಯ ಯಶಸ್ಸಿಗೆ ಸಂಶೋಧನಾ ವಿಧಾನಗಳು ಬಹುಮುಖ್ಯ ಪಾತ್ರವಹಿಸುತ್ತವೆ. ಏಕೆಂದರೆ ಒಂದು ಸಂಶೋಧನೆಗೆ ವೈಜ್ಞಾನಿಕ ಮತ್ತು ವಸ್ತುನಿಷ್ಠ ಮಾಹಿತಿ ಪಡೆಯಲು ಹಾಗೂ ಜ್ಞಾನ ಸಂಪಾದನೆಗಾಗಿ ಬಳಸುವ ವಿಭಿನ್ನ ಮಾರ್ಗಗಳಿವೆ. ಈ ವಿಧಾನಗಳು ಕೇವಲ ಭೌತ, ಸಮಾಜ ವಿಜ್ಞಾನದ ಮಾರ್ಗಗಳಾಗಿರದೆ ಜ್ಞಾನರಾಶಿ ಪತ್ತೆಗೆ ಪ್ರತೀಕವಾಗಿವೆ.

ಪ್ರಸ್ತುತ ಅಧ್ಯಯನವು ಒಬ್ಬ ಇತಿಹಾಸಕಾರನ ಜೀವನ ಚರಿತ್ರೆ ಆಗಿದೆ. ವ್ಯಕ್ತಿಯನ್ನು ಚರಿತ್ರೆ ಅಧ್ಯಯನ ವಿಧಾನಗಳ ಮೂಲಕ ವಿಶ್ಲೇಷಿಸಲಾಗುವುದು. ಹಾಗೆಯೇ ಇತ್ತೀಚಿನ ಹೊಸ ಬರವಣಿಗೆ ಕ್ರಮಗಳನ್ನು ಅನುಸರಿಸಲಾಗಿದೆ. ಚರಿತ್ರೆಕಾರನ ಚರಿತ್ರೆಯು ಸಹ ಅಧ್ಯಾಯವಾಗಿರುವುದು

ಅದ್ಭುತವೇ ಸರಿ. ಚರಿತ್ರೆ ಚೌಕಟ್ಟಿನಲ್ಲಿ ವ್ಯಕ್ತಿ ಅಧ್ಯಯನಕ್ಕಿಂತ ಚರಿತ್ರೆಕಾರನ ಅಧ್ಯಯನ ವಿಶೇಷವಾಗಿದೆ. ಸಾಂಪ್ರದಾಯಿಕ, ಅಲಕ್ಷಿತ ಹಾಗೂ ದಲಿತ, ಶೋಷಿತ ನೆಲೆಗಳ ಮೂಲಕ ಲಕ್ಷ್ಮಣ್ ತೆಲಗಾವಿಯವರನ್ನು ನಿರೂಪಿಸುವ ಪ್ರಯತ್ನವಿದೆ.

ಇತರ ಅಧ್ಯಯನ ಕ್ರಮಗಳಿಗಿಂತ ಭಿನ್ನವೆನಿಸುವ ಚರಿತ್ರೆಯ ಅಧ್ಯಯನದ ವಿಧಾನವು ಇಲ್ಲಿ ಪ್ರಸ್ತುತವಾಗುತ್ತದೆ. ಲಕ್ಷ್ಮಣ್ ತೆಲಗಾವಿ ಅವರನ್ನು ಒಬ್ಬ ಚಾರಿತ್ರಿಕ ವ್ಯಕ್ತಿ ಆಗಿಲ್ಲ ಎಂದು ಭಾವಿಸಿದ್ದರ ಪರಿಣಾಮ, ಅವರ ಜೀವನದ ಅಧ್ಯಯನವೂ ಚರಿತ್ರೆಯ ಅಧ್ಯಯನವಾಗಿದೆ. ಏಕೆಂದರೆ ಅವರು ಕೊಟ್ಟ ಕೊಡುಗೆಯೇ ಚರಿತ್ರೆಯ ನಿಧಿಯಾಗಿದ್ದು ಅದರ ಮೂಲಕ ಬರಹವನ್ನು ವಿಶ್ಲೇಷಿಸಬೇಕಿದೆ. ಹೀಗೆ ಚರಿತ್ರೆಯ ಅಧ್ಯಯನದ ವಿಧಾನವನ್ನು ಸೂಕ್ತ ಬಳಸಿಕೊಳ್ಳ ಲಾಗಿದೆ. ಈ ಮೊದಲೇ ಶ್ರೀಯುತರನ್ನು ಚರಿತ್ರೆಕಾರನೆಂದು, ಸಂಶೋಧಕನೆಂದು ಪ್ರಸ್ತಾಪಿಸಿದ್ದರಿಂದಾಗಿ ಸಂಶೋಧನೆ ಲಕ್ಷಣಗಳಾದ, ವಿಮರ್ಶೆ - ವಸ್ತುನಿಷ್ಠತೆ, ಪ್ರಾಥಮಿಕ - ಅನುಷಂಗಿಕ ಆಕರ, ಪರಿಕಲ್ಪನೆಗಳು, ಕಾಲಾನುಕ್ರಮಣಿಕೆ, ದೃಷ್ಟಿಕೋನ, ಟಿಪ್ಪಣಿ, ಗ್ರಂಥಋಣಗಳನ್ನು ಅಳವಡಿಸಿಕೊಳ್ಳಲಾಗಿದೆ. ಯಾವುದೇ ಪೂರ್ವಗ್ರಹಕ್ಕೊಳಗಾಗದೇ ನಿರೂಪಿಸುವ ಪ್ರಯತ್ನವಿದೆ.

ಲಕ್ಷ್ಮಣ್ ತೆಲಗಾವಿಯವರು ಬಹುವಿಸ್ತಾರದ ಅಧ್ಯಯನಕಾರರಾಗಿರುವುದರಿಂದ ಸಂಶೋಧನೆಗೆ ಪೂರಕವಾಗಿ ಶಾಸನಶಾಸ್ತ್ರ, ಪುರಾತತ್ವ, ಲಿಪಿಶಾಸ್ತ್ರ, ನಾಣ್ಯಶಾಸ್ತ್ರ, ಹಸ್ತಪ್ರತಿ, ಸಾಂಸ್ಕೃತಿಕ, ಸಾಮಾಜಿಕ, ಮಾನವಿಕ, ರಾಜಕೀಯಶಾಸ್ತ್ರ ಮುಂತಾದ ಹಲವು ಅಧ್ಯಯನ ಕ್ರಮಗಳ ಅವಲೋಕನ ಮಾಡಿರುವುದರಿಂದ ಅನ್ವಯಿಸಿಸ್ತುಗಳ ಅಧ್ಯಯನ ವಿಧಾನವನ್ನು ಪ್ರಧಾನವಾಗಿ ಅನುಸರಿಸಲಾಗಿದೆ. ಆದರೂ ಈ ಅಧ್ಯಯನಕ್ಕೆ ಕೆಲವು ಮಿತಿಗಳಿರುವುದು ಸಹಜ.

ಲಕ್ಷ್ಮಣ್ ತೆಲಗಾವಿಯವರು ಸಾಹಿತ್ಯ ರಚನಕಾರರಾದರೂ ಕೆಲವು ಸಂದರ್ಭ-ಸನ್ನಿವೇಶಕ್ಕೆ ಅನುಗುಣವಾಗಿ ಅವರ ಸಾಹಿತ್ಯ ಸಂಶೋಧನಾ ವಿಧಾನವನ್ನು ಅನುಷಂಗಿಕವಾಗಿ ಬಳಸಿ ಕೊಳ್ಳಲಾಗಿದೆ. ಆದರೆ ಇವರ ಸಂಶೋಧನಾ ಕೃತಿ, ಲೇಖನಗಳಲ್ಲಿ ಗಟ್ಟಿಯಾದ ಪಾಂಡಿತ್ಯವನ್ನು, ಆಳವಾದ ಅಧ್ಯಯನವನ್ನು ಸಂಕೇತಿಸುತ್ತವೆ.

ಒಟ್ಟಾರೆ ಒಬ್ಬ ಚಿಂತಕನ ಬಹುಶಿಸ್ತೀಯ ಅಧ್ಯಯನಕ್ಕೆ ನೆರವಾಗಬಹುದಾದ ಎಲ್ಲಾ ರೀತಿಯ ವಿಧಾನಗಳ ಸದ್ಬಳಕೆ ಮಾಡಿಕೊಂಡು ಸಂಶೋಧನೆ ಕೈಗೊಳ್ಳಲಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಸಂಶೋಧನೆಯು ಚರಿತ್ರೆಕಾರನ ಜೀವನ ಮತ್ತು ಸಾಧನೆಯನ್ನು ಕುರಿತಂಥದ್ದು. ಚರಿತ್ರೆ ರಚನೆಕಾರರಾದ ಲಕ್ಷ್ಮಣ್ ತೆಲಗಾವಿ ಅವರ ಬಾಲ್ಯದ ಹಂಬಲ, ತುಡಿತ, ಆಸಕ್ತಿಗಳ ಹಿನ್ನೆಲೆಯಲ್ಲಿ ಆರಂಭಿಕ ಹಂತದಿಂದ ಪ್ರವೃತ್ತಿ, ಸಂಶೋಧನೆ, ಸಂಪಾದನೆ, ಚರಿತ್ರೆ ಅಧ್ಯಯನದ ಸ್ವರೂಪ, ಲೇಖನ, ಕೃತಿಗಳನ್ನು, ಪ್ರಾಥಮಿಕ, ಅನುಷಂಗಿಕ ಆಕರಗಳನ್ನು ಸರಳ ಮತ್ತು

ಸಂಕೀರ್ಣ ನೆಲೆಗಳಲ್ಲಿ ಪರಿಶೋಧಿಸಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಪ್ರಸ್ತುತ ಅಧ್ಯಯನವು ಏಳು ಅಧ್ಯಯನಗಳನ್ನು ಹೊಂದಿದೆ.

ಮೊದಲನೆಯ ಅಧ್ಯಾಯದಲ್ಲಿ, ವಿಷಯ ಪ್ರವೇಶಿಕೆ ಇದ್ದು, ಅಧ್ಯಯನದ ಉದ್ದೇಶ, ಈವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ, ಮಹತ್ವ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ ಹಾಗೂ ವೈಧಾನಿಕತೆಯ ಅನಿವಾರ್ಯತೆ ಕಂಡುಕೊಂಡು, ಮುಂದಿನ ಅಧ್ಯಯನ ಕ್ರಮಕ್ಕೆ ಸಂಶೋಧನೆಯ ನಿರ್ದಿಷ್ಟ ರೂಪ ಕಲ್ಪಿಸಲು ಪ್ರವೇಶಿಕೆಯನ್ನು ನೀಡಲಾಗಿದೆ.

ಲಕ್ಷ್ಮಣ್ ತೆಲಗಾವಿ ಅವರ ಜೀವನದ ಹಂತಗಳನ್ನು, ಬಾಲ್ಯದಿಂದ ಇಲ್ಲಿಯ ತನಕದ ಜೀವನ ಚಿತ್ರಣ, ಶಿಕ್ಷಣ, ವೃತ್ತಿ ಹಾಗೂ ಪ್ರವೃತ್ತಿಗಳನ್ನು, ಬದುಕಿನ ಬವಣೆಗಳನ್ನು ಸಾಂಸ್ಕೃತಿಕ, ಸಾಮಾಜಿಕ ಒತ್ತಡ ಮತ್ತು ಅನಿವಾರ್ಯತೆಗಳನ್ನು ಒದಗಿಸಿ ಜೀವನದ ಸ್ಥೂಲ ಚಿತ್ರಣವನ್ನು **ಎರಡನೆಯ ಅಧ್ಯಾಯದಲ್ಲಿ** ನೀಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ, ಲಕ್ಷ್ಮಣ್ ತೆಲಗಾವಿ ಅವರ ಭಿನ್ನವಾದ ಸಂಶೋಧನೆ ಹಾಗೂ ಚಾರಿತ್ರಿಕ ದೃಷ್ಟಿಕೋನವನ್ನು ಅವರ ಸಂಶೋಧಿತ ಕ್ಷೇತ್ರಗಳ ಆಧಾರದ ಮೇಲೆ ಗುರುತಿಸುವ ಯತ್ನ ಮಾಡಲಾಗಿದೆ. ಪ್ರಾಕ್ತನ, ಪುರಾತತ್ವ ಶೋಧನೆಯ ಹಿನ್ನೆಲೆಯಲ್ಲಿ ಶಿಲ್ಪ, ವೀರಗಲ್ಲು, ನಾಣ್ಯ, ಶಾಸನ, ಬಯಲುಬಂಡೆ, ರೇಖಾಕೃತಿಗಳನ್ನು ಐತಿಹ್ಯದ ಮೂಲಕ ಅಧ್ಯಯಿನಿಸಿ ಸಮಕಾಲೀನ ಚರಿತ್ರೆ ಸಂಶೋಧನೆಗೆ ಹಲವು ದೃಷ್ಟಿಕೋನಗಳ ಮೂಲಕ ವಿಶ್ಲೇಷಿಸಲಾಗಿದೆ. ಸಾಂಪ್ರದಾಯಿಕ, ಅಲಕ್ಷಿತ, ರಾಷ್ಟ್ರೀಯವಾದಿ, ವಸಾಹತುಶಾಹಿ ದೃಷ್ಟಿಕೋನಗಳನ್ನು ತಮ್ಮ ಬರವಣಿಗೆಯಲ್ಲಿ ಅಳವಡಿಸಲಾಗಿದೆ.

ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೂ ಸಂಶೋಧನ ನೆಲೆಯ ಹಿನ್ನೆಲೆಯಲ್ಲಿ ಮೌರ್ಯ, ಶಾತವಾಹನ, ವಿಜಯನಗರ, ಚಿತ್ರದುರ್ಗ ಅರಸರವರೆಗೂ ಸಂಶೋಧಿಸಿದ ದಾಖಲೆಗಳ ಅಧ್ಯಯನ **ನಾಲ್ಕನೆಯ ಅಧ್ಯಾಯದಲ್ಲಿ** ವಿವರಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ, ಶೋಧಿತ, ಅಭಿನಂದನಾ, ಸ್ಮರಣ ಸಂಚಿಕೆ, ಲೇಖನ ಸಂಪಾದಿತ ಕೃತಿಗಳ ವಿಶ್ಲೇಷಣೆ ಮಾಡಲಾಗಿದೆ. ಕೃತಿಗಳ ಸಂಖ್ಯೆಯೂ ವ್ಯಾಪಕವಾಗಿರುವ ಕಾರಣ, ಅವುಗಳನ್ನು ಕ್ಷೇತ್ರ ವಿಭಾಗ ಕ್ರಮಕ್ಕೆ ಅನ್ವಯಿಸಿಯೇ, ಅವಲೋಕಿಸಲಾಗಿದೆ.

ಲಕ್ಷ್ಮಣ್ ತೆಲಗಾವಿ ಅವರ ಚಿಂತನಾ ತಾತ್ವಿಕ ನೆಲೆಗಳ ಸ್ವರೂಪದ ಬಗ್ಗೆ ತಿಳಿಸಲಾಗುವುದು ಹಾಗೂ ಸೃಜನಶೀಲ ಮತ್ತು ಸೃಜನೇತರ ಬರಹಗಾರರಾಗಿ ಅವರ ವ್ಯಕ್ತಿತ್ವದ ಬಹುಮುಖ್ಯತೆಯನ್ನು ಬಹುಮುಖಿ ಚಿಂತನೆಗಳ ಮೂಲಕ **ಆರನೆಯ ಅಧ್ಯಾಯದಲ್ಲಿ** ವಿಶ್ಲೇಷಿಸಲಾಗಿದೆ.

ಏಳನೆಯ ಅಧ್ಯಾಯವು ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳನ್ನು ಸಮಾರೋಪ ದಲ್ಲಿ ವಿಶ್ಲೇಷಿಸಲಾಗಿದೆ.

ಅನುಬಂಧದಲ್ಲಿ ಅಭ್ಯಾಸ ಮಾಡಿದ ಗ್ರಂಥಗಳು, ಸಂದರ್ಶನ ಮಾಡಿದ ವ್ಯಕ್ತಿ-ವಿದ್ವಾಂಸರುಗಳ ವಿವರ, ಪ್ರಮುಖ ಘಟನಾವಳಿಗಳು, ಕೃತಿ, ಲೇಖನ ಸೂಚಿ, ಛಾಯಾಚಿತ್ರಗಳು ಇತರ ವಿವರಗಳನ್ನು ಕೊಡಲಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಎಲ್ಲಾ ಅಂಶಗಳನ್ನು ಶೋಧಿಸಲಾಗಿದೆ ಎಂದಲ್ಲ, ಸೀಮಿತ ಕಾಲಾವಧಿ ಮತ್ತು ಎಲ್ಲಾ ವಿಷಯವನ್ನು ಗಮನದಲ್ಲಿಟ್ಟುಕೊಂಡು ವಿಶ್ಲೇಷಿಸಲಾಗಿದೆ. ಈ ಅಧ್ಯಯನಕ್ಕೊಂದು ಮಿತಿಯಿದೆ.

ಆಧಾರಸೂಚಿ ಕೊನೆಟಿಪ್ಪಣಿಗಳು ಹೆಚ್ಚಿರುವುದಿಲ್ಲ, ಕಾರಣ ಸಂಶೋಧನೆಗೆ ಆಯ್ಕೆ ಮಾಡಿದ ವ್ಯಕ್ತಿಯೇ ಜೀವಂತ ಆಕರ. ಅವರ ಬದುಕು ಮತ್ತು ಬರಹ ಬಗ್ಗೆ ಸಾಕಷ್ಟು ಕೃತಿ - ಲೇಖನಗಳು ಪ್ರಕಟವಾಗಿದ್ದು, ಆ ಮೂಲಕ ಅವರು ಸಮಾಜಕ್ಕೆ ಮಾದರಿ ಮತ್ತು ಆದರ್ಶ ವಾಗಿರುವುದು ಗಮನಾರ್ಹ.

◆◆

ಅಧ್ಯಾಯ : ಎರಡು

ಲಕ್ಷ್ಮಣ್ ತೆಲಗಾವಿ ಅವರ ಬಾಲ್ಯ, ಶಿಕ್ಷಣ, ವೃತ್ತಿ ಹಾಗೂ ಪ್ರವೃತ್ತಿ

ಅಧ್ಯಾಯ : ಎರಡು

ಲಕ್ಷ್ಮಣ್ ತೆಲಗಾವಿ ಅವರ ಬಾಲ್ಯ, ಶಿಕ್ಷಣ, ವೃತ್ತಿ ಹಾಗೂ ಪ್ರವೃತ್ತಿ

ಜನರ ಮನಸ್ಸಿನಾಳದಲ್ಲಿ ಮನೆ ಮಾತಾಗಿರುವ ಪುರಾಣ, ಕಥೆ, ಕಾದಂಬರಿಗಳಲ್ಲಿ ಕೆಲವು ವಿಶಿಷ್ಟ ಸಂಗತಿಗಳು ಇಂದಿಗೂ ಪ್ರಸ್ತುತವಾಗಿವೆ. ಅವುಗಳನ್ನು ವೀಕ್ಷಿಸುವ ಪ್ರೇಕ್ಷಕನಿಗೆ ಆ ಕಥೆಯಲ್ಲಿ ಬರುವ ಕೆಲವು ಪಾತ್ರಧಾರಿಗಳಿಗೆ ಯಾವುದೋ ಸಮಸ್ಯೆ ಎದುರಾಗುವುದು ಅಥವಾ ಸಂಕಷ್ಟ ಕಂಡುಬರುವುದು. ಆ ಸಂಕಷ್ಟದಿಂದ ಹೊರಬರಲು ಅಷ್ಟೇ ರಮ್ಯವಾಗಿ, ಕೆಲವು ಆಲೋಚನೆಗಳು ಕಂಡುಬರುವವು. ಸನ್ನಿವೇಶದಲ್ಲಿ ಇದ್ದಕ್ಕಿದ್ದಂತೆಯೆ ಯಾವುದೊ ಒಂದು ಶಕ್ತಿಯು ಆ ಸಮಸ್ಯೆ ಪರಿಹರಿಸಲಿಕ್ಕಾಗಿ ಕೆಲವು ಪಾತ್ರಗಳು ಸೃಷ್ಟಿಯಾಗುತ್ತವೆ. ಸೃಷ್ಟಿಯಾದ ಆ ಪಾತ್ರಗಳು ಸಾಮಾಜಿಕವಾಗಿ ಅಂತರ್ಗತವಾಗಿರುವ ವಿಷಯಗಳನ್ನು ಮನದಲ್ಲಿಟ್ಟುಕೊಂಡೇ ಅಪವರ್ತಿತ ಕಲ್ಪನೆಗಳನ್ನು ಅಪವರ್ತಿಸುವ ಶಕ್ತಿಗಳನ್ನು ಧ್ವಂಸ ಮಾಡುವ ಅಥವಾ ಬುದ್ಧಿ ಕಲಿಸುವ, ಮನಪರಿವರ್ತಿಸುವಂತಹ ಕೆಲವು ಪಾತ್ರಗಳು ಮೂಡುತ್ತವೆ. ಇದು ಒಂದು ಕಲ್ಪಿತ ಮನೋರಂಜನೆಯಲ್ಲಿ ಕಂಡು ಬರುವ ಸನ್ನಿವೇಶಗಳು. ಮತ್ತೆ ಕೆಲವು ರಂಜನೀಯ ಸನ್ನಿವೇಶ ಗಳೆಂದರೆ ಕೆಲವು ಹಿಂದಿ, ತೆಲುಗು, ತಮಿಳು, ಕನ್ನಡ ಸಿನಿಮಾನಗಳಲ್ಲಿ ಯಾವುದೋ ಒಂದು ಸಂಗತಿಗೆ ಸಂಬಂಧಪಟ್ಟಂತೆ ಕೆಲವು ಸನ್ನಿವೇಶಗಳನ್ನು ನೋಡಿದ ಕೂಡಲೇ ಹಿಂದಿನ ಜನ್ಮದಲ್ಲಿ ಈ ಪರಿಸರದಲ್ಲಿ ನಾವುಗಳು ಬದುಕಿ ಬಾಳಿದಂತೆ ಕಂಡುಬರುತ್ತವೆ. ಆ ಮೂಲಕ ಕೆಲವು ಶಕ್ತಿಯ ವಿರುದ್ಧ ಕೆಲವು ವಿಚಾರಧಾರೆಗಳನ್ನು, ಸಂಸ್ಥಾಪಿಸುವ ದೃಷ್ಟಿಯಿಂದ ನೈತಿಕ ತಳಹದಿಯ ಮೇಲೆ ಹೋರಾಟ ಮಾಡಿದಂತಹ ಅನುಭವ ಗೋಚರಿಸುವುದು ಅದರ ಕುರುಹುಗಳಾಗಿ ಆ ಸ್ಥಳ, ನೋಡಿದಾಕ್ಷಣ, ಸ್ಪರ್ಷಿಸಿದಾಕ್ಷಣ ಅಥವಾ ಆ ನೆಲದ ಮೇಲೆ ಕಾಲಿಟ್ಟಾಕ್ಷಣ ಇಲ್ಲಿನ ಪರಿಸರಕ್ಕೂ ನನಗೂ ಆಜನ್ಮ ಸಂಬಂಧವಿದೆ ಎಂಬುದು ಅರಿವಿಗೆ ಬರುವುದು ಮತ್ತು ಬದುಕಿನ ಕಾಲಘಟ್ಟಗಳಲ್ಲಿ ನ್ಯಾಯಕ್ಕಾಗಿ ಹೋರಾಟ ಮಾಡಿದ ಆ ಕಾರ್ಯಗಳು ಅರ್ಧದಲ್ಲೇ ನಿಂತಂತಹ, ಉಳಿದರ್ಧ ಕಾರ್ಯಗಳನ್ನು ಈಗ ಪೂರೈಸುವಂತ ಕಾರಣಕ್ಕೆ ಕೆಲವು ಪಾತ್ರಗಳನ್ನು ಕಾಣುತ್ತೇವೆ. ಇಂಥ ಕಾರ್ಯಸಾಧನೆ ಮಾಡಿದವರಲ್ಲಿ ಚರಿತ್ರೆಕಾರರೇ ಮೊದಲಿಗರು. ಆನಂತರ

ಸಂಸ್ಕೃತಿ ಚಿಂತಕರು, ಸಮಾಜ ವಿಜ್ಞಾನ ಕ್ಷೇತ್ರಗಳಲ್ಲಿನ ತಜ್ಞರನ್ನು ಗುರುತಿಸಬಹುದು. ಹೀಗೆ ಕನ್ನಡ ನಾಡಿನ ಹಲವು ಚರಿತ್ರೆಕಾರರ ಪೈಕಿ ಲಕ್ಷ್ಮಣ್ ತೆಲಗಾವಿಯ ಅವರು ವಿಶಿಷ್ಟವಾಗಿ ಕಂಡು ಬರುತ್ತಾರೆ. ಅವರ ಭಾಷೆ, ಬರಹದಂತೆ ಬದುಕನ್ನು ಕಾಣುತ್ತಾರೆ ಮತ್ತು ಸಮಾಜದಲ್ಲಿ ಮಾದರಿ ವ್ಯಕ್ತಿಯಾಗಿದ್ದರು ತೆಲಗಾವಿಯವರು. ಹಾಗಾಗಿ ಅವರು ಸಂಶೋಧಕ ಮತ್ತು ಇತಿಹಾಸಕಾರರಲ್ಲಿ ತಮ್ಮದೇ ಆದ ವಿಶೇಷತೆಯನ್ನು ಉಳಿಸಿಕೊಂಡಿರುವುದು ಮಹತ್ವದ ಸಂಗತಿ.

ಮಧ್ಯ ಕರ್ನಾಟಕದ ಹೆಸರಾಂತ ಉಕ್ಕಿನ ಕೋಟೆಯೆಂದರೆ ಚಿತ್ರದುರ್ಗ. ಈ ಕಲ್ಲಿನ ಕೋಟೆಯ ಚರಿತ್ರೆಯನ್ನು ಜನಸಾಮಾನ್ಯರಿಗೆ ಮತ್ತು ಅಕ್ಷರವಂತರಿಗೆ ತಿಳಿಸುವ ಪ್ರಯತ್ನವನ್ನು ೨೦ರ ದಶಕಗಳಲ್ಲಿ ಮಾಡಿದವರು ಪಿ. ಕೃಷ್ಣರಾವ್ ಮತ್ತು ಎಂ.ಎಸ್. ಪುಟ್ಟಣ್ಣನವರು. ಇವರು ಬುನಾದಿ ಹಾಕಿದರೆ, ಆ ಬುನಾದಿಯ ಮೇಲೆ ೫೦-೬೦ರ ದಶಕದ ಆಜು-ಬಾಜುವಿನಲ್ಲಿ ಹುಲ್ಲೂರು ಶ್ರೀನಿವಾಸ ಜೋಯಿಸರು ಕಟ್ಟಡ ಶುರು ಮಾಡಿದರು. ಸ್ವತಂತ್ರ ದೃಷ್ಟಿಕೋನದ ಮೂಲಕ ಲಭ್ಯವಿರುವ ಕೆಲವು ಆಕರಗಳಿಂದ ಇತಿಹಾಸ ಕಟ್ಟಿ ಪರಿಚಯಿಸಿ ಚಿರಪರಿಚಿತರಾದರು. ಇವರ ನಂತರ ಅಲ್ಲಲ್ಲಿ ಕೆಲವು ಹವ್ಯಾಸಿ ಬರಹಗಾರರ ಬಿಡಿ ಲೇಖನಗಳನ್ನು ಬಿಟ್ಟರೆ, ಸೈದ್ಧಾಂತಿಕವಾಗಿ, ಕೋಟೆಯ ಇತಿಹಾಸವನ್ನು ಕಟ್ಟಿಕೊಡಲು ಸಂಶೋಧಕರ ಕೊರತೆ ಇದ್ದದ್ದು ನಿಜ. ಅಂಥ ಕೊರತೆಯನ್ನು ನೀಗಿಸಿದವರು ಲಕ್ಷ್ಮಣ್ ತೆಲಗಾವಿಯವರು. ಇವರ ಹಿನ್ನೆಲೆಯನ್ನು ಗಮನಿಸೋಣ.

ತಂದೆಯ ಜೊತೆ ಬೆಟ್ಟ-ಗುಡ್ಡಕ್ಕೆ ಬಂದು ಸೌದೆ ಸಂಗ್ರಹಿಸುತ್ತಾ, ಪ್ರಕೃತಿಯ ಸೊಬಗು, ಬೆಟ್ಟ-ಗುಡ್ಡಗಳ ಸೌಂದರ್ಯ ಕೋಟೆಯ ವೀರ ಮೌನವನ್ನು ಮೌನದಿಂದಲೇ, ಮೌನಿಯಾಗಿಯೆ ಮನದಲ್ಲಿಯೇ, ಆಶ್ಚರ್ಯ ಚಕಿತನಾಗಿ ವೀಕ್ಷಿಸುವ, ಆ ಬೆಟ್ಟ ಗುಡ್ಡ-ಕೋಟೆಗಳು ಮೌನಿಯಾಗಿಯೆ "ಹೇ ಬಾಲಕನೇ ಮುಂದೊಂದು ದಿವಸ ನಮ್ಮ ಮೌನಕ್ಕೆ ಕಾರಣಗಳನ್ನು ನೀನು ಹುಡಕಲಿಕ್ಕೆ, ನಮ್ಮಲ್ಲಿ ಸುಪ್ತವಾಗಿರುವ, ಆಂತರಿಕವಾಗಿ ಅಡಗಿರುವ ಜ್ಞಾನದ ಸಿಕ್ಕುಗಳನ್ನು ಬಿಡಿಸುವ ಸಂಶೋಧಕನಾಗಿ ನೀನು ಬರುತ್ತೀಯಾ! ಎಂಬ ನಂಬಿಕೆ ನಮಗಿದೆ ಎಂದುಕೊಂಡಿರಬೇಕು. ಹೀಗೆಲ್ಲ ಅನಿಸಿದಾಗೆಲ್ಲ ಆ ಬಾಲಕ ಬೆಟ್ಟ-ಗುಡ್ಡ ಕೋಟೆಯೊಂದಿಗೆಯೆ ಮನದಲ್ಲಿ ಅವುಗಳ ಜೊತೆ ಅಲೌಕಿಕವಾಗಿ ಸಂವಾದಿಸುತ್ತಾನೆ ಮತ್ತು ಪ್ರತಿಯೊಂದನ್ನು ಸ್ಪರ್ಶಿಸುವ, ಮುದ್ದಿಸುವ, ಆಕ್ರಂದನ ಆಲಿಸುವ, ಅರಿಯುವ, ಕೌತುಕವನ್ನು ಹೊಂದಿದವನಾಗಿದ್ದಾನೆ. ಆ ಬಾಲ ಚೈತನ್ಯ ಸೌದೆ ಸಂಗ್ರಹಿಸುತ್ತಲೆ, ಸಗಣಿ ಸಂಗ್ರಹಿಸುತ್ತಲೆ ಆನಂದದಿಂದ ಅವುಗಳೊಂದಿಗೆ ಒಡನಾಡಿ ಯಾಗಿದ್ದುಕೊಂಡು ಮುಂದೊಂದು ದಿವಸ ದುರ್ಗಾಭಿಜಾತನೆಂಬ ಬಿರುದಿನೊಂದಿಗೆ ಮೇರು ಸಂಶೋಧಕನ ಪಟ್ಟವನ್ನು ಮುಡಿಗೇರಿಸಿಕೊಂಡ ಸಂಶೋಧನಾ ನಿಧಿಯಾಗಿದ್ದಾರೆ ಲಕ್ಷ್ಮಣ್ ತೆಲಗಾವಿ ಅವರು.

ಡಾ. ಬಿ.ಆರ್. ಅಂಬೇಡ್ಕರ್‌ರಂತೆಯೇ ಜಾತಿವ್ಯವಸ್ಥೆಯ ಕೊನೆ ಶ್ರೇಣಿಯಲ್ಲಿನ ಅಥವಾ ಸಾಂವಿಧಾನಿಕ ಪರಿಭಾಷೆಯ, ಪರಿಶಿಷ್ಟ ಜಾತಿಗೆ ಸೇರಿದ ಸಾಮಾಜಿಕ ಆರೋಪಿತ ವ್ಯವಸ್ಥೆಯ ಅಸ್ಪೃಶ್ಯ ಸಮಾಜಕ್ಕೆ ಸೇರಿದ ಹಾಗೂ ಮಹಾತ್ಮಗಾಂಧೀಜಿಯವರು ಜನಪ್ರಿಯಗೊಳಿಸಿದ, ನರಸಿಂಹ

ಮೆಹತಾರವರು ಪರಿಚಯಿಸಿದ ಪರಿಕಲ್ಪನೆಯಾದ ಹರಿಜನ ಜಾತಿಗೆ ಸೇರಿದವರಾಗಿದ್ದಾರೆ. ಜನಸಾಮಾನ್ಯರು ಸಂಬೋಧಿಸುವಂತೆ ಮಾದಿಗ ಜಾತಿಯ ಸಮುದಾಯದ ಸೌಲಭ್ಯ ವಂಚಿತ ಸಮೂಹದ ಚರ್ಮ ಶಿಲ್ಪಿಯ ಜಾತಿವ್ಯವಸ್ಥೆಯವರಾದ ತಂದೆ ಡಿ. ಪರಸಪ್ಪ ಮತ್ತು ತಾಯಿ ಚಂದ್ರಮ್ಮ ಎಂಬ ದಂಪತಿಗಳ ೨ನೇ ಮಗನಾಗಿ ೧೯೪೭ ಜನವರಿ ೧ರಂದು ಲಕ್ಷ್ಮಣ್ ತೆಲಗಾವಿಯವರು ಚಿತ್ರದುರ್ಗದಲ್ಲಿ ಜನಿಸಿದರು. ೧೯೪೭ ಎಂದರೇನೇ ಒಂದು ರೀತಿಯ ರೋಮಾಂಚನ. ಅಂದರೆ ೧೯೪೭ ಭಾರತೀಯರ ಮುಕ್ತಿಯ ದಶಕವಾದರೆ, ೧೯೪೭ ಚಿತ್ರದುರ್ಗದ ಐತಿಹಾಸಿಕ ದರ್ಶನದ ಮೇರು ಸಂಶೋಧಕನ ಆಗಮನವೂ ಹೌದು. ಚಿತ್ರದುರ್ಗದ ಯೂನಿಯನ್ ಥಿಯೇಟರ್ ಹಿಂದೆ ಇರುವ ಕೊಳಚೆ ಪ್ರದೇಶದಲ್ಲಿ ಜನಿಸಿದವರು. ಇತಿಹಾಸಕಾರ ಲಕ್ಷ್ಮಣ್ ತೆಲಗಾವಿಯವರು. ಕೊಳಚೆ ಪ್ರದೇಶವೆಂದರೇನೆ ಜನಸಾಮಾನ್ಯರೆಲ್ಲರೂ ಗುರುತಿಸುವಂತೆ ಬಡತನ, ಅನಕ್ಷರತೆ, ದಾರಿದ್ರ್ಯ, ಮಲೀನತೆ. ಕತ್ತಲ ಕೂಪ, ಧೂಳು, ದುರ್ವಾಸನೆ, ಅಪರಾಧ ಚಟುವಟಿಕೆಯ ಮುಕ್ತಿ ಕೇಂದ್ರ. ಅಂದರೆ ಪ್ರಾಣಿಗಳು ವಾಸಿಸುವ, ನಾಗರಿಕ ಅವಕೃಪೆಗೆ ಒಳಗಾಗಿರುವ ಸಮಾಜಶಾಸ್ತ್ರಜ್ಞರ ಅಧ್ಯಯನ ಪರಿಕಲ್ಪನೆಯಾಗಿರುವ ಮೂಲ ಸೌಕರ್ಯಗಳಿರದ, ಭವಿಷ್ಯದ ಭದ್ರತೆಯಿಲ್ಲದ, ಸೌಲಭ್ಯ ವಂಚಿತರು ವಾಸಿಸುವ ಭೂಮೇಲಿನ ಕರಾಳ ಕುರೂಪ ತಾಣವಾಗಿತ್ತು. ಇಂತಹ ಸ್ಥಳದಲ್ಲಿಯೆ ಪರಸಪ್ಪನ ಸಂಸಾರ ನೆಲೆಸಿರುವಂತಹದ್ದು, ತಂದೆ ಪರಸಪ್ಪ, ತಾಯಿ ಚಂದ್ರಮ್ಮನನ್ನು ಒಳಗೊಂಡಂತೆ ಪ್ರಸ್ತುತ ಸಹೋದರರು ಹಾಗೂ ಸಹೋದರಿಯರಾದ ೧. ರಾಮಸ್ವಾಮಿ ತೆಲಗಾವಿ, ೨. ಲಕ್ಷ್ಮಣ್ ತೆಲಗಾವಿ, ೩. ಲಕ್ಷ್ಮೀಬಾಯಿ ಕದಂಬ, ೪. ದುರುಗಪ್ಪ ತೆಲಗಾವಿ, ೫. ಆನಂದ ತೆಲಗಾವಿ, ೬. ಗೌರಮ್ಮ ಉಳ್ಳಿಕಾಳ, ೭. ಗಂಗಮ್ಮ ಭಂಡಾರಿ, ೮. ಕಮಲಮ್ಮ ನರಗುಂದ, ೯. ಮಂಜುನಾಥ ತೆಲಗಾವಿ, ೧೦. ಶೇಖರ ತೆಲಗಾವಿ ಒಟ್ಟು ೧೦ ಜನರಿಂದ ಕೂಡಿದ ತುಂಬು ಸಂಸಾರ.

ವರ್ಣ ಮತ್ತು ಜಾತಿ ವ್ಯವಸ್ಥೆಯ ಕೊಡುಗೆಯಾದ ಈ ಸಮುದಾಯಕ್ಕೆ ಒಲಿದು ಬಂದ ಪಾರಂಪರಿಕ ಕುಲಕಸಬು ಚರ್ಮಶಿಲ್ಪಿತನ. ಚರ್ಮಶಿಲ್ಪದ ವೃತ್ತಿಯಿಂದಲೆ ಜೀವನ ಸಾಗಿಸುವಂತಿದ್ದರು. ದುಡಿಮೆಯಿಂದ ಬಂದ ಹಣದಲ್ಲಿ ಸಂಸಾರದ ಹೊಟ್ಟೆ ಕಟ್ಟಿ ಅದರಲ್ಲಿಯೆ, ಅಲ್ಪ-ಸ್ವಲ್ಪ ಉಳಿಸಿದ ಹಣದಿಂದ ಚರ್ಮ ತಂದು ಹದ ಮಾಡಿ ಚಪ್ಪಲಿ ತಯಾರಿಸಿ ಕಾಡಿ-ಬೇಡಿ ಮಾರಾಟ ಮಾಡುವುದು ಒಂದೆಡೆಯಾದರೆ, ಹರಿದ ಚಪ್ಪಲಿಗಳನ್ನು ರಿಪೇರಿ ಮಾಡುವುದು. ಚಪ್ಪಲಿ ಬೂಟುಗಳಿಗೆ ಪಾಲಿಶ್ ಮಾಡುವುದು ಇವೇ ಆದಾಯದ ಅಥವಾ ಅನ್ನದ ದುಡಿಮೆಯಾಗಿತ್ತು. ತಾಯಿ ಚಂದ್ರಮ್ಮ ಅಲ್ಲಿ ಇಲ್ಲಿ ಸಣ್ಣಪುಟ್ಟ ದುಡಿಮೆ ಮಾಡಿ ಸಂಸಾರದ ನೊಗಕ್ಕೆ ಹೆಗಲುಗೊಡುತ್ತಿದ್ದಳು. ತಮ್ಮ ಸುತ್ತಮುತ್ತಲೂ ವಾಸಿಸುವಂತಹ ನೆರೆಹೊರೆಯರದ್ದು ಇಂತಹ ಸ್ಥಿತಿಯೆ. ತೆಲಗಾವಿಯವರಿಗೆ ಇಲ್ಲಿನ ನೆರೆಹೊರೆಯವರೆ ಒಡನಾಡಿಗಳು. ಕೊಳಚೆ ಪ್ರದೇಶವೆ ಆಟದ ಕ್ರೀಡಾಂಗಣ ನೆರೆಹೊರೆಯವರೊಂದಿಗೆ ಉತ್ತಮ ಸಂಬಂಧವಿರಿಸಿಕೊಂಡಿದ್ದರ ಪರಿಣಾಮ ಎಲ್ಲರೂ ಈತನನ್ನು ಪ್ರೀತಿಸುತ್ತಿದ್ದರು. ಕೊಳಚೆ ಪ್ರದೇಶದಲ್ಲಿನ ವಾಸ. ಅಲ್ಪ ಆದಾಯವಿದ್ದರೂ

ಬಡತನದಿಂದ ನರಳುತ್ತಿದ್ದರೂ, ಪರಸಪ್ಪ ತನ್ನ ಮಕ್ಕಳನ್ನು ಶಾಲೆಗೆ ಕಳುಹಿಸಲು ಮರೆಯಲಿಲ್ಲ. ಏಕೆಂದರೆ ತಾವು ಮಾಡುವ ವೃತ್ತಿ ಮತ್ತು ಇತರರು ಮೇಲುಜಾತಿಯ ಮಾಡುವ ವೃತ್ತಿಯನ್ನು ತೌಲನಿಕವಾಗಿ ಗಮನಿಸಿದಂತೆ ನಾವುಗಳು ಕೈಗೊಳ್ಳುವ ವೃತ್ತಿಗೆ ಹೊಟ್ಟೆ ತುಂಬಿಸುವ ಶಕ್ತಿಯೂ ಇಲ್ಲ. ಗೌರವ ತಂದುಕೊಡುವ ಶಕ್ತಿಯೂ ಇಲ್ಲದ್ದರಿಂದ ನನ್ನ ಸ್ಥಿತಿ ಮಕ್ಕಳಿಗೂ ಬರಬಾರದೆಂಬ ಕಾರಣದಿಂದ, ಕೆಲವು ಸಲ ಗಂಡ-ಹೆಂಡತಿ ಉಪವಾಸವಿದ್ದು, ಶಾಲೆಗೆ ಕಳುಹಿಸುತ್ತಾರೆ. ಅಂಬೇಡ್ಕರ್ ಅವರ ವಿಚಾರಧಾರೆಗೆ ಒಳಗಾಗಿದ್ದ ಪರಸಪ್ಪರವರು ದಲಿತರ ಶೋಷಿತರ, ತಳಸಮುದಾಯದ ನೂರಾರು ಸಂಕಷ್ಟಕ್ಕೆ ಕಾರಣವೇನು ಇರಬಹುದು. ಈ ಎಲ್ಲಾ ಸಂಕಷ್ಟಗಳನ್ನು ಹೊಡೆದೋಡಿಸುವ ಸಾಧನವೆಂದರೆ ಶಿಕ್ಷಣ. ಆದ್ದರಿಂದ ಶಿಕ್ಷಣವೆ ಎಲ್ಲದಕ್ಕೂ ಪರಿಹಾರ ಆಗಬಲ್ಲದು ಎಂಬುದನ್ನು ಗಮನಿಸಿದ್ದು ಪರಸಪ್ಪ ಮಕ್ಕಳಿಗೆ ಅಕ್ಷರ ಕಲಿಸಲು ಮುಂದಾಗಿದ್ದರು. ಹಗಲಿರುಳು ಶ್ರಮವಹಿಸಿ ಚಿತ್ರದುರ್ಗದ ಸಂತೆಪೇಟೆ ಶಾಲೆಯಲ್ಲಿ ತೆಲಗಾವಿಯನ್ನು ಪ್ರಾಥಮಿಕ ಶಿಕ್ಷಣಕ್ಕೆ ಸೇರಿಸಿದರು. ಬಡತನವಿದ್ದರೂ ಲಕ್ಷ್ಮಣ್ ಎಂಬ ಬಾಲಕನಿಗೆ ಲಕ್ಷ್ಮಿ ಒಲಿಯದಿದ್ದರೂ ಸರಸ್ವತಿ ಸಿದ್ಧಿಯಾಗಿದ್ದಳು. ಕಷ್ಟಪಟ್ಟು ಓದುವ ಜಾಣ್ಮೆಯ ಅಭ್ಯಾಸವನ್ನು ಪ್ರಾಥಮಿಕ ಹಂತದಲ್ಲಿಯೆ ಮೈಗೂಡಿಸಿಕೊಂಡಿದ್ದರು. ಶಾಲೆಯಲ್ಲಿ ಹಲವಾರು ಪ್ರಶ್ನೆಗಳನ್ನು ಕೇಳಿ ಶಿಕ್ಷಕರಿಂದ ಉತ್ತರ ಪಡೆಯುತ್ತಿದ್ದು ಶಿಕ್ಷಕರ ಅಚ್ಚುಮೆಚ್ಚಿನ ಶಿಷ್ಯನಾಗಿದ್ದ. ಅಂದಿನ ಪಾಠವನ್ನು ಅಂದೇ ಒಪ್ಪಿಸುವ, ಬರೆಯುವ ಚ್ಯೂಟಿ ವಿದ್ಯಾರ್ಥಿಯಾಗಿದ್ದರು. ಮೂಲತಃ ತಳಸಮುದಾಯವಾಗಿದ್ದರೂ ತಂದೆ-ತಾಯಿಯಿಂದ ಉತ್ತಮ ಸಂಸ್ಕಾರ ಪಡೆದುಕೊಂಡಿದ್ದರಿಂದ ಉತ್ತಮ ಭಾಷೆಯ ಮೂಲಕ ಶಿಕ್ಷಕರನ್ನು, ಸಹಪಾಠಿಗಳನ್ನು ಪ್ರೀತಿಯಿಂದ ಸಂಬೋಧಿಸುತ್ತಿದ್ದರು. ಹಾಗೆಯೇ ಪ್ರಾಣಿಗಳ ಬಗ್ಗೆ, ರೋಗಿಗಳ ಬಗ್ಗೆ, ವಯೋವೃದ್ಧರ ಬಗ್ಗೆ ಅನುಕಂಪ ವ್ಯಕ್ತಪಡಿಸುವಂತೆಯೆ ಸಣ್ಣಪುಟ್ಟ ಕೆಲಸಕಾರ್ಯಗಳನ್ನು ಮಾಡಿಕೊಡುತ್ತಿದ್ದರು. ಸದಕಾಲವೂ ಅಧ್ಯಯನಶೀಲನಾಗಿದ್ದು, ಸಮಾಜದಲ್ಲಿನ ಕೆಲವು ಪ್ರಸಂಗಗಳನ್ನು ನೆರೆಹೊರೆಯವರಿಗೆ ಓದಿ ರಂಜಿಸಿ ಶಬ್ಬಾಶಗಿರಿ ಪಡೆಯುತ್ತಿದ್ದರು. ರಜಾದಿನಗಳಲ್ಲಿ ತಂದೆಯ ಜೊತೆಯಲ್ಲಿಯೆ ಕೂತು ಚಪ್ಪಲಿ, ಬೂಟುಗಳನ್ನು ತೊಳೆದು, ಶುಚಿಮಾಡಿ, ಚರ್ಮಕ್ಕೆ ಬೇಕಾದ ಕೆಲಸ ನಿರ್ವಹಿಸಿ ಪಾಲಿಶ್ ಮಾಡುತ್ತಿದ್ದರು. ರಜೆ ದಿನ ಮಾತ್ರವಾಗಿರದೆ ಕೆಲವು ಬಿಡುವಿನ ವೇಳೆಯಲ್ಲೂ, ತಂದೆಯ ಜೊತೆ ಚರ್ಮದ ಕೆಲಸಕ್ಕೆ ಕೈಜೋಡಿಸುತ್ತಿದ್ದರು. ತಂದೆಯ ಜೊತೆಯಲ್ಲಿ ಕೋಟೆಯ ಬೆಟ್ಟ-ಗುಡ್ಡಕ್ಕೆ ಹೋಗಿ ಸೌದೆ ಸಂಗ್ರಹ ಮತ್ತು ಕೆಲವು ಸಂದರ್ಭಗಳಲ್ಲಿ ಸಗಣಿ ಸಂಗ್ರಹ ಕೈಗೊಳ್ಳುತ್ತಿದ್ದು, ಸಂಗ್ರಹದ ಸಂದರ್ಭದಲ್ಲಿ ಬೆಟ್ಟ-ಗುಡ್ಡ ಕೋಟೆಯನ್ನು ತದೇಕ ಚಿತ್ತದಿಂದ ವೀಕ್ಷಿಸುತ್ತ, ವೀಕ್ಷಿಸುತ್ತಲೇ ಸಂಗ್ರಹ ಕೆಲಸ ಕೈಗೊಂಡು ಅವುಗಳನ್ನು ಅಲ್ಪ ಕಾಸಿಗೆ ಮಾರಾಟ ಮಾಡಿ, ಬಂದ ಕಾಸಿನಿಂದಲೇ ಪೆನ್ನು ಪುಸ್ತಕ ಹಾಗೂ ಓದಿಗೆ ಸಂಬಂಧಪಟ್ಟ ಪರಿಕರ ಕೊಂಡುಕೊಳ್ಳುತ್ತಿದ್ದರು. ತಂದೆಯ ಜೊತೆ ಅಲ್ಲದೇ ನೆರೆಹೊರೆಯವರ ಜೊತೆ, ಸಹಪಾಠಿಗಳ ಜೊತೆಗೂಡಿ ಕೋಟೆಗೆ ಬಂದು ಪದೇ ಪದೇ ಕೋಟೆ ಮತ್ತು ಅಲ್ಲಿನ ಅವಶೇಷಗಳನ್ನು ವೀಕ್ಷಿಸುತ್ತಿದ್ದ. ಆ ವೀಕ್ಷಣೆಯ ಮುಗ್ಧ ಮನವು ಸೌಂದರ್ಯಕ್ಕೆ ಮನಸೋಲುವ, ಸ್ಮಾರಕದ

ನಿಗೂಢತೆಯನ್ನು ಮನಸ್ಸಿನಾಳದಲ್ಲಿ ಮೂಡಿಸಿಕೊಳ್ಳುವ, ನಿಗೂಢ ಮತ್ತು ಅವುಗಳ ಮೌನ ಅರಿಯುವ ಹಂಬಲ ಬಾಲ್ಯದಲ್ಲಿಯೇ ಮೊಳಕೆಯೊಡೆದಿತ್ತು. ಹಾಗಾಗಿಯೆ ಸೂಕ್ಷ್ಮತೆಯಿಂದಲೆ ವೀಕ್ಷಿಸಿ ಮೌನಿಯಾಗಿ ಮಾತನಾಡುತ್ತಾ ಹಲವಾರು ಪ್ರಶ್ನೆಗಳನ್ನು ಮನದಲ್ಲಿಯೇ ಹಾಕಿಕೊಂಡು, ಉತ್ತರ ಕಂಡುಕೊಳ್ಳಲು ಹಂಬಲಿಸುತ್ತಿದ್ದರು. ಈ ಬೆಟ್ಟ ಇಲ್ಲಿ ಏಕೆಯಿದೆ? ಈ ಕೋಟೆ ಕಟ್ಟಿದವರು ಯಾರು? ಏತಕ್ಕಾಗಿ ಕಟ್ಟಿರಬಹುದು? ಯಾರು ವಾಸವಾಗಿದ್ದರು? ಇತ್ಯಾದಿ ಹತ್ತು ಹಲವು ಪ್ರಶ್ನೆಗಳನ್ನು ಹಾಕಿಕೊಂಡೆ ಅವುಗಳನ್ನು ಸ್ಪರ್ಷಿಸುತ್ತಾ, ಆನಂದಿಸುತ್ತಾ ದಿಗ್ಭ್ರಂತನಾಗಿ ನಿಲ್ಲುತ್ತಿದ್ದ. ಹೀಗೆ ಸೂಕ್ಷ್ಮಾತಿ ಸೂಕ್ಷ್ಮದಿಂದ ಕೋಟೆ ವೀಕ್ಷಿಸುವ ಬಾಲಕನೊಬ್ಬ ಮುಂದೊಂದು ದಿವಸ ದುರ್ಗದ ಇತಿಹಾಸವನ್ನು ಕಟ್ಟುವ ಸಂಶೋಧಕನಾಗುತ್ತಾನೆಂಬುದು ಸ್ವತಃ ತಂದೆ ಪರಸಪ್ಪನಿಗೆ, ಗೆಳೆಯರಿಗೆ, ಗುರುಗಳಿಗೆ ಗೊತ್ತಿರಲಿಕ್ಕಿಲ್ಲ. ಆ ಬಾಲಕನಿಗೆ ಆ ವಯಸ್ಸಿನಲ್ಲಿ ಸಂಶೋಧನೆ ಎಂದರೇನೆಂಬುದು ಗೊತ್ತಿಲ್ಲವಾದರೂ ಅದರ ಮೌನ ಅರಿಯುವ ಹಂಬಲವಿತ್ತು. ಆ ಹಂಬಲವೇ ನಮ್ಮ ಶಾಸ್ತ್ರೀಯ ಪರಿಭಾಷೆಯಲ್ಲಿ ಸಂಶೋಧನೆ ಎಂದು ಕರೆಯುತ್ತೇವೆ. ಹೀಗೆ ಸಗಣಿ ಮತ್ತು ಸೌದೆ ಸಂಗ್ರಹಕ್ಕಾಗಿ ಬಂದಿದ್ದ ಬಾಲಕ ಸಂಶೋಧಕನಾಗಿ ಕೋಟೆಗೆ ಬರುತ್ತಾನೆಂದರೆ ಒಂದು ಅದ್ಭುತವೇ ಸರಿ. ತನ್ನ ಸಹಪಾಠಿಗಳು ಬಾಲ್ಯದ ಗೆಳೆಯರಾದ ಜಿ.ಎಚ್. ತಿಪ್ಪಾರೆಡ್ಡಿ, ಡಿ.ಎಂ. ಶಶಿಧರ, ಬಿ. ಶ್ರೀಧರ, ವೈ.ವಿ. ಅಶೋಕಕುಮಾರ್, ಲ. ನಾಗರಾಜ ಹೊಯ್ಸಳ, ಎಚ್.ಎನ್. ಶಿವಮೂರ್ತಿ, ಎಸ್.ಆರ್. ಗುರುನಾಥರಂತಹ ಗೆಳೆಯರೊಂದಿಗೆಯೂ ಕೋಟೆಯ ವೀಕ್ಷಣೆ ಮತ್ತು ಅದರ ಬಗ್ಗೆ ಹಾಗಾಗ ಮಾತನಾಡುತ್ತಿದ್ದರು. ಹೀಗೆ ಬಡತನ, ಕುಲಕಸಬು, ಅಧ್ಯಯನದ ಆಸಕ್ತಿಯೊಂದಿಗೆ ಲಕ್ಷ್ಮಣ್ ತೆಲಗಾವಿಯವರು ಚಿತ್ರದುರ್ಗದಲ್ಲಿ ಪ್ರಾಥಮಿಕ ಶಿಕ್ಷಣ ಪೂರೈಸಿದರು.

ಪ್ರೌಢ ಶಿಕ್ಷಣ (ಹೈಸ್ಕೂಲ್)

ಚಿತ್ರದುರ್ಗದ ಸರ್ಕಾರಿ ಬಾಲಕರ ಜೂನಿಯರ್ ಕಾಲೇಜ್ ಎಂಬಲ್ಲಿ ಹೈಸ್ಕೂಲ್ ಪ್ರವೇಶ ಪಡೆದದ್ದು ಒಂದು ಪ್ರಾಯಾಸದ ಕೆಲಸ. ಬಾಲ್ಯದ ಅಂದರೆ ಪ್ರಾಥಮಿಕ ಶಾಲೆಯ ಗೆಳೆಯರೆಲ್ಲರೂ ಪ್ರವೇಶ ಪಡೆದಿದ್ದರು. ಪ್ರಾಥಮಿಕ ಶಿಕ್ಷಣವನ್ನು ಪೂರೈಸಿದ ಸಂತೋಷ ಪರಸಪ್ಪನಿಗೆ ಒಂದೆಡೆಯಾದರೆ, ಮತ್ತೊಂದೆಡೆ ಭಯ, ಪ್ರಾಥಮಿಕ ಶಿಕ್ಷಣ ಹೇಗೋ ಮುಗಿಸಿದೆವು ಹೈಸ್ಕೂಲೆಂದರೆ, ಅಧ್ಯಯನ ಮಾಡುವುದೆಂದರೆ ಅಂದಿನ ದಿನಗಳಲ್ಲಿ ತಳಸಮುದಾಯದವರಿಗೆ ಒಂದು ಸವಾಲು. ಮನೆ ತುಂಬ ಮಕ್ಕಳು, ಶಾಲೆಗೆ ಹೋಗುವುದು ಸವಾಲಾಯಿತು. ಏಕೆಂದರೆ ಕಿತ್ತು ತಿನ್ನುವ ಬಡತನ ಹಾಗೂ ಸಂಪಾದನೆ ಅಷ್ಟೇಕಷ್ಟೇ. ಆದರೆ ನೆರೆಹೊರೆಯವರಿಂದ ಲಕ್ಷ್ಮಣನ ಜಾಣ್ಮೆಯ ಇತರೆ ಮಕ್ಕಳಿಂದ ಲಕ್ಷ್ಮಣನ ಗುಣಗಾನ, ಲಕ್ಷ್ಮಣನ ಹೈಸ್ಕೂಲಿನ ಹಂಬಲ ಇವೆಲ್ಲವೂ ಪರಸಪ್ಪನನ್ನು ಸಂಕಷ್ಟಕ್ಕೆ ಸಿಲುಕಿಸಿದವು. ಆದರೂ ಧೈರ್ಯ ಮಾಡಿ ಅಲ್ಪ-ಸ್ವಲ್ಪ ಸಂಪಾದನೆಯಿಂದ ಬಂದ ಹಣದಿಂದ, ಸಂಸಾರದೂಗಿಸಿಕೊಂಡು ಹೈಸ್ಕೂಲಿಗೆ ಪ್ರವೇಶ ಕೊಡಿಸಿದರು. ಹೀಗೆ ಪ್ರೌಢಶಿಕ್ಷಣ ಪ್ರಾರಂಭಗೊಂಡು ಇವರ ಪ್ರೌಢ ಶಿಕ್ಷಣದ ವ್ಯಾಸಂಗದಲ್ಲಿಯೂ ಇವರಲ್ಲಿನ ಕೆಲವು ಪ್ರತಿಭೆಗಳು

ಹೊರಹೊಮ್ಮಲು ಮುಂದಾದವು. ೮ನೇ ತರಗತಿಯಲ್ಲಿ ಸೀಮೆಸುಣ್ಣದಿಂದ ಕೋಟೆ, ಕತ್ತಿ, ಕುದುರೆ, ಗುರಾಣಿ, ಸರ ಮುಂತಾದ ಬೃಹತ್ ಗಾತ್ರದ ಚಿತ್ರ ಬಿಡಿಸಿ ಶಿಕ್ಷಕರಿಂದ, ಸಹಪಾಠಿಗಳಿಂದ ಮೆಚ್ಚುಗೆ ಗಳಿಸಿಕೊಂಡಿದ್ದರು. ೧೯೬೪ರಲ್ಲಿ ತೆಲಗಾವಿಯವರು ೧೦ನೇ ತರಗತಿ ವ್ಯಾಸಂಗ ಮಾಡುತ್ತಿದ್ದರು. ಈತನ ಸ್ಮರಣ ಶಕ್ತಿ ಮತ್ತು ಪ್ರತಿಭೆ ಮನಗಂಡಿದ್ದ ಬಿ.ವಿ. ಲಿಂಗರಾಜು ಎಂಬ ಶಿಕ್ಷಕರು ೯ನೇ ತರಗತಿಯ ವಿದ್ಯಾರ್ಥಿಗಳಿಗೆ ಭೂಗೋಳಶಾಸ್ತ್ರಕ್ಕೆ ಸಂಬಂಧಿಸಿದ ಚಿತ್ರಗಳನ್ನು ಬಿಡಿಸಿ, ಲಕ್ಷ್ಮಣನಿಂದಲೇ ಭೂಗೋಳ ಪಾಠ ಮಾಡಿಸುತ್ತಿದ್ದರು. ಅಂದೇ ದುರ್ಗದ ಬಗ್ಗೆ ಅಭಿಮಾನ ಹೊಂದಿದವರಿವರು. ಚಿತ್ರದುರ್ಗಕ್ಕೆ ಸಂಬಂಧಿಸಿದ "ಚಿತ್ರದುರ್ಗ ಹಾಗೂ ಇತರ ಕವಿತೆಗಳು" ಎಂಬ ೩೬ ಪುಟಗಳ ಸಣ್ಣ ಸಂಕಲನ ಸಿದ್ಧಪಡಿಸಿ ಜಾಣ್ಮೆ ಮೆರೆದಿದ್ದರು. ಅಂದು ಇದರ ಪ್ರಕಾಶನದ ಹೊಣೆಯನ್ನು ವೈ.ಎಸ್.ಬಿ. ವೆಂಕಟಸುಬ್ಬಯ್ಯ ಎಂಬುವವರು ೫೦ ಪೈಸೆ ಬೆಲೆಗೆ ದೊರಕುವಂತೆ ಪ್ರಕಟಿಸಿದ್ದರು. ಸ್ವಾರಸ್ಯಕರವಾಗಿ ಓದುವ, ಓದಿದ್ದನ್ನು ಕೃತಿ ರೂಪಕ್ಕೆ ತರುವ ಆ ಮೂಲಕ ಸಂದೇಶ ರವಾನಿಸುವಂತಹ ಕೆಲಸಗಳಿಗೆ ಚಿಕ್ಕಂದಿನಲ್ಲಿಯೆ ಮೈಗೂಡಿಸಿ ಕೊಂಡಿದ್ದರು. ಶಾಲಾ ವಾರ್ಷಿಕೋತ್ಸವದ ಸಭೆ-ಸಮಾರಂಭಗಳಲ್ಲಿ ಅತ್ಯುತ್ತಮವಾಗಿ ಭಾಷಣ ಮಾಡಿ ಶಿಕ್ಷಕರಿಂದ ಮೆಚ್ಚುಗೆಗೆ ಮತ್ತು ಹಲವು ಪ್ರಶಸ್ತಿ, ಬಹುಮಾನಕ್ಕೆ ಭಾಜನರಾಗಿದ್ದರು. ವೇಷಭೂಷಣ ಸ್ಪರ್ಧೆಯಲ್ಲಿಯೂ ಭಾಗವಹಿಸಿ ಪಾತ್ರಕ್ಕೆ ನ್ಯಾಯ ಒದಗಿಸಿ ಬಹುಮಾನ ಪಡೆಯುತ್ತಿದ್ದರು. ಈ ಹಂತದ ಮತ್ತೊಂದು ಸಾಧನೆ ಎಂದರೆ "ನನ್ನ ಹುಬ್ಬಳ್ಳಿ ಮಾವ" "ಬತೇರಿ-೪, ರಾಜಾಗಂಡ-ಭೇರುಂಡ" ಎಂಬ ಕಥಾ ರೂಪಕಗಳನ್ನು ರಚಿಸಿ ಭೂವಪೂರ್ಣವಾಗಿ ಓದುತ್ತಿದ್ದು ಎಲ್ಲರನ್ನು ರಂಜಿಸುತ್ತಿದ್ದರು.

ಪಿ.ಯು.ಸಿ. ಶಿಕ್ಷಣ

೧೯೬೬ರಲ್ಲಿ ಚಿತ್ರದುರ್ಗದ ಸರ್ಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜಿಗೆ ಪಿಯುಸಿ ಪ್ರವೇಶ ಪಡೆದರು. ಎಂದಿನಂತೆಯೆ ಇಲ್ಲಿಯೂ ಓದುವ, ಬರೆಯುವ ಕ್ರಿಯಾಶೀಲ ವಿದ್ಯಾರ್ಥಿಯಾಗಿ ಸದಾ ಕಾಲವು ಒಂದಲ್ಲ ಒಂದು ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದರು. ಶಿಕ್ಷಕರಿಂದ ಹೊಗಳಿಸಿಕೊಂಡು ಪ್ರತಿಭಾವಂತ ವಿದ್ಯಾರ್ಥಿ ಎನಿಸಿಕೊಂಡಿದ್ದರು. ಪರಸಪ್ಪನವರಿಗೆ ನೆರೆಹೊರೆ ಯವರು, ಕೆಲವು ವಿದ್ಯಾರ್ಥಿಗಳು, ಕೆಲವು ಗ್ರಾಹಕರು ಪರಿಚಯಸ್ಥರು ಮಗನ ಬುದ್ಧಿವಂತಿಕೆಯನ್ನು ಕೊಂಡಾಡುತ್ತಿದ್ದರು. ಹೀಗೆ ಹೊಗಳಿಕೆಯಿಂದ ಪರಸಪ್ಪ ಹಿರಿ ಹಿರಿ ಹಿಗ್ಗಿ ಸಂತೋಷದಿಂದ ತೇಲಾಡುತ್ತಿದ್ದರು. "ಎಷ್ಟೋ ಮಂದಿಗೆ ದುಡ್ಡಿದ್ದರೆ ಓದು ಹತ್ತಲ್ಲ. ನನ್ನ ಮಗನಿಗೆ ದುಡ್ಡಿಲ್ಲ, ಆದರೆ ಓದು ಹತ್ತಿದೆ". ಇದು ನನ್ನಂತಹ ಬಡವನ ಪುಣ್ಯವೆಂದು ಸಂಭ್ರಮಿಸುತ್ತಿದ್ದರು. ಕಾಲೇಜು ವಾರ್ಷಿಕ ಸಂಚಿಕೆಗೆ "ಗಾದೆಗಳ ಗದ್ದಲ" ಎಂಬ ಲೇಖನವನ್ನು "ಮಂಜರಿ"ಯಲ್ಲಿ ಪ್ರಕಟಣೆ ಮಾಡಿದರು. ಇದು ಇವರ ಪ್ರಥಮ ಲೇಖನವಾಗಿದೆ. ವೈಯಕ್ತಿಕವಾಗಿ ರಜಾ ದಿನಗಳಲ್ಲಿ ಸೌದೆ ಸಂಗ್ರಹ, ಸೌದೆ ಕಡಿದು ಗುಡ್ಡೆ(ರಾಶಿ) ಹಾಕುವುದು. ಕಸದ ರಾಶಿಯೊಂದಿಗೆ ಸಗಣಿ ಬೆರೆಸಿ ಗೊಬ್ಬರವಾದ ಮೇಲೆ ಮಾರಾಟ ಮಾಡಿ ಬಂದ ಹಣದಿಂದ ಪುಸ್ತಕ ಲೇಖನ

ಖರೀದಿಸಿ ವ್ಯಾಸಂಗಕ್ಕೆ ಬಳಸಿಕೊಳ್ಳುತ್ತಿದ್ದರು. ಹೀಗೆ ಅಧ್ಯಯನ ಕ್ರಿಯಾಶೀಲತೆ ಹಾಗೂ ದುಡಿಮೆಯೊಂದಿಗೆ ಪಿ.ಯು.ಸಿ. ಮುಗಿಸಿದರು.

ಪದವಿ ಶಿಕ್ಷಣ (ಬಿ.ಎ.)

೧೯೭೦ರಲ್ಲಿ ಚಿತ್ರದುರ್ಗದ ಸರಕಾರಿ ಪದವಿ ಮಹಾವಿದ್ಯಾಲಯಕ್ಕೆ ಪದವಿ ಶಿಕ್ಷಣ ಕೈಗೊಳ್ಳಲು ಪ್ರವೇಶ ಪಡೆದುಕೊಂಡರು. ಪದವಿ ಹಂತವು ಇತಿಹಾಸದ ಅಧ್ಯಯನಕ್ಕೆ ಸಾಕ್ಷಿಯಾಯಿತು. ಈ ಮೊದಲೆ ಕೋಟೆಯ ಬಗ್ಗೆ ಉತ್ಸುಕನಾಗಿದ್ದ ತೆಲಗಾವಿಯವರಿಗೆ ಬಿ.ವಿ. ಲಿಂಗರಾಜು ಎನ್ನುವ ಉಪನ್ಯಾಸಕರು, ಇತಿಹಾಸವನ್ನು ಕಣ್ಣಿಗೆ ಕಟ್ಟುವ ಹಾಗೆ ಬೋಧಿಸುತ್ತಿದ್ದರು. ಆ ಬೋಧನೆ ಕೇಳುತ್ತಲೆ ಬೆಳೆದ ತೆಲಗಾವಿಯವರಿಗೆ ಇತಿಹಾಸದ ಅಧ್ಯಯನ ಗೀಳು ದಿನದಿಂದ ದಿನಕ್ಕೆ ಹೆಚ್ಚುತ್ತಾ ಹೋಯಿತು. ಇದೇ ಹಂತದಲ್ಲಿ ತನ್ನೊಳಗಿನ ಇತಿಹಾಸಕ್ತಿಯನ್ನು ಹೊರಗೆಳೆದವರೆಂದರೆ ಉಪನ್ಯಾಸಕ ಪಂಡಿತ "ಚನ್ನಪ್ಪ ಎರೆಸೀಮೆ"ಯವರು. ವಿವಿಧ ಕೌಶಲ್ಯಗಳ ಮೂಲಕ ಸರಳ, ಸುಲಭವಾಗಿ ಇತಿಹಾಸ ಬೋಧಿಸುತ್ತಾ ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಉಪನ್ಯಾಸಕರಾಗಿದ್ದರು. ಉಪನ್ಯಾಸಕರು ಕೇಳುವ ಪ್ರಶ್ನೆಗಳಿಗೆ ತಟ್ಟನೆ ಉತ್ತರ ಹೇಳುತ್ತಿದ್ದ ತೆಲಗಾವಿಯ ಜಾಣ್ಮೆಗೆ ಗುರುಗಳು ಪ್ರಶಂಶಿಸುತ್ತಿದ್ದರು. ಕಾಲೇಜಿನ ಸಮಾರಂಭದಲ್ಲಿ "ಖೋಟಾನೋಟು" ಎಂಬ ನಾಟಕದಲ್ಲಿ ಸಿ.ಐ.ಡಿ. ಪಾತ್ರ ನಿರ್ವಹಿಸಿ ಮನಮುಟ್ಟುವಂತೆ ಅಭಿನಯ ನೀಡಿ ಮನಸೂರೆಗೊಂಡಿದ್ದರು. ಮತ್ತೊಂದು ನಾಟಕವಾದ "ಇಂಟರ್ ಈಡಿಯಟ್"ನಲ್ಲಿ ಮನೋಜ್ಞ ಅಭಿನಯ ನೀಡಿ ಬಹುಮಾನ ಗಳಿಸಿಕೊಂಡಿದ್ದರು. ಪದವಿ ಹಂತದ ಆಸಕ್ತ ಅಭಿವ್ಯಕ್ತಿತನಕ್ಕೆ ಇನ್ನೊಂದು ಮೈಲಿಗಲ್ಲೆಂದರೆ "ಚಿನ್ಮುಲಾದ್ರಿ ಕಲಾ ಮಿತ್ರರು" ಎಂಬ ಕೂಟವನ್ನು ತಮ್ಮ ಸಹಪಾಠಿಗಳೊಂದಿಗೆ ಕೂಡಿಕೊಂಡು ಸ್ಥಾಪಿಸಿ ಅದರ ಮೂಲಕ ಅಂತರ್ ವಿಶ್ವವಿದ್ಯಾಲಯ ಮಟ್ಟದ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನ ಪಡೆದಿದ್ದಾರೆ. ಇತ್ತ ಮನೆಯ ಕಡೆಗೆ ಕಿತ್ತು ತಿನ್ನುವ ಬಡತನವಿದ್ದರೂ ಓದುವ, ಅಭಿನಯಿಸುವ, ಸಂಶೋಧಿಸುವ ಗೀಳನ್ನು ರೂಢಿಸಿಕೊಂಡರೆ ವಿನಃ ಬಡತನವನ್ನು ಒಂದು ಬಂಡವಾಳವಾಗಿ ಮಾಡಿಕೊಂಡು, ಅದರಲ್ಲಿಯೆ ಕಾಲ ಕಳೆಯಲು ಇಷ್ಟಪಡಲಿಲ್ಲ. ಅಂತೆಯೆ ಪದವಿ ಶಿಕ್ಷಣವನ್ನು ಅರ್ಥಗರ್ಭಿತವಾಗಿ ಯಶಸ್ವಿಯಾಗಿ ಪೂರೈಸಿದರು.

ಸ್ನಾತಕೋತ್ತರ ಶಿಕ್ಷಣ (ಎಂ.ಎ.)

ಪದವಿ ಮುಗಿದ ಕೂಡಲೇ ತೆಲಗಾವಿಯವರ ಮುಂದಿನ ಗುರಿ ಚರಿತ್ರೆ ಕ್ಷೇತ್ರದಲ್ಲಿ ಸ್ನಾತಕೋತ್ತರ ಶಿಕ್ಷಣ ಪಡೆಯುವುದು. ಆದರೆ ಮನೆಯ ಸ್ಥಿತಿಯೇ ಬೇರೆಯಾಗಿತ್ತು. ಪದವಿ ಮುಗಿಯಿತು. ಯಾವುದಾದರೊಂದು ಸಣ್ಣ ನೌಕರಿಗೆ ಸೇರಿದರೆ ಮನೆಯ ಪರಿಸ್ಥಿತಿ ಸುಧಾರಿಸಬಲ್ಲದು ಎಂಬುದು ಮನೆಯವರ ಅಭಿಪ್ರಾಯ. ಆದರೆ ತೆಲಗಾವಿಯವರ ಗುರಿಯೆ ಬೇರೆ ರೀತಿ ಯಾಗಿತ್ತಾದರೂ, ಮನೆಯ ಸ್ಥಿತಿ ನೋಡಿದರೆ ಉನ್ನತ ಶಿಕ್ಷಣದ ಸುದ್ದಿ ಎತ್ತದಂತಹ ಸಂದರ್ಭ, ಆದರೂ ಉನ್ನತ ಶಿಕ್ಷಣ ಕಲಿಯಲು ಮೈಸೂರಿಗೆ ಹೋಗುತ್ತೇನೆಂದರೆ ತಂದೆಗೆ ದ್ವಂದ್ವ ಹಾಗೂ ದುಃಖ ಎರಡು ಏಕಕಾಲಕ್ಕೆ ಉಮ್ಮಳಿಸಿತು. ಏಕೆಂದರೆ ಸ್ನಾತಕೋತ್ತರ ಪದವಿಯ

ವ್ಯಾಸಂಗ ಮಾಡುವ ಹಂಬಲ ಲಕ್ಷ್ಮಣನಿಗೆ ಇದೆಯಾದರೂ ಶಿಕ್ಷಣ ಕೊಡಿಸುವ ಶಕ್ತಿ ತಂದೆಯಾದ ಪರಿಸಪ್ಪನಿಗೆ ಇರಲಿಲ್ಲ. ಆದರೆ ಓದಲಿಕ್ಕೆ ಹಣ ಎಲ್ಲಿಂದ ತರುವುದು ಎಂಬ ಚಿಂತೆಯಲ್ಲಿ ಅದನ್ನು ನೆನೆಸಿಕೊಂಡು, ತಂದೆ-ತಾಯಿ ಕಣ್ಣೀರಿಟ್ಟಿದ್ದಿದೆ. ಸ್ನೇಹಿತರ ಹತ್ತಿರವೂ ಪ್ರಸ್ತಾಪ ಮಾಡಿದ ತೆಲಗಾವಿ ಏನಾದರೂ ಸರಿಯೆ ಉನ್ನತ ವ್ಯಾಸಂಗ ಮಾಡಲು ಮೈಸೂರಿಗೆ ಹೋಗಲೇಬೇಕೆಂಬ, ಹಠದಿಂದ, ಪ್ರಯತ್ನಶೀಲರಾದರೂ ಖರ್ಚು-ವೆಚ್ಚಗಳನ್ನು ಪೂರೈಸಲು ಹಣ ಕೊಡುವವರು ಯಾರು? ಏಕೆಂದರೆ ಅವರಿಗ್ಯಾರೂ ಗಾಡಫಾದರ್‌ಯಿಲ್ಲ ಹಾಗೂ ತೆಲಗಾವಿಯವರಿಗೆ ಒಂದು ರೀತಿಯ ಪ್ರತಿಷ್ಠೆ ಮತ್ತು ಸವಾಲಿನ ಪ್ರಶ್ನೆ, ಸಂಕಷ್ಟದಲ್ಲಿಯೂ ಹೋಗಲೇಬೇಕೆಂಬ ಆತ್ಮವಿಶ್ವಾಸ ಮಾತ್ರ ಇದ್ದಿತ್ತು. ಪದವಿ ಹಂತದ ಓದುವ ಸಂದರ್ಭದಲ್ಲಿ ವಿದ್ಯಾರ್ಥಿವೇತನ ಬಂದಾಗ ಕೈಗಡಿಯಾರ, ಸೈಕಲ್, ಕ್ಯಾಮರಾ ಇತ್ಯಾದಿಗಳನ್ನು ಕೊಂಡುಕೊಂಡಿದ್ದರು. ಇವುಗಳ ಮೇಲೆ ತೆಲಗಾವಿಯವರ ದೃಷ್ಟಿ ಬಿದ್ದಿದ್ದೆ ತಡ ಎಲ್ಲವನ್ನು ಓದರೇಟಿಗೆ ಮಾರಾಟ ಮಾಡಿ ಬಂದ ಹಣದಿಂದಲೆ ಮನಸ್ಸಿದ್ದರೆ ಮಾರ್ಗವೆಂಬಂತೆ ಮೈಸೂರು ತಲುಪಿಯೆ ಬಿಟ್ಟರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ೧೯೭೦ರಲ್ಲಿ ಚರಿತ್ರೆ ವಿಭಾಗದಲ್ಲಿ ಎಂ.ಎ. ಪದವಿಗೆ ಪ್ರವೇಶ ಪಡೆದುಕೊಂಡು, ಚರಿತ್ರೆ ವಿಭಾಗದಲ್ಲಿ ಮಾನಸಗಂಗೋತ್ರಿಯ ಶಿಷ್ಯರಾದರು. ಇವರ ಮೇಲೆ ಚರಿತ್ರೆ ವಿಭಾಗದ ಪ್ರೊ. ಎನ್. ಹೊನ್ನಯ್ಯ, ಪ್ರೊ. ಜಿ.ಆರ್. ರಂಗಸ್ವಾಮಯ್ಯರವರು ವಿಶೇಷ ಪ್ರಭಾವ ಬೀರಿದರು. ಆಗಂತ ಈ ಇಬ್ಬರು ಉಪನ್ಯಾಸಕರಿಗೆ ಮಾತ್ರ ತೆಲಗಾವಿ ಪ್ರಿಯವೆಂತವಲ್ಲ ಎಲ್ಲಾ ಉಪನ್ಯಾಸಕರಿಗೂ ಪ್ರಿಯರಾಗಿದ್ದರು. ಉಪನ್ಯಾಸಕರ ಅಚ್ಚುಮೆಚ್ಚಿನ ಶಿಷ್ಯರಾದರೆ ಸಾಲದು ಉಳಿದುಕೊಳ್ಳಲು ರೂಮ್, ತಿನ್ನಲು ಅನ್ನಬೇಕು. ಆ ಸಂದರ್ಭದಲ್ಲಿ ಅವರಿಗೆ ಯಾರು ಪರಿಚಯವಿರಲಿಲ್ಲ. ಯಾರು ಸಹಾಯ ಮಾಡಲು ಮುಂದೆ ಬರಲಿಲ್ಲ. ಇವರೂ ಹೋಗಲಿಲ್ಲ ಹಾಗೂ ಹೀಗೂ ಮಾಡಿ ಮೈಸೂರಿನ ಒಂದು ಸಣ್ಣ ಸಂಧಿಯಲ್ಲಿ ಚಿಕ್ಕದಾದ ಅಷ್ಟೊಂದು, ಅನುಕೂಲವಿಲ್ಲದ ರೂಮ್‌ನ್ನು ಬಾಡಿಗೆ ಪಡೆದರು. ಒಂದೊಂದು ಹೊತ್ತಿನ ಊಟಕ್ಕೂ ಪರಿತಪಿಸಿ ಹೇಗೋ ಹೊಂದಾಣಿಕೆ ಮಾಡಿಕೊಂಡರೆ, ಹಲವು ಸಲ ಉಪವಾಸವಿದ್ದರು. ತರಗತಿಗೆ ಮಾತ್ರ ತಪ್ಪದೇ ಹಾಜರಾಗುತ್ತಿದ್ದರು. ಸ್ವಾಭಿಮಾನ, ಶಿಸ್ತು, ಅಧ್ಯಯನದ ಗೀಳು ರೂಢಿಸಿಕೊಂಡಿದ್ದರಿಂದಾಗಿ ಪ್ರೊ. ಜಿ.ಆರ್. ರಂಗಸ್ವಾಮಿಯ್ಯರವರ ಕಾಳಜಿ ಮೇರೆಗೆ ಸ್ನಾತಕೋತ್ತರ ಅಧ್ಯಯನ ಮುಂದುವರಿಯಿತು. ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಸತತವಾಗಿ ಅಧ್ಯಯನ ಮಾಡುತ್ತಲೇ ಟಿಪ್ಪಣಿ-ಪ್ರಶ್ನೆಗಳನ್ನು ತಯಾರಿಸಿಕೊಂಡು ಉಪನ್ಯಾಸಕರಿಂದ ಉತ್ತರ ಪಡೆಯುತ್ತಿದ್ದರು. ಓದು ಒಂದು ಕಡೆಯಾದರೆ ಮತ್ತೊಂದೆಡೆ ಬ್ಯಾಸ್ಕೆಟ್‌ಬಾಲ್, ಕೊಕೋ, ಚೆಸ್ ಮುಂತಾದವುಗಳಲ್ಲಿಯೂ ಆಗಾಧವಾದ ಪ್ರತಿಭೆ ತೋರಿಸುತ್ತಿದ್ದರು. ಮೈಸೂರಿನ ಎನ್. ನಾಗರಾಜ್‌ರವರ ಕಲಾಮೇಳದಲ್ಲಿ ಭಾಗವಹಿಸಿ ಹಲವು ಕೆಲಸಗಳನ್ನು ನಿರ್ವಹಿಸಿಕೊಂಡು ನಿರ್ದೇಶನದಿಂದ ಅಭಿನಯದ ತನಕವೂ ಕಲಾವಿದರ ಅಚ್ಚುಮೆಚ್ಚಿನ ಮಾರ್ಗದರ್ಶಕರಾಗಿದ್ದರು. ಪ್ರೀಮಿಯಂ ಸ್ಟುಡಿಯೋದ ಮೂಲಕ ಸಿನಿಮಾ ಕ್ಷೇತ್ರದೊಂದಿಗೆ ನಂಟು ಹೊಂದಿ ಹಲವು ವಿನೂತನ ಕೆಲಸ ಕಾರ್ಯಗಳಿಗೆ ಭಾಜನರಾಗಿದ್ದರು. ಅವರ ಪೂಜ್ಯ ಉಪನ್ಯಾಸಕರಾದ ರಂಗಸ್ವಾಮಯ್ಯರವರು ವಿದ್ಯಾರ್ಥಿ ಎಂಬುದನ್ನು ಮರೆತು

ತನ್ನ ಸ್ವಂತ ಸಹೋದರರಂತೆ ನೋಡಿಕೊಂಡರು. ಅಧ್ಯಯನದ ಪ್ರೋತ್ಸಾಹದ ಜೊತೆಗೆ, ಉದ್ಯೋಗ ದೊರೆಯಲಿಕ್ಕೆ ತಮ್ಮದೆ ರೀತಿಯಲ್ಲಿ ಉಪನ್ಯಾಸಕ ವರ್ಗ ಹಲವು ರೀತಿಯ ನೆರವು ನೀಡಿದ್ದಾರೆ. ಹಲವು ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸಿದರೂ ನಿಷ್ಠೆಯ ಅಧ್ಯಯನವಿದ್ದರೂ, ಬಡತನ ಮಾತ್ರ ದೂರವಾಗಲಿಲ್ಲ. ಇಂತಹ ಕಡುಕಷ್ಟದಲ್ಲಿಯೆ ಸ್ನಾತಕೋತ್ತರ ಪದವಿ ಮುಗಿಸಿದರು.

ಪಿಎಚ್.ಡಿ. ಸಂಶೋಧನೆ ಹಾಗೂ ಉಪನ್ಯಾಸಕರಾಗಿ ಸೇವೆ (೧೯೭೨-೧೯೭೫)

೧೯೭೨ರಲ್ಲಿ ಪ್ರೊ. ಜಿ.ಆರ್. ರಂಗಸ್ವಾಮಯ್ಯರವರ ಸಹಕಾರದಿಂದಾಗಿ ಎಂ.ಎ. ಸ್ನಾತಕೋತ್ತರ ಪದವಿ ಪೂರೈಸಿದರು. ಇದೇ ಮಹನೀಯರ ಸಹಕಾರದಿಂದಲೆ ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ಚರಿತ್ರೆ ವಿಭಾಗದಲ್ಲಿ ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿಯಾಗಿ ಪ್ರವೇಶ ಪಡೆದರು. **ಪ್ರೊ. ಬಿ. ಷೇಕ್ ಅಲಿ** ಅವರ ಮಾರ್ಗದರ್ಶನದಲ್ಲಿ **"ಚಿತ್ರದುರ್ಗ ನಾಯಕ ಅರಸರು"** ಎಂಬ ವಿಷಯ ಕುರಿತು ಸಂಶೋಧನೆ ಕೈಗೊಂಡರು. ಹಣಕಾಸಿನ ತೊಂದರೆಯ ನಡುವೆಯು, ಗ್ರಂಥಾಲಯದಲ್ಲಿ ಓದು, ಬರಹ, ಕ್ಷೇತ್ರಕಾರ್ಯ, ಹೊಟ್ಟೆಗೆ ಊಟ, ರೂಂಬಾಡಿಗೆ ಇವೆಲ್ಲವನ್ನು ಏಕವೀರ ಸೈನಿಕನಂತೆ ನಿಭಾಯಿಸಿಕೊಂಡು, ಹೊಸ ವಿಷಯದ ಹೊಸ ಪರಿಕಲ್ಪನೆಯೊಂದಿಗೆ ಚಿಕ್ಕಂದಿನ ಆಸೆ ಈಡೇರಿಸಲಿಕ್ಕೆ ತಾನು ಅಂದುಕೊಂಡಂತೆ, ಸಂಶೋಧಕರಾಗಿ ಚಿತ್ರದುರ್ಗಕ್ಕೆ ಬಂದೇ ಬಿಟ್ಟರು. ಅವರಿಗಾದ ಸಂಭ್ರಮವನ್ನು ಹಬ್ಬದಂತೆ ಅನುಭವಿಸಿದರು.

ತೆಲಗಾವಿಯರಲ್ಲಿ ಸುಪ್ತವಾಗಿದ್ದ ಸಂಶೋಧನಾ ವೈಖರಿ ಗುರುತಿಸಿದ ಮೆಚ್ಚಿನ ಉಪನ್ಯಾಸಕ ರಂಗಸ್ವಾಮಯ್ಯವರ ಸಹಕಾರದಿಂದ ೧೯೭೫ರಿಂದ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಆಯ್ಕೆಯಾದರು. ಕೆಲವು ವರ್ಷ ಸೇವೆ ಸಲ್ಲಿಸಿದ ತರುವಾಯ ಉಪನ್ಯಾಸಕ ಹುದ್ದೆ ಖಾಯಂ ಆಯಿತು. ಮಗನಿಗೆ ನೌಕರಿ ದೊರೆಯಿತು. ಹೇಗೋ ಬಡತನ ಕಳೆಯಿತು ಎಂದು ಪರಸಪ್ಪ ನಿಟ್ಟುಸಿರು ಬಿಟ್ಟಿದ್ದರು. ಆದರೆ ಈ ಸಂತೋಷ ಬಹಳ ದಿನ ಉಳಿಯಲಿಲ್ಲ. ಏಕೆಂದರೆ ಅಂದು ಮಹಾರಾಜ ಕಾಲೇಜು ಎನ್ನುವಂತಹದ್ದು ಒಂದು ಚೌಕಟ್ಟು ರೂಢಿಸಿಕೊಂಡ ಕಾಲೇಜಾಗಿತ್ತು. ಅಲ್ಲಿನ ಧೋರಣೆಯಂತೆಯೇ ಮುಂದುವರಿಯಬೇಕಿತ್ತೆ ವಿನಹ ಸ್ವತಂತ್ರ ವಿಚಾರಗಳಿಗೆ ಮಾನ್ಯತೆಯಿರಲಿಲ್ಲ. ಆದರೆ ತೆಲಗಾವಿಯವರು ಅದನ್ನು ಸಹಿಸದೆ ಸಾಮಾಜಿಕ ಧೋರಣೆಯ ಮನೋಭಾವ ರೂಢಿಸಿಕೊಂಡಿದ್ದರಿಂದ ಕೆಲವರಿಗೆ ನುಂಗಲಾರದ ಬಿಸಿ ತುಪ್ಪವಾಗಿದ್ದಿತು. ಇವೆಲ್ಲ ಬೆಳವಣಿಗೆಯ ನಡುವೆ ೧೯೭೬ರಲ್ಲಿ ವರ್ಕ್‌ಲೋಡ್ ಇಲ್ಲವೆಂಬ ನೆಪವೊಡ್ಡಿ ಮಹಾರಾಜ ಕಾಲೇಜಿನಿಂದ ಹೊರಹಾಕುವ ಸಂಚಿನ ಬಲೆಯು ಸಿದ್ಧವಾಗಿತ್ತು. ಅದರ ಸುಳಿಗೆ ಸಿಕ್ಕಿಕೊಳ್ಳುವ ವಾತಾವರಣವೂ ಸೃಷ್ಟಿಯಾಗಿತ್ತು. ಅಷ್ಟೊತ್ತಿಗೆ ದೇಶಾದ್ಯಂತ ಜೆ.ಪಿ.ಯವರ ವಿಚಾರಧಾರೆಗಳು ರಣಕಹಾಳೆ ಊದುತ್ತಿದ್ದವು. ಕೆಲವು ಸೈದ್ಧಾಂತಿಕ ನಿಲುವಿನೊಂದಿಗೆ ಗುರುತಿಸಿಕೊಂಡಿದ್ದ ತೆಲಗಾವಿಯರಿಗೆ ಜೆ.ಪಿ. ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಕರೆಬಂದವು. ಇದರಾಚೆಗೆ ತೆಲಗಾವಿಯವರಿಗೆ ಪರಿಷತ್ತು, ಸಿನಿಮಾರಂಗ ಪತ್ರಿಕೆಯಂತಹ ಹಲವು ದಾರಿಗಳು ಮುಂದಿದ್ದವು. ಇದರಲ್ಲಿ ಯಾವುದನ್ನು ಆಯ್ಕೆ ಮಾಡಿಕೊಳ್ಳುವುದು ಎಂಬ ಗೊಂದಲ್ಲಿದ್ದಾಗಲೇ, ಸದ್ಯದ

ಸ್ಥಿತಿಯಲ್ಲಿ ಹೋರಾಟದ ಹುಮ್ಮಸ್ಸಿನ ಮನೋಭಾವದಿಂದ ಜೆ.ಪಿ.ಯವರ ಚಳುವಳಿಗೆ ಕಟ್ಟು ಬಿದ್ದು, ಭಾಷಣ, ಚಳುವಳಿ, ಹೋರಾಟ, ಚರ್ಚೆ, ಜಾಥಾ, ಸಂವಾದ, ಬೀದಿಯ ಭಾಷಣ, ಗೋಡೆಬರಹ, ಭಿತ್ತಿಚಿತ್ರ ಅಂಟಿಸುವಿಕೆ, ಬ್ಯಾನರ್ ಕಟ್ಟುವಿಕೆ ಮುಂತಾದವುಗಳಲ್ಲಿ ಭಾಗವಹಿಸಿ ಸಂಚಲನ ಮೂಡಿಸಿದರು. ಪ್ರಾಮಾಣಿಕವಾಗಿಯೆ ಸಾಮಾಜಿಕ ನ್ಯಾಯದ ಮಹತ್ವ ಕುರಿತು ಈ ಚಳುವಳಿಯಲ್ಲಿ ಭಾಗವಹಿಸಿ ಬುದ್ಧಿಜೀವಿಗಳೆನಿಸಿಕೊಂಡಿದ್ದರು. ಸಾಮಾಜಿಕ ನ್ಯಾಯದ ಆಶಯ ಅಥವಾ ಧೋರಣೆ ಕೇವಲ ನೆಪಮಾಡಿ ಸ್ವಾರ್ಥ ಸಾಧನೆಗಾಗಿ ಬಳಸಿಕೊಳ್ಳಲು ಕೆಲವರು ಮುಂದಾದರು. ಪರಿಣಾಮ ಚಳುವಳಿ ಬೇರೊಂದು ದಿಕ್ಕಿನತ್ತ ಹೊರಳುತ್ತಿದ್ದದ್ದನ್ನು ಕಣ್ಣಾರೆ ಕಂಡ ತೆಲಗಾವಿಯವರು ಅಂತ ಬುದ್ಧಿವಂತರಿಂದ ಹೊರಬಂದರು. ಅದೇ ಸಂದರ್ಭದಲ್ಲಿ ಮಹಾರಾಜ ಕಾಲೇಜಿನ ವಾತಾವರಣ ತಾಳ್ಮೆಯನ್ನು ಮೀರಿಸಿತ್ತು. ಆಗತಾನೇ ಹೊಸದೊಂದು ಪರಿಕಲ್ಪನೆಯು ಮೂಡಿತ್ತು. ಅದೆಂದರೆ ಚೌಕಟ್ಟಿನಡಿಯಲ್ಲಿ ಕೇವಲ ಪಾಠ ಮಾಡುವುದರಿಂದ ಸಮಾಜ ಪರಿವರ್ತನೆಯಾಗಲಾರದು. ಪರಿವರ್ತನೆಗೆ ಬೇಕಾಗಿದ್ದು ಸಮಾಜದೊಂದಿಗೆ ಮುಖಾಮುಖಿ ಯಾಗುವ ಅವಕಾಶಗಳು ಬೇಕೆಂಬುದು. ಇದನ್ನರಿತ ತೆಲಗಾವಿಯವರು, ಮಹಾರಾಜ ಕಾಲೇಜಿನಲ್ಲಿ ಖಾಯಂಗೊಂಡಿದ್ದ ಉಪನ್ಯಾಸಕ ಹುದ್ದೆಗೆ ೧೯೭೭ರಲ್ಲಿ ರಾಜೀನಾಮೆ ನೀಡಿ ಹೊರಬಂದರು. ಹೊರಬಂದಾಗ ತಂದೆ-ತಾಯಿ, ಸಹೋದರ-ಸಹೋದರಿಯರು. ಗೆಳೆಯರು ಗಾಬರಿಗೊಂಡಿದ್ದರು. ಪ್ರತಿಷ್ಠಿತ ಕಾಲೇಜಿನ ಪ್ರತಿಷ್ಠಿತ ಹುದ್ದೆ ಬಿಟ್ಟು ಬರುವುದೆಂದರೆ, ಒಂದು ರೀತಿಯ ಹುಚ್ಚುತನವೆಂದುಕೊಂಡಿದ್ದರೂ ಅದರ ಅನಿವಾರ್ಯತೆ ಮಾತ್ರ ತೆಲಗಾವಿಯವರಿಗಿತ್ತು. ಪ್ರಜಾವಾಣಿ ಮತ್ತು ಸಂಯುಕ್ತ ಕರ್ನಾಟಕದ ಪತ್ರಿಕೆಗಳು ಸೇವೆ ಸಲ್ಲಿಸಲಿಕ್ಕೆ ಆಹ್ವಾನವಿತ್ತವು, ಎರಡು ಪತ್ರಿಕೆಯ ಸಂದರ್ಶನದಲ್ಲಿಯೂ ಆಯ್ಕೆಯಾಗಿದ್ದರು. ಮತ್ತೊಂದು ಕೆಲಸವೆಂದರೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿಯೂ ಅವಕಾಶಗಳು ಬಂದವು. ಇನ್ನೂ ಒಂದು ಹೆಜ್ಜೆ ಮುಂದೋಗಿದ್ದ ತೆಲಗಾವಿಯವರಿಗೆ ಕನ್ನಡ ಖ್ಯಾತ ನಿರ್ದೇಶಕ ಪುಟ್ಟಣ್ಣ ಕಣಗಲ್‌ರವರ ಜೊತೆ ನಿರ್ದೇಶಕನಾಗಿ ದುಡಿಯಬೇಕು. ಆ ಮೂಲಕ ನಾಡು-ನುಡಿ-ಸಂಸ್ಕೃತಿಗೆ ದಿಕ್ಸೂಚಿಯಾಗುವಂತಹ ಕಥೆಗಳನ್ನು ಅನಾವರಣಗೊಳಿಸಬೇಕೆಂದಿದ್ದರು. ಆದರೆ ಅದೇಕೋ ಆಸೆ ಈಡೇರಲಿಲ್ಲವೆಂದರೂ ತಪ್ಪಾಗುತ್ತದೆ. ಹೀಗೆ ನಾಲ್ಕು ಅವಕಾಶಗಳಲ್ಲಿ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದು ಆಲೋಚಿಸು ವಾಗಲೇ, ರಂಗಸ್ವಾಮಿಯವರ ಆಸಕ್ತಿ ಸಹಾಯದ ಮೇರೆಗೆ ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ, ಬೋಧಿಸುವ ಅವಕಾಶ ಹುಡುಕಿಕೊಂಡು ಬಂದಿತು. ಭವಿಷ್ಯ ಈ ಅವಕಾಶ ಬರದಿದ್ದರೆ ಪುಟ್ಟಣ್ಣ ಕಣಗಲ್‌ರಂತೆಯೆ ಕನ್ನಡ ನಾಡಿಗೆ ಹೆಸರಾಂತ ಸಿನಿಮಾ ನಿರ್ದೇಶಕನ ಪಟ್ಟ ಬರುತ್ತಿತ್ತು ಅಥವಾ ಪತ್ರಿಕೆಗಳ ಮೂಲಕ ಜನರ ಸಮಸ್ಯೆಗೆ ಸ್ಪಂದಿಸುತ್ತಿದ್ದರು. ಆ ನಾಡು-ನುಡಿಗೆ ಸೇವೆ ಸಲ್ಲಿಸುವುದನ್ನು ಸಂಶೋಧನೆಯ ಮೂಲಕ ನೆರವೇರಿಸಿದರು. ೧೯೭೭ರಲ್ಲಿ ಪಿಎಚ್.ಡಿ. ಮುಗಿಸಿ ಕೆಲವು ವರ್ಷ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಇತಿಹಾಸ ಬೋಧಿಸುವ, ಅಚ್ಚುಮೆಚ್ಚಿನ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದರು.

ಅದರಂತೆಯೆ ಕನ್ನಡ ಶಾಸನ ತರಗತಿಗಳಿಗೆ ವಿಶೇಷ ಉಪನ್ಯಾಸ ನೀಡಲು ಹೋಗುತ್ತಿದ್ದರು ಹಾಗೂ ಅಜನ್ಮ ಬ್ರಹ್ಮಚಾರಿಯಾಗಿ ತಮ್ಮ ಅವಿರತ ಸಮಯ, ಶ್ರಮವನ್ನು ಸಂಶೋಧನೆಗೆ ಮೀಸಲಿಟ್ಟರು. ಪಿಎಚ್.ಡಿ. ಪದವಿಯನ್ನು ಪಡೆಯದೇ ಅಂಥ ನೂರಾರು ಮಹಾಪ್ರಬಂಧಗಳನ್ನು ಬರೆಯುವ ವಿದ್ವತ್ತನ್ನು ಪಡೆದವರು ಸಂಶೋಧಕ ಲಕ್ಷ್ಮಣ್ ತೆಲಗಾವಿಯವರು.

ವೃತ್ತಿ

ತೆಲಗಾವಿಯವರ ವೃತ್ತಿ ಬದುಕನ್ನು ಶೋಧಿಸುವಂತ ದಾರಿಯಲ್ಲಿ ದೊರೆಯುವ ಬಹುಮುಖ್ಯ ಅಂಶಗಳೆಂದರೆ ವೃತ್ತಿ ಯಾವುದು? ಪ್ರವೃತ್ತಿ ಯಾವುದು ಎಂಬುದು, ಇದನ್ನು ನಿಖರವಾಗಿ ಗುರುತಿಸಲು ಅಸಾಧ್ಯ, ಗುರುತಿಸಿದರು ಸ್ಪಷ್ಟತೆ ನೀಡುವುದು ಪ್ರಾಯಾಸದ ಕೆಲಸ. ಏಕೆಂದರೆ ಅವರ ಬದುಕೇ ಅಧ್ಯಯನ, ಅಧ್ಯಯನವೇ ಬದುಕಾಗಿರುವಾಗ ಆ ಅಧ್ಯಯನ-ಬದುಕಿನಲ್ಲಿ ವೃತ್ತಿ-ಪ್ರವೃತ್ತಿ ಎರಡು ಸಂಯೋಜನೆಗೊಂಡಿವೆ. ಆದರೆ ಅಧ್ಯಯನ ದೃಷ್ಟಿಯಿಂದ ವೃತ್ತಿ, ಪ್ರವೃತ್ತಿಗಳನ್ನು ಹೇಳಬೇಕಾಗಿರುವುದರಿಂದ ಕ್ಲಿಷ್ಟತೆಯಿಂದಲೇ ಗುರುತಿಸಿ ವೃತ್ತಿ–ಪ್ರವೃತ್ತಿಗಳ ನಡುವೆ ಗೆರೆ ಎಳೆಯುವ ಪ್ರಯತ್ನ ಮಾಡಲಾಗಿದೆ. ವಿಚಿತ್ರವೆಂದರೆ ಬಡತನ, ಸರಳತೆ, ಶಿಸ್ತು, ಅಧ್ಯಯನ ಪ್ರಾಮಾಣಿಕತೆ ಮತ್ತು ತೆಲಗಾವಿ ಒಂದೇ ಕುಟುಂಬದ ರಕ್ತಸಂಬಂಧಿಗಳು. ಆದ್ದರಿಂದಾಗಿಯೆ ಇವರ ಸರಳ ಸಜ್ಜನಿಕೆಗೆ ಮನಸೋತ, ಕರ್ತವ್ಯ ಪ್ರಜ್ಞೆಗೆ ಗೌರವ ತೋರಿ, ನಿರೀಕ್ಷಿಸಿದಕ್ಕಿಂತಲೂ ಹೆಚ್ಚುವರಿ ಅವಕಾಶಗಳು ಇವರನ್ನು ಹುಡುಕಿಕೊಂಡು ಬರುತ್ತಿರುವುದು. ಒಂದು ರೀತಿಯ ಸಿನಿಮಾದ ರೀತಿಯ ಕಥೆಯೆ ಎಂದೆನಿಸುತ್ತದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿ ಸೇವೆ

೧೯೭೭ರಲ್ಲಿ ಮೈಸೂರು ಮಹಾರಾಜ ಕಾಲೇಜಿನ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುವಂತ ಸಂದರ್ಭದಲ್ಲಿ ೫೧ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಧರ್ಮಸ್ಥಳದಲ್ಲಿ ಏರ್ಪಡಿಸಿದ್ದರು. ಆ ಸಮಯದಲ್ಲಿ ಖ್ಯಾತ ವಿದ್ವಾಂಸ ಹಂಪನಾ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಧರ್ಮಸ್ಥಳದಲ್ಲಿ ಪ್ರಬಂಧ ಮಂಡಿಸಲು ಆಹ್ವಾನಿಸಿದ ಮಹನೀಯ ಎಂದರೆ ಹಂಪನಾರವರು. ಆ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಎಂದರೆ ಕೆಲವು ಬುದ್ಧಿಜೀವಿಗಳು ವಿರೋಧಿಸುತ್ತಿದ್ದರು. ಸಾಹಿತಿಗಳಲ್ಲಿ ಎಡ ಮತ್ತು ಬಲ ಪಂಥೀಯ ಎಂಬ ವರ್ಗವಿತ್ತು. ಇವರುಗಳ ದೃಷ್ಟಿಯಲ್ಲಿ ಪರಿಷತ್ತು ಎಂಬುದು ಯಜಮಾನ ಸಂಸ್ಕೃತಿ ಹೊಂದಿದೆ ಎಂತಲೂ ಹೊಸ ವಿಚಾರಗಳನ್ನು ಮಂಡಿಸುವವರಿಗೆ ಅಥವಾ ಆಸಕ್ತರಿಗೆ ಹೊಸ ತರಹದ ನಿಲುವುಗಳಿಗೆ ಮನ್ನಣೆಯಿಲ್ಲ. ಕೆಲವೇ ಕೆಲವು ಜನರಿಗೆ, ಕೆಲವೇ ಕೆಲವು ಧೋರಣೆ ಹೊಂದಿದ್ದವರಿಗೆ ಮಾತ್ರ ಅವಕಾಶವಿತ್ತೆಂಬಕೂಗು, ಸಾಹಿತ್ಯ ವಲಯದಲ್ಲಿ ಕೇಳಿಬರುತ್ತಿತ್ತು. ತೆಲಗಾವಿಯವರು ಇದೇ ಮನಃಸ್ಥಿತಿ ಹೊಂದಿದ್ದರು. ಅದರಾಚೆಗೆ ಅಂದುಕೊಂಡಿದ್ದನ್ನು ನಿರ್ವಹಿಸದಿದ್ದರೂ, ಆ ಪರಿಕಲ್ಪನೆಯ ಸುತ್ತಲೂ ಯಾವುದೋ ಒಂದು ತರದ ಕೆಲಸ ನಡೆಯುತ್ತಿದೆಯಲ್ಲ ಎಂಬ ಮನಸ್ಸಿನೊಂದಿಗೆ ಕಾರ್ಯ ನಿರ್ವಹಿಸುವ ಪರಿಷತ್ತನ್ನು ತುಂಬಾ ಗೌರವಿಸುತ್ತಿದ್ದರು. ಅಂತಹ

ಪರಿಷತ್ತಿನ ಅಧ್ಯಕ್ಷರಾದ ಹಂಪನಾರವರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಿದರೆ ಸ್ಥಿತಿ ಬದಲಾಗುವುದು ಎಂಬ ದೂರಾಲೋಚನೆಯು ಬಂದಿತು. ಹೀಗಿರುವ ಪರಿಸ್ಥಿತಿ ನೋಡಿ ದೂರ ಉಳಿಯುವುದಕ್ಕಿಂತ ಧೋರಣೆಗಳು ದೂರ ಉಳಿಯುವವು. ಆದ್ದರಿಂದ ಧೋರಣೆಗಳು ಎಲ್ಲರಿಗೂ ಇಷ್ಟವಾಗಬೇಕು. ಕೆಲವು ಧೋರಣೆಗಳು ಹೊಸ ಪರಿಕಲ್ಪನೆ ಪಡೆದು ಕೊಳ್ಳಬೇಕು ಎಂದಾದರೆ. ಅದರೊಳಗಡೆ ಪ್ರವೇಶ ಪಡೆಯಲೇಬೇಕು ಎಂದು ತೀರ್ಮಾನಿಸಿದರು. ಪರಿಷತ್ತು ಎಂದರೆ ಹೊಸಜ್ಞಾನ ಬಯಸುವ ವಿಶ್ವವಿದ್ಯಾಲಯದ ಸ್ವರೂಪದ್ದು ಎಂಬ ಅಭಿಪ್ರಾಯ ತೆಲಗಾವಿಯವರಿಗಿತ್ತು. ಆದರೆ ಆಗಿನ ಮಹಾರಾಜ ಕಾಲೇಜಿನ ವಾತಾವರಣ, ಕೆರಳಿಸುವ ಕೆಲವು ಅಧ್ಯಯನ ಕ್ಷೇತ್ರಗಳು ಸಮಯದ ಅಭಾವದಿಂದಾಗಿ ಸಮ್ಮೇಳನದಲ್ಲಿ ಪ್ರಬಂಧ ಮಂಡಿಸಲು ಸಾಧ್ಯವಾಗಲಿಲ್ಲ. ಇವೆಲ್ಲವುಗಳನ್ನು ಹೇಳಿಕೊಳ್ಳಲಾಗದ ಸ್ಥಿತಿಯಲ್ಲಿ ಬೇರೊಂದು ಕಾರಣ ಕೊಟ್ಟು ಪತ್ರ ಬರೆದು ಮನವಿ ಮಾಡಿಕೊಂಡರು. ಹಂಪನಾರವರಿಗೆ ತೆಲಗಾವಿಯ ಮನಸ್ಥಿತಿ ಅರ್ಥವಾಗಿದ್ದರ ಪರಿಣಾಮ ಕೂಡಲೇ ಪ್ರತಿಕ್ರಿಯಿಸಿ ಈಗ ನಿಮ್ಮ ಸ್ಥಿತಿ ಹೀಗಿರಬಹುದಾದರೂ ಇದೇ ಸ್ಥಿತಿ ಯಾವಾಗಲೂ ಇರಲು ಸಾಧ್ಯವಿಲ್ಲ. ಆದ್ದರಿಂದ ಬೆಂಗಳೂರಿಗೆ ಬಂದಾಗ ತಾವು ಅವಶ್ಯವಾಗಿ ನನ್ನನ್ನು ನೀವು ಭೇಟಿಯಾಗಲೇಬೇಕೆಂಬ ಷರತ್ತು ವಿಧಿಸಿ ಪತ್ರ ಬರೆದರು. ಇದು ಮನಸ್ಸಿನಲ್ಲಿ ರುವಾಗಲೇ ಮಹಾರಾಜ ಕಾಲೇಜಿನ ಸ್ಥಿತಿ ಎಲ್ಲೇ, ಮೀರಿದಿದ್ದರಿಂದ ಉಪನ್ಯಾಸಕ ಹುದ್ದೆಗೆ ರಾಜೀನಾಮೆ ನೀಡಿ ನೇರವಾಗಿ ಹಂಪನಾರವರನ್ನು ಭೇಟಿಯಾದರು. ಅದೇ ಸಮಯಕ್ಕೆ ಕನ್ನಡ ಸಾಹಿತ್ಯ ಪರಿಷತ್ತ್‌ದಲ್ಲಿ ಗೌರವ ಕಾರ್ಯದರ್ಶಿ ಹುದ್ದೆ ಖಾಲಿಯಾಗಿತ್ತು. ಈ ಮೊದಲಿನಿಂದಲೂ ಮನದಲ್ಲಿದ್ದ ಕೆಲವು ವಿಚಾರ ದೂರ ಮಾಡಿ, ಹೊಸ ರೀತಿಯ ಕಾರ್ಯಕ್ಕೆ ಸಿದ್ಧಗೊಳಿಸುವಂತ ಕಾರ್ಯಕ್ಕಾಗಿ ಕಾಯುತ್ತಿದ್ದ ಲಕ್ಷ್ಮಣ್ ತೆಲಗಾವಿಯವರಿಗೆ ಅವಕಾಶ ತಾನಾಗಿಯೇ ಕೂಡಿ ಬಂದಿತು. ಕನ್ನಡ ಸಾಹಿತ್ಯ ಪರಿಷತ್ತಿನ ಬಗ್ಗೆ ಹಲವು ಬುದ್ಧಿಜೀವಿಗಳ ಧೋರಣೆ ಏನೇ ಇರಲಿ ಇದಕ್ಕಿಂತ ಭಿನ್ನ ಧೋರಣೆ ಹೊಂದಿದ್ದ ತೆಲಗಾವಿ ಯಾರದೋ ಸಿದ್ಧಾಂತಕ್ಕೆ ಮರುಳಾಗದ, ಒಪ್ಪದ ಸಂಶೋಧಕನಾಗಿದ್ದು ಆ ಮೂಲಕ ತನ್ನದೇ ಒಂದು ಧೋರಣೆಯ ಮೂಲಕ ಹೊಸದೊಂದು ಕಾರ್ಯಕ್ಕೆ ತುಡಿಯುತ್ತಿದ್ದ ಪರಿಣಾಮ ತೆರವಾಗಿದ್ದ ಗೌರವ ಕಾರ್ಯದರ್ಶಿ ಹುದ್ದೆಗೆ ಹಂಪನಾರವರು ತೆಲಗಾವಿಯವರನ್ನು ನೇಮಕಾತಿ ಮಾಡಿಕೊಂಡರು. ಐದುವರೆ ವರ್ಷಗಳ ಕಾಲ ಗೌರವ ಕಾರ್ಯದರ್ಶಿಯಾಗಿ, ಇಲಾಖೆಯು ಒಪ್ಪಿಸಿದ ಹೊಣೆಗಾರಿಕೆ ನಿಭಾಯಿಸುವಂತ ಪ್ರಾಮಾಣಿಕ ಸೇವೆ ಮಾಡಿದ್ದರು. ಕನ್ನಡನಾಡು, ನುಡಿ, ಸಂಸ್ಕೃತಿ, ಸಾಹಿತ್ಯ, ಭಾಷೆ, ಜನಾಂಗ, ಭೂಪ್ರದೇಶ, ಆಚಾರ-ವಿಚಾರ ಇತ್ಯಾದಿಗಳಿಗೆ ನೇರ ಮುಖಾಮುಖಿಯಾಗುವ ಸಂಗತಿಗಳನ್ನು ತಮ್ಮ ಸೇವೆ ಹಾಗೂ ಸಂಶೋಧನೆಯ ಮೂಲಕ ತೋರಿಸಿಕೊಟ್ಟರು.

೧೯೮೫ರಲ್ಲಿ ಹಂಪನಾರವರು ಎರಡು ಅವಧಿಯವರೆಗೂ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು ಮತ್ತು ಕಾರ್ಯದಿಂದ ೧೯೮೫ರಲ್ಲಿ ನಿರ್ಗಮಿಸಿದರು. ಅದೇ ಸಂದರ್ಭದಲ್ಲಿಯೆ ತೆಲಗಾವಿಯವರು ಅವರೊಟ್ಟಿಗೆ ಕನ್ನಡ ಸಾಹಿತ್ಯ ಪರಿಷತ್ತಿನಿಂದ ನಿರ್ಗಮಿಸಿದರು. ತೆಲಗಾವಿಯವರಿಗೆ ಮುಂದು ವರಿಯುವ ಅವಕಾಶಗಳಿದ್ದರೂ ಮನಸ್ಸು ಮಾಡದಿರಲು ಕಾರಣವೆಂದರೆ, ತೆಲಗಾವಿ ಅವರ

ಕ್ರಿಯಾಶೀಲತೆ, ಹಂಪನಾ ಅವರ ಕ್ರಿಯಾಶೀಲತೆ ಒಬ್ಬರಿಗೊಬ್ಬರಿಗೆ ಗೊತ್ತಿತ್ತು. ಅವರಿಬ್ಬರೂ ಅಪರೂಪದ ಕೆಲಸಗಾರರು. ಆದ್ದರಿಂದ ಒಬ್ಬರು ಹೋಗಿ ಮತ್ತೊಬ್ಬರು ಕೆಲಸ ನಿರ್ವಹಿಸುವುದು ಮನಸ್ಸಿಗೆ ಹಿಡಿಸದಾಯಿತು ಮತ್ತು ಈ ಮೊದಲಿನ ಧೋರಣೆಯೇ ಬೇರೆ. ಹೊಂದಿಕೊಳ್ಳುವುದೆಂದರೆ ಆಗದ ಕೆಲಸವೆಂದರಿತರಿವರು. ೧೯೮೬ರಲ್ಲಿ ನಿರ್ಗಮಿಸಿದರು. ಏಕೆಂದರೆ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಗಳೆಂದರೆ ನಾಡು-ನುಡಿ ಕಟ್ಟುವಂತದ್ದು. ಬದಲಾಗಿ ಹಣಕ್ಕಾಗಿ ಪ್ರತಿಷ್ಠೆಗಾಗಿ, ಮೋಜಿಗಾಗಿ ಮಾಡುವಂತಹದ್ದಲ್ಲ. ಆದ್ದರಿಂದ ಪ್ರೀತಿಯಿಂದಲೇ ನಗು ನಗುತ್ತಾ ಸಾರ್ಥಕ ಭಾವದಿಂದ ಪರಿಷತ್ತಿನಿಂದ ಹೊರಬಂದರು.

ಪ್ರತಿಷ್ಠೆಯ ಹುದ್ದೆಯಾಗಿದ್ದ ಗೌರವ ಕಾರ್ಯದರ್ಶಿ ಹುದ್ದೆಗೆ ದೊರೆಯುತ್ತಿದ್ದ ವೇತನ ಒಂದು ದಿವಸಕ್ಕೆ ೧೦ ರೂಪಾಯಿಗಳು. ಇದರಲ್ಲಿ ವಾಹನ ವೆಚ್ಚವನ್ನು ಭರಿಸಬೇಕಿತ್ತು. ರಜಾ ದಿನಗಳಲ್ಲಿ ಆ ೧೦ ರೂಪಾಯಿಗಳು ಬರುತ್ತಿರಲಿಲ್ಲ. ಬೆಂಗಳೂರಿನಂತಹ ದುಬಾರಿ ನಗರದಲ್ಲಿ ಮೂರೊತ್ತಿನ ಊಟ ಹೇಗೆ ಹೊಂದಿಸಿಕೊಳ್ಳುವುದು, ಎಂಬುದು ದೊಡ್ಡ ಚಿಂತೆಯಾದರೆ ಇದಕ್ಕಿಂತ ದೊಡ್ಡ ಚಿಂತೆ ರೂಮ್ ಪಡೆಯುವುದು. ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಒಂದು ಚಿಕ್ಕ ರೂಮ್ ಬಾಡಿಗೆ ಹಿಡಿದುಕೊಂಡರು. ಇದನ್ನು ಕೇವಲ ರೂಮ್ ಎಂದುಕೊಳ್ಳದೇ ಕರ್ತವ್ಯದ ದೇಗುಲವೆಂದುಕೊಂಡು ಕಾಲ ಕಳೆಯುವಂತಾಯಿತು. ಇದರ ನಡುವೆ ಚಿತ್ರದುರ್ಗಕ್ಕೆ ಬರುವುದು ಸಂಶೋಧನಾ ತಂಡದ ಕಾರ್ಯ ಕಲಾಪ ವೀಕ್ಷಿಸುವುದು, ಮಾರ್ಗದರ್ಶನ ಮಾಡುವುದು ತಂಡದ ಸದಸ್ಯರ ಸಣ್ಣಪುಟ್ಟ ಖರ್ಚು ನಿಭಾಯಿಸುವ ಜವಾಬ್ದಾರಿ ಇವರ ಹೆಗಲ ಮೇಲಿತ್ತು. ಇದೊಂದು ಸವಾಲಿನ ಕೆಲಸವಾಗಿತ್ತು. ಇಷ್ಟಿದ್ದರೂ ಸ್ವಾಭಿಮಾನಿಯಾಗಿದ್ದರಿವರು. ಯಾರ ಹತ್ತಿರವೂ ಬೇಡಿಲ್ಲ. ಆಮಿಷಗಳಿಗೆ ಬಲಿಯಾಗಿಲ್ಲ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಬೆಂಗಳೂರಿನ ಸ್ಥಿತಿ ಗಮನಿಸಿಯೂ, ತೆಲಗಾವಿಯವರ ಸ್ಥಿತಿ ಗಮನಿಸಿಯೂ ರಜಾ ದಿನದ ವೇತನ ಪಡೆಯಲು ಸೂಚಿಸುತ್ತಾರೆ. ಆದರೆ ರಜಾ ದಿನವೆಂದರೆ ರಜವೇ ಹೊರತು ವೇತನವಲ್ಲ ಎಂದುಕೊಂಡರು. ರಜಾದಿನಗಳಲ್ಲಿ ನನ್ನ ಖಾಸಗಿ ಅಧ್ಯಯನ. ಆದ್ದರಿಂದ ಖಾಸಗೀ ಅಧ್ಯಯನ ಬದುಕಿಗಾಗಿ ಇಲಾಖೆಯ ಹಣ ವಿನಿಯೋಗಿಸಿದರೆ ನನಗೂ ಈ ಹಿಂದಿನ ಧೋರಣೆ ಹೊಂದಿದ್ದವರಿಗೂ ವ್ಯತ್ಯಾಸವಿರಲಾರದೆಂದುಕೊಂಡು ರಜಾದಿನದ ವೇತನ ಪಡೆದು ಕೊಳ್ಳಲಿಲ್ಲ. ಇವರ ಕಾರ್ಯ ಸಾಧನೆಗಳನ್ನು ಹಿರಿಯ ಸಾಹಿತಿ, ಸಂಶೋಧಕರು, ಮೆಚ್ಚಿಕೊಂಡಿದ್ದು, ಸಾಹಿತ್ಯ ಪರಿಷತ್ತಿನ ಚರಿತ್ರೆಯಲ್ಲಿ ಬೆರಳೆಣಿಕೆಯಷ್ಟು ವ್ಯಕ್ತಿಗಳಲ್ಲಿ ಲಕ್ಷ್ಮಣ್ ತೆಲಗಾವಿಯವರು ಒಬ್ಬರು.

ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯಲ್ಲಿ ಸಂಪಾದಕರಾಗಿ ಸೇವೆ (೧೯೮೬-೧೯೯೩)

ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುವಂತಹ ಸಂದರ್ಭದಲ್ಲಿ ಇವರ ಬದುಕಿಗಿಂತ ಸಂಶೋಧನಾ ಚಟುವಟಿಕೆ, ಚರಿತ್ರೆ ಬರವಣಿಗೆ ಕಂಡ ಕರ್ನಾಟಕ ಗ್ಯಾಸೆಟಿಯರ್‌ನ ಮುಖ್ಯ ಸಂಪಾದಕರಾಗಿದ್ದ ಖ್ಯಾತ ವಿದ್ವಾಂಸ ಡಾ. ಸೂರ್ಯನಾಥ

ಕಾಮತ್‌ರವರು, ಗ್ಯಾಸೆಟಿಯರ್ ಇಲಾಖೆಗೆ ಬರುವಂತೆ ತೆಲಗಾವಿಯರಿಗೆ ಆಹ್ವಾನವಿತ್ತಿದ್ದರು. ಆ ಸಂದರ್ಭದಲ್ಲಿ ತೆಲಗಾವಿಯವರಿಗೆ ಹಲವು ಜವಬ್ದಾರಿಯ ಕೆಲಸದ ನಿಮಿತ್ತ, ಇರುವ ಜವಬ್ದಾರಿ ನಿಭಾಯಿಸದೆ ಕನ್ನಡ ಸಾಹಿತ್ಯ ಪರಿಷತ್ತನ್ನು ನಿರ್ಗಮಿಸುವುದು ಅಸಾಧ್ಯವಾಗಿತ್ತು. ಆದ್ದರಿಂದ ಹಿಡಿದ ಕೆಲಸವನ್ನು ಗುರಿಮುಟ್ಟಿಸುವ ಜಾಯಮಾನದವರಾದ ತೆಲಗಾವಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಮುಂದುವರಿದರು. ಆದರೆ ಕಾಮತ್‌ರವರು ಮಾತ್ರ ತಮ್ಮ ಪ್ರಯತ್ನ ಬಿಡಲಿಲ್ಲ. ಕಾಮತ್‌ರವರನ್ನು ಭೇಟಿಯಾಗಿಯೂ, ದೂರವಾಣಿಯ ಮೂಲಕವೂ ಸಂಧಿಸಿ ನಿಮ್ಮಂತ ಬುದ್ಧಿಜೀವಿಗಳ ಜೊತೆ ಕೆಲಸ ಮಾಡುವುದು ಎಂದರೆ ನನ್ನಂತವನ ಪುಣ್ಯ. ಆದ್ದರಿಂದ ಈ ಜವಬ್ದಾರಿ ಮುಗಿದ ಕೂಡಲೆ ತಮ್ಮ ಹತ್ತಿರ ಬರುವ ಭರವಸೆ ನೀಡಿದರು. ಐದು ವರ್ಷ ಹೀಗೆಯೆ ಮುಂದುವರಿಯಿತು. ಇತ್ತ ಹಂಪನಾರವರು ಕನ್ನಡ ಸಾಹಿತ್ಯ ಪರಿಷತ್ತಿನಿಂದ ನಿರ್ಗಮಿಸಿದರು. ಈ ವಿಷಯ ತಿಳಿದ ಕಾಮತ್‌ರವರು ಮತ್ತೆ ಆಹ್ವಾನವಿತ್ತರು. ತೆಲಗಾವಿಯವರನ್ನೆ ಆಹ್ವಾನಿಸಕ್ಕೆ ಹಲವು ಕಾರಣಗಳೆಂದರೆ ಇತಿಹಾಸದ ಬಗ್ಗೆ ಕಾಳಜಿ ಹೊಂದಿದ್ದಂತಹ ಬುದ್ಧಿಜೀವಿ. ಅಚ್ಚುಕಟ್ಟಾದ ಕ್ಷೇತ್ರಕಾರ್ಯದ ಕೌಶಲ್ಯತೆ, ಒಪ್ಪಿಕೊಂಡ ಕೆಲಸ ಸಂಪೂರ್ಣ ಮುಗಿಸುವ ಬದ್ಧತೆ, ಸ್ಥಳೀಯ ಚರಿತ್ರೆಯ ಹಾಗೂ ಜನಸಂಸ್ಕೃತಿಗಳ ಬಗ್ಗೆ ಕಾಳಜಿ ಹೊಂದಿದ್ದರಿಂದ, ಗ್ಯಾಸೆಟಿಯರ್ ಕೆಲಸಕ್ಕೆ ತೆಲಗಾವಿಯವರೆ ಸರಿಯಾದ ವ್ಯಕ್ತಿ ಎಂದು ಅಂದುಕೊಂಡಿದ್ದರಿಂದ ಆಹ್ವಾನಿಸಲಾಯಿತು. ಇಂತಹ ಗುಣಗಳಿಂದ ಕೂಡಿದಂತಹ ವ್ಯಕ್ತಿಗಳಾಗಿಯೆ ಕಾಮತ್‌ರವರು ಅನ್ವೇಷಿಸುತ್ತಿದ್ದರು. ಏಕೆಂದರೆ ಗ್ಯಾಸೆಟಿಯರ್ ಎಂಬುದು ಕೇವಲ ಲೋಕಾಭಿರಾಮದಂತಹ ಕೆಲಸ ನಿರ್ವಹಿಸುವ ಇಲಾಖೆಯಾಗಿರದೆ ಮುಂದಿನ ಪೀಳಿಗೆಗೆ ನಾವುಗಳು ಕಟ್ಟಬಹುದಾದ ಸಂಸ್ಕೃತಿಯ ಸಂಕೇತ. ಆದ್ದರಿಂದ ಇಲ್ಲಿಯ ಕೆಲಸಗಾರರು ಅದೇ ತರದ ದೂರದೃಷ್ಟಿ ಅಧ್ಯಯನಶಿಸ್ತು, ಕ್ರಿಯಾಶೀಲತೆ. ಹೊಸತನದ ಪ್ರಯತ್ನಗಳು, ವಸ್ತುನಿಷ್ಠ ವೈಜ್ಞಾನಿಕ ಚಿಂತನೆಗಳ ಮೂಲಕ ವಿಶ್ಲೇಷಿಸುವಂತ, ವಿಶ್ಲೇಷಕರು, ಸಂಶೋಧನದ ಎಲ್ಲಾ ಆಯಾಮಗಳ ಪರಿಚಿತವಿರುವ ವ್ಯಕ್ತಿಗಳಾಗಿರ ಬೇಕಾಗಿದ್ದ ರಿಂದಲೇ, ಅಂತಹ ವ್ಯಕ್ತಿಗಳನ್ನು ಹುಡುಕಿ, ಕಾಡಿ-ಬೇಡಿ ಅಂತವರಿಂದ ಜ್ಞಾನವನ್ನು ಹೊರತೆಗೆಯು ವಂತವರಾಗಿದ್ದವರು. ಈ ಎಲ್ಲಾ ಗುಣಗಳನ್ನು ತೆಲಗಾವಿಯವರಲ್ಲಿ ಕಾಮತ್‌ರವರು ಕಂಡು ಕೊಂಡಿದ್ದರು.

ಅದೇ ಸಮಯಕ್ಕೆ ಗ್ಯಾಸೆಟಿಯರ್ ಇಲಾಖೆಯಲ್ಲಿ ಸಣ್ಣ-ಪುಟ್ಟ ಬದಲಾವಣೆಗಳಾಗಿದ್ದು, ತೆಲಗಾವಿಯವರ ಒಡನಾಡಿ ಮಿತ್ರರಾದ ವಿದ್ವಾಂಸ ಗ್ಯಾಸೆಟಿಯರ್‌ನ ಸಂಪಾದಕರಾಗಿದ್ದ ಡಾ. ಆರ್. ಶೇಷಶಾಸ್ತ್ರಿಗಳು ಅನಂತಪುರದ ಕೃಷ್ಣದೇವರಾಯ ವಿಶ್ವವಿದ್ಯಾಲಯಕ್ಕೆ ಕನ್ನಡ ಅಧ್ಯಾಪಕರಾಗಿ ನೇಮಕವಾಗಿದ್ದರು. ಆ ಹುದ್ದೆ ತೆರವಾದದ್ದರಿಂದ ಆ ಹುದ್ದೆಗೆ ನೇರವಾಗಿ ತೆಲಗಾವಿಯವರನ್ನು ಕರ್ನಾಟಕ ಗ್ಯಾಸೆಟಿಯರ್ ಸಂಪಾದಕರಾಗಿ ಡಾ. ಸೂರ್ಯನಾಥ ಕಾಮತ್‌ರವರು ನೇಮಕಾತಿ ಮಾಡಿದರು. ನೇಮಕಾತಿ ಅಂಗೀಕರಿಸಿ ಆ ಸ್ಥಾನಕ್ಕೆ ನ್ಯಾಯ ಒದಗಿಸಲು ಹಗಲಿರುಳು ಶ್ರಮ ವಹಿಸಿದರು. ಕನ್ನಡ ಸಾಹಿತ್ಯ ಪರಿಷತ್ತುದಲ್ಲಿನ ಒಂದು ರೀತಿಯ ಕಾರ್ಯಕಲಾಪಗಳಿದ್ದರೆ, ಗ್ಯಾಸೆಟಿಯರ್‌ನಲ್ಲಿ ಅದಕ್ಕಿಂತ ಭಿನ್ನವಾದಂತಹ ಕಾರ್ಯಕಲಾಪಗಳಿದ್ದವು. ಪರಿಣಾಮ ಬೆಂಗಳೂರು

ನಗರ, ಬೆಂಗಳೂರು ಗ್ರಾಮಾಂತರ, ಮೈಸೂರು, ಕೊಡಗು, ಬೆಳಗಾವಿ ಹೀಗೆ ಐದು ಜಿಲ್ಲೆಗಳಲ್ಲಿ ಹಲವು ಜನಸಮುದಾಯಗಳನ್ನು, ಧರ್ಮಗಳನ್ನು, ಜಾತಿಗಳನ್ನು, ಸಂಸ್ಕೃತಿಗಳ ಪರಿಚಯ, ಆ ಸಮುದಾಯಗಳು ಅಳವಡಿಸಿಕೊಂಡ ಸಾಹಿತ್ಯ, ಕಲೆ, ಸಂಗೀತ ಅವುಗಳ ದಾಖಲೀಕರಣ ಕ್ಷೇತ್ರ ಕಾರ್ಯಕ್ಕೆ ಎಂದಿಲ್ಲದ ಹುರುಪು ಬಂದೊದಗಿದವು. ಇದರಿಂದಾಗಿ ಇತಿಹಾಸ ಸಂಶೋಧನಾದ ಪ್ರಪಂಚಕ್ಕೆ ಹೊಸದೊಂದು ತಿರುವುಗಳು, ಹಲವು ಧೋರಣೆಗಳು ಅಭಿಪ್ರಾಯಗಳು ಲಭ್ಯವಾಗಿ ವಿಭಿನ್ನ ಸಂಸ್ಕೃತಿಗಳ ಮುಖಾಮುಖಿಯಾಗಿದ್ದು ಸಂಶೋಧನಾ ವಲಯಕ್ಕೆ ಹೊಸದೊಂದು ದಾರಿಗಳು ದೊರಕಿದಂತಾದವು. ಕಾಮತ್‌ರಂಥ ಬುದ್ಧಿಜೀವಿಗಳೊಂದಿಗೆ ತೆಲಗಾವಿಯವರು ಇವೆಲ್ಲವನ್ನು ಕೈಗೊಂಡ ಅಭೂತಪೂರ್ವ ಕಾರ್ಯಗಳಾಗಿದ್ದವು. ೧೯೮೩ರ ತನಕ ಹೊಸ ಹುರುಪು. ಹೊಸ ವಿಧಾನಗಳ ಮುಖಾಮುಖಿಯೊಂದಿಗೆ ಸಾರಸ್ವತ ಲೋಕಕ್ಕೆ ಹಲವು ಕೊಡುಗೆ ನೀಡಿದರು.

ಈ ಇಲಾಖೆಯಲ್ಲಿ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ ಸಂದರ್ಭದಲ್ಲಿನ ಆ ದಿನಗಳೆಂದರೆ ಅತಿ ವಿಶಿಷ್ಟ ಪ್ರಸಂಗದ ಸಂಗಮ. ಮೇಲುನೋಟಕ್ಕೆ ಗ್ಯಾಸೆಟಿಯರ್ ಇಲಾಖೆ ಸಂಪಾದಕರೆಂದು ಹೆಸರು ಕೇಳಿದರೆ, ಅತ್ಯಂತ ಹಣ ಹರಿದುಬರುವ ಸಾಕಷ್ಟು ಸಂಪನ್ಮೂಲವಿರುವ ವೈಭೋಗಯುತ ವಾದ ಹುದ್ದೆ ಎಂದುಕೊಂಡವರು ಹಲವು ಜನರಿದ್ದಾರೆ. ಆದರೆ ತೆಲಗಾವಿಯವರು ಸಂಪಾದಕರಾಗಿ ಉಳಿದುಕೊಂಡ ಸ್ಥಳವೆಂದರೆ ಲಕ್ಷ್ಮಿ ಮುದ್ರಣಾಲಯದವರ ಚಾಮರಾಜಪೇಟೆಯಲ್ಲಿರುವ ಹಳೆಯ ಬಂಗಲೆಯ ಒಂದು ಚಿಕ್ಕ ರೂಮ್‌ನ್ನು ಬಾಡಿಗೆ ಪಡೆದುಕೊಂಡಿದ್ದರು ಎಂಬುದಕ್ಕಿಂತ ಅವರೇ ಉಚಿತವಾಗಿ ಕೊಡಮಾಡಲ್ಪಟ್ಟಿತ್ತು. ಆ ರೂಮ್‌ನಲ್ಲಿ ದೊಡ್ಡ ಪ್ರಾಣಿ ವಾಸಿಸಿದರೆ ಜಾಗ ಸಾಲುತ್ತಿರಲಿಲ್ಲ. ಮೂಲಭೂತ ಸೌಕರ್ಯಗಳು ಅಷ್ಟೇಕಷ್ಟೇಯಾಗಿತ್ತು. ಅಂತಹ ಸಂದಿಗ್ಧ ಇಕ್ಕಾಟದ ಸ್ಥಿತಿಯಲ್ಲಿ ವಾಸವಿರುವಂತಹ ಸಮಯದಲ್ಲಿ, ಬಾಲ್ಯದ ಗೆಳೆಯ ಗುರುನಾಥ ಬೆಂಗಳೂರಿಗೆ ಬಂದು "ಹೇಗೋ? ಸ್ನೇಹಿತರಾದ ತೆಲಗಾವಿ ಇಲಾಖೆಯ ಸಂಪಾದಕನಾಗಿದ್ದರೆ ಆತನನ್ನು ಭೇಟಿ ಮಾಡಿ ಔತಣ ಮುಗಿಸಿಕೊಂಡು ಹೋಗಬಹುದು ಎಂಬ ಆಸೆಯಿಂದ ಬಂದಿದ್ದ ಗುರುನಾಥನಿಗೆ ಆ ರೂಮ್‌ನ ನೋಡಿದ ಕೂಡಲೇ ಶಾಕ್ ಆಯಿತು. "ಏನ್ರಿ ಇದು ಈ ತರಹ ರೂಮ್‌ನಲ್ಲಿ ನೀವು ಎಂದು ಕೇಳಿದರೆ ತೆಲಗಾವಿಯ ಉತ್ತರವೆಂದರೆ ಗುರುನಾಥ ನಾನು ಇಲ್ಲಿರುವುದು ಗ್ಯಾಸೆಟಿಯರು ಕೆಲಸ ಕಾರ್ಯಗಳ ನಿಮಿತ್ತ. ಆದ್ದರಿಂದ ನಾನು ವಾಸಿಸಲು ಇಷ್ಟು ಸಾಕು, ನಾನೇನು ಮಹಾರಾಜನಲ್ಲ, ಬಂಗಲೆ, ಆಳು-ಕಾಳು ಇರಲಿಕ್ಕೆ ಇದ್ದುದರಲ್ಲಿಯೇ ಕೆಲಸ ಮಾಡುವುದು ನನ್ನ ಜಾಯಿಮಾನ"ವೆಂದು ಹೇಳಿದಾಗ ಗುರುನಾಥ ಸುಮ್ಮನಾಗಿಬಿಟ್ಟರು. ಸ್ವಲ್ಪ ಸಮಯದ ನಂತರ ಹಸಿವನ್ನು ಎಷ್ಟೇ ತಡೆಯಲು ಪ್ರಯತ್ನಪಟ್ಟರು. ಹೊಟ್ಟೆ ಕೇಳಬೇಕಲ್ಲ ಎಂದೂ ಕೇಳದ ಮನಸ್ಥಿತಿಯಿದ್ದರೂ ಹೊಟ್ಟೆಯ ಸಲುವಾಗಿ ಅನಿವಾರ್ಯವಾಗಿ ಕೇಳಿಸಿಯೆ ಬಿಟ್ಟಿತು. ಆ ಹಸಿವೆಂಬ ಭೂತ. "ಗುರುನಾಥ ಸ್ವಲ್ಪ ಹಣ ಬೇಕಿತ್ತಲ್ಲ ಎಂದರು. ಗುರುನಾಥರ ಸ್ಥಿತಿಯೂ ಅದೇಯಾಗಿತ್ತು. ಆದರೆ ಅದನ್ನು ಹೇಳಿಕೊಳ್ಳದೇ ನಾಳೆ ಕೊಡುತ್ತೇನೆ ಅಂದರು". ಮಾರನೇ ದಿವಸ ಗುರುನಾಥರವರು ತನ್ನ ಹೆಂಡತಿಯ ಒಡವೆಯನ್ನು ಗಿರವಿ

ಅಂಗಡಿಯಲ್ಲಿ ಗಿರವಿಹಿಟ್ಟು ಹಣ ತಂದುಕೊಟ್ಟರು. ಕೊಟ್ಟ ಹಣದಲ್ಲಿ ತನಗೆಷ್ಟು ಬೇಕೋ ಅಷ್ಟನ್ನು ಮಾತ್ರ ತೆಗೆದುಕೊಂಡು ಉಳಿದದ್ದನ್ನು ಗುರುನಾಥರಿಗೆ ವಾಪಸ್ಸು ಮಾಡಿದರು. ನಂತರ ಮುಂದೊಂದು ದಿನ ಆ ಹಣ ಮರಳಿಸಿದರಾದರೂ ಗೆಳೆಯ ಕೇಳಿದನೆಂಬ ಒಂದೇ ಕಾರಣಕ್ಕೆ ಹಿಂದು-ಮುಂದು ನೋಡದೆ ಎಂದೆಂದೂ ಯಾರನ್ನು ಕೇಳದ ತೆಲಗಾವಿಯವರು ಇಂದು ಕೇಳಿದ್ದಾರೆಂದರೆ ಎಂತಹ ಸ್ಥಿತಿಯಲ್ಲಿ ಜೀವನ ಮಾಡುತ್ತಿರಬಹುದು ಎಂದುಕೊಂಡು ಹಣ ನೀಡಿದರು. ಏಕೆಂದರೆ ಹಲವರು ಮಾಡಿದಂತೆ ದುಶ್ಚಟ ಇತ್ಯಾದಿ ಕೆಲಸಗಳನ್ನು ಮಾಡಿರದಾತ, ಕೇಳಿದನೆಂದರೆ ಅದೊಂದು ಅರಗಿಸಿಕೊಳ್ಳಲಾರದಂತಹ ಕಟುಸತ್ಯ. ಹೀಗೆ ಸಂಕಷ್ಟದ ಸರಮಾಲೆಯನ್ನು ಕೊರಳಲ್ಲಿ ಹಾಕಿಕೊಂಡೆ ಗ್ಯಾಸೆಟಿಯರ್‌ನ ಹೂಮಾಲೆ ಹಾಕಿಸಿಕೊಂಡರು.

ಹಂಪಿ ವಿಶ್ವವಿದ್ಯಾಲಯದ ಸಹಪ್ರಾಧ್ಯಾಪಕ(ಪ್ರವಾಚಕ)ರಾಗಿ ಸೇವೆ-೧೯೯೩-೨೦೦೬

೧೯೯೨ರಲ್ಲಿ ಕರ್ನಾಟಕದ ಏಕೈಕ ಸಂಶೋಧನಾ ಕ್ಷೇತ್ರಕ್ಕೆ ಸಂಬಂಧಿಸಿದ ಕನ್ನಡ ವಿಶ್ವವಿದ್ಯಾಲಯವು ಹಂಪಿಯಲ್ಲಿ ಸ್ಥಾಪನೆಯಾಯಿತು. ಕನ್ನಡ ವಿಶ್ವವಿದ್ಯಾಲಯದ ಮೊದಲ ಕುಲಪತಿಯಾಗಿ ಕವಿ ನಾಟಕಕಾರ. (ಜ್ಞಾನಪೀಠ ಪ್ರಶಸ್ತಿ ವಿಜೇತ.) ಡಾ. ಚಂದ್ರಶೇಖರ ಕಂಬಾರರು ನಿಯುಕ್ತಿಗೊಂಡರು. ಇತ್ತ ತೆಲಗಾವಿಯವರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸೇವೆ ಸಲ್ಲಿಸುವಂತ ಸಂದರ್ಭದಲ್ಲಿ ತೆಲಗಾವಿಯವರಿಗೆ ಕಂಬಾರರು ತುಂಬಾ ಚಿರಪರಿಚಿತರಾಗಿದ್ದವರು. ಕನ್ನಡ ಜಾನಪದ ವಿಶ್ವಕೋಶ ಯೋಜನೆಯಲ್ಲಿ ಪರಸ್ಪರ ಇಬ್ಬರು ಮುಖಾಮುಖಿಯಾಗುತ್ತಿದ್ದರು. ಹಲವು ವಿಷಯ ಕುರಿತಾಗಿ ಚರ್ಚಿಸುವ, ಸಂವಾದಿಸುವ ಕ್ರಿಯೆಗಳು ನಡೆದು, ಅದರಿಂದ ಲಭ್ಯವಾಗುವ ಕೆಲವು ಮಾಹಿತಿಗಳನ್ನು ಬಳಸಿಕೊಂಡಿದ್ದವರು. ಇಂತಹ ಕ್ರಿಯಾಶೀಲ ಮನೋಭಾವದ ಕಾಳಜಿ ಹೊಂದಿದರಿವರು ಕನ್ನಡ ವಿಶ್ವವಿದ್ಯಾಲಯಕ್ಕೆ ಕುಲಪತಿಯಾಗಿ ಬಂದ ಕೆಲವೇ ದಿನಮಾನಗಳಲ್ಲಿ ಚರಿತ್ರೆ ವಿಭಾಗ ತೆರೆದರು. ಚರಿತ್ರೆ ವಿಭಾಗವನ್ನು ಕಟ್ಟಿ ಬೆಳೆಸಲು ಅವರಂದು ಕೊಂಡಂತಹ ಸ್ವರೂಪವುಳ್ಳವರಿಗಾಗಿ ಶೋಧದಲ್ಲಿದ್ದರು, ಅಂತಹ ಸ್ವರೂಪವುಳ್ಳ ಜನರ ವಿದ್ವಾಂಸರ ಅಗತ್ಯವಿದ್ದ ಕಾರಣ, ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳಿಂದ, ಶೈಕ್ಷಣಿಕ ಕೇಂದ್ರಗಳಿಂದ ಇತರೆ ಇಲಾಖೆಗಳಿಂದ ಸೃಜನರನ್ನು, ವಿದ್ವಾಂಸರನ್ನು ಮೇಧಾವಿಗಳನ್ನು ಕ್ರಿಯಾಶೀಲರನ್ನು, ಅರ್ಹರನ್ನು ಗುರುತಿಸಿ ಗುಣಾತ್ಮಕವಾಗಿ ತುಲನೆ ಮಾಡಿ ವಿವಿಧ ಆಯಾಮಗಳ ಮೂಲಕ ಚರ್ಚಿಸಿಯೇ ವಿಶ್ವವಿದ್ಯಾಲಯದಲ್ಲಿ ಸೇವೆಸಲ್ಲಿಸಲು ಆಹ್ವಾನಿಸುತ್ತಿದ್ದರು. ಈ ಕಾರಣಕ್ಕಾಗಿಯೆ ಚರಿತ್ರೆ ವಿಭಾಗವನ್ನು ಅರ್ಥಪೂರ್ಣವಾಗಿ ಕಟ್ಟಲಿಕ್ಕೆ ಸೃಜನಾ ಕ್ರಿಯಾಶೀಲರನ್ನು ಅನ್ವೇಷಿಸಲು ಡಾ. ಕಂಬಾರರು, ಹಂಪನಾ ಅವರನ್ನು ಸಂಪರ್ಕಿಸಿ ಆಶಯ ತಿಳಿಸಿದರು. ಹಂಪನಾರವರು ಯೋಚಿಸಿ ಕಂಬಾರರಲ್ಲಿರುವ ದೃಷ್ಟಿಯಂತೆ ಇರುವ ಸೃಜನಗಾರರೆಂದರೆ ತಮ್ಮ ಜೊತೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಗೌರವ ಕಾರ್ಯದರ್ಶಿಯಾಗಿ, ಕಾರ್ಯ ನಿರ್ವಹಿಸಿದ ತೆಲಗಾವಿ ನೆನಪಾದರು. ಹೊಸ ಅವಕಾಶಕ್ಕೆ ಹೊಸ ಶೋಧನೆಗೆ ಸದಾಕಾಲವೂ ಆತೊರೆಯುತ್ತಿದ್ದ ಗುಣಗಳನ್ನು ಗಮನಿಸಿದ್ದ ಹಂಪನಾರವರು ಕಂಬಾರರಿಗೆ ತೆಲಗಾವಿಯ ವಿಷಯ ಪ್ರಸ್ತಾವನೆಯೂ ಮತ್ತು ಅವಕಾಶ ಕೊಡಲೇಬೇಕೆಂಬ ಪಟ್ಟು ಹಿಡಿದರೂ ಇಂತವರನ್ನೇ ಕಾಯುತ್ತಿದ್ದ ಕಂಬಾರರು

ಒಪ್ಪಿಯೇ ಬಿಟ್ಟರು. ಇದಾದ ನಂತರ ಹಂಪನಾರವರು ತೆಲಗಾವಿಯವರಿಗೆ ದೂರವಾಣಿ ಮೂಲಕ ಕರೆ ಮಾಡಿ "ಕನ್ನಡ ವಿಶ್ವವಿದ್ಯಾಲಯದಲ್ಲಿ ಚರಿತ್ರೆ ವಿಭಾಗವನ್ನು ಕಟ್ಟಿ ಬೆಳೆಸಲಿಕ್ಕೆ ನಿಮ್ಮಂತವರ ಅನಿವಾರ್ಯತೆಯಿದ್ದು, ಆ ಅವಕಾಶ ಸದುಪಯೋಗಪಡಿಸಿಕೊಂಡು ಕಾರ್ಯನಿರ್ವಹಿಸಲು ಒಪ್ಪುತ್ತೀರೆಂಬ ಭರವಸೆಯಲ್ಲಿ 'ನಿಮಗೆ ಕೆಲವು ದಿವಸ ಯೋಚಿಸಲಿಕ್ಕೆ ಸಮಯ ಕೊಡುತ್ತೇನೆ ಕೂಡಲೇ ತಿಳಿಸಿ ಹೇಳಿರೆಂದರು, ಆಶ್ಚರ್ಯವೆಂದರೆ ತೆಲಗಾವಿ ಮಾಡಬೇಕಾದಂತಹ ಆಯ್ಕೆಯ ಕಾರ್ಯಗಳನ್ನು ಹಂಪನಾರವರು ಮಾಡಿ ಮುಗಿಸಿದ್ದರು. ಆ ಎಲ್ಲಾ ಕ್ರಿಯೆ ಮುಗಿದ ಮೇಲೆ ವಿಷಯ ಪ್ರಸ್ತಾಪಿಸಿದ್ದರು. ಅಂದರೆ ಹಂಪನಾರವರಿಗೆ ತೆಲಗಾವಿಯವರ ಮೇಲೆ ಅಷ್ಟೊಂದು ಭರವಸೆಯಿತ್ತು. ಆದಾಗ್ಯೂ ಸಮಯ ಕೊಟ್ಟಿದ್ದರಿಂದ ವಿಶ್ವವಿದ್ಯಾಲಯಕ್ಕೆ ಹೋದ ಮೇಲೆ ಅಲ್ಲಿ ಬರಬಹುದಾದ ಸಾಧಕ-ಬಾಧಕಗಳ ಬಗ್ಗೆ ಹಲವು ತಜ್ಞರನ್ನು ಸಂಪರ್ಕಿಸಿ ಸಲಹೆ ಕೇಳಿದರು. ಅಂತಹ ಮಹನೀಯರೆಂದರೆ ಡಾ. ಸೂರ್ಯನಾಥ ಕಾಮತ್, ಡಾ. ಎಂ. ಚಿದಾನಂದಮೂರ್ತಿ, ಡಾ. ಬಿ.ವಿ. ವೈಕುಂಠರಾಜು ಅವರನ್ನು ಸಂಪರ್ಕಿಸಿ ವಿಷಯ ಪ್ರಸ್ತಾಪಿಸಿದರು. ಆ ಬುದ್ಧಿಜೀವಿಗಳು ಕೂಡಲೇ ಸ್ಪಂದಿಸಿ ನಿಮ್ಮ ಆಲೋಚನೆಗಳಿಗೆ ಹೇಳಿ ಮಾಡಿಸಿದಂತಹ ಜ್ಞಾನಕೇಂದ್ರ, ಇದೊಂದು ನೀವು ಸಲ್ಲಿಸಲಾಗುವ ಸೇವೆಯ ಇನೆಯ ಆಯಾಮದ ಸುವರ್ಣ ಅವಕಾಶವೆಂದುಕೊಂಡು, ವಿಶ್ವವಿದ್ಯಾಲಯಕ್ಕೆ ತೆರಳಿ ನಾಡು-ನುಡಿ-ಚರಿತ್ರೆ ಕಟ್ಟುವ ಕಾರ್ಯಗಳಲ್ಲಿ ಸಿದ್ಧರಾಗಿ ನಡೆಯಿರಿ ಎಂದು ಬೀಳ್ಕೊಟ್ಟರು. ತೆಲಗಾವಿಯವರು ವಿಶ್ವವಿದ್ಯಾಲಯ ತಲುಪಿ ಪ್ರವಾಚಕರಾಗಿ ನಿಯುಕ್ತಿಗೊಂಡು, ಸಹೋದ್ಯೋಗಿಗಳೊಂದಿಗೆ ಸ್ನೇಹ, ಎಲ್ಲರ ಸಹಕಾರ ಬಯಸಿ ವಿವಿಧ ಇಲಾಖೆಯೊಂದಿಗೆ ಸುಮಧುರ ಬಾಂಧವ್ಯ ಬೆಳೆಸಿಕೊಂಡು ವಿಭಾಗ ಬೆಳೆಸುವ ಹೊಣೆಗಾರಿಕೆ ವಹಿಸಿಕೊಂಡರು. ಹೊಸ ಪರಿಕಲ್ಪನೆಗಳನ್ನು ಸಂಶೋಧಿಸುವ ಅಧ್ಯಯನ ಆಸಕ್ತಿ ಹೊಂದಿದ ಸಂಶೋಧಕರನ್ನು ತಯಾರಿಸಿದರು ಕಂಬಾರರು ನಿವೃತ್ತಿಯಾಗುವ ತನಕ ಕುಲಪತಿ ಎಂಬುದನ್ನು ಮರೆತು ತೆಲಗಾವಿಯವರ ಕಾರ್ಯ ಶೈಲಿಯ ಬಗ್ಗೆ ಗೌರವ, ಸಲಹೆ, ಸೂಚನೆ ನೀಡುವುದು ಮತ್ತು ಸ್ನೇಹಿತನಂತೆಯೆ ಸಲುಗೆಯಿಂದಲೇ ಚರಿತ್ರೆ ಕಟ್ಟುವ ಕೆಲಸ ಕೈಗೊಂಡರು. ನಂತರ ಕುಲಪತಿಯಾಗಿ ಬಂದಂತಹ ಡಾ. ಎಂ.ಎಂ. ಕಲಬುರ್ಗಿ, ಡಾ. ಎಚ್.ಜೆ. ಲಕ್ಕಪ್ಪಗೌಡರು ಹಲವು ವಿವಿಧ ರೀತಿಯ ಸಹಕಾರ ನೀಡಿ ಸೇವೆ ಸಲ್ಲಿಸುವ ಅವಕಾಶ ಒದಗಿಸಿದರು. ಆನಂತರ ಬಂದ ಡಾ. ಬಿ.ಎ. ವಿವೇಕ ರೈರವರಂತೂ ತೆಲಗಾವಿಯೆಂದರೇನೆ ವಿಶೇಷ ಪ್ರೀತಿ, ಕಾಳಜಿ ತೋರಿಸಿ ಅಧ್ಯಯನ ಕ್ಷೇತ್ರಕ್ಕೆ ಚರಿತ್ರೆ ವಿಭಾಗಕ್ಕೆ ವಿಶೇಷ ಪ್ರೋತ್ಸಾಹ ನೀಡಿ ನೆರವು ನೀಡಿದರು. ಭಾಷಾತಜ್ಞ ಡಾ. ಕೆ.ವಿ. ನಾರಾಯಣ, ಪ್ರೊ. ಜೆ.ಆರ್. ರಾಮಮೂರ್ತಿ, ಡಾ. ಕೆ.ಎಂ. ಸುರೇಶ ಮುಂತಾದವರು ಹಲವು ತರದ ನೆರವು, ಸಹಕಾರ, ಸಲಹೆ-ಸೂಚನೆ ನೀಡಿ ಚರಿತ್ರೆ ವಿಭಾಗ ಕಟ್ಟಲು ತೆಲಗಾವಿಯವರಿಗೆ ಸಹಕರಿಸಿದರು.

ತೆಲಗಾವಿಯವರು ರೀಡರ್‌ರಾಗಿ ಅತ್ಯುತ್ತಮ ಸೇವೆ ಸಲ್ಲಿಸಿದ ನಂತರ ವಿಭಾಗದ ಮುಖ್ಯಸ್ಥರಾಗಿ ಯುವ ಅಧ್ಯಾಪಕರಿಗೆ, ಸಂಶೋಧನಾಸಕ್ತರಿಗೆ ಹೊಸ ಹುರುಪು ನೀಡಿದರು. ನಾಡಿನ ಮೂಲೆ-ಮೂಲೆಯಿಂದಲೂ ಸಂಶೋಧಕರನ್ನು ಹಂಪಿ ವಿಶ್ವವಿದ್ಯಾಲಯತ್ತ ಕರೆತಂದರು. ಪರಿಣಾಮ

ಪ್ರಾಧ್ಯಾಪಕರಾಗಿ ಹುದ್ದೆ ಅಲಂಕರಿಸಿ ಎಲ್ಲರ ಮೆಚ್ಚುಗೆಗಳಿಸಿಕೊಂಡರು. ವಿಶ್ವವಿದ್ಯಾಲಯವು ನಿಬ್ಬೆರಗಾಗುವಂತಹ ಕಾರ್ಯ ಕಲಾಪಕ್ಕೆ ಸಾಕ್ಷಿಯಾದರು. ಸದಾಕಾಲ ಗ್ರಂಥಾಲಯದಲ್ಲಿ ಕುಳಿತು ಅಧ್ಯಯನ ಮಾಡುವ ಮೂಲಕ ಹೊಸ ಸಂಚಲನ ಮೂಡಿಸಿ, ಸಮಾಜ ವಿಜ್ಞಾನಗಳಿಗೆ ಹೊಸ ಕಾಯಕಲ್ಪ ನೀಡಿದರು. ನಂತರ ೨೦೦೬ರ ಡಿಸೆಂಬರ್‌ನಲ್ಲಿ ಪ್ರಾಧ್ಯಾಪಕ ಹುದ್ದೆಯಿಂದ ನಿವೃತ್ತಿಗೊಂಡರು. ೨೦೦೬ರಿಂದ ೨೦೦೮ರ ತನಕ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ, ೨೦೦೯ರಿಂದ ೨೦೧೧ರ ತನಕ ಯು.ಜಿ.ಸಿ. ಎಮಿರಿಟಸ್ ಫೆಲೋ ಆಗಿ, ಪ್ರಸ್ತುತ ಪ್ರೊಫೆಸರ್ ಎಮಿರಿಟರಿಸ್ ಆಗಿ ಕಾರ್ಯ ಪ್ರವೃತ್ತರಾಗಿದ್ದಾರೆ. ಇಳಿವಯಸ್ಸಿನಲ್ಲಿಯೂ ಅದೇ ಉತ್ಸಾಹದಿಂದಲೆ ಸಂಶೋಧನೆ ಮತ್ತು ಅಧ್ಯಯನದ ಗೀಳು ಬೆಳೆಸಿಕೊಂಡಿದ್ದಾರೆ. ಆ ಮೂಲಕ ಚಿತ್ರದುರ್ಗದ ಪರಿಸರಕ್ಕೆ ಸಂಬಂಧಿಸಿದ ಕೃತಿ, ಲೇಖನ ಪ್ರಕಟಿಸುತ್ತಲೇ ಸಂಶೋಧನೆ ಚಟುವಟಿಕೆಗಳನ್ನು ಇನ್ನಷ್ಟು ವಿಸ್ತರಿಸಿಕೊಂಡಿದ್ದಾರೆ.

ಹಂಪಿ ವಿಶ್ವವಿದ್ಯಾಲಯದ ಕಾರ್ಯಕಲಾಪಗಳು

ತಮ್ಮ ಬತ್ತದ ಉತ್ಸಾಹ ಪ್ರಬುದ್ಧತೆಯಿಂದಲೇ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತಾ ಹಲವು ವಿವಿಧ ಕಾರ್ಯಕ್ಕೆ ತೊಡಗಿಸಿಕೊಂಡಿದ್ದಾರೆ. ದಿನ ಮಾತು, ವಿಭಾಗ ಮಾತು, ವಿಚಾರ ಸಂಕಿರಣಗಳಲ್ಲಿ ಲಕ್ಷ್ಮಣ್ ತೆಲಗಾವಿಯವರು ಸಕ್ರಿಯವಾಗಿರುತ್ತಿದ್ದರು.

ಪ್ರಸಾರಾಂಗದ ಚಟುವಟಿಕೆಗಳು

ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗದಲ್ಲಿ ಮೂಡಿಬಂದ ಸಂಶೋಧನ ಫಲಗಳು ಅವುಗಳೆಂದರೆ, ಕರ್ನಾಟಕದ ಹಿಂದುಳಿದ ವರ್ಗಗಳು ಮತ್ತು ದಲಿತ ಚಳುವಳಿ, ಸ್ಥಳೀಯ ಚರಿತ್ರೆ, ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ (ಕಾರ್ಯಗಾರ) ಮತ್ತು ಮೌರ್ಯ ಮತ್ತು ಶಾತವಾಹನ ಯುಗ, ಜೀರ್ಣವಿಜಯನಗರಾದರ್ಶಂ, ವಿಜಯನಗರದ ರಾಮಾನುಜಕೂಟಗಳು, ಚಿತ್ರದುರ್ಗದ ಒನಕೆ ಓಬವ್ವ: ಚಾರಿತ್ರಿಕ ವಿವೇಚನೆ, ದೊಡ್ಡೇರಿಕದನ-ಚರಿತ್ರೆ ಮತ್ತು ಜಾನಪದ ನೆಲೆಯಲ್ಲಿ, ರಾಮರಾಜನ ಬಖೈರು ಹಾಗೂ ಚರಿತ್ರೆ ಅಧ್ಯಯನ(ಅರ್ಧವಾರ್ಷಿಕ ಸಂಪಾದನೆ) ಇವು ಸೈದ್ಧಾಂತಿಕ ಮತ್ತು ಕಾರ್ಯಕ್ಷೇತ್ರದ ಮೂಲಕ ಬಂದ ಜ್ಞಾನ ದೀವಿಗೆಗಳು.

ಸಂಪುಟಗಳು

ವಿಶ್ವವಿದ್ಯಾಲಯವು ಹೊರತಂದ ಸಮಗ್ರ ಕರ್ನಾಟಕ ಚರಿತ್ರೆಯ ಏಳು ಸಂಪುಟಗಳ ಕೋ-ಆರ್ಡಿನೇಟರ್ ಆಗಿ ಶ್ರಮವಹಿಸಿದ್ದರ ಫಲವಾಗಿ ೧೯೯೭ರಲ್ಲಿ ಅವು ಅರ್ಥಗರ್ಭಿತವಾಗಿ ಮೂಡಿಬಂದಿವೆ. ಸರ್ವರು ಮೆಚ್ಚುವಂತ ಕೆಲಸಗಳನ್ನು ವಿಶ್ವವಿದ್ಯಾಲಯದಲ್ಲಿ ಜ್ಞಾನಸತ್ವದ ಮೂಲಕ ನೆರವೇರಿಸಿದ್ದಾರೆ. ಸಂಘ-ಸಂಸ್ಥೆ, ಮಠ, ಸರ್ಕಾರದ ಹಲವು ಯೋಜನೆಗಳಲ್ಲಿ ಸಂಪುಟಗಳ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದಾರೆ.

ಮಾರ್ಗದರ್ಶಕರಾಗಿ (ಸಂಶೋಧಕರಿಗೆ) ಕರ್ತವ್ಯ

ಚರಿತ್ರೆ ವಿಭಾಗದಲ್ಲಿ ಹೊಸ ಕಲ್ಪನೆಗಳ ಮೂಲಕ, ಹೊಸ ವಿಧಾನಗಳ ಮೂಲಕ ಸಂಶೋಧಕರನ್ನು ತಯಾರಿಸುವ ನಿಟ್ಟಿನಲ್ಲಿ ಹಲವು ಪ್ರಯತ್ನಗಳ ಫಲವಾಗಿ ಈ ಕೆಳಗಿನ ವಿಷಯದೊಂದಿಗೆ ಮಹಾಪ್ರಬಂಧಗಳು ಮೂಡಿಬರಲು ಮಾರ್ಗದರ್ಶಕರಾಗಿ ದುಡಿದವರಾಗಿದ್ದಾರೆ.

ಎಂ.ಫಿಲ್. ಸಂಶೋಧಕರಿಗೆ ಮಾರ್ಗದರ್ಶನ

೧. ಎಸ್.ವೈ. ಸೋಮಶೇಖರ್ - ಹಂಪಿಯ ಬಜಾರುಗಳು - ೧೯೯೪.

೨. ಬಸವರಾಜಯ್ಯ ಮಠದ - ವಿಜಯನಗರ ಕಾಲದ ಸಾಮಾಜಿಕ ಪರಿಸ್ಥಿತಿ: ಕೆಲವು ಅನಿಷ್ಟ ಪದ್ಧತಿಗಳು - ೧೯೯೪.

೩. ಜಿ.ಎನ್. ಕೀರ್ತಿನಾಥ - ಶಿವಮೊಗ್ಗ ಜಿಲ್ಲೆಯಲ್ಲಿ ಸಮಾಜವಾದಿ ಚಳುವಳಿಗಳು - ೧೯೯೫.

೪. ಕೆ.ಪಿ. ನಾಗೇಂದ್ರಸ್ವಾಮಿ - ಚಿತ್ರದುರ್ಗ ಜಿಲ್ಲೆಯಲ್ಲಿ ಅಮೃತಮಹಲ್ ತಳಿಸಂವರ್ಧನೆ- ಚಾರಿತ್ರಿಕ ಅಧ್ಯಯನ - ೨೦೦೩.

೫. ಡಿ. ರಾಮಕೃಷ್ಣ - ಎಚ್.ವಿ. ವೀರನಾಯಕ - ಹರಿತಿ ಮತ್ತು ಬದುಕು-ಬರಹ - ೨೦೦೫.

ಪಿ.ಎಚ್.ಡಿ. ಸಂಶೋಧಕರಿಗೆ ಮಾರ್ಗದರ್ಶನ

೬. ವಿರೂಪಾಕ್ಷಿ ಪೂಜಾರಹಳ್ಳಿ - ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ನಿರೂಪಿತವಾದ ಬೇಟೆ ಮತ್ತು ಬೇಡರ ಸಂಬಂಧಗಳು - ಚಾರಿತ್ರಿಕ ಅಧ್ಯಯನ - ೨೦೦೦.

೭. ಕೆ.ಆರ್.ಜಿ. ರಾಜಕುಮಾರ್, ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿ ಮಾದಿಗರು - ಚಾರಿತ್ರಿಕ ಅಧ್ಯಯನ - ೨೦೦೩.

೮. ಎಂ.ಕೆ. ದುರುಗಪ್ಪ, ವಿಜಯನಗರೋತ್ತರ ಕಾಲೀನ ಬೇಡ ಸಮುದಾಯದಲ್ಲಾದ ಸ್ಥಿತ್ಯಂತರಗಳು- ಚಾರಿತ್ರಿಕ ಅಧ್ಯಯನ - ೨೦೦೫.

೯. ಅಮರೇಶ ಯತಗಲ್ - ಕರ್ನಾಟಕ ನಾಯಕ ಅರಸರ ಕೆಲವು ವಿಶಿಷ್ಟ ಸಾಂಸ್ಕೃತಿಕಾಚಾರಣೆ ಗಳು : ಚಾರಿತ್ರಿಕ ಅಧ್ಯಯನ - ೨೦೦೬.

೧೦. ವಿಜಯಕುಮಾರ್ ಎಚ್.ಎಂ. - ಕರ್ನಾಟಕದಲ್ಲಿ ಮರುಳಸಿದ್ಧರ ನೆಲೆಗಳು ಮತ್ತು ಸ್ಮಾರಕಗಳು: ಚಾರಿತ್ರಿಕ ಅಧ್ಯಯನ - ೨೦೦೬.

ತಾವು ಪಿಎಚ್.ಡಿ. ಪದವಿ ಪಡೆದಿಲ್ಲದ್ದಿರೂ, ಡಿ.ಲಿಟ್ ಪಡೆಯುವ ಆಸೆ ಇತ್ತು. ಎಲ್ಲವನ್ನು ಕೈಬಿಟ್ಟು ಸಂಶೋಧನೆ ಎಂಬ ಅಸ್ತ್ರವನ್ನೇ ನಂಬಿಕೊಂಡರು.

ಹೀಗೆ ಎಲ್ಲಾ ಸಂಶೋಧನಾ ಪರಿಕಲ್ಪನೆಗಳು ಚಾರಿತ್ರಿಕ ಮತ್ತು ಕೌತುಕ ಪರಿಕಲ್ಪನೆಗಳ ಮೂಲಕ ಬುದ್ಧಿಜೀವಿಗಳ - ಜನಸಾಮಾನ್ಯರ ಗಮನಸೆಳೆದ ಸಂಶೋಧನೆಗಳಾಗಿವೆ. ಒಂದು ಮತ್ತೊಂದಕ್ಕಿಂತ ವಿಶಿಷ್ಟ, ವಿಸ್ತೃತ, ಅರ್ಥಗರ್ಭಿತ ಚರ್ಚಿತ ವಿಷಯಗಳಾಗಿವೆ. ಹಾಗೆಯೆ ಬೇರೆ ವಿಭಾಗದ ವಿದ್ಯಾರ್ಥಿ, ಸಂಶೋಧಕರಿಗೂ ಹಲವು ರೀತಿಯ ಮಾರ್ಗದರ್ಶಕರಾಗಿ ಸಂಶೋಧನ ಕೃಷಿ ಮಾಡಿಸಿದ್ದಾರೆ. ಒಟ್ಟಾರೆ ೧೪ ವರ್ಷಗಳಲ್ಲಿ ರೀಡರ್‌ರಾಗಿ, ಮುಖ್ಯಸ್ಥರಾಗಿ, ಪ್ರಾಧ್ಯಾಪಕರಾಗಿ, ಡೀನ್‌ರಾಗಿ ಅಪೂರ್ವ ಸೇವೆ ಸಲ್ಲಿಸಿದ್ದು ಸ್ಮರಣೀಯ.

ಪ್ರವೃತ್ತಿ

ಫೋಟೋಗ್ರಫಿ ತಂತ್ರಜ್ಞ ಮತ್ತು ಸಂಗ್ರಹ

ವೃತ್ತಿಗಿಂತ ಪ್ರವೃತ್ತಿಯಲ್ಲಿಯೆ ಹೆಚ್ಚು ತೊಡಗಿಸಿಕೊಂಡಂತಹ ತೆಲಗಾವಿಯವರಿಗೆ ಫೋಟೋಗ್ರಫಿ ಎಂದರೆ ತುಂಬಾ ಇಷ್ಟ. ಇವರು ಸಂಶೋಧನೆಗೆ ಸಂಬಂಧಿಸಿದ ಎಷ್ಟೋ ವಿಷಯಗಳನ್ನು ಫೋಟೋಗ್ರಫಿಯಿಂದಲೇ ಮಾಹಿತಿ ಪಡೆದುಕೊಂಡು, ಸಂಶೋಧನೆಯ ಹಲವು ಮುಖಗಳನ್ನು ಬೆಳಕಿಗೆ ತಂದಿದ್ದಾರೆ. ಫೋಟೋಗ್ರಫಿ ತೆಗೆಯುವಂತ ಸಂದರ್ಭದಲ್ಲಿ ಮುಂದಾಲೋಚನೆ ಕಾರ್ಯದಕ್ಷತೆ ಮೇಲೆ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಕ್ಲಿಕ್ಕಿಸುತ್ತಾರೆ. ಮಾರುಕಟ್ಟೆಗೆ ಹೊಸ ತಂತ್ರಜ್ಞಾನದ ಕ್ಯಾಮರ ಬಂತೆಂದರೆ ಕೂಡಲೇ ಕೊಂಡುಗೊಂಡು ವಿವಿಧ ಭಂಗಿಯ ಮೂಲಕ ಫೋಟೋ ತೆಗೆದು ಸಂಭ್ರಮಿಸುತ್ತಾರೆ.

ಕೋಟೆಯಲ್ಲಿ ಹಲವು ರಿಪೇರಿ ಕೆಲಸ ನಡೆದಂತ ಕಾರಣಕ್ಕಾಗಿ ಕೆಲವು ಬದಲಾವಣೆ ಕಾಣುತ್ತೇವೆ. ಆದರೆ ನೈಜ ದುರ್ಗವನ್ನು ಅಂದರೆ ರಿಪೇರಿಗಿಂತ ಮುಂಚಿನ ಹಳೆ ದುರ್ಗ ಕಾಣಬೇಕೆಂದರೆ ತೆಲಗಾವಿಯವರು ತೆಗೆದ ಫೋಟೋಗಳನ್ನು ವೀಕ್ಷಿಸಲೇಬೇಕಾಗುವುದು. ಅಷ್ಟೊಂದು ರಾಶಿ ರಾಶಿಯ ಫೋಟೋಗಳು ಅವರ ಬಳಿಯಲ್ಲಿವೆ. ಫೋಟೋ ತೆಗೆಯುವುದರಲ್ಲಿ ಎಷ್ಟು ನಿಪುಣರೆಂದರೆ ವೃತ್ತಿಯಲ್ಲಿ ಛಾಯಾಗ್ರಹಕರಾದ ಚಿತ್ರದುರ್ಗದ ಪಾಂಡು ಸ್ಟುಡಿಯೋದ ಮಾಲೀಕರಾದ ಸಿ.ಟಿ. ಸುರೇಶ್, ಸಿ.ಟಿ. ಚಿದಾನಂದರವರು ಆಶ್ಚರ್ಯದಿಂದಲೇ ಫೋಟೋ ವೀಕ್ಷಿಸಿ, 'ನೀವು ಅಳವಡಿಸಿಕೊಂಡ ತಂತ್ರವೇನು? ನಮಗೂ ಸ್ವಲ್ಪ ತಿಳಿಸಿ ಎಂದರಂತೆ, ಅಂದ ಮೇಲೆ ಎಷ್ಟು ಸೌಂದರ್ಯ ಮತ್ತು ಗುಣಮಟ್ಟವನ್ನು ಒಳಗೊಂಡಿರಬೇಕು. ಫೋಟೋ ತೆಗೆದ ಮೇಲೆ ಗುಣಮಟ್ಟದ ಪ್ರಿಂಟ್ ಎಲ್ಲಿ ಹಾಕಲಾಗುವುದೆಂದು ಬಲ್ಲ ತಜ್ಞರನ್ನು ಕೇಳಿ ದುಬಾರಿಯಾದರೂ, ಯಾವುದೆ ಸ್ಥಳವಾದರೂ ಸರಿಯೆ ಅಲ್ಲಿಗೆ ಹೋಗಿ ಪ್ರಿಂಟ್ ಹಾಕಿಸಿಕೊಂಡು ಬರುತ್ತಾರೆ. ಫೋಟೋ ಪ್ರತಿ ಬಂದ ಕೂಡಲೆ ಅದರ ಹಿಂದೆ ತೆಗೆದ ದಿನಾಂಕ ವರ್ಷ, ಉದ್ದೇಶ, ಯಾವುದಕ್ಕೆ ಸಂಬಂಧಿಸಿದ್ದು ಎಂಬುದನ್ನು ಒಂದರ ಹಿಂದೆ ಒಂದು ಕ್ರಮವಾಗಿ ಜೋಡಿಸುತ್ತಾರೆ. ಫೋಟೋ ನೋಡಿಯೆ ಕೆಲವು ಸಲ ಇತಿಹಾಸ ಕಟ್ಟುವಷ್ಟು ಮಾಹಿತಿ ಲಭ್ಯವಿದೆ. ಪ್ರಸ್ತುತ ೧೦ ಸಾವಿರದಷ್ಟು ಫೋಟೋ ಪ್ರತಿಗಳಿವೆ.

ಹಳೆಯ ಕಾಲದ ಕ್ಯಾಮರಾದಿಂದ ಆರಂಭವಾಗಿ ಈಗಿನ ಡಿಜಿಟಲ್ ಹ್ಯಾಂಡಿಕ್ಯಾಮ್ ಸೇರಿದಂತೆ ೧೫ ಕ್ಯಾಮರಗಳಿವೆ. ಒಂದೊಂದು ಕ್ಯಾಮರವೂ ಒಂದೊಂದು ವಿಶಿಷ್ಟ. ಎಲ್ಲಾ ಕ್ಯಾಮರಗಳನ್ನು ಆದ್ಯತೆಯ ಮೇರೆಗೆ ಬಳಸಿಕೊಳ್ಳುತ್ತಾರೆ. ಆ ಒಂದು ಕಾಲದಲ್ಲಿ ಒಂದು ದಿವಸಕ್ಕೆ ೨೦೦ ದಿಂದ ೩೦೦ ಫೋಟೋಗಳನ್ನು ತೆಗೆಯುತ್ತಾರೆಂದರೆ, ಎಷ್ಟೊಂದು ಪರಿಣಿತಿ ಪಡೆದಿರಬಹುದು. ಸಂಶೋಧನೆಗೆ ನೆರವಾಗಲು ಅಲ್ಪ-ಸ್ವಲ್ಪ ಕಾಣುವ ಗೆರೆಗಳಿವೆ ಎಂದರೆ ಸೀಮೆಸುಣ್ಣ ಬಳಿದು ಎಸ್ಟಾಂಪೇಜ್ ಪದ್ಧತಿಯಲ್ಲಿ ಫೋಟೋ ತೆಗೆದು ಸೀಮೆಸುಣ್ಣ ಅಳಿಸುತ್ತಾರೆ. ಕೆಲವು ಸ್ಮಾರಕ, ಗುಡ್ಡ, ಶಾಸನ, ನಾಣ್ಯ ಇತ್ಯಾದಿಗಳನ್ನು ತೊಳೆದು ವಿವಿಧ ಭಂಗಿಯಗಳ

ಮೂಲಕ ತೆಗೆಯುತ್ತಾರೆ. ಸಂಶೋಧನಾ ಪ್ರವೃತ್ತಿಯನ್ನು ರೈಲು, ಬಸ್, ಸ್ಕೂಟರ್ ಹೀಗೆ ಯಾವುದೆ ತರದ ಪ್ರಯಾಣ ಬೆಳೆಸಲಿ, ಪ್ರಯಾಣದಲ್ಲಿಯೂ ಹಲವು ಫೋಟೋಗಳನ್ನು ಮನಸೂರೆಗೊಳ್ಳುವಂತಹ ಫೋಟೋ ತೆಗೆದಿದ್ದಾರೆ. ಹಾಗೆಯೇ ಆಶ್ಚರ್ಯವೆಂಬಂತೆ ನುರಿತ ಛಾಯಾಗ್ರಾಹಕನಿಗೆ ರೂಪದರ್ಶಿಯೊಬ್ಬಳು ಭಿನ್ನ-ಭಿನ್ನ ರೀತಿಯಲ್ಲಿ ಫೋಸ್ ಕೊಡುವಂತೆ ಇಡೀ ದುರ್ಗ ಭಿನ್ನವಾಗಿಯೆ ಫೋಸ್ ಕೊಟ್ಟಿದೆ. ತಮ್ಮ ಸಹೋದರರ ಮಕ್ಕಳಿಗೂ ಕ್ಯಾಮರಾ ನೀಡಿ ಫೋಟೋ ತೆಗೆಯಲು ಪ್ರೋತ್ಸಾಹಿಸುತ್ತಾರೆ. ಅವರೊಂದಿಗೆ ರಂಜಿಸುತ್ತಲೆ ಫೋಟೋ ತೆಗೆಯುವುದನ್ನು ಹೇಳಿಕೊಡುತ್ತಾರೆ.

ಉದ್ದೇಶ : ಆಯ್ದ ಫೋಟೋಗಳನ್ನು ವಿಸ್ತರಿಸಿ ಐತಿಹಾಸಿಕ ಕಾಲಘಟಕ್ಕೆ ಸಂಬಂಧಿಸಿದಂತೆ ವರ್ಗೀಕರಿಸಿ, ಸಂಶೋಧಕರಿಗೆ ಚರಿತ್ರೆ ಆಸಕ್ತರಿಗೆ ಬುದ್ಧಿಜೀವಿಗಳಿಗೆ ಜನಸಾಮಾನ್ಯರಿಗೆ ನೆರವಾಗಲು ಶಾಶ್ವತ ಸಾರ್ವಜನಿಕ ಫೋಟೋ ಪ್ರದರ್ಶನಾಲಯ ಸ್ಥಾಪಿಸಬೇಕೆಂಬ ಕಾಳಜಿಯಿದೆ. ಅವರೆ ಹೇಳುವಂತೆ" ನನ್ನಂತೆಯೆ ಮುಂದಿನ ಪೀಳಿಗೆಯು ಇತಿಹಾಸದಲ್ಲಿ ಆಸಕ್ತಿಯಿದ್ದವರು. ಹಲವು ವಿವಿಧ ಫೋಟೋ ತೆಗೆದು ದಾಖಲೀಕರಣಗೊಳಿಸಿ, ಮಾರ್ಗದರ್ಶನ ಮಾಡಿ, "ಇತಿಹಾಸ ಕಟ್ಟುವ ಕೆಲಸಕ್ಕೆ ಮುಂದಾಗಬೇಕು". ಆ ಮೂಲಕ ಸಮಾಜಕ್ಕೆ ಒಬ್ಬ ಇತಿಹಾಸಕಾರನಾಗಿ ತಮ್ಮದೇ ಕೊಡುಗೆ ನೀಡಬೇಕೆನ್ನುತ್ತಾರೆ. ಇವರ ಛಾಯಾಚಿತ್ರಗಳಲ್ಲಿ ಭೂದೃಶ್ಯಗಳಿರುವವೇ (Land Scape) ಹೆಚ್ಚು ಸಂಶೋಧನೆಗೆ ಉಪಯುಕ್ತ.

ಹೋರಾಟ

ಮೈಸೂರು ವಿಶ್ವವಿದ್ಯಾಲಯದಲ್ಲಿ ಚರಿತ್ರೆ ವಿಭಾಗಕ್ಕೆ ಅನ್ವಯಗೊಂಡಂತೆ ಪಿಎಚ್.ಡಿ. ಸಂಶೋಧನಾ ವ್ಯಾಸಂಗದಲ್ಲಿ ಅಧ್ಯಯನಿಸುವಂತ ಕಾಲದಲ್ಲಿ ದೇಶಾದ್ಯಂತ ತುರ್ತುಪರಿಸ್ಥಿತಿ ಇತ್ತು. ನಂತರ **ಜೆ.ಪಿ.ಯವರ** ವಿಚಾರಧಾರೆಗೆ ಸಂಬಂಧಿಸಿದಂತೆ ಹೊಸ ಕಂಪನದ ಅಲೆಯೆದ್ದಿತ್ತು. ಪ್ರಗತಿಪರ ವಿಚಾರಧಾರೆಗಳಿಗೆ ಸಂಬಂಧಿಸಿದಂತೆ ಚರ್ಚೆ, ಸಂವಾದ ಚಳುವಳಿ, ಹೋರಾಟಗಳು ಏಕಕಾಲದಲ್ಲಿಯೆ ಬಿಡುವಿಲ್ಲದಂತೆ ನಡೆದಿದ್ದವು. ಇದರ ಬಿಸಿಯ ಪ್ರಭಾವ ತೆಲಗಾವಿಯವರ ಮೇಲೂ ಬೀರಿತ್ತು. ಪರಿಣಾಮ ಚಿತ್ರದುರ್ಗ, ಬೆಂಗಳೂರು ಇತ್ಯಾದಿ ಕಡೆಗಳಲ್ಲಿ ಬಹಳ ಹುಮ್ಮಸ್ಸಿನಿಂದಲೇ ಚರ್ಚಿಸುವ, ಸಂವಾದಿಸುವ, ಸೈದ್ಧಾಂತಿಕ ನೆಲೆಗಟ್ಟಿನ ಮೂಲಕ ವಿಚಾರ ಮಂಡಿಸುವುದರೊಂದಿಗೆ, ಹಲವಾರು ಜಾಥಾ, ಚಳುವಳಿ ಮತ್ತು ಹೋರಾಟಗಳಲ್ಲಿ ಭಾಗಿಯಾಗಿ ಬೀದಿ ಬೀದಿಯಲ್ಲಿ ಭಾಷಣ, ಗೋಡೆ ಬರಹ, ಭಿತ್ತಿಪತ್ರ ಹಂಚುವಿಕೆ, ಅಂಟಿಸುವಿಕೆ ಹಾಗೂ ಹೋರಾಟ ಕೂಗಾಟಗಳನ್ನು ಮಾಡಿದ್ದವರು. ಮತ್ತೊಂದು ಕಡೆ ಅಧ್ಯಯನಕ್ಕೆ ತೊಂದರೆಯಾಗದಂತೆಯೆ ಮುಂದುವರಿಸಿಕೊಂಡು ಹೋಗಿದ್ದರು. ದಲಿತರನ್ನು ಹಿಂದುಳಿದವರನ್ನು ಜೊತೆಗೂಡಿಸಿಯೂ ಹೋರಾಟ ಕೈಕೊಂಡರು.

ಜೆ.ಪಿ. ಚಳವಳಿಯಿಂದ ನಿರ್ಗಮಿಸುವುದಕ್ಕೂ ಅದೇ ಕಾಲಕ್ಕೆ **ಗೋಕಾಕ್ ಚಳವಳಿ** ನಾಡು-ನುಡಿ-ಕಟ್ಟುವ ಹೆಸರಿನೊಂದಿಗೆ, ಕರ್ನಾಟಕದಾದ್ಯಂತ ಮಿಂಚಿನಂತೆ ಸಂಚರಿಸಿತು. ಇದನ್ನು

ಕೂಡ ತಮ್ಮದೇ ಆದ ಧೋರಣೆ ಮೂಲಕ ಪಾಲ್ಗೊಂಡರು. ಇಂತಹ ಚಳುವಳಿಗಳು ಬರುಬರುತ್ತಾ ಬೇರೊಂದು ಸ್ವರೂಪ ಪಡೆದುಕೊಂಡವು. ಕೆಲವು ಬುದ್ಧಿಜೀವಿಗಳು, ಫ್ಯೂಡಲ್ ನೇತಾರರು ಎನಿಸಿಕೊಂಡವರು. ಚಳವಳಿಯನ್ನು ಬೇರೊಂದು ದಿಕ್ಕಿನತ್ತ, ಸ್ವಾರ್ಥಕ್ಕಾಗಿ, ರಾಜಕೀಯಕ್ಕಾಗಿ ನಿಧಾನವಾಗಿ ಜಾರಿಸುತ್ತಿರುವುದನ್ನು ಗಮನಿಸಿದ ತೆಲಗಾವಿಯವರು ನಿಧಾನವಾಗಿ ಅದರಿಂದ ಹೊರಬಂದರು. ಮೇಲಿನವರಂತೆ ಉದ್ದೇಶ ಹೊಂದಿದ್ದರೆ ಇವತ್ತು ಒಬ್ಬ ರಾಜಕಾರಣಿಯಾಗಿ, ಮಂತ್ರಿಯಾಗಿ, ಸಂಪತ್ತಿನ ಒಡೆಯನಾಗಿರುತ್ತಿದ್ದರು ಆದರೆ ಅಂತಹ ಕಾರ್ಯಕ್ಕೆ ತಮ್ಮನ್ನು ತೊಡಗಿಸಿಕೊಳ್ಳದೆ ಸಾಮಾಜಿಕ ನ್ಯಾಯಕ್ಕಾಗಿ ಸಂಶೋಧನ ಕ್ಷೇತ್ರಕ್ಕಾಗಿ ತಮ್ಮನ್ನು ತಾವು ಅರ್ಪಿಸಿಕೊಂಡರು, ಬಂದ ಎಷ್ಟೋ ಅವಕಾಶಗಳನ್ನು ದೂರ ಸರಿಸಿದರು.

ಕಲೆ, ಸಾಹಿತ್ಯ ಮತ್ತು ಸಂಗೀತ ಕ್ಷೇತ್ರ

ಸುಂದರ ನಿಶ್ಯಬ್ದದ ರಾತ್ರಿಯ ವಾತಾವರಣದಲ್ಲಿ ಏಕಾಂಗಿಯಾಗಿ ರೇಡಿಯೋವನ್ನು ದಿನಾಲು ಆಲಿಸುತ್ತಾರೆ. ಕೆಲವು ಸಲ ರಾತ್ರಿ ಪೂರ ರೇಡಿಯೋ ಆಲಿಸುತ್ತಾರೆ. ರೇಡಿಯೋದಲ್ಲಿ ಪ್ರಸಾರವಾಗುವ ಸಿಲೋನ್ ಮತ್ತು ವಿವಿಧ ಭಾರತೀಯ ಕಾರ್ಯಕ್ರಮಗಳು, ಹಳೆಯ ಕನ್ನಡ, ಹಿಂದಿ, ತೆಲುಗು, ತಮಿಳು ಚಿತ್ರಗೀತೆಗಳನ್ನು ಆಲಿಸಿ, ಆಸ್ವಾದಿಸಿ, ಆನಂದಿಸುತ್ತಾರೆ. ಆಲಿಸುವಾಗ ಚಿತ್ರಗೀತೆಯಲ್ಲಿ ಬರುವ ಸಾಹಿತ್ಯ, ಪದಪುಂಜಗಳನ್ನೇ ಸಂಶೋಧನೆಗೆ ಅಳವಡಿಸಿಕೊಂಡಿರುವುದುಂಟು. ಅಡ್ವೆಂಚರ್ ಸಿನಿಮಾ, ಆ್ಯಕ್ಷನ್ ಕಾಮಿಡಿ ಸಿನಿಮಾಗಳನ್ನು ವೀಕ್ಷಿಸಿದ ತರುವಾಯ "ಹೌದಲ್ಲ ನಾವು ಏಕೆ ಈ ತರಹದ ಅಡ್ವೆಂಚರ್ ಸಂಶೋಧನೆ ಮಾಡಬಾರದೆಂದು ಕೊಂಡು" ಕೆಲವು ಅಧ್ಯಯನದ ಸಂದರ್ಭದಲ್ಲಿ ಹಾಗೂ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಪ್ರಯೋಗ ಮಾಡಿದ್ದಿದೆ. ಮುಖೇಸ್‌ರವರ ಗೀತೆಗಳೆಂದರೆ ಎಲ್ಲಿಲ್ಲದ ಸಂಭ್ರಮ, ರಾಜಕುಮಾರ್ ಪ್ರಿಯ ನಟರಾದರೆ, ಎಸ್.ಬಿ. ನಯ್ಯಾರ್, ಮದನ್‌ಮೋಹನ್‌ರವರು ಪ್ರಿಯವಾದ ಸಂಗೀತ ನಿರ್ದೇಶಕರು, ಕೆಲವು ಸಲ ಸಂತೋಷ ಭರಿತವಾಗಿ ತಾವೇ ಹಾಡುತ್ತಾರೆ.

ಶಾಲಾ-ಕಾಲೇಜು ದಿನಗಳಲ್ಲಿ ವೇಷಭೂಷಣ ಸ್ಪರ್ಧೆಯಲ್ಲಿ ಭಾಗವಹಿಸಿ, ಬಹುಮಾನ ಪಡೆದಿದ್ದಾರೆ. ಪ್ರೌಢಶಾಲೆಯ ಅಧ್ಯಯನದ ಸಂದರ್ಭದಲ್ಲಿ "ನನ್ನ ಹುಬ್ಬಳ್ಳಿ ಮಾವ", ಬತೇರಿ-ಳ, ರಾಜಗಂಡಭೇರುಂಡದಂತಹ ಕಥೆ ರೂಪಕಗಳನ್ನು ರಚಿಸಿ, ಶಿಕ್ಷಕಕರನ್ನು ಸಹಪಾಠಿಗಳನ್ನು ಪ್ರೇಕ್ಷಕರನ್ನು ರಂಜಿಸಿದ್ದಾರೆ. ಪಿಯುಸಿಯ ವಾರ್ಷಿಕ ಸಂಚಿಕೆಗೆ "ಗಾದೆಗಳ ಗದ್ದಲ" ರಚಿಸಿದವರು, ಪದವಿ ಹಂತದಲ್ಲಿ "ಖೋಟಾ ನೋಟು", "ಇಂಟರ್ ಈಡಿಯಟ್" ನಾಟಕದಲ್ಲಿ ಮನೋಜ್ಞ ಅಭಿನಯ ನೀಡಿ ಬಹುಮಾನ ಪಡೆದುಕೊಂಡಿದ್ದಾರೆ. ಬಾಸ್ಕೆಟ್‌ಬಾಲ್, ಚೆಸ್, ಖೋಖೋ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಗಣನೀಯ ಕೃಷಿ ಮಾಡಿ ಯಶಸ್ಸು ಕಂಡಿದ್ದಾರೆ.

ಖ್ಯಾತ ನಿರ್ದೇಶಕ ಅಸ್ವರ್ ತಾವರೆಕೆರೆಯವರ "ಚಿತ್ರದುರ್ಗ", ಹಿರಿಯೂರು ರಾಘವೇಂದ್ರ ಅವರ "ಐತಿಹಾಸಿಕ ಚಿತ್ರದುರ್ಗ", ಚಿತ್ರಗಳಿಗೆ ಮಾರ್ಗದರ್ಶನ ಮಾಡಿದ್ದಾರೆ. ಸುನಿಲ್ ಪುರಾಣಿಕ್ ನೇತೃತ್ವದ **"ಚಿತ್ರದುರ್ಗ ಮತ್ತು ಓಬವ್ವ"** ಕುರಿತು ಶೈಕ್ಷಣಿಕ ಸಾಕ್ಷ್ಯ ಚಿತ್ರಕ್ಕೆ ಸಾಹಿತ್ಯ ಮತ್ತು

ಮಾರ್ಗದರ್ಶನ ಕಾರ್ಯ ಮಾಡಿದವರು. ಸುನೀಲ್ ಪುರಾಣಿಕರ ಮತ್ತೊಂದು ಪ್ರಾಜೆಕ್ಟ್ **"ಚಿರಸ್ಮರಣೆ"** ಧಾರಾವಾಹಿಗೆ ಮಾರ್ಗದರ್ಶನ ಮಾಡಿದ್ದಾರೆ. ಕೆಲವು ಸಲ ಕೆಲವು ಪಾತ್ರಧಾರಿಗಳು ದೊರೆಯದಿದ್ದಾಗ ಹಲವು ಪಾತ್ರಗಳನ್ನು ತಾವೇ ನಿರ್ವಹಿಸಿದ್ದಾರೆ. ಅನ್ವರ್ ತಾವರೆಕೆರೆಯವರ **"ಕುತೂಹಲ"** ಚಿತ್ರಕ್ಕೆ ಮನೋಜ್ಞ ಸಂಭಾಷಣೆ ಬರೆದಿದ್ದಾರೆ. ಬೆಂಗಳೂರಿನಲ್ಲಿದ್ದಾಗ ಸಿನಿಮಾರಂಗದ ನಂಟನ್ನು ಹೊಂದಿ ಪ್ರಿಮಿಯರ್ ಸ್ಟುಡಿಯೋದಲ್ಲಿ ಕೆಲವು ಚಿತ್ರಗಳಿಗೆ ಮಾರ್ಗದರ್ಶನ, ಕೆಲವು ಚಿತ್ರಗಳಿಗೆ ಸಂಕಲನಕಾರನಾಗಿ ಹಲವು ಚಿತ್ರಗಳ ಶೂಟಿಂಗ್‌ನಲ್ಲಿಯೂ ಭಾಗಿಯಾಗಿದ್ದಾರೆ.

ಸಿನಿಮಾರಂಗದ ನಿರ್ದೇಶಕ ದಿಗ್ಗಜ ಪುಟ್ಟಣ್ಣ ಕಣಗಲ್‌ರವರ ಜೊತೆ ನಿರ್ದೇಶಕನಾಗಿ ಕರ್ನಾಟಕಕ್ಕೆ ನಾಗರಹಾವಿಗಿಂತಲೂ ಅತ್ಯುತ್ತಮ ಕಥೆಯ ಸಿನಿಮಾನಗಳನ್ನು ನೀಡಬೇಕೆನ್ನುವ ಆಶಯ ಈಡೇರಲಿಲ್ಲ. ಆ ಮೂಲಕ ಪ್ರಯತ್ನಪಟ್ಟಿದ್ದಾರೆ. ಆದರೆ ಬೋಧಿಸುವ ಅವಕಾಶ ಬಂದಿದ್ದರಿಂದ ಅಷ್ಟಕ್ಕೇ ಸಿನಿಮಾ ಪ್ರಾಜೆಕ್ಟ್ ನಿಂತಿತು.

ಬಾಲ್ಯದಿಂದಲೆ ಚಿತ್ರಕಲೆಯಲ್ಲಿಯೂ ವಿಶೇಷ ಪ್ರತಿಭೆ ಹೊಂದಿದ್ದ ತೆಲಗಾವಿಯವರು ಆಶ್ಚರ್ಯವೆಂಬಂತೆ ಡ್ರಾಯಿಂಗ್ ಸೀಟ್ಸ್, ಗೋಡೆ, ಪುಸ್ತಕ, ಬೋರ್ಡ್ ಇತ್ಯಾದಿಗಳಲ್ಲಿ ಬೆಟ್ಟ-ಗುಡ್ಡ, ಕೋಟೆ, ಆನೆ, ಕುದುರೆ, ಸರ, ಕಿರೀಟಗಳನ್ನು ಬಿಡಿಸುತ್ತಿದ್ದರು. ಚಿತ್ರಕಲೆಗೆ ಮನಸೋತ ಶಿಕ್ಷಕರು ಭೂಗೋಳ ಚಿತ್ರಗಳನ್ನು ತೆಲಗಾವಿಯಿಂದಲೆ ಬಿಡಿಸಿ ಪಾಠ ಹೇಳಿಸುತ್ತಿದ್ದರು.

ಹೊಂದಾಣಿಕೆ ಮನೋಭಾವ

ಸಾಮಾನ್ಯವಾಗಿ ಪರಿಸರದೊಂದಿಗೆ ಮಾನವನ ಹೊಂದಾಣಿಕೆ ಸಹಜವಾದ ಪ್ರಕ್ರಿಯೆ. ಆದರೆ ತೆಲಗಾವಿಯವರು ತನ್ನ ಕ್ಷೇತ್ರಕ್ಕೆ ಬೇಕಾದಂತೆ ಇಡೀ ಪರಿಸರವನ್ನೇ ಪರಿವರ್ತಿಸಿ ಸಂಶೋಧನೆಗೆ ಅನುಕೂಲವಾಗುವಂತೆ ವಾತಾವರಣ ನಿರ್ಮಿಸಿಕೊಂಡು, ಹೊಂದಾಣಿಕೆ ಮಾಡಿಕೊಳ್ಳುತ್ತಾರೆ. ಹಲವು ಹೊಟೇಲ್‌ನವರು, ಬೀದಿ ಬದಿಯ ತಿಂಡಿ ತಯಾರಕರು ನೀಡಿದಂತ ಆಹಾರ ತಿಂಡಿ ಸೇವಿಸೆಯೆ ಜೀವನದ ಅರ್ಧದಷ್ಟು ಆಯುಷ್ಯವನ್ನು ಇವರುಗಳ ಆತಿಥ್ಯದಲ್ಲಿ ಕಳೆದಿದ್ದಾರೆ. ಆ ಹೋಟೆಲ್‌ನವರಿಗೆ ತೆಲಗಾವಿಯವರು ಬಂದ ಕೂಡಲೇ "ಏನೋ ಸಂಭ್ರಮ ಹೊಸಚೈತನ್ಯ ಹುರುಪು ಬರುವುದು. ಇವರಿಗಾಗಿಯೆ ವಿಶೇಷ ಆತಿಥ್ಯ", ಇವರ ಮೇಲಿನ ಅಭಿಮಾನದಿಂದ ೨೦೦೬ ಡಿಸೆಂಬರ್‌ನಲ್ಲಿ ಹೊಟೇಲ್ ಮತ್ತು ಉಪಹಾರ ಮಂದಿರ ಸಂಘ ಚಿತ್ರದುರ್ಗ ಇವರ ಸಂಯುಕ್ತ ಆಶ್ರಯದಲ್ಲಿ ಅದ್ದೂರಿಯಾಗಿ ತೆಲಗಾವಿಯವರನ್ನು ಸನ್ಮಾನಿಸಿ, ಬಿರುದಿನೊಂದಿಗೆ ಸಂಭ್ರಮಿಸಿದ್ದಾರೆ. ಕಾರಣ ಮಾಲೀಕನಿಂದ ಹಿಡಿದು ಗಿರಾಕಿ, ಕೆಲಸಗಾರ ಎಲ್ಲರೊಂದಿಗೆ ಪ್ರೀತಿಯಿಂದ ಮಾತನಾಡುವ, ಯೋಗಕ್ಷೇಮ ವಿಚಾರಿಸುವ ಸಲಹೆ-ಸೂಚನೆ ನೀಡುವ ಸಣ್ಣ-ಪುಟ್ಟ ಸಹಾಯ ಮಾಡುವುದರೊಡನೆ ಅವರೊಂದಿಗೆ ಬೆರೆತು ಆನಂದಿಸುತ್ತಾರೆ. ಇವರೊಂದಿಗಿನ ಒಡನಾಟ ನೋಡಿದ ಹಲವು ಬುದ್ಧಿ ಜೀವಿಗಳು. "ಒಬ್ಬ ಮೇರು ಸಂಶೋಧಕ ಉನ್ನತ ಹುದ್ದೆ ನಿಭಾಯಿಸುತ್ತಾನಾದರೂ ಸಾಮಾನ್ಯರೊಂದಿಗೆ ಹೇಗೆ ಸಲುಗೆಯಿಂದ ವರ್ತಿಸುತ್ತರಲ್ಲ ವೆಂದು ಆಶ್ಚರ್ಯಪಟ್ಟಿದ್ದಾರೆ. ತೆಲಗಾವಿಯವರು ಇಂತವರನ್ನು ಕುರಿತು ಹೀಗೆ ಅನ್ನುತ್ತಾರೆ.

"ಇವರೆ ನನ್ನ ಅನ್ನದಾತರೆಂದು ವಿನಮ್ರದಿಂದ ಧನ್ಯತಾ ಭಾವದಿಂದ ಕೈಮುಗಿದು ಕೃತಜ್ಞತೆ ಸಲ್ಲಿಸುತ್ತಾರೆ.

ಇತರೆ ವೃತ್ತಿಯವರಾದ ಕಟ್ಟಿಂಗ್‌ಶಾಪ್, ಆಟೋರಿಕ್ಷಾ ಡ್ರೈವರ್, ಟೈಲರ್, ನಾಯಿಂದ, ಕೂಲಿಕಾರ, ರೈತ ಇತ್ಯಾದಿಯವರೆಲ್ಲರಿಗೂ ಚಿರಪರಿಚಿತ ವಿಶ್ವಾಸಿಗಳು, ಜೈಲಲ್ಲಿರುವ ಕೈದಿಗಳನ್ನು ಮನಃಪರಿವರ್ತನೆ ಮಾಡಿ ನ್ಯಾಯಯುತವಾಗಿ ಬಾಳುವಂತೆ ಮಾಡಿದ ಸುಧಾರಕರೆನಿಸಿದ್ದಾರೆ. ಹೀಗೆ ಜಾತಿಬೇಧವಿಲ್ಲದ ಹಲವು ಜನರು ತೆಲಗಾವಿ ಮಾತು ಕೇಳಲೆಂದೇ ಬರುತ್ತಾರೆ. ಅವರೊಂದಿಗೆ ಅಷ್ಟೇ ಪ್ರೀತಿ ವಿಶ್ವಾಸದಿಂದ ವರ್ತಿಸುತ್ತಾರೆ.

ಗ್ರಂಥ ಸಂಗ್ರಹ

ಶಾಲಾ-ಕಾಲೇಜು ದಿನಗಳಿಂದಲೂ ಹೆಚ್ಚಿನ ಸಮಯವನ್ನು ಗ್ರಂಥಾಲಯದಲ್ಲಿಯೆ ಅಧ್ಯಯನ ಮಾಡುತ್ತಾ ಕಳೆದಿದ್ದಾರೆ. ಗ್ರಂಥಾಲಯದಲ್ಲಿರುವ ಪುಸ್ತಕಗಳು ಒಂದಲ್ಲ ಒಂದು ಕಾರಣಕ್ಕಾಗಿ. ಒಂದಲ್ಲ ಒಂದು ವಿಷಯಕ್ಕಾಗಿ, ಇವರ ಕೈ ಸ್ಪರ್ಶ ಮಾಡಿರಬೇಕು. ೧೯೪೭ರಲ್ಲಿ ಚಿತ್ರದುರ್ಗಕ್ಕೆ ಸಂಬಂಧಿಸಿದಂತೆ ಕ್ಷಾಮಾನಿವಾರಣ ಸಮಿತಿಯವರು ೮೦ ಪುಟದ ಪುಸ್ತಕ ಮಾಹಿತಿ ಬಿಡುಗಡೆ ಮಾಡಿದ್ದರು. ಅದನ್ನು ಕೆಲವು ಸಂದರ್ಭದಲ್ಲಿ ಓದಿದ ತೆಲಗಾವಿ ಅದರ ಪ್ರಯೋಜನ ಪಡೆದು ಕೊಂಡಿದ್ದರು. ಹಲವು ವರ್ಷ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿ ಚಿತ್ರದುರ್ಗಕ್ಕೆ ಬಂದಾಗ ಇವರಿಂದ ಕೆಲವು ಮಾಹಿತಿ ಅನಿವಾರ್ಯವಾಗಿತ್ತು. ಅಂತಹ ಸಂದರ್ಭದಲ್ಲಿ ಗ್ರಂಥಾಲಯಕ್ಕೆ ಬಂದಾಗ ಗ್ರಂಥಾಲಯ ಸೇರಿದಂತೆ ಹಲವು ಪುಸ್ತಕಗಳು ಹೊಸ ರೂಪ ಪಡೆದುಕೊಂಡಿದ್ದವು. ಇವರ ಸ್ನೇಹಿತರು ಆ ಪುಸ್ತಕ ಭವಿಷ್ಯ ಹಾಳಾಗಿದೆ, ಸಿಗಲಾರದೆಂದು ಅನಿಸಿಕೆ ವ್ಯಕ್ತಪಡಿಸಿದಾಗ ಕೆಲವೇ ಸಮಯದಲ್ಲಿ ಆಧ್ಯಾತ್ಮಿಕ ಶಕ್ತಿಯ ಪವಾಡದ ಅನುಗ್ರಹವೆಂಬಂತೆ ಆ ಕೃತಿ ತೆಲಗಾವಿ ಕೈ ಸೇರಿತ್ತೆಂದರೆ, ಗ್ರಂಥಾಲಯದೊಂದಿಗೆ ಎಷ್ಟೊಂದು ಒಡನಾಡಿಯಾಗಿಬಹುದೆಂಬುದಕ್ಕೆ ಸಣ್ಣ ನಿದರ್ಶನ. ಇವರು ಸಂಗ್ರಹಿಸಿದ ಪುಸ್ತಕ ರಾಶಿ ನೋಡಿದ ಒಬ್ಬ ಮಹಾಶಯ "ನೀವು ಪುಸ್ತಕ ವ್ಯಾಪಾರಿಯೇ" ಎಂದು ಕೇಳಿದ್ದರೆಂದರೆ; ಎಷ್ಟೊಂದು ಗ್ರಂಥಗಳನ್ನು ಅಧ್ಯಯನ ಮಾಡಿರಲಿಕ್ಕಿಲ್ಲ. ಎಷ್ಟೊಂದು ಪುಸ್ತಕಗಳನ್ನು ಸಂಗ್ರಹ ಮಾಡಿರಲಿಕ್ಕಿಲ್ಲ. ಎಷ್ಟೊಂದು ಪುಸ್ತಕಗಳನ್ನು ಸಂಗ್ರಹ ಮಾಡಿ ಬೇರೆಯವರಿಗೆ ಕೊಟ್ಟಿಲ್ಲ.

ಕೆಲವೇ ವರ್ಷಗಳ ಹಿಂದೆ ತಾವು ಸೇವೆ ಸಲ್ಲಿಸಿದ ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ೫ ಸಾವಿರ ಗ್ರಂಥಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಸಂಗ್ರಹದ ಹವ್ಯಾಸಕ್ಕೆ ಒಂದು ನಿರ್ದಶನವೆಂದರೆ ಬಾಲ್ಯದಲ್ಲಿಯೂ ಪುಸ್ತಕದಿಂದ, ರೇಖಾಚಿತ್ರಗಳು, ಪೇಪರ್ ಕಟಿಂಗ್ಸ್, ವಿವಿಧ ಲೇಖಕರ ಲೇಖನಗಳು, ಪತ್ರಿಕೆ ಕರಪತ್ರ, ಸುದ್ದಿ ಪತ್ರಿಕೆ ಮುಂತಾದವುಗಳನ್ನು ಸಂಗ್ರಹಿಸಿ ರಕ್ಷಿಸಿಕೊಂಡಿದ್ದಾರೆ. ಈಗಲೂ ಸಾವಿರಾರು ಗ್ರಂಥಗಳು ಇವರ ಬಳಿಯಿದ್ದು, ಅವರೇ ಹೇಳುವಂತೆ "ಪುಸ್ತಕವೇ ನನ್ನ ಆಸ್ತಿ. ಈ ಆಸ್ತಿ ನನ್ನ ಮನೆತನದ ಆಸ್ತಿ. ಈ ಆಸ್ತಿಯನ್ನು ನನ್ನ ಸಂತತಿಯ ಮುಂದಿನ ಪೀಳಿಗೆ ಇದರ ಪ್ರಯೋಜನ ಪಡೆದು, ಸಂಶೋಧಕರಾಗಿ ಸೇವೆ ಸಲ್ಲಿಸಬೇಕು. ಈ

ತರದ ಪ್ರವೃತ್ತಿಯನ್ನು ನನ್ನ ಅವಸಾನದ ನಂತರವೂ ನಡೆಯಬೇಕು ಹಾಗೂ ಈ ಗ್ರಂಥಗಳ ಪ್ರಯೋಜನವನ್ನು ಆಸಕ್ತ ಅಧ್ಯಯನಕಾರರು ಸದುಪಯೋಗಪಡಿಸಿಕೊಳ್ಳಬೇಕೆಂದು" ಹೇಳುವರು. ಗ್ರಂಥರಾಶಿಯ ಜೊತೆ ಶಾಸನ, ಸ್ಮಾರಕ, ಕಾಗದ ಪತ್ರ, ನಾಣ್ಯ, ಬಖೈರು ಹಲವು ಐತಿಹಾಸಿಕ ಕುರುಹುಗಳು ಇವರ ಬಳಿಯಿವೆ. ಕೆಲವು ಐತಿಹಾಸಿಕ ಕುರುಹುಗಳನ್ನು ಚಿತ್ರದುರ್ಗದ ಬೃಹನ್ಮಠ ಮುರುಘರಾಜೇಂದ್ರ ವಸ್ತುಸಂಗ್ರಹಾಲಯಕ್ಕೆ ಚಿತ್ರದುರ್ಗ ಸಂಶೋಧನಾ ತಂಡದ ಹೆಸರಲ್ಲಿ ಪ್ರದರ್ಶನಕ್ಕೆ ಕೊಡುಗೆ ನೀಡಿದ್ದಾರೆ. ಇದರ ಸಂಕ್ಷಿಪ್ತ ಮಾಹಿತಿಯನ್ನು ಮುಂದಿನ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

ಸಂಶೋಧನೆ

ಜನರ ಜೀವನ ಕ್ರಮವೇ ಚರಿತ್ರೆ ಕಟ್ಟಲು ಉತ್ತಮ ಆಕರ ಎಂದವರು ಲಕ್ಷ್ಮಣ್ ತೆಲಗಾವಿಯವರು. ಸಮಾಜ ಮತ್ತು ವಾಸಿಸುವ ಜನಸಮುದಾಯ ವೈವಿಧ್ಯತೆಯಿಂದ ಕೂಡಿದೆ. ಆದ್ದರಿಂದ ಆಸಕ್ತಿ. ಅಭಿರುಚಿ, ನೋಟ ಇತ್ಯಾದಿಗಳಲ್ಲಿ ಒಬ್ಬರು ಮತ್ತೊಬ್ಬರಿಗಿಂತ ಭಿನ್ನವಾಗಿಯೆ ಇರುತ್ತಾರೆ. ಈ ಭಿನ್ನತೆಯೆ ಸಮಾಜದ ವಿಕಾಸಕ್ಕೆ ನಾಂದಿ ಆಗುವುದು. ಅಂತೆಯೆ ಹಲವು ವ್ಯಕ್ತಿಗಳು ಬಾಲ್ಯದಿಂದ ಅಂತ್ಯದವರೆಗೂ ಇತರರಿಗಿಂತ ದೃಷ್ಟಿಕೋನ ಹೊಂದಿದವರಿದ್ದಾರೆ. ಅಂತಹ ವಿಶೇಷ ದೃಷ್ಟಿಕೋನದ ವ್ಯಕ್ತಿ ಎಂದರೆ ತೆಲಗಾವಿಯವರು. ಕಾರಣ ನೋಡುವ ಪ್ರತಿ ವಿಷಯ-ವಸ್ತುವನ್ನು ವೈಜ್ಞಾನಿಕವಾಗಿ ಅಧ್ಯಯಿನಿಸಿ ಅದರಿಂದ ಹೊಸತನ್ನು ಪಡೆಯುವ ಹಂಬಲ ರೂಢಿಸಿಕೊಂಡವರು. ಕೆಲವು ಸಲ ಕೆಲವು ದೃಷ್ಟಿಕೋನಗಳು, ಹವ್ಯಾಸವಾಗಿ, ಆ ಹವ್ಯಾಸ ಪ್ರವೃತ್ತಿಯಾಗಿ ರೂಪಾಂತರ ಪಡೆಯುತ್ತದೆ. ಕಾಲ ಉರುಳಿದಂತೆ ಪ್ರವೃತ್ತಿ ವೃತ್ತಿಯಲ್ಲಿ, ವೃತ್ತಿ ಪ್ರವೃತ್ತಿಯಲ್ಲಿ ಸಮರಸಗೊಂಡು ಲೀನವಾಗುತ್ತವೆ. ಅಕಾಡೆಮಿಕ್ ದೃಷ್ಟಿಯಿಂದ ವೃತ್ತಿಗೆ ಅಂತ್ಯವಿದೆ. ಆದರೆ ಪ್ರವೃತ್ತಿಗಿಲ್ಲ, ಪ್ರವೃತ್ತಿ ಎಂಬುದು ಆ ವ್ಯಕ್ತಿಗೆ ಸಾರ್ಥಕ ಬದುಕನ್ನು ನೀಡುವಂತದ್ದಾಗಿದೆ. ಇಂತಹ ಸಾರ್ಥಕ ಪ್ರವೃತ್ತಿಯ ಹರಿಕಾರನೆಂದರೆ ತೆಲಗಾವಿ, ತೆಲಗಾವಿಯವರ ಪ್ರವೃತ್ತಿ ಸಂಶೋಧನೆಯಾಗಿದೆ. ಸಂಶೋಧನೆ ಎಂಬುದು ಹಣಕ್ಕಾಗಿ, ಪ್ರತಿಷ್ಠೆಗಾಗಿ, ಮೋಜಿಗಾಗಿ, ಒತ್ತಾಯಕ್ಕಾಗಿ ಕೈಗೊಳ್ಳುವಂತದ್ದಲ್ಲ, ವೈಜ್ಞಾನಿಕ, ವಸ್ತುನಿಷ್ಠ, ಸಮಾಜನಿಷ್ಠ ಪ್ರಕ್ರಿಯೆಯಾದ್ದರಿಂದ ಸಾಮಾಜಿಕ ವ್ಯವಸ್ಥೆಯನ್ನು, ಸದಾಕಾಲವೂ ಚಲನಾಶೀಲವಾಗಿಸುವ ಸಾಮಾಜಿಕ ಸುವ್ಯವಸ್ಥೆಯ, ದಿಕ್ಸೂಚಿಯಾಗಿ ಪುನರ್ ಸ್ಥಾಪಿಸುವಂತಹ ಕಾರ್ಯವಾಗಿದ್ದು, ನಿರಂತರವಾಗಿ ಮುನ್ನಡೆಯಬೇಕಾಗಿದೆ ಎಂಬುದು ತೆಲಗಾವಿಯವರ ಅಭಿಮತ. ಆದ್ದರಿಂದ ಭಿನ್ನತೆ ಗುರುತಿಸಿಕೊಂಡೆ. ಸಂಶೋಧನೆಯನ್ನು ಒಂದು ಪ್ರವೃತ್ತಿಯಾಗಿ ಮಾಡಿಕೊಂಡವರು. ಹೆಚ್ಚು ಮಾತನಾಡದೆ ಮಾಡಿ ತೋರಿಸಿದವರು. ಏಕೆಂದರೆ "ಮಾತಿಗಿಂತ ಚಿಂತನೆಗಳು ಎತ್ತರದಲ್ಲಿರಬೇಕು. ಭೂಮಿ ಹಸಿರಾಗುವುದು, ಮೌನವಾಗಿರುವ ಮಳೆಯಿಂದ ಬದಲಾಗಿ ಗುಡುಗು ಸಿಡಿಲಿನಿಂದಲ್ಲ". ಎಂದರಿತರಿವರು ಸಂಶೋಧನೆಗಳು ಪರಿವರ್ತನೆ ತರಬಲ್ಲವು ಎಂಬ ಕಾರಣದಿಂದಾಗಿ ಸಂಶೋಧನೆಯೆ ಆರಾಧ್ಯ ದೈವವೆಂಬಂತೆ ಗೌರವಿಸುತ್ತಾರೆ. ತೆಲಗಾವಿಯವರ ಸಂಶೋಧನಾ ಶೈಲಿಯನ್ನು ಮುಂದಿನ ಅಧ್ಯಾಯದಲ್ಲಿ ದೀರ್ಘವಾಗಿ

ವಿಶ್ಲೇಷಿಸಲಾಗಿದೆ. ಶೋಧನೆ, ಸಂಶೋಧನೆ, ಮರುಶೋಧನೆ, ಮರುವ್ಯಾಖ್ಯಾನ, ಮರುಓದು, ಹೊಸ ವಿಶ್ಲೇಷಣೆ ಹೀಗೆ ಚರಿತ್ರೆ ರಚನೆಗೆ ಹೊಸ ಆಯಾಮ ನೀಡಿದವರು ಲಕ್ಷ್ಮಣ್ ತೆಲಗಾವಿಯವರು. ಸಂಶೋಧನೆ ಎಂದರೆ ಲಕ್ಷ್ಮಣ್ ತೆಲಗಾವಿ. ಲಕ್ಷ್ಮಣ್ ತೆಲಗಾವಿ ಎಂದರೆ ಸಂಶೋಧನೆ ಎಂದು ಓದುಗರು ಆಶ್ಚರ್ಯ ವ್ಯಕ್ತಪಡಿಸಿರುವುದು ಸುಳ್ಳಲ್ಲ. ಇವರಲ್ಲಿ ದಾರ್ಶನಿಕತ್ವವನ್ನು ಗುರುತಿಸಬಹುದಾಗಿದೆ. ಇವರ ಚಾರಿತ್ರಿಕ ಪ್ರಜ್ಞೆಯ ಸ್ವರೂಪ ದೊಡ್ಡದು. ಪುರಾತನ ನೆಲೆ, ಶಾಸನ, ವೀರಗಲ್ಲು, ಬಯಲು ಬಂಡೆ ರೇಖಾಚಿತ್ರ, ಚಿತ್ರಕಲೆ, ಶಿಲ್ಪ, ಹಸ್ತಪ್ರತಿ, ಲಾವಣಿ - ಮೌಖಿಕ, ಸಾಹಿತ್ಯ ಹೀಗೆ ಎಲ್ಲ ಪ್ರಕಾರದ ಆಕರ ಸಂಗ್ರಹ ಮತ್ತು ಅವುಗಳ ಕ್ರಮಬದ್ಧ ಸಂಶೋಧನೆ ಮಾಡಿದವರು ಲಕ್ಷ್ಮಣ್ ತೆಲಗಾವಿಯವರು. ಹಾಗಾಗಿ ಅವರನ್ನು ಸಂಶೋಧಕರ ದಿಗ್ಗಜ ಎಂದರೂ ತಪ್ಪಲ್ಲ.

◆◆

ಅಧ್ಯಾಯ : ಮೂರು

ಸಂಶೋಧನೆ ಮತ್ತು ಚಾರಿತ್ರಿಕ ದೃಷ್ಟಿಕೋನ

೩.೧. ಸಂಶೋಧನೆ ಮತ್ತು ಐತಿಹ್ಯಗಳು

೩.೨. ಬಯಲುಬಂಡೆ, ರೇಖಾಕೃತಿಗಳ ಅಧ್ಯಯನ

೩.೩. ದೇವಾಲಯ ಶಿಲ್ಪ ಹಾಗೂ ವೀರಗಲ್ಲುಗಳ ಅಧ್ಯಯನ

೩.೪. ಶಾಸನಶೋಧನೆ ಮತ್ತು ಅಧ್ಯಯನ

೩.೫. ಪುರಾತತ್ವ ಅಧ್ಯಯನ

೩.೬. ನಾಣ್ಯಗಳ ಅಧ್ಯಯನ

ಅಧ್ಯಾಯ : ಮೂರು

ಸಂಶೋಧನೆ ಮತ್ತು ಚಾರಿತ್ರಿಕ ದೃಷ್ಟಿಕೋನ

ಪ್ರವೇಶ

ಲಕ್ಷ್ಮಣ್ ತೆಲಗಾವಿ ಅವರ ಸಂಶೋಧನೆ ಮತ್ತು ಚಾರಿತ್ರಿಕ ದೃಷ್ಟಿಕೋನವನ್ನು ಈ ಕೆಳಗಿನಂತೆ ವರ್ಗೀಕರಿಸಿ ಅಧ್ಯಾಯಿನಿಸಲಾಗಿದೆ.

೧. ಸಂಶೋಧನೆ ಮತ್ತು ಐತಿಹ್ಯಗಳು

೨. ಬಯಲುಬಂಡೆ, ರೇಖಾಕೃತಿಗಳ ಅಧ್ಯಯನ

೩. ದೇವಾಲಯ ಶಿಲ್ಪ ಹಾಗೂ ವೀರಗಲ್ಲುಗಳ ಅಧ್ಯಯನ

೪. ಶಾಸನಶೋಧನೆ ಮತ್ತು ಅಧ್ಯಯನ

೫. ಪುರಾತತ್ವ ಅಧ್ಯಯನ

೬. ನಾಣ್ಯಗಳ ಅಧ್ಯಯನ

೩.೧. ಸಂಶೋಧನೆ ಮತ್ತು ಐತಿಹ್ಯಗಳು

ಸಂಶೋಧನೆ ಮತ್ತು ಚಾರಿತ್ರಿಕ ದೃಷ್ಟಿಕೋನ ಎಂಬುದು ಇತಿಹಾಸ ಅಧ್ಯಯನಕ್ಕೆ ತಾರ್ಕಿಕ ಮತ್ತು ತಾತ್ವಿಕ ನಿಲುವನ್ನು ನೀಡುವ ಅಂಶವಾಗಿದ್ದು ಸಂಶೋಧನೆ ಮತ್ತು ಚಾರಿತ್ರಿಕ ದೃಷ್ಟಿಕೋನಗಳು ಇತಿಹಾಸವೆಂಬ ಬೃಹತ್ ಗ್ರಂಥಕ್ಕೆ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಒಂದು ರಥದ ಎರಡು ಚಕ್ರಗಳಂತೆ ಕ್ರಿಯಾಶೀಲವಾಗಿರುತ್ತದೆ. ಸಂಶೋಧನೆ ಮತ್ತು ದೃಷ್ಟಿಕೋನವು ದೇಹ ಮತ್ತು ಆತ್ಮಾದೋಪಾದಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಇತಿಹಾಸಕ್ಕೆ ನೈಜ ಚಿತ್ರಣ ಒದಗಿಸುವಲ್ಲಿ ಸಹಕಾರಿಯಾಗಿವೆ. ಇತಿಹಾಸವನ್ನು ವೈಜ್ಞಾನಿಕದಡೆಗೆ ಕೊಂಡೊಯ್ಯುಬೇಕಾದ ಸಂಶೋಧನೆ ಮತ್ತು ಚಾರಿತ್ರಿಕ ದೃಷ್ಟಿಕೋನ ಇತಿಹಾಸ ಸಂಪೂರ್ಣತೆಗೆ ಬಹುಮುಖ್ಯವಾಗಿದ್ದು, ಅವುಗಳನ್ನು ಅವಲೋಕಿಸಿದಾಗ ಸಂಶೋಧನಾ ವಿಧಾನಗಳ ತಾತ್ವಿಕ ನೆಲೆಗಳು ಸಂಶೋಧಕರನ್ನು ಹಾಗೂ ಸಂಶೋಧನೆಗೆ ಒಳಗಾಗುವ ಸಂಗತಿಗಳನ್ನು ಹೇಗೆ ಪರಿಭಾವಿಸಿಕೊಂಡಿವೆ ಹಾಗೂ ಸಂಶೋಧಕರ ದೃಷ್ಟಿಕೋನವನ್ನು ಮತ್ತು ಸಂಶೋಧನೆಯನ್ನು ಸಂಶೋಧನ ವಿಧಾನಕ್ಕೆ

ಸಂಬಂಧಿಸಿದ, ತಾತ್ವಿಕ ಹಿನ್ನೆಲೆಗಳು ಮಾತ್ರ ಪ್ರಭಾವಿಸುತ್ತವೆ. ಅವುಗಳನ್ನು ಹೊರತುಪಡಿಸಿದ ಸಂಗತಿಗಳು ಕೂಡ ಪ್ರಭಾವಿಸುವುದಷ್ಟೇ ಅಲ್ಲ. ಅವುಗಳನ್ನು ಹೊರತುಪಡಿಸಿದಾಗ ಸಂಗತಿಗಳು ಕೂಡ ಪ್ರಭಾವಿಸುತ್ತದೆ. ಸಂಶೋಧನೆ ನಿರ್ವಾತ ಮತ್ತು ನಿರ್ಮಾತದಲ್ಲಿ ನಡೆಯುವ ಪ್ರಕ್ರಿಯೆಯಲ್ಲಿ. ಯಾವುದೊ, ಒಂದು ಚಾರಿತ್ರಿಕ ಘಟ್ಟದಲ್ಲಿನ, ಸಾಮಾಜಿಕ ಪರಿಸರದಲ್ಲಿ ನಡೆಯುವ ಪ್ರಕ್ರಿಯೆ ಆಗಬಲ್ಲದು. ಸಾಮಾಜಿಕ ಪರಿಸರದಲ್ಲಿ ಒಳ್ಳೆಯ ಸಮಾಜದ ಕಲ್ಪನೆಗಳನ್ನು ಕಟ್ಟಿಕೊಡುವ ಹಲವಾರು ತಾತ್ವಿಕ ನಿಲುವುಗಳು, ಸಾಮಾಜಿಕ ಏಣಿಶ್ರೇಣಿಗಳು, ಅಧಿಕಾರ ಸಂಬಂಧಗಳು, ಆರ್ಥಿಕ ಸ್ಥಾನಮಾನಗಳು, ಆಕರಗಳು, ಅವಶೇಷಗಳು ಇತ್ಯಾದಿಗಳಿವೆ. ಅಷ್ಟುಮಾತ್ರವಲ್ಲ, ಇವೆಲ್ಲ ತಮ್ಮದೇ ರೀತಿಯಲ್ಲಿ ಸಂಶೋಧನೆಯನ್ನು ಪ್ರಭಾವಿಸಬಹುದಾಗಿದೆ.

ಸಂಶೋಧಕರು ಮತ್ತು ಸಂಶೋಧನೆಗೆ ಒಳಪಡುವ ಸಂಗತಿಗಳ ಮೇಲೆ ಗಮನಹರಿಸುವ ಭರದಲ್ಲಿ ಸಂಶೋಧನ ಪ್ರಕ್ರಿಯೆ ನಡೆಯುವ ಸ್ಥಳ ಸಮುದಾಯ ವ್ಯಕ್ತಿ, ಸಮಯ, ಪುರಾಣ, ಜಾನಪದ, ಕೋಲುಪದ, ಲಾವಣಿ, ವಸ್ತುಗಳು ಮುಂತಾದ ಲಿಖಿತ ಮತ್ತು ಮೌಖಿಕ ಈ ಎಲ್ಲ ಸಂಗತಿಗಳು ಸಂಶೋಧಕರ ದೃಷ್ಟಿಕೋನವನ್ನು ಹಾಗೂ ಆ ಮೂಲಕ ಸಂಶೋಧನೆಯನ್ನು ಹೇಗೆ ಪ್ರಭಾವಿಸುತ್ತವೆ ಎನ್ನುವುದರ ವಿಶ್ಲೇಷಣೆಯನ್ನು ಈ ಅಧ್ಯಾಯದಲ್ಲಿ ಮಾಡಲಾಗಿದ್ದು, ಸಂಶೋಧನೆ ಭಾರತದಲ್ಲಿ ಆರಂಭವಾದ ಸಂದರ್ಭದಲ್ಲಿನ ಸ್ಥಿತಿಗತಿ ಮತ್ತು ಆ ಚಾರಿತ್ರಿಕ ದೃಷ್ಟಿಕೋನದಲ್ಲಿ ರೂಢಿಸಿಕೊಂಡ ಕೆಲವೊಂದು ಗುಣಗಳು. ಇಂದೂ ಕೂಡ ಇತಿಹಾಸ ಸಂಶೋಧನೆಯ ಭಾಗವಾಗಿವೆ ಎನ್ನುವ ವಿವರಗಳನ್ನು ಸಾಮಾಜಿಕ ಏಣಿಶ್ರೇಣಿಗಳನ್ನು ಅಧಿಕಾರ ಸಂಬಂಧಗಳನ್ನು ಹಾಗೂ ಸಂಶೋಧನೆ ನಡುವೆ ಇರುವ ಸಂಬಂಧವನ್ನು ವಿವರಿಸಲಾಗಿದೆ.

ಯಾವುದೇ ಸಂಶೋಧನೆಯನ್ನು ಕೈಗೊಂಡರೂ ಪ್ರಭಾವಿಸುವ ಬಹುಮುಖ್ಯ ಅಂಶವೆಂದರೆ ಸಂಶೋಧಕರ ದೃಷ್ಟಿಕೋನ. ಸಂಶೋಧಕರ ದೃಷ್ಟಿಕೋನವನ್ನು ಅವರ ತಾತ್ವಿಕ ಹಿನ್ನೆಲೆಗಳು ಪ್ರಭಾವಿಸುತ್ತವೆಯೆಂದು ತಿಳಿಯಲಾಗಿದೆ. ಸ್ಥೂಲವಾಗಿ ಎರಡು ಬಗೆಯ ತಾತ್ವಿಕ ಹಿನ್ನೆಲೆಗಳು ಸಂಶೋಧಕರ ದೃಷ್ಟಿಕೋನವನ್ನು ಪ್ರಭಾವಿಸುತ್ತವೆಯೆಂದು ಗ್ರಹಿಸಲಾಗಿದೆ. ಸಂಶೋಧಕರ ಸಾಮಾಜಿಕ ಪರಿಸರ ಮತ್ತು ಅಲ್ಲಿನ ತಾತ್ವಿಕ ಚಿಂತನೆಗಳು. ಸಂಶೋಧನೆ ನಿರ್ವಾತದಲ್ಲಿ ನಡೆಯುವ ಪ್ರಕ್ರಿಯೆಯಲ್ಲ; ಚಾರಿತ್ರಿಕವಾಗಿ ರೂಪುಗೊಂಡ ಯಾವುದೋ ಒಂದು ಸಾಮಾಜಿಕ ಪರಿಸರದಲ್ಲಿ ನಡೆಯುವ ಪ್ರಕ್ರಿಯೆ. ಎಡ ಮತ್ತು ಬಲಪಂಥೀಯರಲ್ಲಿ ತೆಲಗಾವಿ ಎಡಪಂಥೀಯಕ್ಕೆ ಸೇರಿದವರು. ತಳವರ್ಗ, ದಲಿತ, ಅಲಕ್ಷಿತ ದೃಷ್ಟಿಕೋನಗಳಿಂದ ಚರಿತ್ರೆಯನ್ನು ರಚಿಸುವಲ್ಲಿ ಸಫಲರಾಗಿದ್ದಾರೆ.

ಇಂತಹ ಪರಿಸರದಲ್ಲಿ ಹಲವಾರು ತಾತ್ವಿಕ ಚಿಂತನೆಗಳು ಚಾಲ್ತಿಯಲ್ಲಿರಬಹುದು. ಇವುಗಳಲ್ಲಿ ಕೆಲವು ಯಜಮಾನಿಕೆ (ಮುಂಚೂಣಿಯಲ್ಲಿದ್ದು) ಸ್ಥಾನದಲ್ಲಿದ್ದು ಇನ್ನು ಕೆಲವು ಮುಖ್ಯವಾಹಿನಿಯ ಚಿಂತನೆಗಳಿಗೆ ಪ್ರತಿರೋಧಗಳನ್ನು ಕಟ್ಟಿಕೊಡುವ ಚಿಂತನಾ ಕ್ರಮಗಳಾಗಿ ಅಥವಾ ಇನ್ಯಾವುದೋ ಬಗೆಯ ಸಮಾಜ ಕಲ್ಪನೆಗಳನ್ನು ಕಟ್ಟಿಕೊಡುವ ಕೆಲಸ ಮಾಡಬಹುದು. ಸಂಶೋಧಕರು ತಮಗೆ ಅರಿವಿದ್ದೋ ಅಥವಾ ಅರಿವಿಲ್ಲದೆಯೋ, ಯಾವುದಾದರೂ ಒಂದು ಅಥವಾ ಕೆಲವು

ಚಿಂತನಾಕ್ರಮಗಳಿಂದ ಪ್ರಭಾವಿತರಾಗಿರಬಹುದು. ಜತೆಗೆ ಸಂಶೋಧನೆ ನಡೆಯುವ ಸಾಮಾಜಿಕ ಪರಿಸರದಲ್ಲಿನ ಏಣಿಶ್ರೇಣಿಗಳು, ಅಧಿಕಾರ ಸಂಬಂಧಗಳು, ಆರ್ಥಿಕ ಸ್ಥಾನಮಾನಗಳು ಇತ್ಯಾದಿಗಳನ್ನು ಕೂಡ ಸಂಶೋಧಕರ ದೃಷ್ಟಿಕೋನವನ್ನು ಮತ್ತು ಅವರ ಸಂಶೋಧನೆಯನ್ನು ಪ್ರಭಾವಿಸಬಹುದು. ಸಂಶೋಧನಾ ವಿಧಾನಗಳಲ್ಲಿ ಅಡಕವಾಗಿರುವ ತಾತ್ವಿಕಾಂಶಗಳು. ಈ ತಾತ್ವಿಕಾಂಶಗಳನ್ನು ಅಧ್ಯಯನ ಮಾಡುವವರು, ಅಧ್ಯಯನಕ್ಕೆ ಒಳಗಾಗುವವರನ್ನು ಸಂಶೋಧನೆ ವಿವರಿಸುತ್ತವೆ. ಈ ವಿವರಣೆಗಳು ಸಂಶೋಧಕರ ದೃಷ್ಟಿಕೋನವನ್ನು ಪ್ರಭಾವಿಸುತ್ತವೆ. ಆ ಮೂಲಕ ಕರ್ನಾಟಕದಲ್ಲಿ ಪ್ರಾದೇಶಿಕ, ಸ್ಥಳೀಯ ಮತ್ತು ಮೌಖಿಕ ಚರಿತ್ರೆಗೆ ತಾತ್ವಿಕ ಚೌಕಟ್ಟು ನೀಡಿದವರು ಲಕ್ಷ್ಮಣ್ ತೆಲಗಾವಿಯವರು.

ಭೌತಿಕ ವಿಜ್ಞಾನ ಸಂಶೋಧನಾ ವಿಧಾನದ ಅಧ್ಯಯನದಲ್ಲಿ ಒಳಗಾಗುವ ವಸ್ತು ಅಥವಾ ಸಂಗತಿಗಳನ್ನು ಪ್ರಯೋಗಾಲಯಕ್ಕೆ ತಂದು ಬಿಡಿ ಬಿಡಿಯಾಗಿ ಪರೀಕ್ಷಿಸಲಾಗುತ್ತದೆ. ಆ ಮೂಲಕ ಆ ವಸ್ತು ಅಥವಾ ಸಂಗತಿ ಕುರಿತು ಮಾಹಿತಿ ಸಂಗ್ರಹಿಸಲಾಗುತ್ತದೆ. ಆ ಮಾಹಿತಿಯನ್ನು ವಿಶ್ಲೇಷಿಸಿ ಆ ವಸ್ತು ಅಥವಾ ಸಂಗತಿ ಕುರಿತು ಒಂದು ತೀರ್ಮಾನಕ್ಕೆ ಬರಲಾಗುತ್ತದೆ. ಪರೀಕ್ಷೆಗೆ ಒಳಗಾಗುವ ವಸ್ತು ಅಥವಾ ಸಂಗತಿಯನ್ನು, ವಿಶ್ಲೇಷಿಸುವ ಮೂಲಕ ಆ ವಸ್ತು ಅಥವಾ ಸಂಗತಿಗೆ ಸೇರಿದ ಇತರ ವಸ್ತು ಅಥವಾ ಸಂಗತಿಗಳ ಕುರಿತು ತೀರ್ಮಾನಕ್ಕೆ ಬರಲಾಗುತ್ತದೆ. ಇಲ್ಲಿ ಸಂಶೋದನೆಗೆ ಒಳಗಾಗುವ ವಸ್ತು ಮತ್ತು ಸಂಶೋಧಕರ ನಡುವೆ ಸಾಕಷ್ಟು ಅಂತರವಿರುತ್ತದೆ. ಈ ಅಂತರ ಹೆಚ್ಚಿದಷ್ಟು ಸಂಶೋಧನೆಯ ಫಲಿತ ವಾಸ್ತವಕ್ಕೆ ಹೆಚ್ಚು ಹತ್ತಿರ ಎನ್ನುವ ಗೃಹೀತವಿದೆ. ಇದೇ ಕ್ರಮವನ್ನು ಇತಿಹಾಸದಲ್ಲಿ ಅಳವಡಿಸಿಕೊಳ್ಳಲಾಗಿದೆ. ಹಾಗಾಗಿ ಸಂಶೋಧನೆ ವಸ್ತು ಮತ್ತು ಸಂಶೋಧಕರ ನಡುವೆ ಸಂಬಂಧ ಇರುವುದು ಸರಿಯಲ್ಲ ಎನ್ನುವ ಧೋರಣೆ ಒಳಗೊಂಡಿದೆ. ಈ ವಿಧಾನವನ್ನು ಇತಿಹಾಸದಲ್ಲಿ ಅನುಸರಿಸುವಾಗ ಸಂಶೋಧಕರು ಮತ್ತು ಅಧ್ಯಯನಕ್ಕೆ ಒಳಗಾಗುವವರ ನಡುವೆ ಯಾವ ಬಗೆಯ ಸಂಬಂಧ ಏರ್ಪಡುತ್ತದೆ ಎನ್ನುವುದು ಮುಖ್ಯವಾಗಿದೆ.

ಸಂಶೋಧಕರು ಮತ್ತು ಸಂಶೋಧನೆಗೆ ಒಳಗಾಗುವವರ ಸ್ಥಾನಮಾನ ಪೂರ್ವ ನಿರ್ಧರಿತ, ಸಂಶೋಧನೆಯ ಸಂದರ್ಭದಲ್ಲಿ ಸಂಶೋಧಕರು ಸಂಶೋಧನೆಗೆ ಒಳಪಡುವವರಿಗೆ ಹೋಲಿಸಿಕೊಂಡು ಯಾವುದೋ ಒಂದು ಬಗೆಯ ಉಚ್ಚ ಸ್ಥಾನವನ್ನು ಸ್ವಘೋಷಿಸಿಕೊಂಡು ಬಿಡುತ್ತಾರೆ. ಅಷ್ಟು ಮಾತ್ರವಲ್ಲ, ಇವರಿಬ್ಬರ ಸ್ಥಾನಮಾನ ಸಂಶೋಧನೆಯ ಇಡೀ ಸಂದರ್ಭದಲ್ಲಿ ಸ್ಥಿರೀಕರಣಗೊಂಡಿರುತ್ತದೆ. ಅಂದರೆ ಸಮಾಜದಲ್ಲಿರುವ ಸಹಜ ಚಲನಶೀಲತೆ ಮರೆಯಾಗಿ ಒಂದು ಬಗೆಯ ಸ್ಥಿರ ಚಿತ್ರಣ ಮೂಡುತ್ತದೆ.

ಸಂಶೋಧನೆಯ ಅಂಶಗಳು

೨೫ ವರ್ಷಗಳ ಹಿಂದೆ ಚಿತ್ರದುರ್ಗ ನಾಯಕ ಅರಸರ ಚರಿತ್ರೆಯ ಸಂಶೋಧನೆಯನ್ನು ಆರಂಭಿಸಿದ ಲಕ್ಷ್ಮಣ್ ತೆಲಗಾವಿ ಅವರಿಗೆ ದುರ್ಗದ ಪ್ರತಿಯೊಂದು ಪ್ರಾಚೀನ ಸ್ಮಾರಕವೂ

ನಾಯಕರ ಆಳ್ವಿಕೆಗೂ ಹಿಂದಿನ ಪ್ರಾಚೀನ ಸ್ಮಾರಕಗಳ ಮೇಲೆ ನಿಂತಿದೆಯೆಂಬುದು ಮನವರಿಕೆಯಾಯಿತು. ಇಲ್ಲಿ ಮಾನವನ ಬದುಕಿನ ನಾನಾ ಹಂತಗಳನ್ನು ಕ್ರಮಬದ್ಧವಾಗಿ, ಸಮಗ್ರವಾಗಿ ಹಾಗೂ ನಿಖರವಾಗಿ ಗ್ರಹಿಸುವ ದಿಸೆಯಲ್ಲಿ ಗಮನಹರಿಸುವುದು ಅವರಿಗೆ ಅನಿವಾರ್ಯವಾಯಿತು. ಹೀಗಾಗಿ ಚರಿತ್ರೆಯ ಪೂರ್ವಕಾಲದಿಂದ ಇತ್ತೀಚಿನವರೆಗಿನ ಸ್ಮಾರಕಗಳ ಅಧ್ಯಯನ ಕೈಗೊಳ್ಳಲು ಅವರಿಗೆ ಪ್ರೇರಣೆ ದೊರೆತಂತಾಯಿತು.

ಚಿತ್ರದುರ್ಗ ಚರಿತ್ರೆ ಮತ್ತು ಸ್ಮಾರಕಗಳಲ್ಲಿ ಆಸಕ್ತಿ ಬೆಳೆಸಿಕೊಂಡ ಉತ್ಸಾಹಿ ಸಂಶೋಧನಾ ಮನೋಧರ್ಮದವರನ್ನು ಹುಡುಕಿ ಒಂದೆಡೆ ಸೇರಿಸಿದವರು ತೆಲಗಾವಿ. ಸಂಶೋಧನೆಯ ಪ್ರಾತ್ಯಕ್ಷಿಕ ತರಬೇತಿ ನೀಡುವುದರೊಂದಿಗೆ, ಪ್ರತಿಯೊಬ್ಬ ಸದಸ್ಯರೂ ಸ್ವಯಂಪೂರ್ಣ ಅಲ್ಲದೆ ಸಂಶೋಧಕರಾಗುವಂತೆ ಮಾರ್ಗದರ್ಶನ ಮಾಡಿದರು. ಸಂಶೋಧನೆಯೆಂಬುದು ಕಲೆ, ವಿಜ್ಞಾನ, ಬದುಕಿಗೆ ಹಾಗೂ ಬೌದ್ಧಿಕ ಕಠೆಗಳಿಗೆ ಎಸೆದ ಸವಾಲು ಎಂಬುದನ್ನು ಮನಗಾಣಿಸಿಕೊಡಲು ಶ್ರಮಿಸಿದರು. ಇದರ ಫಲವಾಗಿ ಆಸಕ್ತರ ಮಂಡಲಿಯು ಸುಸಜ್ಜಿತ ಸಂಶೋಧನಾ ತಂಡವಾಗಿ ರೂಪುಗೊಂಡಿತು.

ಬಹು ಹಿಂದೆಯೆ ನಾಶವಾದ ವಾಸದ ಎಡೆಗಳು, ಕೆರೆ, ಕುಂಟೆ, ವಡ್ಡು ಮೊದಲಾದವುಗಳ ಕುರುಹುಗಳು, ಜನವಸತಿಯ ತಾಣಗಳು, ಕೋಟೆಗಳು ಹಾಗೂ ಇತರ ಅವಶೇಷಗಳನ್ನು ಈ ಸಂಶೋಧನಾ ತಂಡದ ಸಹಾಯದಿಂದ ನಿಖರವಾಗಿ ಗುರುತಿಸುವ ಪ್ರಯತ್ನ ಆರಂಭವಾಯಿತು. ಚಿತ್ರದುರ್ಗ ಮೊದಲುಗೊಂಡು ಈ ಜಿಲ್ಲೆಯ ಹಲವಾರು ಗುಡ್ಡ, ಕಲ್ಲಾಸರೆ, ಗವಿಗಳನ್ನು ಪರಿಶೀಲಿಸಿ ಟಿಪ್ಪಣಿ ಸಿದ್ಧಪಡಿಸಲು ಇದರಿಂದ ಸಾಧ್ಯವಾಯಿತು. ಜಿಲ್ಲೆಯ ಜಲಾಶಯಗಳ ನೆಲೆಗಳನ್ನು, ಕಾಲುವೆಗಳ ಮಾರ್ಗಗಳನ್ನು ಗುರುತಿಸಿ, ಜಲಸಂಪನ್ಮೂಲದ ವಿವರಗಳನ್ನು ಇದೀಗ ಈ ತಂಡ ಸಂಗ್ರಹಿಸಿಕೊಂಡಿದೆ. ಆರಂಭದ ಮಾನವನು ಇಂತಹ ನದಿ-ಕೊಳ್ಳ-ಹಳ್ಳಗಳ ತನ್ನ ಬದುಕನ್ನು ಆರಂಭಿಸಿದ್ದು, ವರ್ತಮಾನದ ಬದುಕಿಗೆ ಇವು ಇಂದಿಗೂ ಆಸರೆಗಳಾಗಿರುವ ಹಿನ್ನೆಲೆಯಲ್ಲಿ ಇವುಗಳ ಅಧ್ಯಯನ ಅನಿವಾರ್ಯವೆಂದು ಮನಗಾಣಲಾಗಿದೆ. ಮುಖ್ಯವಾಗಿ ಚಿತ್ರದುರ್ಗ ಪರಿಸರದ ಜಲಾಶಯಗಳ ಬಗೆಗೆ ವಿಶೇಷ ಅಧ್ಯಯನ ನಡೆಸಲಾಗಿದೆ. ನಿಸರ್ಗವೇ ನಿರ್ಮಿಸಿದ ಕಾಲುವೆಗಳ ಜಾಲವನ್ನು ಆಮೂಲಾಗ್ರವಾಗಿ ಶೋಧಿಸುವಲ್ಲಿ, ದಾಖಲಿಸುವಲ್ಲಿ, ಈ ತಂಡ ಆಸಕ್ತಿ ವಹಿಸಿದೆ. ಗುಡ್ಡಗಳ ಮೇಲೆ ಬಿದ್ದ ಮಳೆ ನೀರು ಕೊರಕಲುಗಳ ಮೂಲಕ ಕೆಳಕ್ಕೆ ಹರಿದು, ವಿವಿಧ ಜಲಾಶಯಗಳನ್ನು ಸೇರುವ ಹಾಗೂ ಈ ನೀರನ್ನು ಸಂಗ್ರಹಿಸಿ ವಿವಿಧೋದ್ದೇಶ ಗಳಿಗೆ ಬಳಸಿಕೊಳ್ಳುವ ಕೃತಕ ವಿಧಾನಗಳನ್ನು ಹಾಗೂ ಎಡೆಗಳನ್ನು ನಿರ್ದಿಷ್ಟವಾಗಿ ಗುರುತಿಸಲು ಈ ತಂಡಕ್ಕೆ ಸಾಧ್ಯವಾಗಿದೆ.

ಚಾರಿತ್ರಿಕ ಸಂಶೋಧನೆಗೆ ಚಿತ್ರದುರ್ಗ ಜಿಲ್ಲೆಯನ್ನಷ್ಟೇ ಈ ತಂಡವು ತನ್ನ ಮುಖ್ಯ ಕಾರ್ಯಕ್ಷೇತ್ರವನ್ನಾಗಿಸಿಕೊಂಡಿದ್ದರೂ ಬಳ್ಳಾರಿ, ದಾವಣಗೆರೆ ಹಾಗೂ ರಾಯಚೂರು ಜಿಲ್ಲೆಗಳಿಗೂ

ಇದು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡಿದೆ. ಈಗಾಗಲೇ ಜರಿಮಲೆ, ಗುಡಿಕೋಟೆ, ಹರಪನಹಳ್ಳಿ ಮುಂತಾದ ಎಡೆಗಳಲ್ಲೂ ಸಂಶೋಧನೆ ನಡೆದಿದೆ. ಹಂಪೆಯ ಪರಿಸರದಲ್ಲಿಯೂ ತನ್ನ ಕಾರ್ಯವನ್ನು ಆರಂಭಿಸಿದೆ. ಕೊಪ್ಪಳ ಪರಿಸರದಲ್ಲಿಯೂ ಕೆಲವು ಮಾಹಿತಿಯನ್ನು ಸಂಶೋಧನ ತಂಡ ಸಂಗ್ರಹಿಸಿದೆ.

ಸಂಶೋಧನಾ ತಂಡವು ಐವತ್ತಕ್ಕೂ ಹೆಚ್ಚು ಕಲ್ಲು ಬರಹಗಳನ್ನು ಶೋಧಿಸಿದೆ. ಇವುಗಳಲ್ಲಿ ಹೊಯ್ಸಳರ ಕಾಲದ ಕೆಲವು ಗಮನಾರ್ಹ ಶಾಸನಗಳೂ ಸೇರಿವೆ. ಪ್ರಾಕ್ ಚಾರಿತ್ರಿಕ ಕಾಲದಿಂದ ಈಚೆಗಿನವರೆಗಿನ ಈ ಜಿಲ್ಲೆಯ ಬಯಲು ಬಂಡೆ ರೇಖಾಕೃತಿಗಳನ್ನು ಕುರಿತು ವಿಶೇಷ ಅಧ್ಯಯನ ಕೈಗೊಳ್ಳಲಾಗಿದೆ. ಪ್ರಾಕ್ ಚಾರಿತ್ರಿಕ ಕಾಲದ ವಿವಿಧ ಬಗೆಯ ಸಮಾಧಿ ಕುರುಹುಗಳಲ್ಲಿ ನಿಲುವು ಗಲ್ಲುಗಳಿಗೂ (Menhirs) ಮಹತ್ವವಿದ್ದು, ಚಿತ್ರದುರ್ಗ ಪರಿಸರದಲ್ಲಿ ಇಂತಹ ೨೫ಕ್ಕೂ ಹೆಚ್ಚು ನಿಲುವುಗಳನ್ನು ಶೋಧಿಸಲಾಗಿದೆ. ಕಾಮಗಾರಿ ಚಿಹ್ನೆಗಳು, ನಿಗೂಢ ಕುಳಿಗಳು (Cup Marks), ಕುಳಿಯ ಆಕೃತಿಗಳು ಮೊದಲಾದವುಗಳ ಹಿನ್ನೆಲೆಯಲ್ಲಿಯ ಆಶಯಗಳ ಪ್ರತ್ಯೇಕ ಅಧ್ಯಯನ ಕೈಗೊಳ್ಳಲಾಗಿದೆ. ಇವು ಹೊಸ ಬಗೆಯ ಅಧ್ಯಯನ ಕ್ಷೇತ್ರಗಳೆಂಬುದರಲ್ಲಿ ಅನುಮಾನವಿಲ್ಲ. ರಾಜ-ಮಹಾರಾಜರ ಏಳಿಗೆಯಲ್ಲಿ ದುಡಿದ ಸಾಮಾನ್ಯ ವರ್ಗದವರ ಬದುಕನ್ನು ಕುರಿತು ಕರಾರುವಾಕ್ಕಾದ ಚಿತ್ರಣವನ್ನು ಈ ಮೂಲಕ ಕೊಡಲು ಸಾಧ್ಯವಾಗಿದೆ. ಕೋಟೆಯ ಅಧ್ಯಯನದತ್ತಲೂ ಈ ತಂಡವು ಗಮನಹರಿಸಿದೆ.

ಪ್ರಾಕ್‌ಚಾರಿತ್ರಿಕ ಮತ್ತು ಚಾರಿತ್ರಿಕ ವಸ್ತುಗಳನ್ನು (ಶಿಲಾಯುಧ, ಮಡಿಕೆ-ಕುಡಿಕೆ, ನಾಣ್ಯ, ಮಣ್ಣಿನವಸ್ತು, ಮಣಿ, ಹಸ್ತಪ್ರತಿ, ಪತ್ರ ದಾಖಲೆ ಇತ್ಯಾದಿ) ಹೇರಳವಾಗಿ ಸಂಗ್ರಹಿಸಿದ್ದು, ಇವುಗಳ ಅಧ್ಯಯನದೊಡನೆ ವ್ಯವಸ್ಥಿತವಾಗಿ ಜೋಡಿಸಿ ಪ್ರದರ್ಶಿಸುವ ಉದ್ದೇಶ ಲಕ್ಷ್ಮಣ್ ತೆಲಗಾವಿಯವರದ್ದಾಗಿದೆ. ಈವರೆಗೂ ೧೫ ಸಾವಿರಕ್ಕೂ ಅಧಿಕಸಂಖ್ಯೆಯಲ್ಲಿ ಛಾಯಾಚಿತ್ರಗಳನ್ನು ತೆಗೆಯಲಾಗಿದೆ. ಇವು ಇತರರಿಗೆ ನೋಡಲು ಸಾಧ್ಯವಾದ ಹಾಗೂ ನಿಗೂಢವಾದ ಎಡೆಗಳನ್ನು ಪರಿಚಯಿಸುವಂತಹವು.[೧] ಹಾಗಾಗಿ ಲಕ್ಷ್ಮಣ್ ತೆಲಗಾವಿಯವರು ಸಂಶೋಧಿಸಿದ ಹಲವು ಎಡೆಗಳಲ್ಲಿ ಚಾರಿತ್ರಿಕ ಅಧ್ಯಯನದಲ್ಲಿ ಚಿತ್ರದುರ್ಗದ ವೀರವನಿತೆ ಓಬವ್ವಳ ಕುರಿತಂತೆ ಐತಿಹ್ಯಗಳಜೊತೆ ಜೊತೆಗೆ ಲಿಖಿತ ಆಕರಗಳನ್ನು ಕೈಫಿಯತ್, ಬಖೈರು ಪತ್ರಗಳ ಮೂಲಕ ಮತ್ತು ಐತಿಹ್ಯವುಳ್ಳ ಅಂಶವನ್ನು ಚಾರಿತ್ರಿಕವಾಗಿ ದೃಷ್ಟಿ ಹಾಯಿಸುವುದರ ಮೂಲಕ ಓಬವ್ವಳ ಕುರಿತಂತೆ ಸಂಶೋಧನೆಯ ಮೂಲಕ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ.

ಕರ್ನಾಟಕದ ಪಾಳೆಯಗಾರರ ಕುರಿತಂತೆ ಸಂಶೋಧನೆ

ಕರ್ನಾಟಕದ ಪ್ರಾದೇಶಿಕ ಇತಿಹಾಸಕಾರರಾದ ಲಕ್ಷ್ಮಣ್ ತೆಲಗಾವಿಯವರು ಪಾಳೆಯಗಾರರ ಇತಿಹಾಸವನ್ನು ಬರೆದವರಲ್ಲಿ ಮೊದಲಿಗರು. ವಿಶ್ವವಿದ್ಯಾಲಯದ ಮಟ್ಟದಲ್ಲಿ ಶಾಸ್ತ್ರೀಯ ಸಂಶೋಧನೆಯ ಹಿನ್ನೆಲೆಯಲ್ಲಿ ಮೇಲಿನಂತೆ ಹೇಳಬಹುದು. ಇವರು ಕರ್ನಾಟಕದಲ್ಲಿ ಬಯಲು ಸೀಮೆ, ಮಲೆನಾಡು, ಕರಾವಳಿ ಭಾಗಗಳಿಗಿಂತಲೂ ಚಿತ್ರದುರ್ಗಕ್ಕೆ ಹೆಚ್ಚು ಸೀಮಿತವಾಗಿದ್ದರು.

ಕರ್ನಾಟಕದ ಬೇಡ ಪಾಳೆಯಗಾರರ ಚರಿತ್ರೆ ರಚನೆಗೆ ಮುನ್ನುಡಿ ಬರೆದವರು ಎಂ.ಎಸ್. ಪುಟ್ಟಣ್ಣ ಆದರೆ ಲಕ್ಷ್ಮಣ್ ತೆಲಗಾವಿಯವರು ಅದನ್ನು ಮುಂದುವರಿಸಿದ್ದು ಗಮನಾರ್ಹ.

ಇಂದಿನ ಕರ್ನಾಟಕದ ರಾಜಕೀಯ ಸರಹದ್ದಿನಲ್ಲಿ ಬಂದಿರುವ ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು ಮತ್ತು ಉತ್ತರಕರ್ನಾಟಕ ಪ್ರದೇಶಗಳಲ್ಲಿದ್ದ ಮಧ್ಯಕಾಲೀನ ಮತ್ತು ಈಚೀಗಿನ ಸಂಸ್ಥಾನಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ವಿಜಯನಗರದ ಕಾಲದಲ್ಲಿ "ತುಳುನಾಡ"ನ್ನು ಬಾರಕೂರು ಮತ್ತು ಮಂಗಳೂರು ರಾಜ್ಯಗಳೆಂದು ವಿಭಾಗಿಸಲಾಗಿದ್ದು, ಇವು ಹಲವಾರು ಸ್ಥಳೀಯ ಅರಸುಮನೆತನಗಳನ್ನು ಒಳಗೊಂಡಿದ್ದವು. ಈ ನಾಡಿನ ಉತ್ತರಭಾಗದಿಂದ ಬಾರಕೂರು ರಾಜ್ಯದಲ್ಲಿ ನರಿಗೆ ಮತ್ತು ಹಾಡುವಳ್ಳಿ ಪ್ರಾಂತ್ಯಗಳೂ ಸೇರಿದರೆ, ಮಂಗಳೂರು ರಾಜ್ಯದಲ್ಲಿ ಕಳಸ, ಕಾರ್ಕಳ, ಬಂಗ, ಚೌಟ, ನಾಳಿನ ಮತ್ತು ಸಾಮಂತ ಮನೆತನಗಳವರ ಪ್ರಾಂತ್ಯಗಳೂ ಪ್ರಾಬಲ್ಯ ಹೊಂದಿದ್ದವು. ಇವುಗಳಲ್ಲಿ ಹೆಚ್ಚಿನವು ಜೈನಧರ್ಮಕ್ಕೆ ಸೇರಿದ್ದವು. ಇವುಗಳೇ ಅಲ್ಲದೆ, ಸುರಾಲದ ತೊಳಹ, ಪೂಂಜಳಿಯ ಅಜಿಲ, ಹೊಸಂಗಡಿಯ ಹೊನ್ನೆಯಕಂಬಳಿ, ವಿಟ್ಟಲದ ಡೊಂಬ ಹೆಗ್ಗಡೆ, ಕಾಡಿನ ಮದ್ದಹೆಗ್ಗಡೆ, ಎಲ್ಲೂರಿನ ಕುಂದಹೆಗ್ಗಡೆ, ಕಿನ್ನಿಕ ಹೆಗ್ಗಡೆ ಮೊದಲಾದ ಹಲವು ಸ್ಥಳೀಯ ಮನೆತನಗಳವರು ವಿಜಯನಗರದಲ್ಲೂ ಆ ನಂತರದ ಶತಮಾನಗಳಲ್ಲೂ ತುಳುನಾಡಿನ ಬೇರೆ ಬೇರೆ ಪ್ರಾಂತ್ಯಗಳಲ್ಲಿ ರಾಜ್ಯವಾಳಿದರೆಂದು ಇಲ್ಲಿ ದೊರೆಯುವ ಸಾಕ್ಷಿಗಳಿಂದ ವ್ಯಕ್ತಪಡುತ್ತದೆ. ಹಾಗೆಯೇ ಗೇರುಸೊಪ್ಪೆಯ ಸಾಳುವರು, ಬೀಳಿಗಿ ಒಡೆಯರು, ಸೋಂದಾ(ಸ್ವಾದಿ) ನಾಯಕರು ಈಗಿನ ಉತ್ತರ ಕನ್ನಡ ಜಿಲ್ಲೆಯಲ್ಲಿ ಬರುವ ವಿಜಯನಗರ ಕಾಲದ ಪ್ರಮುಖ ಅರಸು ಮನೆತನಗಳವರಾಗಿದ್ದಾರೆ.

ಕೊಡಗು ಪ್ರಾಂತ್ಯದಲ್ಲಿದ್ದ ಪಾಳೆಯಗಾರ ವ್ಯವಸ್ಥೆಯು ಬೇರೆಡೆಗಳಿಗಿಂತ ಭಿನ್ನವಾಗಿರುವುದು ಗಮನಾರ್ಹ. ಬಯಲುನಾಡಿನ ಗ್ರಾಮಗಳಲ್ಲಿ ಹರವು, ವಿಸ್ತೀರ್ಣಗಳಂತೆ ಇಲ್ಲಿಯ ಗ್ರಾಮಗಳಿಗೆ ಹೋಲಿಸಲಾಗದಿರುವುದರಿಂದ ಕೊಡಗಿನ ಪಾಳೆಯಪಟ್ಟುಗಳು ತೀರಾ ಕಿರಿದಾಗಿರುವ ಉದಾಹರಣೆ ಕಾಣಸಿಗುತ್ತದೆ. ಒಬ್ಬ ಪಾಳೆಯಗಾರನ ನಾಡನ್ನು ಮತ್ತೊಬ್ಬನಿಂದ ಪ್ರತ್ಯೇಕಿಸಲು ದಟ್ಟವಾದ ಕಾಡನ್ನು ಬೆಳೆಸುವ ಪದ್ಧತಿ ಇದ್ದಿತು. ಕಾಡಿಲ್ಲದಿರುವ ಸ್ಥಳಗಳಲ್ಲಿ ಕಲ್ಲನ್ನು ನೆಟ್ಟು ಅಥವಾ ಕಂದಕ(ಕಡಂಗ?)ಗಳನ್ನು ಅಗೆಯಿಸಿ ಗುರುತು ಮಾಡಿಕೊಳ್ಳುತ್ತಿದ್ದರು. ಇಲ್ಲಿಯ ಪಾಳೆಯಗಾರರನ್ನು 'ನಾಡ್‌ಬಾಚ್‌ಕಾರರು' (ಬಾಳು ಅಥವಾ ಬಾಚಿಕಾರರು) ಎಂದು ಸಂಬೋಧಿಸಲಾಗುತ್ತಿದ್ದಿತು. ಕೊಡಗಿನ ೨೮ ನಾಡುಗಳಿಗೂ ಇವರು ಮುಖ್ಯಸ್ಥರಾಗಿದ್ದು, ಇವರಲ್ಲಿ ಪ್ರಬಲರಾಗಿ ಬೆಳೆದವರು ೮ ಮಂದಿ ನಾಯಕರು. ಅವರುಗಳೆಂದರೆ, ಅಂಜಿಗೇರಿ ನಾಡಿನ ಕಟ್ಟಿಮನೆ ಚಿಟ್ಯಪ್ಪನಾಯಕ, ಎಡೆನಾಲ್ಕುನಾಡಿನ ಮುಕ್ಕಾಟಿನಾಯಕ, ಹತ್ತುಗಟ್ಟು ನಾಡಿನ ಮಾಚಂಗಾಳನಾಯಕ, ಸಿದ್ದಾಪುರ ನಾಡಿನ ಚನ್ನಯನಾಯಕ, ತಾವಳಗೇರಿನಾಡಿನ ಕೈಬಿಲಿರನಾಯಕ, ಕಡಿಯತ್ತುನಾಡಿನ ಬಾವಲಿಯ ಕೊಳ್ಳಕೊಂಗಿನಾಯಕ, ಬೆಪ್ಪನಾಡಿನ ಉತ್ತುನಾಯಕ ಮತ್ತು ಹಾಲೇರಿಯ ಸೋಮಶೇಖರನಾಯಕ.

ಇವರೆಲ್ಲರೂ ವಿಜಯನಗರದ ಅವಧಿಯಲ್ಲಿದ್ದವರು. ಉಳಿದವರಲ್ಲಿ, ನಾಗರಹೊಳೆ ಅರಣ್ಯದ ಕುಂತೂರು ಪಾಳೆಯಗಾರ ನಾಗರಾಜ, ಯಡೂರಿನ ಮಲ್ಲನಾಯಕ, ಅಜ್ಜಿ ಕುಟ್ಟೀರ ಅಚ್ಚುನಾಯಕ, ಕುರುಚಿನಾಯಕ ಮೊದಲಾದವರೂ ಗಮನ ಸೆಳೆಯುತ್ತಾರೆ. ಮ್ಯಾಕ್‌ಗೋಗರೇ ಎಂಬುವನು ಬೆಳಗಾವಿಯ ಕಲೆಕ್ಟರ್ ಆಗಿದ್ದಾಗ ಸಿದ್ಧಪಡಿಸಿದ ಯಾದಿಯ ಪ್ರಕಾರ, ಬೆಳಗಾವಿ ಜಿಲ್ಲೆಯಲ್ಲಿದ್ದ ಇನಾಂಹಳ್ಳಿಗಳ ಹಾಗೂ ಮನೆತನಗಳ ಸಂಖ್ಯೆಯು ೧೦೦ಕ್ಕೂ ಮಿಕ್ಕಿದ್ದಿತೆಂದು ವ್ಯಕ್ತಪಡುತ್ತದೆ. ನಾಯಕರು ಅಥವಾ ಪಾಳೆಯಗಾರರ ಯಾದಿಗೆ ಇಂತಹ ಸಂಸ್ಥಾನಗಳನ್ನು ಸೇರಿಸಿಕೊಳ್ಳ ಬೇಕಾಗುತ್ತದೆ.

ಈ ಮೇಲಿನ ಅಂಶಗಳೆಲ್ಲವು ಹದಿನೇಳು ಮತ್ತು ಹದಿನೆಂಟನೇ ಶತಮಾನಗಳಲ್ಲಿ ಮೈಸೂರು ಪ್ರಾಂತ್ಯದಲ್ಲಿ ಅಸ್ತಿತ್ವದಲ್ಲಿದ್ದ ಕೆಲವು ಸಂಸ್ಥಾನಗಳ ಬಗೆಗೆ ಕಾವ್ಯ, ದಾಖಲೆ ಇತ್ಯಾದಿಗಳಿಂದ ತಿಳಿದುಬರುತ್ತದೆ. ಕರ್ನಾಟಕ ಏಕೀಕರಣ ಪೂರ್ವದ ಮೈಸೂರು ರಾಜ್ಯದಲ್ಲಿ, ಅಂದರೆ ೧೭ನೇ ಶತಮಾನದ ಮೊದಲಾರ್ಧದ ಅವಧಿಯಲ್ಲಿ, ನೆಲೆಸಿದ್ದ ಪ್ರಮುಖ ಪಾಳೆಯಗಾರರನ್ನು ಗಮನಿಸಿರುವ ಬಿ. ಲೂಯಿಸ್ರೈಸ್ ಅವರು, ಈ ಭೂಪ್ರದೇಶದ ಉತ್ತರದಲ್ಲಿ ಬಿದನೂರು, ಬಸವಪಟ್ಟಣ ಮತ್ತು ಚಿತ್ರದುರ್ಗದ ನಾಯಕರು; ಪಶ್ಚಿಮದಲ್ಲಿ ಬುಲ್ಲಂ ನಾಯಕರು; ಮಧ್ಯದಲ್ಲಿ ಹಾಗಲವಾಡಿ ನಾಯಕರು, ಯಲಹಂಕ ಮತ್ತು ಬಳ್ಳಾಪುರಗಳ ಗೌಡ ಪ್ರಭುಗಳು; ಪೂರ್ವದಲ್ಲಿ ಸುಗಟೂರು ಗೌಡ ಪ್ರಭುಗಳು ಹಾಗೂ ದಕ್ಷಿಣದಲ್ಲಿ ಮೈಸೂರು ಒಡೆಯರು, ಕಳಲೆ, ಉಮ್ಮತ್ತೂರು, ಯಳಂದೂರು ನಾಯಕರು ಮೊದಲಾದವರು ಇದ್ದುದನ್ನು ಪ್ರತ್ಯೇಕವಾಗಿ ಗುರುತಿಸಿಕೊಟ್ಟಿದ್ದಾರೆ.

ಮೈಸೂರು ಅರಸರ ಚರಿತ್ರೆಯನ್ನು ಅವಲೋಕಿಸಿದಾಗ ಮೇಲೆ ಹೇಳಿದ ಅವಧಿಯಲ್ಲಿ ಇದ್ದ ಪಾಳೆಯಗಾರರ ಬಗೆಗೆ ಸಾಕಷ್ಟು ಮಾಹಿತಿ ದೊರೆಯುತ್ತದೆ. ಎಂ.ಎಸ್. ಪುಟ್ಟಣ್ಣ ಅವರು ಈ ಅರಸರು ವಶಪಡಿಸಿಕೊಂಡಿದ್ದ ಇಂತಹ ಸಂಸ್ಥಾನಗಳನ್ನು ಪಟ್ಟಿ ಮಾಡಿದ್ದಾರೆ. ಬೆಟ್ಟದ ಚಾಮರಾಜ ಒಡೆಯನು ಶ್ರೀರಂಗಪಟ್ಟಣವನ್ನು, ಚಾಮರಾಜ ಒಡೆಯನು ಚೆನ್ನಪಟ್ಟಣವನ್ನು, ಕಂಠೀರವ ನರಸರಾಜ ಒಡೆಯನು ಅರಕಲಗೂಡು, ಬೆಟ್ಟದಪುರ ಮತ್ತು ಹೊಸೂರುಗಳನ್ನು, ದೊಡ್ಡದೇವರಾಜ ಒಡೆಯನು ಚಿಕ್ಕನಾಯಕನಹಳ್ಳಿ, ಹುಲಿಯೂರುದುರ್ಗ, ಕುಣಿಗಲು ಮತ್ತು ಸಕ್ಕರೆಪಟ್ಟಣಗಳನ್ನು, ಚಿಕ್ಕದೇವರಾಜ ಒಡೆಯನು ಮದ್ದಗಿರಿ ಮತ್ತು ಮಿಡಿಗೇಸಿಗಳನ್ನು ಹಾಗೂ ಚಿಕ್ಕ ಕೃಷ್ಣರಾಜ ಒಡೆಯನು ಕೈಲಂಚ, ದೇವನಹಳ್ಳಿ ಮತ್ತು ಕಣಿವೆ ಕೆಳಗಿನ ರಾಜ್ಯಗಳನ್ನು ಜಯಿಸಿದರೆಂದು ದಾಖಲಿಸಿದ್ದಾರೆ. ಶ್ರೀರಂಗಪಟ್ಟಣ ರಾಜಧಾನಿಯಿಂದ ಆಳ್ವಿಕೆ ನಡೆಸುತ್ತಿದ್ದ ಒಂದನೇ ಕಂಠೀರವ ನರಸರಾಜನು (೧೬೩೮-೧೬೫೯) ದಿಗ್ವಿಜಯಕ್ಕಾಗಿ ಹೊರಟು, ಸಾಮಂತರ ನೇಕರನ್ನು ಜಯಿಸಿದ ಹಾಗೂ ಶಿಕ್ಷಿಸಿದ ಸಂಗತಿಯು ಚಾರಿತ್ರಿಕ ಸಾಹಿತ್ಯ ಕೃತಿಯಲ್ಲಿ ಉಲ್ಲೇಖ ಗೊಂಡಿದೆ.[೨]

ಚಿತ್ರದುರ್ಗದ ಅರಸರ ಕುರಿತಂತೆ ಪಾಳೆಯಗಾರರ ಕುರಿತ ಐತಿಹ್ಯಗಳು

ವಿಜಯನಗರದ ಅರಸರ ಕಾಲದಲ್ಲಿ ಅಸ್ತಿತ್ವಕ್ಕೆ ಬಂದ ಪಾಳೆಯಪಟ್ಟುಗಳಲ್ಲಿ ಚಿತ್ರದುರ್ಗವು ಪ್ರಮುಖವಾದುದಾಗಿದೆ. ಚಿತ್ರದುರ್ಗದ ಸರಹದ್ದಿನಲ್ಲಿ ಹರಪನಹಳ್ಳಿ, ನಿಡುಗಲ್ಲು, ರಾಯದುರ್ಗ,

ಮತ್ತೋಡು, ತರೀಕೆರೆ, ಬಿದನೂರು ಮುಂತಾದ ಕಡೆ ಅನೇಕ ಪಾಳೆಯಪಟ್ಟುಗಳಿದ್ದವು. ವಿಜಯನಗರದ ಅರಸರಿಗೆ ಕಪ್ಪಕಾಣಿಕೆಗಳನ್ನು ಕೊಟ್ಟುಕೊಂಡು ಇದ್ದ ಇವರು ವಿಜಯನಗರ ಪತನಾನಂತರ ತಮ್ಮನ್ನು ಸ್ವತಂತ್ರರೆಂದು ಘೋಷಿಸಿಕೊಂಡರು. ಸಣ್ಣಪುಟ್ಟ ಪಾಳೆಯಪಟ್ಟುಗಳಿಗೆ ಮಗ್ಗುಲು ಮುಳ್ಳಾಗಿದ್ದ ಚಿತ್ರದುರ್ಗದ ಮೇಲೆ ಎಲ್ಲಾ ಪಾಂತ್ಯಗಳ ಪಾಳೆಯಗಾರರ ಕಣ್ಣು ಬಿದ್ದಿತು. ಹೀಗಾಗಿ ಮನುಷ್ಯರ ಸಹಜ ಗುಣವಾದ ಅಸೂಯೆಯಿಂದ ಈ ಪಾಳೆಯಪಟ್ಟುಗಳಲ್ಲಿ ಆಗಾಗ್ಗೆ ಘರ್ಷಣೆಗಳು ಸಂಭವಿಸುತ್ತಲೇ ಇದ್ದವು. ನೆರೆಯ ಪಾಳೆಯಗಾರರಿಗೆ ಸಿಂಹ ಸ್ವಪ್ನವಾಗಿದ್ದ ಚಿತ್ರದುರ್ಗದ ನಾಯಕರ ಸಾಹಸ, ಪರಾಕ್ರಮ, ಶೌರ್ಯ, ಇತರೆಯವರ ಎದೆ ನಡುಗಿಸುವಂತಿದ್ದಿತ್ತು.

"ಗಂಡು ಮೆಟ್ಟಿದ ನಾಡು" ಎಂಬುದಾಗಿ ಕರೆಸಿಕೊಂಡ ಚಿತ್ರದುರ್ಗವನ್ನು ಸುಮಾರು ೨೧೧ ವರ್ಷಗಳ (೧೫೬೮-೧೭೭೯) ಕಾಲ ಆಳಿದಂತಹ ಅರಸರನ್ನು ನಾಯಕರು ಅಥವಾ ಪಾಳೆಯಗಾರರು, ಮದಕರಿನಾಯಕ ಮುಂತಾದ ಹೆಸರುಗಳಿಂದ ಕರೆಯಲಾಗಿದೆ. ಹೆಚ್ಚು ಪ್ರಸಿದ್ಧಿ ಪಡೆದು ಬಳಕೆಯಲ್ಲಿರುವ ಪರಿಕಲ್ಪನೆ ಎಂದರೆ 'ಮದಕರಿ' ಎಂಬುದಾಗಿದೆ. ಈ ಅರಸರುಗಳಿಗೆ ಮದಕರಿ ಎಂಬ ಹೆಸರು ಬರಲಿಕ್ಕೆ ಬಹಳಷ್ಟು ಸ್ಥಳೀಯ ಮತ್ತು ಮೌಖಿಕ ಐತಿಹ್ಯಗಳಿವೆ. ಸ್ಥಳೀಯವಾಗಿ ಈ ಪಾಳೆಯಗಾರರೆಲ್ಲರೂ ನಾಯಕ ಜನಾಂಗದ(ಮ್ಯಾಸನಾಯಕರು)ಲ್ಲಿ ಕಾಮಗೇತಿ ವಂಶಸ್ಥರು ಎಂಬ ಐತಿಹ್ಯಗಳು ದೊರಕಿವೆ.

ಚಿತ್ರದುರ್ಗದ ಪಾಳೆಯಗಾರರ ಮೂಲಪುರುಷ ಚಿತ್ರನಾಯಕ. ಕೆಲವು ಇತಿಹಾಸಕಾರರ ಪ್ರಕಾರ ಚಿತ್ರದುರ್ಗದ ಪಾಳೆಯಗಾರರ ಮೂಲ ಪುರುಷನೆಸಿಕೊಂಡ ಚಿತ್ರನಾಯಕ ಒಮ್ಮೆ ದೆಹಲಿಗೆ ಹೋದನಂತೆ. ಆಗ ಅಲ್ಲಿ ಆಳುತ್ತಿದ್ದವ ತೊಘಲಕ ಸಂತತಿಯ ಸುಲ್ತಾನ, ಒಂದು ದಿನ ಸುಲ್ತಾನನ ಪಟ್ಟದಾನೆಗೆ ಮದವೇರಿ ಅದು ಅಪಾಯಕಾರಿ ರೀತಿಯಲ್ಲಿ ರಾಜಬೀದಿಯಲ್ಲಿ ನುಗ್ಗಿತಂತೆ. ಅದನ್ನು ನಿಯಂತ್ರಿಸುವುದು ಯಾರಿಗೂ ಅಸಾಧ್ಯವಾದಾಗ ಚಿತ್ರನಾಯಕ ತಮ್ಮ ಧೈರ್ಯ, ಸಾಹಸ, ಜಾಣ್ಮೆಯಿಂದ ಆ ಮದ್ದಾನೆಯನ್ನು ಹಿಡಿದು ಮದಇಳಿಸಿದನಂತೆ. ಇಂತಹ ಸಾಹಸ ಕಾರ್ಯಕ್ಕೆ ಮೆಚ್ಚಿದ ಸುಲ್ತಾನನು ನಾಯಕನಿಗೆ ಬಹುಮಾನಗಳನ್ನಿತ್ತು ಮದಿಸಿದ ಕರಿಯನ್ನು ಪಳಗಿಸಿದ ಇವನಿಗೆ "ಮದಕರಿ" ಎಂಬ ಬಿರುದನ್ನು ನೀಡಿ ಗೌರವಿಸಿದನಂತೆ. ಈ ನಾಯಕನ ನಂತರದ ಪಾಳೆಯಗಾರರು ತಮ್ಮ ಹೆಸರಿನೊಂದಿಗೆ ಮದಕರಿನಾಯಕ ಎಂಬ ಬಿರುದನ್ನು ಸೇರಿಸಿಕೊಳ್ಳತೊಡಗಿದರು. ಆದರೆ ಪಾಳೆಯಗಾರರ ಬಗ್ಗೆ ನಿರ್ದಿಷ್ಟ ದಾಖಲೆಗಳು ಸಿಗುವುದು, ಮತ್ತಿ ತಿಮ್ಮಣ್ಣ ನಾಯಕನಿಂದ ಈತನ ಸ್ಥಳ ದಾವಣಗೆರೆ ತಾಲ್ಲೂಕಿನ ಮತ್ತಿಗ್ರಾಮ, ಈತ ವಿಜಯನಗರ ಅರಸರ ಬಳಿ ಅಧಿಕಾರಿಯಾಗಿದ್ದು, ಅವನ ದಕ್ಷತೆಗೆ ಮೆಚ್ಚಿದ್ದರಿಂದ ಹೊಳಲ್ಕೆರೆ ಪ್ರದೇಶದ ಅಮರಮಾಗಣಿ ಪಡೆದು ಅಧಿಕಾರಿಯಾದ ನಂತರ, ಹಿರಿಯೂರಿನ ಅಧಿಕಾರಿಯಾಗಿ ಮುಂದೆ ಚಿತ್ರದುರ್ಗದ ಪಾಳೆಯಗಾರನೆಸಿದ, ಈತನು ದುರ್ಗದ ಬೆಟ್ಟದ ಮೇಲಿನ ಹಳೆಯ ಕೋಟೆಯನ್ನು ಕೆಡವಿಸಿ ಪುನರ್‌ನಿರ್ಮಾಣ ಮಾಡಿದ. ಈತನು ಅತ್ಯಂತ

ಪರಾಕ್ರಮಿಯಾಗಿದ್ದು, ಚಿತ್ರದುರ್ಗದ ಸ್ಥಾಪಕನಾದ ದುರ್ಗದ ಪಾಳೆಯಗಾರ 'ಏಕಲವ್ಯ'ನೆಂದು ಕರೆಸಿಕೊಡ 'ತಿಮ್ಮಣ್ಣ ನಾಯಕನು' ಪ್ರಬಲಿಸುತ್ತಿರುವ ಸುದ್ದಿಯನ್ನು ಕೇಳಿ ವಿಜಯನಗರದ ಅರಸರು ಇವನನ್ನು ಮಟ್ಟ ಹಾಕಲು ವೀರಸಾಳೊ ನರಸಿಂಗನಾಯಕ ಎಂಬುವನನ್ನು ಕಳುಹಿಸಿ ಕೊಟ್ಟನು. ಆಗ ತಿಮ್ಮಣ್ಣ ನಾಯಕನು ಅವನ ಖಾಸಾ ಕುದುರೆಯನ್ನು ಅವನಿಗೆ ಗೊತ್ತಾಗದಂತೆ ಹಾರಿಸಿಕೊಂಡು ಬರಬೇಕೆಂದು ಅವನ ಲಾಯಕ್ಕೆ ಹೋಗುತ್ತಾನೆ. ಆಗ ಕುದುರೆಯು ಗಾಬರಿಯಾಗಿ ಹೇಷರವ ಮಾಡಿದಾಗ ಕಾವಲುಗಾರ ಎದ್ದು ನೋಡುವಲ್ಲಿ ತಿಮ್ಮಣ್ಣ ನಾಯಕನು ಅಲ್ಲೇ ಪಕ್ಕದಲ್ಲಿದ್ದ ಹುಲ್ಲಿನಲ್ಲಿ ಅವಿತುಕೊಂಡ. ಕಾವಲುಗಾರ ಸಡಿಲವಾಗಿದ್ದ ಗೂಟವನ್ನು ಕಿತ್ತು ಅಲ್ಲೇ ಹುಲ್ಲಿನಲ್ಲಿ ಕಾಣದಂತೆ ಬಡಿಯುತ್ತಾನೆ. ದೊರೆ ನೋವು ಅನುಭವಿಸುತ್ತಿದ್ದರು ಶಬ್ಧ ಮಾಡಲಿಲ್ಲ. ನಂತರ ಚಾಕುವಿನಿಂದ ತನ್ನ ಹಸ್ತವನ್ನೇ ತುಂಡುರಿಸಿಕೊಂಡು ಕುದುರೆಯನ್ನು ತರುತ್ತಾನೆ. ಮಾರನೇ ದಿವಸ ಹುಲ್ಲಿನಿಂದ ತುಂಬಿದ ಕೂಟದಲ್ಲಿ ಸಿಕ್ಕಿಕೊಂಡ ತುಂಡು ಹಸ್ತವನ್ನು ನೋಡಿ ಅವನ ಪರಾಕ್ರಮಕ್ಕೆ ತಲೆದೂಗುತ್ತಾನೆ. ಇವರ ಮತ್ತೊಂದು ಸಾಹಸವೆಂದರೆ ತಿಮ್ಮಣ್ಣನಾಯಕ ಕರವರತಿ ಸರಕ್ಕೆ ನೀರು ಕುಡಿಯಲು ಬಂದ ಮದಿಸಿದ ಆನೆಯನ್ನು ಕಾಲಿನಿಂದ ಬಿಲ್ಲು ಸಿಕ್ಕಿಸಿಕೊಂಡು ಅದರ ಹಣೆಗೆ ಬಾಣ ಪ್ರಯೋಗ ಮಾಡಿ ಸಾಯಿಸುತ್ತಾನೆ. ಆಗ ವಿಜಯನಗರದ ಅರಸರು ತಿಮ್ಮಣ್ಣ ನಾಯಕನನ್ನು 'ಮದಕರಿ' ಎಂಬ ಬಿರುದಿನೊಂದಿಗೆ ಗೌರವಿಸುತ್ತಾರೆ ಎಂಬುದು ಐತಿಹ್ಯವಿದೆ. ಈತನಿಗೆ **"ಹಗಲು ಕೊಗ್ಗಲೆಯ ಮಾನ್ಯ"** ಎಂಬ ಬಿರುದಿದ್ದಿತ್ತು. ಈತನ ನಂತರ ಪ್ರವರ್ಧಮಾನಕ್ಕೆ ಬಂದ ಓಬಣ್ಣನಾಯಕ ಈತನು ಗಡ್ಡ ಬಿಟ್ಟಿದ್ದರಿಂದ 'ಗಡ್ಡದ ಮದಕರಿನಾಯಕನೆಂದು' ಏಕನಾಥೇಶ್ವರಿ ಮೊಸರನ್ನ ನೈವೇದ್ಯ ಏರ್ಪಾಟು ಮಾಡಿದ್ದರಿಂದ 'ದಧ್ಯಾನ್ನದ ಓಬಣ್ಣ ನಾಯಕ'ನೆಂದು ಹೆಸರಾಗಿದ್ದ ಈತ ಮತ್ತಿ ತಿಮ್ಮಣ್ಣನಾಯಕನ ನಂತರ ಆಳಿದವನು. ಈತನಿಗೆ ಸಿದ್ಧರ ದರ್ಶನವಾಗಿ ಅವರಿಂದ ಕಬ್ಬಿಣವನ್ನು ಚಿನ್ನವನ್ನಾಗಿಸುವ ಸಿದ್ಧರಸ ಪ್ರಾಪ್ತವಾಗಿದ್ದಿತಂತೆ. ಈತ ಮಹಾಪರಾಕ್ರಮಿ, ಧೈರ್ಯಶಾಲಿ ಹಾಗೂ ದೈವ ಭಕ್ತನೂ ಆಗಿದ್ದನು. ಈತನ ಕಾಲದಲ್ಲೇ ಚಿತ್ರದುರ್ಗ ಸ್ವತಂತ್ರ ಪಾಳೆಯ ಪಟ್ಟವೆನಿಸಿತ್ತು. ೧೫೮೩-೧೬೦೨ರವರೆಗೆ ಆಳಿದ ಇವನಿಗೆ ಒಂದನೇ ಮದಕರಿನಾಯಕ ಎನ್ನುತ್ತಾರೆ. ಕಸ್ತೂರಿ ರಂಗಪ್ಪನಾಯಕ ಕ್ರಿ.ಶ. ೧೬೦೩-೧೬೫೨ರವರೆಗೆ ಆಳಿದ ಕಸ್ತೂರಿ ರಂಗಪ್ಪ ನಾಯಕರು ಗಡ್ಡದ ಮದಕರಿನಾಯಕನ ಮಗ ಈತನ ಕಾಲದಲ್ಲಿ ಬಸವಪಟ್ಟಣದ ಪಾಳೆಯಗಾರರೊಂದಿಗೆ ಆಗಾಗ ಯುದ್ಧ ನಡೆದವು. ಮಾಯಕೊಂಡ, ಜಗಳೂರು, ಸಂತೇಬೆನ್ನೂರು, ಅಣಜಿ ಮುಂತಾದವುಗಳನ್ನು ಗೆದ್ದು ತನ್ನ ಪಾಳೆಯ ಯುದ್ಧವಾಗಿ ಶರಣಾಗತನಾದ ಅಂಚಪ್ಪನಾಯಕನ ನಾಗತಿಯನ್ನು ಕಾಪಾಡಿದ ಹೆಗ್ಗಳಿಕೆಗೆ ಪಾತ್ರನಾಗಿದ್ದು, ಈತನ ಕಾಲದಲ್ಲಿ ರಾಜ್ಯದ ಆದಾಯ ಅತ್ಯಂತ ಅಭಿವೃದ್ಧಿ ಹೊಂದಿದ್ದಿತು ಎಂಬುದನ್ನು ಸ್ಥಳೀಯರ ಹೇಳಿಕೆಯ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಇಮ್ಮಡಿ ಮದಕರಿನಾಯಕ, ಕ್ರಿ.ಶ. ೧೬೫೨ರಲ್ಲಿ ಅಧಿಪತಿಯಾದ ಮದಕರಿ ನಾಯಕನು ಕಸ್ತೂರಿ ರಂಗಪ್ಪನಾಯಕನ ಮಗ ೧೬೭೪ರವರೆಗೆ ಅತ್ಯಂತ ದಕ್ಷತೆಯಿಂದ ಆಳಿ ಅನೇಕ

ಪ್ರದೇಶಗಳನ್ನು ವಶಪಡಿಸಿಕೊಂಡು ರಾಜ್ಯ ವಿಸ್ತರಿಸಿ ಆದಾಯವನ್ನು ೧೦ ಲಕ್ಷ ದುರ್ಗಿವರಹಗಳಿಗೇರಿಸಿದ್ದಾನೆಂದು ಹೇಳಲಾಗಿದೆ. 'ಇಮ್ಮಡಿ ಮದಕರಿ ನಾಯಕನಿಗೆ ಮಕ್ಕಳಿಲ್ಲದ್ದರಿಂದ ಓಬಣ್ಣನಾಯಕ ಎನ್ನುವನು ದತ್ತುಪುತ್ರನಾಗಿ ಪಟ್ಟಕ್ಕೆ ಬಂದನು. ಆದರೆ ಇವನು ದಕ್ಷ ಆಡಳಿತಗಾರನಾಗಿರದ್ದರಿಂದ ದುರ್ಗವು ಅಂತಃಕಲಹಗಳ ಸಂತೆಯಾಗಿ ದುರ್ಗದ ದಿಂಡಿನ ದಳವಾಯಿಗಳು ದಂಗೆಯೆದ್ದರು. ತಮ್ಮ ಕ್ರೂರತನದಿಂದ ರಕ್ತವನ್ನೇ ಹರಿಸಿ ಓಬಣ್ಣನಾಯಕನನ್ನು ಕೊಂದರು. ಈತನ ನಂತರ ದೊಣ್ಣೆರಂಗಪ್ಪ ನಾಯಕ ಎಂಬುವನು ಆಡಳಿತಕ್ಕೆ ಬಂದನು. ಈತನು ಪಾಳೆಯಗಾರರ ಸೋದರ ಸಂಬಂಧಿ. ಈತನ ಆಳ್ವಿಕೆಯು ಅತ್ಯಂತ ಹೀನಾಯವಾಗಿದ್ದು, ದಳವಾಯಿಗಳು ದಂಗೆಯೆದ್ದರು ಹಾಗೂ ಇವನನ್ನು ಕೊಂದು ಹಾಕಿದರಂತೆ. ಇವನ ನಂತರ ಚಿಕ್ಕಣ್ಣನಾಯಕ ಎಂಬುವನು ೧೨ ವರ್ಷಗಳ ಕಾಲ ಆಳ್ವಿಕೆ ಮಾಡಿದ್ದು ಈತನ ಕಾಲದಲ್ಲಿ ದುರ್ಗ ದಳವಾಯಿಗಳ ಹಿಡಿತದಲ್ಲಿ ತತ್ತರಿಸಿತ್ತು. ಈತ ಅತ್ಯಂತ ನಿಪುಣ ಹಾಗೂ ಧೈರ್ಯಶಾಲಿ, ಅಣಜಿಯಲ್ಲಿ ನಡೆದ ಯುದ್ಧದಲ್ಲಿ ಹರಪನಹಳ್ಳಿಯವರನ್ನು ಬಗ್ಗುಬಡಿದ. ದುರ್ಗದಿಂದ ದಾವಣಗೆರೆ ಬಳಿಯ ಬಾತಿ ಗುಡ್ಡದ ಬಳಿ ಹರಿಹರವನ್ನು ಮುತ್ತಿಗೆ ಹಾಕಿದ, ಮುಸ್ಲಿಂರನ್ನು ಯುದ್ಧ ತಂತ್ರದಿಂದ ಬಗ್ಗು ಬಡಿದು ಓಡಿಸಿದ, ಬಸವಪಟ್ಟಣ, ರಾಯದುರ್ಗ ಪಾಳೆಯಗಾರರೊಂದಿಗೆ ಸ್ನೇಹ ಸಂಪಾದಿಸಿದ ಈತನು ಒಮ್ಮೆ ವೀರಶೈವ ದೀಕ್ಷೆ ಪಡೆದು ಮತ್ತೆ ತನ್ನ ಮೂಲ ಮತಕ್ಕೆ ಹಿಂದಿರುಗಿದನು. ನಂತರ 'ಮುಮ್ಮಡಿ ಲಿಂಗಣ್ಣ ನಾಯಕ' ಈತನೂ ಮುತ್ಸದ್ಧಿ ಆಡಳಿತಗಾರನೇನಾಗಿರದೆ ಇದ್ದರಿಂದಾಗಿ ದಳವಾಯಿಗಳು ಈತನನ್ನು ಬಂಧಿಸಿ ಸೆರೆಯಲ್ಲಿಟ್ಟು ಅಧಿಕಾರದ ಸೂತ್ರವನ್ನು ಹಿಡಿದರು. ಈತ ಚಿಕ್ಕಣ್ಣ ನಾಯಕರ ಸಹೋದರನಾಗಿದ್ದನು. ನಂತರ ಬಿಚ್ಚುಗತ್ತಿ ಭರಮಣ್ಣ ನಾಯಕ ಕ್ರಿ.ಶ. ೧೬೮೯ರಲ್ಲಿ ಪಟ್ಟಕ್ಕೆ ಬಂದ ಭರಮಣ್ಣ ನಾಯಕನು ಜಗಳೂರು ತಾಲ್ಲೂಕಿನ ಬಿಳಿಚೋಡು ಗ್ರಾಮದವನು. ಮುಂದೆ ಈತನ ಸಂತತಿಗೆ ಬಿಳಿಚೋಡು ಸಂತತಿಯೆಂದೆ ಪ್ರಖ್ಯಾತವಾಗಿ, ಚಿತ್ರದುರ್ಗವು ಅತ್ಯಂತ ಅಪಾಯದ ಸ್ಥಿತಿಯಲ್ಲಿದ್ದಂತಹ ಪೂರ್ವ ಕಾಲದಲ್ಲಿ ಪಟ್ಟಕ್ಕೆ ಬಂದು ದಳವಾಯಿಗಳ ದೌರ್ಜನ್ಯವನ್ನು ದಕ್ಷತೆಯಿಂದ ಹತ್ತಿಕ್ಕಿ ದಕ್ಷ ಆಡಳಿತಗಾರನೆನಿಸಿದ. ಈತನ ಕಾಲದಲ್ಲಿ ದುರ್ಗಕ್ಕೆ ಸುತ್ತಲೂ ಶತ್ರುಗಳಿದ್ದು, ಹರಪನಹಳ್ಳಿ, ರಾಯದುರ್ಗ, ಬಸವಾಪಟ್ಟಣ, ಮೊಘಲರು, ಹೀಗೆ ಸುತ್ತಲೂ ಶತ್ರುಗಳ ಕೋಟೆಯೇ ಇದ್ದರೂ ಅತ್ಯಂತ ಧೈರ್ಯ, ದಕ್ಷತೆಯಿಂದ ರಾಜ್ಯವಾಳಿ ಅನೇಕ ಪ್ರಜಾಹಿತ ಕಾರ್ಯಗಳನ್ನು ಕೈಗೊಂಡು ದುರ್ಗದಲ್ಲಿ ಶಾಂತಿಯನ್ನು ನೆಲೆಸಲು ಕಾರಣನಾದನು. ಸದಾ ಯುದ್ಧ ಮಾಡುತ್ತಲೇ ಇರಬೇಕಾದುದರಿಂದ ಬಿಚ್ಚುಗತ್ತಿ ಭರಮಣ್ಣನೆಂದೇ ಇತಿಹಾಸದಲ್ಲಿ ಪ್ರಖ್ಯಾತನಾದನು. ಈತನು ಶ್ರೀ ಮುರುಘ ಶಾಂತವೀರಸ್ವಾಮಿಗಳ ಅಶೀರ್ವಾದಕ್ಕೆ ಪಾತ್ರನಾದವನಾಗಿದ್ದು ಶ್ರೀ ಸ್ವಾಮಿಗಳಿಗೆ ಬೆಟ್ಟದ ಮೇಲೆ ೩೦೦ ಅಂಕಣದ ಕಲ್ಮಠ ಹಾಗೂ ಬೆಟ್ಟದ ಕೆಳಗೊಂದು ಮಠ ಕಟ್ಟಿಸಿಕೊಟ್ಟ, ಭರಮ ಸಾಗರದ ಕೆರೆಯು ಸೇರಿದಂತೆ ಸುಮಾರು ೨೦ ಕೆರೆಗಳನ್ನು ಕಟ್ಟಿಸಿದನು ಹಾಗೂ ದುರ್ಗದ ಕೋಟೆಯಲ್ಲಿ ಸಿಹಿನೀರಿನ ಹೊಂಡ, ಸಂತೆ ಹೊಂಡ ಮುಂತಾದ ಹೊಂಡಗಳನ್ನು ಕಟ್ಟಿಸಿದನು. ಆದರೆ ಕ್ರಿ.ಶ. ೧೭೨೦-೨೧ರಲ್ಲಿ ಆದಿವಾಲದ ಲಡಾಯಿಯಲ್ಲಿ ಗೆದ್ದರೂ, ಗಾಯಗೊಂಡು ಕಾಲವಶವಾದನು.

ಇವನ ಸ್ಮರಣಾರ್ತ ಇಂದಿಗೂ ಈತ ಕಟ್ಟಿಸಿದ ದೇವ ಮಂದಿರಗಳು ಸಹ ಇವನ ಕೀರ್ತಿಗೆ ಸಾಕ್ಷಿಯಾಗಿವೆ.

"ಹಿರೇಮದಕರಿ ನಾಯಕನು ಬಿಚ್ಚುಗತ್ತಿ ಭರಮಣ್ಣ ನಾಯಕನ ಮಗ. ತನ್ನ ತಂದೆ ಭರಮಣ್ಣ ನಾಯಕನಂತೆಯೇ ಹಿರೇಮದಕರಿನಾಯಕನೂ ಹೋರಾಟಗಾರನಾಗಿದ್ದ. ಈತನ ಖ್ಯಾತಿಯೂ ಅಪಾರ. ಈತನಿಗೆ ಸಂಬಂಧಿಸಿದ 'ತಾರಾವಳಿ'ಯು ಈ ನಾಯಕನಿಗೆ "ಕ್ಷೀರಾಬ್ಧಿಯಲ್ಲಿ ಚಂದ್ರ ಪುಟ್ಟಿದಂದಲಿ ನಾರಿ ಸಿದ್ಧಾಂಬೆ ಭರಮೇಂದ್ರನುದರದಲಿ ಭೂರಮಣ ಮದಕರಿ ಜನಿಸಿ ಸುಖವಿರಲಿ ವರವಿತ್ತು ಸಿದ್ಧರಂಗಯ್ಯ ರಕ್ಷಿಸಲಿ" ಎಂದು ಹಾರೈಸಿದೆ; ಈ ನಾಯಕನಿಗೆ ಆನೆಗೊಂದಿಯವರ ಮಗಳು ಗಂಡೋಬವ್ವೆ ಅಥವಾ ಗಂಡಿಲ ಓಬವ್ವ ಮತ್ತು ಕನಕಗಿರಿಯವರ ಮಗಳು ವೆಂಕಟಾಚಲವ್ವರೊಡನೆ ವಿವಾಹವಾಯಿತು.

ಕ್ರಿಸ್ತಶಕ ೧೭೨೧ರಿಂದ ೧೭೪೮ರವರೆಗೆ ಈ ನಾಯಕನು ಮರಾಠರ ಮತ್ತು ಮೊಗಲರ ವಿರುದ್ಧ ಒಂದಲ್ಲ ಒಂದು ಯುದ್ಧದಲ್ಲಿ ನಿರತನಾಗಬೇಕಾಯಿತು. ದುರ್ಗದವರ ಕೈತಪ್ಪಿ ಹೋಗಿದ್ದ ಉಚ್ಚಂಗಿದುರ್ಗವನ್ನು ಕ್ರಿ.ಶ. ೧೭೨೭ರಲ್ಲಿ ಮತ್ತೆ ಆಕ್ರಮಿಸಿಕೊಳ್ಳಲೆತ್ನಿಸಿದರೂ ಸಾಧ್ಯವಾಗಲಿಲ್ಲ. ಹಾಲಗವಾಡಿಯವರು ಹರ್ತಿಕೋಟೆಯನ್ನು ಹಿಡಿದಾಗ ಒಪ್ಪಂದದ ನಂತರ ಅದು ಮತ್ತೆ ದುರ್ಗದವರಿಗೆ ಬಂದಿತು. ಕ್ರಿ.ಶ. ೧೭೨೮ರಲ್ಲಿ ರತ್ನಗಿರಿ ಸೀಮೆಯ ವೇಣುಕಲ್ಲು, ಇಕ್ಕನೂರುಗಳನ್ನೂ ಕ್ರಿ.ಶ. ೧೭೩೩ರಲ್ಲಿ ಗುಡೇಕೋಟೆ ಮತ್ತು ಅದಕ್ಕೆ ಸೇರಿದ ಕೆಲವು ಊರುಗಳನ್ನು ತೆಗೆದು ಕೊಳ್ಳಲಾಯಿತು. ಕ್ರಿ.ಶ. ೧೭೩೬ ಮತ್ತು ೧೭೩೭ರಲ್ಲಿ ಕೊಡಗನೂರು ಮತ್ತು ಹೊಳಲು ಕೋಟೆಗಳನ್ನು ಮುತ್ತಿದ ಸಿದ್ಧೋಜಿ ಮತ್ತು ಹಾವನೂರವರುಗಳನ್ನೂ ಕ್ರಿ.ಶ. ೧೭೩೮ರಲ್ಲಿ ಬಿದನೂರು ಮತ್ತು ಹರಪನಹಳ್ಳಿಯವರು ಮುತ್ತಿದ ಹೊಳಲು ಮತ್ತು ಮೈಲಾರ ಕೋಟೆಗಳನ್ನೂ ದುರ್ಗದವರು ಹೋರಾಡಿ ಬಿಡಿಸಿಕೊಂಡರು. ಚಿಂತನಕಲ್ಲಿನ ದೊರೆಯಾದ (ಹಿರೇ) ಮದಕರಿ ನಾಯಕನು ಹರಪನಹಳ್ಳಿ ಅರಸನನ್ನು ಸೋಲಿಸಿ, ಅವನಿಗೆ ನೆಲೆಯೂರಲು ಅವಕಾಶ ಕೊಡದೆ, ಅವನ ರಾಜ್ಯವನ್ನು ಆಕ್ರಮಿಸಿಕೊಂಡು ಯುದ್ಧರಂಗದಲ್ಲಿ ಎದುರಾಗಿ ಹೆಚ್ಚಿನ ಪರಾಕ್ರಮದಿಂದ, ಉಪಟಳವನ್ನು ಕೊಡುತ್ತಿದ್ದನೆಂದು ಲಿಂಗಣ್ಣ ಕವಿಯು 'ಕೆಳದಿನೃಪ ವಿಜಯಂ'ನಲ್ಲಿ ಹೇಳಿರುವ ಮಾತು ಇಲ್ಲಿ ಅಕ್ಷರಶಃ ಅನ್ವಯಿಸುತ್ತದೆನ್ನಬಹುದು.

ಹಿರೇಮದಕರಿನಾಯಕನು ಕ್ರಿ.ಶ. ೧೭೪೩ರಲ್ಲಿ ಹರಪನಹಳ್ಳಿಯವರಿಂದ ಬೆಳನಡು ಎಂಬ ಗ್ರಾಮವನ್ನು ವಶಪಡಿಸಿಕೊಂಡ. ಆದರೆ ದುರ್ಗದವರ ಅಟ್ಟ ಸಹಿಸಿಕೊಳ್ಳದ ಈತನ ವಿರೋಧಿಗಳಾದವರು ತಮ್ಮಲ್ಲೇ ಹೊಂದಾಣಿಕೆ ಮಾಡಿಕೊಂಡ ಬಿದನೂರು, ಆನೆಗೊಂದಿ, ರಾಯದುರ್ಗ ಮತ್ತು ಹರಪನಹಳ್ಳಿಯವರು ದುರ್ಗದವರ ವಿರುದ್ಧ ತಿರುಗಿ ಬಿದ್ದು, ದುರ್ಗದ ಗಡಿಯ ರಾಮಗಿರಿದುರ್ಗ(ಹೊಳೆಲ್ಕೆರೆ ತಾಲ್ಲೂಕು)ವನ್ನು ಹಿಡಿದರು. ಹಿರೇಮದಕರಿಯು ಈ ಮುತ್ತಿಗೆಯನ್ನು ಬಿಡಿಸಲು ವೀರಾವೇಶದಿಂದ ಹೋರಾಡಿದುದನ್ನು ವಂಶಾವಳಿಗಳಲ್ಲಿ ವರ್ಣಿಸಲಾಗಿದೆ. ಈ ಕಾಳಗದಲ್ಲಿ ಈ ನಾಯಕನಿಗೆ ಗಾಯಗಳೂ ಆದವು. ದಿನಾಂಕ ೮.೮.೧೭೪೪ರಲ್ಲಿ ಈ

ಅರಸನು ವಿರೋಧಿಗಳನ್ನು ಹೊಡೆದೋಡಿಸಿ ರಾಮಗಿರಿಯನ್ನು ಮರು ಆಕ್ರಮಿಸಿಕೊಂಡ. ತನ್ನ ಜಯಸೂಚಕವಾಗಿ ನಾಯಕನು ಚಿನ್ನಗಹಳೆ ಹಿಡಿಸಿಕೊಂಡು ರಾಮಗಿರಿಕೋಟೆಯನ್ನು ಪ್ರವೇಶಿಸಿದನಂತೆ. ಆಗ ವಶಪಡಿಸಿಕೊಂಡ ವಸ್ತುಗಳಲ್ಲಿ ಕಬ್ಬಿಣದ ಫಿರಂಗಿಗಳು ಇದ್ದು, ಅವುಗಳಲ್ಲಿ ಒಂದರ ಮೇಲೆ ಈ ಯುದ್ಧಕ್ಕೆ ಸಂಬಂಧಿಸಿದ ವೃತ್ತಾಂತವನ್ನು ಕಂಡರಿಸುವುದರೊಡನೆ ಅದನ್ನು ಚಿತ್ರದುರ್ಗಕ್ಕೆ ತಂದು (ಬಾಳೆಕಾಯಿ?) ಸಿದ್ಧೇಶ್ವರಸ್ವಾಮಿಯ ಸೇವೆಗೆ ಒಪ್ಪಿಸಲಾಯಿತು(ಗವಿಯೊಂದರಲ್ಲಿ ಅಡಗಿಸಲ್ಪಟ್ಟಿದ್ದ ಈ ಶಾಸನೋಕ್ತ ಫಿರಂಗಿಯ ಕೆಲವು ವರುಷಗಳ ಹಿಂದೆ ಶೋಧಿತವಾಯಿತು). ಕ್ರಿ.ಶ. ೧೭೪೪ ರಿಂದ ೧೭೪೮ರವರೆಗೆ ದುರ್ಗದ ಸೇನೆಯು ರಾಯದುರ್ಗ ಸೀಮೆಯ ಮೇಲೆ ಜಗಳ ಮಾಡಿ ವಶಪಡಿಸಿಕೊಂಡ ಗ್ರಾಮಗಳಿಗೆ ಪ್ರತಿನಾಮಗಳನ್ನು ನೀಡಲಾಯಿತು. ಕ್ರಿ.ಶ. ೧೭೪೮ರಲ್ಲಿ ಬಿದನೂರು, ಸವಣೂರು ಮತ್ತು ಹರಪನಹಳ್ಳಿಯವರು ಒಂದುಗೂಡಿ ಹದಡಿಕೋಟೆ, ಹೊನ್ನೂರು, ಹೊಳಲು ಮತ್ತು ಮೈಲಾರಗಳನ್ನು ದುರ್ಗದವರಿಂದ ವಶಪಡಿಸಿಕೊಂಡರು.

ಈ ಕಾಳಗಗಳ ಹಿನ್ನೆಲೆಯಲ್ಲಿ ಚಿತ್ರದುರ್ಗ ಮತ್ತು ನೆರೆಯ ಸಂಸ್ಥಾನಿಕರ ಮಧ್ಯೆ ವಿರಸವು ಹೆಚ್ಚುತ್ತಾ ಹೋಯಿತು. ಹಿರೇಮದಕರಿನಾಯಕನು ಕ್ರಿ.ಶ. ೧೭೪೮-೪೯ರಲ್ಲಿ ಮಾಯಕೊಂಡದ ಬಳಿ ನಡೆದ ಕದನದಲ್ಲಿ ಬಿದನೂರು, ಹರಪನಹಳ್ಳಿ, ರಾಯದುರ್ಗ, ಆನೆಗೊಂದಿ ಮತ್ತು ಸವಣೂರು ಸಂಸ್ಥಾನಿಕರ ವಿರುದ್ಧ ಭೀಕರ ಹೋರಾಟ ನಡೆಸಲು ನಿರ್ಧರಿಸಿದ. ಇದು ಚಿತ್ರದುರ್ಗ ಚರಿತ್ರೆಯಲ್ಲಿ ಪ್ರಸಿದ್ಧಿ ಪಡೆದ ಯುದ್ಧವಾಗಿದ್ದು, ಸಮಕಾಲೀನ ದಾಖಲೆಗಳು ಇದರ ಪೂರ್ಣ ವಿವರಗಳನ್ನು ಸಂಗ್ರಹಿಸಿವೆ. ಜನಪದ ಸಾಹಿತ್ಯವೂ ವಿಪುಲವಾಗಿ ಸೃಷ್ಟಿಯಾಗಿದೆ. ಈ ಯುದ್ಧ ನಡೆಸಲೋಸುಗ ಹಿರೇಮದಕರಿಯು ಗುತ್ತಿಯ ಸಿದ್ಧೋಜಿಯ ನೆರವನ್ನು ಯಾಚಿಸಿ ಮೇಲುಕೋಟೆಗೆ ಹೋಗಿದ್ದು, ನಂತರ ಅವನು ೨೦,೨೨೨ ದಂಡಿನೊಡನೆ ಅಣಜಿಯ ಬಳಿ ಹೋಗಿ ಇಳಿದುಕೊಂಡು ನೀರ್ಥಡಿಗೆ ಹೋಗಿ ಇಲ್ಲಿ ತನ್ನ ನಾಗತಿಯರನ್ನೂ ಕುಮಾರ-ಕುಮಾರಿಯರನ್ನೂ ಇಳಿಸಿ, ಇಲ್ಲಿಂದ ಹೊರಟು ಮಾಯಕೊಂಡದ ಬಳಿ ಶತ್ರುಸೇನೆಯನ್ನು ಎದುರಿಸಿದ. ಈ ಕಾಳಗದ ಸಿದ್ಧತೆಯು ಕ್ರಿ.ಶ. ೧೭೪೮ ಡಿಸೆಂಬರ್‌ನಲ್ಲಿ ಆರಂಭಗೊಂಡು ಕ್ರಿ.ಶ. ೧೭೪೯ರ ಮಾರ್ಚ್ ೩ ರಿಂದ ೪ರವರೆಗೆ ನಡೆಯಿತೆಂದು ದಾಖಲೆಗಳು ತಿಳಿಸುತ್ತವೆ.

ಹಿರೇಮದಕರಿನಾಯಕನ ಅಷ್ಟಮೂಲೆಯ ಪಾಲಕಿಯನ್ನು ಸೋಮಶೇಖರನಾಯಕನು ಕೊಟ್ಟೂರು ಬಸವೇಶ್ವರನ ದೇವಾಲಯಕ್ಕೆ ಕಾಣಿಕೆಯಾಗಿತ್ತನೆಂದೂ ಹೇಳಲಾಗಿದೆ. ಈತನೂ ಸಹ ತಂದೆಯಂತೆ ಸದಾ ಯುದ್ಧದಲ್ಲಿ ನಿರತನಾಗಿರಬೇಕಿದ್ದಿತು. ಹರಪನಹಳ್ಳಿ, ಬಿದನೂರು, ಸವಣೂರು, ಸಂತೇಬೆನ್ನೂರು ಮುಂತಾದವರೊಂದಿಗೆ ಯುದ್ಧ ಮಾಡುತ್ತಲೇ ಇದ್ದನು. ಅತ್ಯಂತ ಶೂರನಾಗಿದ್ದು, ಎಲ್ಲಾ ಯುದ್ಧಗಳಲ್ಲಿ ಗೆಲ್ಲುತ್ತಾ, ಈಶಾನ್ಯದಲ್ಲಿ ರಾಜ್ಯವನ್ನು ವಿಸ್ತರಿಸಿದ್ದ. ಮೈಸೂರು ಅರಸರು, ಮರಾಠಿಗರು, ಸಿರಾದ ಸುಬೇದಾರರು ಇವನ ಶೌರ್ಯಕ್ಕೆ ಮೆಚ್ಚಿದ್ದರು. ಈತನು ದಾವಣಗೆರೆ ತಾಲ್ಲೂಕಿನ ಮಾಯಾಕೊಂಡದ ಕೋಟೆಯನ್ನು ಹರಪನಹಳ್ಳಿಯ ಪಾಳೆಯಗಾರ ಸೋಮಶೇಖರ ನಾಯಕ ಹಿಡಿದಾಗ ಮಾಯಕೊಂಡದ ಮೈದಾನದಲ್ಲಿ ಇವರಿಬ್ಬರಿಗೂ ಘೋರ

ಕದನವೇ ನಡೆದು ಈ ಯುದ್ಧದಲ್ಲಿಯೆ ವೀರ ಮರಣವನ್ನಪ್ಪಿದನು. ಇಂದಿಗೂ ಸಹ ಈತನ ಸಮಾಧಿಯನ್ನು ಮಾಯಾಕೊಂಡದಲ್ಲಿ ಕಾಣಬಹುದಾಗಿದೆ. ಈತನ ಬಗ್ಗೆ ಹೇಳುವುದಾದರೆ ಚಿತ್ರದುರ್ಗದ ಪಾಳೆಯಗಾರರಲ್ಲಿ ದಕ್ಷ ಆಡಳಿತಗಾರನೆನಿಸಿದ್ದ. ಈತ ಗುಡಿಕೋಟೆ, ರಾಯದುರ್ಗದ ಪಾಳೆಯಗಾರರನ್ನು ಸೋಲಿಸಿ ಬಳ್ಳಾರಿ, ರಾಯದುರ್ಗ, ಶಿವಮೊಗ್ಗ ಜಿಲ್ಲೆಗಳನ್ನು ಸೇರಿದಂತೆ ಒಟ್ಟು ೬೦ ಸೀಮೆಗಳ ಮೇಲೆ ಅಧಿಪತ್ಯ ಸ್ಥಾಪಿಸಿದ್ದ. ಸುಮಾರು ೨೦೦ ಚ.ಮೈ.ಗಳಷ್ಟು ಭೂಮಿ ಇವನ ಒಡೆತನದಲ್ಲಿದ್ದಿತು. ಹಿರೇಮದಕರಿ ನಾಯಕನ ನಂತರ ಇಮ್ಮಡಿ ಕಸ್ತೂರಿ ರಂಗಪ್ಪ ನಾಯಕನೆಂಬುವನು ಅಧಿಕಾರಕ್ಕೆ ಬಂದನು. ಇವನು ಮಾಯಕೊಂಡದ ಲಡಾಯಿಯಲ್ಲಿ ತಂದೆ ಮರಣವನ್ನಪ್ಪಿದ್ದಾಗ ಕ್ರಿಶ. ೧೭೪೮ರಲ್ಲಿ ಚಿತ್ರದುರ್ಗದ ಪಾಳೆಯಗಾರನಾಗಿ ಮುಂದುವರೆದು ಮುಂದೆ ಮರಾಠಿ ಮುರಾರಿರಾಯನ ಸಹಾಯದೊಂದಿಗೆ ಹರಪನಹಳ್ಳಿಯವರನ್ನು ಸೋಲಿಸಿ ಮಾಯಕೊಂಡವನ್ನು ಮತ್ತೆ ಗೆದ್ದು, ತಂದೆಗೆ ತಕ್ಕ ಮಗನೆನ್ನಿಸಿದ.

ರಾಜಾವೀರ ಮದಕರಿನಾಯಕ

ಈತನ ಕಾಲದಲ್ಲಿಯೆ ಚಿತ್ರದುರ್ಗದ ವೈಭವವು ವಿಜೃಂಭಣೆಯಿಂದ ಮೆರೆಯುವಂತಾದದ್ದು. ಈತನ ಪಟ್ಟದರಸಿ ಗಂಡೋಬಳಮ್ಮ ನಾಗತಿಯು ಹಿರೇಮದಕರಿ ನಾಯಕನ ಸಹೋದರನಾದ ಜಾನಕಲ್ಲಿನ ತೊದಲು ಭರಮಪ್ಪನಾಯಕನ ಮಗನಾದ ೧೨ ವರ್ಷದ ವೀರಮದಕರಿಯನ್ನು ೧೭೫೪ರಲ್ಲಿ ಪಟ್ಟಕ್ಕೆ ತಂದಳು. ಗಂಡೋಬಳಮ್ಮ ನಾಗತಿಗೆ ಸ್ವಪ್ನದಲ್ಲಿ ಹಿರೇಮದಕರಿ ನಾಯಕನು ಬಂದು ಭರಮಣ್ಣ ನಾಯಕನ ಮಗನಾಗಿ ಪುನಃ ಜನಿಸಿರುವುದಾಗಿ ಹಾಗೂ ಅವನನ್ನೇ ಪಟ್ಟಕ್ಕೆ ತರಬೇಕು ಎಂಬುದಾಗಿ ಹೇಳಿದನಂತೆ. ಆಗ ನಾಗತಿಯು ದುರ್ಗದ ಜನತೆಯನ್ನು ಸಭೆ ಸೇರಿಸಿ ವೀರಮದಕರಿ ನಾಯಕನನ್ನು ಜಾನಕಲ್ಲಿನಿಂದ ಕರೆತಂದು ಪಟ್ಟಕಟ್ಟಿಸಿದಳಂತೆ. ರಾಜಾವೀರ ಮದಕರಿನಾಯಕನು ತನ್ನ ಆಳ್ವಿಕೆಯ ಅವಧಿಯಲ್ಲಿ ಕೈಗೊಂಡ ಕೆಲವು ರಾಜಕೀಯ ನಿರ್ಣಯಗಳೂ ಚಿತ್ರದುರ್ಗದ ಕೀರ್ತಿಯನ್ನು ದಕ್ಷಿಣ ಭಾರತದಲ್ಲೆಲ್ಲ ಹರಡಲು ಕಾರಣವೆನಿಸಿದವು. ಸುತ್ತಮುತ್ತಲ ಸಂಸ್ಥಾನಗಳವರೊಂದಿಗೆ ಮಾತ್ರವಲ್ಲದೆ, ಮುಖ್ಯವಾಗಿ ಶ್ರೀರಂಗಪಟ್ಟಣದ ನವಾಬರು ಮತ್ತು ಮರಾಠಾ ಪೇಶ್ವೆಗಳೊಡನೆ ಈ ನಾಯಕನು ಇಟ್ಟುಕೊಂಡಿದ್ದ ರಾಜಕೀಯ ಭಾಂದವ್ಯ ಮತ್ತು ನಡೆಸಿದ ಹೋರಾಟಗಳು, ರಾಜಕೀಯ ದೂರದೃಷ್ಟಿ ಹಾಗೂ ಶೌರ್ಯ-ಸಾಹಸಗಳನ್ನು ಪ್ರತಿನಿಧಿಸುತ್ತವೆ. ಈ ದೊರೆಯ ಆಡಳಿತದ ಆರಂಭದಲ್ಲಿ ರಾಯದುರ್ಗದವರು ಹರಪನಹಳ್ಳಿಯವರ ಸಹಾಯ ಪಡೆದು, ದುರ್ಗದ ಗಡಿಗಳ ಮೇಲೆ ದಾಳಿ ಮಾಡಿದಾಗ, ದುರ್ಗದ ಸೈನ್ಯವು ಎರಡು ಕೆರೆ ಗ್ರಾಮದ ಬಳಿ ರಾಯದುರ್ಗದವರನ್ನು ಎದುರಿಸಿತಲ್ಲದೆ, ಅವರ ಸೀಮೆಗೆ ಸೇರಿದ ಕೋನಾಪುರ, ಕೊಡಗನೂರುಗಳನ್ನು ವಶಪಡಿಸಿಕೊಂಡಿತು. ರಾಯದುರ್ಗಪೇಟೆಯನ್ನು ಹೊಕ್ಕು ಅದನ್ನು ವಶಕ್ಕೆ ತೆಗೆದುಕೊಂಡರು. ಈ ದಿಗ್ವಿಜಯ ಸಹಿಸದ ಸುತ್ತಮುತ್ತಲಿನ ಪಾಳೆಯಗಾರರು ಒಗ್ಗಟ್ಟಿನಿಂದ ಯುದ್ಧ ಮಾಡಲು ಮುಂದಾದರು. ಕ್ರಿಶ. ೧೭೬೦ರಲ್ಲಿ

ಹರಪನಹಳ್ಳಿಯ ಸೋಮಶೇಖರನಾಯಕ, ಸವಣೂರು ಹಕೀಂಖಾನ್, ರಾಯದುರ್ಗದ ಕೃಷ್ಣಪ್ಪನಾಯಕ ಮತ್ತು ಬಿದನೂರಿನವರಿಂದ ಪ್ರೇರೇಪಿಸಲ್ಪಟ್ಟು ಇವರೆಲ್ಲರು ಭಾರೀ ಫೌಜಿನೊಡನೆ ದುರ್ಗದವರ ತಲಾಯಲಹಳ್ಳಿಯನ್ನು ಆಕ್ರಮಿಸಲು ಪ್ರಯತ್ನಿಸಿದಲ್ಲಿ, ಮದಕರಿನಾಯಕನು ಕಣ್ವಕುಪ್ಪೆಗೆ (ಜಗಲೂರು ತಾಲ್ಲೂಕು) ಹೋಗಿ ಮೊಕ್ಕಾಂ ಮಾಡಿ ಆ ನಂತರ ಶತ್ರುಗಳ ಮರುಹೊಡೆತ ತಾಳಲಾರದೆ ಹಿಂದಿರುಗಬೇಕಾಯಿತು. ಕ್ರಿ.ಶ. ೧೭೬೧ರಲ್ಲಿ ಜರಿಮಲೆ ಮತ್ತು ತರೀಕೆರೆಯವರ ಹಾವಳಿಯನ್ನು ಅಡಗಿಸಿದ.

ಮೈಸೂರು ಚರಿತ್ರೆಯಲ್ಲಿ ಹೆಸರಾದ ಶ್ರೀರಂಗಪಟ್ಟಣದ ನವಾಬ ಹೈದರ್‌ಆಲಿಖಾನನು ಕರ್ನಾಟಕದಲ್ಲಿ ಎಲ್ಲ ಸಂಸ್ಥಾನಿಕರನ್ನೂ ಹತ್ತಿಕ್ಕುವ ಪ್ರಯತ್ನದಲ್ಲಿ ತನ್ನ ವಶಕ್ಕೆ ತೆಗೆದುಕೊಂಡ ಕೊನೆಯ ಸಂಸ್ಥಾನವೆಂದರೆ ಚಿತ್ರದುರ್ಗ ಮಾತ್ರ. ಆದರೆ ಇದಕ್ಕೂ ಮುನ್ನ ರಾಜಾ ಮದಕರಿನಾಯಕನಿಂದ ಹೈದರ್‌ಅಲಿಯು ಪಡೆದುಕೊಂಡ ರಾಜಕೀಯ ಲಾಭ ಅಪಾರ. ಹೈದರ್‌ಆಲಿಯ ಉದ್ದೇಶವನ್ನು ಅರಿತಿದ್ದ ಮದಕರಿಯೂ ತನ್ನ ನೆರವನ್ನು ಆತನಿಗೆ ನೀಡುತ್ತಿದ್ದಂತೆಯೆ ಇನ್ನೊಂದೆಡೆ ಮರಾಠರ ಸಖ್ಯವನ್ನು ಬೆಳೆಸಿ ತನ್ನ ಭದ್ರತೆಗೆ ಸಂಚಕಾರ ಒದಗದಂತೆ ಜಾಗ್ರತಿ ವಹಿಸಲೆತ್ನಿಸುತ್ತಿದ್ದ. ಕ್ರಿ.ಶ. ೧೭೬೩ರಲ್ಲಿ ಮದಕರಿಯು ಹೈದರ್‌ಆಲಿಯ ಪರವಾಗಿ ಬಿದನೂರಿನ ಮೂರನೆಯ ಸೋಮಶೇಖರನಾಯಕನ ವಿರುದ್ಧ ಹೋರಾಡಿ ಬಿದನೂರನ್ನು ಹೈದರ್‌ಆಲಿಗೆ ವಶಮಾಡಿಕೊಟ್ಟ. ಅದೇ ವರ್ಷದಲ್ಲಿ ಬಸವಪಟ್ಟಣವನ್ನು ಹಾದು ಹೊನ್ನಾಳಿಯ ಹೊಳೆಯನ್ನು ಹರಿಗೋಲಿನ ಮೇಲೆ ದಾಟಿ ಹೋಗಿ ಬಂಕಾಪುರದ ಬಳಿ ಬೀಡುಬಿಟ್ಟಿದ್ದ ಹೈದರ್‌ಆಲಿಯನ್ನು ಕಂಡು, ಬಂಕಾಪುರದ ಕೋಟೆಯನ್ನು ಹೋರಾಟದಲ್ಲಿ ಹಿಡಿದು ಅದನ್ನು ಹೈದರ್‌ಅಲಿಗೆ ಬಿಟ್ಟು ಕೊಟ್ಟ. ಕ್ರಿ.ಶ. ೧೭೬೪ರಲ್ಲಿ ಹೈದರ್‌ಆಲಿ ಮತ್ತು ಮರಾಠ ಪೇಶ್ವೆ ಮಾಧವರಾಯರಿಗೆ ಕದನ ಏರ್ಪಟ್ಟಾಗ ಮದಕರಿಯು ನವಾಬನಿಗೆ ಸಹಾಯ ಮಾಡಿ ಯುದ್ಧದಲ್ಲಿ ಗೆಲ್ಲುವಂತೆ ಮಾಡಿದ. ಹಾಗೆಯೇ ನಿಡುಗಲ್ಲು ಹಾಗೂ ನಿಜಗಲ್ಲು ದುರ್ಗಗಳಲ್ಲಿ ಠಾಣೆ ಹಾಕಿಸಿಕೊಟ್ಟ.ಮರಾಠರೊಡನೆಯೂ ಸಖ್ಯದಿಂದ ಇದ್ದ ಮದಕರಿನಾಯಕನು ಪೇಶ್ವೆ ಮಾಧವರಾಯನಿಗೂ ತಮ್ಮ ಸಹಾಯದ ಹಸ್ತ ಚಾಚಿದ. ಇದರಿಂದಾಗಿ ಹೈದರ್‌ಆಲಿಯು ಮರಾಠರ ಹಾವಳಿಯನ್ನು ಸಹಿಸಬೇಕಾಯಿತು. ಮದಕರಿಯ ಭಾರೀ ದಂಡಿನ ಸಹಾಯದಿಂದ ಮಾಧವರಾಯನು ತಮ್ಮಿಂದ ಸಾಧಿಸಲು ಅಸಾಧ್ಯವೆನಿಸಿದ್ದ ಹಾಗೂ ಹೈದರ್‌ಆಲಿಗೆ ಸೇರಿದ್ದ ಸಾವನದುರ್ಗ, ಹುತ್ತರಿದುರ್ಗ, ನುಗ್ಗೆಹಳ್ಳಿ, ಹಾಗಲವಾಡಿ, ಬಾಣಾವಾರ ಮೊದಲಾದ ಕೋಟೆಗಳನ್ನು ಆಕ್ರಮಿಸಿದನಲ್ಲದೆ, ಕ್ರಿ.ಶ. ೧೭೬೭ರಲ್ಲಿ ತುರುವೇಕೆರೆ, ಬೇಲ್ಲೂರು, ಕೋಲಾರ, ಮುಳಬಾಗಿಲು, ದೇವರಾಯನದುರ್ಗ, ಮಂಜರಾಬಾದ್, ದಾರಿನಾಯಕನಪಾಳ್ಯ ಮತ್ತು ಚಿಕ್ಕ ಬಳ್ಳಾಪುರಗಳಿಗೂ ಠಾಣೆ ಹಾಕಿದ ಮರಾಠರು ಮೂರು ಸಾರಿ ಪ್ರಯತ್ನಿಸಿದರೂ ಆಕ್ರಮಿಸಿಕೊಳ್ಳಲು ಸಾಧ್ಯವಾಗದಿದ್ದ, ನಿಜಗಲ್ಲು ಕೋಟೆಯು ಮದಕರಿಯ ಸಹಾಯದಿಂದ ಸುಲಭವಾಗಿ ಅವರ ವಶಕ್ಕೆ ಬಂದಿತು. ಆನವಟ್ಟಿ ಕೋಟೆಯನ್ನು ಹಿಡಿಯುವಲ್ಲಿ

ದುರ್ಗದ ಸೇನೆಯು ಮರಾಠರ ಪರವಾಗಿ ವಿಶೇಷ ಶೌರ್ಯವನ್ನು ಪ್ರದರ್ಶಿಸಿತು. ಇವೆಲ್ಲವುಗಳಿಂದ ಹೈದರ್‌ಆಲಿಯು ತನ್ನ ಅಂತರಂಗದಲ್ಲಿ ಮದಕರಿನಾಯಕನನ್ನು ದ್ವೇಷಿಸತೊಡಗಿದುದು ಸ್ಪಷ್ಟ.

ಚಿತ್ರದುರ್ಗದ ವಿರುದ್ಧ ಹೈದರ್‌ಆಲಿಯು ಒಟ್ಟು ನಾಲ್ಕು ಬಾರಿ ಯುದ್ಧವನ್ನು ಹೂಡಿದ. ಚಿತ್ರದುರ್ಗ ವಂಶಾವಳಿಗಳಲ್ಲಿಯೂ ಈ ಬಗೆಗೆ ಸೂಚನೆ ದೊರಕುತ್ತದೆ. ಕ್ರಿ.ಶ. ೧೭೬೨ರಲ್ಲಿ ಹೈದರ್‌ಆಲಿಯು ಮೊದಲ ಬಾರಿಗೆ ಚಿತ್ರದುರ್ಗದ ವಿರುದ್ಧ ದಂಡೆತ್ತಿ ಬಂದ ಕ್ರಿ.ಶ. ೧೭೭೪ರ ಮಾರ್ಚ್‌ನಲ್ಲಿ ಎರಡನೆಯ ಕ್ರಿ.ಶ. ೧೭೭೭ರ ಜೂನ್‌ನಲ್ಲಿ, ಮೂರನೆಯ ಹಾಗೂ ಕ್ರಿ.ಶ. ೧೭೭೯ರ ಫೆಬ್ರವರಿಯಲ್ಲಿ ಕೊನೆಯ ಬಾರಿಗೆ ದುರ್ಗದ ಮೇಲೆ ಮುತ್ತಿಗೆ ಹಾಕಿದನಲ್ಲದೆ, ನಾಲ್ಕು ತಿಂಗಳುಗಳ ಕಾಲ ಸತತ ಹೋರಾಟ ಕೈಗೊಂಡ. ಈ ಕೊನೆಯ ಕದನ ಕುರಿತು 'ಚಿತ್ರದುರ್ಗದ ಬಖೈರು' ವಿವರ ನೀಡುತ್ತದೆ. ಹೈದರ್ ಅಲಿಯೆ ಆಗಲಿ ಮರಾಠರೆ ಆಗಲಿ ರಾಜಾವೀರ ಮದಕರಿನಾಯಕನಿಂದ ಪಡೆದ ಸಹಾಯಕ್ಕಾದರೂ ಸುಮ್ಮನಿರಬಹುದಿತ್ತು. ಆದರೆ ಈ ಇಬ್ಬರು ದ್ರೋಹ ಬಗೆದರು. ಕನ್ನಡನಾಡಿನ ಅಪ್ಪಟ ವೀರರಾಜಾ ಮರಣವನ್ನಪ್ಪ ಬೇಕಾಯಿತು.[೩]

೩.೨. ಬಯಲುಬಂಡೆ, ರೇಖಾಕೃತಿಗಳ ಅಧ್ಯಯನಗಳು

ಬೃಹತ್‌ಗುಂಡುಗಳಿಂದ (ಕಣಶಿಲೆಗಳಿಂದ) ಆವೃತಗೊಂಡು ವಿಸ್ತಾರವಾಗಿ ಹರಡಿರುವ ಚಿತ್ರದುರ್ಗಬೆಟ್ಟ ಪರಿಸರವನ್ನು ಭೂವೈಜ್ಞಾನಿಕ ಮತ್ತು ಪುರಾತಾತ್ವಿಕ ಸಂಶೋಧನೆಗಳಿಂದ ಅಧ್ಯಯನ ಮಾಡುವ ಪ್ರಯತ್ನ ೧೯ನೇ ಶತಮಾನದಿಂದಲೆ ಆರಂಭಗೊಂಡಿತು. ಆದರೆ ಚಿತ್ರದುರ್ಗ ಬೆಟ್ಟ ಪರಿಸರದ ಚಂದ್ರವಳ್ಳಿ ಭೂಶೋಧನೆಯನ್ನು ಹೊರತುಪಡಿಸಿದರೆ, ಈ ವಿಜ್ಞಾನಕ್ಕೆ ಸಂಬಂಧಿಸಿದ ಗವಿವರ್ಣಚಿತ್ರಗಳು ಮತ್ತು ಬಯಲುಬಂಡೆ ರೇಖಾಕೃತಿಗಳನ್ನು ಕುರಿತು ಈಚಿನವರೆಗೆ ವ್ಯವಸ್ಥಿತ ಅಧ್ಯಯನ ನಡೆದಿರಲಿಲ್ಲ. ಲಕ್ಷ್ಮಣ್ ತೆಲಗಾವಿಯವರ ಅಧ್ಯಯನವು ಇಂತಹ ಕೊರತೆಯನ್ನು ನೀಗಿಸುವುದರೊಡನೆ, ಪುರಾತತ್ವ, ಇತಿಹಾಸ, ಜಾನಪದ, ಮಾನವಶಾಸ್ತ್ರ ಹಾಗೂ ಕಲೆ ಮತ್ತು ಸಂಸ್ಕೃತಿ ಕ್ಷೇತ್ರಗಳಿಗೆ ಉಪಯೋಗವಾಗುವಂತಹ ಮಾಹಿತಿಯನ್ನು ಒಟ್ಟುಗೂಡಿಸುವ ಪ್ರಯತ್ನದಲ್ಲಿ ಸಫಲತೆ ಕಂಡಿದೆಯೆನ್ನಬಹುದು. ತಾಂತ್ರಿಕವಾಗಿ, ಬಯಲುಬಂಡೆಗಳ ಮೇಲಿನ ರೇಖಾಚಿತ್ರ ಪ್ರಕಾರಗಳಲ್ಲಿ (Petoogorms) ಸಾಮಾನ್ಯವಾಗಿ ಕಂಡುಬರುವ ಕೋರೆ ಚಿತ್ರಗಳು (Petooglyphs), ರೇಖಾಚಿತ್ರಗಳು (Petrographs) ಹಾಗೂ ಚಿತ್ರ ಸಂಕೇತ ಅಥವಾ ಚಿತ್ರಲಿಪಿ ಅಥವಾ ಬರವಣಿಗೆ ಗಳನ್ನು (Hieroglyphs or Pictrographs) ಕ್ಷೇತ್ರಕಾರ್ಯ ಸಂದರ್ಭಗಳಲ್ಲಿ ಗುರುತಿಸಲು ಪ್ರಯತ್ನಿಸಿದ್ದಾರೆ.

ಈ ಮೇಲಿನಂತೆ ಕೈಗೊಳ್ಳಲಾದ ಕ್ಷೇತ್ರಕಾರ್ಯ ಮಾಹಿತಿಯನ್ನು ಈ ಕೆಳಗಿನಂತೆ ೩ ವಿಧದಲ್ಲಿ ವಿಂಗಡಿಸಿ ಯೋಚಿತವಾಗಿ ಬಳಸಿಕೊಳ್ಳಲು ಪ್ರಯತ್ನಿಸಿದ್ದಾರೆ.

೧. ಪ್ರಾಕ್ಚಾರಿತ್ರಿಕ ಸಮಾಧಿ ಎಡೆಗಳು

೨. ರೇಖಾಕೃತಿಗಳು

೩. ಕುಳಿ-ಕುಳಿ ಆಕೃತಿ ಹಾಗೂ ಬಟ್ಟಲಾಕಾರಾದ ಕುಳಿಗಳು

ಈವರೆಗೆ ಲಕ್ಷ್ಮಣ್ ತೆಲಗಾವಿಯವರು ಕೈಗೊಂಡ ಕ್ಷೇತ್ರಕಾರ್ಯದಲ್ಲಿ ಬಹುಪಾಲು ಎಡೆಗಳಲ್ಲಿ ಈ ಮೂರು ವಿಧದ ಕುರುಹುಗಳನ್ನು ಅಧ್ಯಯನಿಸಿ ದಾಖಲಿಸಿರುವುದು ವಿಶೇಷ. ಪ್ರಾಕ್ಚಾರಿತ್ರಿಕ ಸಮಾಧಿಗಳ ಶಿಲಾವೃತ್ತಗಳು (List Circles), ನಿಲುವುಗಲ್ಲುಗಳು (Menhirs) ಮುಖ್ಯವಾದವು. ಇಲ್ಲಿಯ ನಿಲುವುಗಲ್ಲುಗಳ ಮೇಲ್ಮೈಯಲ್ಲಿ ರೇಖಾಕೃತಿಗಳು, ಕುಳಿ ಆಕೃತಿಗಳು ವಿಶೇಷವಾಗಿ ಕಂಡುಬರುತ್ತವೆ. ರೇಖಾಕೃತಿಗಳಲ್ಲಿ ಮಾನವಾಕೃತಿಗಳು, ಪ್ರಾಣಿಗಳು, ಪಾದಗಳ ಕುರುಹುಗಳು ಹಾಗೂ ಜ್ಯಾಮಿತಿಯಾ ಕೃತಿಗಳು ಮುಖ್ಯವಾದವು. ಕುಳಿಗಳು, ಕುಳಿ ಆಕೃತಿಗಳು ಮತ್ತು ಬಟ್ಟಲಾಕಾರದ ಕುಳಿಗಳು ಸಹ ಕಂಡುಬರುವುದು ಇಂತಹ ಬಯಲುಬಂಡೆ ರೇಖಾಕೃತಿಗಳಿರುವ ನಿವೇಶನಗಳಲ್ಲೆ. ಇವು ಸಾಲುಸಾಲಾಗಿ ಹಾಗೂ ಗುಂಪುಗುಂಪಾಗಿ, ಬಹುಸಂದರ್ಭಗಳಲ್ಲಿ ಬಿಡಿ ಬಿಡಿಯಾಗಿ ಕಂಡುಬರುವುದು ವಿಶೇಷ. ಇವು ಮಾನವನ ವಸತಿ ಸ್ಥಾನವನ್ನು ನಿರ್ದೇಶಿಸುವ ಕುರುಹುಗಳಾಗಿರುವಂತೆಯೆ, ಅವನ ನಂಬಿಕೆ ಮತ್ತು ಆಚರಣೆಗಳನ್ನು ಅಭಿವ್ಯಕ್ತಿಸುವಂಥವು ಆಗಿರುತ್ತದೆ.

ವೃತ್ತಾಕಾರದ 'ಮಂಡಲ'ದಂತಹ ರೇಖಾಕೃತಿಗಳು, ನಕ್ಷತ್ರಾಕಾರದ ಆಕೃತಿಗಳು, ಕೆಲವು ವಿಶಿಷ್ಟ ಬಗೆಯ ಜ್ಯಾಮಿತಿ ಆಕೃತಿಗಳು ಹಾಗೂ ಇತರ ರೇಖಾವಿನ್ಯಾಸಗಳು ಈ ಪರಿಸರದ ಬಂಡೆಗಳ ಮೇಲೆ ಕಂಡುಬಂದಿದ್ದು, ವಿಶ್ವದ ಇತರೆಡೆಗಳಲ್ಲಿರುವ ಇಂತಹವೇ ರೇಖಾಕೃತಿಗಳೊಡನೆ ಹೋಲುವುದು ಕುತೂಹಲಕಾರಿಯೂ, ವಿಸ್ಮಯಕಾರಿಯೂ ಆದುದೆನ್ನಬೇಕು. ಆಟದ ಮನೆಗಳನ್ನು ಹೋಲುವ ಕೆಲವು ರೇಖಾಕೃತಿಗಳು ಕಂಡುಬಂದಿದ್ದು, ಇವುಗಳ ಪರಂಪರೆ ಪ್ರಾಚೀನ ಕಾಲದಿಂದ ೧೮-೧೯ನೇ ಶತಮಾನಗಳವರೆಗೂ ಮುಂದುವರೆದು ಬಂದುದನ್ನು ಗುರುತಿಸಬಹುದು. ದೇವಾಲಯ, ಮಠ, ಹೊಲಗದ್ದೆ, ಕೆರೆ-ಬಾವಿ ಮುಂತಾದವುಗಳ ಭರಾವ್ಯಾಪ್ತಿಯನ್ನು ನಿಗದಿಪಡಿಸುವ ಹಾಗೂ ಆಯಾ ಧಾರ್ಮಿಕ ಹಾಗೂ ಸಾಂಸ್ಕೃತಿಕ ಆಚರಣೆಗಳಿಗೆ ಸಂಬಂಧಿಸಿದ ಲಿಂಗಮುದ್ರೆ, ವಾಮನಮುದ್ರೆ, ಸೂರ್ಯ-ಚಂದ್ರರ ಲಾಂಛನ ಸಹಿತವಿರುವ ಕಠಾರಿ (Royal Emblem) ಮತ್ತಿತರ ಚಿಹ್ನೆಗಳುಳ್ಳ ರೇಖಾಕೃತಿಗಳು ಬಯಲುಬಂಡೆಗಳ ಮೇಲೆ ಗೋಚರಿಸುತ್ತವೆ.

ಪ್ರಾಚೀನ ಮಾನವ ತನ್ನ ವಸತಿ ನೆಲೆಗಳ ಪರಿಸರದಲ್ಲಿ ಗವಿವರ್ಣಚಿತ್ರಗಳನ್ನೂ ಬಯಲುಬಂಡೆ ರೇಖಾಕೃತಿಗಳನ್ನೂ ಬಿಡಿಸುವುದರೊಡನೆ, ಅವುಗಳಲ್ಲಿ ತನಗೆ ಸಿದ್ಧಿಸಿದ ಬೇಟೆಗಾರಿಕೆ, ಕೃಷಿ, ಪಶುಪಾಲನೆ, ಶಿಲಾಯುಧಗಳ ತಯಾರಿಕೆ ಇತ್ಯಾದಿಗಳ ಅನುಭವವನ್ನು ಸರಳವಾಗಿ ಹಾಗೂ ಪರಿಣಾಮಕಾರಿಯಾಗಿ ನಿರೂಪಿಸಿದ್ದಾರೆ. ಪ್ರಾಚೀನ ಮಾನವನ ಕಲಾಭಿವ್ಯಕ್ತಿಯ ಅಥವಾ ಅವನ ಅನುಭವ ನಿರೂಪಣೆಯ ಸಾಮರ್ಥ್ಯ ಕುರಿತು ಯುರೋಪ್‌ನ ಫ್ರಾನ್ಸ್, ಜರ್ಮನಿ, ಆಸ್ಟ್ರೀಯಾ, ಸ್ಪೇನ್ ಮೊದಲಾದ ದೇಶಗಳ ಉದಾಹರಣೆಗಳನ್ನೂ ಒಳಗೊಂಡಿದೆ. ಮುಖ್ಯವಾಗಿ ಗವಿವರ್ಣ ಚಿತ್ರಗಳು ಹಾಗೂ ಬಯಲುಬಂಡೆ ರೇಖಾಕೃತಿಗಳೊಡನೆ ಉಗುರಿನಲ್ಲಿ ಬಿಡಿಸಲಾದ ರೇಖಾಕೃತಿಗಳು (Finger Markings) ಇಲ್ಲಿ ವಿಶೇಷವಾಗಿ ಗಮನಿಸಲರ್ಹವಾದವು. ಭಾರತದಲ್ಲಿ ಕಂಡುಬರುವ

ಈ ಬಗೆಯ ವರ್ಣಚಿತ್ರಗಳು ಮತ್ತು ರೇಖಾಕೃತಿಗಳು ಸಹ ಒಂದೇ ಹೋಲಿಕೆಯುಳ್ಳವೆಂಬುದು ಗಮನಾರ್ಹ.

ತಾನು ಅನುಸರಿಸಿದ ಬೇಟೆ ಸಂಸ್ಕೃತಿಯ ಕಾರಣವಾಗಿ ಪ್ರಾಚೀನ ಮಾನವನ ಭಾವನೆಗಳೂ ಅದೇ ಜಾಡಿನಲ್ಲಿ ಮುಂದುವರೆದವೆನ್ನಲು, ಕಾಲಕಾಲಕ್ಕೆ ಅವನು ತನ್ನ ವಸತಿ ನೆಲೆಯ ಸುತ್ತಮುತ್ತಲಿನ ಬಯಲು ಬಂಡೆಗಳ ಮೇಲೆ ಮೂಡಿಸಿದ ರೇಖಾಕೃತಿಗಳೆ ಸಾಕ್ಷಿ. ಈ ಸಂಪುಟವು ಉತ್ತರ ಅಮೇರಿಕಾ, ದಕ್ಷಿಣ ಅಮೇರಿಕಾ, ಉತ್ತರ ಯುರೇಷಿಯ, ಆಫ್ರಿಕಾ, ವಾಯುವ್ಯ ಏಷಿಯಾ, ದಕ್ಷಿಣ ಏಷಿಯಾ, ಆಸ್ಟ್ರೇಲಿಯಾ ಮೊದಲಾದ ದೇಶ/ಖಂಡಗಳಲ್ಲಿಯ ಬೇಟೆಗಾರಿಕೆ-ಸಂಸ್ಕೃತಿಗೆ ಸೇರಿದ ಸಮುದಾಯಗಳನ್ನು ಕುರಿತು ಮಾಹಿತಿ ಒದಗಿಸುತ್ತಾರೆ. ಮಧ್ಯಭಾರತದ ಬಿರ್‌ಹೊರ (Birhor); ದಕ್ಷಿಣಭಾರತದ ಚೆಂಚು, ನಾಯಕ, ಪಣಿಯನ್ ಹಾಗೂ ಮಲಪಂತರಮ್ (Hill pandaram) ಸಮುದಾಯಗಳ ಹಿನ್ನೆಲೆಯನ್ನು ನಿರೂಪಿಸುತ್ತದೆ. ಈ ಸಮುದಾಯಗಳು ತಮ್ಮ ಅನುಭವ-ಅನಿಸಿಕೆಗಳನ್ನು ತಮ್ಮ ರೇಖಾಚಿತ್ರ ಹಾಗೂ ರೇಖಾಕೃತಿಗಳ ಮೂಲಕ ಅಭಿವ್ಯಕ್ತಿಸಿರುವುದು ಈ ಅಧ್ಯಯನದ ಮಟ್ಟಿಗೆ ಮುಖ್ಯವಾದುದು. ಆಫ್ರಿಕಾ, ಆಸ್ಟ್ರೇಲಿಯಾ, ದಕ್ಷಿಣ ಅಮೆರಿಕಾ, ದಕ್ಷಿಣ ಏಷಿಯಾಗಳಲ್ಲಿ ಕಂಡುಬರುವ ಇಂತಹ ಪುರಾತನ ಕಲೆಯನ್ನು ಸೋದಾಹರಣವಾಗಿ ವಿವರಿಸುವುದು ಮತ್ತು ಪ್ರಾಚೀನಕಾಲದಿಂದಲೂ ಬಂದ ಸಮುದಾಯಗಳ ನಂಬಿಕೆ, ಆಚರಣೆ ಹಾಗೂ ಅಭಿರುಚಿಗಳ ಬಗೆಗೆ ಬೆಳಕು ಚೆಲ್ಲುತ್ತದೆ.

ರೇಖಾಕೃತಿಗಳನ್ನು ಹೊಂದಿರುವ ಬಂಡೆಗಳು, ಅವುಗಳನ್ನು ಮೂಡಿಸಲು ಶ್ರಮವಹಿಸಿದ ಸಮುದಾಯಗಳು, ಅವು ಸ್ಥಾಪಿಸಿಕೊಂಡ ವಸತಿನೆಲೆಗಳು, ಬಳಸುತ್ತಿದ್ದ ನಿತ್ಯೋಪಯೋಗಿ ವಸ್ತುಗಳು, ಅವುಗಳ ಹಿಂದಿನ ಚಿಂತನೆ, ಪ್ರಯತ್ನ, ಪರಿಶ್ರಮ, ಕುಶಲತೆ, ಉದ್ದೇಶ ಇತ್ಯಾದಿಗಳನ್ನು ತಾತ್ವಿಕವಾಗಿ ವಿವೇಚಿಸುವ ಪ್ರಯತ್ನವಾಗಿ The Archaeology of Rock Art ಗ್ರಂಥವು ರೂಪುಗೊಂಡಿದೆ. ಈ ಕೃತಿಯು ಲೇಖನಗಳ ಸಂಗ್ರಹವಾಗಿದ್ದು, ಬಹುಮಟ್ಟಿಗೆ, ಪ್ರಾಚೀನ ಎಡೆಗಳು ನಮ್ಮ ಹಿರಿಯರು ಬದುಕಿದ ನೆಲೆಗಳಾಗಿದ್ದರಿಂದ, ಎಲ್ಲರಲ್ಲೂ ಅವುಗಳ ಬಗೆಗೆ ಗೌರವವೂ ಪ್ರೀತಿಯೂ ಹುಟ್ಟುವುದು ಸಹಜ. ದೇವನೆಲೆಗಳ ಸ್ಥಾಪನೆಯೂ ಈ ಪ್ರಾಚೀನರ ಪ್ರಯತ್ನವೇ. ಆದುದರಿಂದ ಅವು ಇಂದಿಗೂ ಉಳಿದುಬಂದಿದ್ದು, ಸಮಕಾಲೀನ ಬದುಕಿನ ಮೇಲೆ ಪ್ರಭಾವ ಬೀರುತ್ತಲಿವೆ. ಇಂತಹ ಪ್ರಯತ್ನಗಳ ಹುಡುಕಾಟ, ಅವುಗಳ ಹಿಂದಿನ ತಾತ್ವಿಕತೆ ಮತ್ತು ಮಹತ್ವಗಳನ್ನು ಕುರಿತು ಹೇಳುವಂತಹದ್ದಾಗಿದೆ. ಮನುಷ್ಯ ಮತ್ತು ಪ್ರಾಣಿಗಳ ಬಯಲುಬಂಡೆ ರೇಖಾಕೃತಿಗಳನ್ನು ಕುರಿತ ವಿವರಣೆಗಳು ಅತ್ಯುಪಯುಕ್ತವಾಗಿದ್ದನ್ನು ಅಧ್ಯಯನಿಸಿದ ಶ್ರೇಯಸ್ಸು ತೆಲಗಾವಿಗೆ ಸೇರುತ್ತದೆ.

ಬಯಲುಬಂಡೆ ರೇಖಾಕೃತಿಗಳಾಗಲಿ, ಗವಿವರ್ಣ ರೇಖಾಚಿತ್ರಗಳಾಗಲಿ ಹಲವು ನಿಗೂಢ, ಪವಿತ್ರ ಹಾಗೂ ಸಾಂಕೇತಿಕ ಚಿಹ್ನೆಗಳಿಂದ (Symbles) ಕೂಡಿವೆ. ಇವುಗಳನ್ನು ಕುರಿತು ವ್ಯಾಖ್ಯಾನಿಸಲು ಇಡೀ ಭಾರತೀಯ ಧಾರ್ಮಿಕ-ಸಾಂಸ್ಕೃತಿಕ ಪರಂಪರೆಯನ್ನು ಗಮನಿಸಬೇಕಾಗುತ್ತದೆ.

ಈ ನಿಟ್ಟಿನಲ್ಲಿ ಲಕ್ಷ್ಮಣ್ ತೆಲಗಾವಿಯವರ ಪ್ರಸ್ತುತ ಯೋಜನೆಗೆ ಉಪಯುಕ್ತವಾಗಬಲ್ಲ ಕೃತಿಯೇ Indian Symbolism. ಈ ಪುಸ್ತಕದ ವೈಶಿಷ್ಟ್ಯವೆಂದರೆ ಭಾರತೀಯ ಸಂಸ್ಕೃತಿಯಲ್ಲಿ ಪ್ರಮುಖ ಪಾತ್ರ ವಹಿಸಿರುವ ಪೂರ್ಣ ಕುಂಭ, ಸ್ವಸ್ತಿಕ, ಶ್ರೀವತ್ಸ, ನಂದಿಪಾದ, ಚಕ್ರ, ವರ್ಧಮಾನಕ, ಮತ್ಸ್ಯ ಅಥವಾ ಮತ್ಸ್ಯಯುಗ್ಮ, ಭದ್ರಾಸನ, ಚತುರ್ಭುಜ ಚಿಹ್ನೆ, ತ್ರಿರತ್ನ, ವೈಜಯಂತಿ, ಕಲ್ಪಿತರು ಮತ್ತು ಕಲ್ಪಿಲತಾ - ಈ ಬಗೆಯ ಚಿಹ್ನೆಗಳ ಹಿನ್ನೆಲೆ ಮತ್ತು ಅರ್ಥಗಳನ್ನು ವಿವರಿಸಿರುವುದು. ಪ್ರಾಕ್ಚಾರಿತ್ರಿಕ ಹಾಗೂ ಚರಿತ್ರೆಕಾಲೀನ ಮಾನವನ ಕಲಾಭಿವ್ಯಕ್ತಿಯಲ್ಲಿ ಇಂತಹ ಚಿಹ್ನೆಗಳು ಹೇಗೆ ಬಳಕೆಗೊಂಡಿವೆಯೆಂಬುದನ್ನು ಲಕ್ಷ್ಮಣ್ ತೆಲಗಾವಿಯವರ ಕೃತಿಗಳು ವಿವರವಾಗಿ ತಿಳಿಸಿಕೊಡುತ್ತವೆ. ಹಿಂದೂ, ಜೈನ ಮತ್ತು ಬೌದ್ಧ ಧರ್ಮಗಳು ಇಂತಹ ಚಿಹ್ನೆಗಳನ್ನು ಅಳವಡಿಸಿಕೊಂಡಿರುವ ಬಗೆಗೆ ಇಲ್ಲಿ ಚರ್ಚಿಸಲಾಗಿದೆ. ಅನಾಗರಿಕ-ನಾಗರಿಕ ಸಮುದಾಯಗಳಲ್ಲಿ ಸಮಾನವಾಗಿ ಉಪಯೋಗಿಸಲ್ಪಡುತ್ತಿದ್ದ ಇಂತಹ ಚಿಹ್ನೆಗಳು ಕಾಲ, ದೇಶ ಪರಿಸ್ಥಿತಿಗಳಿಗನು ಗುಣವಾಗಿ ಹೇಗೆ ಭಿನ್ನ ಸ್ವರೂಪ ಮತ್ತು ಸಂದೇಶಗಳನ್ನು ಹೊಂದಿದವೆಂಬುದನ್ನು ಇಲ್ಲಿ ಸೋದಾಹರಣವಾಗಿ ನಿರೂಪಿಸಲಾಗಿದೆ. ಈ ಕಾರಣಕ್ಕಾಗಿ ಕ್ಷೇತ್ರಕಾರ್ಯ ಕೈಗೊಂಡ ವಿವರ ಇಂತಿದೆ.

ದಿನಾಂಕ ೫ ಸೆಪ್ಟೆಂಬರ್ ೨೦೦೯ ರಿಂದ ೬ ಸೆಪ್ಟೆಂಬರ್ ೨೦೦೯ರವರೆಗೆ

೧. ಚಿತ್ರದುರ್ಗಬೆಟ್ಟ ಪರಿಸರ

೨. ಕುಂಚಿಗನಹಾಳು (ಚಿತ್ರದುರ್ಗ ಹೋಬಳಿ)

೩. ಇಂಗಳದಹಾಳು (ಚಿತ್ರದುರ್ಗ ಹೋಬಳಿ)

೪. ಕುರುಮರಡಿಕೆರೆ (ಚಿತ್ರದುರ್ಗ ಹೋಬಳಿ)

೫. ದೊಡ್ಡಸಿದ್ದವ್ವನಹಳ್ಳಿ (ಚಿತ್ರದುರ್ಗ ಹೋಬಳಿ)

ದಿನಾಂಕ ೨೫ ಸೆಪ್ಟೆಂಬರ್ ೨೦೦೯ ರಿಂದ ೨೬ ಸೆಪ್ಟೆಂಬರ್ ೨೦೦೯ರವರೆಗೆ

೧. ಹಳೇಕಲ್ಲೇನಹಳ್ಳಿ (ಚಿತ್ರದುರ್ಗ ಹೋಬಳಿ)

೨. ವೀರಮದಕರಿಪುರ (ಚಿತ್ರದುರ್ಗ ಹೋಬಳಿ)

೩. ಹೊಸಕಲ್ಲೇನಹಳ್ಳಿ (ಅಜ್ಜಿನಕಣಿವೆ) (ಚಿತ್ರದುರ್ಗ ಹೋಬಳಿ)

೪. ಸಿರಿಗೆರೆ-ಸಿದ್ಧಾಪುರ (ಚಿತ್ರದುರ್ಗ ಹೋಬಳಿ)

೫. ಓಬವ್ವನಾಗತಿಹಳ್ಳಿ (ಚಿತ್ರದುರ್ಗ ಹೋಬಳಿ)

ದಿನಾಂಕ ೧ ಮಾರ್ಚ್ ೨೦೧೦ ರಿಂದ ೩ ಮಾರ್ಚ್ ೨೦೧೦ರವರೆಗೆ

೧. ಚಿತ್ರದುರ್ಗಬೆಟ್ಟ ಪರಿಸರ

೨. ಗಂಜಿಗಟ್ಟೆ (ಚಿತ್ರದುರ್ಗ ಹೋಬಳಿ)

೩. ಪಂಡರಹಳ್ಳಿ (ಚಿತ್ರದುರ್ಗ ಹೋಬಳಿ)

೪. ಜಾನಕಲ್ಲು (ಚಿತ್ರದುರ್ಗ ಹೋಬಳಿ)

ದಿನಾಂಕ ೪ ಮಾರ್ಚ್ ೨೦೧೦ ರಿಂದ ೭ ಮಾರ್ಚ್ ೨೦೧೦ರವರೆಗೆ

೧. ಕಲ್ಲೂರು (ಧಾರವಾಡ ತಾಲ್ಲೂಕು)

೨. ಗರಗ (ಧಾರವಾಡ ತಾಲ್ಲೂಕು)

೩. ಬೀಡಿ (ಬೆಳಗಾವಿ ತಾಲ್ಲೂಕು)

ದಿನಾಂಕ ೨೧ ಮಾರ್ಚ್ ೨೦೧೦ ರಿಂದ ೨೨ ಮಾರ್ಚ್ ೨೦೧೦ರವರೆಗೆ

೧. ಕುಂಚಿಗನಹಾಳು (ಚಿತ್ರದುರ್ಗ ಹೋಬಳಿ)

೨. ಕುರುಮರಡಿಕೆರೆ (ಚಿತ್ರದುರ್ಗ ಹೋಬಳಿ)

೩. ಗೋನೂರು (ಚಿತ್ರದುರ್ಗ ಹೋಬಳಿ)

ದಿನಾಂಕ ೨೧ ಜೂನ್ ೨೦೧೦ ರಿಂದ ೨೪ ಜೂನ್ ೨೦೧೦ರವರೆಗೆ

೧. ಚಿತ್ರದುರ್ಗ ಬೆಟ್ಟ ಪರಿಸರ

೨. ತಮಟಕಲ್ಲು

೩. ಗುಡ್ಡದ ರಂಗವ್ವನಹಳ್ಳಿ

೪. ಚಿತ್ರದುರ್ಗ ಬೆಟ್ಟದ ಹಿಂಬದಿಯ ಪ್ರದೇಶಗಳು

ಇವುಗಳೇ ಅಲ್ಲದೆ, ಬೇರೆ ಬೇರೆ ಸಂದರ್ಭಗಳಲ್ಲಿ ಈ ಕೆಳಕಂಡ ನಿವೇಶನಗಳಲ್ಲೂ ಸುತ್ತಾಟ ನಡೆಸಿ ಪ್ರಸ್ತುತ ಯೋಜನೆಗೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಿಸಿದ್ದಾರೆ. ಅವು,

೧. ಹಂಪಿ (ಹೊಸಪೇಟೆ ತಾಲ್ಲೂಕು)

೨. ಎತ್ತಿನಗುಡ್ಡ (ಧಾರವಾಡ ತಾಲ್ಲೂಕು)

೩. ಭೈರಿದೇವರಕೊಪ್ಪ (ಹುಬ್ಬಳ್ಳಿ)

೪. ತಮಟಕಲ್ಲು (ಚಿತ್ರದುರ್ಗ ಹೋಬಳಿ)

೫. ಗುಡ್ಡದರಂಗವ್ವನಹಳ್ಳಿ (ಚಿತ್ರದುರ್ಗ ಹೋಬಳಿ)

೬. ಮದಕರಿಪುರ (ಚಿತ್ರದುರ್ಗ ಹೋಬಳಿ)

೭. ಬೆಳಗಟ್ಟ (ಚಿತ್ರದುರ್ಗ ಹೋಬಳಿ)

೮. ಹರ್ತಿಕೋಟೆ (ಹಿರಿಯೂರು ತಾಲ್ಲೂಕು)

೯. ಘಟ್ಟಿ ಹೊಸಹಳ್ಳಿ (ಹೊಳಲ್ಕೆರೆ ತಾಲ್ಲೂಕು)

೧೦. ಹೊಳಲ್ಕೆರೆ (ಚಿತ್ರದುರ್ಗ ತಾಲ್ಲೂಕು)

೧೧. ಚಳ್ಳಕೆರೆ (ಚಿತ್ರದುರ್ಗ ಜಿಲ್ಲೆ) ಇತ್ಯಾದಿ.

ಆದಿಮಾನವನ ಕಾಲದಿಂದಲೂ ಬಯಲುಬಂಡೆ ರೇಖಾಕೃತಿಗಳು ಹಾಗೂ ಗವಿವರ್ಣಚಿತ್ರಗಳು ಮೂಡಿಬಂದುದ್ದನ್ನು ನಾವು ಕಾಣುತ್ತೇವೆ. ಪ್ರಸ್ತುತ ಯೋಜನೆಯು ಆರಂಭಗೊಳ್ಳುವುದೇ ಪ್ರಾಕ್ಚಾರಿತ್ರಿಕ ಮಾನವನ ಇಂತಹ ಕಲಾಭಿವ್ಯಕ್ತಿ ಸಂಕೇತಗಳಿಂದ, ಪ್ರಾಚೀನ ಮಾನವನ ಸೃಜನ ಸಾಮರ್ಥ್ಯವನ್ನು ದಾಖಲಿಸುವ ಮಟ್ಟಿಗೆ 30,000 Years of Art : The Story of Human Creativity Across time and space ಕೃತಿಯು ಸಹಕಾರಿಯಾಗುತ್ತದೆ.[೪]

೩.೩. ದೇವಾಲಯ, ಶಿಲ್ಪ ಹಾಗೂ ವೀರಗಲ್ಲುಗಳ ಅಧ್ಯಯನ

ಲಕ್ಷ್ಮಣ್ ತೆಲಗಾವಿಯವರು ಅನೇಕ ದೇವಾಲಯ ಮತ್ತು ವೀರಗಲ್ಲುಗಳ ಕುರಿತು ಅಧ್ಯಯಿನಿಸಿದ್ದಾರೆ. ಅದರಲ್ಲಿ ಮುಖ್ಯವಾಗಿ ದಾಖಲಿಸುವುದಾದರೆ ಚಿತ್ರದುರ್ಗದ ಸಮೀಪದಲ್ಲಿ ಕಂಡುಬರುವ ತಮಟಕಲ್ಲುನಿಂದ ಸುಮಾರು ೨ ಕಿ.ಮೀ. ದೂರದಲ್ಲಿರುವ ಆಯಿತೋಳು ಎಂಬ ಪುಟ್ಟಗ್ರಾಮವಿದ್ದು ಈ ಗ್ರಾಮವು ಸುಮಾರು ೧೮ನೇ ಶತಮಾನದಲ್ಲಿ (ರಾಜಾವೀರಮದಕರಿ ನಾಯಕನ ಕಾಲದಲ್ಲಿ) ಇತಿಹಾಸ ಪ್ರಸಿದ್ಧವಾಗಿದ್ದು ಕರೇ ಉಡುಸಲವ್ವ ಎಂಬ ೫ ವರ್ಷದ ಪುಟ್ಟ ಬಾಲಕಿ ತಮ್ಮ ಮನೆದೇವರು ಕರಿಯಮ್ಮನ ಜಾತ್ರೆಯ ಸಿಡಿಕಂಬ ಆಯುವ ಸಂದರ್ಭದಲ್ಲಿ (ಸಿಡಿಕಂಬ-೨ ಜೊತೆ ಎತ್ತುಗಳ ಬಂಡಿಯ ಮೇಲೆ ಅರಕೆ ಹೊತ್ತವರನ್ನು ನೆಲದ ಮೇಲಿನ ಕಂಬಕ್ಕೆ ಕಟ್ಟಿದಂತೆ ಕಟ್ಟಿ ಕರಿಯಮ್ಮ ದೇವಸ್ಥಾನವನ್ನು ಸುತ್ತುವುದು) ಸಿಡಿಕಂಬದ ಬಂಡಿಯಗಾಲಿಗೆ ಬಿದ್ದು ಪ್ರಾಣಾರ್ಪಣೆ ಮಾಡಿಕೊಂಡ ಅಂಶವನ್ನು ಪರಿಗಣಿಸಿದ ಇವರ ಮನೆತನದವರು ಈಕೆಯ ಶಿಲ್ಪವನ್ನು ಕೆತ್ತಿ ಕರಿಯಮ್ಮ ದೇವಸ್ಥಾನದ ಮುಂಭಾಗದಲ್ಲಿ ಇರಿಸಲಾಗಿದೆ. ಈ ಸ್ಮಾರಕ ಶಿಲ್ಪವನ್ನು ಕರಿಯ ಕಲ್ಲಿನಲ್ಲಿ ಕಡೆದಿದ್ದು ಇದರ ಪ್ರಮಾಣ ೬೦x೬೦ ಸೆಂ.ಮೀ. ಇದೆ. ಜೋಡಿ ಎತ್ತುಗಳ ಸಹಿತವಿರುವ ಬಂಡಿಸಿಡಿ ಸೂಕ್ಷ್ಮ ಕೆತ್ತನೆಯೊಡನೆ ಸಾಕಷ್ಟು ವಿವರಗಳಿರುವಂತೆ ರೂಪಿಸಲಾಗಿದೆ. ಇದರಲ್ಲಿ ಸಿಡಿಕಂಬ ನೇರವಾಗಿ ಕರೇ ಉಡುಸಲವ್ವನ ತಲೆಯ ಮೇಲೆ ಬಾಗಿರುವಂತೆ ಚಿತ್ರಿಸಲಾಗಿದ್ದು, ಈಕೆಯನ್ನು ಪ್ರಸ್ತುತ ದಿನದಲ್ಲಿ ಚಿತ್ರದುರ್ಗ, ಹೊಳಲ್ಕೆರೆ, ಜಗಳೂರು, ದಾವಣಗೆರೆ ಮುಂತಾದ ಹಲವು ಪ್ರದೇಶದ ಕೆಲವು ಜನರು ತಮ್ಮ ಸಂತಾನದೇವತೆಯೆಂದು ಭಾವಿಸಿ ಅರಿಕೆ ಹೊರುವ ರೂಢಿಯು ಜಾರಿಯಲ್ಲಿರುವುದನ್ನು ಕಾಣಬಹುದಾಗಿದೆ. "ಆಯಿತೋಳಿನ ಕರೇ ಉಡುಸಲವ್ವನ ಸ್ಮಾರಕಶಿಲ್ಪ" ಎಂಬ ಲೇಖನಿಯಲ್ಲಿ ಲಕ್ಷಣ್ ತೆಲಗಾವಿ ಅವರ ಬರಹವನ್ನು ಕಾಣಬಹುದಾಗಿದೆ. ಹಾಗೆಯೇ

ಚಿತ್ರದುರ್ಗ ಕೋಟೆ ಮತ್ತು ಬೆಟ್ಟ ಪರಿಸರದ ೩ ವ್ಯಕ್ತಿಶಿಲ್ಪಗಳು

೧. ಕೋಟೆಯ ೩ನೇ ಪ್ರಕಾರದ ಮೇಲಿನ ಉಬ್ಬುಶಿಲ್ಪ

೨. ಏಕನಾಥಮ್ಮ ಗುಡಿಯ ಹುಟ್ಟು ಬಂಡೆ ಮೇಲಿನ ಉಬ್ಬುಶಿಲ್ಪ

೩. ಧವಳಪ್ಪನ ಗುಡ್ಡದ ಕಟ್ಟಿಗೆ ಸಂಗಣ್ಣನ ವಿಗ್ರಹಗಳ ಕುರಿತು ಸಂಪೂರ್ಣ ಐತಿಹ್ಯ ಮತ್ತು ಚಿತ್ರಣವನ್ನು ನೀಡಿದ್ದಾರೆ ಹಾಗೂ ಅವುಗಳನ್ನು ಅಧ್ಯಯಿನಿಸಿದಂತೆ.

೧. **ಕೋಟೆಯ ೩ನೇ ಪ್ರಕಾರದ ಮೇಲಿನ ಉಬ್ಬುಶಿಲ್ಪ:-** ಚಿತ್ರದುರ್ಗ ಬೆಟ್ಟದ ೭ ಸುತ್ತುಗಳಲ್ಲಿ ೩ನೇ ಹೆಬ್ಬಾಗಿಲನ್ನು ಕಾಮನಬಾಗಿಲೆಂದು ಕರೆಯಲಾಗಿದ್ದು. ಇದರ ಮೇಲೆ ಕಾಮ/ಮನ್ಮಥನ ಶಿಲ್ಪವನ್ನು ಒಂದೇ ಕಲ್ಲಿನಲ್ಲಿ ಕೆತ್ತಲಾಗಿದೆ. ಪಕ್ಕದಲ್ಲೇ ಕಾಮನಬಾವಿ ಇದ್ದು, ಇವು ತಂತ್ರಗಾರಿಕೆಗೆ ಸಂಬಂಧಪಟ್ಟವು ಆಗಿರಬಹುದು. ಪ್ರಸ್ತುತ ಶಿಲ್ಪದ ವಿವರಗಳ ಹಿನ್ನೆಲೆಯಲ್ಲಿ ವನದಲ್ಲಿ ವಿಹರಿಸುತ್ತಿರುವ ವ್ಯಕ್ತಿ ಮನ್ಮಥನೆ ಹೌದೆಂಬುದನ್ನು ನಿರಾಕರಿಸುವ ಯಾವ ಕಾರಣಗಳಿಲ್ಲದಿದ್ದರೂ ಈ ಅಂಶವನ್ನು ಆಳವಾಗಿ ಅಧ್ಯಯಿನಿಸಲು ಪ್ರಯತ್ನಿಸಿದೆ.

೨. **ಏಕನಾಥಮ್ಮ ಗುಡಿಯ ಹುಟ್ಟು ಬಂಡೆ ಮೇಲಿನ ಉಬ್ಬುಶಿಲ್ಪ:-** ಚಿತ್ರದುರ್ಗ ಚರಿತ್ರೆಯಲ್ಲಿ ಗಮನಾರ್ಹ ಸ್ಥಾನ ಪಡೆದ ಸ್ಥಳೀಯ ದೇವತೆಗಳಲ್ಲಿ ಏಕನಾಥಮ್ಮಳು ಒಬ್ಬಳು. ಕೋಟೆಯ ಮಧ್ಯರಂಗದ ತೆವರಿನ ಮೇಲೆ ಈ ಗುಡಿಯಿದ್ದು, ಬೃಹತ್ ಕಲ್ಲಾಸೆರೆಯಲ್ಲಿ ನೆಲೆಗೊಂಡಿದೆ. ಹುಟ್ಟು ಬಂಡೆಯಲ್ಲಿ ಪ್ರಭಾವಳಿ ಸಹಿತ ೬೧ ಸೆಂ.ಮೀ. ಎತ್ತರ ಮೂಡಿಸಲಾಗಿರುವ ರುಂಡ ರೂಪದಲ್ಲಿದೆ. ಕಲ್ಲಾಸೆರೆಯಲ್ಲಿ ಮುಕ್ತವಾಗಿ ನೆಲೆಸಿದ್ದ ಈ ದೇವತೆಗೆ ಗೂಡಿನಂಥ ಪುಟ್ಟ ಗುಡಿ ಕಟ್ಟಿದವರು ವಿಜಯನಗರದ ಸಾಮಂತರೆಂದು ಭಾವಿಸಲು ಅವಕಾಶವಿದೆ. ಏಕೆಂದರೆ ಇವರಿಗೆ ಸಂಬಂಧಿಸಿದ ಒಂದೆರಡು ಕುರುಹುಗಳು ಈ ಗುಡಿಯ ಸುತ್ತಮುತ್ತಲಲ್ಲಿ ಕಂಡುಬಂದಿವೆ. ಆದರೂ ಈ ದೇವತೆಯ ನಿಷ್ಠಾವಂತ ಭಕ್ತರಾಗಿದ್ದವರು ಮಾತ್ರ ಚಿತ್ರದುರ್ಗ ನಾಯಕ ಅರಸರು ಹಾಗೂ ಪ್ರಸ್ತುತ ಶಿಲ್ಪ ಕಂಡುಬರುವುದು. ಏಕನಾಥೇಶ್ವರಿ ದೇವಾಲಯದ ಮಹಾಮಂಟಪಕ್ಕೆ ಹೊಂದಿಕೊಂಡಿರುವ ಮೂಲ ಮುಖಮಂಟದ ಹುಟ್ಟು ಬಂಡೆಯ ಮೇಲೆ. ಈ ಹುಟ್ಟು ಬಂಡೆಯನ್ನೇ ಆಧರಿಸಿ ಈ ಮೂಲ ಮುಖಮಂಟಪ ನಿರ್ಮಾಣಗೊಂಡಿದೆ. ಶಿಲ್ಪವು ಕಲ್ಲಾಸೆರೆಯ ಗರ್ಭಗುಡಿಯ ಮುಖ್ಯದ್ವಾರದ ಬಲಬದಿಯ ಬಂಡೆಯ ಮೇಲಿದೆ. ಈ ಶಿಲ್ಪವು ಒಬ್ಬ ವೀರನದು. ಈತನು ತನ್ನ ಬಲಗೈಯಲ್ಲಿ ಖಡ್ಗವನ್ನು ಎತ್ತಿಹಿಡಿದಿದ್ದರೆ, ಇಳಿಬಿಟ್ಟಿರುವ ಎಡಗೈಯಲ್ಲಿ ಒರೆಯಂಥ ಸಾಧನ ಹಿಡಿದಿದ್ದಾನೆ ಹಾಗೂ ವೀರಗಚ್ಚೆ ಹಾಕಿದ್ದಾನೆ. ರಾಜ ಪೋಷಕು ತೊಟ್ಟು ಸರ್ವಾಭರಣ ಭೂಷಿತನಾಗಿದ್ದಾನೆ. ಸೊಂಟದ ಬಲಭಾಗದಲ್ಲಿ ಕಠಾರಿ ಸಿಕ್ಕಿಸಿಕೊಂಡಿರುವನು. ಈತ ಧರಿಸಿರುವ ಪೇಟ ನಾಯಕ ಅರಸರು ಸಾಮಾನ್ಯವಾಗಿ ಇಟ್ಟುಕೊಳ್ಳುವ ವಿಶಿಷ್ಟ ಪೇಟದಂತೆಯೇ ಇದೆ. ಚಿತ್ರದುರ್ಗ ಕೋಟೆಯಲ್ಲಿ ನಾಯಕ ಅರಸರ ಕಾಲದ ವಿವಿಧ ಸ್ಮಾರಕಗಳಲ್ಲಿ ಕಂಡುಬಂದಿರುವ ರಾಜರು ಮತ್ತು ರಾಜ ಸಂಬಂಧಿಗಳ ಶಿಲ್ಪಗಳನ್ನು ಇದು ನಿಕಟವಾಗಿ ಹೋಲುತ್ತದೆ ಎಂಬ ಅಂಶವನ್ನು ಈ ಶಿಲ್ಪ ಕುರಿತಂತೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುವುದನ್ನು ಕಾಣಬಹುದಾಗಿದೆ.

೩. **ದಳಪ್ಪನಗುಡ್ಡದ ಕಟ್ಟಿಗೆ ಸಂಗಣ್ಣನ ವಿಗ್ರಹ:-** ಕಟ್ಟಿಗೆ ಸಂಗಣ್ಣನ ವಿಗ್ರಹವಿರುವುದು ಧವಳಪ್ಪ ಗುಡ್ಡದ ಪೂರ್ವ ದಿಕ್ಕಿನ ಪಾರ್ಶ್ವದಲ್ಲಿಯ ಹಳೆಯ ಪ್ರವೇಶ ಮಾರ್ಗಕ್ಕೆ, ಎಡಭಾಗದಲ್ಲಿ. ಈ ಎಡೆಯಿಂದ ಸ್ವಲ್ಪ ಮೇಲಕ್ಕೆ ಏರಿದರೆ ಈ ಗುಡ್ಡದ ಕಡಿದಾದ ಭಾರಿಬಂಡೆಯಲ್ಲಿ ನೈಸರ್ಗಿಕವಾಗಿ ರೂಪುಗೊಂಡಿರುವ ದೊಡ್ಡ ಕುಳಿಯ ಸಮೀಪದಲ್ಲಿ ಇಲ್ಲಿಯ ಬೃಹತ್ ಬಂಡೆಗೆ

ಒರಗಿಕೊಂಡಿರುವ ಪ್ರಸ್ತುತ ಶಿಲ್ಪವನ್ನೇ ಕಟ್ಟಿಗೆ ಸಂಗಣ್ಣನೆಂದು ಸಂಭೋದಿಸಲಾಗುತ್ತದೆ. ಉತ್ತರ ದಿಕ್ಕಿಗೆ ಮುಖ ಮೂಡಿರುವ ಕಟ್ಟಿಗೆ ಸಂಗಣ್ಣನ ಶಿಲ್ಪ ಹಸಿರು ಶಿಲೆಯದು. ೧.೧೭ ಮೀಟರ್ ಎತ್ತರ, ೪೨ ಸೆಂ.ಮೀ. ಅಗಲ ಹಾಗೂ ೨೧ ಸೆಂ.ಮೀ. ದಪ್ಪವಿದೆ. ಶಿಲ್ಪ ಲಕ್ಷಣಗಳನ್ನು ಗಮನಿಸಿದರೆ ಈ ವ್ಯಕ್ತಿಯ ಕೊರಳಲ್ಲಿ ದೊಡ್ಡದಾದ ಲಿಂಗದ ಕಾಯಿ ಇದ್ದು ನಿಲುವಂಗಿ ತೊಟ್ಟಿದ್ದು ಕರಗಳನ್ನು ಜೋಡಿಸಿ ನಮಸ್ಕರಿಸುವ ಭಂಗಿಯಲ್ಲಿ ನಿಂತಿದ್ದಾನೆ ಹಾಗೂ ಈ ವ್ಯಕ್ತಿ ತನ್ನ ಎಡ ಕಂಕುಳಲ್ಲಿ ಹಿಡಿದಿರುವ ಬೆತ್ತ ತಲೆಯ ಮೇಲಿನ ಕೇಶಾಲಂಕಾರ ವಿಶಿಷ್ಟವಾದುದು ಮತ್ತು ಹಣೆಯಲ್ಲಿರುವ ರುದ್ರನೇತ್ರವು ಅತಿಶಯವಾಗಿ ತೋರುತ್ತದೆ. ಒಟ್ಟಿನಲ್ಲಿ ಕಟ್ಟಿಗೆ ಸಂಗಣ್ಣನದು ಆಕರ್ಷಕ ಭಂಗಿಯ ವಿಶಿಷ್ಟ ಶಿಲ್ಪವಾಗಿದ್ದು ಪ್ರಸ್ತುತ ದಿನದಲ್ಲೂ ಪೂಜಿಸಲ್ಪಡುತ್ತಿದೆ ಎಂಬ ಅಂಶವನ್ನು ಈ ಶಿಲ್ಪವನ್ನು ಅಧ್ಯಯಿನಿಸುವುದರ ಮೂಲಕ ಲೇಖನಿಯನ್ನು ತಯಾರಿಸಿದ್ದಾರೆ ಎಂದು ಹೇಳಬಹುದಾಗಿದೆ.[೫]

ವೀರಗಲ್ಲು ಅಧ್ಯಯನ

ವೀರಗಲ್ಲು ಚನ್ನನೆಂಬ ಸಮಗಾರ ಕುಲದ ಯೋಧ ಕ್ರಿ.ಶ. ೯ನೇ ಶತಮಾನದವನು; ರಾಷ್ಟ್ರಕೂಟರ ಆಳ್ವಿಕೆಯಲ್ಲಿ ಯೋಧನಾಗಿ ಸೇವೆ ಸಲ್ಲಿಸಿದವನು. ಈತನ ನೆನಪಿಗಾಗಿ ಕೊಪ್ಪಳ ಜಿಲ್ಲೆ, ಯಲಬುರ್ಗಾ ತಾಲ್ಲೂಕು ಮುಧೋಳದ ಮಲ್ಲಿಕಾರ್ಜುನ ದೇವಾಲಯದ ಬಳಿ ಶಾಸನೋಕ್ತ ವೀರಗಲ್ಲೊಂದನ್ನು ನಿಲ್ಲಿಸಲಾಗಿದೆ. ಇದು ಇಂದಿಗೂ ಈತ ನಿರ್ವಹಿಸಿದ ಸಾಹಸ ಕಾರ್ಯವನ್ನು ಸಾರುತ್ತಲಿದೆ. ಸಮಗಾರ ಸಮುದಾಯದ ಮಟ್ಟಿಗೆ ಇದೊಂದು ವಿರಳವಾದ ಚಾರಿತ್ರಿಕ ಸಾಕ್ಷ್ಯವೆನ್ನಬೇಕು. ಮೇಲೆ ಹೇಳಿದ ಕ್ರಿ.ಶ. ೮ನೇ ಶತಮಾನದ ಬಾದಾಮಿ ಶಾಸನವು ಈ ಸಮುದಾಯದವರನ್ನು ಕುರಿತ ಏಕೈಕ ಉದಾಹರಣೆಯಾಗಿರುವಂತೆಯೆ, ಪ್ರಸ್ತುತ ವೀರಗಲ್ಲು ಸಹ ಇಂಥದ್ದೇ ಇನ್ನೊಂದು ಮಹತ್ವದ ಉದಾಹರಣೆಯೆನ್ನಬಹುದು.

ಚನ್ನನ ವೀರಗಲ್ಲು ಶಾಸನವು ರಾಷ್ಟ್ರಕೂಟ ದೊರೆ ಇಮ್ಮಡಿ ಕೃಷ್ಣನ ಆಳ್ವಿಕೆಯ ಕಾಲದ್ದು, ಇದನ್ನು ನಿಲ್ಲಿಸಿದುದು ೧೩ ಮಾರ್ಚ್ ೮೯೭ರಲ್ಲಿ, ಅಂದರೆ ಶಕ ವರ್ಷ ೮೨೦, ಪಿಂಗಳ ಸಂವತ್ಸರ, ಚೈತ್ರಶುದ್ಧ ಸಪ್ತಮಿ ರವಿವಾರದಂದು. ಈ ಕಾಲಾವಧಿಯಲ್ಲಿ ಬೆಳ್ವೊಲವು ಮುನ್ನೂರು ಪ್ರಾಂತ್ಯಕ್ಕೆ ಸೇರಿದ್ದ ಪ್ರದೇಶವಾಗಿದ್ದಿತು ಮುಧೋಳವು ಆಗ ಒಂದು ವಿದ್ಯಾಕೇಂದ್ರ (ಅಗ್ರಹಾರ)ವೂ ಆಗಿದ್ದು, ಒಂದು ಸಾವಿರ ಮಹಾಜನರು ಇಲ್ಲಿದ್ದರೆಂದು ಚಾಲುಕ್ಯರ ಒಂದು ಶಾಸನದಲ್ಲಿ ಹೇಳಲಾಗಿದೆ. ರಾಷ್ಟ್ರಕೂಟ ಅರಸನ ಪರವಾಗಿ ಇಲ್ಲಿಯ ಆಡಳಿತ ನಿರ್ವಹಿಸುತ್ತಿದ್ದವನ ಹೆಸರು ಮಹಾಸೀಮಂಕ, ಚನ್ನನ ವೀರಗಲ್ಲು ಸ್ಥಾಪನೆಯ ಮುನ್ನ ಮುಧೋಳದ ಮೇಲೆ ಶತ್ರುಗಳಿಂದ ದಾಳಿ ನಡೆದಿತ್ತು. ಇಂತಹ ದಾಳಿಯನ್ನು ಹಿಮ್ಮೆಟ್ಟಿಸುವ ಗುರುತರ ಹೊಣೆಯನ್ನು ನಿಭಾಯಿಸುವಲ್ಲಿ ತನ್ನ ಪ್ರಾರ್ಣಾಪಣೆ ಮಾಡಿದವನು ಈ ವೀರಯೋಧ ಚನ್ನ. ಮುಧೋಳದ ಮೇಲೆ ದಾಳಿ ನಡೆಸಿದವನ ಹೆಸರು ಸನ್ತಯ ಅಥವಾ ಶಾಂತಯ್ಯ ಎಂಬುದಾಗಿದೆ.

ಸಮಗಾರ ಸಮುದಾಯಕ್ಕೆ ಸಂಬಂಧಿಸಿದಂತೆ ದೊರಕುವ ಪ್ರತ್ಯೇಕ ಶಾಸನ ಇತ್ಯಾದಿಗಳ ಸಾಲಿಗೆ ಈ ವೀರಗಲ್ಲನ್ನೂ ಸೇರಿಸಬಹುದು. ಬಹುಶಃ ಸಮಗಾರ ಸಮುದಾಯದ ವೀರನೊಬ್ಬನ ಸ್ಮರಣೆಗೆ ನಿಲ್ಲಿಸಲಾದ ವೀರಗಲ್ಲು ಇದೊಂದೇ ಎಂದು ತೋರುತ್ತದೆ. ಈ ದೃಷ್ಟಿಯಿಂದಲೂ ಇದಕ್ಕೆ ಮಹತ್ವವಿದೆ. ಹಾಗೆಯೇ, ಈ ಶಾಸನೋಕ್ತ ವೀರಗಲ್ಲನ್ನು ನಿಲ್ಲಿಸಿದವರು ಆತನ ಕುಟುಂಬ ವರ್ಗದವರೇ ಇದ್ದಿರಬಹುದು. ಏಕೆಂದರೆ ಹಿಂದಿನಿಂದಲೂ ಈ ಸಮುದಾಯ 'ಯೋಧ ಸಮುದಾಯ'ವೇ ಆಗಿದ್ದರಬೇಕೆಂಬುದನ್ನು ಇವರ ವೃತ್ತಿ ಮತ್ತು ಪ್ರವೃತ್ತಿ ಪರಿಶೀಲಿಸುವ ಅಗತ್ಯವಿದೆ.

ಈ ವೀರಗಲ್ಲು ಶಾಸನ ಪಾಠದ ಸಾರಾಂಶ ಇಂತಿದೆ. "ಶ್ರೀಮನ್ನಾಂ ಎಂಬುವವನು ಶ್ರೀಶುಭತುಂಗದೇವರ ದಯೆಯಿಂದ ಬೆಳ್ವೊಲ ಮೂನ್ನೂರನ್ನು ಆಳುತ್ತಿರಲು ಶಾನೃಪ ಕಾಲಾತೀತ ಸಂವತ್ಸರದ ೮೨೦ನೆಯ ಪಿಂಗಳ ಚೈತ್ರ ಶುದ್ಧ ಸಪ್ತಮಿ ಆದಿತ್ಯವಾರದಂದು (೧೩ ಮಾರ್ಚ್ ೮೯೭ ಭಾನುವಾರದಂದು) ಮುದುವೊಳಲನ್ನು ಸನ್ತಯನೆಂಬುವವನು ಮುತ್ತಿದಾಗ ಆ ಊರರಿವಿನಲ್ಲಿ ಸಮ್ಮಗಾರರ ಚಂದನೆಂಬುವವನು ಹೋರಾಡಿ ಮರಣಿಸಿದ".

ಈ ವೀರಗಲ್ಲು ಶಾಸನದ ಪಾಠ ಇಂತಿದೆ.

೧. @ ಸ್ವಸ್ ಕಾಲ ವರ್ಷ ಸ್ರೀ ಶುಭತುಂಗದೇವರ ದಯೆಯಿಂ ಮಹಾ

೨. ಶ್ರೀಮನ್ನಾಮ್ಬೆಳ್ವೊಲ ಮೂನುಱುಮಂ ಯತಾ ಸುಖಮಳುತ್ತಿರೆ

೩. ಸ್ವಸ್ತಿ ಸಕನೃಪಕಾಲಾತೀಶ ಸಂವತ್ಸರಗಳೆಂಣ್ನುನುಱ ಇಪ್ಪತ್ತನೆಯ

೪. ಪಿಂಗಳಮೆಂಮ್ಬವರ್ಷ [೦] ಪ್ರವ[ರ]ತ್ತಿಸೆ ಚೈತ್ರ ಸುದ್ಧ ಸಪ್ತಮಿಯುಮಾದಿತ್ಯ ವ[ವಾ]ರದಂದು.

೫. ಮುದವೊಱಲನ [ನ್] ಸನ್ತಯಮ್ಬೇಡಿಯಟ್ಟಿದೊಡೆಮ್ಮ ಪ್ರಾಣಮನೆಕೊಳ್ವದಲ್ಲದೆ ಸನ್ತಯ

೬. ಮ್ಮೆಂಮೆಂದು ಮಣಿಯ [ಮ್] ಕಸೆಯೇ ಊರಱೆಯ ಬಲಿ ಱೆನೆನ್ದು ಸಮ್ಮಗಾಱರ ಚನ್ದ ಸತ್ತೋ[ನ್]

ಯೋಧವೃತ್ತಿಯನ್ನವಲಂಬಿಸುವಲ್ಲಿ ಜಾತಿಭೇದವೇನೂ ಅಡ್ಡಿಯಾಗುತ್ತಿರಲಿಲ್ಲವೆಂಬುದನ್ನು ಈ ಉದಾಹರಣೆ ಸಮರ್ಥಿಸುತ್ತದೆ. ಅಂದಿನ ಸಮಾಜದಲ್ಲಿ ಇಂತಹ ವೀರವೃತ್ತಿಯನ್ನು ಕೈಗೊಳ್ಳಬಲ್ಲವರಾಗಿದ್ದ ಸಮಗಾರರು ತಮ್ಮ ಧೈರ್ಯೋತ್ಸಾಹಗಳಿಂದ ಮಾತ್ರವಲ್ಲದೆ, ಶಿಷ್ಟವರ್ಗದವರ ವಿಶ್ವಾಸಕ್ಕೂ ಪಾತ್ರರಾಗಿದ್ದಿರಬೇಕು. ಚನ್ದನ ಶಾಸನೋಕ್ತ ವೀರಗಲ್ಲು ಇದಕ್ಕೊಂದು ಉತ್ತಮ ಉದಾಹರಣೆಯೆನ್ನಬಹುದು.[೬] ಇಂಥ ಅನೇಕ ವೀರಗಲ್ಲುಗಳ ಬಗ್ಗೆ ಅಧ್ಯಯನ ಮಾಡಿ, ಹೊಸ ಸಂಗತಿಗಳನ್ನು ಬೆಳಕಿಗೆ ತಂದಿದ್ದಾರೆ.

೩.೪. ಶಾಸನಶೋಧನೆ ಮತ್ತು ಅಧ್ಯಯನ

ನಮ್ಮ ದೇಶದ ಇತಿಹಾಸ ಪುನರ್ರಚನೆಗೆ ಬಹುಮುಖ್ಯವಾದ ಆಕರಗಳಲ್ಲಿ ಶಾಸನಗಳು ಒಂದಾಗಿವೆ. ಮೌರ್ಯ ಚಕ್ರವರ್ತಿ ಅಶೋಕನ ಕಾಲದಿಂದ ಕೆಳದಿ ಅರಸುಮನೆತನಗಳ ಒಟ್ಟಾರೆ ವಿಜಯನಗರೋತ್ತರ ನಾಯಕರ ಕಾಲದ ಕೊನೆಯವರೆಗಿನ ಶಾಸನಗಳ ಸಂಖ್ಯೆ ಸಾವಿರಾರು, ಇದುವರೆಗೆ ಕರ್ನಾಟಕದಲ್ಲಿಯೇ ೨೫೦೦೦ಕ್ಕೂ ಹೆಚ್ಚು ಶಾಸನಗಳು ಉಪಲಬ್ಧವಾಗಿವೆ. ಈ ಶಾಸನಗಳು ವ್ಯವಸ್ಥಿತ ವಿಶ್ಲೇಷಣೆ ಮತ್ತು ಅಧ್ಯಯನಗಳಿಂದ ಆಯಾ ಪ್ರದೇಶದ, ಆಯಾ ಕಾಲದ ಅರಸುಮನೆತನಗಳು, ರಾಜ್ಯ ವಿಸ್ತಾರ, ಆಡಳಿತಕ್ರಮ, ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಸಂಗತಿಗಳು ಹಾಗೂ ಲಿಪಿ ಭಾಷೆಗಳ ಬೆಳವಣಿಗೆಯ ವಿಷಯಗಳನ್ನು ತಿಳಿಯಲು ಸಾಧ್ಯವಾಗಿದೆ. ಜೇಮ್ಸ್ ಪ್ರಿನ್ಸೆಪ್‌ನ ಮೂಲಕ ಶಾಸನಗಳ ಅಧ್ಯಯನ ಆರಂಭಗೊಂಡು ಕನ್ನಡ ಸಂಶೋಧನೆಗೆ ೨೦ನೇ ಶತಮಾನದಲ್ಲಿ ಅನೇಕ ಮಹತ್ವದ ನೆಲೆಗಳನ್ನು ಪ್ರವೇಶಿಸಿದೆ. ಅದರಲ್ಲಿ ಈ ಶಾಸನಶಾಸ್ತ್ರವೂ ಒಂದು. ಶಾಸನಗಳನ್ನು ಪುರಾತತ್ವಶಾಸ್ತ್ರದ ಒಂದು ಅಂಗವಾಗಿ ಗುರುತಿಸಲಾಗಿದೆ. ಆರಂಭದಲ್ಲಿ ಶಾಸನಗಳನ್ನು ಕುರಿತಾದ ಅಧ್ಯಯನವು ಪುರಾತತ್ವ ಇಲಾಖೆಯಡಿಯಲ್ಲಿಯೇ ನಡೆದಿದ್ದು ನಂತರದ ಕಾಲದಲ್ಲಿ ಪ್ರತ್ಯೇಕವಾಗಿಯೂ ನಡೆದಿರುವುದುಂಟು. ಭಾರತೀಯರಿಗೆ ಚಾರಿತ್ರಿಕ ಪ್ರಜ್ಞೆ ಇಲ್ಲ ಎನ್ನುವ ಭಾವನೆ ಪಾಶ್ಚಾತ್ಯ ವಿದ್ವಾಂಸರಲ್ಲಿ ಪ್ರಕಟವಾದ ಸಂದರ್ಭದಲ್ಲಿ ಪಾಶ್ಚಾತ್ಯ ವಿದ್ವಾಂಸರಿಗೆ ಶಾಸನಗಳು ಒಪ್ಪಿಕೊಳ್ಳುವಂತಹ ಅಧಿಕೃತ ದಾಖಲೆಗಳೆನಿಸಿದವು. ಶಾಸನಗಳು ಪ್ರಮುಖವಾಗಿ ಒಂದು ಕಾಲದಲ್ಲಿ ನಡೆದ ವ್ಯವಹಾರಗಳು ಲಿಖಿತ ದಾಖಲೆಗಳು, ನಾಡಿನ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಧಾರ್ಮಿಕ ಹಾಗೂ ಶೈಕ್ಷಣಿಕ ಅಂಶಗಳನ್ನು ಅರ್ಥ ಮಾಡಿಕೊಳ್ಳುವ ಮೂಲ ಸಾಮಗ್ರಿಗಳಾಗಿವೆ. ರಾಜಕೀಯ ಹಾಗೂ ಸಾಂಸ್ಕೃತಿಕ ಚರಿತ್ರೆಯನ್ನು ಪುನರ್‌ರಚಿಸುವಲ್ಲಿ ಉಳಿದೆಲ್ಲವುಗಳಿಗಿಂತ ಶಾಸನಗಳು ಮಹತ್ವವೆನಿಸಿವೆ.

ಲಕ್ಷ್ಮಣ್ ತೆಲಗಾವಿ ಅವರು ಚಿತ್ರದುರ್ಗದ ದೊರೆ ಕಸ್ತೂರಿ ಚಿಕ್ಕಣ್ಣನಾಯಕನ ಕಾಲದ ಶಾಸನ: ಹೊಸಶೋಧನ ಎಂಬ ಲೇಖನಿಯಲ್ಲಿ ಕಸ್ತೂರಿ ಚಿಕ್ಕಣ್ಣನಾಯಕನ ಜೀವನ ಚಿತ್ರಣ ಅವನ ಕಾಲದ ೭ ಶಾಸನಗಳ ಕುರಿತು ಮಾಹಿತಿಯನ್ನೊಳಗೊಂಡಿದೆ. ಅವುಗಳು ಈ ಕೆಳಕಂಡಂತಿವೆ.

೧. ಚಿತ್ರದುರ್ಗ ತಾಲ್ಲೂಕು ಭರಮಸಾಗರ ಹೋಬಳಿಯ ಕೋಗುಂಡೆ ಗ್ರಾಮದ ಬಸವನಗುಡಿಯ ಪ್ರಕಾರದಲ್ಲಿರುವ ೧೬೭೬ರ ಶಾಸನ.

೨. ಹಿರಿಯೂರು ತಾಲ್ಲೂಕು ಧರ್ಮಪುರ ಹೋಬಳಿ ತೊರೆ ಸಾಲು ನಾಗೇನಹಳ್ಳಿಯ ತಿಮ್ಮಪ್ಪನ ದೇವಸ್ಥಾನದ ಮುಂದೆ ಗೋಡೆಯಲ್ಲಿ ಸೇರಿಸಲಾಗಿರುವ ೧೬೭೮ರ ಶಾಸನ.

೩. ಚಿತ್ರದುರ್ಗ ತಾಲ್ಲೂಕು ವೀರವ್ವ ನಾಗತಿಹಳ್ಳಿಯ ಆಂಜನೇಯ ದೇವಸ್ಥಾನದಲ್ಲಿ ಮಾರುತಿ ವಿಗ್ರಹದ ಪೀಠಭಾಗದಲ್ಲಿರುವ ೧೬೮೦ರ ಶಾಸನ.

೪. ದಾವಣಗೆರೆ ಜಿಲ್ಲೆ ಮಾಯಕೊಂಡ ಹೋಬಳಿ ಹಾಲುವರ್ತಿ ಗ್ರಾಮದ ಆಂಜನೇಯ ದೇವಾಲಯದ ಗೋಡೆವತ್ತಿನಲ್ಲಿ ನೆಟ್ಟ ೧೬೮೧ರ ಶಾಸನ.

೫. ಹೊಳಲ್ಕೆರೆ ತಾಲ್ಲೂಕು ರಾಮಗಿರಿ ಹೋಬಳಿ ಗುಂಡ ಸಮುದ್ರ ಗ್ರಾಮದಲ್ಲಿ ಪಟೇಲ್ ಸಿದ್ದಯ್ಯನ ವಶದಲ್ಲಿದ್ದ ೧೬೮೩ರ ತಾಮ್ರಶಾಸನ.

೬. ದಾವಣಗೆರೆ ಜಿಲ್ಲೆ ಜಗಳೂರು ಹೋಬಳಿ ಸಿದ್ಧಮ್ಮನಹಳ್ಳಿಯ ಆಂಜನೇಯ ದೇವಸ್ಥಾನದ ಗರ್ಭಗೃಹದಲ್ಲಿ ದೇವರ ಹಿಂಬದಿಯಲ್ಲಿ ನೆಟ್ಟ ೧೬೮೫ರ ಶಾಸನಗಳ ಕುರಿತಂತೆ ಸುದೀರ್ಘ ಮಾಹಿತಿ ನೀಡುವುದರ ಜೊತೆಗೆ ಕಲ್ಲೇನಹಳ್ಳಿಯಲ್ಲಿ ದೊರೆತ ಶಾಸನದ ಕುರಿತು ಮಾಹಿತಿ ನೀಡಿದ್ದಾರೆ.

ಶಾಸನ ಮತ್ತು ಶಾಸನಶಿಲ್ಪಗಳ ಮಟ್ಟಿಗೆ ಸನ್ನತಿ ನಿವೇಶನ ಶ್ರೀಮಂತವಾದುದೆನ್ನಬೇಕು. ಶಾತವಾಹನರ ಅವಧಿಯ ಬ್ರಾಹ್ಮಿಶಾಸನಗಳು ವಿಪುಲವಾಗಿ ದೊರೆತಿವೆ. ಇವುಗಳ ಪ್ರತ್ಯೇಕ ಅಧ್ಯಯನವೂ ನಡೆದಿದೆ. ಬ್ರಾಹ್ಮಿಲಿಪಿ ಮತ್ತು ಪ್ರಾಕೃತಭಾಷೆಯಲ್ಲಿರುವ ಈ ಶಾಸನಗಳು ಶಾತವಾಹನರ ಚರಿತ್ರೆಯನ್ನು ಪುನಾರಚಿಸುವಲ್ಲಿ ಅತ್ಯುಪಯುಕ್ತ ಮಾಹಿತಿ ಒದಗಿಸಿವೆ. ಸನ್ನತಿ ಪರಿಸರದಲ್ಲಿ ದೊರೆತ ೮೦ಕ್ಕೂ ಹೆಚ್ಚು ಶಾಸನಗಳ ಪೈಕಿ ಸುಮಾರು ೮೦ ಶಾಸನಗಳು ಶಾತವಾಹನರ ಕಾಲದವು. ಇವುಗಳೊಡನೆ ಹನುಮಾಕ್ಷಿ ಗೋಗಿಯವರು ಗುಲ್ಬರ್ಗಾ ಜಿಲ್ಲೆಯ ಸುರಪುರ, ಶಹಪುರ ಮತ್ತು ಜೇವರ್ಗಿ ತಾಲ್ಲೂಕುಗಳಲ್ಲಿ ಸಂಗ್ರಹಿಸಿದ ೧೦ಕ್ಕೂ ಹೆಚ್ಚು ಶಾತವಾಹನಕಾಲೀನ ಶಾಸನಗಳನ್ನೂ ಪ್ರಸ್ತಾಪಿಸಿದ್ದಾರೆ.[೬] ಆದರೆ ಇವುಗಳಲ್ಲಿ ತುಂಡಾದ ಮತ್ತು ತೇದಿರಹಿತ ಶಾಸನಗಳೇ ಅಧಿಕ. ಒಟ್ಟಾರೆ, ಈ ಶಾಸನಗಳನ್ನು ಶಾಸನ ಶಿಲ್ಪಫಲಕ, ಬ್ರಾಹ್ಮಿ ಶಿಲಾಫಲಕ, ಸ್ಮಾರಕಶಿಲಾಬರಹ ಇತ್ಯಾದಿಯಾಗಿ ಇಲ್ಲಿ ಸಂಬೋಧಿಸಲ್ಪಟ್ಟಿದೆ.

ಶಾತವಾಹನ ದೊರೆ ಶಿವಸಿರಿ ಶಾತಕರ್ಣಿ, ವಾಶಿಷ್ಠಿಪುತ್ರ ಸಿರಿ ಶಾತಕರ್ಣಿ, ವಾಶಿಷ್ಠಿಪುತ್ರ ಶಿವಸಿರಿ ಪುಳುಮಾವಿ ಮತ್ತು ಮಹಾಶಾತವಾಹನರ ಅಗ್ನಿಶರ್ಮಾರ ಉಲ್ಲೇಖಗಳನ್ನೊಳಗೊಂಡಿವೆ. ಈ ಶಾಸನಪಾಠಗಳು. ಪ್ರಾಕೃತವಾಗಿದ್ದು ಇಲ್ಲಿ ಬಳಕೆಯಾದ ಭಾಷೆ; ಕ್ರಿ.ಶ. ೨-೩ನೇ ಶತಮಾನದ ಶಾತವಾಹನ-ಇಕ್ಷ್ವಾ ಶಾಸನಬರಹವನ್ನು ನೆನಪಿಸುವ ಲಿಪಿಶೈಲಿ. ಈ ಲಿಪಿಗಳು ಸಹಜವಾಗಿಯೆ ಶಾತವಾಹನರ ಅವಧಿಗೆ ವಿಶಿಷ್ಟವೆನಿಸುವ ಕೆಲವು ಲಕ್ಷಣಗಳನ್ನು ಹೊಂದಿವೆ. ಅಂದಿನ ಭಾಷಾಸ್ವರೂಪವನ್ನು ನಿರ್ಧರಿಸುವಲ್ಲಿಯೂ ಇವು ನೆರವಾಗಿವೆ. ಮುಖ್ಯವಾಗಿ, ಕನ್ನಡಭಾಷೆಯ ಪ್ರಾಚೀನತೆ ಕುರಿತು ವಿವೇಚಿಸುವಾಗ, ಈ ಶಾಸನಬರಹಗಳಲ್ಲಿ ಯುಕ್ತವಾಗಿರುವ ಸ್ಥಳನಾಮ, ವ್ಯಕ್ತಿನಾಮ ಮತ್ತು ಆಡಳಿತಶಬ್ದಗಳು ಹಾಗೂ ವಾಕ್ಯರಚನೆ ಮತ್ತು ಭಾಷಾವಿನ್ಯಾಸಗಳು ಗಮನಿಸಲರ್ಹವೆನಿಸುತ್ತವೆ. ಕೆಲವು ಶಬ್ದಗಳು ಉಂಟುಮಾಡುವ ಕುತೂಹಲಾಸಕ್ತಿಗಳು ವಿಶಿಷ್ಟವಾದುವು.

ಶಿಲ್ಪಸಹಿತವಿರುವ ಸ್ಮಾರಕಶಿಲಾ ಬರಹಗಳು ವಿಪುಲವಾಗಿದ್ದು, ಆ ಕಾಲದ ಶಾತವಾಹನ ಅರಸರು ಮತ್ತು ವಿವಿಧ ಜನವರ್ಗದವರನ್ನು ಪರಿಚಯಿಸುತ್ತವೆ; ಶಿಲ್ಪವೈವಿಧ್ಯವನ್ನೂ ತೋರಿಸುತ್ತವೆ.

ಶಾಸನಸಹಿತವಿರುವ ಗೌತಮಿಪುತ್ರ ಸಿರಿ ಶಾತಕರ್ಣಿಯ ಸುಂದರ ಶಿಲಾಫಲಕವನ್ನು ಶಿಲ್ಪಕಲೆಯ ನೆಲೆಯಲ್ಲಿ ಈಗಾಗಲೆ ಗಮನಿಸಲಾಗಿದೆ. ಶೈಲಿ ಹಾಗೂ ಚಾರಿತ್ರಿಕ ಸನ್ನಿವೇಶದ ದೃಷ್ಟಿಯಿಂದ ಇದೊಂದು ಅಮೋಘ ಶಿಲ್ಪ. ಇದು ಹೊಂದಿರುವ ಶಾಸನಪಾಠ ಸಹಾ ಅತ್ಯುಪಯುಕ್ತವಾದುದು. ಇಲ್ಲಿಯ ಎರಡುಸಾಲಿನ ಬರಹ ಮತ್ತು ಅರಸರ ಹೋರಾಟದ ಸಾಧನೆಗಳನ್ನು ನಿರೂಪಿಸುತ್ತದೆ ಮಾತ್ರವಲ್ಲ, ಪ್ರಮುಖ ಚಾರಿತ್ರಿಕ ಘಟನೆಗಳತ್ತಲೂ ಗಮನ ಸೆಳೆಯುತ್ತದೆ; ದಕ್ಷಿಣಾಪಥದಲ್ಲಿ ಶಾತವಾಹನರು ನಿರ್ವಹಿಸಿದ ಪಾತ್ರ ಕುರಿತು ಹೇಳುತ್ತದೆ. ಆದರೆ ಈ ಶಾಸನಪಾಠವು ಆರಂಭದಲ್ಲಿ ಮತ್ತು ಅಂತ್ಯದಲ್ಲಿ ತ್ರುಟಿತಗೊಂಡಿರುವ ಪ್ರಯುಕ್ತ ಅದರಲ್ಲಿಯ ಕೆಲವಂಶಗಳು ಸ್ಪಷ್ಟವಾಗಿಲ್ಲ.

ಈ ಶಾಸನಪಾಠವು ವಾಶಿಷ್ಠಿಪುತ್ರ ಪುಳುಮಾವಿಯ ಪ್ರಸಿದ್ಧ ನಾಸಿಕ್ ಶಾಸನ (ಕ್ರಿ.ಶ.೧೪೯) ಪಾಠ(ಪ್ರಶಸ್ತಿ)ಕ್ಕಿಂತ ತೀರಾ ಭಿನ್ನವಾಗಿಲ್ಲವೆಂಬುದು ಇಲ್ಲಿ ಮುಖ್ಯ. ಇದರಲ್ಲಿ ಕಾಣಸಿಗುವುದು, ಶಾತವಾಹನಕುಲದ ರಾಜಾಧಿರಾಜ ಗೌತಮಿಪುತ್ರ ಸಿರಿ ಶಾತಕರ್ಣಿಯ ಸಾಧನೆಗಳ ಒಂದು ನೋಟ. ಈ ಶಾಸನದಲ್ಲಿ ಈತ ನಹಪಾಣವಂಶದ ಕ್ಷಹರಾತ ಕ್ಷತ್ರಪಕ ಕುಲವನ್ನು ನಾಶಮಾಡಿ (ಕುಲಘಾತ) ಬೆಂನಾಕಟಕ, ವಿದರ್ಭ, ಉಪರಿಗಿರಿ, ಅಪರಾಂತ, ಅಸಕ, ಮುಲಕ, ರಥ, ಜಯವಿ, ಚಕೋರ, ವಲ್ಲ, ದಖಿನ(ದಕ್ಷಿಣ)ಗಳ ಅರಸನೆಂದು ಮತ್ತು ಹಲವಾರು ರಾಜರ ಕಿರೀಟ ಮಕುಟವನ್ನು ಪಡೆದುಕೊಂಡವನೆಂದು (ಅನೇಕ ರಾಜಮಸ್ತಕ ಪ್ರತಿಗ್ರಹೀತಸ್ಯ) ಕೀರ್ತಿಸಲ್ಪಟ್ಟಿದ್ದಾನೆ.[೮] ಈ ಶಾಸನ ಸಮರ್ಥಿಸುವಂತೆ, ಗೌತಮಿಪುತ್ರ ಶಾತಕರ್ಣಿಯ ಸಾಮ್ರಾಜ್ಯ ಈಗಿನ ಆಂಧ್ರ ಮತ್ತು ಮಹಾರಾಷ್ಟ್ರಗಳ ಬಹುಪಾಲು ಪ್ರದೇಶಗಳನ್ನು ಒಳಗೊಂಡಿದ್ದಿತು. ಹಾಗೆಯೇ, ಗಣನೀಯ ಪ್ರಮಾಣದಲ್ಲಿ ಮಧ್ಯಪ್ರದೇಶ, ಕರ್ನಾಟಕ ಮತ್ತು ಗುಜರಾತ್ ರಾಜ್ಯಗಳ ಕೆಲ ಪ್ರದೇಶಗಳನ್ನೂ ಆವರಿಸಿದ್ದಿತು. ಈ ಕಾರಣದಿಂದಲೇ ಈತ ತನ್ನನ್ನು ದಕ್ಷಿಣದ್ವೀಪಕಲ್ಪದ ಸಾಮ್ರಾಟನೆಂದು ಕರೆದುಕೊಂಡಿದ್ದಾನೆ. ಆದರೆ ಈ ಶಾಸನದಲ್ಲಿ ಪ್ರಸ್ತಾಪಗೊಂಡಿರುವ ಸ್ಥಳಗಳೆಲ್ಲವನ್ನು ಸರಿಯಾಗಿ ಓದುವ ಮತ್ತು ಗುರುತಿಸುವ ಅಗತ್ಯವಿದೆ ಎಂಬುದನ್ನು ಶ್ರೀಯುತರ ಆಶಯವಾಗಿದೆ. ಬಹುಮಟ್ಟಿಗೆ, ಗೌತಮಿಪುತ್ರ ಶಾತಕರ್ಣಿಯೇ ಕರ್ನಾಟಕದ ಉತ್ತರಭಾಗಗಳನ್ನು ಶಾತವಾಹನ ಸಾಮ್ರಾಜ್ಯಕ್ಕೆ ಸೇರಿಸುವುದರೊಡನೆ, ಮೊದಲಿಗೆ ಈ ಪ್ರದೇಶ ಈತನ ಮಗ ವಾಶಿಷ್ಠಿಪುತ್ರ ಪುಳುಮಾವಿಯ ಆಡಳಿತಾವಧಿಯಲ್ಲಿ ಸಾಮ್ರಾಜ್ಯದ ವ್ಯಾಪ್ತಿಗೆ ಬಂದಿತೆಂಬ ವಾದವನ್ನು ಈ ಶಾಸನ ಹುಸಿಗೊಳಿಸಿತೆನ್ನಬಹುದು. ಈ ಹಿಂದೆ ಬನವಾಸಿಯಲ್ಲಿ ದೊರೆತ ವಾಶಿಷ್ಠಿಪುತ್ರ ಶಿವಶ್ರೀ ಪುಳುಮಾವಿಯ ಹೆಂಡತಿಯ ಹೆಸರಿನಲ್ಲಿ ಮಾಡಿಸಿದ ಛಾಯಾಫಲಕಗಳನ್ನು ಬಿಟ್ಟರೆ, ಅದಕ್ಕೂ ಹೆಚ್ಚಿನ ಹಾಗೂ ನೇರವಾಗಿ ಶಾತವಾಹನ ಅರಸರಿಗೆ ಸಂಬಂಧಿಸಿದ ಶಾಸನ ಗೌತಮಿಪುತ್ರ ಶಾತಕರ್ಣಿಯದೇ ಎಂಬ ಅಭಿಪ್ರಾಯವಿದೆ.[೯] ಶಾಸನಪಾಠ ಹೊಂದಿರುವ ಇನ್ನೊಂದು ಶಿಲ್ಪವೆಂದರೆ 'ಮಹಾ ಶಾತವಾಹನ'ನಿಗೆ ಸಂಬಂಧಿಸಿದುದು. ಈಗ ಗುಲ್ಬರ್ಗದ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿ ರಕ್ಷಿಸಲ್ಪಟ್ಟಿರುವ ಈ ಶಿಲ್ಪದಲ್ಲಿರುವ ಅರಸ ಸನ್ನತಿಯ ವಾಶಿಷ್ಠಿಪುತ್ರ ಶಿವಸಿರಿ ಪುಳುಮಾವಿಯಾಗಿರಬಹುದು.

ಇನ್ನುಳಿದ ೧೦ ಶಾಸನಗಳು ಅಮಾತ್ಯರಿಗೆ ಮತ್ತಿತರ ಪ್ರಮುಖ ವ್ಯಕ್ತಿಗಳಿಗೆ ಸಂಬಂಧಿಸಿದುವು. ಶಿಲ್ಪಸಹಿತವಿರುವ ಶಾಸನವೊಂದು ಅಮಾತ್ಯನ ಮಗ ಪ್ರಿಯದತ್ತನೆಂಬುವನನ್ನು ದಾಖಲಿಸಿಕೊಂಡಿದೆ. ಇಲ್ಲಿ 'ಅಮಾತ್ಯ'ವೆಂಬುದನ್ನು 'ಅಮಾಚ್ಯ' ವೆಂದಿರುವುದು ಗಮನಾರ್ಹ. ಇನ್ನೊಂದು ಸ್ಮರಣಶಿಲ್ಪವು ರಾಜಾಮಾತ್ಯ ಗಗನಕ ಎಂಬುವವನ ಪತ್ನಿ ರಾಮಸಿರಿಯನ್ನು ದಾಖಲಿಸಿದೆ. ಇಲ್ಲಿ ವ್ಯಕ್ತಪಡುವುದು ಆಗ ಪ್ರಚಲಿತವಿದ್ದ ಅಧಿಕಾರಿಯೋರ್ವನ ಪತ್ನಿಯ ಬಗೆಗೂ ದಾಖಲಿಸುತ್ತಿದ್ದ ಪದ್ಧತಿ; ಹಾಗೂ ರಾಮಶ್ರೀ-ರಾಮಸಿರಿ ಎಂಬ ಹೆಸರಿನಲ್ಲಿಯ ವೈವಿಧ್ಯತೆ ಕಾಣಬಹುದಾಗಿದೆ. ಬಳಿವದಾರದ ನಿವಾಸಿ ಹಾಗೂ ವಣಿಕ ಆಪಕುಟಿ ಎಂಬುವವನ ಹೆಸರು ಮತ್ತು ಆತ ಪೂಜಿಸುತ್ತಿದ್ದ ಮಹಾಸೇನ ದೈವದ ಹೆಸರು; ಅಮಾತ್ಯನೋರ್ವನ ಪುತ್ರ ದ್ರೋಣದಾಸ ಎಂಬವನ ಹೆಸರು ಹಾಗೂ ಮುಡಾನಗ್ರಾಮದ 'ಮಹಾಗ್ರಾಮಿಕುಮಾರ', ಅಂದರೆ ಗ್ರಾಮದ ಮುಖ್ಯಸ್ಥ ದೆಟಿಕ ಮತ್ತು ಅಹಿಮಾರಿಕಗ್ರಾಮದ ಭಟಿ ಎಂಬಾತನ ಮಗ ಪುರುಷದತ್ತ-ಇವರ ಹೆಸರುಗಳು ಇವರ ನೆನಪಿನಲ್ಲಿ ಸ್ಥಾಪಿಸಿದ ಶಿಲಾಬರಹಗಳಿಂದ ತಿಳಿದುಬರುತ್ತದೆ.

ಒಬ್ಬಳು ಅಥವಾ ಇಬ್ಬರು ಸ್ತ್ರೀಯರಿರುವ ಶಾಸನೋಕ್ತಶಿಲ್ಪದ ತುಂಡೊಂದು ಇಲ್ಲಿ ಗಮನಿಸಲರ್ಹವಾದುದು. ಅಮಾಚಿ ಯಕ್ಷಣಿಕಾ ಮತ್ತು ಅಮಾಚಿ ಸಂಘನಿಕಾ ಎಂಬುವು ಇವರೀರ್ವರ ಹೆಸರುಗಳು. ಸನ್ನತಿಯ ಶಿಲ್ಪಗಳು ಅನ್ಯ ಶಿಲ್ಪಶೈಲಿಯ ಪ್ರಭಾವಕ್ಕೆ ಒಳಗಾಗಿರುವುದರ ಹಿನ್ನೆಲೆಯಲ್ಲಿ ಆಲೋಚಿಸಿರುವಂತೆ, ಈ ಶಿಲ್ಪವೂ ರೋಮನ್ ಶಿಲ್ಪಕಲಾಶೈಲಿಯ ಲಕ್ಷಣಗಳನ್ನು ಹೊಂದಿದೆ. ಈ ಶಾಸನಶಿಲ್ಪದಲ್ಲಿರುವ ಪಾಠದನ್ವಯ ಅಮಾತ್ಯ ಶಬ್ದವೇ ಅಮಾಚಿ ಎಂದಾಗಿರುವುದು ಸ್ಪಷ್ಟ. ಇಂತಹ ಪ್ರಯೋಗ ಅಪರೂಪವಾದರೂ ರಾಜನ ಸೇವೆಯಲ್ಲಿ ನಿರತರಾಗಿದ್ದ ಅಮಾತ್ಯ, ಮಹಾಸೇನಾಪತಿ, ಮಹಾದಂಡನಾಯಕ, ಮಹಾತಳವಾರ ಮೊದಲಾದ ಉಚ್ಚಮಟ್ಟದ ಅಧಿಕಾರಿಗಳನ್ನು ಅಧಿಕಾರಸೂಚಕವಾದ ಇಂಥಾ ಸ್ಥಾನಮಾನಗಳಿಂದಲೇ ಸಂಬೋಧಿಸುತ್ತಿದ್ದಂತೆಯೆ, ಅವರವರ ಪತ್ನಿಯರನ್ನೂ ಇದೇ ಬಗೆಯಲ್ಲಿ ಸಮಾನಾಂತರವಾಗಿ ಅಮಾತ್ಯಿ, ಮಹಾದಂಡನಾಯಕಿ, ಮಹಾಸೇನಾಪತಿನಿ ಮತ್ತು ಮಹಾತಳವಾರಿ ಎಂದು ಗೌರವಪೂರ್ವಕವಾಗಿ ಕರೆದಿದ್ದಾರೆ. ಅಧಿಕಾರಸ್ಥರ ಸ್ತ್ರೀಯರಿಗೆ ಅಂದಿನ ವ್ಯವಸ್ಥೆ ನೀಡಿದ ಮನ್ನಣೆಗೆ ಇದೊಂದು ಉತ್ತಮ ಉದಾಹರಣೆ. ನಾಗಾರ್ಜುನಕೊಂಡ ಮತ್ತು ಅಂಧ್ರೌಗಳಲ್ಲಿರುವಂತೆ ಸ್ತ್ರೀಯರ ಸ್ಮರಣೆಗೆ ಶಿಲ್ಪಗಳನ್ನು ನಿಲ್ಲಿಸುವ ಪದ್ಧತಿ ಸನ್ನತಿಯಲ್ಲಿಯೂ ಇದ್ದಿತು. ರಾಜಕುಟುಂಬಕ್ಕೆ ಸೇರಿದ ಸ್ತ್ರೀಯರ ಸ್ಮಾರಕಶಿಲ್ಪಗಳಲ್ಲಿ ಅವರು ತಮ್ಮ ಸೇವಕಿಯರ ಸಹಿತವಿರುವಂತೆ ಕೆತ್ತಿಸಿರುವುದು ಕಂಡುಬರುತ್ತದೆ.

ಪ್ರಮುಖ ವ್ಯಕ್ತಿಯೋರ್ವನನ್ನು ಕುರಿತ ಶಿಲ್ಪಸಹಿತವಿರುವ ಶಾಸನದ ತುಂಡುಕಲ್ಲೊಂದರಲ್ಲಿ 'ಮಹಾರಥಿಪುತಸ' ಎಂದಿದೆ. ಈ ವ್ಯಕ್ತಿ ಯಾರೆಂಬುದಕ್ಕೆ ಯಾವ ಸೂಚನೆಯೂ ಇಲ್ಲ. ಇಲ್ಲಿಯ ಬೀರಪ್ಪ ದೇವಾಲಯದಲ್ಲಿ ನಿಲ್ಲಿಸಿರುವ ಕಲ್ಲಿನಲ್ಲಿ 'ಚೆಜಕಸ ಮುಗುರ ಕೊಣ್ಣಸ ಭೋಜಿಕಿನಿಯ ಕಾಮಾಯ ಲೇಖ(ಕ) ಪುತಸ ನಣ್ಣಕೊಟವಸ' ಎಂಬ ಮೂವರು ವ್ಯಕ್ತಿಗಳನ್ನು ಗುರುತಿಸುವ ಬರಹವಿದ್ದು, ಇದು ಮೃತವ್ಯಕ್ತಿಗಳನ್ನು ಪ್ರಸ್ತಾಪಿಸುತ್ತದೆನ್ನಬಹುದು. ಇದು

ಶಿಲ್ಪಸಹಿತವಿದ್ದು, ಇದರಲ್ಲಿ ಚೈತ್ಯಾಕಾರದ ಮೂರು ಬಾಗಿಲುವಾಡಗಳನ್ನು ಕಲ್ಲಿನ ಮೇಲ್ತುದಿಯಲ್ಲಿ ಬಿಡಿಸಿದೆ. ಸೇವಕಿಯರ ಸಹಿತವಿರುವ ಹಾಗೂ ಆಸೀನರಾಗಿರುವ ಮೂವರು ವ್ಯಕ್ತಿಗಳು ಇದರ ಕೆಳಬದಿಯಲ್ಲಿ ಕಂಡುಬರುತ್ತಾರೆ. ಹಾಗೆಯೇ, ಚಂದ್ರಲಾಂಬಾ ದೇವಾಲಯದಲ್ಲಿರುವ ತುಂಡಾದ ಕಲ್ಲಿನಲ್ಲಿ ಸಿಂಹಧರನೆಂಬ ಮಂತ್ರಿಯ ಹೆಸರನ್ನು ಉಲ್ಲೇಖಿಸಿದೆ.

ಇನ್ನಿತರ ಸ್ಮಾರಕಶಿಲ್ಪ ಬರಹಗಳು ಕೆಲವು ವಿಶಿಷ್ಟ ಅಂಶಗಳನ್ನು ಹೊರಗೆಡವುತ್ತವೆ. ಉದಾಹರಣೆಗೆ, ಈರ್ವರು ಸೇವಕರ ಸಹಿತವಿರುವ ವ್ಯಕ್ತಿಯ ಸ್ಮಾರಕ ಮುಖ್ಯವಾದುದು. ಇದರಲ್ಲಿರುವ ವ್ಯಕ್ತಿಯನ್ನು ಶ್ರೀಖಿರಿಯಾ ಎಂಬ ಸ್ಥಳಕ್ಕೆ (?) ಸೇರಿದ ಕಪಡರ ಕುಟುಂಬದ ನಾಗಿಪ ಎಂದು ಉಲ್ಲೇಖಿಸಿದೆ. ವಿದ್ವಾಂಸರು ಭಾವಿಸುವಂತೆ, ನಾಗಿಪ ಎಂಬುದು ನಾಗಪ್ಪ ಎಂಬುದರ ರೂಪವಿರಬಹುದು. ಶ್ರೀಖಿರಿಯಾ ಎಂಬುದನ್ನು ಸ್ಥಳನಾಮವೆಂದಿದ್ದರೂ ಇದರ ನಿರ್ದಿಷ್ಟ ಸ್ಥಾನ ನಿರ್ದೇಶಿಸುವಲ್ಲಿ ಸಫಲತೆ ದೊರೆತಿಲ್ಲ.

ಚಂದ್ರಲಾಂಬಾ ದೇವಾಲಯದಲ್ಲಿ ಕಂಡುಬಂದ ಕಲ್ಲುತುಂಡೊಂದು ವಿಶೇಷ ಲಕ್ಷಣದಿಂದ ಕೂಡಿರುವುದು ಸ್ವಾರಸ್ಯಕರವಾಗಿದೆ. ಆದರೆ ಇದರ ಮೇಲ್ಭಾಗವು ಕಾಣೆಯಾಗಿದೆ. ಇದರಲ್ಲಿ ಯಾವ ಶಿಲ್ಪವನ್ನು ಮೂಡಿಸಿಲ್ಲವಾದರೂ ಸ್ತಂಭಗಳಿಂದ ಕೂಡಿದ ಭವನದಂತಹ ಆಕೃತಿಯನ್ನು ಗೀರುಚಿತ್ರದಲ್ಲಿ ಬಿಡಿಸಿರುವುದು ಗಮನಾರ್ಹ. ಇದು ಮೇಲೆ ಪ್ರಸ್ತಾಪಿಸಿದ, ಗುಲ್ಬರ್ಗಾ ವಸ್ತುಸಂಗ್ರಹಾಲಯದಲ್ಲಿರುವ ರಾಜಾಮಾತ್ಯ ಗಗನಕನ ಹೆಂಡತಿ ರಾಜಾಮಾತ್ಯಿ ರಾಮಶ್ರೀಯ ಸ್ಮರಣಶಿಲ್ಪವನ್ನು ನೆನಪಿಗೆ ತರುತ್ತದೆ. ರಾಮಶ್ರೀಯ ಶಾಸನಶಿಲ್ಪದಲ್ಲಿ ಆಕೆ ಆಸೀನಳಾಗಿರುವ ಉನ್ನತಾಸನವನ್ನು ಕೆತ್ತಿ ಮೂಡಿಸುವ ಬದಲು ಇಂತಹದ್ದೇ ಗೀರುಚಿತ್ರದ ಮೂಲಕ ಸರಳವಾಗಿ ತೋರಿಸಲಾಗಿದೆ. ಹಾಗೆಯೇ, ಈ ಶಿಲ್ಪವನ್ನು ಸ್ತಂಭಗಳಿಂದ ಕೂಡಿದ ಭವನದಲ್ಲಿರುವಂತೆ ಬಿಡಿಸಲಾಗಿದೆ. ಚಂದ್ರಲಾಂಬಾ ದೇವಾಲಯದಲ್ಲಿಯ ಕಲ್ಲುತುಂಡು, ಸಹಭವನವೊಂದರ ಅಥವಾ ಕಲ್ಲುತೋರಣವೊಂದರ ಕಂಬಗಳಿಂದ ಕೂಡಿದ್ದು, ಇದರಲ್ಲಿ ಅಡ್ಡಲಾಗಿ ನಾಗಬೋಧಿಯ ಸ್ಮರಣೆ ಎಂದು ಬರೆದಿದೆ.

ಸನ್ನತಿಯ ಕಲ್ಲಬರಹಗಳಿಂದ ತಿಳಿದುಬರುವ ಬಿರುದುಗಳು, ಸ್ತ್ರೀ ಪುರುಷರ ಹೆಸರುಗಳು, ಸ್ಥಳನಾಮಗಳು ಇತ್ಯಾದಿ ಸ್ವಾರಸ್ಯಕರವಾಗಿವೆ. ಭಾಷಿಕನೆಲೆಯಲ್ಲಿಯೂ ಇವುಗಳಿಗೆ ಮಹತ್ವವಿದೆ. ಅಂತಹ ಬಿರುದುಗಳೆಂದರೆ ಮಹಾರಥಿ, ಮಹಾತಾರಕ, ಮಹಾಸಾಥಾವಹ, ಮಹಾಸೇನ, ಮಹಾಗ್ರಾಮಿ, ಮಹಾತಳವಾರ, ಮಹಾನಾಸಿಕ ಭೋಜಕ, ರಾಜಾಮಾಚ್ಯ, ರಾಜಾಮಾಚ್ಯೆ, ರಾಜ, ಅಮಾಚ್ಯ, ಅಮಾಚ್ಯಪುತ, ಭೋಜಕ, ಸೇನಾನಿ, ಗ್ರಾಮಿ, ವಣಿಯ, ವಣ್ಣೀ ಇತ್ಯಾದಿ; ಪುರುಷರ ಹೆಸರುಗಳೆಂದರೆ, ಅಗ್ನಿಶರ್ಮ, ಆಪಕುಟಿ, ಭಟಿ, ಗಗನಕ, ಅರಿಕ, ದೆಟಿಕ/ಓಟಿಕ, ಗಿರಿದತ್ತ, ಹಿಮಾನಂದ/ಹೇಮಚಂದ, ಪುರುಷದತ್ತ/ಪುರಿಸಿದತ್ತ, ಕಹ್ಹಾ..., ಲಾಮ, ಮಿತಭೂತಿ, ಮೃಗರಕೋಣ, ನಭೋನಟವ, ನಾಗಬುದ್ಧಿ, ನಾಗದೇವ, ಪೈಥಣಕ, ರುಥಪಾಲ/ರುದ್ರಪಾಲ, ಸಮದಸ, ಸಂಕಪ(?), ಸಿ(ಸೆ)ರಾಮ, ಸಳನಿಕಾಯ, ಸೇನಾಪ್ಪ, ದ್ರೋಣದಾಸ, ಸಿಂಹಧರ,

ಸಿಯಾಪಾಲಯ, ಶ್ರೀಮುಖ, ಸುಲಸ, ಸ್ವಿಯಾದತ್ತ, (ತು)ಲಭೂತ, ಇಯಾರಾಯ, ವಿಸಾಖಾ, ವೀರ ಇತ್ಯಾದಿ; ಸ್ತ್ರೀಯರ ಹಾಗೂ ಸ್ಥಳಗಳ ಹೆಸರುಗಳೆಂದರೆ ಅಮಿಕಾ, ಅಯಾದಸಿ, ಗೋವಿದಶ್ರೀ, ಕಪದಾರ/ಕಪಾದ್ರ, ಹಥಿಲಾ, ನಾಗನಿಕಾ, ಯಕ್ಷಣಿಕಾ, ಕುಮಾಯ ಲೇಖ, ನಿಯನಾಮ್ನಿ, ಸಮಾಲೇಖ/ಸ್ಯಾಮಲೇಖ, ಸ್ಯಾಮ, ವಾಣಿ, ಯಖಾ, ಸಂಘನಿಕಾ, ಸಿಹಾದಿ, ಯಖಾನಿಕಾ, ಅಮ್ಮಿ, ಬಳಿವದಾರ, ಶ್ರೀಖಿರಿಯಾ/ಶ್ರೀಖಿರ್ಯಾ, ಅಹಿಮಾರಿಕಾ, ಚಕ್ರತಿ ಪರ್ವತ, ಮುಡಾನ, ಸುಧಾ, ಪದ್ಮಶ್ರೀ, ರಾಮಶ್ರೀ/ರಾಮಸಿರಿ, ಮಹಾಸೇನ (ದೈವ) ಇತ್ಯಾದಿ.

ನಾಗಾಮಿ ಅಥವಾ ಚಾಗಾಮಿ ಎಂಬುವವನ ಮಗಳು ಪದ್ಮಶ್ರೀಯ ಶಾಸನೋಕ್ತ ಸ್ಮರಣಶಿಲ್ಪ ಕೆಲವು ವೈಶಿಷ್ಟ್ಯಗಳಿಂದ ಕೂಡಿರುವಂತದ್ದಾಗಿದ್ದು. ಇವಳು ಶ್ರೀಮಂತವರ್ಗಕ್ಕೆ ಸೇರಿದವಳು ಪದ್ಮಶ್ರೀ ಎಂಬುದನ್ನು ಈ ಶಿಲ್ಪದಲ್ಲಿ ತೋರಿಸಲಾಗಿರುವ ವಿವರಗಳು ಮನದಟ್ಟು ಮಾಡಿಕೊಡುತ್ತವೆ. ಶಿಲ್ಪದಲ್ಲಿ ನಾಲ್ವರು ಸೇವಕಿಯರಿದ್ದು, ವಿವಿಧ ಅಲಂಕರಣ ವಸ್ತುಗಳನ್ನು ಹಿಡಿದುಕೊಂಡಿದ್ದಾರೆ. ಮಧ್ಯದಲ್ಲಿ ಮೂಟೆಯಂತಹ ಎತ್ತರದ ಅಲಂಕೃತ ಆಸನದ ಮೇಲೆ ಅರ್ಧ ಪರ್ಯಂಕಾಸನ ಭಂಗಿಯಲ್ಲಿ ಕುಳಿತಿದ್ದಾಳೆ ಪದ್ಮಶ್ರೀ. ಓರೆಯಾಗಿ ಇಳಿಬಿಡಲಾಗಿರುವ ಆಕೆಯ ಬಲಗಾಲು ಅಡಿಯಲ್ಲಿರುವ ಪಾದದ ದಿಂಬಿನ ಮೇಲೆ ಒರಗಿದೆ. ಈ ಶಾಸನಫಲಕಗಳಲ್ಲಿ ಪ್ರಸ್ತಾಪ ಗೊಂಡಿರುವ ಇತರರೆಂದರೆ, ಸಿರಿ ಮಕಸ ಅಥವಾ ಶ್ರೀಮುಖನೆಂಬ ಅರಸ (?), ವಣಿಯ ಅಥವಾ ವ್ಯಾಪಾರಿಯಾದ ಖಹ, ಧರಮಹ, ದಟಿಲ, ಸಿಯಪಾಲ ಅಥವಾ ಶ್ರೀಯಪಾಲ, ಸಲೋಣಕ (ಸ್ತ್ರೀ), ಧುಜಿಟಕದ ಮಿತಭೂತಿಯ ಸೋದರಿ ಹಾಗೂ ಶಿಷ್ಯೆ ಶ್ಯಾಮಾ, ಘಾಲಾದ ಕಣ್ಹ, ಸೋಮಘ, ವಾಣಿ ಮತ್ತು ಸೇರಣ್ಣ (ದಂಪತಿ), ಅಖರಿ ನಿಬಿಯಾದ ಭೋಡಸಾ ಇತ್ಯಾದಿ.

ಈ ಮೇಲಿನ ಸಂಗತಿಗಳೊಡನೆ ಗೃಹಪತಿ, ಗೃಹಪತ್ನಿ, ಶ್ರೇಷ್ಠಿ ಅಥವಾ ವಣಿಯರಿಗೆ ಸಂಬಂಧಿಸಿದ ಮಾಹಿತಿಯನ್ನೂ ಒದಗಿಸುವ ಶಾಸನಗಳು ಇಲ್ಲಿವೆ. ಇವು ಸಹಜವಾಗಿಯೆ ಸಮಾಜದ ಶ್ರೀಮಂತವರ್ಗದವರು ಮತ್ತು ವೃತ್ತಿಪರ ಹಣವಂತರನ್ನು ಪ್ರತಿನಿಧಿಸುವಂತಹವು. ವಿವಿಧ ವೃತ್ತಿಗಳಲ್ಲಿ ತೊಡಗಿದ್ದವರ ವಿವರಗಳು ಇವುಗಳಿಂದ ತಿಳಿದುಬರುತ್ತವೆ. ಶಿಲ್ಪಸಹಿತವಿರುವ ಎರಡುಸಾಲಿನ ಶಾಸನಬರಹವೊಂದು ಅಹಿಮಾರಿಕಾದ ನಿವಾಸಿ ನಾಗನಿಕಾ ಮತ್ತು ಅರಿಕಾ ಎಂಬುವವನ ಸಹೋದರನಾಗಿದ್ದ ಗಿರಿಜಾ ಎಂಬುವವರಿಗಾಗಿ ಸ್ಥಾಪಿಸಿದ ಶಿಲಾಸ್ಮಾರಕ ಕುರಿತು ಅರುಹುತ್ತದೆ. ಈ ಬರಹದ ಪ್ರಕಾರ, ಗಿರಿಜಾ ಎಂಬುವವನು ಗಣಕ ಅಥವಾ ಅಂಕಿಸಂಖ್ಯಾ ಶಾಸ್ತ್ರಜ್ಞನಾಗಿದ್ದ. ಗೃಹಿಣಿ ಸಿಹಾಡಿ ಮತ್ತು ಹೇಮಾ ನಂದ ಎಂಬೀರ್ವರು ಮಹಿಳೆಯರನ್ನು ಇನ್ನೊಂದು ಬರಹ ದಾಖಲಿಸಿಕೊಂಡಿದೆ. ಮಹಿಳೆಯ ಶಿಲ್ಪವಿರುವ ಶಾಸನವೊಂದು ಅಹಿಮಾರಿಕಾದ ಗೃಹಿಣಿ ಎಂದಷ್ಟೇ ಹೇಳುತ್ತದೆ. ಇದು ಆರಂಭ ಮತ್ತು ಕೊನೆಯಲ್ಲಿ ತ್ರುಟಿತ ಗೊಂಡಿರುವ ಕಾರಣದಿಂದಾಗಿ ಗೃಹಿಣಿಯ ಹೆಸರು ತಿಳಿದುಬರುವುದಿಲ್ಲ. ಶಾಸನೋಕ್ತವಾಗಿರುವ ಇನ್ನೋರ್ವ ಗೃಹಿಣಿಯ ಹೆಸರು ಸಮಾಯ. ಯಖಾ ಎಂಬ ಗೃಹಿಣಿ ಮತ್ತೆ ಕಲ್ಲುಬರಹದಲ್ಲಿ

ಕಾಣಿಸಿಕೊಂಡಿದ್ದಾಳೆ. ಸುಂದರ ಸ್ಮಾರಕಶಿಲೆ ದಾಖಲಿಸಿಕೊಂಡಿರುವುದು ಗೃಹಪತಿ ಸೂಲ ಎಂಬುವವನ ಹೆಸರನ್ನು.

ಈಗಾಗಲೆ ಗಮನಿಸಲಾದ ಗೋವಿದಾಸಿ ಮತ್ತು ಆರ್ಯದಾಸಿಯರನ್ನು ಕುರಿತ ಶಾಸನಬರಹ ಎರಡು ಉದ್ದಸಾಲುಗಳನ್ನು ಒಳಗೊಂಡಿದ್ದು; ಹಾಗೂ ಸಮತಟ್ಟಾದ ಕಲ್ಲುಹಾಸಿನ ಮೇಲೆ ಕೊರೆಯಲ್ಪಟ್ಟಿರುವಂತಹದ್ದು. ಇದರಲ್ಲಿ ಬುದ್ಧಶ್ರೇಣಿಯೊಂದಕ್ಕೆ ಸೇರಿದ ಗೋವಿದಾಸಿ ಎಂಬ ನಟಿಕಾ ಅಥವಾ ನೃತ್ಯಗಾತಿ ಪ್ರಕಾರವೊಂದನ್ನು ನಿರ್ಮಿಸಿದಳೆಂದಿದೆ; ಹಾಗೆಯೆ, ನಡಿಯಗುಡ ಎಂಬವನ ಪುತ್ರಿ ಹಾಗೂ ನರ್ತಕಿ ಆರ್ಯವಾಸಿ ಮತ್ತು ನಟಿ ವಾಲುಕಿಯರು ಮುಖುಡಿಕಾ ಅಥವಾ ಉನ್ನತವಾದ ದ್ವಾರ ಅಥವಾ ಸಭಾಂಗಣವನ್ನು ಕಟ್ಟಿಸಿಕೊಟ್ಟರೆಂದಿದೆ. ಪ್ರೀತಿಪಾತ್ರ ವ್ಯಕ್ತಿಯೆಂಬ ಅರ್ಥ ಹೊಂದಿರುವ ಪೆಮನುಸ ಎಂಬ ವ್ಯಕ್ತಿಯ ಹೆಸರುಳ್ಳ ಶಿಲ್ಪ ಕುರಿತು ಮೇಲೆಯೆ ಗಮನಿಸಲಾಗಿದೆ. ಇಂತಹದೆ ಇನ್ನೊಂದು ಶಿಲ್ಪಫಲಕದಲ್ಲಿ 'ಗೊ ಮುಡಸ-ಜಾ' ಎಂಬ ಹೆಸರಿನ ಉಲ್ಲೇಖವಿದ್ದು, ಇದರ ಅರ್ಥ ಸ್ಪಷ್ಟವಾಗುವುದಿಲ್ಲ. ಮತ್ತೊಂದು ಶಾಸನಶಿಲ್ಪದಲ್ಲಿ ವಣಿಯವರ್ಗಕ್ಕೆ ಸೇರಿದ ವೀರ ಮತ್ತು ಅಣಿ ಎಂಬೀರ್ವರು ಪುರುಷ ಮತ್ತು ಸ್ತ್ರೀಯರ ಹೆಸರುಗಳಿವೆ. ಇವುಗಳೊಡನೆ ಇತರ ಬರಹಗಳಲ್ಲಿ ದಾಖಲುಗೊಂಡಿರುವ ಮಾಜನ (ಮಹಾಜನ), ಗೃಹಿಣಿ ಮಿತ್ರ ಮೊದಲಾದವರನ್ನು ಪ್ರಸ್ತಾಪಿಸಬಹುದು.

ಹರಕೆಗೆ ಸಂಬಂಧಿಸಿದ ತುಣುಕು ಶಾಸನಗಳಿದ್ದು, ಇವು ಶೋಧಗೊಂಡುದು ಸನ್ನತಿಯ ದಿಬ್ಬದ ನಿವೇಶನಗಳಲ್ಲಿ. ಸಂಸ್ಕೃತ ಪ್ರಭಾವಕ್ಕೊಳಪಟ್ಟ ಶಾಸನವೊಂದು ಸೇರಮನೆಂಬುವನ ಮಗ ಹುಕ ಎಂಬವನು ದ್ವ ಛಟಜ್ಞಾ (ದೇವ ಛಡ್ಕಾ) ಅಥವಾ ಮೇಲ್ಛಾವಣಿಯನ್ನು ಮಾಡಿಸಿ ಕೊಟ್ಟಿದ್ದನ್ನು ತಿಳಿಸುತ್ತದೆ. ಅಲ್ಲದೆ, ಸಂಕಪ ಎಂಬಾತನ ಸೇವೆಯನ್ನು, ಅಖಿಪಟಲಿಕಾ ಎಂಬ ಅಸ್ಪಷ್ಟ ಅರ್ಥದ ಉಲ್ಲೇಖವನ್ನು, ಮುಡಾನಿಸಾ ಅಥವಾ ಮುಡಾನಿಯ ಎಂಬ ಹೆಸರನ್ನು, ಮಹಾನಾಸಿಕಾ ಎಂಬ ಸ್ಮರಣೆಯನ್ನು, ನಾಗದೇವ ಎಂಬ ಸೇವಕನನ್ನು, ಅಮಾನಿಕಾ ನೀಡಿದ ಕೊಡುಗೆಯನ್ನು, ರುಡಪಾಲ ಎಂಬುವನ ಪ್ರಸ್ತಾಪವನ್ನು, ಅರಕ ಅಥವಾ ಅರ್ಕ ಎಂಬಾತ ಮಾಡಿಸಿಕೊಟ್ಟ ಮೇಲ್ಛಾವಣಿಯ ಉಲ್ಲೇಖವನ್ನು, ಮೆಟ್ಟಿಲೊಂದರ ಮೇಲೆ ಕಂಡರಿಸಲಾದ ಭಾಂಬಿ ಎಂಬ ಸ್ಥಳದ ಶ್ಯಾಮ ಲೋಕಿಕ ಎಂಬ ವ್ಯಕ್ತಿಯ ಹೆಸರನ್ನು, ಶ್ರಮಣನೆಂಬುವನ ಸ್ಮರಣೆಯನ್ನು ಇತರ ತುಂಡುಕಲ್ಲುಬರಹಗಳು ವ್ಯಕ್ತಪಡಿಸುತ್ತವೆ.

ಶಿಲ್ಪರಹಿತವಾದ ಕೆಲವು ಅಕ್ಷರಗಳ ಬರಹಗಳನ್ನು ಹೊಂದಿರುವ ಹಲವು ತುಂಡುಕಲ್ಲುಗಳು ಸನ್ನತಿ ಪರಿಸರದಲ್ಲಿ ದೊರೆತಿವೆ. ವ್ಯಕ್ತಿನಾಮ, ಸ್ಥಳನಾಮ ಹಾಗೂ ಇತರ ಅಂಶಗಳನ್ನು ಹೊಂದಿರುವ ಈ ಬರಹಕಲ್ಲುಗಳು ಕುತೂಹಲಕಾರಿಯಾದುವು. ಪ್ರಾಯಶಃ ಸ್ಥಳನಾಮವಾಗಿರ ಬಹುದಾದ 'ರಕ್ಷಿತ' ಎಂಬುದನ್ನು ಕಲ್ಲೊಂದರಲ್ಲಿ ದಾಖಲಿಸಲಾಗಿದೆ. ಮಹಿ ಎಂಬ ಶೈಲ ಅಥವಾ ಬೆಟ್ಟವೊಂದರ ಹೆಸರನ್ನು ಇನ್ನೊಂದು ಕಲ್ಲು ಹೊಂದಿದೆ. ಸದಾ ಸಿರಿಯ, ದಾಸಿ, ಅಸವಾ(ರಿ), ಕಿನಿಯ ಧನ, ನಕ(ಸ), ಕಸ(ನ), ಕಯ, ಫಸನ, ಬಚ್ಚಿನಿಕಾಯ, ಗೆ(ಲಡ),

ಸೋಮನಮಿ, ಅಮಾಚಸ ಲಮಸ ಮೊದಲಾದ ತುಂಡುಬರಹಗಳೂ ಕಂಡುಬರುತ್ತವೆ. ಸಾಂಬ, ಶ್ಯಾಮದಾಸ, ವಲಿಯತಾಯ ಪ್ರದೇಶಕ್ಕೆ ಸೇರಿದ ಅಮ್ತವಾಸಿನಿ ಎಂಬ ಸ್ಥಳದ ನಿವಾಸಿ ಪ್ರಿಯಂಕಾ, ಗಣಕನಾದ ಶಿವಥಂಕ, ಊರೊಂದರ ಹೆಸರೆನಿಸಿದ ಕೊಮಾರಿ, ಹೆಣ್ಣಿನ ಹೆಸರಾದ ಅರಕ ಮೊದಲಾದ ಉಲ್ಲೇಖಗಳು ದೊರೆಯುತ್ತವೆ. ಸ್ನಾನಘಟ್ಟಕ್ಕೆ ಹೋಗುವ ದಾರಿಯಲ್ಲಿ ಮರಿಕ ಖಡಕೊ ಎಂಬ ಬರಹವಿರುವ ಕಲ್ಲು ದೊರೆತಿದೆ. ಇಂತಹ ಇನ್ನೂ ಅನೇಕ ಬರಹಶಿಲೆಗಳಿದ್ದರೂ ಅವು ಅಸ್ಪಷ್ಟ ಅರ್ಥ ಮತ್ತು ವಿವರಗಳಿಂದ ಕೂಡಿವೆ.

ಸನ್ನತಿಯಲ್ಲದೆ, ಗುಲ್ಬರ್ಗಾ ಜಿಲ್ಲೆಯ ಸುರಪುರ, ಶಹಪುರ ಮತ್ತು ಜೇವರ್ಗಿ ತಾಲ್ಲೂಕುಗಳಲ್ಲಿ ದೊರೆತ ಶಾತವಾಹನಕಾಲದ ಶಿಲಾಫಲಕಗಳನ್ನೂ ಇಲ್ಲಿ ಗಮನಿಸಬಹುದು. ಹನುಮಾಕ್ಷಿ ಗೋಗಿಯವರು ಶೋಧಿಸಿದ ಈ ಶಿಲಾಫಲಕಗಳು ಶಾತವಾಹನರಕಾಲದ ಸಾಮಾಜಿಕ, ಆರ್ಥಿಕ ಜೀವನದ ವಿವರಗಳನ್ನು ನೀಡುತ್ತವೆ.[೧೦] ಜೇವರ್ಗಿಯಲ್ಲಿ ದೊರೆತ ಶಿಲಾಫಲಕ ಶಾತವಾಹನರಕಾಲದ ಉಬ್ಬುಶಿಲ್ಪ ಕಲಾಕೃತಿಯ ಒಂದು ಸುಂದರ ಮಾದರಿಯಂತಿದೆ. ಇದು ತಿಳಿಹಳದಿ ಬಣ್ಣದ ಸೇದಿಬಂಡೆ. ಒಟ್ಟು ಮೂರು ಸ್ತರಗಳಲ್ಲಿ ಬಿಡಿಸಲಾದ ಈ ಸ್ಮರಣಶಿಲ್ಪ ಪ್ರಸ್ತಾಪಿಸುವುದು ನಾಸಮಸ ಮತ್ತು ಸಂಘನೀಯ ಎಂಬೀರ್ವರು ಸ್ತ್ರೀ-ಪುರುಷರ ಹೆಸರುಗಳನ್ನು. ಅಂದರೆ, ಈ ಫಲಕ ನಾಸಮಸನದು ಮತ್ತು ಸಂಘನಿಯದು. ಅವರ ಆಕೃತಿಗಳ ಮೇಲೆಯೇ ಈ ಹೆಸರುಗಳನ್ನು ಕೆತ್ತಲಾಗಿದೆ. ಈ ಶಿಲಾಫಲಕದ ಮೂರನೆ ಸ್ತರದಲ್ಲಿ ನೊಗಹಾರಿದ ಎತ್ತಿನಗಾಡಿಯಿದ್ದು, ಒಂದು ಎತ್ತು, ಮಲಗಿ ಇನ್ನೊಂದು ನಿಂತಿದೆ. ಮೂಕಿಯ ಮೇಲೆ ಗಾಡಿ ಹೊಡೆಯುವವನು ಕುಳಿತಿದ್ದಾನೆ. ಆದರೆ ಗಾಡಿಯಲ್ಲಿ ಯಾರೂ ಇಲ್ಲ.

ಶಹಪುರ ತಾಲ್ಲೂಕಿನ ಹುರಸಗುಂಡಗಿಯ ಮೂರು ಶಿಲಾಫಲಕಗಳು ಶಾಸನರಹಿತವಾಗಿದ್ದು, ಇತರ ಸ್ಮಾರಕಶಿಲ್ಪಗಳಲ್ಲಿರುವಂತೆಯೆ ವಿವರಗಳಿವೆ. ಆದರೆ ಸುರಪುರ ತಾಲ್ಲೂಕಿನ ವಜ್ಜಲ (ವಜ್ಜಾಳ)ದಲ್ಲಿ ದೊರೆತ ಶಿಲಾಫಲಕದ ಮೇಲಿರುವ ಅಕ್ಷರಗಳು ಒದಗಿಸುವುದು 'ಮುಕುಲಿಯಾನ ಕಠಿನೀಯ ಸೇಬನಿಕಾಯ' ಎಂಬ ಪಾಠವನ್ನು. ಮುಕುಲಿಗ್ರಾಮ ಅಥವಾ ವಂಶಕ್ಕೆ ಸೇರಿದ ರಠಿನೀ (ಅಧಿಕಾರಿಣಿ ಅಥವಾ ಅಧಿಕಾರಿಯ ಪತ್ನಿ)ಯಾದ ಸೇಬನಿಕಾ ಎನ್ನುವ ಸ್ತ್ರೀಯದು. ಇಲ್ಲಿ ಮುಕುಲಿ ಎನ್ನುವುದು ದ್ರಾವಿಡಪದವಾಗಿರುವಂತಿದೆ. ಆಂಧ್ರಪ್ರದೇಶದ ಭಾಗದಲ್ಲಿ ಆಳಿದ ಶಾತವಾಹನರ ಮಾಂಡಲೀಕರಾಗಿ ರಠೀ, ಮಹಾರಠೀಗಳು ಆಳಿದರೆಂಬುದನ್ನು ಗಮನಿಸಲಾಗಿದ್ದು, ಅಂಥಾ ರಠಿಯ ಪತ್ನಿ ಅಥವಾ ಅಧಿಕಾರಿಣಿ(ರಠಿನೀ)ಯಾದ ಸೇಬನಿಕಾ ಎಂಬ ಮಹಿಳೆಯ ಸ್ಮರಣಾರ್ಥ ಈ ಕಲ್ಲನ್ನು ನಿಲ್ಲಿಸಿರಬಹುದು. ಈ ಹಿನ್ನೆಲೆಯಲ್ಲಿ, ಸುರಪುರ ತಾಲ್ಲೂಕಿನಲ್ಲಿ ದೊರೆತ ಮೊತ್ತಮೊದಲ ಶಾತವಾಹನಕಾಲದ ಶಿಲಾಫಲಕ ಇದಾಗಿರುವುದರಿಂದ ಈ ಭಾಗವನ್ನು ಶಾತವಾಹನರು ಆಳುತ್ತಿದ್ದರು; ಹಾಗೂ ರಠಿಯ ಪತ್ನಿ ಎಂದು ಉಲ್ಲೇಖಿಸುವ ಬದಲು ರಠಿನೀ ಎಂಬ ಪದಪ್ರಯೋಗವಿರುವುದರಿಂದ ಮಹಿಳೆಯರೂ ಆ ಕಾಲದಲ್ಲಿ ಅಧಿಕಾರ ಸ್ಥಾನಗಳಲ್ಲಿದ್ದರೆಂಬ ವಿಚಾರ ಮಂಡಿಸುತ್ತಾರೆ ಹನುಮಾಕ್ಷಿ ಗೋಗಿಯವರು.

ಬ್ರಹ್ಮಗಿರಿ ಶಾಸನ

ಈ ಶಾಸನವನ್ನು ಲಕ್ಷ್ಮಣ್ ತೆಲಗಾವಿಯವರು ಮರುಓದಿನ ಮೂಲಕ ಜನಸಾಮಾನ್ಯರಿಗೆ ಸರಳವಾಗಿ ಅರ್ಥೈಸುವ ಪ್ರಯತ್ನ ಮಾಡುತ್ತಾರೆ.

ಸುವರ್ಣಗಿರಿಯಿಂದ ಆರ್ಯಪುತ್ರನ ಮತ್ತು ಮಹಾಮಾತ್ರರ ವಚನಾನುಸಾರ ಇಸಿಲದ ಮಹಾಮಾತ್ರರಿಗೆ ಆರೋಗ್ಯವನ್ನು ಹೇಳುವುದು ಮತ್ತು ಹೀಗೆಂದು ತಿಳಿಸುವುದು:

ದೇವಾನಾಂಪ್ರಿಯನ ಅಪ್ಪಣೆ (ಏನೆಂದರೆ):

ನಾನು ಉಪಾಸಕನಾಗಿ ಎರಡೂವರೆ ವರ್ಷಗಳಿಗಿಂತ ಹೆಚ್ಚಾಯಿತು. ಆದರೆ ಒಂದು ವರ್ಷದವರೆವಿಗೂ ಹೆಚ್ಚು ಪ್ರಯತ್ನ ಮಾಡಲಿಲ್ಲ. ನಾನು (ಬೌದ್ಧ) ಸಂಘವನ್ನು ದರ್ಶಿಸಿ ಈಗ್ಗೆ ಒಂದು ವರ್ಷದ ಮೇಲಾಯಿತು. ಆಗಿನಿಂದಲೂ ಅತಿಶಯ ಶ್ರದ್ಧೆಯನ್ನು ವಹಿಸಿದ್ದೇನೆ. ಇದುವರೆಗೆ ದೇವತೆಗಳೊಡನೆ ಬೆರೆಯದೆ ಇದ್ದ ಜಂಬುದ್ವೀಪದ ಜನರೂ ಈಗ ಅವರೊಂದಿಗೆ ಕಲೆತಿದ್ದಾರೆ. ಇದೆಲ್ಲವೂ ಶ್ರದ್ಧೆಯ ಫಲ. ಇದು ಸತ್ಯವಾಗಿಯೂ ಮಹಾತ್ಮರಿಗೆ ಮಾತ್ರ ಲಭ್ಯವಲ್ಲ, ಸಾಮಾನ್ಯ ಮನುಷ್ಯನ ಪ್ರಯತ್ನದಿಂದ ವಿಪುಲವಾದ ಪದವಿಯನ್ನು (ಸ್ವರ್ಗವನ್ನು) ಹೊಂದಲು ಸಾಧ್ಯ. ಸಾಮಾನ್ಯರು ಮಹಾತ್ಮರೂ ಈ ರೀತಿಯಾಗಿ ಪ್ರಯತ್ನ ಪಡಬೇಕೆಂದು, ನನ್ನ ರಾಜ್ಯದ ಗಡಿಗಳ ಜನರೂ ಇದನ್ನು ತಿಳಿಯಬೇಕೆಂದು, ಈ ಶ್ರದ್ಧೆಯು ಚಿರಸ್ಥಾಯಿಯಾಗಿರಬೇಕೆಂದು ಈ ಪ್ರಕಟಣೆಯನ್ನು ಪ್ರಸಿದ್ಧಿಪಡಿಸಲಾಗಿದೆ. ಈ ವಿಷಯವನ್ನು ಇನ್ನೂ ವೃದ್ಧಿಮಾಡುತ್ತೇನೆ, ಅಧಿಕವಾಗಿ ವಿಸ್ತರಿಸುತ್ತೇನೆ. ಈಗಿರುವುದಕ್ಕಿಂತ ಒಂದೂವರೆಯಷ್ಟಾದರೂ ಹೆಚ್ಚಿಸುತ್ತೇನೆ. ಈ ಪ್ರಕಟಣೆಯು ನನ್ನ ಸಂಚಾರದಲ್ಲಿ ೨೫೬ ರಾತ್ರಿಗಳು ಕಳೆದನಂತರ ಹೊರಡಿಸಲಾಗಿದೆ.

ತಾಯಿ ತಂದೆಗಳಲ್ಲಿ ಹಾಗೂ ಹಿರಿಯರಲ್ಲಿ ವಿನಯದಿಂದ ನಡೆದುಕೊಳ್ಳಬೇಕು. ಪ್ರಾಣಿಗಳಲ್ಲಿ ದಯೆ ಇಡಬೇಕು. ಸತ್ಯವನ್ನು ನುಡಿಯಬೇಕು. ಹೀಗೆಯೇ ಶಿಷ್ಯರು ಆಚಾರ್ಯರನ್ನು ಗೌರವಿಸಬೇಕು. ನೆಂಟರಲ್ಲಿ ಸರಿಯಾಗಿ ನಡೆದುಕೊಳ್ಳಬೇಕು. ಇದು ಪ್ರಾಚೀನ ಕಾಲದಿಂದಲೂ ನಡೆದುಬಂದಿರುವ ಧರ್ಮ. ಇದರಿಂದಲೆ ದೀರ್ಘ ಆಯಸ್ಸು ಸಿದ್ಧಿಸುತ್ತದೆ. (ಆದ್ದರಿಂದ) ಪ್ರತಿಯೊಬ್ಬರೂ ಹೀಗೆಯೆ ನಡೆದುಕೊಳ್ಳಬೇಕು.

ನಿಟ್ಟೂರು ಶಾಸನ (೨ನೇ ಶಾಸನ)

ರಾಜನಾದ ಅಶೋಕ ಹೇಳುತ್ತಾನೆ: ನೀವು (ಕುಮಾರ ಮತ್ತು ಅವನ ಮಹಾಮಾತ್ರರು) ರಜ್ಜುಕರ ಮೇಲೆ ಆಜ್ಞೆ ಹೊರಡಿಸತಕ್ಕದ್ದು. ಆ ನಂತರ ಅವನು ಹಳ್ಳಿ ಮತ್ತು ಪಟ್ಟಣಗಳ ನಾಗರಿಕರಿಗೆ ಆಜ್ಞಾಪಿಸುತ್ತಾನೆ. ಪ್ರತಿಯೊಬ್ಬನೂ ತಂದೆ ತಾಯಿಗಳಿಗೆ ವಿಧೇಯನಾಗಿರತಕ್ಕದ್ದು; ಅದೇ ರೀತಿ ಪ್ರತಿಯೊಬ್ಬನೂ ಹಿರಿಯರಿಗೆ ಗೌರವ ತೋರಿಸತಕ್ಕದ್ದು; ಜೀವಿಗಳಿಗೆ ಕರುಣೆ ತೋರಿಸತಕ್ಕದ್ದು; ಪ್ರತಿಯೊಬ್ಬ ಪ್ರಜೆಯೂ ಧರ್ಮಗುಣಗಳನ್ನು ರೂಢಿಸಿಕೊಳ್ಳಬೇಕು; ಬಂಧು ಬಳಗದವರಲ್ಲಿ ಆದರವಿರಬೇಕು. ಇದೇ ಎಂದಿನಿಂದಲೂ ನಡೆದುಬಂದ ಪದ್ಧತಿ. ಗುರುಗಳನ್ನು

ಗೌರವಿಸಬೇಕು ಮತ್ತು ಅವರಿಗೆ ವಿಧೇಯರಾಗಿರಬೇಕು. ಇದೇ ರೀತಿಯ ಆಜ್ಞೆಯನ್ನು ಬ್ರಾಹ್ಮಣ ಗುರುಗಳು, ಮಾವುತರು, ಕುದುರೆ ಸವಾರರು ಮತ್ತು ಕಾರಕೂನರ ಮೇಲೂ ಹೊರಡಿಸಬೇಕು.

ಸನ್ನತಿ ಶಾಸನಗಳು

I. ಅ. ಹನ್ನೆರಡನೆಯ ಮುಖ್ಯ ಶಿಲಾಶಾಸನ ಭಾಗ

೧. ದೇವತೆಗಳಿಗೆ ಪ್ರಿಯನಾದ ಪ್ರಿಯದರ್ಶಿರಾಜನು ಎಲ್ಲ ಅನ್ಯಧರ್ಮೀಯರನ್ನು, ಪರಿವ್ರಾಜಕರನ್ನು, ಗೃಹಸ್ಥರನ್ನು ವಿಧವಿಧವಾದ ದಾನ ಮತ್ತು ಪೂಜೆಗಳಿಂದ ಸಮನಾಗಿ ಗೌರವಿಸುತ್ತಾನೆ.

೨. ಆದರೂ ಅವೇ ದಾನ ಮತ್ತು ಪೂಜೆಗಳನ್ನು ದೇವತೆಗಳಿಗೆ ಪ್ರಿಯನಾದವನು ತನಗಾಗಿ ಒಪ್ಪುವುದಿಲ್ಲ. ಏಕೆ? ಎಲ್ಲ ಧರ್ಮಾನುಯಾಯಿಗಳಲ್ಲೂ ಅವರವರ ಧರ್ಮದ ಸಾರವರ್ಧನೆ ಆಗಲಿ ಎಂದು.

೩. ಸಾರವೃದ್ಧಿ ಎನ್ನುವುದು ಅನೇಕ ವಿಧಗಳಲ್ಲಿ ಆಗುತ್ತದೆ.

೪. ಅದರ ಮೂಲವಿರುವುದು ವಾಕ್ಸಂಯಮ(ವಚೋಗುತ್ತಿ)ದಲ್ಲಿ. ಹಾಗೆಂದರೇನು? ತನ್ನ ಧರ್ಮದಲ್ಲಿ ಅತ್ಯಭಿಮಾನವಾಗಲಿ, ಪರಧರ್ಮದಲ್ಲಿ ಅನಾದರವಾಗಲಿ, ಸಂದರ್ಭಕ್ಕೆ ಅನುಚಿತವೆನಿಸುವ ಸಣ್ಣ ಮಾತಾಗಲಿ ಕೂಡದು.

೫. ಅಂತಹ ಸಂದರ್ಭಗಳಲ್ಲಿ ಪರಧರ್ಮೀಯರನ್ನು ಅವರವರ ರೀತಿಯಲ್ಲಿಯೆ ಗೌರವಿಸತಕ್ಕದ್ದು. ಹೀಗೆ ಮಾಡುವುದರಿಂದ ಅವನು ತನ್ನ ಧರ್ಮವನ್ನೂ ಬಲಪಡಿಸುತ್ತಾನೆ. ಪರಧರ್ಮೀಯರಿಗೂ ಉಪಕಾರ ಮಾಡುತ್ತಾನೆ. ಹೀಗೆ ಮಾಡದೆ ಅನ್ಯತ ನಡೆದುಕೊಂಡರೆ ತನ್ನ ಧರ್ಮವನ್ನೂ ಹಾಳುಮಾಡುತ್ತಾನೆ, ಪರಧರ್ಮೀಯರಿಗೂ ಅಪಕಾರ ಮಾಡುತ್ತಾನೆ.

೬. ಯಾವನು ತನ್ನ ಧರ್ಮವನ್ನು ಹೆಚ್ಚಾಗಿ ಆದರಿಸುತ್ತಾನೋ ಅವನು ಹಾಗೆ ಮಾಡುವುದು ಪರಧರ್ಮವನ್ನು ಹಳಿಯುವುದಕ್ಕೋ? ಇಲ್ಲವೆ ತನ್ನ ಧರ್ಮದಲ್ಲಿ ಅತ್ಯಾದರವನ್ನು ತೋರಿಸುವುದಕ್ಕೋ? ಇಲ್ಲವೆ ತನ್ನ ಧರ್ಮವನ್ನು ಬೆಳಗಲೆಂದೋ? ಆದರೆ ಹೀಗೆ ಮಾಡುವುದರಿಂದ ಅಂತವನು ನಿಜಕ್ಕೂ ತನ್ನ ಧರ್ಮಕ್ಕೇ ವಿಶೇಷ ಹಾನಿ ಉಂಟು ಮಾಡುತ್ತಾನೆ.

೭. ಆ ಕಾರಣ ಸಮನ್ವಯವೇ ಸಾಧುವಾದದ್ದು ಏಕೆ? ಆಗ ಬೇರೆ ಅಭಿಪ್ರಾಯವುಳ್ಳವರೂ ಧರ್ಮೋಪದೇಶವನ್ನು ಕೇಳುವರು, ಗೌರವದಿಂದ ನಡೆದುಕೊಳ್ಳುವರು.

೮. ಇದೇ ದೇವತೆಗಳಿಗೆ ಪ್ರಿಯನಾದವನ ಇಚ್ಛೆ. ಏಕೆ? ಎಲ್ಲ ಅನ್ಯಧರ್ಮೀಯರೂ ಬಹುಶ್ರುತರೂ ಎಲ್ಲರ ಕಲ್ಯಾಣವನ್ನು ಬಯಸುವವರೂ ಆಗಲೆಂದು; ಯಾರು, ಯಾವ, ಯಾವುದರಿಂದ ಪ್ರಸನ್ನರಾದರೂ ಅವರೆಲ್ಲರೂ ಹೀಗೆ ಹೇಳುವಂತಾಗಬೇಕು-ದೇವತೆಗಳಿಗೆ ಪ್ರಿಯನಾದವನು ತನ್ನ ರೀತಿಯಲ್ಲಿಯೇ ದಾನ, ಪೂಜೆಗಳನ್ನು ಮಾನ್ಯ ಮಾಡುವುದಿಲ್ಲ. ಏಕೆಂದರೆ ಎಲ್ಲ ಅನ್ಯಧರ್ಮಾನುಯಾಯಿಗಳಲ್ಲೂ ಅವರವರ ಧರ್ಮದ ಸಾರವೃದ್ಧಿ ಆಗಬೇಕೆಂದು.

೯. ಈ ಉದ್ದೇಶಕ್ಕಾಗಿಯೇ ಧರ್ಮಮಹಾಮಾತ್ರರು, ಮಹಿಳಾಧ್ಯಕ್ಷ ಮಹಾಮಾತ್ರರು, ಗೋಸಂವರ್ಧನೆಯ ಅಧಿಕಾರಿಗಳು ಮತ್ತಿತರ ಅಧಿಕಾರಿಗಳು ನಿಯುಕ್ತರಾಗಿದ್ದಾರೆ. ಈ ಎಲ್ಲ ಕಾರ್ಯಗಳ ಫಲವಾಗಿ ಎಲ್ಲ ಅನ್ಯಧರ್ಮಗಳ ಅಭಿವೃದ್ಧಿಯಾಗುವುದು ಮತ್ತು (ಬೌದ್ಧ) ಧರ್ಮದ ಕೀರ್ತಿಯೂ ಬೆಳಗುವುದು.

ಆ. ಹದಿನಾಲ್ಕನೆಯ ಮುಖ್ಯ ಶಿಲಾಶಾಸನ

ಈ ಧರ್ಮಲಿಪಿಯು ದೇವತೆಗಳಿಗೆ ಪ್ರಿಯನಾದ ಪ್ರಿಯದರ್ಶಿರಾಜನಿಂದ ಬರೆಯಿಸಲಾಗಿದೆ. ಕೆಲವೆಡೆಗಳಲ್ಲಿ ಸಂಕ್ಷೇಪವಾಗಿ, ಕೆಲವೆಡೆ ಮಧ್ಯಮಾಕಾರದಲ್ಲಿ, ಇನ್ನು ಕೆಲವೆಡೆ ವಿಸ್ತಾರವಾಗಿ. ಎಲ್ಲವೂ ಎಲ್ಲ ಸ್ಥಳಗಳಲ್ಲಿಯೂ ಸಮರ್ಪಕವೆನಿಸದು. ವಿಸ್ತಾರವಾದ ರಾಜ್ಯವನ್ನು ಗೆದ್ದದ್ದಾಯಿತು. ಬಹಳಷ್ಟು ಲಿಪಿಗಳನ್ನು ಬರೆಯಿಸಿದ್ದಾಯಿತು. ಹೀಗೆಯೇ ನಿತ್ಯವೂ ಬರೆಯಿಸುತ್ತಲೇ ಇರುವೆನು. ಕೆಲವೆಡೆಗಳಲ್ಲಿ ಮತ್ತೆ ಮತ್ತೆ ಬರೆಯಿಸಿದ್ದನ್ನೇ ಬರೆಯಿಸಿದ್ದೂ ಉಂಟು. ಆ ಬರಹ ಸ್ವಾರಸ್ಯವಾದದ್ದೆಂದು ಕಂಡದ್ದರಿಂದ ಮತ್ತು ಜನರಿಂದ ಹಾಗೆ ಕಾಣಲಿ ಎಂದು. ಕೆಲವೆಡೆಗಳಲ್ಲಿ ಬರಹ ಅಪೂರ್ಣವಾಗಿರಬಹುದು, ಅಸಮರ್ಪಕವಾಗಿರಬಹುದು, ಸಂಶಯಕ್ಕೆ ಎಡೆಯುಳ್ಳದ್ದಾಗಿರಬಹುದು, ಲಿಪಿಕಾರನ ತಪ್ಪಿನಿಂದಲೂ ಅದು ಆಗಿರಬಹುದು ಎಂಬುದನ್ನೂ ಆಲೋಚಿಸಬಹುದು.

II. ಅ. ಮೊದಲನೆಯ ಪ್ರತ್ಯೇಕ ಶಿಲಾಶಾಸನ

೧. ದೇವತೆಗಳಿಗೆ ಪ್ರಿಯನಾದವನ ಆಜ್ಞಾನುಸಾರ ತೊಸಾಲಿಯಲ್ಲಿರುವ ಮಹಾಮಾತ್ರರಿಗೆ ಮತ್ತು ನಗರ ವ್ಯವಹಾರಿಕರಿಗೆ ಹೀಗೆ ತಿಳಿಸಲಾಗಿದೆ (ತಿಳಿಸಬೇಕು).

೨. ನನಗೆ ಯಾವುದಾದರೂ ಮುಖ್ಯವೆಂದು ತೋರಿದಾಗ ಅದು ಹಾಗೆ ನಡೆಯಬೇಕೆಂದು ಬಯಸುತ್ತೇನೆ. ಅದು ಹೇಗೆ? ಅದನ್ನು ಕೃತಿಯಲ್ಲಿ ಪ್ರತಿಪಾದಿಸಬೇಕೆಂದು ಮತ್ತು ಯುಕ್ತರಾದವರ ದ್ವಾರಾ ಆರಂಭಿಸಬೇಕೆಂದು. ಇದು ನನ್ನ ಮುಖ್ಯವಾದ ಅಭಿಪ್ರಾಯ ಮತ್ತು ನಿಮ್ಮಗಳಿಗೆ ಅದರಂತೆ ತಿಳಿಯಪಡಿಸುವುದೇ ಸರಿಯಾದ ಆರಂಭ. ಸಾವಿರಾರು ಜೀವಿಗಳು ನಿಮ್ಮ ಅಧಿಕಾರಕ್ಕೆ ಒಳಪಟ್ಟಿದ್ದಾರೆ. ನಾವು ಸಜ್ಜನರಿಗೆಲ್ಲ ಪ್ರಿಯರಾಗಬೇಕು. ಎಲ್ಲ ಮಾನವರು ನನ್ನ ಮಕ್ಕಳು. ನನ್ನ ಮಕ್ಕಳಿಗಾಗಿ ನಾನು ಬಯಸುವುದೇನನ್ನು? ಎಲ್ಲರಿಗೂ ಇಹದಲ್ಲಿಯೂ ಪರದಲ್ಲಿಯೂ ಹಿತ, ಸುಖಗಳು ಲಭ್ಯವಾಗಬೇಕೆಂದು. ನನ್ನ ಮಕ್ಕಳಂತೆಯೇ ಎಲ್ಲ ಮನುಷ್ಯರಿಗೂ ಆಗಲೆಂದೂ ಬಯಸುತ್ತೇನೆ. ಈ ಉದ್ದೇಶ ಎಲ್ಲಿಯವರೆಗೆ ಸಾಧಿತವಾದೀತೋ ತಿಳಿಯದು. ಇದು ಎಲ್ಲಿಯೊ ಒಬ್ಬನಲ್ಲಿ ಸಫಲವಾಗಬಹುದು. ಆದರೆ ಅವನೊಬ್ಬನೇ ಸರ್ವದೇಶವಲ್ಲ.

೩. ಇದನ್ನು ನೀವು ಮನಗಾಣಬೇಕು-ಈ ನೀತಿಯು ಸುವಿಹಿತವಾಗಿದ್ದರೂ ಇದರಿಂದ ಒಬ್ಬಾನೊಬ್ಬನು ಬಂಧನಕ್ಕೆ ಅಥವಾ ಕಷ್ಟಕ್ಕೆ ಈಡಾಗಬಹುದು. ಒಂದು ವೇಳೆ ಅಕಸ್ಮಾತ್ತಾಗಿ ಅವನ ಬಂಧನಕ್ಕೆ ಕೊನೆಯಾದರೂ ಬೇರೆಯವರು ಹಾಗೆಯೇ ಕಷ್ಟದಲ್ಲಿರಬಹುದು.

೪. ಆದುದರಿಂದ ನೀವು ಅನುಸರಿಸಬೇಕಾದ ಮಾರ್ಗ ಯಾವುದು? ಮಧ್ಯಮಮಾರ್ಗವೇ ಎಂದು ನಾವು ಪ್ರತಿಪಾದಿಸುತ್ತೇವೆ. ಈರ್ಷ್ಯೆ, ಶ್ರಮಕ್ಕೆ ಹಿಂಜರಿಯುವುದು, ಕಠೋರತೆ, ಆತುರ, ಆಲಸ್ಯ, ಸತತ ಪ್ರಯತ್ನ ಮಾಡದಿರುವುದು, ಅಲ್ಪಶ್ರಮದಿಂದಲೇ ದಣಿಯುವುದು ಇಂತಹ ದೋಷಗಳು ಜನ್ಮತಃ ಸಹಜವಾದವರಿಗೆ ಈ ಮಾರ್ಗ ಹೇಳಿದ್ದಲ್ಲ. ಹಾಗಾದರೆ ಇಷ್ಟವಾದದ್ದೇನು? ಈ ದೋಷಗಳು ನನ್ನಲ್ಲಿ ಹುಟ್ಟಬಾರದು ಎನ್ನುವುದು.

೫. ಇದೆಲ್ಲದರ ಮೂಲದಲ್ಲಿರುವುದು ಶ್ರಮಕ್ಕೆ ಹಿಂಜರಿಯದ ದುಡಿಮೆ ಮತ್ತು ಆತುರ ಪಡದಿರುವುದು. ಸರಿಯಾದ ಮಾರ್ಗದಲ್ಲಿ ನಡೆಯುವುದಕ್ಕೆ ಬೇಸರಪಡುವವರು (ಎಂದಿಗೂ) ಉನ್ನತಿಯನ್ನು ಪಡೆಯಲಾರರು. ಚಟುವಟಿಕೆಯಿಂದಿರುವುದು, ಮುನ್ನೋಡಿ ನಡೆಯುತ್ತಿರುವುದು ಇದೇ ಸರಿಯಾದ ದಾರಿ.

೬. ನಿಮ್ಮೊಳಗೆ ಇದನ್ನು ಮನಗಾಣಿಸಿಕೊಂಡವರು ಉಳಿದವರಿಗೆ ಹೀಗೆ ಹೇಳಬೇಕು- "ನಿಮಗೆ ರಾಜನ ಆಜ್ಞೆ ತಿಳಿದಿಲ್ಲವೆ? ದೇವತೆಗಳಿಗೆ ಪ್ರಿಯನಾದವನ ಶಾಸನ ಇರುವುದು ಹೀಗೆ ಹೀಗೆ. ಇದನ್ನು ಅರಿತಿರುವುದು ಮಹಾಫಲವನ್ನು ನೀಡಬಲ್ಲದು, ಅರಿಯದೆ ಇರುವುದು ಮಹಾ ಅಪಾಯಕಾರಿಯಾಗಬಲ್ಲದು. ವಿಪರೀತವಾಗಿ ತಿಳಿದುಕೊಂಡವರಿಗೆ ಸ್ವರ್ಗವೂ ಸಿದ್ಧಿಸದು, ರಾಜಾನುಗ್ರಹವೂ ಸಿದ್ಧಿಸದು." ಉತ್ಸಾಹದಿಂದ ಈ ಕಾರ್ಯವನ್ನು ನೆರವೇರಿಸುವವರಿಗೆ ನಾನು ಎರಡು ವಿಧದ ಫಲಗಳನ್ನು(ಲಿಂದು) ಕಲ್ಪಿಸಿದ್ದೇನೆ. ಇದನ್ನು ಸರಿಯಾಗಿ ಅರಿತು ಆಚರಿಸಿದವರಿಗೆ ಸ್ವರ್ಗವೂ ಲಭಿಸುತ್ತದೆ, ರಾಜನ ಋಣವೂ ಸಂದಾಯವಾಗುತ್ತದೆ.

೭. ಈ ಶಾಸನವನ್ನು ತಿಷ್ಯನಕ್ಷತ್ರದ ದಿನಗಳಲ್ಲಿ ಎಲ್ಲರೂ ಕೇಳಲೇಬೇಕು. ಬೇರೆ ದಿನಗಳಲ್ಲಿಯೂ ಪ್ರತಿಕ್ಷಣವೂ ಒಬ್ಬರಾದರೂ ಕೇಳಬೇಕು. ಇದನ್ನು ನಿಮ್ಮ ಕೃತಿಯಲ್ಲಿ ಅನುಸರಿಸುತ್ತಲೂ ಪ್ರಕಾಶಪಡಿಸುತ್ತಲೂ ಇರಬೇಕು.

೮. ಈ ಲಿಪಿಯನ್ನು ಇಲ್ಲಿ ಬರೆಯಿಸಿರುವುದರ ಉದ್ದೇಶ ಇದು- ಈ ನಗರದ ಆಡಳಿತ ನಡೆಯಿಸುವವರು ಈ ನಿಯಮಗಳನ್ನು ಸದಾಕಾಲವೂ ಪಾಲಿಸುತ್ತಿರಲಿ ಎಂದು ಮತ್ತು ನಗರವಾಸಿಗಳಿಗೆ ಯಾವುದರಿಂದಲೂ ಬಾಧೆಯಾಗಲೀ, ಯಾವುದೇ ವಿಧದ ಕ್ಲೇಶವಾಗಲೀ ಆಗದಿರಲಿ ಎಂದು.

೯. ಇದೇ ಉದ್ದೇಶದಿಂದಲೇ ಪ್ರತಿ ಐದುವರ್ಷಗಳಿಗೆ ಒಮ್ಮೆ ಯಾರು ಯಾರು ಕರ್ಕಶರಲ್ಲವೋ, ಕ್ರೂರರಲ್ಲವೋ, ಕಾರ್ಯಾಚರಣೆಯಲ್ಲಿ ಮಾರ್ದವವುಳ್ಳವರೋ ಅಂತಹ ಅಧಿಕಾರ ವರ್ಗದವರನ್ನು ಕಳುಹಿಸುತ್ತೇನೆ.

೧೦. ಈ ಉದ್ದೇಶವನ್ನು ಮನಗಂಡವರಾಗಿ ಅವರೂ ನನ್ನ ಅನುಶಾಸನಗಳಂತೆ ನಡೆದುಕೊಳ್ಳುವರು.

೧೧. ಇದೇ ಉದ್ದೇಶ ಸಾಧನೆಗಾಗಿ ನನ್ನ ಕುಮಾರನು ಉಜ್ಜಯಿನಿಯಿಂದ ಪ್ರತಿ ಮೂರು ವರ್ಷಗಳನ್ನು ಮೀರದಂತೆ ತಪ್ಪದೆ ಅಧಿಕಾರವರ್ಗವನ್ನು ಕಳುಹಿಸುವನು. ಇದೇ ರೀತಿಯಾಗಿ ತಕ್ಷಶಿಲೆಯಿಂದಲೂ ಪ್ರತಿ ಮೂರುವರ್ಷಗಳಲ್ಲಿಯೂ ತಪ್ಪದೆ ನಡೆಯುವುದು. ಯಾವ

ಕಾಲದಲ್ಲಿ ಈ ಮಹಾಮಾತ್ರರು ಸಂಚಾರಾರ್ಥವಾಗಿ ಹೀಗೆ ಹೊರಡುತ್ತಾರೋ ಆವಾಗೆಲ್ಲ ಅವರು ತಮ್ಮ ಇತರ ಕಾರ್ಯಗಳ ಜೊತೆಗೆ ಇದನ್ನು ತಿಳಿಯುವರು ಮತ್ತು ರಾಜನ ಅನುಶಾಸನದಂತೆ ಕಾರ್ಯಾಚರಣೆ ನಡೆಸುವರು.

ಆ. ಎರಡನೆಯ ಪ್ರತ್ಯೇಕ ಶಿಲಾಶಾಸನ

೧. ದೇವತೆಗಳಿಗೆ ಪ್ರಿಯನಾದವನು ಹೀಗೆ ಹೇಳುತ್ತಾನೆ: ರಾಜನ ಆಜ್ಞಾನುಸಾರವಾಗಿ ಸಮಾಪಾದ ದಲ್ಲಿರುವ ಮಹಾಮಾತ್ರರು ಇದನ್ನು ತಿಳಿದಿರಬೇಕು. ನನಗೆ ಯಾವುದಾದರೂ ಮುಖ್ಯವೆಂದು ತೋರಿದಾಗ ಅದು ಹಾಗೆ ನಡೆಯಬೇಕೆಂದು ಬಯಸುತ್ತೇನೆ. ಅದು ಹೇಗೆ? ಅದನ್ನು ಕೃತಿಯಲ್ಲಿ ಪ್ರತಿಪಾದಿಸಬೇಕೆಂದು ಮತ್ತು ಯುಕ್ತರಾದವರ ದ್ವಾರಾ ಆರಂಭಿಸಬೇಕೆಂದು. ಇದು ನನ್ನ ಮುಖ್ಯವಾದ ಅಭಿಪ್ರಾಯ ಮತ್ತು ನಿಮ್ಮಗಳಿಗೆ ಅದರಂತೆ ತಿಳಿಯಪಡಿಸುವುದೆ ಸರಿಯಾದ ಆರಂಭ.

೨. ಎಲ್ಲ ಮಾನವರು ನನ್ನ ಮಕ್ಕಳು. ನನ್ನ ಮಕ್ಕಳಿಗಾಗಿ ನಾನು ಬಯಸುವುದೇನನ್ನು? ಅವರಿಗೆ ಎಲ್ಲ ವಿಧದ ಹಿತಸುಖಗಳೂ ಲಭ್ಯವಾಗಬೇಕೆಂದು. ಇಹದಲ್ಲಿಯೂ ಪರದಲ್ಲಿಯೂ ಎಲ್ಲಾ ಮನುಷ್ಯರಿಗಾಗಿ ನಾನು ಬಯಸುವುದು ಅದನ್ನೇ.

೩. ನಾನು ಗೆಲ್ಲದೆ ಇರುವ, ಗಡಿಪ್ರದೇಶಗಳ ಜನರು ತಮ್ಮನ್ನು ಕುರಿತು ಈ ರಾಜನ ಇಚ್ಛೆಯೇನು? ಎಂದುಕೊಳ್ಳುತ್ತಿರಬಹುದು. ಗಡಿಯಲ್ಲಿರುವ ಜನಗಳನ್ನು ಕುರಿತು ನನ್ನ ಇಚ್ಛೆ ಇಷ್ಟೇ; ರಾಜನ ಇಚ್ಛೆ ಇಷ್ಟೇ ಎಂಬುದು ಅವರಿಗೆ ತಿಳಿದಿರಲಿ. “ಅವರು ನನ್ನ ವಿಷಯದಲ್ಲಿ ಭಯಗ್ರಸ್ತರಾಗಿರುವುದು ಬೇಡ, ನನ್ನಲ್ಲಿ ವಿಶ್ವಾಸವುಳ್ಳವರಾಗಲಿ. ನನ್ನಿಂದ ಅವರಿಗೆ ಸುಖವೇ ಲಭಿಸಬಹುದು ದುಃಖವೆಂದಿಗೂ ಅಲ್ಲ.” ಮತ್ತೂ ಅವರಿಗೆ ತಿಳಿದಿರಲಿ- ಯಾವ ಯಾವ ಸಂದರ್ಭದಲ್ಲಿ ಕ್ಷಮೆಯು ಶಕ್ಯವೋ ಆಗೆಲ್ಲ ರಾಜನು ನಮ್ಮನ್ನು ಕ್ಷಮಿಸುವನು, ಎಂದು. “ನನ್ನ ನಿಮಿತ್ತವಾಗಿ ಅವರು ಧರ್ಮಮಾರ್ಗದಲ್ಲಿ ನಡೆಯುತ್ತಿರಬೇಕು, ಇಹಲೋಕದಲ್ಲೂ ಪರಲೋಕದಲ್ಲೂ ಸಮೃದ್ಧಿಯನ್ನು ಪಡೆಯಲಿ” ಎಂದು.

೪. ಈ ಉದ್ದೇಶಕ್ಕಾಗಿಯೇ ನಿಮಗೆ ನನ್ನ ಅನುಶಾಸನ ಇದು. ಇದರಿಂದ ನನ್ನ ಋಣವೂ ತೀರಲಿ. ನಿಮ್ಮನ್ನು ಅನುಶಾಸಿಸುವುದರಲ್ಲೂ ನಿಮ್ಮ ಇಚ್ಛೆಯನ್ನು ತಿಳಿಯಬೇಕೆಂಬುದರಲ್ಲೂ ನನ್ನ ಸತತ ಪ್ರಯತ್ನ ಹಾಗೂ ಪ್ರತಿಜ್ಞೆ ಅಚಲವಾದುವು. ಯಾವ ಜನಗಳಲ್ಲಿ ಆಶ್ವಾಸನೆ ಉಂಟುಮಾಡುವುದಿದೆಯೋ ಅವರನ್ನು ಕುರಿತ ಕಾರ್ಯಾಚರಣೆ ಇಂತಿರಬೇಕು. ಅದರಿಂದಲೇ ಅವರು ಮನಗಾಣಬೇಕು, ಏನೆಂದು? “ನಮ್ಮ ರಾಜ ನಮಗೆ ತಂದೆಯಂತೆಯೆ. ತನ್ನವರಲ್ಲಿರುವ ಸಹಾನುಭೂತಿಯೆ ಅವನಿಗೆ, ನಮ್ಮಲ್ಲಿಯೂ ಇದೆ. ಈ ರಾಜನಿಗೆ ತನ್ನ ಮಕ್ಕಳು ಹೇಗೋ ಹಾಗೆಯೆ ನಾವೂ” ಎಂದು.

೫. ನಿಮ್ಮನ್ನು ಅನುಶಾಸಿಸುವುದರಲ್ಲಿಯೂ ನಿಮ್ಮ ಇಚ್ಛೆಯನ್ನು ತಿಳಿಯಬೇಕೆಂಬುದರಲ್ಲೂ ನನ್ನ ಸತತ ಪ್ರಯತ್ನ ಮತ್ತು ಪ್ರತಿಜ್ಞೆ ಅಚಲವಾದುವು. ಈ ಉದ್ದೇಶದಿಂದಲೇ ಎಲ್ಲ

ದೇಶಾಧಿಕಾರಿಗಳಿಗೂ ಭರವಸೆ ನೀಡುತ್ತೇನೆ. ಆ ಜನಗಳಲ್ಲೆಲ್ಲ ವಿಶ್ವಾಸವನ್ನೂ ಅವರ ಹಿತ ಸುಖಗಳನ್ನೂ ಸಾಧಿಸುವುದಕ್ಕೆ ನೀವು ಸಮರ್ಥರು, ಇಹದಲ್ಲಿ ಮತ್ತು ಪರದಲ್ಲಿ ಕೂಡ. ಹಾಗೆ ಮಾಡುವುದರಿಂದ ನಿಮಗೆ ಸ್ವರ್ಗವೂ ಸಿದ್ಧಿಸುತ್ತದೆ. ನನ್ನ ಋಣದ ತೀರ್ವೆಯೂ ಆಗುತ್ತದೆ.

೬. ಈ ಉದ್ದೇಶದಿಂದ ಈ ಲಿಪಿಯನ್ನು ಇಲ್ಲಿ ಬರೆಯಿಸಲಾಗಿದೆ. ಗಡಿನಾಡಿನವರಲ್ಲಿ ಭರವಸೆಯನ್ನುಂಟು ಮಾಡಲು ಮತ್ತು ಅವರನ್ನು ಧರ್ಮಮಾರ್ಗದಲ್ಲಿ ನಡೆಯಿಸಲು ಇಲ್ಲಿಯ ಮಹಾಮಾತ್ರರು ಇದನ್ನು ಶಾಶ್ವತವಾದ ನಿಯಮವೆಂದು ತಿಳಿದಿರಲಿ. ಈ ಲಿಪಿಯನ್ನು ಪ್ರತಿ ನಾಲ್ಕು ತಿಂಗಳಲ್ಲೂ ಎಲ್ಲರೂ ಕೇಳಬೇಕು. ಲಕ್ಷ್ಯಗೊಟ್ಟು ಶಾಂತಚಿತ್ತದಿಂದ ಒಬ್ಬನೇ ಆದರೂ ಕೇಳಬೇಕು. ಹೀಗೆ ಮಾಡುತ್ತಿರುವಾಗಲೇ ಅದನ್ನು ಆಚರಣೆಯಲ್ಲಿ ಪ್ರಕಟಿಸಲು ಮನಗಾಣಿಸುವಂತೆ ನಡೆಯುತ್ತಿರಬೇಕು.

ಗಿರಿನಾರ್ ಶಾಸನ (೯ನೇ ಶಿಲಾಶಾಸನ)

ಬಾಧೆಗೊಳಗಾದಾಗ, ಅವಿವಾಹ ವಿವಾಹಗಳಾದಾಗ, ಸಂತಾನಲಾಭವಾದಾಗ ಪ್ರವಾಸ ಹೊರಡುವಾಗ ಮತ್ತು ಇತರ ಇಂತಹ ಸಮಯಗಳಲ್ಲಿ ಜನರು ವಿಧವಿಧವಾದ ಮಂಗಲಗಳನ್ನು ಮಾಡುತ್ತಾರೆ. ಮಹಿಳೆಯರಂತೂ ಅನೇಕ ಬಗೆಯ ಕ್ಷುದ್ರ ಹಾಗೂ ನಿರರ್ಥಕ ಮಂಗಲಗಳನ್ನು ಮಾಡುತ್ತಾರೆ.

ಮಂಗಲಗಳನ್ನೇನೋ ಮಾಡತಕ್ಕದ್ದೇ. ಆದರೆ ಈ ತರದ ಮಂಗಲದಿಂದ ಫಲವಿಲ್ಲ.

ಮಹತ್ವದ ಫಲವನ್ನು ನೀಡುವ ಮಂಗಲವೆಂದರೆ ಧರ್ಮಮಂಗಲ. ಅದು ಯಾವುದೆಂದರೆ, ದಾಸರು ಭೃತ್ಯರು ಇವರಲ್ಲಿ ಸಂಪ್ರತಿಪತ್ತಿ; ಗುರುಗಳಲ್ಲಿ ಭಕ್ತಿ. ಪ್ರಾಣಿಗಳ ವಿಷಯದಲ್ಲಿ ಸಂಯಮ ಸಾಧುವಾದದ್ದು. ಬ್ರಾಹ್ಮಣ ಶ್ರಮಣರಿಗೆ ಮಾಡುವ ದಾನ ಸಾಧುವಾದದ್ದು. ಧರ್ಮಮಂಗಲವೆಂದರೆ ಇವು; ಮತ್ತು ಇಂತಹವು. ಆದ್ದರಿಂದ ತಂದೆ ಮಗ ಸಹೋದರ ಸ್ವಾಮಿ ಮಿತ್ರ ನೆರೆಯವನು ಎಲ್ಲರೂ ಇತರರನ್ನು ಹೀಗೆ ಎಚ್ಚರಿಸತಕ್ಕದ್ದು: ಇದು ಸಾಧುವಾದದ್ದು, ಅರ್ಥಲಾಭವಾಗುವವರೆಗೂ ಇಂತಹ ಮಂಗಲವನ್ನು ಮಾಡತಕ್ಕದ್ದು ಎಂದು.

ದಾನ ಸಾಧುವಾದದ್ದೆಂದು ಹೇಳಲಾಗಿದೆ. ಆದರೆ ಧರ್ಮದಾನದಂತಹ ದಾನವೂ ಧರ್ಮಾನುಗ್ರಹದಂತಹ, ಅನುಗ್ರಹವೂ ಬೇರೆ ಇಲ್ಲ. ಆದ್ದರಿಂದ ಮಿತ್ರರಾಗಲಿ, ಇಷ್ಟರಾಗಲಿ ಜ್ಞಾತಿಗಳಾಗಲಿ, ಪರಿಚಿತರಾಗಲಿ ಆಯಾ ಸಂದರ್ಭಗಳಲ್ಲಿ ಹೀಗೆ ಎಚ್ಚರಿಸತಕ್ಕದ್ದು. ಇದನ್ನು ಮಾಡತಕ್ಕದ್ದು; ಇದೇ ಸಾಧುವಾದದ್ದು; ಇದರಿಂದ ಸ್ವರ್ಗವನ್ನು ಪಡೆಯಬಹುದು, ಎಂದು.

ಸ್ವರ್ಗವನ್ನು ಪಡೆಯುವುದಕ್ಕಿಂತ ಮೇಲಾದ ಕರ್ತವ್ಯ ಯಾವುದು?

ಇತರ ಮಂಗಲಗಳ ಫಲ ಸಂದೇಹಾಸ್ಪದ. ಅವು ಅರ್ಥವನ್ನು ಕೊಡಬಹುದು, ಕೊಡದಿರಬಹುದು. ಅಲ್ಲದೆ ಅವು ಇಹಲೋಕಕ್ಕೆ ಮಾತ್ರ ಅನ್ವಯಿಸುತ್ತವೆ. ಆದರೆ ಪುಣ್ಯವಾದ ಧರ್ಮಮಂಗಲ ಕಾಲವನ್ನು ಮೀರಿದ್ದು. ಇಹದಲ್ಲಿ ಅರ್ಥವನ್ನು ಕೊಡದೆ ಇದ್ದರೂ ಪರದಲ್ಲಿ

ಅನಂತವಾದ ಅರ್ಥವನ್ನು ಕೊಡುತ್ತದೆ. ಅದರಿಂದ ಎರಡೂ ದೊರೆಯುತ್ತವೆ. ಧರ್ಮಮಂಗಲದಿಂದ ಇಹದಲ್ಲಿ ಅರ್ಥ; ಪರದಲ್ಲಿ ಅನಂತವಾದ ಪುಣ್ಯ

ರಾಮಪೂರ್ವಾ ಸ್ತಂಭಶಾಸನ (೫ನೇ ಶಾಸನ)

ದೇವಾನಾಂಪ್ರಿಯ ಪ್ರಿಯದರ್ಶಿರಾಜನು ಹೀಗೆ ಹೇಳುವನು: ಅಭಿಷಿಕ್ತನಾಗಿ ಇಪ್ಪತ್ತಾರು ವರ್ಷಗಳಾದಾಗ ನನ್ನಿಂದ ಈ ಪ್ರಾಣಿಗಳು ಅವಧ್ಯವೆಂದು ನಿರ್ಧರಿಸಲಾಯಿತು: ಯಾವುವೆಂದರೆ, ಶುಕಶಾರಿಕೆಗಳು, ಅರುಣಗಳು, ಚಕ್ರವಾಕಗಳು, ಹಂಸಗಳು, ನಂದೀಮುಖಿಗಳು, ಕೊಕ್ಕರೆಗಳು, ಬಾವಲಿಗಳು, ಅಂಬಾಪಿಪೀಲಿಕಗಳು ದುಳೀಗಳು(?) ಅನಸ್ಥಿಮತ್ಸ್ಯಗಳು ವಿದರ್ವೀಮತ್ಸ್ಯಗಳು(?) ಗಂಗಾ ಪುಪುಟಕಗಳು(?) ಸಂಕುಚಿತಮಾಡಿಕೊಳ್ಳಬಲ್ಲ ಮತ್ಸ್ಯಗಳು, ಕಮಠಗಳು, ಶಾಲ್ಯಕಗಳು, ಪರ್ಣಶಶಗಳು, ಶೃಮರಗಳು, ಶಂಡಕಗಳು, ಮುಂಗಸೆಗಳು, ಪಲಾಶತಗಳು(?) ಶ್ವೇತಕಪೋತಗಳು, ಗ್ರಾಮಕಪೋತಗಳು, ಅಲ್ಲದೆ, ಪ್ರತಿಭೋಗಕ್ಕೆ ಬರದ ಅಥವಾ ಆಹಾರಕ್ಕೊದಗದ ಎಲ್ಲಾ ಚತುಷ್ಪಾದಗಳು.

ಗಬ್ಬವಾಗಿರುವ ಅಥವಾ ಹಾಲುಕರೆಯುವ ಆಡು ಕುರಿ ಹಂದಿ ಇವುಗಳನ್ನು ಕೊಲ್ಲಕೂಡದು. ಆರು ತಿಂಗಳಾಗುವವರೆಗೂ ಅವುಗಳ ಶಿಶುಗಳನ್ನು ಕೊಲ್ಲಕೂಡದು. ಹುಂಜಗಳಿಗೆ ಹಿಡ ಮಾಡಬಾರದು. ಜೀವಿಗಳು ಸೇರಿಕೊಂಡಿರುವ ಹೊಟ್ಟನ್ನು ಉರಿಸಬಾರದು. ವಿನಾಕಾರಣವಾಗಲಿ, ಹಿಂಸ್ರಪ್ರಾಣಿಗಳನ್ನು ಓಡಿಸುವ ಉದ್ದೇಶದಿಂದಾಗಲಿ ಕಾಡನ್ನು ಉರಿಸಬಾರದು.

ಜೀವಿಗಳಿಂದ ಜೀವವನ್ನು ಪೋಷಿಸಲಾಗದು.

ಮೂರು ಚಾತುರ್ಮಾಸ್ಯಗಳಲ್ಲೂ ತಿಷ್ಯಮಾಸದ ಪೌರ್ಣಮಾಸಿಯಲ್ಲೂ ಮೂರು ದಿನಗಳು- ಅಂದರೆ, ಚತುರ್ದಶಿ ಪಂಚದಶಿ ಪ್ರಥಮೆ,- ಈ ದಿನಗಳಲ್ಲೂ- ಉಪವಾಸದ ದಿನಗಳಲ್ಲೂ ಖಂಡಿತವಾಗಿಯೂ ಮತ್ಸ್ಯವನ್ನು ಕೊಲ್ಲಕೂಡದು, ವಿಕ್ರಯ ಮಾಡಕೂಡದು. ಈ ದಿನಗಳಲ್ಲಿ ಆನೆಕಾಡುಗಳಲ್ಲಾಗಲಿ, ಬೆಸ್ತರಿಗೆ ಸೇರಿದ ಕೆರೆಗಳಲ್ಲಾಗಲಿ, ಬೇರೆ ಯಾವ ಜೀವಿಯನ್ನೂ ಕೊಲ್ಲಕೂಡದು. ಪ್ರತಿ ಪಕ್ಷದಲ್ಲೂ ಅಷ್ಟಮಿ, ಚತುರ್ದಶಿ, ಪಂಚದಶಿ ದಿವಸಗಳಲ್ಲಿ, ತಿಷ್ಯ ಪುನರ್ವಸು ದಿವಸಗಳಲ್ಲಿ ಹೋರಿಗಳಿಗೆ ಹಿಡ ಮಾಡಬಾರದು; ಆಡು ಟಗರು ಹಂದಿ ಮುಂತಾದ ಇತರ ಪ್ರಾಣಿಗಳಿಗೂ ಹಿಡ ಮಾಡಬಾರದು. ತಿಷ್ಯಪುನರ್ವಸುಗಳಲ್ಲಿ, ಚಾತುರ್ಮಾಸ್ಯಗಳಲ್ಲಿ ಚಾತುರ್ಮಾಸ್ಯದ ಶುಕ್ಲಪಕ್ಷದಲ್ಲಿ, ಕುದುರೆಗಳಿಗೂ ಎತ್ತುಗಳಿಗೂ ಬರೆ ಹಾಕಕೂಡದು.

ಅಭಿಷಿಕ್ತನಾಗಿ ಇಪ್ಪತ್ತಾರು ವರ್ಷಗಳವರೆಗೆ ನನ್ನಿಂದ ಇಪ್ಪತ್ತೈದು ಬಂಧನಮೋಕ್ಷಗಳು ನೆರವೇರಿಸಲಾಯಿತು.

ದೆಲ್ಲಿಟೋಪ್ರಾ ಸ್ತಂಭಶಾಸನ (೭ನೇ ಶಾಸನ)

ದೇವಾನಾಂಪ್ರಿಯ ಪ್ರಿಯದರ್ಶಿರಾಜನು ಹೀಗೆ ಹೇಳುವನು:

ಬಹುಕಾಲದವರೆಗಿನ ರಾಜರು ಧರ್ಮವೃದ್ಧಿಯಿಂದ ಜನರನ್ನು ಅಭಿವೃದ್ಧಿಗೊಳಿಸಬೇಕೆಂಬ ಇಚ್ಛೆಯುಳ್ಳವರಾಗಿದ್ದರು. ಆದರೆ ಅದಕ್ಕನುರೂಪವಾದ ಧರ್ಮವೃದ್ಧಿಯನ್ನು ಪಡೆದು ಜನರು ಅಭಿವೃದ್ಧಿ ಹೊಂದಲಿಲ್ಲ.

ಇದನ್ನು ಕುರಿತು ದೇವಾನಾಂಪ್ರಿಯ ಪ್ರಿಯದರ್ಶಿರಾಜನು ಹೀಗೆ ಹೇಳುವನು: ನನಗೆ ಹೀಗೆನ್ನಿಸಿತು- ಬಹುಕಾಲದವರೆಗಿನ ರಾಜರಿಗೆ ಧರ್ಮವೃದ್ಧಿಯಿಂದ ಜನರನ್ನು ಅಭಿವೃದ್ಧಿ ಗೊಳಿಸಬೇಕೆಂಬ ಇಚ್ಛೆಯಿದ್ದರೂ ಏಕೆ ಅದಕ್ಕನುರೂಪವಾದ ಧರ್ಮವೃದ್ಧಿಯನ್ನು ಪಡೆದು ಜನರು ಅಭಿವೃದ್ಧಿ ಹೊಂದಲಿಲ್ಲ? ಧರ್ಮವೃದ್ಧಿಯ ಮೂಲಕ ಅವರನ್ನು ಹೇಗೆ ಉದ್ಧರಿಸುವುದು?- ಎಂದು.

ಇದನ್ನು ಕುರಿತು ದೇವಾನಾಂಪ್ರಿಯ ಪ್ರಿಯದರ್ಶಿರಾಜನು ಹೀಗೆ ಹೇಳುವನು: ನನಗೆ ಹೀಗೆನ್ನಿಸಿತು-ಧರ್ಮಶ್ರವಣಗಳನ್ನು ಶ್ರವಣಮಾಡಿಸುತ್ತೇನೆ; ಧರ್ಮಾನುಶಾಸ್ತಿಗಳನ್ನು ಅನು ಶಾಸನಮಾಡಿಸುತ್ತೇನೆ. ಜನರು ಇವುಗಳನ್ನು ಕೇಳುತ್ತಾ ಅನುಸರಿಸುತ್ತಾ ಉನ್ನತಿ ಪಡೆಯುತ್ತಾರೆ; ಧರ್ಮವೃದ್ಧಿ ಕೂಡ ಖಂಡಿತವಾಗಿಯೂ ಸಿದ್ಧಿಸುತ್ತದೆ.

ಇದಕ್ಕಾಗಿಯೇ ಧರ್ಮಶ್ರವಣಗಳನ್ನು ಶ್ರವಣಮಾಡಿಸಿದ್ದೇನೆ. ವಿಧವಿಧವಾದ ಧರ್ಮಾನು ಶಾಸ್ತಿಗಳನ್ನೂ ಅನುಶಾಸನ ಮಾಡಿದ್ದೇನೆ. ಬಹುಜನರಲ್ಲಿ ನಿಯುಕ್ತರಾಗಿರುವ ಪುರುಷರು ಅವುಗಳನ್ನು ತಿಳಿಯಹೇಳುತ್ತಾರೆ; ಅವುಗಳನ್ನು ವಿಸ್ತಾರ ಮಾಡುತ್ತಾರೆ. ಬಹುಶತಸಹಸ್ರ ಪ್ರಾಣಿಗಳಲ್ಲಿ ನಿಯುಕ್ತರಾಗಿರುವ ರಾಜೂಕರು ಕೂಡ ನನ್ನಿಂದ ಹೀಗೆ ಆಜ್ಞಪ್ತರಾಗಿದ್ದಾರೆ: ಧರ್ಮಯುಕ್ತರಾದ ಜನರಿಗೆ ಹೀಗೆ ತಿಳಿಸತಕ್ಕದ್ದು-ಎಂದು.

ದೇವಾನಾಂಪ್ರಿಯ ಪ್ರಿಯದರ್ಶಿರಾಜನು ಹೀಗೆ ಹೇಳುವನು: ಇದಕ್ಕಾಗಿಯೇ ನನ್ನಿಂದ ಧರ್ಮಸ್ತಂಭಗಳನ್ನು ಮಾಡಿಸಲಾಗಿದೆ; ಧರ್ಮಮಹಾಮಾತ್ರರನ್ನು ನಿಯಮಿಸಲಾಗಿದೆ; ಧರ್ಮ ಲಿಪಿಗಳನ್ನು ಬರೆಸಲಾಗಿದೆ.

ದೇವನಾಂಪ್ರಿಯ ಪ್ರಿಯದರ್ಶಿರಾಜನು ಹೀಗೆ ಹೇಳುವನು: ಮಾರ್ಗಗಳಲ್ಲಿ ಪಶುಗಳಿಗೆ ಮತ್ತು ಮನುಷ್ಯರಿಗೆ ನೆರಳಿಗೋಸ್ಕರ ನ್ಯಗ್ರೋಧವೃಕ್ಷಗಳನ್ನು ನೆಡಿಸಲಾಗಿದೆ; ಮಾವಿನ ತೋಪುಗಳನ್ನು ನೆಡಿಸಲಾಗಿದೆ. ಪ್ರತಿ ಅರ್ಧಕೋಶದಲ್ಲೂ ಬಾವಿಗಳನ್ನು ತೋಡಿಸಲಾಗಿದೆ. ಛತ್ರಗಳನ್ನು ಕಟ್ಟಿಸಲಾಗಿದೆ. ಪಶುಗಳ ಮತ್ತು ಮನುಷ್ಯರ ಉಪಯೋಗಕ್ಕಾಗಿ ಅಲ್ಲಲ್ಲಿ ಅರವಟ್ಟಿಗೆಗಳನ್ನು ಇಡಿಸಲಾಗಿದೆ.

ಆದರೆ, ಇವುಗಳ ಉಪಯೋಗ ಕೇವಲ ಲಘುವಾದದ್ದು. ಹಿಂದಿನ ರಾಜರಿಂದಲೂ ನನ್ನಿಂದಲೂ ಸುಖವನ್ನು ಕೊಡುವ ವಿವಿಧ ಕಾರ್ಯಗಳು ನಡೆದು ಲೋಕಸುಖವಾಗಿ ಮಾಡಲ್ಪಟ್ಟಿವೆ. ಆದರೆ ಧರ್ಮದ ಮಾರ್ಗದಲ್ಲಿ ಜನರು ನಡೆಯುವಂತೆ ನಾನು ಹೀಗೆ ಮಾಡಿರುವೆನು.

ದೇವಾನಾಂಪ್ರಿಯ ಪ್ರಿಯದರ್ಶಿರಾಜನು ಹೀಗೆ ಹೇಳುವನು: ಬಹು ವಿಧದ ಕೆಲಸಗಳಿ ಗಾಗಿಯೂ ಬಹುವಾಗಿ ಅನುಗ್ರಹ ಮಾಡುವುದಕ್ಕಾಗಿಯೂ ಆ ನನ್ನ ಮಹಾಮಾತ್ರರು ಸಂನ್ಯಾಸಿಗಳಲ್ಲೂ ಗೃಹಸ್ಥರಲ್ಲೂ ಎಲ್ಲ ಮತದವರಲ್ಲೂ ವ್ಯಾಪಿಸಿರುವರು. ಸಂಘದ ಕೆಲಸ ಕಾರ್ಯಗಳಲ್ಲೂ ವ್ಯಾಪಿಸಬೇಕೆಂದು ಅವರು ನನ್ನಿಂದ ಆಜ್ಞಪ್ತರಾಗಿದ್ದಾರೆ. ಬ್ರಾಹ್ಮಣರಲ್ಲೂ ಆಜೀವಿಕರಲ್ಲೂ ವ್ಯಾಪಿಸಬೇಕೆಂದು ಅವರು ನನ್ನಿಂದ ಆಜ್ಞಪ್ತರಾಗಿದ್ದಾರೆ. ನಿರ್ಗ್ರಂಥರಲ್ಲೂ

ವ್ಯಾಪಿಸಬೇಕೆಂದು ಅವರಿಗೆ ಆಜ್ಞೆ ಮಾಡಿದ್ದೇನೆ. ನಾನಾ ಮತದವರಲ್ಲೂ ವ್ಯಾಪಿಸಬೇಕೆಂದು ನಾನು ಆಜ್ಞೆಮಾಡಿದ್ದೇನೆ.

ಇಂತಹವರಿಗೆ ಇಂತಹ ಮಹಾಮಾತ್ರರು ಎಂದಿತ್ತು. ಆದರೆ, ನನ್ನ ಧರ್ಮಮಹಾಮಾತ್ರರು ಇವರಲ್ಲೂ ಇತರ ಎಲ್ಲಾ ಮತದವರಲ್ಲೂ ವ್ಯಾಪಿಸಿರುವರು.

ದೇವಾನಾಂಪ್ರಿಯ ಪ್ರಿಯದರ್ಶಿರಾಜನು ಹೀಗೆ ಹೇಳುವನು: ಇವರೂ ಇತರ ಅನೇಕ ಮುಖ್ಯರೂ ನನ್ನ ಮತ್ತು ದೇವಿಯರ ದಾನಗಳನ್ನು ವಿತರಣ ಮಾಡುತ್ತಿರುವರು. ಇಲ್ಲೂ ಪ್ರಾಂತಗಳಲ್ಲೂ ಇರುವ ಅವರೋಧಗಳಲ್ಲೂ ಅವರು ಇಂತಹ ತುಷ್ಟಿದಾಯಕವಾದ ಕೆಲಸ ಕಾರ್ಯಗಳನ್ನು ನಡೆಸುತ್ತಿರುವರು. ಧರ್ಮಾವಧಾನ ಮತ್ತು ಧರ್ಮಪ್ರತಿಪತ್ತಿಯ ಅಭಿವೃದ್ಧಿಗಾಗಿ ಅವರು ನನ್ನ ಕುಮಾರರ ಹಾಗೂ ಇತರ ದೇವೀಕುಮಾರರ ದಾನಗಳನ್ನು ವಿತರಣ ಮಾಡುತ್ತಿರುವರು. ಧರ್ಮಾವಧಾನ ಹಾಗೂ ಧರ್ಮಪ್ರತಿಪತ್ತಿ ಅಂದರೆ ಇವು: ದಯೆ ದಾನ ಸತ್ಯ ಶುಚಿ ಮಾರ್ದವ ಸಾಧುತೆ. ಇವುಗಳಿಂದ ಲೋಕ ಅಭಿವೃದ್ಧಿ ಹೊಂದುತ್ತದೆ.

ದೇವಾನಾಂಪ್ರಿಯ ಪ್ರಿಯದರ್ಶಿರಾಜನು ಹೀಗೆ ಹೇಳುವನು: ನಾನು ಏನೇನು ಸಾಧುವಾದದ್ದನ್ನು ಮಾಡಿರುವೆನೋ ಅದನ್ನು ಲೋಕ ಅನುಸರಿಸಿದೆ; ಮತ್ತು ಅನುಸರಿಸುತ್ತದೆ. ಎಂದರೆ, ಮಾತಾಪಿತೃಗಳ ಶುಶ್ರೂಷೆ, ಗುರು ಶುಶ್ರೂಷೆ, ಹಿರಿಯರಲ್ಲಿ ಗೌರವ, ಬ್ರಾಹ್ಮಣ ಶ್ರಮಣರು ಬಡವರು ನೊಂದವರು ಇವರಲ್ಲಿ, ದಾಸರು ಭೃತ್ಯರು ಇವರಲ್ಲಿ, ಸಂಪ್ರತಿಪತ್ತಿ-ಇವು ಅಭಿವೃದ್ಧಿ ಹೊಂದಿವೆ ಮತ್ತು ಹೊಂದುತ್ತವೆ.

ದೇವಾನಾಂಪ್ರಿಯ ಪ್ರಿಯದರ್ಶಿರಾಜನು ಹೀಗೆ ಹೇಳುವನು: ಮನುಷ್ಯರಲ್ಲಿ ಈ ಧರ್ಮ ಬುದ್ಧಿ ಅಭಿವೃದ್ಧಿಯಾದದ್ದು ಎರಡು ಕಾರಣಗಳಿಂದ, ಧರ್ಮನಿಯಮದಿಂದ ಮತ್ತು ನಿಧ್ಯಪ್ತಿ ಯಿಂದ. ಇವೆರಡರಲ್ಲಿ ಧರ್ಮನಿಯಮ ಲಘುವಾದದ್ದು, ನಿಧ್ಯಪ್ತಿಯೇ ಹೆಚ್ಚಿನದು. ಧರ್ಮ ನಿಯಮವೆಂದರೆ, ಇಂತಿಂತಹ ಪ್ರಾಣಿಗಳು ಅವಧ್ಯವೆಂದು ನನ್ನಿಂದ ಮಾಡಲಾಗಿರುವುದು, ಹಾಗೆಯೇ ನನ್ನಿಂದ ಮಾಡಲಾಗಿರುವ ಬಹುವಿಧದ ನಿಯಮಗಳು. ನಿಧ್ಯಪ್ತಿ ಎಂದರೆ ಪ್ರಾಣಿಗಳ ವಿಷಯದಲ್ಲಿ ಅಹಿಂಸೆ, ಪ್ರಾಣಿಗಳನ್ನು ಕೊಲ್ಲದಿರುವುದು, ಇವುಗಳಿಂದ ಧರ್ಮವೃದ್ಧಿಯಾಗುತ್ತದೆ ಎಂಬ ಸಂಕಲ್ಪ.

ಇದನ್ನು ಕುರಿತು ದೇವಾನಾಂಪ್ರಿಯನು ಹೀಗೆ ಹೇಳುವನು: ಎಲ್ಲಿ ಶಿಲಾಸ್ತಂಭಗಳಿವೆಯೋ ಎಲ್ಲಿ ಶಿಲಾಫಲಕಗಳಿವೆಯೋ ಅಲ್ಲಿ, ಇದು ಚಿರಸ್ಥಾಯಿಯಾಗಿ ನಿಲ್ಲುವಂತೆ, ಈ ಧರ್ಮ ಲಿಪಿಯನ್ನು ಬರೆಸತಕ್ಕದ್ದು.

ಇದಕ್ಕಾಗಿಯೇ ಇದನ್ನು ಮಾಡಲಾಗಿದೆ: ನನ್ನ ಪುತ್ರ ಪೌತ್ರರಿರುವ ತನಕ ಚಂದ್ರಸೂರ್ಯ ರಿರುವ ತನಕ ಇದನ್ನು ಜನರು ಅನುಸರಿಸಲಿ ಎಂದು. ಇದನ್ನನುಸರಿಸಿದರೆ ಅವರು ಇಹವನ್ನೂ ಪರವನ್ನೂ ಪಡೆಯುವರು. ಅಭಿಷಿಕ್ತನಾಗಿ ಇಪ್ಪತ್ತೇಳು ವರ್ಷಗಳಾದಾಗ ಈ ಧರ್ಮಲಿಪಿಯನ್ನು

ಬರೆಸಿದನು ಎಂಬ ಹಲವು ವಿಷಯವನ್ನು ಲಕ್ಷ್ಮಣ್ ತೆಲಗಾವಿಯವರು ತಮ್ಮ ಬರವಣಿಗೆಯ ಮೂಲಕ ತಿಳಿಸಿದ್ದಾರೆ.

ಶಾಸನಗಳ ಅಧ್ಯಯನ

೧. **ಚಿತ್ರದುರ್ಗ ತಾಲ್ಲೂಕು, ಭರಮಸಾಗರ ಹೋಬಳಿ ಕೋಗುಂಡಿ ಗ್ರಾಮದ ಬಸವನಗುಡಿಯ ಪ್ರಾಕಾರದಲ್ಲಿರುವ ೧೬೦೬ರ ಶಾಸನ:-** ಇದು ಚಿತ್ರದುರ್ಗ ಸಂಸ್ಥಾನದ ಕಾರ್ಯಕರ್ತನೂ ಬಿಳಿಚೋಡು ಸೀಮೆಯ ಪಾರುಪತ್ಯಗಾರನೂ ಆಗಿದ್ದ ಸೀರೆಯ(ಸಿಂದ)ಮಲ್ಲಶೆಟ್ಟಿಯು ಕೆಲಸಗಳಿಗೆ ಬಿಟ್ಟುಕೊಟ್ಟ ಗ್ರಾಮದೆರೆಯ ವಿಚಾರವನ್ನು ಹೇಳುತ್ತದೆ.

೨. **ಹಿರಿಯೂರು ತಾಲ್ಲೂಕು, ಧರ್ಮಪುರಂ ಹೋಬಳಿ ತೊರೆಸಾಲು ನಾಗೇನಹಳ್ಳಿಯ ತಿಮ್ಮಪ್ಪನ ದೇವಸ್ಥಾನದ ಮುಂಡಿಗೋಡೆಯಲ್ಲಿ ಸೇರಿಸಲಾಗಿರುವ ೧೬೭೪ರ ಶಾಸನ:-** ಇದು ಚಿಕ್ಕಣ್ಣನಾಯಕನು ತನ್ನ ತಂದೆಗೆ ಧರ್ಮವಾಗಲೆಂದು ತೊರೆಸಾಲು ನಾಗೇನಹಳ್ಳಿಯನ್ನು ತಿರುಪತಿಯ ಪೆದಜೀಯರ್ಯೆಯನವರಿಗೆ,(ಶ್ರೀ ವೈಷ್ಣರಿಗೆ ಉಚಿತ ಭೋಜನ ವ್ಯವಸ್ಥೆಗೆಂದು) ರಾಮಾನುಜಕೂಟಕ್ಕೆ ಧಾರಾಪೂರ್ವಕ ಕೊಟ್ಟುದ್ದನ್ನು ಹೇಳುತ್ತದೆ.

೩. **ಚಿತ್ರದುರ್ಗ ತಾಲ್ಲೂಕು, ವೀರವ್ವನಾಗತಿಹಳ್ಳಿಯ ಆಂಜನೇಯ ದೇವಸ್ಥಾನದಲ್ಲಿ ಮಾರುತಿ ವಿಗ್ರಹದ ಪೀಠ ಭಾಗದಲ್ಲಿರುವ ೧೬೮೦ ಶಾಸನ:-** ಇದು ಚಿಕ್ಕಣ್ಣ ನಾಯಕನ ತಂದೆ ಹಿರಿಯ ಕೊಮಾರಪ್ಪನ ಪುಣ್ಯಸ್ತ್ರೀ. ವೀರವ್ವನಾಗತಿಯ ಹೆಸರಿನಲ್ಲಿ, ಕುಂಟಪ್ಪನ ಮಗ ತಿಮ್ಮಣ್ಣನು ವೀರವ್ವ ನಾಗತಿಹಳ್ಳಿಯನ್ನು ಸ್ಥಾಪಿಸಿ, ಇಲ್ಲಿ ಆಂಜನೇಯ ದೇವಸ್ಥಾನವನ್ನು ಮಾಡಿಸಿದುದನ್ನು ತಿಳಿಸುತ್ತದೆ.

೪. **ದಾವಣಗೆರೆ ಜಿಲ್ಲೆ, ಮಾಯಕೊಂಡ ಹೋಬಳಿ ಹಾಲುವರ್ತಿ ಗ್ರಾಮದ ಆಂಜನೇಯ ದೇವಾಲಯದ ಗೋಡೆವತ್ತಿನಲ್ಲಿ ನೆಟ್ಟ ೧೬೮೧ರ ಶಾಸನ:-** ಬಹುಶಃ ಮೇಲಿನ ಶಾಸನದಲ್ಲಿಯ ಉದ್ದೇಶಕ್ಕೆಂದೇ ಚಿಕ್ಕಣ್ಣನಾಯಕನು ಶ್ರೀ ವೈಷ್ಣವ ಪಂಥದ ತಿರುವೆಂಗಳಾಚಾರ್ಯರಿಗೆ ಹಾಲುವರ್ತಿ ಗ್ರಾಮವನ್ನು ದಾನವಾಗಿ ನೀಡಿದುದ್ದನ್ನು ಇದು ತಿಳಿಸುತ್ತದೆ.

೫. **ಹೊಳಲ್ಕೆರೆ ತಾಲ್ಲೂಕು, ರಾಮಗಿರಿ ಹೋಬಳಿ ಗುಂಡ ಸಮುದ್ರ ಗ್ರಾಮದಲ್ಲಿ ಪಟೇಲ್ ಸಿದ್ಧಯ್ಯನ ವಶದಲ್ಲಿದ್ದ ೧೬೮೫ರ ತಾಮ್ರಶಾಸನ:-** ಇದು ಚಿಕ್ಕಣ್ಣ ನಾಯಕನ ಊಳಿಗದಲ್ಲಿದ್ದ ಬೊಕ್ಕಸದ ಮುದ್ದಣ್ಣನ ಮಗಳು ಗಂಗಮ್ಮಳು, ಬಾಗೂರು ಚರಂತಿ ಚೆನ್ನಬಸಪ್ಪದೇವರ ಕುಮಾರ ರುದ್ರಪ್ಪದೇವರಿಗೆ, ಬಾಗೂರು ಸೀಮೆಗೆ ಸಲ್ಲುವ ಹೊಸ ಗ್ರಾಮ ವೀರಾಪುರವನ್ನು ತಮಗೆ ಅನೇಕ ಧರ್ಮವಾಗಲಿಯೆಂದು ಧಾರಾಪೂರ್ವಕವಾಗಿ ಕೊಟ್ಟ ವಿವರವನ್ನು ನೀಡುತ್ತದೆ. ಈ ತಾಮ್ರಶಾಸನದ ವೈಶಿಷ್ಟ್ಯವೆಂದರೆ, ಇದು ಮೂಲ ಶಿಲಾಶಾಸನವೊಂದರ ನಕಲಾಗಿದ್ದಿರುವ ಸಾಧ್ಯತೆಯಿದೆ. ಈ ತಾಮ್ರಶಾಸನದಲ್ಲಿ 'ಸಿಲಾಸ್ತಾಪನಾ' ಎಂಬುದು ಒಂದು ಬಾರಿ ಮತ್ತು 'ಸಿಲಾಶ್ಯಾಸನಾ' ಎಂಬುದು ಎರಡು ಬಾರಿ ಒಟ್ಟು ೩ ಬಾರಿ

ಪ್ರಸ್ತಾಪಗೊಂಡಿದೆ. ಆದರೆ ಇಲ್ಲಿಯ 'ಶಿಲಾಶಾಸನ' ಯಾವುದೋ ಎಲ್ಲಿದೆಯೋ ಸದ್ಯಕ್ಕೆ ತಿಳಿಯದು.

೬. **ದಾವಣಗೆರೆ ಜಿಲ್ಲೆಯ ಜಗಳೂರು ಹೋಬಳಿ ಸಿದ್ಧಮ್ಮನಹಳ್ಳಿಯ ಆಂಜನೇಯ ದೇವಸ್ಥಾನದ ಗರ್ಭಗೃಹದಲ್ಲಿ ದೇವರ ಹಿಂಬದಿಯಲ್ಲಿ ನೆಟ್ಟ ೧೬೮೫ರ ಶಾಸನ:-** ಚಿಕ್ಕಣ್ಣನಾಯಕನ ಅಧೀನದ ಪಾರುಪತ್ಯಗಾರ ಬೂತಯ್ಯನ ವೀರಣ್ಣನು ತನ್ನ ಸ್ತ್ರೀಯಳ ಸಿದ್ಧವ್ವನ ಹೆಸರಿನಲ್ಲಿ, ಅಣಬೂರು ಸ್ಥಳದೊಳಗಣ ಸಿದ್ದಾಪೂರ ಗ್ರಾಮವನ್ನು ಸ್ಥಾಪಿಸುವುದರೊಡನೆ, ಅಲ್ಲಿ ಗ್ರಾಮ-ಮಠ-ದೇವಸ್ಥಾನಗಳನ್ನು ನಿರ್ಮಿಸಿದನು ಹಾಗೂ ಇದಾದ ೬ ವರ್ಷಗಳ ತರುವಾಯ ಈ ಆಂಜನೇಯ ಗುಡಿಯನ್ನು ಪೂರ್ಣಗೊಳಿಸಿದುದ್ದನ್ನು ಇದು ಹರಹುತ್ತದೆ. ಈ ಶಾಸನದ ವಿಶೇಷ ಅಂಶವೆಂದರೆ, ಇದು ೧೬೮೫ರ ತೇದಿಯೊಡನೆ ೧೬೯೧ ತೇದಿಯನ್ನೂ, ಅಂದರೆ ಚಿಕ್ಕಣ್ಣನಾಯಕನ ತರುವಾಯ ಪಟ್ಟಕ್ಕೆ ಬಂದ(ಮುಮ್ಮಡಿ) ಮದಕರಿನಾಯಕ(೧೬೮೬-೧೬೮೮) ಮತ್ತು ಬಿಚ್ಚುಗತ್ತಿ ಭರಮಣ್ಣನಾಯಕ(೧೬೮೯-೧೭೨೧) ಇವರ ಆಡಳಿತಾವಧಿಯನ್ನೂ ಒಳಗೊಂಡಿದೆ. ಈ ಶಾಸನವು ತಿಳಿಸುವಂತೆ, ಬೂತಯ್ಯನ ವೀರಣ್ಣನು ಆಂಜನೇಯ ಗುಡಿಯನ್ನು ಕಟ್ಟಿ ಪೂರೈಸಿದುದು. ೧೬೯೧ರಲ್ಲಿ ಈ ಶಾಸನವು ೧೬೮೫ರ ತೇದಿಯನ್ನು ಹೊಂದಿದ್ದರೂ ಇದನ್ನು ಹಾಕಿಸಲಾದುದು. ೬ ವರ್ಷಗಳ ನಂತರವೇ ಎಂಬುದು ಇಲ್ಲಿ ಸ್ಪಷ್ಟಪಡುವ ಅಂಶ. ಈಗ ಕಲ್ಲೇನಹಳ್ಳಿಯಲ್ಲಿ ದೊರೆತಿರುವ ಹೊಸ ಶಾಸನವು ಆ ಸಾಲಿನಲ್ಲಿ ಏಳನೆಯದು.

ಕಲ್ಲೇನಹಳ್ಳಿಯ ಶಾಸನ : ಪ್ರಸ್ತುತ ಶಿಲಾಶಾಸನವು ದೊರೆತಿರುವುದು ಚಿತ್ರದುರ್ಗ-ಬೆಳಗಟ್ಟ ಮಾರ್ಗದಲ್ಲಿರುವ ಕಲ್ಲಹಳ್ಳಿ ಅಥವಾ ಹಳೇಕಲ್ಲೇನಹಳ್ಳಿಯ ಕಲ್ಲೇಶ್ವರ ಮತ್ತು ಹನುಮಂತದೇವರುಗಳ ಪಾಲುಗುಡಿಗಳ ಮಧ್ಯದ ಆವರಣದಲ್ಲಿ. ಈ ಕಲ್ಲಹಳ್ಳಿಯು ಒಂದು ಹಳೆಯ ಗ್ರಾಮ. ಈಗಿರುವ ಹೊಸ ಕಲ್ಲೇನಹಳ್ಳಿಯು ಅಸ್ತಿತ್ವಕ್ಕೆ ಬಂದಿರುವುದು ಹಳೇಕಲ್ಲೇನಹಳ್ಳಿಯ ವಾಯುವ್ಯಕ್ಕೆ ಕೇವಲ ೫೦೦ ಗಜಗಳ ಅಂತರದಲ್ಲಿ. ಚಿತ್ರದುರ್ಗ ಸಂಸ್ಥಾನದ ಸೇವೆಯಲ್ಲಿದ್ದ ಬೊಕ್ಕಸದ ಕಲ್ಲಯ್ಯನು ಇಲ್ಲಿ ಜಲಾಶಯವೊಂದನ್ನು ಮಾಡಿಸುವುದರೊಡನೆ ಈ ಹಳೇಕಲ್ಲೇನಹಳ್ಳಿಯನ್ನು ಹುಟ್ಟು ಹಾಕಿದ; ದೇವಸ್ಥಾನಗಳನ್ನು ನಿರ್ಮಿಸಿದ. ಆದರೆ ಈ ಸಂದರ್ಭದಲ್ಲಿ ಚಿತ್ರದುರ್ಗನಾಯಕ ಅರಸರಿಗೆ ಸಂಬಂಧಿಸಿದ ವಂಶಾವಳಿಯು, "ಬೊಕ್ಕಸದ ಕಲ್ಲಪ್ಪ ಮಾಡಿಸಿದ್ದು(ಕಲ್ಲಹಳ್ಳಿ ಗ್ರಾಮ ಮುರಿದು/ಮೆದಕೇರಿಪುರದ ಗ್ರಾಮ" ಎಂದು ದಾಖಲಿಸಿದೆ.

ಈ ಮೇಲಿನ ಮಾಹಿತಿಯನ್ನು ಇಲ್ಲಿ ಪರಿಶೀಲಿಸುವುದಾದರೆ, ಬೊಕ್ಕಸದ ಕಲ್ಲಯ್ಯನು ಸ್ವಯಂ ಹಾಕಿಸಿರುವ ಶಿಲಾಶಾಸನದಲ್ಲಿಯ ವಿಷಯವು 'ವಂಶಾವಳಿ'ಗಿಂತ ಸಂಪೂರ್ಣ ಭಿನ್ನವಾಗಿದೆ. ಅದರಲ್ಲಿ ಕಟ್ಟೆ(ಕೆರೆ)ಯನ್ನು ಕಟ್ಟಿಸಿದುದಾಗಲೀ(ವೀರ) ಮೆದಕೇರಿಪುರ ಗ್ರಾಮವನ್ನು ಮಾಡಿಸುದು ದಾಗಲೀ ಪ್ರಸ್ತಾಪಗೊಂಡಿಲ್ಲ. ಅಲ್ಲದೆ, ಸ್ವಂತ ಹೆಸರಿನಲ್ಲಿ ತಾನೇ ಸ್ಥಾಪಿಸಿಕೊಂಡ ಕಲ್ಲಹಳ್ಳಿ ಗ್ರಾಮವನ್ನು ಮುರಿದು (ವೀರ) ಮೆದಕೇರಿಪುರವನ್ನು ಮಾಡಿಸುವ ಅಗತ್ಯವಾದರೂ ಆತನಿಗೆ ಏಕಿದ್ದೀತು? ಇಲ್ಲಿ ಸ್ವಲ್ಪಮಟ್ಟಿನ ಗೊಂದಲವಿರುವಂತೆ ತೋರುತ್ತದೆ. ಕಲ್ಲಹಳ್ಳಿ ಸ್ಥಾಪನೆಗೊಳ್ಳುವ

ಸಮಯಕ್ಕೆ ಅದರ ಸನಿಹದಲ್ಲೇ ಸ್ಥಾಪಿತರಾಗಿದ್ದ(ವೀರ) ಮೆದಕೇರಿಪುರವು ಕಾರಣಾಂತರಗಳಿಂದ ಬೇಚರಾಕ್ ಎನಿಸಿದ್ದ, ವಂಶಾವಳಿಕಾರನು ಇದನ್ನು ಮೇಲಿನಂತೆ ಕಲ್ಲಹಳ್ಳಿಗೆ ತಪ್ಪಾಗಿ ಆರೋಪಿಸಿ ಉಲ್ಲೇಖಿಸಿರುವನೇ? ಇದನ್ನು ಸರಿಯಾಗಿ ಪರಿಶೀಲಿಸಬೇಕಿದೆ.

ಇಂದು ಸಂಪೂರ್ಣ ಬೇಚರಾಕ್ ಸ್ಥಿತಿಯಲ್ಲಿರುವ ಈ ಮೇಲಿನ 'ಮೆದಕೇರಿಪುರ'ವನ್ನು ಸುಮಾರು ೧೮೦೦ರ ಶಾಸನದಲ್ಲಿ 'ವೀರಮೆದಕೆರಿಪುರಂ'ವೆಂತಲೂ ಸರ್ಕಾರಿ ದಾಖಲೆಗಳಲ್ಲಿ 'ವೀರಮದಕರಿಪುರ'ವೆಂತಲೂ ಗುರುತಿಸಲಾಗಿದೆ. ಈಗಾಗಲೇ ಹೇಳಿದಂತೆ, ಕಲ್ಲಹಳ್ಳಿ ಅಥವಾ ಹಳೇ ಕಲ್ಲೇನಹಳ್ಳಿಯೆ ವೀರಮದಕರಿಪುರವೆಂದು ಕರೆಯಲಾಯಿತೆ ಎಂಬುದನ್ನು ಮರುಪರಿಶೀಲಿಸಬೇಕಾಗಿದೆ. ಬೇಚರಾಕಸ್ಥಿತಿಯಲ್ಲಿರುವ ವೀರಮದಕರಿಪುರ ಮತ್ತು ಇದರ ಆಗ್ನೇಯಕ್ಕಿರುವ ಹಳೇಕಲ್ಲೇನಹಳ್ಳಿಗಳ ನಡುವೆ ಇರುವ ಅಂತರವಾದರೂ ಕೇವಲ ೧½ ಕಿ.ಮೀ.

ಪ್ರಸ್ತುತ ಶಾಸನವು ಒಳಗೊಂಡಿರುವ ಒಟ್ಟು ಸಾಲುಗಳು ೧೭. ಈ ಶಾಸನಕಲ್ಲಿನ ಎತ್ತರ ೫.೯ ಅಡಿ ಹಾಗೂ ಅಗಲ ೧.೯ ಅಡಿ ಚೆನ್ನಾಗಿ ಉಜ್ಜಿ ನಯಗೊಳಿಸಿದ ಹಸಿರುವರ್ಣದ ಹಾಸುಗಲ್ಲಿನ ಮೇಲೆ ಶಾಸನ ಪಾಠವನ್ನು ಕಂಡರಿಸಲಾಗಿದೆ. ಕಲ್ಲಿನ ಮೇಲ್ತುದಿಯು ಬೋಳಾಕಾರದಲ್ಲಿದ್ದು, ಒಟ್ಟು ಶಿಲೆಯನ್ನು ಸುಂದರ ಆಕಾರಕ್ಕೆ ಪರಿವರ್ತಿಸಲಾಗಿದೆ. ಶಿರೋಭಾಗದಲ್ಲಿ ೯.೫ ಅಂಗುಲ ಉದ್ದ ಮತ್ತು ೧.೨೬ ಅಡಿ ಅಗಲದ ಅಳತೆಯಲ್ಲಿ ಸೂರ್ಯ-ಚಂದ್ರರ ನಡುವೆ ಶಿವಲಿಂಗಾಕಾರವನ್ನೂ ಅದರ ನೆತ್ತಿಯ ಮೇಲೆ ಚಿಕ್ಕ ಲಿಂಗಾಕೃತಿಯನ್ನು ಅಳವಡಿಸಿಕೊಂಡಿರುವ ಪುಷ್ಪವನ್ನು ಬಿಡಿಸಲಾಗಿದೆ. ಶಾಸನಶಿಲೆಯಲ್ಲಿ ತೋಡಿ ಮೂಡಿಸಲಾಗಿರುವ ಉಬ್ಬುಶಿಲ್ಪಗಳು ಆಕರ್ಷಕವಾಗಿವೆ.

ಈ ಶಾಸನಪಾಠದ ವಿಶೇಷವೆಂದರೆ, ಇದನ್ನು ನಯಗೊಳಿಸಿದ ಭಾಗದಲ್ಲಿ ೧.೨ ಅಡಿ ಉದ್ದ ಮತ್ತು ೧.೧೦ ಅಡಿ ಅಗಲದ ಸ್ಥಳದಲ್ಲಿ ಕಂಡರಿಸಲಾಗಿದ್ದು, ಉಳಿದ ೨.೩ ಅಡಿಗಳಷ್ಟು ಸ್ಥಳವನ್ನು ಖಾಲಿ ಬಿಟ್ಟಿರುವುದು, ಈ ಕಾರಣಕ್ಕಾಗಿಯೇ ಈ ಶಾಸನಪಾಠವು ಅಪೂರ್ಣವಾದುದೆಂಬ ಕಲ್ಪನೆ ಮೂಡುತ್ತದೆ. ಶಾಸನಪಾಠದ ಅಂತ್ಯದಲ್ಲಿ "ಕೆಲವು ಅಧಿಕಾರಸ್ಥರು ಹಾಗೂ ಪ್ರಜೆಗಳು ಈ ಗ್ರಾಮಕ್ಕೆ ಹೋಗಿ ನಾಲ್ಕು ಮೂಲೆಗಳಲ್ಲೂ ಕಲ್ಲುಗಳನ್ನು ನೆಡಿಸಿದ ವಿವರ"ವೆಂದು ಬರೆಯಲಾಗಿರುವುದರಿಂದ, ಪಾಠದ ಮುಂದಿನ ಸಾಲುಗಳನ್ನು ಯಾವುದೊ ಕಾರಣಕ್ಕೆ ಕಂಡರಣೆಕಾರನು ಕೈ ಬಿಟ್ಟಿರುವಂತೆ ಭಾಸವಾಗುತ್ತದೆ. ಆದರೆ ಈಗಿರುವಷ್ಟು ಶಾಸನಪಾಠವು ಸ್ವಯಂ ಪೂರ್ಣವಾಗಿದ್ದು, ಶಾಸನ ಹಾಕಿಸಲಾದ ಉದ್ದೇಶವನ್ನು ಸ್ಪಷ್ಟಪಡಿಸುತ್ತದೆ. ಈ ಕಾರಣದಿಂದಾಗಿ ಕಂಡರಣೆಕಾರನ ಮೂಲ ಪಾಠದಲ್ಲಿದ್ದಿರಬಹುದಾದ ಉಳಿದ ವಿವರವನ್ನು ಅನಗತ್ಯವೆಂದು ಕೈಬಿಟ್ಟಿರಬಹುದೇ? ಏನೇ ಇದ್ದರೂ ಹಳೇಕಲ್ಲೇನಹಳ್ಳಿ ಗ್ರಾಮದ ನಾಲ್ಕು ದಿಕ್ಕುಗಳ ಎಲ್ಲೆಗಳನ್ನು ಗುರುತಿಸುವಂಥ ವಿವರಗಳನ್ನೂ ಈ ಶಾಸನದಲ್ಲಿ ನೀಡಿದ ಪಕ್ಷದಲ್ಲಿ,

ಸಹಜವಾಗಿಯೆ ದಿಕ್ಕು ನಿರ್ದೇಶಗಳೊಡನೆ ಇಲ್ಲಿಯ ಭೂಪರಿಸರದ ಸ್ಪಷ್ಟ ಚಿತ್ರಣ ದೊರಕಬಹುದಿತ್ತು. ಆ ಮಟ್ಟಿಗೆ ಈ ಶಾಸನಪಾಠವು ಅಪೂರ್ಣವಾದುದೇ ಸರಿ. ಕಂಡರಿಸಲಾಗಿರುವ ಅಕ್ಷರಗಳು ಸುಂದರವಾಗಿದ್ದು, ಕಂಡರಣೆಕಾರನೋರ್ವ ನುರಿತ ಕಲ್ಲು ಕುಟ್ಟಿಗನೆಂಬುದನ್ನು ಸಮರ್ಥಿಸುತ್ತವೆ. ೧೭ನೇ ಶತಮಾನದ ಬರಹಶೈಲಿಯನ್ನು ಈ ಶಾಸನವೂ ಅಭಿವ್ಯಕ್ತಿಸುತ್ತದೆ.

ಪ್ರಸ್ತುತ ಶಾಸನವು, ಬೊಕ್ಕಸದ ಕಲ್ಲಯ್ಯನು ತನ್ನ ಹೆಸರಿನಲ್ಲೆ ಕಲ್ಲಾಪುರ ಗ್ರಾಮ, ಕಲ್ಲೇಶ್ವರ (ನಂದಿವಿಗ್ರಹ ಸಹಿತ) ಹಾಗೂ ಹನುಮಂತ ದೇವರ ದೇವಸ್ಥಾನಗಳನ್ನು ಕಟ್ಟಿಸಿದುದ್ದನ್ನು ದಾಖಲಿಸಿಕೊಂಡಿದೆ. ಈ ಶಾಸನವು ಕಲ್ಲಯ್ಯನ ಚಿತ್ರದುರ್ಗ ಸಂಸ್ಥಾನಿಕರಲ್ಲಿ, ಅಂದರೆ ಚಿಕ್ಕಣ್ಣ ನಾಯಕನ ಅಧೀನದಲ್ಲಿ ಬೊಕ್ಕಸದ ಅಧಿಕಾರಿಯಾಗಿದ್ದವನು. ಮೇಲೆಯೆ ನೋಡಿದಂತೆ, ವಂಶಾವಳಿಯಲ್ಲಿ ಈತನನ್ನು ಬೊಕ್ಕಸದ ಕಲ್ಲಪ್ಪನೆಂದು ಉಲ್ಲೇಖಿಸಲಾಗಿದೆ. ಇಷ್ಟರ ವಿನಃ ವಂಶಾವಳಿಯಲ್ಲಾಗಲಿ, ಶಾಸನದಲ್ಲಾಗಲಿ ಈತನ ಬಗೆಗೆ ಹೆಚ್ಚಿನ ವಿವರ ದೊರೆಯುವುದಿಲ್ಲ. ಆದರೆ ನಾರೇಕೆರೆ(ಮೈದನೂರು) ಮಾಳಯ್ಯನೆಂಬವನು ಈತನ ಅಜ್ಜನೆಂದು ಹಾಗೂ ಮರಿಯಪ್ಪನೆಂಬವನು ಈತನ ತಂದೆಯೆಂದು ತಿಳಿದುಬರುವುದು. ಪ್ರಸ್ತುತ ಶಾಸನದಿಂದ ಮಾತ್ರ[೧೧]

ಚಮ್ಮಾರರ ಕುರಿತಂತೆ ದೊರೆತಿರುವ ಶಾಸನಗಳು

ಬಾದಾಮಿ ಚಾಲುಕ್ಯರ, ಇಮ್ಮಡಿ ವಿಕ್ರಮಾದಿತ್ಯ(ಕ್ರಿ.ಶ. ೭೩೩-೭೪೫)ನ ಆಳ್ವಿಕೆಯಲ್ಲಿ ಬಿಜಾಪುರ ಪ್ರದೇಶದಲ್ಲಿ ಸ್ಥಳೀಯ ಚಮ್ಮಾರರು ಸಂಘಟಿತರಾಗಿ, ತಮ್ಮ ವೃತ್ತಿಯನ್ನು ಮುಂದುವರಿಸಿದ್ದರೆಂದು ವ್ಯಕ್ತಪಡುತ್ತದೆ. ಬಾದಾಮಿ ಜಂಬುಲಿಂಗನಗುಡಿ ಕಂಬದಲ್ಲಿರುವ ಆರು ಸಾಲಿನ ಶಾಸನ ತಿಳಿಸುವಂತೆ, ಅಂದು ವಾತಾಪಿ(ಬಾದಾಮಿ) ಎರಡು ಸಾವಿರ ಮಹಾಜನರುಳ್ಳ ವಿದ್ಯಾಕೇಂದ್ರ ವಾಗಿದ್ದಿತು. ವಾತಾಪಿಯ ಮಹಾಜನರು, ಯಾವುದೊ ಸಂದರ್ಭದಲ್ಲಿ, ಅಲ್ಲಿನ ಚಮ್ಮಾರರ ಸುಂಕವನ್ನು (ಕವಳ್ತೆಯನ್ನು) ಬಿಟ್ಟುಕೊಟ್ಟರು. ಕವರ್ತೆ(ಕವಳ್ತೆ)ಯೆಂಬುದು ಒಂದು ವಿಧದ ಸುಂಕ. ಈ ಸುಂಕವನ್ನು ಬಿಟ್ಟುಕೊಟ್ಟ ಮಹಾಜನರು ಚಾತುರ್ವಿದ್ಯಾ ಸಮುದಾಯದವರು; ಉತ್ತಮ ಜಾತಿಯೆನಿಸಿದ ವಿಪ್ರಕುಲದವರು. ಅಂದಿನ ಸಮಾಜದಲ್ಲಿ ಅಗ್ರಸ್ಥಾನದಲ್ಲಿದ್ದ ಈ ಮಹಾಜನರು ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹಣ - ದಂತಹ ಮುಖ್ಯ ಕರ್ತವ್ಯಗಳಲ್ಲಿ, ಅಂದರೆ ಷಟ್ಕರ್ಮಗಳಲ್ಲಿ ನಿರತರಾಗಿದ್ದ 'ಚತುರ್ವೇದಾರ್ತ್ಥ ಸಂಪನ್ನ ರಾಗಿದ್ದರು.

ಈ ಮೇಲೆ ಪ್ರಸ್ತಾಪಿಸಿದ ಬಾದಾಮಿ ಶಾಸನವು, ಸಮಗಾರ ಸಮುದಾಯಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಹಾಕಿಸಲಾದ ಶಾಸನವೆಂಬುದು ಗಮನಾರ್ಹ. ಈ ಶಾಸನವು ಪ್ರತ್ಯೇಕವಾದುದಷ್ಟೇ ಅಲ್ಲ, ಏಕೈಕ ಉದಾಹರಣೆಯಾಗಿಯೂ ನಿಲ್ಲುವಂಥದ್ದು. ಈ ಶಾಸನದ ಪೂರ್ಣಪಾಠ ಇಂತಿದೆ:-

೧. ಸ್ವಸ್ತಿಶ್ರೀ ವಿಜಯವಾತಾಪ್ಯಧಿಷಆನದಾ ಶ್ರೀಮಹಾಜಾ

೨. ತುರ್ವ್ವಿದ್ಯ ಸಮುದೆಯಮಿರ್ಬ್ಬಾಸಿರ್ವ್ವರುಂ ಈ ಊರ

೩. ಸಮ್ಮಗಾ ಅರಾ ಕವಳ್ತೆಯಾನ್ವಿಟ್ಟಾವರ್ ದೋಷರಿಗೆ

೪. ಯ್ದೋನ್ಗೆ ದಮ್ಡಂ ನಾಡೊಳ್ಳವಳ್ತೆ ಆಡೊಡಂ ಇಲ್ಲಿ ಇಲ್ಲ

೫. ಉಣ್ಬು ಕೊಳಿಂ ಮೆನ್ನೂನ್ವಚ್ಚ ಮಹಾಪಾತಕನಕ್ಕುಂ

೬. ನಿಧಿಯ ಮಾರ ಪಡೆದೋನ್

ಈ ಮೇಲಿನ ಬಾದಾಮಿ ಶಾಸನವು ಚಮ್ಮಾರರ ವೃತ್ತಿ ಮೇಲಿನ ಸುಂಕವನ್ನು ಮನ್ನಾ ಮಾಡಿದ ವಿಚಾರ ತಿಳಿಸಿದರೆ, ಬಿಜಾಪುರ ಜಿಲ್ಲೆ, ಸಿಂದಗಿ ತಾಲ್ಲೂಕು ಹಿಪ್ಪರಗಿ ಶಾಸನವು ಸಮಗಾರರ ಮೇಲೆ ವಿಧಿಸಲಾದ ಸುಂಕವನ್ನು ಕುರಿತು ಹೇಳುತ್ತದೆ. ಇಲ್ಲಿಯ ಕಾಶಿಲಿಂಗ ದೇವಾಲಯದಲ್ಲಿ ಗೋಡೆಗೆ ಹೊಂದಿಸಿರುವ ಕಲ್ಲು ತೊಲೆಯ ಮೇಲೆ ಕಂಡರಿಸಲಾದ ಈ ಶಾಸನವು ೩೧ ಆಗಸ್ಟ್ ೧೧೯೨ರಂದು; ಅಂದರೆ ಬಡಗಿ, ಕಮ್ಮಾರ, ಸಮಗಾರ(ಸಂಮಗಾಱ), ಅಸಗ(ಅಗಸ), ದೇಡಮಗ್ಗ-ಇವರ ಮೇಲೆ ಒಂದೊಂದು ಗಾ(ಕಾ)ವಲಿ ಒಣ್ಣೆ(ಣ್ಣೆ)ಗೆ ಸುಂಕವನ್ನು ಹಾಕಲಾಗುತ್ತಿದ್ದನ್ನು ಇಲ್ಲಿ ಹೇಳಿದೆ. ಸಿಂದಗಿ ತಾಲ್ಲೂಕಿನ ಕಡಲೆವಾಡದ ಸ್ವಾಮಿಲಿಂಗ ದೇವಾಲಯದಲ್ಲಿರುವ ಶಾಸನವೂ ಇದನ್ನೇ ಸಮರ್ಥಿಸುತ್ತದೆ. ಇದರ ಕಾಲ ಕ್ರಿ.ಶ. ೧೨ನೇ ಶತಮಾನ. ಈ ಶಾಸನದ ಪ್ರಕಾರ, ಮಹಾನಾಡಿನ ಮೂವತ್ತಾರುಬೀಡು ಮುಮ್ಮುರಿದಂಡಂಗಳು ಕಡಲೆವಾಡದ ಸ್ವಯಂಭು ಸೋಮನಾಥದೇವರ ಅಂಗಭೋಗಕ್ಕಾಗಿ ವಿವಿಧ ವೃತ್ತಿಯವರಿಗೆ, ಅಂದರೆ... "ಬಡಗಿ ಕಂಮ್ಮಾಱ ಅಕ್ಕಸಾಲೆ ಅಗಸ ಸಂಮ್ಮಗಾಱದೆಡ ಹೊಲೆಯರ ಕೂಡೆ ವೊಳಗಾಗಿ" ಸುಂಕವನ್ನು ವಿಧಿಸುತ್ತಾರೆ. ಇಲ್ಲಿ ಮಾದಿಗರನ್ನು ದೆಡ(ದೆಡ್) ಎಂದು ಸಂಭೋದಿಸಿರುವುದು ಗಮನಾರ್ಹ.

ಬಿಜಾಪುರ ತಾಲ್ಲೂಕಿನ ಮದಭಾವಿಯಲ್ಲಿರುವ ಕಲ್ಲೇಶ್ವರ ದೇವಾಲಯದ ಮೆಟ್ಟಿಲುಗಳಲ್ಲಿ ಹಾಸಲಾಗಿರುವ ತೊಲೆಯ ಮೇಲೆ ಕ್ರಿ.ಶ. ೧೧೯೦ರ ಕಾಲದ ಶಾಸನಪಾಟವನ್ನು ಕಂಡರಿಸಲಾಗಿದೆ. ಇದು ಸಹ ಯಾದವ ಅರಸ ಭಿಲ್ಲಮನ ಅವಧಿಯದಾಗಿದ್ದು, ಸಾಕಷ್ಟು ತ್ರುಣಿತವಾಗಿರುವ ಈ ಶಾಸನವು, ಅಲ್ಲಿಯ ಸ್ವಯಂಭು ಜಿಜ್ಜಳೀಶ್ವರದೇವರ ಪೂಜಾದಿಗಳಿಗೆ ವಿವಿಧ ವೃತ್ತಿಗಳವರ ಮೇಲೆ ವಿಧಿಸಲಾದ ಸುಂಕಗಳಿಗೆ ಸಂಬಂಧಿಸಿದುದೆಂದು ತೋರುತ್ತದೆ. ಇದರಲ್ಲಿಯೂ 'ಸಂಮಗಾಱ'ರ ಎಂಬ ಪದವು ಪ್ರಸ್ತಾಪವಿರುವುದರಿಂದ, ಇದು ಸಹ ಅವರ ವೃತ್ತಿಯ ಮೇಲೆ ವಿಧಿಸಿದ ಸುಂಕವನ್ನು ಕುರಿತು ಹೇಳುತ್ತದೆಂದು ಭಾವಿಸಬಹುದು.[೨] ಹೊಸಪೇಟೆಯ ಇಂದಿರಾನಗರದ ಬಸವೇಶ್ವರ ಬಡಾವಣೆಯಲ್ಲಿ ಒಂದು ಶಾಸನ ಮತ್ತು ಕೆರೆಯನ್ನು ಶೋಧನೆ ಮಾಡಿದ್ದು ತೆಲಗಾವಿಯವರ ಸಾಧನೆಯಾಗಿದೆ.

೩.೫. ಪುರಾತತ್ವ ಅಧ್ಯಯನ

ಚರಿತ್ರಪೂರ್ವಕಾಲೀನ ಸಮಾಜದತ್ತ ದೃಷ್ಟಿ ಹಾಯಿಸಿದಾಗ ಕಂಡುಬರುವ ಮಾನವ ಬದುಕಿನ ಸ್ಥಿತ್ಯಂತರಗಳು ಕುತೂಹಲ ಹುಟ್ಟಿಸುವಂತವು. ಆಹಾರ ಸಂಗ್ರಹಣೆಯ ಅಲೆಮಾರಿ ಸ್ಥಿತಿಯಿಂದ ಆಹಾರೋತ್ಪಾದನೆಯ ಹಂತಕ್ಕೆ ಬೆಳೆದ ಸಮುದಾಯಗಳು ತಮ್ಮ ಬೆಳವಣಿಗೆಯ

ಹಾಗೂ ಪರಿವರ್ತನೆಯ ಸ್ವರೂಪವನ್ನು ನಾನಾ ವಿಧದಲ್ಲಿ ಮನಗಾಣಿಸಿಕೊಟ್ಟಿವೆ. ಕೃಷಿಯ ಆರಂಭ, ಪಶುಪಾಲನೆ, ಮಡಿಕೆ-ಕುಡಿಕೆಗಳ ತಯಾರಿಕೆ ಹಾಗೂ ಇವೆಲ್ಲಕ್ಕೂ ಮಿಗಿಲಾಗಿ ಲಿಪಿಯ ಬಳಕೆ - ಇವು ಮುಖ್ಯ ಬೆಳವಣಿಗೆಗಳಾಗಿವೆ.

ಕರ್ನಾಟಕ ಸಂಸ್ಕೃತಿ ಅಥವಾ ಇನ್ನಾವುದೆ ಸಂಸ್ಕೃತಿಯ ಆರಂಭಿಕ ಹಂತದ ವಿವರಗಳನ್ನು ಒಟ್ಟಿಗೆ ಇಟ್ಟು ನೋಡುವುದಾದರೆ, ಎರಡು ಮುಖ್ಯ ಮಜಲುಗಳು ಮೇಲ್ನೋಟಕ್ಕೆ ಕಾಣಿಸುತ್ತವೆ. ಅವೆಂದರೆ ಚರಿತ್ರಪೂರ್ವಕಾಲದ ಅನಾಗರಿಕ ಸಮಾಜ ಮತ್ತು ಚರಿತ್ರಕಾಲದ ನಾಗರಿಕ ಸಮಾಜ. ಆದರೆ ತಾತ್ವಿಕವಾಗಿ ಇವು ಸ್ಥೂಲ ವಿಭಾಗಗಳು ಮಾತ್ರವಲ್ಲ, ವೈಜ್ಞಾನಿಕ ಸ್ವರೂಪದವೂ ಅಲ್ಲವೆಂಬುದು ಸ್ಪಷ್ಟ.

ಇತಿಹಾಸಪೂರ್ವಕಾಲೀನ ಸಾಮಾಜಿಕ ಸ್ಥಿತಿಗತಿಗಳನ್ನು ಅರಿಯಲು ಅವಲಂಬಿಸ ಬೇಕಾದುದು ಭೂಶೋಧನೆಗಳ ವರದಿಗಳನ್ನು ನಿವೇಶನಗಳಲ್ಲಿ ಸಂಗ್ರಹಿಸಲಾದ ವಿವಿಧ ಬಗೆಯ ಅವಶೇಷಗಳನ್ನು. ಆದರೆ ಈ ಯುಗದಲ್ಲಿ ಹಿಂದೆ ಹಿಂದಕ್ಕೆ ಚಲಿಸತೊಡಗಿದಂತೆ ಅಸ್ಪಷ್ಟವೂ ಜಟಿಲವೂ ಆಗುತ್ತಾ ಹೋಗುತ್ತದೆ. ಇದು ಮಾನವ ಸಮುದಾಯಗಳಿಗೆ ಸಂಬಂಧಿಸಿದ ಸಮಸ್ಯೆ. ಭೂವಿಜ್ಞಾನ ಮತ್ತು ಮಾನವವಿಜ್ಞಾನಗಳ ಹಿನ್ನೆಲೆಯಲ್ಲಿ ಜೀವಿಗಳ ಬದುಕಿನ ನೆಲೆಯನ್ನು, ಸ್ವರೂಪವನ್ನು ತಕ್ಕಮಟ್ಟಿಗೆ ಗ್ರಹಿಸಬಹುದಷ್ಟೆ. ಇಷ್ಟರಿಂದಲೆ ಜನ ಸಮುದಾಯಗಳ ಎಲ್ಲ ವಿಧದ ಪ್ರವೃತ್ತಿಗಳನ್ನು ಅರಿಯುವುದು ಅಸಾಧ್ಯ. ದೇಶಾದ್ಯಂತ ಇತಿಹಾಸ ಪೂರ್ವಕಾಲೀನ ನಿವೇಶನಗಳಲ್ಲಿ ಉತ್ಖನನಗಳು ಜರುಗಿದ್ದರೂ ಅವುಗಳಿಂದ ದೊರೆತ ಮಾಹಿತಿಯನ್ನು ಆಯಾ ಕಾಲದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಪ್ರವೃತ್ತಿಗಳಿಗೆ ಹೊಂದಿಸುವಂಥಾ ವೈಜ್ಞಾನಿಕ ನೆಲೆಯ ಸಮೀಕ್ಷೆಗಳು ಇಲ್ಲವೆನ್ನುತ್ತಾರೆ ಚರಿತ್ರೆಕಾರರು. ಒಟ್ಟಿನಲ್ಲಿ, ಇತಿಹಾಸ ಪೂರ್ವಯುಗದ ಪ್ರಾಚ್ಯ ಸಂಶೋಧನೆಗಳನ್ನು ಪರಿಗಣಿಸದೆ ಹೋದರೆ ಸಾಮಾಜಿಕ ಮಾರ್ಪಾಡಿನ ಹಂತಗಳು ತಿಳಿಯುವುದಿಲ್ಲವೆನ್ನುವುದು ದಿಟ.

ಚಿಪ್ಪಿನಕೆರೆ ನಿವೇಶನ: ಚಂದ್ರವಳ್ಳಿಯಲ್ಲದೆ, ಚಿತ್ರದುರ್ಗ ತಾಲ್ಲೂಕಿಗೆ ಸೇರಿದ ಚಿಪ್ಪಿನಕೆರೆ (ತುರುವನೂರು ಹೋಬಳಿ) ಶಾತವಾಹನರ ಸಮಕಾಲೀನ ಸಂಸ್ಕೃತಿಯ ಇನ್ನೊಂದು ನಿವೇಶನವಾಗಿ ಗುರುತಿಸಲ್ಪಡುತ್ತದೆ. ಈ ನಿವೇಶನ ಕಂಡುಬರುವದು ಜನಗಿಹಳ್ಳ ಮತ್ತು ಕೋಡಿಹಳ್ಳಗಳು ಸಂಗಮಿಸುವ ಪರಿಸರದಲ್ಲಿ. ಇದನ್ನು ಸ್ಥಳೀಯರು ಗುರುತಿಸಿ ಹೇಳುವುದೆಂದರೆ ಪಾಂಡವರ ಬೀಳು ಹಾಗೂ ಬೂದಿಮಣ್ಣಿನ ಹೊಲಗಳೆಂದು. ಚಂದ್ರವಳ್ಳಿ, ಚರಿತ್ರಾರಂಭ ಕಾಲದ ಕುರುಹುಗಳುಳ್ಳ ತಮಟಕಲ್ಲು ಹಾಗೂ ಚಿಕ್ಕಗೊಂಡನಹಳ್ಳಿಯ ಸಾಲಿನಲ್ಲಿ ಚಿಪ್ಪಿನಕೆರೆ ನಿವೇಶನ ನೆಲೆಗೊಂಡಿರುವುದು ಗಮನಾರ್ಹ. ಇದು ಬೃಹತ್‌ಶಿಲಾಯುಗದ ನೆಲೆಯಾಗಿಯೂ ಇದ್ದುದನ್ನು, ಇಲ್ಲಿ ದೊರೆತ ಕೆಲವು ಅವಶೇಷಗಳು ಸಮರ್ಥಿಸುತ್ತವೆ. ಬಿಳಿವರ್ಣದ ರೇಖೆಗಳ ಸಹಿತವಾದ ಹಾಗೂ ಹೊಳಪುಳ್ಳ ಕಪ್ಪು, ಕೆಂಪು ಮತ್ತು ಬೂದುಬಣ್ಣದ ಮಡಿಕೆಯ ಚೂರುಗಳು, ವಿವಿಧ ಬಗೆಯ ಮಣಿಗಳು, ದಂತದ ಬಳೆ ಚೂರುಗಳು, ಮಡಕೆಬಿಲ್ಲೆಗಳು, ಸುಟ್ಟಇಟ್ಟಿಗೆಗಳು ಇತ್ಯಾದಿ ವಸ್ತುಗಳು

ಚಿತ್ರದುರ್ಗ ಸಂಶೋಧನ ತಂಡಕ್ಕೆ ಈ ಸ್ಥಳದಲ್ಲಿ ದೊರೆತವು. ಚಂದ್ರವಳ್ಳಿಯಲ್ಲಿ ದೊರೆತ ಇಟ್ಟಿಗೆ, ಮಡಿಕೆ-ಕುಡಿಕೆ, ಮಣಿ ಇತ್ಯಾದಿಯನ್ನು ಈ ವಸ್ತುಗಳು ಹೋಲುತ್ತವೆ. ಮುಖ್ಯವಾಗಿ ಶಾತವಾಹನಕಾಲದ ಸೀಸದನಾಣ್ಯವೊಂದು ಇಲ್ಲಿ ದೊರಕಿದುದರಿಂದಾಗಿ ಇದಕ್ಕೆ ಇನ್ನಷ್ಟು ಮಹತ್ವ ಪ್ರಾಪ್ತವಾಗಿದೆ. ಒಂದು ಮುಖದಲ್ಲಿ ಇಣಿಯುಳ್ಳ ನಂದಿಯ ಉಬ್ಬುಚಿತ್ರವಿದ್ದು, ಅದರ ಸುತ್ತಲೂ ಬ್ರಾಹ್ಮಿಅಕ್ಷರದಲ್ಲಿ ರಾಜನ ಹೆಸರನ್ನು ಮೂಡಿಸಿದೆ. ಇದು ಚಂದ್ರವಳ್ಳಿಯಲ್ಲಿದ್ದ ಮಹಾರಥಿಗಳಿಗೆ ಸಂಬಂಧಿಸಿದ ನಾಣ್ಯವೆಂಬುದು ಸ್ಪಷ್ಟ.[೧೩]

ಬಂಡೆ ಮೇಲಿನ ಬರಹ: ಚಂದ್ರವಳ್ಳಿ ಪರಿಸರದ ಹುಲಿಗೊಂದಿಯ ಬಂಡೆಯೊಂದರ ಮೇಲೆ ಕಂಡರಿಸಲಾದ ಬ್ರಾಹ್ಮಿಲಿಪಿಯ ಶಾಸನವು ಮಯೂರವರ್ಮನದೆಂದು ಈಗಾಗಲೆ ತಿಳಿದಿದೆ. ಆದರೆ ಚಂದ್ರವಳ್ಳಿ ಶಾತವಾಹನ ಮಾಂಡಲಿಕರ ರಾಜಧಾನಿಯಾಗಿದ್ದು, ಆ ಕಾಲದ ಎಲ್ಲ ಪ್ರವೃತ್ತಿಗಳ ಬಗೆಗೆ ಮಾಹಿತಿಯಿದ್ದರೂ ಶಾಸನಬರಹಗಳ ಬಗೆಗೆ ತಿಳಿದುಬರುವುದಿಲ್ಲ. ಮಹಾರಥಿಗಳು ಮತ್ತು ಶಾತವಾಹನ ಅರಸರು ಠಂಕಿಸಿದ ನಾಣ್ಯಗಳ ಮೇಲಿನ ಬರಹ ವಿನಾಃ ಇತರ ವಸ್ತುಗಳ ಮೇಲೆ ಇಂತಹ ಬರಹ ಕಂಡುಬಂದಿರುವ ಉದಾಹರಣೆಯಿಲ್ಲ. ಆದರೆ ಲಿಪಿಲಕ್ಷಣ ಮತ್ತು ಕಂಡರಣೆಯ ಸ್ವರೂಪಗಳನ್ನು ಗಮನಿಸಿದಾಗ, ಚಿತ್ರದುರ್ಗಬೆಟ್ಟದಲ್ಲಿ ತಣ್ಣೀರುದೊಣೆ ಬಳಿಯ ಬಂಡೆಯೊಂದರ ಮೇಲಿನ ಬ್ರಾಹ್ಮಿಲಿಪಿಯಲ್ಲಿರುವ ಮೂರು ಅಕ್ಷರದ ಬರಹ ಗಮನ ಸೆಳೆಯುತ್ತದೆ. 'ಮಯಮ' ಎಂದಿರುವ ಈ ಬರಹವನ್ನು ಬಿ.ಎಲ್.ರೈಸರು 'ದಯದ' ಎಂದು ತಪ್ಪಾಗಿ ಓದಿರುವುದು ಕಂಡುಬರುತ್ತದೆ.[೧೪] 'ವನಕೆಗಂಡಿಬಾಗಿಲ ಉತ್ತರದ ಕಡೆ ಗುಂಡಿನ ಮೇಲೆ' ಎಂದು ನಿರ್ದೇಶಿಸಲ್ಪಟ್ಟಿರುವ ಈ ಪಾಠದ ಲಿಪಿಲಕ್ಷಣಗಳು ಶಾತವಾಹನ ಕಾಲದ ಲಿಪಿಲಕ್ಷಣಗಳನ್ನು ಯಥಾವತ್ತಾಗಿ ಹೋಲುತ್ತವೆ. ಕದಂಬಕಾಲೀನ ಬ್ರಾಹ್ಮಿಲಿಪಿ ಪೆಟ್ಟಿಗೆಯಾಕಾರದ ತಲೆಕಟ್ಟು ಹೊಂದಿದ್ದರೆ, ಶಾತವಾಹನಕಾಲೀನ ಲಿಪಿ ತ್ರಿಕೋನಾಕಾರದ ತಲೆಕಟ್ಟು ಹೊಂದಿರುವುದು ದೃಢಪಟ್ಟಿರುವ ಸಂಗತಿ. 'ಮಯಮ' ಪಾಠದ ಲಿಪಿಗಳು ತ್ರಿಕೋನಾಕಾರದ ತಲೆಕಟ್ಟು ಹೊಂದಿವೆ. 'ಮಯಮ' ಎಂಬುದರ ಅರ್ಥ ಹೇಳಲಾಗುವುದಿಲ್ಲ. ಆದರೆ ಇದು ವ್ಯಕ್ತಿಯೋರ್ವನ ಹೆಸರಾಗಿರಲೂಬಹುದು. ಅಲ್ಲದೆ, 'ಮಯಮ' ಎಂಬ ಮೂರಕ್ಷರದ ಈ ಬರಹ ಅಪೂರ್ಣವಾದುದೆಂಬ ಅನುಮಾನ ಮೂಡಿಸುತ್ತದೆ. ಇಲ್ಲಿ ನಾಲ್ಕನೆ ಅಕ್ಷರ ಪೂರ್ತಿ ಅಳಿಸಿಹೋದಂತೆ ತೋರುವುದೆ ಇದಕ್ಕೆ ಕಾರಣ. ಆದರೆ ಈಗಿರುವ ಅಕ್ಷರಗಳು ಸಾಕಷ್ಟು ಸವೆದಿದ್ದರೂ ಸ್ಪಷ್ಟವಾಗಿ ಕಾಣುತ್ತಿರುವುದು ಸಮಾಧಾನದ ಸಂಗತಿ.

ಇಲ್ಲಿ ವಿಚಾರಾರ್ಹ ಅಂಶವೆಂದರೆ, ಚಿತ್ರದುರ್ಗಬೆಟ್ಟ ಮತ್ತು ಅದರ ಹಿಂಬದಿಯ ಪ್ರದೇಶ ಗಳಿಗೆ ಸಂಚರಿಸುತ್ತಿದ್ದ ಚಂದ್ರವಳ್ಳಿ ಬಯಲಿನ ಜನರು ಅನುಸರಿಸುತ್ತಿದ್ದ ಮಾರ್ಗಗಳಲ್ಲಿ ತಣ್ಣೀರುದೊಣೆಯ ಮಾರ್ಗವೂ ಒಂದಾಗಿದ್ದಿತೆಂಬುದು. ಇದೊಂದು ಪ್ರಮುಖ ಕಣಿವೆಮಾರ್ಗ. ಇದು ಪ್ರಾಚೀನಮಾರ್ಗವೆಂಬುದಕ್ಕೆ ಕೆಲವು ನಿರ್ದಿಷ್ಟ ಆಧಾರಗಳು ದೊರಕುತ್ತವೆ. ಕುಡಿಯಲು ಯೋಗ್ಯವಾದ ನೀರಿನ ಆಸರೆ ಮತ್ತು ವಿಶ್ರಮಿಸಿಕೊಳ್ಳಲು ನೈಸರ್ಗಿಕವಾದ ಅನುಕೂಲಗಳಿಂದ

ಕೂಡಿರುವ ತಣ್ಣೀರುದೊಣೆ ಇಂದಿಗೂ ಜನರ ಪ್ರೀತಿಗೆ ಪಾತ್ರವಾದ ತಾಣವಾಗಿದೆ. ಚಿತ್ರದುರ್ಗಬೆಟ್ಟಕ್ಕೆ ಬರುವ ಬಹುಪಾಲು ಪ್ರವಾಸಿಗರು ವಿಶ್ರಮಿಸಿಕೊಳ್ಳುವುದು ಇಲ್ಲಿಯೆ. ಕೋಟೆ-ಕೊತ್ತಲ, ಒಡ್ಡು-ಕಟ್ಟೆ, ತೋಟ ಇತ್ಯಾದಿಗಾಗಿ ನಿರ್ಮಾಣಗೊಂಡ ಎತ್ತರದ ವೇದಿಕೆಗಳಂತಹ ರಚನೆ-ಈ ಬಗೆಯ ಚಾರಿತ್ರಿಕಕಾಲದ ಕೃತಕ ನಿರ್ಮಾಣಗಳ ಪೂರ್ವದಲ್ಲಿ, ಇದು ಬೆಟ್ಟದ ಹಿಂಬದಿಯ ಬೂದರದಿಬ್ಬ, ತಿಮ್ಮಣ್ಣನಾಯಕನ ಕೆರೆ ಮೊದಲಾದ ಪ್ರದೇಶಗಳೊಡನೆ ಸಂಪರ್ಕವನ್ನು ಸಾಧಿಸುವ ಮಾರ್ಗವಾಗಿದ್ದಿತೆನ್ನಬಹುದು. ಚಿತ್ರದುರ್ಗಬೆಟ್ಟದ ವಿವಿಧೆಡೆಗಳಲ್ಲಿ, ಮುಖ್ಯವಾಗಿ ಹಿಂಬದಿಯ ರಾಮದೇವರಒಡ್ಡಿನ ವರೆಗಿನ ಈ ಕಣಿವೆಮಾರ್ಗದಲ್ಲಿ (ಈ ಭಾಗವನ್ನು ಪಚ್ಚೆಕಣಿವೆ ಅಥವಾ ಪೂರ್ವದಿಕ್ಕಿನ ಕಣಿವೆ ಎನ್ನಲಾಗುತ್ತದೆ) ದೊರಕುವ ಶಾತವಾಹನಕಾಲೀನ ನಾಣ್ಯ, ಮಡಿಕೆ-ಕುಡಿಕೆ, ಮೇಲ್ಭಾವಣಿಗೆ ಹೊದ್ದಿಸುವ ಸಣ್ಣ ಹೆಂಚು ಮೊದಲಾದುವನ್ನು ಗಮನಿಸಿದರೆ, ಪ್ರಾಕ್ಚಾರಿತ್ರಿಕಕಾಲದ ಜನರಂತೆ ಚಂದ್ರವಳ್ಳಿ ಜನರೂ ಆಗ ಈ ಬೆಟ್ಟಪ್ರದೇಶದಲ್ಲಿ ನೆಲಸಿದ್ದಿರಬಹುದು. ಈ ಹಿನ್ನೆಲೆಯಲ್ಲಿ, ಈ ಕಣಿವೆಹಾದಿಯ ಬಂಡೆಯ ಮೇಲಿರುವ 'ಮಯಮ'ವೆಂಬ ಬರಹದ ಆಶಯ ಅರ್ಥಪೂರ್ಣ ಎನಿಸುತ್ತದೆ. ಕದಂಬರಕಾಲದಲ್ಲಿಯೂ ಈ ಕಣಿವೆಮಾರ್ಗ ಮತ್ತು ಇಲ್ಲಿಯ ಕೆಲವು ಎಡೆಗಳು ಬಳಕೆಯಲ್ಲಿದ್ದವೆಂಬುದಕ್ಕೆ ಈಚೆಗೆ ಕೆಲವು ಸೂಚನೆಗಳು ದೊರೆತಿವೆ. ಇದರಿಂದ ಶಾತವಾಹನರು ಮತ್ತು ಅವರ ಸಾಮಂತರ ಅವಧಿಯಲ್ಲಿ ಚಂದ್ರವಳ್ಳಿ ನಾನಾ ಮುಖನಾಗಿ ವಿಸ್ತಾರಪಡೆದ ಮತ್ತು ಅಭಿವೃದ್ಧಿ ಹೊಂದಿದ ನಗರವಾಗಿದ್ದಿತೆಂದು ಭಾವಿಸಲು ಅವಕಾಶವಾಗುತ್ತದೆ.

ಬ್ರಹ್ಮಗಿರಿ ನಿವೇಶನ

ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮೂರು ತಾಲ್ಲೂಕಿನ ಬ್ರಹ್ಮಗಿರಿ ಪರಿಸರ ಮೌರ್ಯ ಸಾಮ್ರಾಜ್ಯಕ್ಕೆ ಸೇರಿದ ಮಹಾಮಾತ್ರರ ಆಡಳಿತಕೇಂದ್ರವಾಗಿದ್ದಿತ್ತು ಎಂಬುದಕ್ಕೆ ಇಲ್ಲಿ ದೊರೆತ ಅಶೋಕನ ಶಾಸನಗಳನ್ನು ಈಗಾಗಲೇ ಗಮನಿಸಲಾಗಿದೆ. ಆದರೆ ಶಾತವಾಹನರ ಸಂಬಂಧ ಈ ಪ್ರದೇಶದೊಡನೆ ಇದ್ದುದನ್ನು ಇಲ್ಲಿ ಗುರುತಿಸುವ ಅವಶ್ಯಕತೆಯಿದೆ. ಬ್ರಹ್ಮಗಿರಿಯು ಇತಿಹಾಸಾರಂಭಕಾಲದ ನಿವೇಶನವಾಗಿಯೂ ಗುರುತಿಸಲ್ಪಟ್ಟಿದೆ. ಮುಖ್ಯವಾಗಿ, ಖನಿಜ ಸಂಪನ್ಮೂಲಗಳನ್ನು ಶೋಧಿಸಿ ತಮ್ಮ ಬದುಕನ್ನು ಶ್ರೀಮಂತವಾಗಿಸಲು ಪ್ರಯತ್ನಿಸುತ್ತಿದ್ದ ಜನರು ಇಲ್ಲಿ ನೆಲಸಿದ್ದಿರುವ ಸಾಧ್ಯತೆಯಿದ್ದುದು ವ್ಯಕ್ತಪಡುತ್ತದೆ. ಈ ದೃಷ್ಟಿಯಿಂದಲೂ ನೈಸರ್ಗಿಕ ಸಂಪನ್ಮೂಲಗಳನ್ನು ಹಿಡಿತದಲ್ಲಿರಿಸಿಕೊಳ್ಳುವ ಚಟುವಟಿಕೆಯುಳ್ಳ ಕೇಂದ್ರವಾಗಿಯೂ ಬ್ರಹ್ಮಗಿರಿ ಇದ್ದುದು ಸ್ಪಷ್ಟ. ಈ ಕಾರಣಕ್ಕಾಗಿಯೆ ಇದು ಪ್ರಾಂತೀಯ ರಾಜಕೀಯನೆಲೆಯಾಗಿಯೂ ಬೆಳೆದುದು.

ಬ್ರಹ್ಮಗಿರಿ ಪರಿಸರದಲ್ಲಿ ಒಕ್ಕಲುತನ ಅಭಿವೃದ್ಧಿ ಹೊಂದಿದ್ದು, ಇದಕ್ಕೆ ಪೂರಕವಾಗಿ ಈ ಪ್ರದೇಶದಲ್ಲಿ ಹರಿಯುವ ಚಿನ್ನ(ಸಣ್ಣ)ಹಗರಿನದಿ ನಿರ್ವಹಿಸಿದ ಪಾತ್ರವೂ ಗಣನೀಯ. ವ್ಯಾಪಾರ ವಹಿವಾಟುಗಳೊಡನೆ ವಿಪುಲ ಜನಸಂಖ್ಯೆಯೂ ಇಲ್ಲಿದ್ದಿತೆನ್ನುವುದಕ್ಕೆ ಹಾಗೂ ವಿಸ್ತಾರಗೊಂಡ ನಗರನೆಲೆಯಾಗಿದ್ದಿತೆನ್ನುವುದಕ್ಕೆ, ಇಲ್ಲಿ ದೊರೆತ ವಿವಿಧ ಸಾಮಾಜಿಕ ಅಂತಸ್ತುಗಳಿಗೆ ಸೇರಿದ ವಸ್ತು-ವಿಶೇಷಗಳೇ ಸಾಕ್ಷಿ. ಗ್ರಾಮಜೀವನದೊಡನೆ ನಗರಜೀವನವೂ ಇಲ್ಲಿ ನೆಲೆಗೊಂಡಿದ್ದಿತೆನ್ನುವುದೇ

ಸೂಕ್ತ. ಸನ್ನತಿ ಹಾಗೂ ಚಂದ್ರವಳ್ಳಿಗಳಂತೆ ಬ್ರಹ್ಮಗಿರಿ ಸಹ ಹರಳುಶಿಲಾಪ್ರದೇಶದ ಪ್ರಮುಖ ನೆಲೆಯೆಂದು ಗುರುತಿಸಲ್ಪಟ್ಟಿರುವುದರಿಂದ, ಈ ಕಲ್ಲುಗಳಿಂದ ತಯಾರಿಸಿದ ಬೆಲೆಯುಳ್ಳ ಮಣಿಗಳು ಸಹಜವಾಗಿಯೆ ಇತರ ಭಾಗಗಳಿಗೆ, ರೋಮ್‌ನಂತಹ ಹೊರದೇಶಗಳಿಗೆ ಸರಬರಾಜು ಆಗುತ್ತಿದ್ದವು.

ಶಾತವಾಹನಾಳ್ವಿಕೆಯ ಅವಧಿಯಲ್ಲಿಯೂ ಬ್ರಹ್ಮಗಿರಿ ಪ್ರದೇಶದ ಜನರ ಬದುಕು ವೈವಿಧ್ಯಮಯವಾಗಿದ್ದಿತು. ಸನ್ನತಿ, ಬನವಾಸಿ, ವಡಗಾಂವ್-ಮಾಧವಪುರ ಮೊದಲಾದೆಡೆಗಳಲ್ಲಿ ಕಂಡುಬರುವ ಇಟ್ಟಿಗೆಕಟ್ಟಡಗಳ ಅವಶೇಷಗಳು ಬ್ರಹ್ಮಗಿರಿಯಲ್ಲಿಯೂ ಕಂಡುಬಂದಿವೆ. ಮುಖ್ಯವಾಗಿ, ಮೌರ್ಯಕಾಲೀನ ಇಸಿಲನಗರದ ರಚನೆಯ ಕುರುಹುಗಳು ಯಾವುವೂ ಉಳಿದುಬಂದಿಲ್ಲವಾದರೂ, ತುಂಬ ಶಿಥಿಲವಾದ ಗಜಪೃಷ್ಠಾಕಾರದ ಚೈತ್ಯಕಟ್ಟಡದ ಇಟ್ಟಿಗೆತಳಪಾಯವೊಂದು ಮಾತ್ರ ಸಿಕ್ಕಿದೆ.

ಬನವಾಸಿ ಪರಿಸರದಲ್ಲಿ ಕಂಡುಬಂದ ಇಂತಹ ಚೈತ್ಯಕಟ್ಟಡಗಳ ತಳಪಾಯಗಳ ಬಗೆಗೆ ಈಗಾಗಲೇ ಪ್ರಸ್ತಾಪಿಸಲಾಗಿದೆ. ಚುಟು ಶಾತವಾಹನರ ಕಾಲದಲ್ಲಿ ನಿರ್ಮಾಣಗೊಳ್ಳಲಾರಂಭವಾದ ಈ ಗಜಪೃಷ್ಠಾಕಾರ ತಳವಿನ್ಯಾಸದ ಮಂದಿರಗಳು ಕದಂಬರಕಾಲದಿಂದ, ಆ ನಂತರ ಬಾದಾಮಿ ಚಾಲುಕ್ಯರ ಕಾಲಕ್ಕೆ ಮುಂದುವರೆದು, ಕನಿಷ್ಠ ೧೧-೧೨ನೇ ಶತಮಾನದವರೆಗೂ ಪ್ರಚಲಿತವಿದ್ದುದನ್ನು ನೋಡಬಹುದು. ಈಸೂರಿನ (ಶಿವಮೊಗ್ಗ-ಶಿಕಾರಿಪುರ) ಕೋಟೆ ಪ್ರದೇಶದಲ್ಲಿನ ಕಲ್ಲೇಶ್ವರ ದೇವಾಲಯದಲ್ಲಿರುವ ದಿಬ್ಬದಲ್ಲಿ ಬೆಳಕಿಗೆಬಂದ ಈ ಮೇಲಿನ ಬಗೆಯ ತಳವಿನ್ಯಾಸವಿರುವ ಪ್ರಾಚೀನ ದೇವಾಲಯವೊಂದರ ಅವಶೇಷಗಳು ಈ ಸಂಬಂಧದಲ್ಲಿ ಗಮನಿಸಲಾರ್ಹವಾದುವು. ಮೊದಲಿಗೆ ಜಂಬಿಟ್ಟಿಗೆಯಿಂದ, ನಂತರ ಸುಟ್ಟಇಟ್ಟಿಗೆಗಳಿಂದ ಕಟ್ಟಲಾದ ಈ ದೇವಾಲಯಕ್ಕೆ ತರುವಾಯದಲ್ಲಿ ಅಲಂಕೃತ ಶಿಲಾಭಾಗಗಳ ಹೊದಿಕೆಯನ್ನು ನೀಡಿರಬೇಕು. ಈ ದೇವಾಲಯಕ್ಕೆ ಕದಂಬರಕಾಲದಷ್ಟು ಪ್ರಾಚೀನತೆಯಿದೆಯೆಂದು ಭಾವಿಸಲಾಗುತ್ತದೆ. ಹಾಗೆಯೇ, ಈ ಗಜಪೃಷ್ಠಾಕಾರದ ಇನ್ನೊಂದು ಸುಧಾರಿತರೂಪದಲ್ಲಿ ಶೃಂಗೇರಿಯ ವಿದ್ಯಾಶಂಕರ ದೇವಾಲಯದ ದೀರ್ಘವೃತ್ತ ತಳವಿನ್ಯಾಸ ರೂಪುಗೊಂಡಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಈ ಹಿನ್ನೆಲೆಯಲ್ಲಿ, ಬ್ರಹ್ಮಗಿರಿಯ ಗಜಪೃಷ್ಠಾಕಾರದ ಚೈತ್ಯಕಟ್ಟಡದ ಅವಶೇಷಗಳನ್ನು ಪರಿಶೀಲಿಸಬೇಕಾಗುತ್ತದೆ.

ಶಾತವಾಹನಕಾಲೀನ ಸೀಸದನಾಣ್ಯಗಳು ಈ ಪರಿಸರದ ಭೂಮಿಯ ಮೇಲ್ಪದರದಲ್ಲಿ ದೊರೆತಿರುವುದು ವಿಶೇಷ.

ವಡಗಾಂವ್-ಮಾಧವಪುರ ನಿವೇಶನ

ವಡಗಾಂವ್-ಮಾಧವಪುರ ಬೆಳಗಾವಿ ನಗರಕ್ಕೆ ಹೊಂದಿಕೊಂಡಂತಹ ಚಾರಿತ್ರಿಕ ಕಾಲದ ನಿವೇಶನ. ಇದು ಬೆಳಗಾವಿಯ ದಕ್ಷಿಣಕ್ಕೆ ೨ ಕಿ.ಮೀ.ಅಂತರದಲ್ಲಿದೆ. ಇಲ್ಲಿ ನಗರಸಂಸ್ಕೃತಿ ನೆಲೆಗೊಂಡಿದ್ದುದನ್ನು ಗುರುತಿಸಲಾಗಿದೆ. ಇಟ್ಟಿಗೆಕಟ್ಟಡಗಳ ನಿರ್ಮಾಣವು ಈ ಸಂಸ್ಕೃತಿಯ ಪ್ರಧಾನ ಲಕ್ಷಣ. ಈ ನಿವೇಶನದಲ್ಲಿ ಪುರಾತತ್ವಜ್ಞರು ಕೈಗೊಂಡ ಭೂಶೋಧನೆಗಳಿಂದ ಬೃಹತ್ತಾದ ಇಟ್ಟಿಗೆಕಟ್ಟಡಗಳಲ್ಲದೆ, ಜನರು ತಮ್ಮ ನಿತ್ಯಬದುಕಿನಲ್ಲಿ ಬಳಸುತ್ತಿದ್ದ ಮಣ್ಣು, ಕಲ್ಲು, ದಂತಗಳಲ್ಲಿ

ಮಾಡಿದ ಆಕರ್ಷಕ ಗೊಂಬೆಗಳು, ಚಲಾವಣೆಯಲ್ಲಿದ್ದ ವಿವಿಧ ನಾಣ್ಯ ಇತ್ಯಾದಿ ಸಂಗ್ರಹಗೊಂಡಿವೆ. ಇವು ಸಹಜವಾಗಿಯೆ ಎಲ್ಲ ಬಗೆಯ ಸಮಕಾಲೀನ ಪ್ರವೃತ್ತಿಗಳ ಬಗೆಗೆ ಬೆಳಕುಚೆಲ್ಲುವಂತಹವು. ವಡಗಾಂವ್-ಮಾಧವಪುರ ನಿವೇಶನವೂ ಚರಿತ್ರ ಪೂರ್ವಕಾಲದಿಂದಲೂ ಪ್ರಮುಖ ವಾಣಿಜ್ಯ ಮಾರ್ಗದಲ್ಲಿ ಆಯಕಟ್ಟಿನ ಜಾಗದಲ್ಲಿ ನೆಲೆಗೊಂಡಿದ್ದಿತೆಂಬುದು ಮುಖ್ಯ. ಹಿಂದೆಯೆ ನೋಡಿದಂತೆ, ಖನಿಜಕ್ಷೇತ್ರಗಳಿಗೆ ಸಮೀಪವಿದ್ದ ಕೇಂದ್ರಗಳು ವಸತಿನೆಲೆಗಳಾಗಿದ್ದವು.

ವಡಗಾಂವ್-ಮಾಧವಪುರ ನಿವೇಶನದ ವೈಶಿಷ್ಟ್ಯವೆಂದರೆ, ಇದು 'ಡೆಕ್ಕನ್‌ಲಾವಾ ಪ್ರದೇಶ'ದಲ್ಲಿ ನೆಲಸಿದುದು. ಇದು ಈ ಪ್ರದೇಶದ ಪ್ರಮುಖನೆಲೆಯೆಂತಲೆ ಗುರುತಿಸಲ್ಪಟ್ಟಿದೆ. ಕಾರ್ನೆಲಿಯನ್, ಜಾಸ್ಪರ್, ಚಾಲ್ಸಿಡಾನಿ, ಅಮೆಥಿಸ್ಟ್ ಇತ್ಯಾದಿ ಅಮೂಲ್ಯ ಕಲ್ಲುಗಳು ಮತ್ತು ಕಚ್ಚಾವಸ್ತುಗಳು ದೊರೆಯುವುದು ಈ ಪ್ರದೇಶದಲ್ಲೆ ಎಂಬುದು ಒಂದು ಅಂಶವಾದರೆ, ದೂರದ ಪ್ರದೇಶಗಳೊಂದಿಗೆ ಇರಿಸಿಕೊಂಡಿದ್ದ ವ್ಯಾಪಾರ-ವಾಣಿಜ್ಯ ಸಂಬಂಧಗಳ ನೆಲೆಯಲ್ಲಿ ಇಂತಹ ಹರಳುಗಳಿಂದ ತಯಾರಿಸಿದ ಮಣಿ ಇತ್ಯಾದಿ ಸರಬರಾಜಾಗುತ್ತಿದ್ದುದು ಇನ್ನೊಂದು ಅಂಶವಾಗಿದೆ. ಈ ದೃಷ್ಟಿಯಿಂದ, ನೈಸರ್ಗಿಕ ಸಂಪನ್ಮೂಲಗಳನ್ನು ತನ್ನ ಹಿಡಿತದಲ್ಲಿರಿಸಿಕೊಂಡಿದ್ದ ಹಾಗೂ ವ್ಯಾಪಾರಕೇಂದ್ರವಾಗಿ ಅಭಿವೃದ್ಧಿಹೊಂದಿದ ನಗರಗಳ ಪೈಕಿ ವಡಗಾಂವ್-ಮಾಧವಪುರ ಪ್ರಮುಖವಾದುದಾಗಿದ್ದಿತೆನ್ನಬೇಕು.

ಶಾತವಾಹನಕಾಲೀನ ಸಂಸ್ಕೃತಿಯ ನೆಲೆಯಾಗಿಯೂ ವಡಗಾಂವ್-ಮಾಧವಪುರವನ್ನು ಗುರುತಿಸಲಾಗಿದೆ. ಈ ನಿವೇಶನದಲ್ಲಿ ನಡೆಸಲಾದ ಭೂಶೋಧನೆ ಚರಿತ್ರಾರಂಭಕಾಲದ ಕೆಲವು ಮಹತ್ವದ ಕುರುಹುಗಳನ್ನು ಬೆಳಕಿಗೆತಂದಿರುವುದು ಸ್ಪಷ್ಟ. ನಿತ್ಯಜೀವನಕ್ಕೆ ಸಂಬಂಧಿಸಿದ ಮಣ್ಪಾತ್ರೆಗಳು, ಸರಗಳ ಮಣಿಗಳು ಮುಂತಾದವನ್ನು ಒಳಗೊಂಡಿವೆ ಇವು. ಇವು ಶಾತವಾಹನರಿಗೆ ಸಂಬಂಧಿಸಿದ ವಸ್ತುಗಳೆ ಆಗಿರುವುದು ಗಮನಾರ್ಹ. ಈ ಅವಧಿಯ ಮನೆಯೊಂದರ ಕೋಣೆಯಲ್ಲಿ ಪತ್ತೆಯಾದ ವಸ್ತುಗಳಲ್ಲಿ ಕೆಲವು ಅಚ್ಚೊತ್ತಿದನಾಣ್ಯಗಳು ಸೇರಿವೆ. ಇವು ಒಂದನೇ ಶತಮಾನದಲ್ಲಿ ಚಲಾವಣೆಯಲ್ಲಿದ್ದ ನಾಣ್ಯಗಳು. ಸೂರ್ಯ, ಬೆಟ್ಟ, ವೃಷಭ, ಗೋಪುರ, ಶಿಖರ - ಈ ಚಿಹ್ನೆಗಳನ್ನು ಹೊಂದಿರುವಂತ ನಾಣ್ಯಗಳಿವು. ಇವುಗಳೊಡನೆ ಪಶ್ಚಿಮ ಭಾರತದಲ್ಲಿ ತಮ್ಮ ಪ್ರಾಬಲ್ಯ ಸ್ಥಾಪಿಸಿದ್ದ ಕ್ಷತ್ರಪರಾಜರ ನಾಣ್ಯಗಳು, ರೋಮನ್ ಕೃತಕ ನಾಣ್ಯ ಹಾಗೂ ಶಾತವಾಹನರ ನಾಣ್ಯಗಳೂ ಸೇರಿವೆ.

ಇಟ್ಟಿಗೆ ಕಟ್ಟಡಗಳ ಅವಶೇಷಗಳನ್ನು ಪರಿಶೀಲಿಸಿರುವ ಸಂಶೋಧಕರು, ಕೆಲವೊಂದು ಕಟ್ಟಡಗಳ ಕೇಂದ್ರದಲ್ಲಿ ವಿಭಾಗಿಸಲ್ಪಟ್ಟ ದೊಡ್ಡ ಸಭಾಂಗಣವನ್ನು ಗುರುತಿಸುತ್ತಾರೆ. ಇಲ್ಲಿಯ ರಚನೆಗಳಲ್ಲಿ ಎರಡು ಕೊನೆಗಳ ನಡುವೆ ಇರುವ ಚೌಕಾಕಾರದ ಕಣಜ; ನೆನೆಗುಳಿ ಮತ್ತು ಸ್ನಾನಗೃಹಕ್ಕೆ ಲಗತ್ತಾದ ದೊಡ್ಡಕೋಣೆಗಳು; ನೆಲಕ್ಕೆ ಹಾಸಲಾದ ಚೌಕಾಕೃತಿಯ ಇಟ್ಟಿಗೆ ತುಂಡುಗಳು ಕಂಡುಬರುತ್ತವೆ. ಇಲ್ಲಿಯ ದಾಸ್ತಾನಿನ ಕಣಜವೊಂದರಲ್ಲಿ ಸ್ವಲ್ಪ ಭತ್ತವೂ ದೊರೆತಿರುವುದು ವಿಶೇಷ. ಅಲ್ಲದೆ, ಆಯತಾಕಾರದ ಕೋಣೆಗಳಿರುವ ಸಾರ್ವಜನಿಕ ಕಟ್ಟಡಗಳು, ಚೌಕಾಕೃತಿಯ

ಕೋಣೆ, ದೀರ್ಘಾಯತ ಹಜಾರ, ವೃತ್ತಾಕಾರದ ಬಾವಿಯಿರುವ ವಸತಿಗಳು, ಉದ್ದನೆಯ ಹಾಗೂ ಅಗಲವಾದ ರಸ್ತೆಗಳೂ ಕಂಡುಬರುತ್ತವೆ. ಇಲ್ಲಿಯ ಇಟ್ಟಿಗೆ ಕಟ್ಟಡಗಳಲ್ಲಿ ಎಲ್ಲ ಬಗೆಯ ರಚನಾವಿಧಾನಗಳನ್ನು ಅಳವಡಿಸಿರುವುದು ವಿಶೇಷ. ಇಟ್ಟಿಗೆಗಳಾದರೂ ೨-೩ ಬಗೆಯಲ್ಲಿವೆ. ಗೋಡೆಗೆ ಲೇಪಿಸಿರುವ ಗಾರೆಗೆ ಮಣ್ಣನ್ನೇ ಬಳಸಲಾಗಿದೆ. ಈ ಕಟ್ಟಡಗಳಲ್ಲಿ ಕೆಲವಾದರೂ ಬೌದ್ಧಧರ್ಮಕ್ಕೆ ಸಂಬಂಧಿಸಿದುವಿರಬಹುದೆಂಬ ಅಭಿಪ್ರಾಯವಿದೆ. ಅಲ್ಲದೆ, ಸುಡಾವೆಮಣ್ಣಿನ ಬುದ್ಧಶಿರಸ್ಸಿನ ಪ್ರತಿಮೆ ಮತ್ತು ಯಕ್ಷದ ಕೆಲವು ಪ್ರತಿಮೆಗಳು ದೊರೆತಿರುವುದನ್ನು ಉಲ್ಲೇಖಿಸ ಲಾಗುತ್ತದೆ.

ವಡಗಾಂವ್-ಮಾಧವಪುರ ವಾಣಿಜ್ಯಕೇಂದ್ರವಾಗಿದ್ದಿತೆನ್ನಲು ವಿಭಿನ್ನ ಪ್ರಾಂತಗಳಿಗೆ ಸೇರಿದ ಕಲಾಶೈಲಿಯ ಮಣ್ಣಿನಗೊಂಬೆಗಳು ಇತ್ಯಾದಿ ಇಲ್ಲಿ ದೊರೆತಿರುವುದೆ ಇಂತವುಗಳಿಗೆ ಸಾಕ್ಷಿಯಾಗಿದೆ. ಶ್ರೀಮಂತ ವ್ಯಾಪಾರಿಗಳು ಹಾಗೂ ಕುಶಲಕರ್ಮಿಗಳು ಇಲ್ಲಿಗೆ ಭೇಟಿಕೊಡುತ್ತಿದ್ದುದೇ ಇದಕ್ಕೆ ಕಾರಣವೆನ್ನಲಾಗುತ್ತದೆ. ಶಾತವಾಹನಕಾಲದ ಮಣ್ಣಿನಮೂರ್ತಿಯೊಂದಿಗೆ ಕಂಚಿನ ಸಣ್ಣಮೂರ್ತಿಯೂ ದೊರೆತಿದೆ. ಕಂಚಿನವಿಗ್ರಹದ ಕಲೆ ಆಗ ಪ್ರಚಲಿತದಲ್ಲಿದ್ದಿತೆಂಬುದಕ್ಕೆ ಇದೊಂದು ಉದಾಹರಣೆ. ಕುಳಿತ ಸಿಂಹದ ಪುಟ್ಟ ಗಟ್ಟಿಗೊಂಬೆಯೊಂದನ್ನು ಶೋಧಿಸಲಾಗಿದ್ದು, ಈ ಫಲಕದ ಸಿಂಹವು ವಿಷ್ಣುವಿನ ಒಂದು ರೂಪವೆಂದು ಗುರುತಿಸಬಹುದೆಂದು ಭಾವಿಸಲಾಗುತ್ತದೆ. ಹಾಗೆಯೆ, ಬುದ್ಧನ ಮಣ್ಣಿನಗೊಂಬೆಯ ಶಿರೋಭಾಗ, ಗಣೇಶನ ಉಬ್ಬುಚಿತ್ರವುಳ್ಳ ಮಣ್ಪಾತ್ರೆಯ ಚೂರು, ಆಟದ ಅಲಂಕರಣಗೊಂಬೆಗಳು ಇತ್ಯಾದಿಗಳು ಈ ನಿವೇಶನದಲ್ಲಿ ಕಂಡುಬಂದಿವೆ. ಇಲ್ಲಿ ದೊರೆತಿರುವ ಇತರ ಗೊಂಬೆಗಳ ಪೈಕಿ ನಿಂತ ಮನುಷ್ಯನಮೂರ್ತಿ, ಚಿತ್ರಿತ ದುಂಡುಬಿಲ್ಲೆ, ಆನೆ, ಗೂಳಿ ಮತ್ತು ಕುದುರೆಯ ಗೊಂಬೆಗಳ ಭಾಗಗಳು, ಗ್ರೀಕೋ-ರೋಮನ್‌ಶೈಲಿಯನ್ನು ಹೋಲುವ ಚಿತ್ರಗಳು, ಇವುಗಳು ಸ್ಕಂದನೆಂದು ಗುರುತಿಸಲಾದ ಮೂರ್ತಿ ಇತ್ಯಾದಿಗಳ ಅಧ್ಯಯನದ ದೃಷ್ಟಿಯಿಂದ ಅಮೂಲ್ಯವಾದುವು.

ದಂತ ಮಾಧ್ಯಮದಲ್ಲಿಯ ಕಲಾಕೃತಿಗಳ ಸೃಷ್ಟಿ ಈ ಕಾಲದ ಇನ್ನೊಂದು ಅಪರೂಪದ ಬೆಳವಣಿಗೆ. ದಂತ ಕುಶಲಕರ್ಮ ಆಗಿನ ಸಾಂಸ್ಕೃತಿಕ ಪ್ರಗತಿಯಲ್ಲಿನ ಮಹತ್ವದ ಹೆಜ್ಜೆಯೆನ್ನಬಹುದು. ನಾನಾ ತಂತ್ರಗಳನ್ನು ಬಳಸಿ ಸಿದ್ಧಪಡಿಸಲಾದ ಮಣ್ಣಿನಪಾತ್ರೆಗಳು ಈ ಕಾಲದ ಇನ್ನೊಂದು ವಿಶೇಷ. ಇವುಗಳ ಮೇಲೆ ಮೂಡಿಸಲಾದ ಚಿತ್ರಗಳು ತೀರಾ ಆಕರ್ಷಕವಾದುವೆನ್ನಲಡ್ಡಿಯಿಲ್ಲ. ಇಂತಹ ಚಿತ್ರಗಳನ್ನು ಮೂಡಿಸಲು ಬಳಸಿಕೊಳ್ಳಲಾದ ಪಾತ್ರೆಗಳನ್ನು ಜಿಗುಟುಳ್ಳ ಸೋಸಿದ ನಯವಾದಮಣ್ಣಿನಿಂದ ತಯಾರುಮಾಡಿದುವೆಂಬುದು ಗಮನಿಸಬೇಕಾದ ಮುಖ್ಯ ಅಂಶ. ಸ್ಥಳೀಯವಾಗಿ ತಯಾರಿಸಿದ ವಿಶಿಷ್ಟಶೈಲಿಯ ಗಟ್ಟಿಗೊಂಬೆಗಳು ವಡಗಾಂವ್-ಮಾಧವಪುರ ಪರಿಸರದಲ್ಲಿ ಜನಪ್ರಿಯವಾಗಿದ್ದುವಲ್ಲದೆ, ಇವು ವಿಶೇಷವಾಗಿ ಇದೇ ಪ್ರದೇಶದವೆಂಬುದು ಗಮನಾರ್ಹ.

ವಡಗಾಂವ್-ಮಾಧವಪುರವು ವಾಣಿಜ್ಯಕೇಂದ್ರವಾಗಿದ್ದಿತೆನ್ನುವ ಹಿನ್ನೆಲೆಯಲ್ಲಿ, ಈ ನಿವೇಶನದ ಭೌಗೋಳಿಕಸ್ಥಾನವನ್ನು ಪರಿಶೀಲಿಸಿರುವ ಪುರಾತತ್ವಜ್ಞರು, ಇದು ಮುಂಬೈ ಸಮೀಪದ ಸೊಪಾರ ಮತ್ತು ತಮಿಳುನಾಡಿನ ಕಂಚಿಯ ನಡುವೆ ನೆಲಸಿರುವುದನ್ನು ಗುರುತಿಸುತ್ತಾರೆ. ಈಗಿನ ನಾಲ್ಕನೇ ರಾಷ್ಟ್ರೀಯ ಹೆದ್ದಾರಿಯಲ್ಲಿ ಬರುವ ಬೆಳಗಾವಿನಗರದ ಸನಿಹದಲ್ಲೆ ಈ ನಿವೇಶನ ಬರುವುದರಿಂದಲೂ ಇದು ಹಿಂದೊಮ್ಮೆ ಪ್ರಮುಖ ವ್ಯಾಪಾರ ಕೇಂದ್ರ ಮತ್ತು ಸಾಂಸ್ಕೃತಿಕನೆಲೆಯೂ ಆಗಿದ್ದಿತೆಂಬುದರಲ್ಲಿ ಸಂಶಯವಿಲ್ಲ.

ಮಸ್ಕಿ : ಕೃಷ್ಣಾನದಿಬಯಲಿನ ನಿವೇಶನಗಳ ಪೈಕಿ ಮಸ್ಕಿ ಗಮನಸೆಳೆಯುವಂತದ್ದು. ಶಿಲಾ-ತಾಮ್ರಯುಗ, ಬೃಹತ್‌ಶಿಲಾಯುಗ, ಆದಿಇತಿಹಾಸಕಾಲ ಮತ್ತು ಮಧ್ಯಯುಗೀನ ಇತಿಹಾಸಕಾಲದ ಸಂಸ್ಕೃತಿಗಳ ಕೇಂದ್ರವಾಗಿ ಇದು ಬೆಳೆದುಬಂದಿದೆ. ಬ್ರಹ್ಮಗಿರಿ, ಚಂದ್ರವಳ್ಳಿ, ಸಂಗನಕಲ್ಲು, ಹಳ್ಳೂರು, ಬನಹಳ್ಳಿ, ತಿ.ನರಸೀಪುರ, ಹೆಮ್ಮಿಗೆ ಮೊದಲಾದ ಜನವಾಸ್ತವ್ಯದ ನೆಲೆಗಳಂತೆ ಮಸ್ಕಿಯು ಸಹ ಈ ಮೇಲಿನ ಮೂರು ಸಾಂಸ್ಕೃತಿಕ ಹಂತಗಳ ಉತ್ತಮ ನಿದರ್ಶನವಾಗಿ ನಿಲ್ಲುತ್ತದೆ. ಐತಿಹಾಸಿಕಕಾಲದ ಆರಂಭದ ಅವಧಿಗೆ ಸೇರಿದ ಕರ್ನಾಟಕದ ಸುಮಾರು ೨೫೦ ನೆಲೆಗಳ ಪೈಕಿ ಮಸ್ಕಿಯೂ ಒಂದೆಂಬುದು ದೃಢಪಟ್ಟಿರುವ ಅಂಶ. ಭೌಗೋಳಿಕವಾಗಿ, ಪ್ರಾಗೈತಿಹಾಸಿಕ ಕಾಲದಿಂದಲೆ ವಾಣಿಜ್ಯ ಚಟುವಟಿಕೆ, ಸರಕು-ಸಾಮಗ್ರಿ ಸಾಗಾಣಿಕೆ ಮತ್ತು ಜನರ ಚಟುವಟಿಕೆಗಳಿಗೆ ಉಪಯೋಗಕ್ಕೆ ಬರುವಂತ ಮಾರ್ಗದಲ್ಲಿ, ಆಯಕಟ್ಟಿನ ಸ್ಥಳದಲ್ಲಿ ಮಸ್ಕಿಯೂ ಇದೆಯೆಂಬುದು ಗಮನಾರ್ಹ. ಅಶೋಕನ ಶಾಸನ ಈ ನೆಲೆಯಲ್ಲಿಯೂ ದೊರೆತಿರುವುದು, ಮಸ್ಕಿ ಪರಿಸರ ಖನಿಜಗಳಿಗೆ ಸಮೀಪವಿರುವ ಕೇಂದ್ರವಾಗಿದ್ದಿತೆಂಬುದಕ್ಕೆ ದೊರೆತ ಸಮರ್ಥನೆಯಷ್ಟೆ. ವಸತಿನೆಲೆಯಾಗಿಯೂ ಇದು ಬೆಳೆದುದು ಸಹಜ.

ಅಶೋಕನ ಬ್ರಹ್ಮಗಿರಿಶಾಸನದಲ್ಲಿ ಪ್ರಸ್ತಾಪಗೊಂಡಿರುವ ಸುವರ್ಣಗಿರಿಯೆಂಬುದು ಚಿನ್ನದ ನಿಕ್ಷೇಪ ಮತ್ತು ಪ್ರಾಚೀನ ಚಿನ್ನದಗಣಿಯಿರುವ ಹಟ್ಟಿಗ್ರಾಮ ಮತ್ತು ಅಶೋಕ ಚಕ್ರವರ್ತಿಯ ಹೆಸರುಳ್ಳ ಕಿರುಬಂಡೆ ಶಾಸನವಿರುವ ಮಸ್ಕಿಯೇ ಆಗಿರಬಹುದೆಂಬ ಅಭಿಪ್ರಾಯವಿದೆ. ಕೆಲವರ ಪ್ರಕಾರ ಸುವರ್ಣಗಿರಿಯೆಂಬುದು ಮಸ್ಕಿ ಸಮೀಪದ ಕನಕಗಿರಿಗೆ ಅನ್ವಯಿಸುವಂತದ್ದು. ಮಸ್ಕಿಯಲ್ಲಿ ದೊರೆತ ಅಶೋಕನ ಶಾಸನ ಒಂದೆರಡು ದೃಷ್ಟಿಗಳಿಂದ ವಿಶಿಷ್ಟವಾದುದು. ಇತರ ಶಾಸನಗಳಲ್ಲಿ ಅಶೋಕನನ್ನು 'ದೇವಾನಾಂಪಿಯ ಪಿಯದಸಿ' (ದೇವಾನಾಂಪ್ರಿಯ ಪ್ರಿಯದರ್ಶಿ) ಎಂಬ ವಿಶೇಷನಾಮದಿಂದ ಕರೆದಿದ್ದು, ಇದು ಗೊಂದಲಕ್ಕೆ ಕಾರಣವಾಗಿದ್ದಿತು. ಏಕೆಂದರೆ ತಿಸ್ಸನೆಂಬ ಸಿಂಹಳದ ಅರಸನೊಬ್ಬ ಅಶೋಕನ ಸಮಕಾಲೀನವನಾಗಿದ್ದವನು; ಇವನು ಸಹ ಕರೆಯಲ್ಪಡುತ್ತಿದ್ದುದು 'ದೇವನಾಂಪಿಯ' ಎಂಬ ವಿಶೇಷನಾಮದಿಂದಲೆ. ಇಂತಹದೇ ವಿಶೇಷ ಪದನಾಮದಿಂದ ಗುರುತಿಸಲ್ಪಟ್ಟ ಇನ್ನೊಬ್ಬ ಅರಸನೆಂದರೆ ಸ್ವತಃ ಅಶೋಕನ ತಂದೆಯಾದ ಬಿಂದುಸಾರ. ಆದರೆ ಈ ವಿಶೇಷನಾಮ ಕೇವಲ ಅಶೋಕನಿಗೆ ಸಲ್ಲುವಂತದೆಂಬುದನ್ನು ದೃಢಪಡಿಸಿಕೊಟ್ಟದ್ದು ಮಸ್ಕಿಯ ಶಾಸನ. ಇದರಲ್ಲಿ ಅಶೋಕನನ್ನು ಗುರುತಿಸಿರುವುದು 'ದೇವಾನಂ ಪಿಯಸ ಅಸೋಕಸ'

ಎಂಬ ಅನ್ವರ್ಥನಾಮದಿಂದ. ಇದರೊಡನೆ ಉಲ್ಲೇಖಿಸಬೇಕಾದ ಇನ್ನೆರಡು ಉದಾಹರಣೆಗಳೆಂದರೆ, 'ದೇವಾಣಂಪಿಯೇ ಆಹ', 'ಮಾಣುಸೇ ಹಿ' ಎಂದಿರುವ ಕೊಪ್ಪಳದ ಗವಿಮಠ ಶಾಸನ ಮತ್ತು 'ರಾಜಾ ಅಸೋಕೊ ದೇವಾನಂಪಿಯೇ' ಎಂದಿರುವ ಉದೇಗೊಳಂ ಶಾಸನ.

ಬೃಹತ್‌ಶಿಲಾಯುಗೀಯ ಸಾಂಸ್ಕೃತಿಕ ಅಂಶಗಳು ಐತಿಹಾಸಿಕ ಕಾಲಾವಧಿಯ ಆರಂಭಕ್ಕೆ ನಿರಂತರವಾಗಿ ಹರಿದುಬಂದವೆಂಬುದು ಒಪ್ಪತಕ್ಕದ್ದೇ. ಶಾಸನಗಳು ಹಾಗೂ ಕೃಷ್ಣಾನದಿಯ ಕೆಳದಂಡೆ ಪ್ರದೇಶದಲ್ಲಿ ದೊರಕಿದ ನಾಣ್ಯಗಳು ಸ್ಥಳೀಯಜನರು ಮೌರ್ಯ-ಶಾತವಾಹನರೊಡನೆ ಸಂಪರ್ಕವಿಟ್ಟುಕೊಂಡಿದ್ದರೆಂಬುದನ್ನು ಸೂಚಿಸುತ್ತವೆ. ಬೃಹತ್‌ಶಿಲಾಯುಗೀಯ ಜನರು ಮತ್ತು ಶಾತವಾಹನರ ನಡುವಿನ ಸಂಬಂಧ ಪಿತೃತ್ವದ ಸಂಬಂಧವೆಂದು ಅನುಮಾನಿಸಲಾಗುತ್ತದೆ.[೧೫] ಈ ದೃಷ್ಟಿಯಿಂದಲೂ ಮಸ್ಕಿಯೂ ಶಾತವಾಹನರ ಕಾಲದಲ್ಲಿ ಪ್ರಮುಖ ನಗರವಾಗಿದ್ದಿತೆಂದು ತಿಳಿಯಬಹುದು.

ಹಂಪೆ : ಜಗತ್ಪ್ರಸಿದ್ಧ ಐತಿಹಾಸಿಕ ಸ್ಮಾರಕಗಳ ಕೇಂದ್ರವೆನಿಸಿರುವ ಹಂಪೆ ನೆಲಸಿರುವುದು ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕಿನಲ್ಲಿ. ಚಾರಿತ್ರಿಕ ಹಿನ್ನೆಲೆಯನ್ನು ಕೆದಕುತ್ತಾ ಹೋದಷ್ಟೂ ಹಿಂದೆ ಹಿಂದಕ್ಕೆ ಹೋಗುವಷ್ಟು ಮಹತ್ವವುಳ್ಳ ಪರಿಸರವಿದು. ಶಿಲಾ-ತಾಮ್ರಯುಗ, ಬೃಹತ್ ಶಿಲಾಯುಗ, ಆದಿಇತಿಹಾಸಕಾಲ, ಮಧ್ಯಯುಗೀನ ಇತಿಹಾಸಕಾಲ, ಪೂರ್ವಭಾವಿ ಇತಿಹಾಸ ಕಾಲದ ಬೂದಿಗುಡ್ಡೆಗಳುಳ್ಳ ನಿವೇಶನವಾಗಿ ಗುರುತಿಸಲ್ಪಟ್ಟಿದೆ. ಕ್ರಿ.ಶ.೨ ರಿಂದ ೪ನೇ ಶತಮಾನಗಳವರೆಗೆ ಈಚೆಗೆ ಬೌದ್ಧಧರ್ಮದ ಚಟುವಟಿಕೆಗಳ ಕೇಂದ್ರವೂ ಆಗಿದ್ದಿತೆನ್ನಲು ಈಚೆಗೆ ಸಾಕಷ್ಟು ಸಾಕ್ಷ್ಯಾಧಾರಗಳು ಬೆಳಕಿಗೆಬಂದಿವೆ. ಇಲ್ಲಿ ನಡೆಸಲಾದ ಉತ್ಖನನಗಳು ಈ ಸಂಬಂಧದಲ್ಲಿ ಒದಗಿಸಿರುವ ಮಾಹಿತಿ ಅಮೂಲ್ಯವಾದುದು. ಶಾತವಾಹನಕಾಲದ ಜನ ವಾಸ್ತವ್ಯದ ನೆಲೆಯಾಗಿ ಹಂಪೆ ಗಮನಾರ್ಹ ಪಾತ್ರ ನಿರ್ವಹಿಸಿತೆನ್ನುವುದು ಇಲ್ಲಿ ಮುಖ್ಯ.

ಹಂಪೆ ಕ್ರಿ.ಶ.೨ ರಿಂದ ೪ರವರೆಗೆ ಆಂಧ್ರದ ಅಮರಾವತಿ ಮತ್ತು ನಾಗಾರ್ಜುನ ಕೊಂಡಗಳಲ್ಲಿ ಪ್ರಭಾವಬೀರಿದ್ದ ಬೌದ್ಧಧರ್ಮದ ಶೈಲ ಮತ್ತು ಚೈತ್ಯಕಪಂಥಗಳಿಗೆ ಸೇರಿದ ಕೇಂದ್ರವಾಗಿದ್ದಿತೆಂದು ಭಾವಿಸಲಾಗುತ್ತದೆ. ಬುದ್ಧನ ಜೀವನವನ್ನು ಜಾತಕಕಥೆಗಳಲ್ಲಿ ಅಭಿವ್ಯಕ್ತಿಸುವುದನ್ನು ಮತ್ತು ಬುದ್ಧಮೂರ್ತಿಗಳ ಆರಾಧನೆಯನ್ನು ಇವು ಎತ್ತಿಹಿಡಿಯುತ್ತವೆ. ಹಂಪೆಯ ಉತ್ಖನನದಲ್ಲಿ ದೊರೆತ ಕ್ರಿ.ಶ. ೧-೨ನೇ ಶತಮಾನದ ಸುಣ್ಣದ ಹಲಗೆಯ ಮೇಲಿರುವ ಬ್ರಾಹ್ಮಿಲಿಪಿಯ ಶಾಸನವೊಂದು ಬೌದ್ಧಸಂಘಕ್ಕೆ ದಾನವಿತ್ತುದನ್ನು ದಾಖಲಿಸಿದೆ. ಇದು 'ಥೆರಸಾ ಪುತಸಾ ದಾನಮ್' ಎಂಬ ಪಾಠದ ಪ್ರಕಾರ, ಈ ಬೌದ್ಧಸಂಘಕ್ಕೆ ದಾನವನ್ನಿತ್ತವನು 'ಥೇರಪುತ'. ಹಂಪೆಯ ವಸ್ತುಸಂಗ್ರಹಾಲಯದಲ್ಲಿರುವ ಬುದ್ಧನ ಶಿರಸ್ಸಿನ ಒಂದು ಸ್ಫಟಿಕದ ಮೂರ್ತಿ ಈ ನಿಟ್ಟಿನಲ್ಲಿ ಪರಿಗಣಿಸಬೇಕಾದ ಮುಖ್ಯ ಸಾಕ್ಷ್ಯ. ಮಹಾನವಮಿದಿಬ್ಬ ಪರಿಸರದಲ್ಲಿ ನಡೆಸಲಾದ ಉತ್ಖನನದಲ್ಲಿ ಒಂದು ಬಿಳಿಯ ಜೇಡಿಮಣ್ಣಿನ (ಸ್ಟಕೊ) ಮನುಷ್ಯನ ಶಿರದಭಾಗ ಬೆಳಕಿಗೆ ಬಂದುದನ್ನೂ ಇಲ್ಲಿ

ಗಮನಿಸಬೇಕು. ಹಜಾರರಾಮಸ್ವಾಮಿ ದೇವಾಲಯ ಪರಿಸರದಲ್ಲಿ ಕೈಗೊಂಡ ಉತ್ಖನನಗಳಲ್ಲಿ ಐದು ಲೈಮ್ ಶಿಲೆಯ ದೊಡ್ಡ (ಸುಮಾರು ೧.೩೦ ಮೀಟರ್ ಉದ್ದ ಮತ್ತು ೬೦ ಸೆಂ.ಮೀ. ಅಗಲ) ಬೌದ್ಧ ಶಿಲ್ಪಫಲಕಗಳು ಮತ್ತು ಬುದ್ಧನ ಶಿರೋಭಾಗ ದೊರೆತವು. ಈ ಶಿಲ್ಪಫಲಕಗಳು ಅಪರೂಪದವು ಮಾತ್ರವಲ್ಲದೆ, ಬುದ್ಧನ ಜೀವನದ ಸನ್ನಿವೇಶಗಳನ್ನು ಮತ್ತು ಜಾತಕಕಥೆಗಳನ್ನು ಉಬ್ಬುಗೆತ್ತನೆಯಲ್ಲಿ ತೋರಿಸಿರುವಂತವು. ಪ್ರಾಯಶಃ ಇವುಗಳನ್ನು ಬೌದ್ಧಧರ್ಮಾನುಯಾಯಿಗಳು ಆಂಧ್ರಪ್ರದೇಶದಿಂದ ತಂದಿರುವ ಸಾಧ್ಯತೆಯಿದೆ. ಇವು ಗಾಂಧಾರಶಿಲ್ಪಗಳನ್ನು ಹೋಲುತ್ತವೆಂಬುದು ಗಮನಾರ್ಹ. ಅ.ಸುಂದರ ಅವರು ಭಾವಿಸುವಂತೆ, ಹಂಪೆ ಕ್ರಿ.ಶ.೧ನೇ ಶತಮಾನದಲ್ಲೆ ಬೌದ್ಧಧರ್ಮದ ಕೇಂದ್ರವಾಗಿದ್ದಿತು.[೧೩]

ಅರಮನೆ ಆವರಣದಲ್ಲಿ ಪತ್ತೆಯಾದ ಐದು ದೊಡ್ಡ ಬೌದ್ಧಫಲಕಗಳ ಬಗೆಗೆ ಸಂಶೋಧಕರು ವ್ಯಕ್ತಪಡಿಸಲಾದ ಅಭಿಪ್ರಾಯಗಳು ಹಲವು ತೆರನಾದುವು. ಅರಮನೆಪ್ರದೇಶದ ಸಮೀಪದಲ್ಲಿಯೆ ಸುಮಾರು ೧-೨ನೇ ಶತಮಾನದ ಬೌದ್ಧಸ್ತೂಪವಿದ್ದು, ಕಾಲಾಂತರದಲ್ಲಿ ಜನಾಶ್ರಯವಿಲ್ಲದೆ ಅದು ದುಃಸ್ಥಿತಿಗೆ ಬಂದಿರಬೇಕೆಂಬುದೊಂದು ಅಭಿಪ್ರಾಯ. ಈ ಐದು ಫಲಕಗಳನ್ನು ಕುರಿತು ಅ.ಸುಂದರ ಅವರು ನೀಡಿರುವ ವಿವರಣೆಯಿಂದ ಕೆಲವು ಗಮನಾರ್ಹ ಸಂಗತಿಗಳು ತಿಳಿದು ಬಂದಿವೆ.[೧೬] ಮೂರು ಭಾಗಗಳುಳ್ಳ ೧ನೇ ಫಲಕದಲ್ಲಿ ಪೀಠದ ಮೇಲೆ ಕುಳಿತ ಬುದ್ಧ ತನ್ನ ಅನುಯಾಯಿಗಳಿಗೆ (ಶ್ರಾವಕ-ಶ್ರಾವಿಕೆಯರಿಗೆ) ಬೋಧಿಸುತ್ತಿರುವುದು, ಬುದ್ಧ ಅಶ್ವಾರೂಢನಾಗಿ ಅರಮನೆ ಬಿಟ್ಟು ಹೋಗುತ್ತಿರುವುದು, ಬಹುಶಃ ಮುಚಲಿಂದ ನಾಗನ ಕಥೆಗೆ ಸಂಬಂಧಿಸಿದ ಜಾತಕಕಥೆಯ ಸನ್ನಿವೇಶದ ಚಿತ್ರಣವಿರುವುದು ಇದರ ವೈಶಿಷ್ಟ್ಯ. ೨ನೇ ಫಲಕವೂ ಮೂರು ಭಾಗಗಳನ್ನು ಒಳಗೊಂಡಿದ್ದು, ಗೌತಮನು ಬುದ್ಧನಾದ ನಂತರ ತನ್ನ ಅರಮನೆಗೆ ಹಿಂದಿರುಗಿದ ಸಿದ್ಧಾರ್ಥನನ್ನು ಯಶೋಧರೆ ತನ್ನ ಮಗ ರಾಹುಲನೊಡನೆ ಎದುರುಗೊಂಡು ಆತನ ಅನುಯಾಯಿಗಳಾಗುವ ಹಾಗೂ ಶ್ರಾವಕ-ಶ್ರಾವಿಕೆಯರಿಗೆ ಬುದ್ಧ ಧರ್ಮಬೋಧೆ ಮಾಡುತ್ತಿರುವ ಚಿತ್ರಣವನ್ನೊಳಗೊಂಡಿದೆ. ಮೂರನೇ ಫಲಕ ಎರಡು ಭಾಗಗಳನ್ನು ಮಾತ್ರ ಒಳಗೊಂಡಿದ್ದು, ರಾಜನೊಬ್ಬ ತನ್ನ ಶಿಷ್ಯರೊಡಗೂಡಿ ಬಂದಿರುವ ಮುನಿಯೊಬ್ಬನನ್ನು ಸ್ವಾಗತಿಸುತ್ತಿರುವ ದೃಶ್ಯವಿದೆ. ಬಹುಶಃ ಇವರು ಶುದ್ಧೋಧನ ಮಹಾರಾಜ ಮತ್ತು ಅನಿತ ಮಹಾಮುನಿಗಳಿರಬಹುದು. ಇಬ್ಬರು ರಾಜಮನೆತನದವರಿರುವ ಇನ್ನೊಂದು ದೃಶ್ಯವಿದ್ದು, ಈ ಫಲಕದ ಎರಡೂ ಬದಿಗಳಲ್ಲಿ ದಾನಿಗಳೆಂದು ತೋರುವ ದಂಪತಿಗಳ ಚಿತ್ರಗಳಿವೆ. ೪ನೇ ಫಲಕದಲ್ಲಿ ನಾಲ್ಕುಭಾಗಗಳಿದ್ದು, ನಾಲ್ಕನೇ ಭಾಗ ಅಸ್ಪಷ್ಟವಾಗಿದೆ. ಇನ್ನುಳಿದ ಮೂರು ಭಾಗಗಳು ಕ್ರಮವಾಗಿ ಆಸನದ ಮೇಲೆ ಕುಳಿತಿರುವ ಅರಸ ಮತ್ತು ಅವನ ಎಡಬದಿಯಲ್ಲಿ ನಿಂತಿರುವ ಪ್ರಾಯಶಃ ಬುದ್ಧನೆಂದು ಭಾವಿಸಲಾದ ವ್ಯಕ್ತಿ, ಜಾತಕಕಥೆ(ಬಹುಶಃ ವಸ್ಸಂತರ ಜಾತಕಕಥೆ)ಯ ಸನ್ನಿವೇಶ ಹಾಗೂ ನಾಗರಾಜ ತನ್ನ ಬಂಧು-ಬಳಗದೊಡನೆ ಆಸನದ ಮೇಲೆ ಕುಳಿತಿರುವ ದೃಶ್ಯಗಳನ್ನು ಒಳಗೊಂಡಿವೆ. ೫ನೇ ಹಾಗೂ ಕೊನೆಯ ಫಲಕದಲ್ಲಿಯೂ ಮೂರು ಭಾಗಗಳಿವೆ. ಮೊದಲೆರಡು ಭಾಗಗಳು

ಬೋಧಿಸುತ್ತಿರುವ ಬುದ್ಧನಿರುವ ದೃಶ್ಯಗಳನ್ನೊಳಗೊಂಡಿದ್ದರೆ, ಮೂರನೆಯದು ಬಹುಶಃ ಸಿದ್ಧಾರ್ಥ ಮತ್ತು ಯಶೋಧರೆಯರೆಂದು ತಿಳಿಯಬಹುದಾದ ದಂಪತಿಗಳು ಆಸನದ ಮೇಲೆ ಕುಳಿತಿರುವ ದೃಶ್ಯವನ್ನೊಳಗೊಂಡಿದೆ. ಇತರೆ ಫಲಕಗಳಲ್ಲಿರುವಂತೆಯೇ ಇದರಲ್ಲಿಯೂ ಎರಡು ಅಂಚುಗಳಲ್ಲಿ ದಾನಿದಂಪತಿಗಳ ಚಿತ್ರಗಳಿವೆ. ಇದರ ಬಲಬದಿಯಲ್ಲಿ ಪೀಠಸ್ಥ ಬುದ್ಧನ ಚಿತ್ರವಿರುವುದು ವಿಶೇಷ.

ಈ ಮೇಲಿನ ಐದು ಚಿತ್ರಫಲಕಗಳ ವೈಶಿಷ್ಟ್ಯತೆಯನ್ನು ಸರಿಯಾಗಿ ಗುರುತಿಸುವ ಪ್ರಯತ್ನ ಮಾಡಿದವರು ಅ. ಸುಂದರವರು. ಅವರ ಪ್ರಕಾರ, ಇವುಗಳಲ್ಲಿ ಒತ್ತೊತ್ತಾಗಿ ಹಾಗೂ ನಿಬಿಡವಾಗಿ ವ್ಯಕ್ತಿಗಳನ್ನು ಚಿತ್ರಿಸಲಾಗಿದೆ. ಇಂತಹ ನಿಬಿಡವಾದ ಸಾಂದ್ರತೆಯಲ್ಲಿ ಪ್ರತಿಯೊಂದು ವ್ಯಕ್ತಿಯ ವೈಶಿಷ್ಟ್ಯವನ್ನು ಎತ್ತಿತೋರಿಸಿ ವ್ಯಕ್ತಿತ್ವವನ್ನು ಸ್ಪಷ್ಟವಾಗಿ ಸೂಚಿಸಿದೆ. ಬುದ್ಧನಾಗಿರಲಿ, ಅರಸನಾಗಿರಲಿ, ಉಪಾಸಕ-ಉಪಾಸಕಿಯಾಗಿರಲಿ ಒಬ್ಬೊಬ್ಬರೂ ತಮ್ಮ ಘನತೆ ಹಾಗೂ ವ್ಯಕ್ತಿತ್ವವನ್ನು ಕಾದುಕೊಂಡಂತೆ ಇದೆ. ಒಬ್ಬರಂತೆ ಮತ್ತೊಬ್ಬರಿಲ್ಲ. ಶಿಲ್ಪಿಯ ಕಲ್ಪನಾ ಶಕ್ತಿ ಮತ್ತು ಪ್ರತಿಭೆ ನಿಜವಾಗಿಯೂ ಜಾಣ್ಮೆಯಿಂದ ಕೂಡಿದ್ದು ಪ್ರಶಂಸಾರ್ಹ.[೧೮]

ಮಣ್ಣಿನಗೊಂಬೆಗಳ ಮಟ್ಟಿಗೆ, ಶಾತವಾಹನಕಾಲದ ವಿಶಿಷ್ಟ ಪ್ರಕಾರದ ಕಲೆಯೆಂದು ಗುರುತಿಸಲ್ಪಡುತ್ತದೆ. ಸನ್ನತಿ, ಬನವಾಸಿ, ಚಂದ್ರವಳ್ಳಿ, ವಡಗಾಂವ್-ಮಾಧವಪುರ ಮೊದಲಾದ ನಿವೇಶನಗಳಲ್ಲಿ ದೊರೆತ ಗೊಂಬೆಗಳು ಆ ಕಾಲದ ಕಲಾಕುಶಲತೆಗೆ ಸಾಕ್ಷಿಯಾಗಿವೆ. ಶಾತವಾಹನಕಾಲೀನ ಕಲಾಪೂರ್ಣ ಗೊಂಬೆಗಳು ದೊರೆತ ಎಡೆಗಳಲ್ಲಿ ಹಂಪೆಯೂ ಒಂದು. ಶಿಲಾಫಲಕಗಳೊಡನೆ, ಸ್ತಂಭ ಮತ್ತು ಇತರ ಜೇಡಿಮಣ್ಣಿನ ಗೊಂಬೆಗಳು ಇಲ್ಲಿ ಕಂಡುಬಂದಿವೆ. ಹಂಪೆಯಲ್ಲಿ ದೊರೆತ ಈ ಗೊಂಬೆಗಳು ಕ್ರಿ.ಶ.೧-೨ನೇ ಶತಮಾನದಲ್ಲಿ ಪ್ರಚಲಿತವಿದ್ದ ವಿಶಿಷ್ಟವಾದ ಗಾಂಧಾರ ಕಲಾಶೈಲಿಯನ್ನು ಹೋಲುತ್ತವೆಂಬುದು ಗಮನಾರ್ಹ. ಬುದ್ಧ ಅಥವಾ ಯಾವುದೋ ವ್ಯಕ್ತಿಯ ಅಭಿವ್ಯಕ್ತತೆ ಎನ್ನಬಹುದಾದ ಗೊಂಬೆ ತೀರಾ ಭಿನ್ನವಾಗಿ ಹೋಗಿದ್ದು, ಬೋಧಿಸತ್ವನ ಗಾಂಧಾರ ವಿಗ್ರಹಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ವಸ್ತ್ರಾಲಂಕಾರವನ್ನು ಹೋಲುತ್ತದೆ. ಅ.ಸುಂದರ ಅವರು ಅಭಿಪ್ರಾಯಿಸುವಂತೆ, ಹಂಪೆಯ ಗೊಂಬೆಗಳನ್ನು ಗಾಂಧಾರಶೈಲಿಯ ಶಿಲ್ಪಗಳೊಂದಿಗೆ ತುಲನಾತ್ಮಕವಾಗಿ ನೋಡಿದಾಗ, ಇವು ನಿಸ್ಸಂದೇಹವಾಗಿಯೂ ಎರಡನೇ ಶತಮಾನಕ್ಕೆ ಸೇರುತ್ತವೆನ್ನಬಹುದು. ಅತ್ಯಂತ ನುಣುಪಾದ ಜೇಡಿಮಣ್ಣಿನಿಂದ ಸಿದ್ಧಗೊಂಡ ಸೂಕ್ಷ್ಮ ನೆರಿಗೆಗಳೊಡನೆ ಕೂಡಿದ ಈ ಗೊಂಬೆಗಳನ್ನು ಹಂಪೆಯ ಪ್ರಾಗ್ಇತಿಹಾಸಕಾಲದ ಕಲಾವಂತಿಕೆರಹಿತ ಗೊಂಬೆಗಳೊಡನೆ ಹೋಲಿಸಿದಾಗ, ಇವು ಸ್ಥಳೀಯವಾಗಿ ತಯಾರಾದುವಲ್ಲ ವೆಂಬುದು ವ್ಯಕ್ತಪಡುತ್ತದೆ. ಪ್ರಾಯಶಃ ಈ ಗೊಂಬೆಗಳು ವ್ಯಾಪಾರ-ವಾಣಿಜ್ಯ ಸಂಬಂಧದಲ್ಲಿ ಗಾಂಧಾರ ಪ್ರದೇಶದಿಂದ ಹಂಪೆಯ ಪ್ರದೇಶಕ್ಕೆ ರವಾನೆಯಾಗಿದ್ದಿರಬೇಕು.[೧೯]

ಇದರೊಡನೆ ಪ್ರಸ್ತಾಪಿಸಲರ್ಹವಾದ ಇತರ ಜೇಡಿಮಣ್ಣಿನ ಗೊಂಬೆಗಳಲ್ಲಿ ಮನುಷ್ಯನ ಶಿರದಭಾಗ ಮತ್ತು ಆಯತಾಕಾರದ ಚಿಕ್ಕಪೀಠ ಮುಖ್ಯವಾದುವು. ಹಂಪೆಯೂ ಶಾತವಾಹನ

ಕಾಲೀನ ಪ್ರಮುಖನಗರಗಳ ಸಾಲಿಗೆ ಸೇರಿದ್ದು, ಪ್ರಮುಖ ವಾಣಿಜ್ಯಕೇಂದ್ರವೂ ಆಗಿ ಕಾರ್ಯ ನಿರ್ವಹಿಸುತ್ತಿತ್ತೆಂಬುದು ಈ ಎಲ್ಲ ಅಂಶಗಳಿಂದ ದೃಢಪಡುತ್ತದೆ. ಹಂಪೆ ಪರಿಸರದ ಇಂತಹ ಚಟುವಟಿಕೆಗಳ ವ್ಯಾಪ್ತಿ ಎಷ್ಟೆಂದರೆ, ದೂರಪ್ರದೇಶಗಳ ವರ್ತಕರನ್ನು ತನ್ನಲ್ಲಿಗೆ ಆಕರ್ಷಿಸುವಷ್ಟು; ಹಾಗೂ ಗಾಂಧಾರಶೈಲಿಯ ಬಿಳಿಯ ಜೇಡಿಮಣ್ಣಿನ ಗೊಂಬೆಗಳನ್ನು ಪಡೆದುಕೊಂಡು ತನ್ನ ಸಂಸ್ಕೃತಿಯ ಒಂದು ಭಾಗವಾಗಿಸಿಕೊಳ್ಳುವಷ್ಟು, ಮನೋಹರ ಮತ್ತು ಅರ್ಥಗರ್ಭಿತವಾಗಿದೆ.

ಸಂಗನಕಲ್ಲು: ಬಳ್ಳಾರಿ ತಾಲ್ಲೂಕಿನ ಸಂಗನಕಲ್ಲು ನಿವೇಶನ ಹಂಪೆಯಂತೆಯೇ ಶಿಲಾ-ತಾಮ್ರಯುಗ, ಬೃಹತ್‌ಶಿಲಾಯುಗ, ಆದಿಇತಿಹಾಸಕಾಲ, ಮಧ್ಯಇತಿಹಾಸಕಾಲ ಮತ್ತು ಪೂರ್ವಭಾವಿ ಇತಿಹಾಸಕಾಲದ ಬೂದಿಗುಡ್ಡ ಸಂಸ್ಕೃತಿಗಳನ್ನು ತನ್ನ ಒಡಲಲ್ಲಿ ಹುದುಗಿಸಿಕೊಂಡಿದೆ. ಮೂಲತಃ ಬಳ್ಳಾರಿಪ್ರದೇಶವನ್ನು ಪಲ್ಲವರಿಗೆ ಸಂಬಂಧಿಸಿದ ಹಿರೇಹಡಗಲಿ ಶಾಸನದಲ್ಲಿ 'ಶಾತವಾಹನೀ ರಠ್ಠ' ಮತ್ತು ಆ ಭಾಗದ ರಾಜ್ಯವನ್ನು 'ಶಾತವಾಹನೀ ರಾಷ್ಟ್ರ'ವೆಂದು ಕರೆದಿರುವುದನ್ನು ಕಾಣುತ್ತೇವೆ. ಆದ್ದರಿಂದ ಈ ಪ್ರದೇಶ ಶಾತವಾಹನರ ಆಳ್ವಿಕೆಗೆ ಒಳಪಟ್ಟಿದ್ದಿತೆಂದು ಸ್ಪಷ್ಟವಾಗುತ್ತದೆ.

ಈ ಹಿನ್ನೆಲೆಯಲ್ಲಿ, ಸಂಗನಕಲ್ಲು ಸಹ ಶಾತವಾಹನರ ಅಧೀನದಲ್ಲಿದ್ದುದು ಸ್ಪಷ್ಟ ತಿ.ನರಸೀಪುರ, ಬನಹಳ್ಳಿ, ಚಂದ್ರವಳ್ಳಿ, ಬ್ರಹ್ಮಗಿರಿ, ಬನವಾಸಿ, ಹಳ್ಳೂರು, ವಡಗಾಂವ್-ಮಾಧವಪುರ, ಪಿಕ್ಲಿಹಾಳ, ಸನ್ನತಿ ಮೊದಲಾದ ನೆಲೆಗಳಂತೆಯೆ ಸಂಗನಕಲ್ಲು ಸಹ ಆದಿ ಇತಿಹಾಸಕಾಲದ ಜನಸಾಮಾನ್ಯರ ದೈನಂದಿನ ಜೀವನವನ್ನು ಸ್ಥೂಲವಾಗಿ ಪರಿಚಯಿಸುತ್ತದೆಂಬುದು ಮುಖ್ಯ. ಈ ಶಾಸನದ ಮತ್ತೊಂದು ವಿಶೇಷವೆಂದರೆ ಗ್ರಾಮ ಜೀವನದ ಬದುಕನ್ನು ತಿಳಿಸುತ್ತದೆ.[೨೦]

ಅಕ್ಕಿಆಲೂರು: ಆದಿಇತಿಹಾಸಕಾಲದ ಸಂಸ್ಕೃತಿಯ ಕುರುಹುಗಳನ್ನು ಹೊಂದಿರುವ ನಿವೇಶನವೆಂದರೆ ಹಾವೇರಿ ಜಿಲ್ಲೆ, ಹಾನಗಲ್ಲು ತಾಲ್ಲೂಕಿನ ಅಕ್ಕಿಆಲೂರು. ಇದು ಪ್ರಸಿದ್ಧ ಶಾತವಾಹನ ನಿವೇಶನವೆನಿಸಿದ ಬನವಾಸಿಗೆ ಸಮೀಪದಲ್ಲಿರುವಂತಹದ್ದು. ರೋಮ್ ಸಾಮ್ರಾಜ್ಯದ ಕ್ರಿ.ಶ. ೧-೩ನೇ ಶತಮಾನದ ಬೆಳ್ಳಿ ಮತ್ತು ಚಿನ್ನದನಾಣ್ಯರಾಶಿಗಳು(ಹೋರ್ಡ್ಸ್) ಇಲ್ಲಿ ಬೆಳಕಿಗೆ ಬಂದುದರಿಂದ, ಈ ನಿವೇಶನಕ್ಕೆ ಮತ್ತಷ್ಟು ಮಹತ್ವ ಪ್ರಾಪ್ತವಾದಂತಾಯಿತು. ಹಾಗೆಯೇ, ಶಾತವಾಹನಕಾಲದ ನೆಲೆಯಾಗಿದ್ದು ಆ ನಂತರ ಕದಂಬರ ಕೇಂದ್ರವಾಗಿಯೂ ಮುಂದುವರೆದ ಹಾನಗಲ್ಲಿನಲ್ಲಿ ಕ್ರಿ.ಶ.೪-೬ನೇ ಶತಮಾನದ ಇಟ್ಟಿಗೆಕಟ್ಟಡಗಳ ಅವಶೇಷಗಳು ಗೋಚರಿಸಿವೆ.

ಕರ್ನಾಟಕ ಮತ್ತು ರೋಮ್‌ಗಳ ಸಂಪರ್ಕದ ದೃಷ್ಟಿಯಿಂದ ಅಕ್ಕಿಆಲೂರು ನಿವೇಶನದಲ್ಲಿ ದೊರೆತ ರೋಮನ್‌ನಾಣ್ಯಗಳಿಗೆ ಮಹತ್ವವಿದೆ. ಇವು ಮುಖ್ಯವಾಗಿ ರೋಮ್ ಸಾಮ್ರಾಟರಾಗಿದ್ದ ಅಗಸ್ಟಸ್ ಮತ್ತು ಟೈಬಿರಿಯಸ್‌ರಿಗೆ ಸೇರಿದುವು. ಇವರ ನಂತರದ ಅಂಟೋನಿಯಸ್ ಪಯಸ್ (ಕ್ರಿ.ಶ.೧೩೮-೧೬೧), ಥಿಯೊಡೊಸಿಯಸ್ (ಕ್ರಿ.ಶ.೪೦೮-೪೫೦), ಮೆಸಿಯನ್ (ಕ್ರಿ.ಶ.೪೫೦-೪೫೭), ಲಿಯೊ I (ಕ್ರಿ.ಶ.೪೫೭-೪೭೪), ಝಿನೊ (ಕ್ರಿ.ಶ.೪೭೪-೪೯೧), ಅನಾಸ್ತಸಿಯಸ್ (ಕ್ರಿ.ಶ.೪೯೧-

೫೧೮) ಮತ್ತು ಜಸ್ಟಿನಸ್ I (ಕ್ರಿ.ಶ.೫೧೮-೫೨೭) ಅರಸರ ಚಿನ್ನದನಾಣ್ಯಗಳೂ ಬೆಳಕಿಗೆ ಬಂದಿರುವುದು ಗಮನಾರ್ಹ.

ರೋಮನ್‌ನಾಣ್ಯಗಳ ವಿಶೇಷವೆಂದರೆ, ಇವುಗಳಲ್ಲಿ ಕೆಲವು ನಾಣ್ಯಗಳ ಅಂಚಿನಲ್ಲಿ ಎರಡು ರಂಧ್ರಗಳು ಕಂಡುಬರುತ್ತವೆ. ಪ್ರಾಯಶಃ ಇವುಗಳನ್ನು ಪೋಣಿಸಿ ಸರಮಾಡಿಕೊಂಡು ಕೊರಳಲ್ಲಿ ಧರಿಸಲು ಬಳಸಿಕೊಂಡಿದ್ದಿರಬೇಕು. ಇಲ್ಲಿಯ ನಾಣ್ಯವೊಂದಕ್ಕೆ ತೊಟ್ಟು ಇರುವುದೇ ಈ ಊಹೆಗೆ ಆಧಾರ. ಇಂತಹದ್ದೆ ತೊಟ್ಟುಗಳುಳ್ಳ ನಾಣ್ಯಗಳು ಬನವಾಸಿಯಲ್ಲಿಯೂ ದೊರೆತಿರುವುದನ್ನು ಮೇಲೆಯೆ ಪ್ರಸ್ತಾಪಿಸಿದೆ. ವೃತ್ತಾಕಾರದಲ್ಲಿರುವ ಈ ನಾಣ್ಯಗಳದು ಸುಂದರ ವಿನ್ಯಾಸ. ಈ ನಾಣ್ಯಗಳ ಮೇಲೆ ಸಿಂಹಾಸನದಲ್ಲಿ ಕುಳಿತು 'ಸೆಪ್ಟರ್' ಹಿಡಿದುಕೊಂಡಿರುವ ರೋಮನ್ ಅರಸರ ಚಿತ್ರಣಗಳಿದ್ದು, ಈ ಬಗೆಯ ವ್ಯಕ್ತಿಚಿತ್ರಣಗಳು ಕಲಾತ್ಮಕವಾಗಿವೆ. ರೋಮನ್‌ಲಿಪಿಯ ಬರಹಗಳನ್ನೊಳಗೊಂಡಿರುವ ಈ ನಾಣ್ಯಗಳ ಕಾಲಮಾನ ಕ್ರಿ.ಪೂ. ೧ ರಿಂದ ಕ್ರಿ.ಶ. ೧೦ನೇ ಶತಮಾನ. ನಾಣ್ಯಗಳನ್ನು ಮುದ್ರಿಸಿದ ಟಂಕಶಾಲೆಗಳ ಹೆಸರಿರುವುದು ವಿಶೇಷವಾಗಿದೆ. ಒಟ್ಟಿನಲ್ಲಿ, ಶಾತವಾಹನ ನೆಲೆಗಳಲ್ಲಿ ರೋಮನ್‌ನಾಣ್ಯಗಳು ದೊರೆತಿರುವ ಹಿನ್ನೆಲೆಯಲ್ಲಿ, ಅಕ್ಕಿಆಲೂರು ಶಾತವಾಹನಕಾಲೀನ ಸಂಸ್ಕೃತಿಯ ಪ್ರಭಾವಕ್ಕೆ ಒಳಪಟ್ಟ ನಿವೇಶನವೆನ್ನುವುದರಲ್ಲಿ ಸಂಶಯ ಉಳಿಯುವುದಿಲ್ಲ.

ನೂರುಂಬಾಡ ಪ್ರದೇಶ : ಈಚೆಗೆ ಪತ್ತೆಹಚ್ಚಲಾದ ಶಾತವಾಹನಕಾಲೀನ ಸಂಸ್ಕೃತಿಯ ಇನ್ನೊಂದು ನೆಲೆಯೆಂದರೆ ನೂರುಂಬಾಡ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಸುಣಕಲ್ಲುಬಿದರಿ ಮತ್ತು ಗುಡ್ಡದಹೊಸಳ್ಳಿ ಗ್ರಾಮಗಳ ಸನಿಹದ ಹೊಸಕೆರೆಯ ಅಂಗಳ; ಹಾವೇರಿ ಜಿಲ್ಲೆ, ರಾಣೆಬೆನ್ನೂರು ತಾಲ್ಲೂಕಿಗೆ ಸೇರಿರುವ ಹೊಸ ನಿವೇಶನವಾಗಿದೆ. ಮುಖ್ಯವಾಗಿ, ಇಲ್ಲಿ ದೊರೆತ ನಾಣ್ಯಗಳ ಆಧಾರದಿಂದ ಇದು ಚುಟು-ಶಾತವಾಹನರ ನೆಲೆಯೆನ್ನಬೇಕಾಗುತ್ತದೆ. ಈಗ ನಿರ್ಧರಿಸ ಲಾಗಿರುವ ಇದರ ಕಾಲಮಾನ ಕ್ರಿ.ಶ. ೧ ರಿಂದ ೩ನೇ ಶತಮಾನ. ಶಾತವಾಹನರು ಮತ್ತು ಅವರ ಸಾಮಂತರ ನೆಲೆಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ದೊಡ್ಡಗಾತ್ರದ ಸುಟ್ಟಮಣ್ಣಿನ ಇಟ್ಟಿಗೆಗಳು ಮತ್ತು ಇವುಗಳಿಂದ ನಿರ್ಮಿಸಲಾದ ತಳಪಾಯಗಳ ನಿವೇಶನದಲ್ಲಿಯೂ ಕಾಣಸಿಗುತ್ತವೆ. ವಡಗಾಂವ್-ಮಾಧವಪುರ ಮೊದಲಾದ ನಿವೇಶನಗಳು ಉತ್ಖನನದಲ್ಲಿ ದೊರೆತ ಇಟ್ಟಿಗೆಗಳೊಡನೆ ಇವುಗಳನ್ನು ಹೋಲಿಸಬಹುದು. ಅಲ್ಲದೆ, ರೇಖಾಚಿತ್ರಸಹಿತವಿರುವ ಮಡಿಕೆ-ಕುಡಿಕೆಗಳು, ಕೆಂಪು-ಕಪ್ಪು-ಬಿಳಿ ಹಾಗೂ ಬೂದುಬಣ್ಣದ ಮಡಿಕೆಚೂರುಗಳು ಮತ್ತು ಕುಂಭಗಳು ಇಲ್ಲಿ ದೊರೆಯುವುದ ರಿಂದ ಈ ಪ್ರದೇಶದಲ್ಲಿ ನೆಲಸಿದ್ದ ಜನಜೀವನದ ಸ್ವರೂಪ ಕುರಿತು ಬೇರೆ ತೆರನಾಗಿಯೂ ವಿಚಾರ ಮಾಡಲು ಅವಕಾಶವಿದೆ.[೨೧]

ಹೊಸಕೆರೆ ಅಂಗಳದ ನಿವೇಶನದಲ್ಲಿ ದೊರೆತಿರುವ ಸೀಸದನಾಣ್ಯಗಳು ಚುಟು-ಆನಂದ ಸಂತತಿಯವರಿಗೆ ಸೇರಿದುವು. ಚುಟುಕುಲಾನಂದನ ಹೆಸರಿರುವ ಈ ನಾಣ್ಯಗಳಲ್ಲಿ ಒಂದು

ಬದಿಯಲ್ಲಿ ಗುಡ್ಡದಚಿಹ್ನೆಯೊಡನೆ 'ಚುಟುಕುಲಾನಂದಸ' ಎಂಬ ಬರಹವನ್ನು ಹೊಂದಿದ್ದರೆ, ಇನ್ನೊಂದು ಬದಿಯಲ್ಲಿ ಕಟಾಂಜನದೊಳಗಿರುವ ಬೋಧಿವೃಕ್ಷ ಹಾಗೂ ಇದರ ಬಲಕ್ಕೆ ತ್ರಿಶೂಲ ಮತ್ತು ಎಡಕ್ಕೆ ಸ್ವಸ್ತಿಕಚಿಹ್ನೆಗಳನ್ನು ಹೊಂದಿವೆ. ಮತ್ತೊಬ್ಬ ಅರಸ ಮುಡಾನಂದನ ಹೆಸರಿನಲ್ಲಿರುವ ನಾಣ್ಯಗಳ ಮೇಲಿನ ಚಿಹ್ನೆಗಳಲ್ಲಿ ಒಂದೆರಡು ಬದಲಾವಣೆಗಳು ಗೋಚರಿಸುತ್ತವೆ. ಚುಟುಕುಲಾನಂದನ ನಾಣ್ಯಗಳ ಮೇಲಿರುವಂತೆ ಸ್ವಸ್ತಿಕಚಿಹ್ನೆಯನ್ನು ಹೊಂದಿರದೆ, ಕೇವಲ ತ್ರಿಶೂಲದ ಚಿಹ್ನೆಯನ್ನು ಮಾತ್ರ ಮುಡಾನಂದನ ನಾಣ್ಯಗಳು ಹೊಂದಿವೆ. ಚುಟುಕುಲದರಸರ ಇಂತಹ ನಾಣ್ಯಗಳು ಈಗಾಗಲೇ ಚಂದ್ರವಳ್ಳಿ, ಕಾರವಾರ ಮತ್ತು ಬನವಾಸಿ ನಿವೇಶನಗಳಲ್ಲಿ ಕಂಡುಬಂದಿವೆ. ಈ ಹಿನ್ನೆಲೆಯಲ್ಲಿ, ಪ್ರಸ್ತುತ ನಿವೇಶನ ಸಹಾ ಶಾತವಾಹನಕಾಲೀನ ಸಂಸ್ಕೃತಿಯ ಕೇಂದ್ರವಾಗಿ ಬೆಳಗಿತೆನ್ನಬಹುದು. ಈ ನಿವೇಶನದ ಅನ್ವೇಷಣೆಯಲ್ಲಿ ಶ್ರಮವಹಿಸಿದ ಸುರೇಶ ದೊಡ್ಡಮನಿಯವರು ಹೇಳುವಂತೆ, ಉತ್ತರಕರ್ನಾಟಕದಲ್ಲಿ ದೊರೆತ ಕೆಲವೆ ಐತಿಹಾಸಿಕ ಸ್ಥಳಗಳಲ್ಲಿ ಇದು ಸಹ ಒಂದಾಗಿದ್ದು, ಅಂದಿನ ಇತಿಹಾಸ ರಚನೆಯಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಈ ಮೊದಲು ರಚಿಸಿದ ನೂರುಂಬಾಡ ಪ್ರದೇಶದ ಇತಿಹಾಸವನ್ನು ಪರಿಷ್ಕರಿಸಿ ಹೊಸ ಇತಿಹಾಸವನ್ನು ರಚಿಸುವಲ್ಲಿ ಪ್ರಸ್ತುತ ಈ ಐತಿಹಾಸಿಕ ನೆಲೆ ಅಧಿಕೃತ ಪ್ರಾಚೀನ ದಾಖಲೆಯನ್ನು ಒದಗಿಸುತ್ತದೆ.[೨೨]

ಬನಹಳ್ಳಿ: ಕೋಲಾರ ಜಿಲ್ಲೆ, ಚಿಂತಾಮಣಿ ತಾಲ್ಲೂಕಿನಲ್ಲಿರುವ ಬನಹಳ್ಳಿ ನೂತನಶಿಲಾಯುಗ ನೆಲೆಯೆಂದು ಗುರುತಿಸಲ್ಪಟ್ಟಿದ್ದು, ಬೃಹತ್‌ಶಿಲಾಸಂಸ್ಕೃತಿ ತರುವಾಯದ ಆದಿಇತಿಹಾಸಕಾಲದ ಜನವಾಸ್ತವ್ಯದ ಅವಶೇಷಗಳೂ ಇಲ್ಲಿ ದೊರೆತಿವೆ. ಹೀಗಾಗಿ ನೂತನ ಶಿಲಾಯುಗ, ಬೃಹತ್‌ಶಿಲಾಯುಗ, ಚರಿತ್ರಾರಂಭಕಾಲ- ಈ ಮೂರು ಸಾಂಸ್ಕೃತಿಕ ಹಂತಗಳ ಜನವಾಸದ ನೆಲೆಯಾಗಿಯೂ ಬನಹಳ್ಳಿಯನ್ನು ಗುರುತಿಸಲಾಗುತ್ತದೆ. ಈಗಾಗಲೆ ಚರ್ಚಿಸಲಾದಂತೆ, ಬನಹಳ್ಳಿ ಸಂಸ್ಕೃತಿಯ ಕಾಲಮಾನ ಕ್ರಿ.ಪೂ. ೬೦೦ ರಿಂದ ಕ್ರಿ.ಶ. ೧ನೇ ಶತಮಾನವಾಗಿದೆ.

ಇತರ ನಿವೇಶನಗಳಲ್ಲಿ ಕಂಡುಬಂದಂತೆ, ಬನಹಳ್ಳಿಯಲ್ಲಿಯೂ ಬೃಹತ್‌ಶಿಲಾಯುಗದ ಜನರು ಕಬ್ಬಿಣದಅದಿರನ್ನು ಸೋಸುವ ಕ್ರಿಯೆಯಲ್ಲಿ ತೊಡಗಿದ್ದರು. ಕಾರಣ ಪ್ರಾಚೀನ ಕುಲುಮೆಯ ಅವಶೇಷಗಳು ದೊರೆತಿದ್ದರೂ, ಅದಿರನ್ನು ಕರಗಿಸಿ ಶುದ್ಧೀಕರಿಸುವ ಉದ್ದೇಶ ಈ ಜನರಿಗಿದ್ದಿತೆಂಬುದು ಸ್ಪಷ್ಟವಾಗುವುದಿಲ್ಲ. ಆದರೆ ಕ್ರಿ.ಶ. ೧-೨ನೇ ಶತಮಾನಕ್ಕೆ ಸೇರಿದ ಜನವಾಸ್ತವ್ಯದ ಕುರುಹನ್ನು ಈ ನೆಲೆ ಹೊಂದಿರುವುದು ಸ್ಪಷ್ಟ. ಮುಖ್ಯವಾಗಿ, ಗ್ರಾಮೀಣ ಸಂಸ್ಕೃತಿಗೆ ಸೇರಿದ ಜನಸಾಮಾನ್ಯರ ದೈನಂದಿನ ಬದುಕನ್ನು ಚಿತ್ರಿಸುವಲ್ಲಿ ಕೆಲವು ವಿವರಗಳು ನೆರವಿಗೆ ಬರುತ್ತವೆ. ಪರೋಕ್ಷವಾಗಿ ಈ ಸ್ಥಳದಲ್ಲಿ ಶಾತವಾಹನಕಾಲೀನ ಸಂಸ್ಕೃತಿಯ ಪ್ರಭಾವ ಇದ್ದಿತೆಂಬುದಕ್ಕೆ ಸೂಚನೆ ದೊರಕುತ್ತದೆ. ಉದಾಹರಣೆಗೆ, ಶಾತವಾಹನ ಅರಸ ಹಾಲನ 'ಗಾಥಾಸಪ್ತಶತಿ'ಯಲ್ಲಿ ಚಿತ್ರಿತವಾದ ಜನಜೀವನ ನೋಟವನ್ನು ಇಲ್ಲಿಯೂ ಕಾಣಬಹುದೆಂಬ ಅಭಿಪ್ರಾಯವಿದೆ. ಧಾರ್ಮಿಕ ಮತ್ತು ಆರ್ಥಿಕ ಪರಿಸ್ಥಿತಿಗಳನ್ನು ಅರಿಯಲು ಅಗತ್ಯ ಮತ್ತು ಅವಶ್ಯವಿರುವುದಾಗಿದೆ.

ತಲಕಾಡು: ಶಾತವಾಹನ ನಿರ್ಮಿತಿಗಳು ಬೆಳಕಿಗೆ ಬಂದ ಬ್ರಹ್ಮಗಿರಿ, ಐಹೊಳೆ, ಪಟ್ಟದಕಲ್ಲು ಮೊದಲಾದ ಎಡೆಗಳ ಸಾಲಿಗೆ ಸೇರಿಸಲರ್ಹವಾದುದು ತಲಕಾಡು. ಮುಖ್ಯವಾಗಿ, ರೋಮನ್ ಸಂಪರ್ಕದ ಹಿನ್ನೆಲೆಯಲ್ಲಿ ಈ ನೆಲೆಗೆ ಮಹತ್ವವಿದೆ. ಈಚಿನ ವರ್ಷಗಳಲ್ಲಿ ತಲಕಾಡಿನಲ್ಲಿ ಕೈಗೊಳ್ಳಲಾದ ಪ್ರಾಚ್ಯ ಉತ್ಖನನಕಾರ್ಯದಿಂದ ಈ ಸಂಬಂಧದಲ್ಲಿ ಬಹಳಷ್ಟು ಮಾಹಿತಿ ಸಂಗ್ರಹಗೊಂಡಿದೆ. ಇಲ್ಲಿ ದೊರೆತ ಆದಿಚಾರಿತ್ರಿಕಯುಗದ ಮಣ್ಣಿನಪಾತ್ರೆಗಳ ತಯಾರಿಕೆಯಲ್ಲಿ, ಅಲಂಕಾರಿಕ ಮತ್ತು ಹೊಳಪಿನಲ್ಲಿ ವಿಶಿಷ್ಟವಾಗಿದ್ದು, ಈ ಕಾಲದ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಿವರಗಳ ವಿಶ್ಲೇಷಣೆಗೆ ಸಹಾಯಕವೆನಿಸಿವೆ. ಇಲ್ಲಿಯ ಕುಲುಮೆಯ ಕಾರ್ಯಾಗಾರದ ಅವಶೇಷಗಳಲ್ಲಿ ಪತ್ತೆಯಾದ ರೋಮನ್‌ನಾಣ್ಯದ ಹಿಂಭಾಗದ ಚಿತ್ರದಲ್ಲಿ ಸುಟ್ಟಮಣ್ಣಿನಮುದ್ರೆ ಹೊಂದಿರುವುದು ಮುಖ್ಯವಾದುದು. ಎಂ.ಎಸ್.ಕೃಷ್ಣಮೂರ್ತಿಯವರ ಪ್ರಕಾರ, ಈ ರೀತಿಯ ಮುದ್ರೆ ಪ್ರಾಚ್ಯಉತ್ಖನನವೊಂದರಲ್ಲಿ ದೊರೆತಿರುವುದು ಇಡೀ ಭಾರತದಲ್ಲಿಯೆ ಪ್ರಪ್ರಥಮ.[೨೩]

ರೋಮನ್ ಮುದ್ರೆಯಲ್ಲಿರುವ ವಿವರಗಳೆಂದರೆ, ಸ್ತ್ರೀಯೊಬ್ಬಳು ಪೀಠದಮೇಲೆ ಕುಳಿತಿದ್ದಾಳೆ. ಈಕೆಯ ಒಂದು ಕೈಯಲ್ಲಿ ಪೈರಿನ ಗೊಂಚಲು, ಮತ್ತೊಂದು ಕೈಯಲ್ಲಿ ರಾಜ ದಂಡವಿದೆ. ಚಿತ್ರದ ಮುಂಭಾಗ ಮತ್ತು ಹಿಂಭಾಗದಲ್ಲಿ ಲ್ಯಾಟಿನ್‌ಲಿಪಿಯಲ್ಲಿ 'ಮ್ಯಾಕ್ಸಿಮ್ ಪಾಂಟಿಫ್', ಅಂದರೆ 'ಪ್ರಧಾನ ಪುರೋಹಿತ' ಎಂಬ ಲಿಖಿತವಿದೆ. ರೋಮನ್ ಚಕ್ರವರ್ತಿ ಅವರ ಧರ್ಮದ ಪರಮೋಚ್ಚಪೀಠವನ್ನು ಸಹ ಜೊತೆಯಲ್ಲಿಯೆ ಅಲಂಕರಿಸುತ್ತಿದ್ದುದರಿಂದ ಅವರಿಗೆ ಈ ಬಿರುದಿತ್ತು. ಇಲ್ಲಿಯ ಸ್ತ್ರೀ ಬಹುಮಟ್ಟಿಗೆ ಲಿವಿಯಾ ಆಗಿರಬಹುದು. ಈಕೆ ಚಕ್ರವರ್ತಿ ಅಗಸ್ಟಸ್(ಕ್ರಿ.ಪೂ.೨೭-ಕ್ರಿ.ಶ.೧೪)ನ ಮೊದಲನೇ ಹೆಂಡತಿ ಮತ್ತು ಟೈಬೀರಿಯಸ್‌ನ ತಾಯಿ. ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ, ಈ ನಾಣ್ಯಮುದ್ರೆ ಅಗಸ್ಟಸ್‌ನ ನಾಣ್ಯದ ನಕಲಿಮುದ್ರೆಯಾಗಿದೆಯೆಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ.[೨೪]

ರಾಜಗಟ್ಟ: ಬೆಂಗಳೂರು ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿರುವ ಪುಟ್ಟ ಗ್ರಾಮ ರಾಜಗಟ್ಟವಾಗಿದ್ದು ದೊಡ್ಡಬಳ್ಳಾಪುರದಿಂದ ಸುಮಾರು ೮ ಕಿ.ಮೀ. ಅಂತರದಲ್ಲಿ ನಂದಿಗೆ ಹೋಗುವ ಮಾರ್ಗದ ಮಧ್ಯದಲ್ಲಿದೆ. ಆದಿಚಾರಿತ್ರಿಕಕಾಲದ ನಿವೇಶನವಾಗಿ ಗುರುತಿಸಲ್ಪಟ್ಟಿರುವ ರಾಜಗಟ್ಟ, ಕರ್ನಾಟಕದ ದಕ್ಷಿಣಭಾಗದಲ್ಲಿಯ ಗಮನಾರ್ಹ ನೆಲೆಯೆನ್ನುವುದರಲ್ಲಿ ಅನುಮಾನವಿಲ್ಲ. ಅಲ್ಲದೆ, ಉತ್ತರ ಮತ್ತು ದಕ್ಷಿಣಭಾಗಗಳ ವ್ಯಾಪಾರಮಾರ್ಗವನ್ನು ಗುರುತಿಸುವಲ್ಲಿ ಸಹಕಾರಿಯಾಗಿದೆ. ಶಾತವಾಹನಕಾಲೀನ ಸಂಸ್ಕೃತಿಯ ಕುರುಹುಗಳನ್ನು ಸ್ಪಷ್ಟವಾಗಿ ಹೊಂದಿಲ್ಲದಿದ್ದರೂ ಬೌದ್ಧಧರ್ಮದ ಅವಶೇಷಗಳು ಇಲ್ಲಿ ಕಂಡುಬಂದಿರುವ ಪ್ರಯುಕ್ತ ಈ ನಿವೇಶನದ ಬಗೆಗೆ ಪುನರ್ ವ್ಯಾಖ್ಯಾನಿಸುವ ಅಗತ್ಯ ಕಂಡುಬರುತ್ತದೆ. ಈ ನಿವೇಶನದಲ್ಲಿ ತಪಾಸಣೆ ನಡೆಸಿದ ಮೈಸೂರು ನಾಗರಾಜಶರ್ಮರವರು ಅವರು ಸಂಗ್ರಹಿಸಿದ ಪ್ರಾಚ್ಯಾವಶೇಷಗಳಲ್ಲಿ ಕೆಂಪುಲೇಪಿತ ಹೊಳಪಿನ ಅಗಲಬಾಯಿಯ ಬೋಗುಣಿಗಳು, ಹೂಜೆಯ ಪ್ರಣಾಳಗಳು, ಹಿಡಿಕೆಯುಳ್ಳ ಮುಚ್ಚಳಗಳು ಮುಖ್ಯವಾದುದಾದರೆ,

ಗಾಜಿನಮಣಿಗಳು, ಅರೆಪ್ರಶಸ್ತ ಶಿಲೆಗಳು, ಲೋಹ ಕರಗಿಸುವ ಮಣ್ಣಿನಮೂಸೆಗಳು ಇತ್ಯಾದಿಗಳು ಲಭ್ಯವಾಗಿವೆ. ಸನ್ನತಿ, ಚಂದ್ರವಳ್ಳಿ, ಬ್ರಹ್ಮಗಿರಿ ಮೊದಲಾದ ಪ್ರಸಿದ್ಧ ಸ್ಥಳಗಳಲ್ಲಿ ದೊರೆತ ವಸ್ತುಗಳನ್ನು ಇವು ಹೋಲುತ್ತವೆನ್ನುವುದು ಮುಖ್ಯ. ಇಲ್ಲಿ ಪತ್ತೆಯಾದ ಇಟ್ಟಿಗೆಯ ಕಟ್ಟಡವೊಂದು ಅತ್ಯಂತ ದೊಡ್ಡ ಅಳತೆಯ (೪೦x೨೦x೬ ಸೆಂ.ಮೀ.) ಇಟ್ಟಿಗೆಗಳಿಂದ ಕೂಡಿದ್ದು, ಆದಿಚರಿತ್ರ ಕಾಲದ ಇಟ್ಟಿಗೆಗಳಿಗೆ ಬಹು ಸಮೀಪವಾಗಿದೆ.[೨೫] ಈ ಇಟ್ಟಿಗೆಯ ಕಟ್ಟಡ ಬೌದ್ಧಚೈತ್ಯಾಲಯದ ತಳಪಾಯವಾಗಿದ್ದಿರಬೇಕೆಂಬುದನ್ನು ಆ ನಂತರದ ಅಧ್ಯಯನಗಳು ದೃಢಪಡಿಸಿವೆ.

ರಾಜಗಟ್ಟ ನಿವೇಶನದಲ್ಲಿ ಕೈಗೊಳ್ಳಲಾದ ಹೊಸ ಉತ್ಖನನದಲ್ಲಿ ಹಲವಾರು ನೂತನಾಂಶಗಳು ಬೆಳಕಿಗೆಬಂದಿವೆ. ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸಿದ ಎಂ.ಎಸ್.ಕೃಷ್ಣಮೂರ್ತಿ ಮತ್ತು ಎಂ.ಪಿ. ಮಹದೇವಯ್ಯರವರ ಪ್ರಕಾರ, ಈ ನಿವೇಶನದಲ್ಲಿ ಲಭಿಸಿರುವ ಬೌದ್ಧಧರ್ಮದ ಪಳೆಯುಳಿಕೆಗಳು ಕ್ರಿ.ಶ.೪-೬ನೇ ಶತಮಾನಕ್ಕೆ ಸೇರಿದುವು.[೨೬] ಈ ಸಂಶೋಧಕರು ಭಾವಿಸುವಂತೆ, ರಾಜಗಟ್ಟ ಎಂಬ ಹೆಸರೇ ಪ್ರಾಯಶಃ ಈ ಪ್ರದೇಶಕ್ಕೆ ಔತ್ತರೇಯ ಬೌದ್ಧಸಂಸ್ಕೃತಿಯ ಕೊಡುಗೆಯಾಗಿ ಬಂದುದು. ಉತ್ತರದಿಂದ ದಕ್ಷಿಣಕ್ಕೆ ಬಂದ ಬೌದ್ಧಧರ್ಮದ ಹಿನ್ನೆಲೆಯನ್ನು ಗಮನಿಸಿದರೆ, ಈ ಬೌದ್ಧಧರ್ಮೀಯರು ಮೊದಲಿಗೆ ವಾರಣಾಸಿ ಬಳಿಯ ರಾಜಘಟ್ಟ ಪ್ರದೇಶದಲ್ಲಿ ನೆಲಸಿದ್ದಿರಬಹುದು. ಆದ್ದರಿಂದಲೇ ಉತ್ತರದ ರಾಜಗೃಹ, ರಾಜಘಾಟ್ ಮೊದಲಾದ ಊರುಗಳ ಹೆಸರನ್ನೇ ಅವರು ಇಲ್ಲಿಯೂ ಬಳಸಿದ್ದಿರಬೇಕು. ದಕ್ಷಿಣಕರ್ನಾಟಕದ ಸ್ಥಳನಾಮಗಳ ಪೈಕಿ ಇದೊಂದು ಅಪರೂಪದ ಹೆಸರೆನ್ನುವುದರಲ್ಲಿ ಸಂಶಯವಿಲ್ಲ. ರಾಜಗಟ್ಟದಲ್ಲಿ ದೊರೆತ ಬೌದ್ಧಾವಶೇಷಗಳ-ಅದರಲ್ಲೂ ಮುಖ್ಯವಾಗಿ, ಇಲ್ಲಿ ಕಾಣಿಸಿಕೊಂಡಿರುವ ಬೌದ್ಧಚೈತ್ಯಾಲಯದ ತಳವಿನ್ಯಾಸದ ಆಧಾರದಿಂದ ಹೇಳುವುದಾದರೆ, ಇಲ್ಲಿದ್ದ ಬೌದ್ಧಧರ್ಮೀಯರು ಬಹುಮಟ್ಟಿಗೆ ಮಹಾಯಾನಪಂಥದವರಾಗಿದ್ದಿರಬೇಕು. ರಾಜಗಟ್ಟ ಪರಿಸರದ ಬೂದಿಗುಂಡಿ ಎನ್ನುವ ಪ್ರದೇಶಕ್ಕೆ ಹೊಂದಿಕೊಂಡಂತಹ ನಿವೇಶನದಲ್ಲಿ ನಡೆಸಲಾದ ಉತ್ಖನನದಲ್ಲಿ ಈ ಚೈತ್ಯಾಲಯದ ಅವಶೇಷ ಕಂಡುಬಂದಿದ್ದು, ಇದು ಬಹುದೊಡ್ಡ ಆಕಾರದ ಸುಟ್ಟ ಇಟ್ಟಿಗೆಗಳಿಂದ ನಿರ್ಮಾಣಗೊಂಡುದು ವಿಶೇಷ. ಇಂಥಾ ಇಟ್ಟಿಗೆಗಳು ಕರ್ನಾಟಕದ ಆದಿಚಾರಿತ್ರಿಕ ಸಂಸ್ಕೃತಿಯ ನೆಲೆಗಳಲ್ಲಿ, ಮುಖ್ಯವಾಗಿ ಶಾತವಾಹನ ಮತ್ತು ಗಂಗರ ಕಟ್ಟಡಗಳಲ್ಲಿ ಬಳಸಿರುವ ಇಟ್ಟಿಗೆಗಳ ಆಕೃತಿ ಮತ್ತು ಗಾತ್ರಗಳಿಗೆ ಸಮನಾಗಿರುವುದು ಇನ್ನೊಂದು ವಿಶಿಷ್ಟ ಅಂಶವಾಗಿದೆ.

ಬೌದ್ಧ ಚೈತ್ಯಾಲಯವೇ ರಾಜಗಟ್ಟದ ಪ್ರಮುಖ ಅವಶೇಷ. ಈ ರಚನೆಗೆ ಸಂಬಂಧಿಸಿದ ವಿವಿಧ ವಿವರಗಳನ್ನು ಗಮನಿಸಿದರೆ, ಅಲಂಕರಣೆಯ ದೃಷ್ಟಿಯಿಂದ ಇದು ಅತ್ಯಂತ ಸುಂದರವೂ ಆಕರ್ಷಕವೂ ಆಗಿರುವಂತಹದ್ದು. ದಕ್ಷಿಣಕ್ಕೆ ಮುಖಮಾಡಿಕೊಂಡಿರುವ ಈ ಚೈತ್ಯಾಲಯ, ತಳವಿನ್ಯಾಸದ ಒಳಮುಖದಲ್ಲಿ ಲಾಳಾಕಾರವಾಗಿ, ಹೊರಮುಖದಲ್ಲಿ ಚತುರಸ್ರಾಕಾರವಾಗಿದ್ದು ಸುತ್ತಲೂ ಚತುರಸ್ರಾಕಾರವಾಗಿರುವ ಪ್ರದಕ್ಷಿಣಪಥ ಮತ್ತು ಅದರ ಸುತ್ತಲೂ ಅದೇ ರೀತಿಯ ಹೊರಗೋಡೆಗಳಿಂದ ಕೂಡಿದೆ. ಈ ಕಟ್ಟಡ ಬೌದ್ಧಚೈತ್ಯಾಲಯವೆಂದು ಭಾವಿಸಲು ಇಲ್ಲಿ ದೊರೆತ ಕೆಲವು ಅವಶೇಷಗಳು ಮತ್ತು ಕಟ್ಟಡದ ತಳವಿನ್ಯಾಸವೆ ಆಧಾರವಾಗಿದೆ.

ಅಚ್ಚಿನಿಂದ ಮಾಡಲಾದ ನೂರಾರು ಸಂಖ್ಯೆಯಲ್ಲಿರುವ ಮಣ್ಣಿನ ಸಣ್ಣ ಸಣ್ಣ ಸ್ತೂಪಗಳು ರಾಜಗಟ್ಟ ಉತ್ಖನನದಲ್ಲಿ ದೊರೆತ ಮುಖ್ಯ ಬೌದ್ಧಾವಶೇಷಗಳಾಗಿದ್ದು, ಇವುಗಳನ್ನು ಹರಕೆಯ ಸ್ತೂಪಗಳೆಂದು ಗುರುತಿಸಲಾಗುತ್ತದೆ. ತನ್ನೊಳಗೆ ಸಣ್ಣದಾದ ಮಣ್ಣಿನ ಪಾತ್ರೆಯ ಒಂದು ಬಿಲ್ಲೆಯನ್ನು ಹೊಂದಿದ್ದು ಇಲ್ಲಿಯ ಪ್ರತಿಯೊಂದು ಮಣ್ಣಿನಸ್ತೂಪವು ವಿಶೇಷ. ಅಲ್ಲದೆ, ಈ ಮಣ್ಣಿನ ಪಾತ್ರೆಗಳ ಮೇಲೆ ಒಂದೇ ರೀತಿಯಾದ ಬ್ರಾಹ್ಮೀಲಿಪಿ ಮತ್ತು ಪ್ರಾಕೃತಮಿಶ್ರಿತ ಸಂಸ್ಕೃತ ಭಾಷೆಯಲ್ಲಿರುವ ಬೌದ್ಧಧ್ಯಾನಶ್ಲೋಕವನ್ನು ಅಚ್ಚೊತ್ತಿರುವುದಾಗಿದೆ. ದಕ್ಷಿಣಕರ್ನಾಟಕದಲ್ಲಿ ಬೌದ್ಧಧರ್ಮದ ಅವಶೇಷಗಳು ಬಹುವಿರಳವಾಗಿ ಕಂಡುಬಂದಿರುವ ಹಿನ್ನೆಲೆಯಲ್ಲಿ, ರಾಜಗಟ್ಟದ ಉತ್ಖನನದಲ್ಲಿ ದೊರೆತ ಬೌದ್ಧಾವಶೇಷಗಳಿಗೆ ಮಹತ್ವವಿದೆ. ಬೌದ್ಧಧರ್ಮದ ಇತಿಹಾಸ, ವಾಸ್ತುಶಿಲ್ಪ ಹಾಗೂ ಸಂಪ್ರದಾಯಗಳ ದೃಷ್ಟಿಯಿಂದಲೂ ಇವು ಮುಖ್ಯವೆನಿಸುತ್ತವೆ. ಅದರಲ್ಲೂ ಈ ಪ್ರದೇಶದಲ್ಲಿ ಪ್ರಥಮಬಾರಿಗೆ ಬೌದ್ಧ ಚೈತ್ಯಾಲಯ ಮತ್ತು ಮಣ್ಣಿನಸ್ತೂಪಗಳು ಬೆಳಕಿಗೆ ಬಂದಿದೆ. ದಕ್ಷಿಣ ಕರ್ನಾಟಕದಲ್ಲಿಯೂ ಪ್ರಾಚೀನಕಾಲದಲ್ಲಿ ಬೌದ್ಧಧರ್ಮ ನೆಲೆಸಿದ್ದಿತೆಂಬುದಕ್ಕೆ ಆಧಾರವೆನಿಸಿವೆ.

ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ, ರಾಜಗಟ್ಟ ಬೃಹತ್‌ಶಿಲಾಸಂಸ್ಕೃತಿಯ ನೆಲೆಯಾಗಿದ್ದಂತೆಯೇ ಆದಿಚಾರಿತ್ರಿಕಕಾಲದ, ಅಂದರೆ ಪ್ರವರ್ಧಮಾನವಾದ ಬೌದ್ಧಧರ್ಮದ ನೆಲೆಯೂ ಆಗಿದ್ದಿತೆನ್ನುವುದು ಸ್ಪಷ್ಟಪಡುತ್ತದೆ. ಹಾಗೆಯೆ, ಶಾತವಾಹನಕಾಲೀನ ಸಂಸ್ಕೃತಿ ನೆಲೆಗೊಂಡಿದ್ದ ನಿವೇಶನವೂ ಆಗಿದ್ದಿತೆಂಬುದನ್ನು ಸೂಕ್ಷ್ಮವಾಗಿ ನಿರ್ಧರಿಸುತ್ತದೆ. ಈ ಪರಂಪರೆ ಕ್ರಿ.ಶ.೪-೬ನೇ ಶತಮಾನದವರೆಗೂ ಮುಂದುವರೆದುದನ್ನು ರಾಜಗಟ್ಟ ಉತ್ಖನನ ನೆಲೆಯಲ್ಲಿ ನೋಡಬಹುದು.

ಐಹೊಳೆ : ಬಾಗಲಕೋಟೆ ಜಿಲ್ಲೆ, ಹುನಗುಂದ ತಾಲ್ಲೂಕಿನ ಐಹೊಳೆ ನಿವೇಶನವನ್ನು ಪ್ರಸ್ತಾಪಿಸುವುದರೊಡನೆ ಇದೇ ಜಿಲ್ಲೆಯ ಬಾದಾಮಿ ಮತ್ತು ಪಟ್ಟದಕಲ್ಲು (ಬಾದಾಮಿ ತಾಲ್ಲೂಕು) ನಿವೇಶನಗಳನ್ನೂ ಗಮನಿಸುವುದು ಅನಿವಾರ್ಯ. ಬಾದಾಮಿಯ ಪ್ರಾಚೀನ ಸಾಂಸ್ಕೃತಿಕ ಪರಿಸರವನ್ನು ಹಳೇಶಿಲಾಯುಗ, ಸೂಕ್ಷ್ಮಶಿಲಾಯುಗ ಮತ್ತು ಶಿಲಾ-ತಾಮ್ರ ಯುಗದಷ್ಟು ಹಿಂದಕ್ಕೆ ತಳ್ಳಿದರೆ, ಐಹೊಳೆ ಪರಿಸರವನ್ನು ಬೃಹತ್‌ಶಿಲಾಯುಗ ಮತ್ತು ಆದಿ ಇತಿಹಾಸಕಾಲದ್ದೆಂದು ಗುರುತಿಸಲಾಗುತ್ತದೆ. ಪಟ್ಟದಕಲ್ಲಿನ ಪಟ್ಟಿಗಳಲ್ಲಿ ದೊರಕುವ ತಾಮ್ರ ಲೋಹದಿಂದಾಗಿ ಈ ಪರಿಸರವನ್ನು ತಾಮ್ರತಯಾರಿಕೆಯ ಘಟಕವಾಗಿಯೂ ಗುರುತಿಸುವುದು ಸುಲಭ. ಐಹೊಳೆ-ಬಾದಾಮಿಗಳಂತೆಯೆ ಪಟ್ಟದಕಲ್ಲು ಸಹ ಚರಿತ್ರಾರಂಭಕಾಲದ ನೆಲೆ. ಮುಖ್ಯವಾಗಿ, ಈ ಮೂರೂ ನೆಲೆಗಳಲ್ಲಿ ಶಾತವಾಹನ ನಿರ್ಮಿತಿಗಳು ಕಂಡುಬಂದಿವೆ.

ಬಾದಾಮಿ ಸುತ್ತಮುತ್ತಲ್ಲಿ ಶಾತವಾಹನಕಾಲೀನ ಸಾಂಸ್ಕೃತಿಕ ಅವಶೇಷಗಳು ದೊರೆತಿವೆ. ಕ್ರಿ.ಶ.ಸು.೧೫೦ರಲ್ಲಿ ಟಾಲೆಮಿ ರಚಿಸಿದ 'ಎ ಗೈಡ್ ಟು ಜಿಯಾಗ್ರಫಿ'ಯಲ್ಲಿ, ಆ ವೇಳೆಗೆ ದಕ್ಷಿಣ ಭಾರತದಲ್ಲಿ ಪ್ರಸಿದ್ಧವೆನಿಸಿದ್ದ ವಾಣಿಜ್ಯಕೇಂದ್ರಗಳ ಪೈಕಿ ಕರ್ನಾಟಕದ ಬಾದಾಮಿ ಮತ್ತು ಪಟ್ಟದಕಲ್ಲುಗಳನ್ನು ಪ್ರಸ್ತಾಪಿಸಲಾಗಿದೆ. ಈ ಕಾರಣಕ್ಕೆ ಇವು ಜನವಾಸ್ತವ್ಯದ ನಗರನೆಲೆಗಳಾಗಿ ಬೆಳೆದುದು ಸಹಜ. ಶಾತವಾಹನಕಾಲೀನ ನಗರಗಳನ್ನು ಗುರುತಿಸುವಾಗ ಬಾದಾಮಿಯನ್ನು

‘ವೈಜಯಂತಿ’ಯೆಂದು ಕರೆಯಲಾಗಿದೆ. ಬಾದಾಮಿ-ಐಹೊಳೆ-ಪಟ್ಟದಕಲ್ಲುಗಳಲ್ಲಿ ಶಾತವಾಹನಕಾಲೀನ ನಗರಗಳಿದ್ದ ಕುರುಹುಗಳು ಪತ್ತೆಯಾಗಿವೆ.

ಐಹೊಳೆ-ಪಟ್ಟದಕಲ್ಲುಗಳಲ್ಲಿ ಚಾಲುಕ್ಯಪೂರ್ವಕಾಲದ ನೆಲೆಗಳ ಮೇಲೆ ಕಲ್ಲಿನಿಂದ ಕಟ್ಟಿದ ಚಾಲುಕ್ಯರ ಕಟ್ಟಡಗಳಿದ್ದರೂ ಅವುಗಳ ಕೆಳಗಿರುವ ಅವಶೇಷಗಳು ಇಟ್ಟಿಗೆಯಿಂದ ಕಟ್ಟಿದ ಕಟ್ಟಡಗಳೆಂಬುದು ಮತ್ತು ಅವು ಶಾತವಾಹನ-ಕದಂಬರಕಾಲದ ನಗರಸಂಸ್ಕೃತಿಯ ಪ್ರತೀಕಗಳೆಂಬುದು ಗಮನಾರ್ಹ. ಪಟ್ಟದಕಲ್ಲಿನ ಸಂಗಮೇಶ್ವರಗುಡಿಯ ಮುಂದೆ ಕಂಬಗಳಿಂದ ಕೂಡಿದ ಇಟ್ಟಿಗೆಯ ಮಂಟಪವಿದ್ದುದು ಬೆಳಕಿಗೆ ಬಂದಿತಲ್ಲದೆ, ಇಲ್ಲಿಯ ಗಳಗನಾಥಗುಡಿಯ ಸಮೀಪದಲ್ಲಿ ಶಾತವಾಹನಕಾಲದ ಪಾತ್ರೆಗಳೂ ದೊರೆತವು. ಶಾತವಾಹನ ಕಾಲದಿಂದಲೂ ಪಟ್ಟದಕಲ್ಲು, ದೇವಾಲಯಗಳ ಕೇಂದ್ರವಾಗಿತ್ತು. ವಾಸ್ತುರಚನೆಗೆ ಇಟ್ಟಿಗೆಗಳನ್ನು, ಆ ನಂತರ ಕಲ್ಲುಗಳನ್ನು ಮಾಧ್ಯಮವಾಗಿ ಬಳಸಿದ್ದುದು ವ್ಯಕ್ತಪಡುತ್ತದೆ. ಭೌಗೋಳಿಕಸ್ಥಾನದ ದೃಷ್ಟಿಯಿಂದ ಐಹೊಳೆ-ಬಾದಾಮಿ-ಪಟ್ಟದಕಲ್ಲುಗಳು ವಾಣಿಜ್ಯ ಮಾರ್ಗಗಳಲ್ಲಿ ನೆಲಸಿರುವುದು ಅಂದಿನ ಮುಖ್ಯ ಸಂಗತಿಯಾಗಿದೆ.

ಐಹೊಳೆಯ ಅಂಬಿಗೇರಗುಡಿಯ ಕೆಳಸ್ತರದಲ್ಲಿ ಶೋಧಿಸಲಾದ ಆಯತಾಕಾರದ ತಳವಿನ್ಯಾಸದ ಇಟ್ಟಿಗೆ ದೇವಾಲಯ ಮತ್ತು ಶಾತವಾಹನರಕಾಲದ ಮಡಿಕೆಯಚೂರುಗಳು; ಹಾಗೂ ಹುಚ್ಚಪ್ಪಯ್ಯಮಠದ ಸಂಕೀರ್ಣದಲ್ಲಿ ನಡೆಸಲಾದ ಭೂಶೋಧನೆಯಲ್ಲಿ ದೊರೆತ ಶಾತವಾಹನರ ನಾಣ್ಯಗಳು ಮತ್ತು ಮೃತ್ಪಾತ್ರೆಚೂರುಗಳು ಈ ಪ್ರದೇಶಗಳೊಡನಿದ್ದ ಶಾತವಾಹನರ ಸಂಬಂಧವನ್ನು ಇನ್ನಷ್ಟು ದೃಢೀಕರಿಸುತ್ತವೆ. ಐಹೊಳೆಯಲ್ಲಿ ದೊರೆತ ಸೀಸದ ನಾಣ್ಯಗಳು ಚಂದ್ರವಳ್ಳಿ, ಬನವಾಸಿ, ಕಾರವಾರ ಮೊದಲಾದೆಡೆಗಳಲ್ಲಿ ದೊರೆತಿರುವ ಶಾತವಾಹನ ಮಹಾರಥಿಗಳ ನಾಣ್ಯಗಳಂತಹವೇ. ಇವುಗಳ ಕಾಲಮಾನ ಕ್ರಿ.ಶ. ೧ ರಿಂದ ೩ನೇ ಶತಮಾನ. ಚಟಕನ, ಸಡಕಣ ಮಹಾರಥಿ, ಸಡಕಣ ಮಹಾರಥಿಪುತ, ಮಹಾರಥಿ-ಹೀಗೆ ಒಟ್ಟು ನಾಲ್ವರು ಮಹಾರಥಿಗಳ ಹೆಸರುಗಳುಳ್ಳ ಪ್ರತ್ಯೇಕ ನಾಣ್ಯಗಳಿವಾಗಿವೆ.

ಬಾಗಲಕೋಟೆ ಜಿಲ್ಲೆ, ಜಮಖಂಡಿ ತಾಲ್ಲೂಕಿನ ಹಿಪ್ಪರಗಿ, ಬಿಜಾಪುರ ಜಿಲ್ಲೆ, ಇಂಡಿ ತಾಲ್ಲೂಕಿನ ತದ್ದೇವಾಡಿ ಮತ್ತು ಮುದ್ದೇಬಿಹಾಳ ತಾಲ್ಲೂಕು ಮಸ್ಕನಾಳ್‌ಗಳಲ್ಲಿ ಶಾತವಾಹನ ಕಾಲೀನ ನಾಣ್ಯಗಳು ದೊರೆತಿರುವುದನ್ನು ಇಲ್ಲಿ ಪ್ರಸ್ತಾಪಿಸಬಹುದು. ಹಿಪ್ಪರಗಿಯಲ್ಲಿ ದೊರೆತ ನಾಣ್ಯಗಳು ತಾಮ್ರದವಾಗಿದ್ದು, ‘ಸಿರಿ ಸತಕಣಿಸ’, ‘ವಾಸಿಠಿಪುತಸ ಪುಳುಮಾವಿಸ’ ಮುಂತಾದ ಶಾತವಾಹನ ಅರಸರ ಹೆಸರುಗಳನ್ನೊಳಗೊಂಡಿವೆ. ಇಂಡಿ ತಾಲ್ಲೂಕಿನ ಕಾತ್ರಾಳದಲ್ಲಿ ರೋಮನ್ ನಾಣ್ಯಗಳು ದೊರೆತಿದ್ದು ಇವುಗಳಲ್ಲೊಂದು ಕ್ರಿ.ಶ. ೫ನೇ ಶತಮಾನದಲ್ಲಿದ್ದ ಬೈಜಾಂಟಿಯನ್ ದೊರೆ ಒಂದನೇ ಲಿಯೋ ಎಂಬವನಿಗೆ ಸೇರಿದುದಾಗಿದೆ.

ಐಹೊಳೆ-ಬಾದಾಮಿ ಪರಿಸರದಲ್ಲಿ ಬಹುಹಿಂದೆಯೆ ಬೌದ್ಧಧರ್ಮ ನೆಲಸಿದ್ದಿತು. ಸುವರ್ಣಗಿರಿ-ಇಸಿಲಗಳಂತೆ ಐಹೊಳೆ-ಬಾದಾಮಿಗಳೂ ಬೌದ್ಧಕೇಂದ್ರಗಳಾಗಿದ್ದುದನ್ನು ಗುರುತಿಸಲಾಗಿದೆ. ಈ

ಪರಿಸರದಲ್ಲಿ ಮಹಾಯಾನ ಸಂಪ್ರದಾಯ ಪ್ರಚಲಿತದಲ್ಲಿದ್ದಿತೆಂಬುದಕ್ಕೆ ಇಲ್ಲೆಲ್ಲ ಲಭ್ಯವಿರುವ ಬುದ್ಧಶಿಲ್ಪ ಮೊದಲಾದ ಅವಶೇಷಗಳೇ ಸಾಕ್ಷಿ. ಐಹೊಳೆಯಲ್ಲಿ ಆ ನಂತರವೂ ಬೌದ್ಧಚೈತ್ಯಾಲಯಗಳ ನಿರ್ಮಾಣಕಾರ್ಯ ಮುಂದುವರೆಯಿತು. ಇಲ್ಲಿಯ ಮೇಗುತಿಬೆಟ್ಟದ ಉತ್ತರದ ಮಧ್ಯದಲ್ಲಿ ಕಂಡುಬರುವ ಬೌದ್ಧಚೈತ್ಯವು ಬೌದ್ಧವಿಹಾರವೂ ಆಗಿದ್ದಿತು. ಕ್ರಿ.ಶ.೭ನೇ ಶತಮಾನದಲ್ಲಿ ಬಂಡೆಯಲ್ಲಿ ಕೊರೆದು ಮೂಡಿಸಲಾದ ಬೌದ್ಧಚೈತ್ಯಾಲಯ ಹಾಗೂ ಬುದ್ಧಶಿಲ್ಪಗಳು ಈ ಪರಂಪರೆ ಮುಂದುವರೆದುದಕ್ಕೆ ಉದಾಹರಣೆ. ಐಹೊಳೆಯ ಬುದ್ಧಮೂರ್ತಿಗಳು ಕ್ರಿ.ಶ.ಸು.೫-೬ನೇ ಶತಮಾನದ ಆದಿಕದಂಬರಕಾಲದವೆಂದು ಗುರುತಿಸಲಾಗುತ್ತದೆ. ಚಾಲುಕ್ಯರ ಅಧೀನದ ಬಾದಾಮಿಯಲ್ಲಿ ಆಗ ಇನ್ನೂ ಜೀವಂತವಾಗಿದ್ದ ಬೌದ್ಧಧರ್ಮ ಕುರಿತ ವಿವರಣೆಯು ಹ್ಯೂಯೆನ್‌ತ್ಸಾಂಗನ ವೃತ್ತಾಂತದಿಂದ ತಿಳಿದುಬರುವುದು. ಹಾಗೆಯೇ, ರಾಜಧಾನಿಯ ಬಳಿಯೇ ಪೂರ್ವದಿಕ್ಕಿನಲ್ಲಿ ಅಶೋಕವನವೊಂದು ಇದ್ದ ಸೂಚನೆ ಸಹಾ ದೊರಕುತ್ತದೆ. ಇಲ್ಲಿ ಬುದ್ಧ ಉಪದೇಶ ನೀಡಿದ್ದನೆಂಬುದು ಪ್ರತೀತಿಯಿದೆ. ಒಟ್ಟಿನಲ್ಲಿ, ಐಹೊಳೆ-ಬಾದಾಮಿ- ಪಟ್ಟದಕಲ್ಲುಗಳು ಶಾತವಾಹನಕಾಲೀನ ಸಂಸ್ಕೃತಿಯ ಕೇಂದ್ರಗಳಾಗಿದ್ದು ವೆಂಬುದನ್ನು ಗಮನಿಸಬಹುದು.[೨]

ಬೆಳ್ವಾಡಗಿ: ಶಾತವಾಹನಕಾಲೀನ ಇತರೆ ನಿವೇಶನಗಳ ಪೈಕಿ ಗುಲ್ಬರ್ಗಾ ಜಿಲ್ಲೆ, ಚಿತ್ತಾಪುರ ತಾಲ್ಲೂಕಿನ ಬೆಳ್ವಾಡಗಿ (ಬಲ್ವಾಡಿಗಿ) ಶಾತವಾಹನರ ನೆಲೆಯಾಗಿ ಗುರುತಿಸಲ್ಪಟ್ಟಿದೆ. ಇಲ್ಲಿ ದೊರೆತ ಉಬ್ಬುಶಿಲ್ಪ ವಿಶೇಷವಾಗಿದ್ದು, ರಾಣಿಯ ಛಾಯಾಪ್ರತಿಮಾ ಎಂದು ಇದನ್ನು ಕರೆದಿದೆ. ಇದು ದೊರೆತಿರುವುದು ಬೆಳ್ವಾಡಗಿಯಿಂದ ಸುಮಾರು ೩ ಕಿ.ಮೀ. ದೂರದಲ್ಲಿನ ಸನ್ನತಿಯಲ್ಲಿ ದೊರೆತಿರುವ ಶಿಲಾಫಲಕಗಳ ಶಿಲ್ಪಲಕ್ಷಣಗಳೆ ಈ ಛಾಯಾ ಪ್ರತಿಮೆಶಾಸನದಲ್ಲಿಯೂ ಕಂಡುಬರುತ್ತವೆ. ಈ ಶಿಲ್ಪವು ಒಂದುಸಾಲಿನ ಶಾಸನ ಹೊಂದಿದೆ. ಆಸನದಲ್ಲಿ ಕುಳಿತಿರುವ ದಂಪತಿಗಳಲ್ಲಿ ಪುರುಷನ ಹೆಸರನ್ನು ಕಲಕ ಎಂದು ಈ ಶಾಸನ ತಿಳಿಸುತ್ತದೆ. ದಂಪತಿಗಳ ಬಳಿಯಲ್ಲಿ ಚಾಮರಧಾರಿಣಿಯೋರ್ವಳು ನಿಂತಿದ್ದಾಳೆ. ಕೆಳಭಾಗದಲ್ಲಿ ನೊಗಬಿಚ್ಚಿದ ಗಾಡಿ ಮತ್ತು ಎತ್ತುಗಳನ್ನು ಬಿಡಿಸಲಾಗಿದ್ದು, ಗಾಡಿಯ ಹಿಂಭಾಗದಲ್ಲಿ ಒಂದು ಪ್ರಾಣಿ ನಿಂತಂತಿದೆ. ಕಲಕನು ಪ್ರಯಾಣದಲ್ಲಿ ಮಡಿದನೆಂಬುದನ್ನು ಸಾಂಕೇತಿಕವಾಗಿ ತೋರಿಸುವ ಉದ್ದೇಶ ಇರುವಂತಿದೆ. ಸನ್ನತಿಯ 'ನಂದಿವಿಶಾಲಜಾತಕ' ನಿರೂಪಿಸುವ ಶಿಲ್ಪಫಲಕದಲ್ಲಿ ನಿರೂಪಿಸಲಾಗಿರುವ ಎತ್ತಿನಗಾಡಿಯ ಚಿತ್ರಣದೊಡನೆ ಈ ಶಿಲ್ಪವನ್ನು ಹೋಲಿಸಬಹುದು. ಗಾಡಿ-ಎತ್ತುಗಳ ಚಿತ್ರಣ ಆ ಕಾಲದ ಸಂಪರ್ಕ ಸಾಧನಗಳ ಮೇಲೆ ವಿಶೇಷ ಬೆಳಕು ಚೆಲ್ಲುವಂತಹದ್ದೆಂಬುದರಲ್ಲಿ ಸಂದೇಹವಿಲ್ಲ.

ಬೆಳ್ವಾಡಗಿ ಶಾಸನದಲ್ಲಿಯ 'ಕಲಕ' ಎಂಬ ವ್ಯಕ್ತಿ ವಾಚಕದಲ್ಲಿ ಕನ್ನಡದ ಪ್ರಕೃತಿ 'ಕಲ್' ಎಂಬುದಿದೆಯೆನ್ನುವ ಭಾಷಾತಜ್ಞರು, ಇನ್ನಿತರ ಉದಾಹರಣೆಗಳ ಹಿನ್ನೆಲೆಯಲ್ಲಿ, ಇವೆಲ್ಲ ಕನ್ನಡದ ಅಸ್ತಿತ್ವವನ್ನು ಸಿದ್ಧಪಡಿಸುವ ನಿಸ್ಸಂದಿಗ್ಧ ಪುರಾವೆಗಳೆನ್ನುತ್ತಾರೆ.

ಹಾಗೆಯೇ, ಭೀಮಾನದಿಯ ದಂಡೆಯ ಸಾಲಿನಲ್ಲಿ ನಡೆಸಲಾದ ಪುರಾತತ್ವ ಅನ್ವೇಷಣೆಯಲ್ಲಿ ಇದೇ ಜಿಲ್ಲೆಯ ಹಲವು ವಸತಿನೆಲೆಗಳು ಶಾತವಾಹನಕಾಲದವೆಂದು ದೃಢಪಟ್ಟಿದ್ದು, ಚುರುಸುಗುಂಡಿ ನೆಲೆಯು ಇವುಗಳಲ್ಲೊಂದಾಗಿದೆ.

ಹಾರಣಗೇರಿ: ಗುಲ್ಬರ್ಗಾ ಜಿಲ್ಲೆ, ಶಹಾಪುರ ತಾಲ್ಲೂಕಿಗೆ ಸೇರಿದ ಹಾರಣಗೇರಿಯು ಶಾತವಾಹನಕಾಲೀನ ಸಂಸ್ಕೃತಿಯ ಕುರುಹುಗಳನ್ನು ಹೊಂದಿದೆ. ಸನ್ನತಿ, ಶಿರವಾಳ, ಅಣವಿ, ಹುರಸಗುಂಡಗಿ ಗ್ರಾಮಗಳ ಆಸುಪಾಸಿನಲ್ಲಿರುವ ಹಾರಣಗೇರಿ ಸಹಜವಾಗಿಯೆ ಶಾತವಾಹನ ಪರಿಸರಕ್ಕೆ ಸೇರಿದ ನಿವೇಶನ. ಗ್ರಾಮದ ಹೊರವಲಯದ ಇಂಗನಾಳು ಎಂಬ ಬೇಚರಾಕ್‌ಗ್ರಾಮದ ವ್ಯಾಪ್ತಿಯಲ್ಲಿ ಹರಿಯುವ ಸಣ್ಣಹೊಳೆಯ ದಡದಲ್ಲಿ ಕಂಡುಬರುವ ಪ್ರಾಚೀನ ಜನವಸತಿಯ ಕುರುಹುಗಳು ಈ ಸಂಸ್ಕೃತಿಯ ಕಾಲಕ್ಕೆ ಸೇರಿದವೆಂಬುದನ್ನು ಇಲ್ಲಿ ದೊರೆತಿರುವ ಶಾತವಾಹನರ ನಾಣ್ಯಗಳು ಸಮರ್ಥಿಸುತ್ತವೆ. ದಾಕ್ಷಿಣಾತ್ಯ ಬ್ರಾಹ್ಮಿಲಿಪಿಯಲ್ಲಿ 'ರಾಞೋ ಗೋತಮಿಪುತಸ ಸಿರಿ ಸಾತಕಣಿಸ' ಎಂಬ ಬರಹ ಹೊಂದಿರುವ ಈ ನಾಣ್ಯಗಳು ಗೌತಮಿಪುತ್ರ ಸಿರಿ ಶಾತಕರ್ಣಿಯವು. ಶಾತವಾಹನರ ನಾಣ್ಯಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಸ್ತೂಪ ಮತ್ತು ಉಜ್ಜೈನ್‌ಚಿಹ್ನೆಗಳನ್ನು ಇವು ಹೊಂದಿದ್ದು ಕೊಂಕಣ, ಸೌರಾಷ್ಟ್ರ, ಮಾಳವ, ಬಿರಾರ್, ಕೃಷ್ಣಾನದಿಯ ಮುಖಜಭೂಮಿ ಮೊದಲಾದ ಪ್ರದೇಶಗಳ ಮೇಲೆ ಒಡೆತನ ಸ್ಥಾಪಿಸಿದ್ದ ಹಾಗೂ 'ತ್ರಿಸಮುದ್ರತೋಯ ಪೀತವಾಹನ' ಎಂಬ ಬಿರುದುಹೊಂದಿದ್ದ ಶಾತವಾಹನ ಅರಸನೆ ಗೌತಮಿಪುತ್ರ ಸಿರಿ ಶಾತಕರ್ಣಿಯಾಗಿದೆ.

ಪಿಕ್ಲಿಹಾಳ: ಪಿಕ್ಲಿಹಾಳ ಸಹಾ ಶಾತವಾಹನಕಾಲೀನ ಗ್ರಾಮೀಣ ಜೀವನದ ನೆಲೆಗಳಲ್ಲೊಂದು. ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನಲ್ಲಿ. ಆದಿಇತಿಹಾಸಕಾಲದ ಜನಸಾಮಾನ್ಯರ ದೈನಂದಿನ ಜೀವನವನ್ನು ಸ್ಥೂಲವಾಗಿಯಾದರೂ ಪರಿಚಯಿಸುವ ನಿಟ್ಟಿನಲ್ಲಿ ಇದೊಂದು ಪರಿಗಣನಾರ್ಹ ನೆಲೆ. ಗದಗ ಜಿಲ್ಲೆ, ನರಗುಂದ ತಾಲ್ಲೂಕಿನ ಶಾಸನದಲ್ಲಿ ವಾಶಿಷ್ಠಿಪುತ್ರ ಪುಳುಮಾವಿ ಕಾಲದ ಶಾಸನ ದೊರೆತಿದ್ದು ಶಾತವಾಹನ ನೆಲೆಯಾಗಿದ್ದಿತೆನ್ನಲಡ್ಡಿಯಿಲ್ಲ. ಇದೇ ಅರಸನ ಕಾಲದಲ್ಲಿ ನಿರ್ಮಾಣವಾದ ಚಂಡಶಿವ ದೇವಾಲಯ ಆಗ ಪ್ರಚಲಿತವಿದ್ದ ಶೈವಾರಾಧನೆಯ ಪ್ರತೀಕವಾಗಿ ನಿಲ್ಲುವಂತದ್ದಾಗಿದ್ದು ಈ ದೇವಾಲಯ ನಿರ್ಮಾಣ ಕುರಿತು ತಿಳಿಸುತ್ತದೆ ಇಲ್ಲಿರುವ ವಾಶಿಷ್ಠಿಪುತ್ರ ಪುಳುಮಾವಿಯ ಶಾಸನವು ಶೈವಧರ್ಮ ಮತ್ತು ಶಿವದೇವಾಲಯ ನಿರ್ಮಾಣದ ಬಗೆಗೆ ತಿಳಿಸುವ ಅತ್ಯಂತ ಪ್ರಾಚೀನತೆಯ ಸಾಕ್ಷ್ಯವೆಂಬ ಹೆಗ್ಗಳಿಕೆಗೆ ಈ ಶಾಸನ ಪಾತ್ರವೆನಿಸಿದೆ. ಈ ಶಾಸನಸ್ತಂಭದ ವಿಶೇಷತೆಯೆಂದರೆ, ಪದ್ಮಪುಷ್ಪದಿಂದ ಸರಳವಾಗಿ ಅಲಂಕೃತಗೊಂಡಿದ್ದರೂ ಮುಖ್ಯವಾಗಿ, ವಿದ್ವಾಂಸರು ಅಭಿಪ್ರಾಯಿಸುವಂತೆ, ಪುರಾಣಗಳ ಪ್ರಕಾರ ಯಜ್ಞಶ್ರೀ ಶಾತಕರ್ಣಿಯ ನಂತರ ವಿಜಯ, ಚಂಡಶ್ರೀ ಮತ್ತು ಪುಲೋಮರು ಆಳ್ವಿಕೆ ನಡೆಸಿದರು. ಆದರೆ ಇವರ ಬಗೆಗೆ ಬೇರೇನೂ ತಿಳಿದುಬಂದಿಲ್ಲ.

ಶಾತವಾಹನ ಅರಸುಮನೆತನದ ಪುಲೋಮ ಕೊನೆಯ ಅರಸನಾಗಿದ್ದಾನೆ. ಮ್ಯಾಕೆದೋಣಿ ಶಾಸನದ ಸಿರಿಪುಳುಮಾವಿ, ಬನವಾಸಿ ಮತ್ತು ಸನ್ನತಿಯ ವಾಶಿಷ್ಠಿಪುತ್ರ ಸಿರಿ ಪುಳುಮಾವಿಯರ ಸಾಲಿಗೆ ಸೇರಿಸಬಹುದಾದ ವಾಸನದ ವಾಶಿಷ್ಠಿಪುತ್ರ ಪುಳುಮಾವಿ ಪುರಾಣದ ಪುಲೋಮನೆ ಆಗಿರಬಹುದು. ಬಹುಶಃ ಇವನು ಚಂಡಶ್ರೀಯ ಮಗನೆಂದು ವಾಸನದ ಶಾಸನದಲ್ಲಿಯ

ಚಂಡಶಿವ ದೇವಾಲಯದ ಉಲ್ಲೇಖದ ಆಧಾರದಿಂದ ಹೇಳಬಹುದು. ಬಹುಶಃ ಈ ದೇವಾಲಯವನ್ನು ಈತ ತನ್ನ ತಂದೆಯ ಹೆಸರಿನಲ್ಲಿ ಕಟ್ಟಿಸಿರುವ ಸಾಧ್ಯತೆಯಿದೆ.

ಮ್ಯಾಕೆದೋಣಿ: ಮ್ಯಾಕೆದೋಣಿ ನೆಲೆ ಇರುವುದು ಬಳ್ಳಾರಿ ಜಿಲ್ಲೆಯಲ್ಲಿ. 'ದಕ್ಷಿಣಾ ಪಥೇಶ್ವರ'ನೆಂದು ಹೊಗಳಿಸಿಕೊಂಡ ಶಾತವಾಹನರ ಅರಸ ವಾಶಿಷ್ಠಿಪುತ್ರ ಪುಳುಮಾವಿಯ ಕಾಲದ ಶಾಸನ ಇಲ್ಲಿ ದೊರೆತಿರುವುದರಿಂದ ಈ ಪ್ರದೇಶವೂ ಶಾತವಾಹನರಿಗೆ ಸೇರಿದ್ದಿತೆಂಬುದು ದೃಢಪಡುತ್ತದೆ. ಹಾಗಾಗಿ ಶಾತವಾಹನಕಾಲೀನ ಸಂಸ್ಕೃತಿ ಇಲ್ಲಿ ನೆಲೆಗೊಂಡಿದ್ದುದು ಸಹಜವೇ. ಚರ್ಚಾಸ್ಪದವಾಗಿಯೆ ಉಳಿದಿರುವುದು ಶಾತವಾಹನ ಅರಸರ ವಂಶದ ಮೂಲಸ್ಥಳದ ಬಗೆಗೆ ಬೆಳಕುಚೆಲ್ಲುವ ದಿಶೆಯಲ್ಲಿ ಮ್ಯಾಕೆದೋಣಿ ಶಾಸನವು ಈ ವಿಧವಾಗಿ ಬೆಳಕು ಚೆಲ್ಲಿ ಸ್ವಲ್ಪಮಟ್ಟಿಗೆ ಆಶಾದಾಯಕವಾಗಿದೆಯೆಂಬುದು ಗಮನಾರ್ಹ.

ಕುರುಗೋಡು: ಶಾತವಾಹನಕಾಲೀನ ಸಂಸ್ಕೃತಿಯ ಕುರುಹುಗಳನ್ನು ಹೊಂದಿರುವ ಇನ್ನೊಂದು ನಿವೇಶನವೆಂದರೆ ಬಳ್ಳಾರಿ ತಾಲ್ಲೂಕಿನ ಕುರುಗೋಡು. ಇಲ್ಲಿ ಈ ಸಂಸ್ಕೃತಿಗೆ ಸೇರಿದ ಮಡಿಕೆ ಚೂರುಗಳು ಹಾಗೂ ಬಣ್ಣದಕುಂಚದಲ್ಲಿ ಬರೆಯಲಾದ ಸುಂದರ ಬ್ರಾಹ್ಮೀಶಾಸನ ಬೆಳಕಿಗೆ ಬಂದಿವೆ. ಈ ಪರಿಸರದಲ್ಲಿ ಬೌದ್ಧಧರ್ಮ ಮುಂದುವರೆದುಕೊಂಡು ಬಂದಿದ್ದಿತೆನ್ನುವುದನ್ನು ಇಲ್ಲಿಯ ವಾಸ್ತುಶಿಲ್ಪಗಳು ಸಮರ್ಥಿಸುತ್ತವೆ.

ತಾಳಗುಂದ: ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕಿಗೆ ಸೇರಿದ ಶಾತವಾಹನ ಸಂಸ್ಕೃತಿಯ ಕುರುಹುಗಳುಳ್ಳ ಎಡೆಗಳ ಪೈಕಿ ತಾಳಗುಂದ, ಬಳ್ಳಿಗಾವೆ ಮತ್ತು ತೊಗರ್ಸೆಗಳು ಮುಖ್ಯವಾದುವು. ತಾಳಗುಂದ ಅಥವಾ ಸ್ಥಾನಕುಂದೂರಿನ ಆದಿಕದಂಬ ಅರಸ ಶಾಂತಿವರ್ಮನ ಸ್ತಂಭಶಾಸನದಲ್ಲಿ ಉಲ್ಲೇಖಿತನಾದ ಶಾತಕರ್ಣಿ ಎಂಬ ಅರಸನ ಬಗೆಗೆ ವಿಚಾರಮಾಡಿರುವ ವಿದ್ವಾಂಸರು, ತಾಳಗುಂದದ ಭವ ಅಥವಾ ಮಹಾದೇವ ದೇವಾಲಯವನ್ನು ಸಂದರ್ಶಿಸಿ ಪೂಜೆ ಸಲ್ಲಿಸಿದವನೆಂದು ಈ ಶಾಸನದ ಆಧಾರದಿಂದ ಹೇಳುತ್ತಾರೆ. ಅಂದರೆ ಶಾತಕರ್ಣಿ ನಮನ ಸಲ್ಲಿಸಿದುದು ಇಲ್ಲಿಯ ಪ್ರಣವೇಶ್ವರಲಿಂಗಕ್ಕೆ ಎಂಬುದು ಸ್ಪಷ್ಟಪಡುವ ಅಂಶ. ಶಾತಕರ್ಣಿ ಬಹುಮಟ್ಟಿಗೆ ಯಾರೂ ಆಗಿರದೆ ಗೌತಮಿ ಶಾತಕರ್ಣಿಯೇ ಎಂದು ಖಚಿತವಾಗಿಯೆ ಹೇಳಬಹುದೆನ್ನಲಾಗುತ್ತದೆ. ಅಂದರೆ ಶಾತವಾಹನರ ನೇರ ಆಡಳಿತಕ್ಕೆ ಉತ್ತರಕರ್ನಾಟಕ ಒಳಪಟ್ಟುದು ಇವನ ಕಾಲದಲ್ಲಿಯೆ ಎಂಬುದು ಮುಖ್ಯ

ತಾಳಗುಂದದ ದೊಣನಗುಡ್ಡದ ಮೇಲೆ ಯಕ್ಷನ ಭಗ್ನಶಿಲ್ಪವೊಂದು ದೊರೆತಿದ್ದು, ಅದರ ಅಲಂಕರಣೆ, ಕೇಶಾಲಂಕಾರ, ಮೂರ್ತಿಶಿಲ್ಪ ಲಕ್ಷಣಗಳೆಲ್ಲ ಶಾತವಾಹನ-ಕದಂಬಪೂರ್ವ ಶೈಲಿಯಲ್ಲಿವೆ. ಅಲ್ಲದೆ, ಪ್ರಣವೇಶ್ವರ ದೇವಾಲಯದ ಬಳಿ ಶಾತವಾಹನಕಾಲದ ದೊಡ್ಡ ಇಟ್ಟಿಗೆಚೂರುಗಳು ದೊರೆತಿವೆ.

ಬಳ್ಳಿಗಾವೆ: ತಾಳಗುಂದಕ್ಕೆ ಸಮೀಪವಿರುವ ಬಳ್ಳಿಗಾವೆಯ ಪ್ರಾಚೀನತೆಯನ್ನು ಶಾತವಾಹನರ ಕಾಲದಿಂದಲೆ ಆರಂಭಿಸಬಹುದೆನ್ನುವುದಕ್ಕೆ ಇಲ್ಲಿ ಲಭ್ಯವಾಗಿರುವ ಆ ಕಾಲದ ಅವಶೇಷಗಳೇ

ಸಾಕ್ಷಿ ನುಡಿಯುತ್ತವೆ. ಹಿಂದೆ ಇಲ್ಲಿ ಬೌದ್ಧವಿಹಾರಗಳಿದ್ದುದು, ಭೂ ಶೋಧನೆಗಳಿಂದ ದೃಢಪಟ್ಟಿದೆ. ಇಲ್ಲಿಯ ಮಳೆಮಲ್ಲೇಶ್ವರ ಅಥವಾ ಚತುರ್ಮುಖ ಲಿಂಗವಿರುವ ಪ್ರದೇಶದಲ್ಲಿ ಕಂಡುಬಂದಿರುವ ದೊಡ್ಡಇಟ್ಟಿಗೆಗಳು ಮತ್ತು ಮಡಿಕೆಚೂರುಗಳು ಶಾತವಾಹನರ ಕಾಲಕ್ಕೆ ಸೇರಿದುವು. ಇಲ್ಲಿ ವಿಪುಲವಾಗಿ ದೊರಕಿರುವ ಬೌದ್ಧಧರ್ಮದ ಅವಶೇಷಗಳು ಈ ನಿಟ್ಟಿನಲ್ಲಿ ಸಹಾಯಮಾಡುತ್ತವೆ.

ಹಾಗೆಯೇ ತೊಗರ್ಸೆಯು ಕ್ರಿ.ಶ.೨-೩ನೇ ಶತಮಾನದ ಬೌದ್ಧ ದೀಪಸ್ತಂಭದ ನೆಲೆಯಾಗಿ ಗಮನ ಸೆಳೆಯುವ ಇದು ತಾಳಗುಂದ ಸಮೀಪದಲ್ಲೆ ಇರುವ ನಿವೇಶನವಾಗಿದ್ದು ಬುದ್ಧ ಮತ್ತು ಕುಬ್ಜಯಕ್ಷರ ಶಿಲ್ಪವಿರುವ ಇಲ್ಲಿಯ ದೀಪಸ್ತಂಭ ಈ ಪರಿಸರದಲ್ಲಿ ಪ್ರಚಲಿತವಿದ್ದ ಬೌದ್ಧಧರ್ಮದ ಪ್ರತೀಕದಂತಿದೆ.

ಅನುವನಹಳ್ಳಿ: ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ತಾಲ್ಲೂಕಿನ ಅನುವನಹಳ್ಳಿ ಪರಿಸರ ಶಾತವಾಹನಕಾಲೀನ ಸಂಸ್ಕೃತಿಯ ಎಡೆಯೆಂದು ಗುರುತಿಸಲು ಕೆಲವು ಆಧಾರಗಳು ಲಭ್ಯವಿವೆ. ಸಂಶೋಧಕರು ಗುರುತಿಸುವಂತೆ, ಪ್ರಮುಖ ಶಾತವಾಹನ ನೆಲೆಗಳಾದ ಬನವಾಸಿ ಮತ್ತು ಚಂದ್ರವಳ್ಳಿ ಪ್ರದೇಶಗಳ ಮಧ್ಯದಲ್ಲಿ ಅನುವನಹಳ್ಳಿ ನೆಲೆ ಪತ್ತೆಯಾಗಿರುವುದು ಹೆಚ್ಚಿನ ಸಂಶೋಧನೆಗೆ ಅವಕಾಶ ಕಲ್ಪಿಸಿದೆ; ಹಾಗೂ ಈ ನೆಲೆಗಳಿಗೆ ಇರುವ ಪರಸ್ಪರ ಸಂಬಂಧಗಳ ಮೇಲೆ ಹೊಸಬೆಳಕು ಹಾಯಿಸಿದಂತಾಗಿದೆ. ಇಲ್ಲಿ ದೊರೆತಿರುವ ಅವಶೇಷಗಳು ದೃಢಪಡಿಸುವಂತೆ, ಇಲ್ಲಿ ಆಳಿದವರು ಚುಟು ರಾಜವಂಶಸ್ಥರು. ಇವರ ಕಾಲದ ಮಡಿಕೆ-ಕುಡಿಕೆ, ಮಣಿ ಇತ್ಯಾದಿಗಳು ಈ ಪರಿಸರದಲ್ಲಿ ದೊರೆತಿವೆ. ಈ ಮಡಿಕೆಯ ಚೂರುಗಳು ಕೆವಲಿನ್ ಪೈಂಟಡ್ ಹಾಗೂ ರಸೆಟ್ ಕೋಟೆಡ್‌ಗಳಿಂದ ಕೂಡಿದ್ದು ಇವುಗಳ ಮೇಲೆ ಕ್ರಿಸ್‌ಕ್ರಾಸ್ ಮತ್ತು ಡಾಬ್ ಮಾದರಿಯಲ್ಲಿ ಹಾಗೂ ಡಾಟ್‌ಗಳಿಂದ ಗೆರೆಗಳನ್ನು ಮೂಡಿಸಲಾಗಿದೆ. ಬ್ರಹ್ಮಗಿರಿ, ಚಂದ್ರವಳ್ಳಿ, ಬನವಾಸಿ, ಪಿಕ್ಲಿಹಾಳ, ಮಸ್ಕಿ, ವಡಗಾಂವ್- ಮಾಧವಪುರ, ಸನ್ನತಿ, ಐಹೊಳೆ, ಪಟ್ಟದಕಲ್ಲು, ಕುರುಗೋಡು, ಹೆಮ್ಮಿಗೆ, ತಿ. ನರಸೀಪುರ ಮತ್ತು ತಲಕಾಡು ಉತ್ಖನನಗಳಲ್ಲಿ ದೊರೆತ ಇತಿಹಾಸಾರಂಭಕಾಲದ ಮಡಿಕೆಯಚೂರುಗಳನ್ನೆ ಇವು ಹೋಲುತ್ತವೆ. ನಾ.ಶಿ.ರಂಗರಾಜು ಅಭಿಪ್ರಾಯಿಸುವಂತೆ, "ಈ ಸಂಸ್ಕೃತಿಯ ಅವಶೇಷಗಳು ಕರ್ನಾಟಕದ ಉತ್ತರಭಾಗದಲ್ಲಿ ವಿಶೇಷವಾಗಿ ದೊರೆತಿದ್ದರೂ ಸದ್ಯದ ಸಂಶೋಧನೆಯಿಂದ ದಕ್ಷಿಣಕರ್ನಾಟಕದ ಭಾಗಗಳಲ್ಲೂ ಕಂಡುಬಂದಿರುವುದು ಸಂಶೋಧನ ಯೋಗ್ಯವಾದ ಅಂಶ". ಈ ಅವಶೇಷಗಳು ಈ ಪ್ರದೇಶದಲ್ಲಿ ಹೆಚ್ಚಿನ ಸಂಶೋಧನೆ ನಡೆಸುವ ಸಾಧ್ಯತೆ ಕುರಿತು ಸೂಚನೆ ನೀಡುತ್ತವೆ.

ಈ ನಿವೇಶನದಲ್ಲಿ ಶೋಧವಾಗಿರುವ ಕೆಲವು ಸೀಸದನಾಣ್ಯಗಳು ಈ ರಾಜವಂಶದ ಕುಲಾನಂದನಿಗೆ ಸೇರಿದುವು ಎಂಬುದಕ್ಕೆ ಸಾಕ್ಷಿಯಾಗಿ ನಾಣ್ಯದ ಮುಂಬದಿಯಲ್ಲಿ ಎಂಟು ಕಮಾನುಗಳುಳ್ಳ ಬೆಟ್ಟವಿದ್ದು, ಸುತ್ತಲೂ ಬ್ರಾಹ್ಮಿಲಿಪಿಯಲ್ಲಿ ಚುಟುಕುಲಾನಂದನ ಹೆಸರನ್ನು ಮೂಡಿಸಲಾಗಿದೆ. ಚುಟುವಂಶಕ್ಕೆ ಸೇರಿದ ಇಂತಹ ನಾಣ್ಯಗಳು ಕಾರವಾರ, ಬನವಾಸಿ, ಚಂದ್ರವಳ್ಳಿ

ಮೊದಲಾದ ಪ್ರದೇಶಗಳಲ್ಲಿ ದೊರೆತಿದ್ದರೂ ಈ ಭಾಗದಲ್ಲಿ ಇದೇ ಮೊದಲಬಾರಿಗೆ ಈ ತರಹದ ನಾಣ್ಯಗಳು ಬೆಳಕಿಗೆ ಬಂದಿರುವುದು ಗಮನಾರ್ಹ. ಹಾಗೆಯೆ, ಆರಂಭಕಾಲದ ಶಾತವಾಹನ ಅರಸರದೆನ್ನಬಹುದಾದ ಹಾಗೂ ಸಾಕಷ್ಟು ಸವೆದ ಅಥವಾ ಬರಹವಿಲ್ಲದ ಇನ್ನೊಂದು ಸೀಸದನಾಣ್ಯವೂ ಕಂಡುಬಂದಿದೆ. ಈ ರೀತಿಯ ಬರಹವಿಲ್ಲದ ಶಾತವಾಹನ ನಾಣ್ಯಗಳು ಸನ್ನತಿಯಲ್ಲಿ ದೊರಕಿದ್ದು, ಕರ್ನಾಟಕದಲ್ಲಿ ಶಾತವಾಹನರ ಪ್ರಾಚೀನತೆಯನ್ನು ಹಿಂದಕ್ಕೆ ಕೊಂಡೊಯ್ಯಲು ಸಹಕಾರಿಯಾಗಿವೆಯೆಂಬ ಅಭಿಪ್ರಾಯವೂ ಸಂಶೋಧಕರದ್ದಾಗಿದೆ.

ಅಲ್ಲದೆ, ಕರ್ನಾಟಕದಲ್ಲೆಲ್ಲ ಶಾತವಾಹನಕಾಲೀನ ಸಂಸ್ಕೃತಿಯ ಲಕ್ಷಣಗಳನ್ನು ಹೊಂದಿರುವ ನೂರಾರು ಎಡೆಗಳಿವೆ. ಕೆಲವನ್ನು ಸರ್ವೇಕ್ಷಣಕಾರ್ಯದಿಂದಲೂ ಗುರುತಿಸಲಾಗಿದೆ. ಉಳಿದ ಸಣ್ಣಪುಟ್ಟ ನಿವೇಶನಗಳ ಬಗೆಗೆ ವ್ಯವಸ್ಥಿತ ದಾಖಲೀಕರಣಕಾರ್ಯ ಮತ್ತು ಸಂಶೋಧನೆಗಳು ನಡೆಯುವುದು ಅಗತ್ಯ. ಮೌರ್ಯ ಮತ್ತು ಶಾತವಾಹನಕಾಲೀನ ಸಂಸ್ಕೃತಿಯ ನಿರ್ದಿಷ್ಟ ಸ್ವರೂಪವನ್ನು ನಿರ್ಧರಿಸುವುದರೊಡನೆ, ಕರ್ನಾಟಕ ಸಂಸ್ಕೃತಿಯ ಬೇರುಗಳು ಎಷ್ಟು ಆಳಕ್ಕಿಳಿದಿರಬಹುದೆಂಬ ಸ್ಪಷ್ಟ ಕಲ್ಪನೆ ಮತ್ತು ತಿಳಿವಳಿಕೆಗಳನ್ನು ಸಮಕಾಲೀನರಲ್ಲಿ ಮೂಡಿಸಲು ಇದರಿಂದ ತಕ್ಕಮಟ್ಟಿಗಾದರೂ ಸಾಧ್ಯವಾಗಬಹುದು ಎಂಬುದನ್ನು ಇಲ್ಲಿನ ಸಂಶೋಧಕರ ಅನ್ವೇಷಿತ ಫಲವಾಗಿದೆ.

ಚರಿತ್ರೆಯ ಅಧ್ಯಯನಕ್ಕೆ ಬಹುಮುಖ್ಯವಾಗಿ ಬೇಕಾದದ್ದು ಪುರಾತತ್ವ ಅಧ್ಯಯನವಾಗಿದೆ. ಶಾಸನಗಳಂತೆಯೆ ಆಯಾಯ ಪ್ರದೇಶದ ಆಯಾಯಕಾಲದ ಜನಸಮುದಾಯಗಳ ದೈನಂದಿನ ಜೀವನಕ್ಕೆ ಸಂಬಂಧಿಸಿದ ವಿವಿಧ ಪ್ರಕಾರಗಳ ವಸ್ತುಗಳ ವಾಸ್ತು ನಿರ್ಮಿತಿಗಳು, ಶಿಲ್ಪಗಳು ಮೊದಲಾದ ಪುರಾತತ್ವ ಅವಶೇಷಗಳು ಮುಖ್ಯ ಆಕರಗಳಲ್ಲಿ ಒಂದಾಗಿವೆ. ಈ ಆಕರಗಳು ಪ್ರಾಂತ್ಯದ ಯಥಾಸ್ಥಿತಿಯ ನಗರ, ಗ್ರಾಮ ವಿನ್ಯಾಸ ನಾನಾ ಪ್ರಕಾರದ ನಿರ್ಮಿತಿಗಳ ನಿರ್ಮಾಣ ತಂತ್ರ, ಕೈಗಾರಿಕ ತಂತ್ರಗಳು ಮೊದಲಾದ ಸಿದ್ಧವಸ್ತುಗಳ ಬಗ್ಗೆ ತಿಳಿಯಲು ಸಾಧ್ಯವಾಗುವುದಲ್ಲದೆ ಮಾನವರು ಈ ಭೂಮಿಯ ಮೇಲೆ ಕಾಣಿಸಿದಂದಿನಿಂದ ಬರವಣಿಗೆಯ ತಂತ್ರವನ್ನು ಕಲ್ಪಿಸಿಕೊಳ್ಳುವ ದೀರ್ಘಕಾಲೀನ ವಿಕಾಸ ಪ್ರಕ್ರಿಯೆಗಳ ಬೆಳವಣಿಗೆಗಳನ್ನು ತಿಳಿಸುತ್ತವೆ.

ಚಿತ್ರದುರ್ಗ : ಲಿಖಿತ ಆಕರಗಳ ಪೈಕಿ ಮೊತ್ತಮೊದಲ ದಾಖಲೆಗಳಾಗಿ ಶಾಸನಗಳು ಉಳಿದು ಬಂದಿದ್ದು, 'ಚಿತ್ರದುರ್ಗ'ದ ಪ್ರಾಚೀನ ಹೆಸರು 'ಬೆಂವತ್ತೂರು' ಹಾಗೂ 'ಬೆಂಮಚನೂರು' ಎಂಬ ಉಲ್ಲೇಖಗಳನ್ನು ಹೊಂದಿರುವ ಶಾಸನಗಳ ಕಾಲ ೧೧ನೇ ಶತಮಾನ. ಇದಕ್ಕೂ ಪೂರ್ವದಲ್ಲಿ 'ಸೂಳ್ಗಲ್ಲು' ಎಂಬುದರ ವಿನಾ ಚಿತ್ರದುರ್ಗ ಬೆಟ್ಟ ಮತ್ತು ಪರಿಸರಕ್ಕೆ ಇದ್ದ ಹೆಸರು ಕುರಿತು ಅಧಿಕೃತ ದಾಖಲೆಗಳಿಲ್ಲ. 'ಸೂಳ್ಗಲ್ಲು' ಎಂಬುದು ಸಹ ಈಗಿನ ಚಿತ್ರದುರ್ಗ ಬೆಟ್ಟ ಪರಿಸರದ ಭಾಗವೊಂದಕ್ಕೆ ಇದ್ದ ಹೆಸರೆಂದು ಈಗಾಗಲೇ ದೃಢಪಟ್ಟಿದೆ. ಈ ದೃಷ್ಟಿಯಿಂದ, ಬೆಂಮತ್ತೂರು ಅಥವಾ ಬೆಮಂಚನೂರು ಎಂಬುದು ಶಾಸನದಲ್ಲಿ ಉಲ್ಲೇಖಗೊಳ್ಳುವ ಪೂರ್ವದಲ್ಲೇ ಈ ಪರಿಸರದಲ್ಲಿ ಈ ಹೆಸರಿನ ಆಡುರೂಪಗಳು ಪ್ರಚಲಿತವಿದ್ದಿರುವ ಸಾಧ್ಯತೆ ಇಲ್ಲದಿಲ್ಲ. ಹಾಗಾದರೆ, ಅವು ಯಾವ ರೂಪದಲ್ಲಿದ್ದಿರಬಹುದು? ಎಷ್ಟು ಹಳೆಯವಿದ್ದಿರಬಹುದು?

ಕ್ರಿಸ್ತಶಕ ೨ನೇ ಶತಮಾನದವರೆಗೆ ಚಿತ್ರದುರ್ಗದಲ್ಲಿ ಅಧಿಕಾರ ಸ್ಥಾಪಿಸಿದ್ದವರು. ಶಾತವಾಹನ ಮಹಾರಥಿಗಳು, ಅವರ ಅವಧಿಯಲ್ಲಿ ಚಿತ್ರದುರ್ಗಕ್ಕೆ ಇದ್ದ ಹೆಸರಿನ ಬಗೆಗೆ ಲಿಖಿತ ಮಾಹಿತಿಯಿಲ್ಲ. ಆದರೆ ಚರಿತ್ರೆಪೂರ್ವ ಕಾಲದಿಂದಲೂ ಚಿತ್ರದುರ್ಗ ಬೆಟ್ಟ ಪರಿಸರ ಮಾನವನ ಆವಾಸ ಸ್ಥಾನವಾಗಿದ್ದು, ಶಾತವಾಹನರ ಆಳ್ವಿಕೆಯ ಹಂತದವರೆಗೆ ತಮ್ಮದೇ ನಾಗರಿಕತೆಯನ್ನು ರೂಪಿಸಿಕೊಂಡಿದ್ದುದಕ್ಕೆ ಪುರಾತತ್ವೀಯ ಆಧಾರಗಳಿವೆ. ಈ ಜನರೇ ಚಿತ್ರದುರ್ಗದ ಪ್ರಾಚೀನನಾಮದ ಸೃಷ್ಟಿಕರ್ತರೆನ್ನಲು ಅಡ್ಡಿಯಿಲ್ಲ.

ಸ್ಥಳನಾಮವೊಂದರ ಹುಟ್ಟುವಿಕೆಯಲ್ಲಿ ಪರಿಣಾಮ ಬೀರಿರಬಹುದಾದ ಆಯಾ ಪ್ರದೇಶದ ವೈಲಕ್ಷಣ್ಯಗಳನ್ನು ಗಮನಿಸಬೇಕಾದುದು ಅತ್ಯಂತ ಅವಶ್ಯ. ಬಟಬಯಲು ಸೀಮೆಗಳಲ್ಲಿಯ ಸ್ಥಳನಾಮ ಸೃಷ್ಟಿ ಪ್ರಕ್ರಿಯೆ ದಟ್ಟವಾದ ಕಾಡು-ಗುಡ್ಡಗಳಿಂದಾವೃತವಾದ ಪ್ರದೇಶಗಳಲ್ಲಿಯ ಸ್ಥಳನಾಮ ಸೃಷ್ಟಿ ಪ್ರಕ್ರಿಯೆಗಿಂತ ಭಿನ್ನವಾದುದು. ಈವರೆಗೆ ನಡೆದಿರುವ ಸ್ಥಳ ಮತ್ತು ವ್ಯಕ್ತಿನಾಮಗಳ ಅಧ್ಯಯನಗಳು ಇದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿದೆ. ಬೃಹತ್ ಗುಂಡುಗಳಿಂದ ಆವೃತಗೊಂಡು ವಿಸ್ತಾರವಾಗಿ ಹರಡಿರುವ ಚಿತ್ರದುರ್ಗ ಬೆಟ್ಟ ಪರಿಸರವನ್ನು ಸ್ಥಳನಾಮ ಅಧ್ಯಯನದ ದೃಷ್ಟಿಯಿಂದ ಈ ಹಿನ್ನೆಲೆಯಲ್ಲಿ ನೋಡುವುದು ಸೂಕ್ತ. ಪ್ರಸ್ತುತ ಪ್ರಬಂಧದಲ್ಲಿ ಭೂವೈಜ್ಞಾನಿಕ ಮತ್ತು ಪುರಾತತ್ವೀಯ ಸಂಶೋಧನೆಗಳಿಂದ ಶ್ರುತಪಟ್ಟಿರುವ ಸಂಗತಿಗಳನ್ನು ಆಧರಿಸಿ ಚಿತ್ರದುರ್ಗ ಪ್ರಾಚೀನ ನಾಮ ಕುರಿತ ಜಿಜ್ಞಾಸೆಯನ್ನು ಚರ್ಚಿಸಲು ಪ್ರಯತ್ನಿಸಿದೆ.

ಭೂವೈಜ್ಞಾನಿಕ ಶೋಧನೆಗಳ ಪ್ರಕಾರ, ನೈಸರ್ಗಿಕವಾಗಿ ಪ್ರಪಂಚದ ಕೇವಲ ಒಂಬತ್ತು ಭೂವಲಯಗಳಿಗೆ ಸೀಮಿತವಾದ ತೀರಾ ಹಳೆಯ ಶಿಲೆ ಚಿತ್ರದುರ್ಗದಲ್ಲಿ ಕಂಡುಬರುತ್ತದೆ. ಚಿತ್ರದುರ್ಗ ಉಪವರ್ಗವು ಧಾರವಾಡ ಶಿಲಾಸ್ತೋಮದ ಅತ್ಯಂತ ಕಿರಿಯ ಶಿಲಾವರ್ಗವಾಗಿದ್ದು, ಇದರ ಜಲಶಿಲಾ ಸಮುದಾಯ ಅಗ್ನಿಶಿಲೆಗಳೊಡಗೂಡಿ ಚಲಿತವಲಯ(ಮೊಬೈಲ್ ಬೆಲ್ಟ್) ಆಗಿದೆಯೆಂದು ವ್ಯಕ್ತಪಡುತ್ತದೆ. ಚಿತ್ರದುರ್ಗ ಬೆಟ್ಟ ಪಂಕ್ತಿಗಳಲ್ಲಿ ಗ್ರಾನೈಟ್ ಕಣಶಿಲೆ ಕಂಡುಬರುತ್ತದೆ.

ಭೂವಿಜ್ಞಾನಿಗಳು ರೇಡಿಯೋ ವಿಕಿರಣ ಧಾತುಗಳಿಂದ ಸ್ಪಷ್ಟಪಡಿಸಿಕೊಂಡಿರುವಂತೆ. ಚಿತ್ರದುರ್ಗ ಕಣಶಿಲೆಯ ವಯಸ್ಸು ೨೬೦ ಕೋಟಿ ವರ್ಷಗಳು. ೧೯೦೫ರಲ್ಲಿ ಮೈಸೂರು ಭೂಗರ್ಭ ವಿಜ್ಞಾನ ಪರಿವೀಕ್ಷಣ ಇಲಾಖೆಯ ಸಂಪತ್ತೈಯಂಗಾರ್‌ರವರು ಶ್ರುತಪಡಿಸಿದ ಸಿದ್ಧಾಂತದ ಪ್ರಕಾರ, ಚಿತ್ರದುರ್ಗ ಶಿಲಾಪ್ರೇರಿಕ 'ಜಲಜಶಿಲಾ ಸಂಚಯನ'ದಿಂದ ಉಂಟಾಗಿದೆ. ಈ ವಿನೂತನ ಸಿದ್ಧಾಂತ ಕರ್ನಾಟಕ ಭೂ ಇತಿಹಾಸಕ್ಕೆ ಒಂದು ಹೊಸ ತಿರುವು ನೀಡಿತಲ್ಲದೆ, ಭೂ ಇತಿಹಾಸಜ್ಞರಲ್ಲಿ ಹೊಸದೃಷ್ಟಿಯನ್ನೆ ಬೆಳೆಸಿತು. ಸಂಪತ್ತೈಯಂಗಾರ್‌ರವರ 'ಜಲಶಿಲೋದ್ಭವ ತತ್ವ'ವನ್ನು ಈಚಿನ ನೂರಾರು ಭೂವಿಜ್ಞಾನಿಗಳು ಸಮರ್ಥಿಸುವುದರೊಡನೆ ಇದಕ್ಕೆ ಹೊಸ ಸಾಕ್ಷ್ಯಗಳನ್ನು ಒದಗಿಸಿರುವರು.

ಜಲಾಶಿಲಾಸಂಚಯನ ಸಿದ್ಧಾಂತವು ಚಿತ್ರದುರ್ಗ ಜಿಲ್ಲೆ ೨೬೦ ಕೋಟಿ ವರ್ಷಗಳ ಹಿಂದೆ ಮಹಾಸಾಗರ ಅಥವಾ ಸಮುದ್ರದ ಕೆಳಭಾಗವಾಗಿದ್ದಿತೆಂಬುದನ್ನು ಹಾಗೂ ಈ ಜಿಲ್ಲೆಯ

ಶಿಲೆಗಳಾದ ಮರಳುಶಿಲೆ, ಪೆಂಡಿಶಿಲೆ, ಸುಣ್ಣ ಶಿಲೆ ಮತ್ತು ಜೇಡುಶಿಲೆಗಳು ಸಾಗರ ತಳದ ಮಹಾಕಂದರಗಳಲ್ಲಿ ಸಂಚಯಗೊಂಡಿವೆಂಬುದನ್ನು ಮೊತ್ತಮೊದಲಿಗೆ ಬೆಳಕಿಗೆ ತಂದಿತು. ಇದನ್ನು 'ಚಿತ್ರದುರ್ಗ ಪದರುಶಿಲಾವಲಯ' ಎಂದು ಕರೆಯಲಾಯಿತು. ಇದು ಮುಖ್ಯವಾಗಿ ಅಗ್ನಿಶಿಲೆ, ರೂಪಾಂತರ ಶಿಲೆ ಹಾಗೂ ಜಲಶಿಲೆಗಳಿಂದ ಕೂಡಿರುವಂತಹದ್ದು. ಈ ವಲಯ ೨೦ ರಿಂದ ೨೫ ಕಿಲೋಮೀಟರ್ ಅಗಲವಾಗಿ ಹಾಗೂ ಸುಮಾರು ೩೦ ರಿಂದ ೪೦ ಕಿಲೋಮೀಟರ್ ಆಳದಷ್ಟು ಮಂದವಾಗಿದೆ. ಹಾಗೆಯೆ ಇದು ಸುಮಾರು ೫೦ ಕಿಲೋಮೀಟರ್ ಉದ್ದವಿದ್ದು, ಚಿತ್ರದುರ್ಗದಿಂದ ಗದಗದವರೆಗೆ ಹಾಗೂ ದಕ್ಷಿಣಕ್ಕೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದವರೆಗೆ ಒಂದೇ ತೆರನಾದ ಶಿಲಾ ಓಟವುಳ್ಳ ಹಲವು ವಿಧದ ಪದರುಶಿಲೆಗಳಿಂದ ಕೂಡಿದೆ. ಜಲಶಿಲೆಯೇ ಹೆಚ್ಚಾಗಿರುವ ಈ ವಲಯದಲ್ಲಿ ಸುಣ್ಣಶಿಲೆ, ಕಬ್ಬಿಣಯುತ ಬೆಣಚುಶಿಲೆ, ಜೇಡುಶಿಲೆ, ಪೆಂಟಿಶಿಲೆ, ಮರಳು ಶಿಲೆಗಳು ಹೆಚ್ಚಾಗಿ ಕಂಡುಬರುತ್ತದೆ. ಚಿತ್ರದುರ್ಗ ಪರಿಸರದ ಶಿಲಾವರ್ಗ ಸಹವೂ ಇದೇ ತೆರನಾದುದು.

ಗಮನಾರ್ಹ ಅಂಶವೆಂದರೆ, ಚಿತ್ರದುರ್ಗದ ಸುತ್ತಮುತ್ತಲ ಪ್ರದೇಶಗಳಲ್ಲಿ ಚಿನ್ನದ ಸಿರಗಳು ಕಂಡುಬಂದಿದೆ. ಮುಖ್ಯವಾಗಿ ಚಿತ್ರದುರ್ಗ ಬೆಟ್ಟ ಪರಿಸರದ ಇಂಗಳದಹಾಳು ಮತ್ತು ಕುಂಚಿಗನಹಾಳು ಪ್ರದೇಶಗಳು ಅಗ್ನಿಶಿಲೆಗಳಲ್ಲಿಯ ಬೆಣಚು ಸಿರಬಳ್ಳಿಗಳ ವಲಯವಾಗಿದ್ದು, ತಾಮ್ರದ ಅದಿರು ಮತ್ತು ಚಿನ್ನವನ್ನು ಗಣಿ ಮಾಡಲಾಗುತ್ತಿದೆ.[೨೮]

ಈ ಹಿನ್ನೆಲೆಯಲ್ಲಿ, ಲಾಗಾಯ್ತಿನಿಂದಲೂ ಜನಪದರು ಚಿತ್ರದುರ್ಗ ಬೆಟ್ಟ ಪರಿಸರವನ್ನು 'ಚಿನ್ನದದುರ್ಗ'ವೆಂತಲೆ ಕರೆಯುತ್ತಾ ಬಂದಿರುವುದು ಗಮನಾರ್ಹ. ಉದಾ:- "ಚಿತ್ತರದ ಕಲ್ಲು ಎಂಬೋದು ಚಿನ್ನದಕೋಟೆ'; "ಚಿನ್ನ ಮುರಿದರೆ ಚಿನ್ನ ಚಿಗರೋದು; ಚಿನ್ನ ಮುರಿದರೆ ಚಿತ್ತರದ ಕಲ್ಲು" ಇತ್ಯಾದಿ. ಈಚಿನ ಸಾಹಿತ್ಯ ಕೃತಿ 'ಮರುಳಸಿದ್ಧಕಾವ್ಯ' (ದೇಪಕವಿಕೃತ)ದಲ್ಲೂ ಚಿತ್ರದುರ್ಗ ಬೆಟ್ಟವನ್ನು 'ಚಿನ್ನದಗಿರಿ ಪರ್ವತ'ವೆಂತಲೇ ಸಂಬೋಧಿಸಿದೆ. ಇವುಗಳ ಆಶಯ ಏನೇ ಇದ್ದರೂ ಚಿತ್ರದುರ್ಗದೊಡನೆ 'ಚಿನ್ನ'ವನ್ನು ಕಲ್ಪಿಸಿ ಗುರುತಿಸಿರುವುದು ಮುಖ್ಯವೆನಿಸುತ್ತದೆ.

ಈ ಹಿನ್ನೆಲೆಯಿಂದಲೂ ಚಿತ್ರದುರ್ಗ ಪರಿಸರದಲ್ಲಿ ನಡೆದ ಗಣಿಗಾರಿಕೆ ಪ್ರಸ್ತುತ ಅಧ್ಯಯನಕ್ಕೆ ಮಹತ್ವದ ಹಿನ್ನೆಲೆ ಒದಗಿಸುವಂತದ್ದಾಗಿದೆ. 'ಚಿನ್ನದಬೀಡು' ಎಂದೇ ಹೆಸರಾದ ಕೋಲಾರ ಹಾರನ್ ಬ್ಲೆಂಡ್ ಪದರಶಿಲೆಯಿಂದೊಡಗೂಡಿದ ಬೂದು ಬಣ್ಣದವು. ಹಾಗೆಯೆ, ಕ್ಲೋರೈಡಿನಿಂದ ಕೂಡಿದ ಹಸಿರುಕಲ್ಲುಗಳೊಡನಿರುವ ಬಿಳುಪು ಬೆಣಚಿನ ಸಿರಗಳು ಶಿವಮೊಗ್ಗ ಮತ್ತು ಚಿತ್ರದುರ್ಗ ಪ್ರದೇಶಗಳಲ್ಲಿ ಹರಡಿದ್ದು, ಈ ಎರಡು ಬಗೆಯ ಬೆಣಚಿನಲ್ಲಿಯು ಬಂಗಾರ ಬೆರೆತಿರುವುದು ವಿಶೇಷ.

ಈ ಕಾರಣದಿಂದ ಕೋಲಾರದ ಬಂಗಾರದ ಸಿರಗಳ ವಿಸ್ತಾರವನ್ನು ಗುರುತಿಸಲು ಬಹು ಹಿಂದೆಯೇ ಗಣಿ ಇಂಜನಿಯರರರು ಮತ್ತು ಭೂಗರ್ಭಶಾಸ್ತ್ರಜ್ಞರು ಈ ಭಾಗಗಳಲ್ಲೆಲ್ಲ ಸಂಚರಿಸಿರುವುದು ದಾಖಲುಗೊಂಡಿದೆ. ಉದಾ:- ೧೮೮೮ರಲ್ಲಿ ರಾಬಟ್ ಬ್ರೂಸ್‌ಫುಟ್ ಹಾಗೂ

೧೮೮೮ರಲ್ಲಿ ಕೋಲಾರದ ಬಂಗಾರದ ಅದುರಿನ ಕ್ಷೇತ್ರದ ವಿಸ್ತಾರವನ್ನು ಶೋಧಿಸಲು ಮರ್ವಿನ್‌ಸ್ಮಿತ್ ಎಂಬ ಗಣಿ ಇಂಜಿನಿಯರೂ ಇಲ್ಲಿಗೆ ಬಂದಿದ್ದರು.

ಒಟ್ಟಿನಲ್ಲಿ, ಬಂಗಾರ ಸೇರಿರುವ ಬೆಣಚಿನ ಸಿರಗಳು ಚಿತ್ರದುರ್ಗ ಪರಿಸರದಲ್ಲೂ ಕಂಡು ಬಂದಿರುವುದು; ಹಾಗೂ ಇಂಗಳದಹಾಳು ಮರಡಿಯ ಬೋಳುಗುಡ್ಡಗಳನ್ನು ಈ ಬಗೆಯ ಸಿರಗಳ ಕಾರಣದಿಂದಾಗಿ 'ಬೆಳ್ಳಿಗುಡ್ಡದ ಸಾಲು' ಎಂದು ಗುರುತಿಸಿರುವುದು ಗಮನಾರ್ಹ. ಈಚೆಗೆ ಇಲ್ಲಿ ವಿಪುಲವಾಗಿ ಚಿನ್ನ ದೊರೆಯುತ್ತಿರುವುದೂ ವಿಶೇಷ. ಭೂ ವಿಜ್ಞಾನಿಗಳು ಕೈಗೊಂಡ ಅಧ್ಯಯನಗಳ ಪ್ರಕಾರ, ಇಂಗಳದಹಾಳು ಪರಿಸರದಲ್ಲಿ ಕ್ರಿ.ಪೂ. ೩ ಅಥವಾ ೪ನೇ ಶತಮಾನದಿಂದಲೇ ಮಾನವ ತನ್ನ ಬದುಕನ್ನು ಆರಂಭಿಸಿದ್ದ, ಮಾನವ ನಿರ್ಮಿಸಿದ ಕೆಲವು ಉಪಕರಣಗಳನ್ನು ಬಳಸುವ ಕಾರ್ಯ ಆರಂಭಗೊಂಡದುದು ಶಾತವಾಹನರ ಆಳ್ವಿಕೆಯಲ್ಲಿ ಕ್ರಿ.ಪೂ. ಸು. ೨೩೦ರಿಂದ ಕ್ರಿ.ಶ. ೨೨೦ರ ಅವಧಿಯಲ್ಲಿ. ಅಂದರೆ, ಇಲ್ಲಿಗೆ ೨೦೦೦ ವರ್ಷಗಳ ಹಿಂದೆಯೆ ಚಿತ್ರದುರ್ಗ ಪರಿಸರದಲ್ಲಿ ಗಣಿಗಾರಿಕೆ ಆರಂಭಗೊಂಡಿದ್ದಿತು. ಚಿತ್ರದುರ್ಗ ಬೆಟ್ಟ ಮತ್ತು ಚಂದ್ರವಳ್ಳಿಗಳಲ್ಲಿ ದೊರೆತ ತಾಮ್ರದ ಆಭರಣ, ಇತ್ಯಾದಿ ವಸ್ತುಗಳು ಇಂಗಳದಹಾಳು ಗಣಿಯಲ್ಲಿ ದೊರೆತ ತಾಮ್ರದಿಂದಲೆ ತಯಾರಿಸಿರಬಹುದೆಂಬ ಅಭಿಪ್ರಾಯವೂ ಇದೆ. ಅಲ್ಲದೆ, ಬಂಗಾರದ ಶೋಧನೆಗೆಂದೇ ತೋಡಲಾದ ಗಣಿಗಳು ಚಿತ್ರದುರ್ಗ ಪ್ರದೇಶದಲ್ಲಿ ಕಂಡುಬಂದಿದ್ದು, ಇವುಗಳ ತೋಡುವಿಕೆಯಲ್ಲಿ ನೂರಾರು ವರ್ಷಗಳ ಪರಿಶ್ರಮದ ಲಕ್ಷಣಗಳು ಗೋಚರಿಸಿವೆಯೆಂತಲೂ ಭೂವಿಜ್ಞಾನಿಗಳು ನಿರ್ಣಯಿಸಿರುವರು. ಇಷ್ಟಲ್ಲದೆ, ಗಣಿ ಕಾರ್ಮಿಕರು ಈ ಪರಿಸರದ ಮೂಲ ನಿವಾಸಿಗಳೆ ಆಗಿರಬಹುದೆಂಬ ಅಭಿಪ್ರಾಯವೂ ಇದೆ.

೨. ಎರಡನೆಯದಾಗಿ, ಪುರಾತತ್ತ್ವೀಯ ಸಂಶೋಧನೆಗಳು ಚಿತ್ರದುರ್ಗ ಪ್ರಾಚೀನ ನಾಮದ ಬಗೆಗೆ ನೀಡುವ ಸುಳಿವನ್ನು ಇಲ್ಲಿ ಪರಿಶೀಲಿಸಬಹುದು. ಚರಿತ್ರೆಪೂರ್ವ ಎಡೆಗಳನ್ನು ಜನಸಾಮಾನ್ಯರು ಸಾಮಾನ್ಯವಾಗಿ ದೆವ್ವ, ರಾಕ್ಷಸ, ಭೂತ, ಭೇತಾಳಗಳ ಆವಾಸಸ್ಥಾನಗಳೆಂಬುದಾಗಿ ಗುರುತಿಸು ವುದುಂಟು.

ವಾಸ್ತವದಲ್ಲಿ ಇವು ಪುರಾತತ್ತ್ವ ನಿವೇಶನ ಸಂಬಂಧಿ ಎಡೆಗಳಾಗಿವೆ. ಚಿತ್ರದುರ್ಗ ಬೆಟ್ಟ ಮತ್ತು ಪರಿಸರದಲ್ಲಿ ನೆಲೆಗೊಂಡಿರುವ ಇಂತಹ ಎರಡು ಎಡೆಗಳನ್ನು ಇಲ್ಲಿ ಉದಾಹರಿಸುವುದ ರೊಡನೆ ಮೇಲಿನ ಅಂಶವನ್ನು ದೃಢೀಕರಿಸಬಹುದು.

ಮೊದಲನೆಯದಾಗಿ, ಕುಂಚಿಗನಹಾಳು ಗ್ರಾಮಕ್ಕೆ ಹೊಂದಿಕೊಂಡಂತೆ ಇರುವ ತಗ್ಗು ಪ್ರದೇಶವನ್ನು ಗ್ರಾಮಸ್ಥರು "ದೆವ್ವನಕೆರೆ" ಅಥವಾ "ದೆವ್ವದಕೆರೆ" ಎನ್ನುವುದುಂಟು. ಸುಮಾರು ೫೦ ಎಕರೆ ಅಚ್ಚುಕಟ್ಟು ಹೊಂದಿರುವ ಈ ಪ್ರಾಚೀನ ಕೆರೆಯಲ್ಲಿ ಈಗ ಸಾಗುವಳಿ ಮಾಡಲಾಗುತ್ತಿದೆ. ಈಗಿನ ರಾಷ್ಟ್ರೀಯ ಹೆದ್ದಾರಿಯಿಂದ ಗ್ರಾಮಕ್ಕೆ ಹೊಂದಿಕೊಂಡಿರುವ ನಾಯಕ ಅರಸರ ಕಾಲದ ಬುರುಜು(ಬುರುಜಾಲು)ವರೆಗೆ ಈ ಕೆರೆಯ ವಿಸ್ತಾರವಿದೆ. ಈ ದೆವ್ವದ ಕೆರೆಯ ಹೆಚ್ಚುವರಿ

ನೀರು ಸಮೀಪದಲ್ಲೇ ನಿರ್ಮಾಣಗೊಂಡಿರುವ ನಾಯಕ ಅರಸರ ಕಾಲದ ಕಂಬವ್ವನಕೆರೆಗೆ ಹರಿಯುತ್ತದೆ. ದೆವ್ವದ ಕೆರೆಯ ಪಕ್ಕದಲ್ಲಿ ಪ್ರಾಕ್ಚಾರಿತ್ರಿಕ ಶಿಲಾವೃತ್ತ(ಗುತ್ತಿ)ಗಳು ವಿಪುಲವಾಗಿ ಕಂಡುಬರುತ್ತವೆ. ಹಾಗೆಯೇ, ಈ ಗುತ್ತಿಗಳ ಸಮೀಪದಲ್ಲಿ ಅಂದರೆ ಕುಂಚಿಗನಹಾಳು ಗ್ರಾಮಕ್ಕೆ ಹೊಂದಿಕೊಂಡಿರುವ ಮಟ್ಟಿಯ ಬಂಡೆಗಳ ಮೇಲೆ ಇದೇ ಅವಧಿಗೆ ಸೇರಿದ ಪ್ರಾಣಿ ಮತ್ತು ಮಾನವರ ಕೋರೆ ಚಿತ್ರಗಳು ಸಾಕಷ್ಟು ಸಂಖ್ಯೆಯಲ್ಲಿ ಇರುವುದನ್ನು ನೋಡಬಹುದು.

ಎರಡನೆಯದಾಗಿ, ಕುಂಚಿಗನಹಾಳು ಕಣಿವೆ ಮಾರ್ಗವಾಗಿ ಮದಕರಿಪುರಕ್ಕೆ ಹೋಗುವ ಬಂಡಿಜಾಡು ಅಥವಾ ಹಳೆಯ ಹಾದಿಯಲ್ಲಿರುವ ಮಟ್ಟಿಯ ಇಳಿಜಾರಿನಲ್ಲಿ ಪ್ರಾಕ್ಚಾರಿತ್ರಿಕ ಕಾಲದ ನಿಲುವುಗಲ್ಲು(ಮೆನ್‌ಹಿರ್)ಗಳ ಸಾಲು ಇದ್ದು, ಈ ದಿನ್ನೆಯನ್ನು ಗ್ರಾಮೀಣರು 'ಭೂತಪ್ಪನ ದಿನ್ನೆ' ಎನ್ನುವುದುಂಟು. ಇದು ಸಹ ಅತ್ಯಂತ ಪ್ರಾಚೀನ ಎಡೆಯೆಂಬುದರಲ್ಲಿ ಸಂದೇಹವಿಲ್ಲ. ಇಲ್ಲಿಯೇ ಸಮೀಪದಲ್ಲಿರುವ ಗುಡ್ಡವೊಂದಕ್ಕೆ ಭೂತಪ್ಪನಗುಡ್ಡವೆಂಬ ಹೆಸರಿರುವುದು ಗಮನಾರ್ಹ.

ಚಿತ್ರದುರ್ಗ ಬೆಟ್ಟ ಪರಿಸರಕ್ಕೂ ಇದೇ ಬಗೆಯ ಕುತೂಹಲಕಾರಿ ಐತಿಹ್ಯವೊಂದನ್ನು ಆರೋಪಿಸಲಾಗಿದೆ. ಈ ಐತಿಹ್ಯದ ಪ್ರಕಾರ, ಬ್ರಹ್ಮರಾಕ್ಷಸನೊಬ್ಬ ಬೆಟ್ಟದ ಮೇಲೆ ವಾಸಿಸುತ್ತಿದ್ದು, ಚಂದ್ರವಳ್ಳಿಯನ್ನು ಈತನು ಅನೇಕ ಸಲ ನಾಶಪಡಿಸಿದ. ವಿದ್ವಾಂಸರು ಅಭಿಪ್ರಾಯಪಡುವಂತೆ, ಬ್ರಹ್ಮರಾಕ್ಷಸ ಪದವು 'ಬೌದ್ಧ ಪಂಡಿತ' ಎಂಬುವುದಕ್ಕೆ ಸಮನಾರ್ಥವುಳ್ಳದ್ದು. ಚಂದ್ರವಳ್ಳಿಯಲ್ಲಿ ಕದಂಬರ ಕಾಲ ಆರಂಭವಾಗುವವರೆಗೆ ನೆಲಸಿದ್ದ ಬೌದ್ಧ ಭಿಕ್ಷುಗಳು ಮಯೂರವರ್ಮನು ವೇದಮತೀಯರಿಗೆ ನೀಡಿದ ಪೋಷಣೆ ಪ್ರೋತ್ಸಾಹಗಳಿಂದ ನೆಲೆಯನ್ನು ಕಳೆದುಕೊಂಡರು. ಅವರ ವಾಸಸ್ಥಳವು ಬ್ರಹ್ಮರಾಕ್ಷಸಕಲ್ಲು ಎಂದಾಗಿ, ಅದು ಅಪಭ್ರಂಶವಾಗಿ ಬೆಮ್ಮತ್ತನಕಲ್ಲು ಎಂದಾಗಿರಬೇಕೆಂದು ಅಭಿಪ್ರಾಯಪಡಲಾಗಿದೆ. ಹುಲ್ಲೂರು ಶ್ರೀನಿವಾಸ ಜೋಯಿಸರು ಹೇಳುವಂತೆ, ಬ್ರಹ್ಮರಾಕ್ಷಸ ಶಬ್ದದಲ್ಲಿ ನಿಜವಾದ ಚರಿತ್ರೆ ಅಡಗಿದೆ. ಅವರು ಭಾವಿಸಿದಂತೆ, ಬೆಟ್ಟದ ತುದಿಯಲ್ಲಿ ಇದ್ದ ರಾಕ್ಷಸನ ಹೆಸರು ಬೆಮ್ಮಂತ; ಬ್ರಹ್ಮಹತ್ಯಾ ರಾಕ್ಷಸನೆ ಬೆಮ್ಮಂತ ರಾಕ್ಷಸನಾಗಿರಬಹುದು.

ಇಲ್ಲಿ ಅವಶ್ಯವಾಗಿ ಗಮನಿಸಬೇಕಾದ ಸಂಗತಿಯೆಂದರೆ, ಚಿತ್ರದುರ್ಗದ ಪ್ರಾಚೀನ ನಾಮದ ಮೂಲವನ್ನು ನಿರ್ಧರಿಸುವಲ್ಲಿ ಬ್ರಹ್ಮರಾಕ್ಷಸ-ಬೆಮ್ಮಂತರ ಕಲ್ಪನೆಯನ್ನು ಸುಲಭವಾಗಿ ತಳ್ಳಿ ಹಾಕಲಾಗದು ಎಂಬುದು.

ಇನ್ನು ಚಾರಿತ್ರಿಕವಾಗಿ ನೋಡುವುದಾದರೆ, ಕ್ರಿ.ಶ.ಸು. ೯-೧೦ನೇ ಶತಮಾನದವರೆಗೆ ಅಂದರೆ ಬಾದಾಮಿ ಮತ್ತು ಕಲ್ಯಾಣದ ಚಾಲುಕ್ಯರ ಪ್ರಭಾವ ಆಗತೊಡಗುವವರೆಗೆ, ಚಿತ್ರದುರ್ಗ ಬೆಟ್ಟ ಪರಿಸರ ನಾಥಪಂಥದವರ ಅಥವಾ ರಹಸ್ಯ ತಾಂತ್ರಿಕ ಪಂಥದವರ ನೆಲೆಯೆನಿಸಿದ್ದಿತು. ರಸವಿದ್ಯೆಯಲ್ಲಿ ಪರಿಣತರಾದ 'ರಸಾಸಿದ್ದ'ರೇ ಇವರೆಂದು ಭಾವಿಸಲಾಗುತ್ತದೆ. ಇವರ ಕೆಲವು ನಿಗೂಢ ಚಟುವಟಿಕೆಗಳ ಬಗೆಗೆ ಆಗಿನ ಜನರಲ್ಲಿ ಯಾವ ಭಾವನೆ ಇದ್ದಿತೋ ತಿಳಿಯದು. ಪ್ರಾಯಶಃ ಅವರ ದೃಷ್ಟಿಯಲ್ಲಿ ಈ ರಸಾಸಿದ್ಧರು ಭೂತಗಳೋ ಬ್ರಹ್ಮರಾಕ್ಷಸರೋ ಆಗಿದ್ದಿರಬಹುದು! ಈ

ರಸಾಸಿದ್ಧರು(ಏಳು ಮಂದಿ ಸಿದ್ಧರು?) ಸುಮಾರು ೧೬ನೇ ಶತಮಾನದವರೆಗೂ ಬೆಟ್ಟದಲ್ಲಿ ನೆಲೆಸಿದ್ದರೆಂದು ಚಿತ್ರದುರ್ಗ ಚರಿತ್ರೆ ಕುರಿತಾದ ದಾಖಲೆಗಳು ಸೂಚಿಸುತ್ತವೆ.

ಹಿಂದೆಯೇ ಹೇಳಿದಂತೆ, ಚಿತ್ರದುರ್ಗದ ಪ್ರಾಚೀನ ನಾಮದ ಮೊದಲ ಅಕ್ಷರ ಕುರಿತು ವಿಚಾರ ಮಾಡಿರುವ ವಿದ್ವಾಂಸರು, ಈ ಮೂಲ ಹೆಸರಿನ ಮೊದಲ ಅಕ್ಷರ 'ಬೆ' ಅಲ್ಲ. 'ಚಿ' ಎಂದು ವಾದಿಸಿದ್ದಾರೆ. ಇಂತಹ ವಾದವನ್ನು ಮಂಡಿಸಿರುವವರಲ್ಲಿ ಡಾ. ಎಂ.ಎಂ. ಕಲಬುರ್ಗಿ ಮತ್ತು ಬಿ. ರಾಜಶೇಖರಪ್ಪರವರು ಮುಖ್ಯರು ಹಾಗೂ ಡಾ. ಎಂ. ಚಿದಾನಂದಮೂರ್ತಿಯವರು ಈ ಮೇಲಿನ ಅಭಿಪ್ರಾಯವನ್ನು ಬೆಂಬಲಿಸಿದ್ದಾರೆ

ಶಾಸನಗಳನ್ನು ಮತ್ತು ಹಸ್ತಪ್ರತಿಗಳನ್ನು ಓದುವಾಗ ಅನೇಕ ವಿದ್ವಾಂಸರು 'ಬೆ', 'ಚಿ'ಗಳಲ್ಲಿ ಪರಸ್ಪರ ಗೊಂದಲ ಮಾಡಿಕೊಳ್ಳುತ್ತಾರೆಂದು; ಈ ಅಕ್ಷರ "ಸಾದೃಶ್ಯ ಭ್ರಾಂತಿ" ವಿದ್ವಾಂಸರನ್ನು ದಾರಿ ತಪ್ಪಿಸಿದೆಯೆಂದು ಈ ವಿದ್ವಾಂಸರು ಅಭಿಪ್ರಾಯಪಟ್ಟಿರುವರು. ಚಿತ್ರದುರ್ಗ ಪ್ರದೇಶದ ಕನ್ನಡ ಶಾಸನಗಳಲ್ಲಿ ಬಿ-ಛೆ-ಬೆ-ಚಿಗಳಲ್ಲಿ ಇರುವ ದಟ್ಟ ಸಾದೃಶ್ಯ ಮತ್ತು ಅವುಗಳಲ್ಲಿರುವ ಸೂಕ್ಷ್ಮ ಅಂಶಗಳನ್ನು ಕುರಿತು ಬಿ. ರಾಜಶೇಖರಪ್ಪನವರು ವಿವೇಚಿಸಿರುವರು.

ಆದರೆ ಶಾಸನಗಳ ಬೆಂಮತ್ತನೂರುನಾಡು ಎಂಬುದೆ ಇಂದಿನ ಚಿತ್ರದುರ್ಗ ಎಂಬ ಹೆಸರಿನ ಮೂಲ ರೂಪವೆಂಬುದನ್ನು ಸಾಧಾರಣವಾಗಿ ನಿರೂಪಿಸಲೆತ್ನಿಸಿದ್ದಾರೆ ಪಿ.ವಿ. ಕೃಷ್ಣಮೂರ್ತಿ. ಕನ್ನಡ ಲಿಪಿಗಳ ಬೆಳವಣಿಗೆಯ ಕ್ರಮವನ್ನು ಪರಿಶೀಲಿಸಿದರೆ, ಕ್ರಿ.ಶ.ಸು. ೧೨ನೇ ಶತಮಾನಕ್ಕಿಂತ ಹಿಂದಿನ ಶಾಸನಗಳಲ್ಲಿ 'ಚಿ' ಮತ್ತು 'ಬೆ' ಅಕ್ಷರಗಳನ್ನು ಕಿಂಚಿತ್ತೂ ಸಂಶಯಕ್ಕೆಡೆಯಿಲ್ಲದಂತೆ ಗುರುತಿಸಬಹುದು; ಆದರೆ ಈ ಸಮಸ್ಯೆಯನ್ನು ಕುರಿತು ವಿಚಾರ ಮಾಡಿರುವ ವಿದ್ವಾಂಸರು ಈ ಸಂಬಂಧದಲ್ಲಿ ಗಮನಿಸಿರುವುದು ಕ್ರಿ.ಶ. ೧೨೮೬ರ ನಂತರದ ಕಾಲಕ್ಕೆ ಸೇರಿದ ಶಾಸನಗಳನ್ನು ಮಾತ್ರ; ಚಿತ್ರದುರ್ಗ ಪ್ರಾಚೀನ ನಾಮದ ಮೊದಲ ಅಕ್ಷರ 'ಬೆ' ಅಲ್ಲ 'ಚಿ' ಎಂಬ ಆತುರದ ಅಭಿಪ್ರಾಯಕ್ಕೆ ಈ ವಿದ್ವಾಂಸರು ಬರಲು ಇದರಿಂದ ಅವಕಾಶವಾಗಿದೆ. ಕ್ರಿ.ಶ.ಸು. ೧೨೬೦ಕ್ಕಿಂತ ಹಿಂದಿನ ಮತ್ತು ಕ್ರಿ.ಶ.ಸು. ೧೩೬೦ರ ನಂತರ ಶಾಸನಗಳಲ್ಲಿನ ಈ ಅಕ್ಷರಗಳನ್ನು ಅವು ತ್ರುಟಿತ ಸ್ವರೂಪವಲ್ಲದಿದ್ದ ಪಕ್ಷದಲ್ಲಿ 'ಚಿ' ಎಂಬುದನ್ನು 'ಬೆ' ಎಂದಾಗಲಿ 'ಬೆ' ಎಂಬುದನ್ನು 'ಚಿ' ಎಂದಾಗಲೀ ಓದಲಿಕ್ಕೆ ಸಾಧ್ಯವಿಲ್ಲ ಎಂಬುದಾಗಿ ತಮ್ಮ ಲೇಖನದಲ್ಲಿ ಪಿ.ವಿ. ಕೃಷ್ಣಮೂರ್ತಿ ಸಾಧಿಸಿ ತೋರಿಸಿದ್ದಾರೆ.

ಬೆಮ್ಮತ್ತನಕಲ್ಲು ಎಂಬುದೆ ಚಿತ್ರದುರ್ಗದ ಆರಂಭದ ಹೆಸರು ಎಂಬ ಅಭಿಪ್ರಾಯ ಪಡುವವರು. ಸಸ್ಯ ಮೂಲದಿಂದಲೆ ನಿಷ್ಪನ್ನಗೊಂಡುದೆಂದು ವಿವರಿಸಲು ಪ್ರಯತ್ನಿಸುತ್ತಾರೆ. ಉದಾ:- ಪಿ.ವಿ. ಕೃಷ್ಣಮೂರ್ತಿಯವರು, 'ಬೆಂಮತ್ತು' ಎಂಬುದರ ಮೂಲವು ಉಷ್ಣವಲಯದಲ್ಲಿ ಬಹುವಾಗಿ ಬೆಳೆಯುವ ಮಿಮೋಸೇನಿ ಎಂಬ ಸಸ್ಯ ವರ್ಗಕ್ಕೆ ಸಂಬಂಧಿಸಿದುದೆಂದು ಹೇಳಿದ್ದಾರೆ. ಈ ಸಸ್ಯದ ಕುಟುಂಬಕ್ಕೆ ಕರಿಜಾಲಿ, ಕಗ್ಗಲಿ, ಸೀಗೆ, ಬನ್ನಿಮರ, ಆನೆಗೊಬ್ಬಿ, ಮುಳ್ಳುಸೀಗೆ, ಮುಗಳಿ ಮುಂತಾದವು ಸೇರಿದ್ದು, ಚಿತ್ರದುರ್ಗವು ಇಂತಹ ಸಸ್ಯವರ್ಗವನ್ನು ಸ್ವಾಭಾವಿಕವಾಗಿಯೇ

ಹೊಂದಿರುವ ಪ್ರದೇಶವಾದ್ದರಿಂದ ಇದನ್ನು ಬೆಮ್+ಅತ್ತು+ಊರು=ಬೆಂಮತ್ತೂರು; ಬೆಂತ್ತನೂರು ಎಂಬುದಾಗಿ ಸಾಧಿಸಬಹುದೆಂಬುದು ಇವರ ನಿರ್ಣಯವಾಗಿದೆ. ಅವರು ಈ ಹೇಳಿಕೆಗೆ ಆಧಾರವಾಗಿರುವುದು, ಚಿತ್ರದುರ್ಗ ನಗರ ಪರಿಸರವು ಅಕೆಷಿಯಾ(ಕಗ್ಗಿ) ಎಂಬ ಸಸ್ಯವರ್ಗವನ್ನು ಹೆಚ್ಚಾಗಿ ಒಳಗೊಂಡಿದೆಯೆಂಬುದನ್ನು ಚಿತ್ರದುರ್ಗ ಜಿಲ್ಲಾ ಗ್ಯಾಸೆಟಿಯರ್‌ನಲ್ಲಿ ಉಲ್ಲೇಖಿಸಲಾದ ಮಾತು. ಬೆಂಗಳೂರು ಹೆಸರಿನ ಮೂಲವೂ ಬೆಂಗ ಅಥವಾ ರಕ್ತಹೊನ್ನೆ ಮರದಿಂದ ಬಂದಿರಬಹುದೆಂದು ವಿದ್ವಾಂಸರು ಇದೇ ರೀತಿಯಾಗಿಯೆ ಅಭಿಪ್ರಾಯಪಟ್ಟಿರುವುದುಂಟು.

ಸ್ಥಳವೊಂದರ ಮೂಲನಾಮ ಕುರಿತ ಅಧ್ಯಯನಕ್ಕೆ ಪ್ರಾಕೃತಿಕ ಸನ್ನಿವೇಶ ಮತ್ತು ಜನ ವಸತಿಗಳ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಕೆಲವು ವಿಶಿಷ್ಟ ಸಂಕೇತಗಳನ್ನು ಒಳಪಡಿಸಲಾಗಿದೆ. ಜನ ಬಳಕೆಯಲ್ಲಿ ಬಂದ ಇಂತಹ ನಿರ್ದೇಶನಾಮಗಳು ಕಾಲಾನುಕ್ರಮದಲ್ಲಿ ಬದಲಾವಣೆಗೊಂಡು ಅವುಗಳ ಧಾತುರೂಪಗಳು ಸಹಜವಾಗಿಯೆ ಉಳಿದು ಬರುವುದುಂಟು. ಚಿತ್ರದುರ್ಗ ಬೆಟ್ಟ ಪರಿಸರವು ಪ್ರಾಕೃತಿಕ ಸನ್ನಿವೇಶದ ಕಾರಣಕ್ಕಾಗಿಯೆ ಅಲ್ಲಿನ ವಿವಿಧ ಎಡೆಗಳಿಗೆ ನಾನಾ ಹೆಸರುಗಳು ರೂಢಿಗೆ ಬಂದುದನ್ನು ಗಮನಿಸಬಹುದು. ಶಾತವಾಹನ ಪೂರ್ವ ಮತ್ತು ಅವರ ಆಡಳಿತಾವಧಿಯಲ್ಲಿ ಚಿತ್ರದುರ್ಗ ಇಂದಿನಂತೆಯೆ ಚಿನ್ನದ ನಿಕ್ಷೇಪದ ಕಾರಣದಿಂದಾಗಿ ಎಲ್ಲರ ಗಮನ ಸೆಳೆದುದಂತೂ ದಿಟ. ಇಂತಹ ಪ್ರಸಿದ್ಧ ಚಿನ್ನದಗಣಿ ಉದ್ಯಮ ಸ್ಥಳವೊಂದರ ಸಂಕೇತ ನಾಮವಾಗಿ ಪ್ರಚಾರಗೊಳ್ಳುವಲ್ಲಿ ನಿರ್ಣಾಯಕ ಪಾತ್ರ ವಹಿಸಿದುದನ್ನು ನಿರಾಕರಿಸುವಂತಿಲ್ಲ. ಚಿತ್ರದುರ್ಗ ಬೆಟ್ಟದ ಸುತ್ತಲೂ ಇರುವ ಕುಂಚಿಗನಹಾಳು-ಇಂಗಳಹಾಳು-ಕುರುಮರಡಿಕೆರೆ-ಹೊನ್ನಮರಡಿ-ಅನ್ನಹಾಳು-ತಮಟಕಲ್ಲು-ಗುಡ್ಡದರಂಗವ್ವನಹಳ್ಳಿ ಮೊದಲಾದವು ಚಿನ್ನ ಮತ್ತು ತಾಮ್ರದ ನಿಕ್ಷೇಪಗಳನ್ನು ಹೊಂದಿರುವ ಎಡೆಗಳೆಂಬುದು ನಿಖರವಾಗಿ ತಿಳಿದುಬಂದಿದೆ. ಭೂವಿಜ್ಞಾನದ ನೆಲೆಯಲ್ಲಿ ಚಿತ್ರದುರ್ಗ ಎಡೆಗೆ ಈ ಸಂಬಂಧವಾದ ಹೆಸರು ಬಂದಿರುವುದು ಸಹಜವೆ. ಪುರಾತತ್ವೀಯ ಆಕರಗಳು ಇದಕ್ಕೆ ಪೂರಕವಾಗಿರುವುದು ಸತ್ಯವೇ ಆಗಿದೆ.

ಈ ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸುವುದರೊಡನೆ, ಚಿತ್ರದುರ್ಗದ ಪ್ರಾಚೀನ ನಾಮ ಕುರಿತು ಈ ಕೆಳಗಿನಂತೆ ಕೆಲವು ವಿಚಾರಗಳನ್ನು ಮಂಡಿಸಬಹುದು.

೧. ಪ್ರಸ್ತುತ ಅಧ್ಯಯನವು ೧೧ನೇ ಶತಮಾನಕ್ಕೂ ಹಿಂದಿನ, ಅಂದರೆ ಲಿಖಿತ ಸಂಪ್ರದಾಯದ ಶಾಸನಗಳು ಚಿತ್ರದುರ್ಗದ ಪ್ರಾಚೀನ ನಾಮವನ್ನು ಪ್ರಸ್ತಾಪಿಸುವುದಕ್ಕೂ ಮುಂಚಿನ, ಚಿತ್ರದುರ್ಗ ಹೆಸರಿನ ಮೂಲರೂಪವನ್ನು ಅರಿಯುವ ಪ್ರಯತ್ನವಾಗಿದೆ.

೨. ಚಿತ್ರದುರ್ಗ ಪ್ರಾಚೀನ ನಾಮವನ್ನು ನಿಖರವಾಗಿ ನಿರ್ಧರಿಸುವಲ್ಲಿ ನೆರವಿಗೆ ಬರುವುವೆಂದರೆ ಭೂವೈಜ್ಞಾನಿಕ ಮತ್ತು ಪುರಾತತ್ವೀಯ ಸಂಶೋಧನೆಗಳು.

೩. ಈ ಸಂಶೋಧನೆಗಳು ಶಾತವಾಹನ ಆಳ್ವಿಕೆಯ ಪೂರ್ವ ಮತ್ತು ಆಳ್ವಿಕೆಯ ಅವಧಿಗಳ ಚಿತ್ರದುರ್ಗ ಪರಿಸರದ ಭೌಗೋಳಿಕ ಸನ್ನಿವೇಶವನ್ನು ನಿಖರವಾಗಿ ಗುರುತಿಸುವುದರೊಡನೆ, ಚಿತ್ರದುರ್ಗದ ಪ್ರಾಚೀನನಾಮ ಪ್ರಾಕೃತಿಕ ಗುಣಲಕ್ಷಣಗಳಿಂದ ನಿಷ್ಪನ್ನವಾದ ಸ್ವಾಭಾವಿಕ ನಾಮವೆಂಬುದನ್ನು ವ್ಯಕ್ತಪಡಿಸುತ್ತವೆ.

೪. ಭೂವೈಜ್ಞಾನಿಕ ಸಂಶೋಧನೆಯ ಪ್ರಕಾರ, ಚಿತ್ರದುರ್ಗದ ಬೆಟ್ಟ ಪರಿಸರವು ಅಗ್ನಿಶಿಲೆಗಳಲ್ಲಿಯ ಬೆಣಚು ಶಿರಬಳ್ಳಿಗಳ ವಲಯವಾಗಿದ್ದು, ಚಿತ್ರದುರ್ಗದ ಪ್ರಾಚೀನ ನಾಮಕ್ಕೆ ಇದೇ ಮೂಲವೆನಿಸಿದೆ.

೫. ಚಿತ್ರದುರ್ಗ ಪರಿಸರದಲ್ಲಿಯ ಇಂಥಾ ಬೆಣಚುಕಲ್ಲಿನ ಗುಡ್ಡಗಳ ಕಾರಣದಿಂದಾಗಿ, ಬೆಣಚುಕಲ್ಲು ಎಂಬುದೆ ಕಾಲಾಂತರದಲ್ಲಿ ಬೆಮ್ಮತ್ತನಕಲ್ಲು(ಬೆಣಚುಕಲ್ಲು>ಬೆಂಚ(ಜ)ರ ಕಲ್ಲು>ಬೆಂತರಕಕಲ್ಲು>ಬೆಮತರಕಲ್ಲು>ಬೆಮ್ಮತರ(ನ)ಕಲ್ಲು>ಬೆಮ್ಮತ್ತನಕಲ್ಲು) ಆಗಿರುವ ಸಾಧ್ಯತೆ ಇದರಿಂದ ಕಂಡುಬರುತ್ತದೆ. (ಇದಕ್ಕೆ 'ಬೆಂಗಳೂರು ಹೆಸರಿನ ನಿಷ್ಪತ್ತಿ ಸಮರ್ಥನೆ ಒದಗಿಸುತ್ತದೆ). ಬೆಮ್ಮತ್ತನಕಲ್ಲು ಹೆಸರಿನ ಹಿನ್ನೆಲೆಯಲ್ಲಿ ಯಾವುದೆ ಸಸ್ಯವರ್ಗವಿರದೆ ಶಿಲಾವರ್ಗವಿರುವುದು ಸ್ಪಷ್ಟ.

೬. ಪ್ರಾಯಶಃ ಬೆಮ್ಮತ್ತನಕಲ್ಲು ಅಥವಾ ಅದರ ಇತರ ರೂಪಗಳು ಚಿತ್ರದುರ್ಗ ಬೆಟ್ಟ ಪರಿಸರಕ್ಕೆ ಸೀಮಿತಗೊಂಡಂತೆ ಮಾತ್ರ ಬಳಕೆಯಲ್ಲಿದ್ದಿರಬಹುದು.

೭. ಪುರಾತತ್ವೀಯ ಅಧ್ಯಯನ ಹಿನ್ನೆಲೆಯಲ್ಲಿ, ಆ ಸಂಬಂಧದ ಐತಿಹ್ಯಗಳ ಪ್ರಭಾವವು ಅಪಾರವಾಗಿದ್ದು, ಚಿತ್ರದುರ್ಗ ಬೆಟ್ಟವನ್ನು ಬ್ರಹ್ಮರಾಕ್ಷಸನಕಲ್ಲು ಎಂದು ಜನರು ಸಂಶೋಧಿಸುತ್ತಿದ್ದುದು ಮುಖ್ಯವಾದುದು. ಬೆಮ್ಮಂತನೆಂಬ ರಾಕ್ಷಸನಿದ್ದ ಕಲ್ಲಿನಿಂದ ಬೆಮ್ಮತ್ತನಕಲ್ಲು ಅಥವಾ ಅದರ ಹತ್ತಿರದ ರೂಪ ಉಂಟಾದುದನ್ನು ಇಲ್ಲಿ ತಳ್ಳಿ ಹಾಕುವಂತಿಲ್ಲ(ಇದು ಮೂಲತಃ ಹುಲ್ಲೂರು ಶ್ರೀನಿವಾಸ ಜೋಯಿಸರ ಊಹೆ ಎಂಬ ಆರೋಪವನ್ನು ಈ ಅಂಶ ಸ್ಪಷ್ಟವಾಗಿ ನಿರಾಕರಿಸುತ್ತದೆ).

೮. ಈ ಮೇಲಿನ ಅಂಶಗಳ ಕಾರಣದಿಂದಾಗಿ, ಪ್ರಸ್ತುತ ಅಧ್ಯಯನ, ಚಿತ್ರದುರ್ಗದ ಪ್ರಾಚೀನ ನಾಮದ ಮೊದಲ ಅಕ್ಷರ 'ಬೆ' ಅಲ್ಲದೆ ಬೇರೆ ಅಲ್ಲ ಎಂಬುದನ್ನು ದೃಢವಾಗಿ ಸಮರ್ಥಿಸುತ್ತದೆ.

೯. ಆರಂಭದ ಶಾಸನಗಳಲ್ಲಿ ಲಿಪಿಕಂಡರಣೆಕಾರರು ಬೆಮ್ಮತ್ತನಕಲ್ಲು ಎಂಬ ಹೆಸರಿನಲ್ಲಿಯ ಮೊದಲ ಅಕ್ಷರ 'ಬೆ' ಎಂಬುದನ್ನು 'ಚಿ' ಎಂದು ಕಾಣಿಸಿದ್ದರೆ, ಅದು ಲಿಪಿಸಾದೃಶ್ಯ ಭ್ರಾಂತಿಯಿಂದ ಘಟಿಸಿದ ದೋಷವಿರಬಹುದು.

೧೦. ಈ ಹಿನ್ನೆಲೆಯಲ್ಲಿ, 'ಸಿದ್ಧರದುರ್ಗ'ದಿಂದಲೇ ಈಗಿನ ಚಿತ್ರದುರ್ಗ ಎಂಬ ಹೆಸರು ಬಂದಿದೆ ಎಂಬ ವಾದ ಅಪ್ರಸ್ತುತ ಮಾತ್ರವಲ್ಲ, ಅದು ಕೇವಲ ಪಂಡಿತ ನಿಷ್ಪತ್ತಿಯೆಂದು ಮೇಲ್ನೋಟಕ್ಕೆ ಸಾಬೀತುಪಡುವಂತಹದ್ದಾಗಿದೆ.[೨೯]

ಸನ್ನತಿ ನಿವೇಶನ

ಶಾತವಾಹನಕಾಲೀನ ಸಂಸ್ಕೃತಿಯ ಪ್ರಮುಖ ಕೇಂದ್ರವಾಗಿ ಗುರುತಿಸಲ್ಪಟ್ಟಿರುವ ಪ್ರಸಿದ್ಧ ಸನ್ನತಿ ನಿವೇಶನ ನೆಲಸಿರುವುದು ಗುಲ್ಬರ್ಗಾ ಜಿಲ್ಲೆ, ಚಿತ್ತಾಪುರ ತಾಲ್ಲೂಕಿನಲ್ಲಿ; ಭೀಮಾನದಿಯ

ದಡದಲ್ಲಿ. ಉತ್ತರಕರ್ನಾಟಕದಲ್ಲಿ, ಮುಖ್ಯವಾಗಿ ಸನ್ನತಿಯಲ್ಲಿ ದೊರೆತಿರುವ ಅಶೋಕನ ಹೊಸಶಾಸನಗಳ ಪ್ರಸ್ತಾಪದೊಡನೆ ಸನ್ನತಿಯಲ್ಲಿ ಕಂಡುಬರುವ ಮೌರ್ಯರ ಕಾಲೀನ ಸಂಸ್ಕೃತಿಯ ವಿವರಗಳನ್ನು ಇಲ್ಲಿ ಪರಿಶೀಲಿಸಬಹುದು. ಈ ಶಾಸನಗಳು ಬೆಳಕಿಗೆ ಬಂದುದರಿಂದ, ಭೀಮಾನದಿಯ ದಡದಲ್ಲಿರುವ ಗುಲ್ಬರ್ಗಾ ಜಿಲ್ಲೆಯ ಪ್ರದೇಶಗಳು ಅಶೋಕನ ಸಾಮ್ರಾಜ್ಯದ ಭಾಗವಾಗಿದ್ದುದು; ಹಾಗೂ ಇಲ್ಲಿ ಪ್ರಪ್ರಥಮವಾಗಿ ಮೌರ್ಯ ಚಕ್ರವರ್ತಿಯ ೧೩ ಮತ್ತು ೧೪ನೇ ಶಾಸನಗಳು ಮತ್ತು ಕಳಿಂಗದಲ್ಲಿಯ ಎರಡು ಪ್ರತ್ಯೇಕ ಶಾಸನಗಳ ಪ್ರತಿಗಳಿಂದ ಸನ್ನತಿಯು ಈ ಅವಧಿಯ ಇನ್ನೊಂದು ಪ್ರಮುಖ ಜನವಸತಿ ಕೇಂದ್ರವಾಗಿದ್ದುದು ದೃಢಪಟ್ಟಿದೆ. ಇತರೆಡೆಗಳಲ್ಲಿದ್ದಂತೆ ಇಲ್ಲಿಯೂ ಆಡಳಿತಾಧಿಕಾರಿಯಾಗಿ ಮಹಾಮಾತ್ರರು ಇದ್ದಿರಬಹುದು.

ಶಾಸನಗಳ ಮಟ್ಟಿಗೆ, ಮೇಲೆ ಗಮನಿಸಿದಂತೆ, ಸನ್ನತಿಯಲ್ಲಿ ದೊರೆತವು ೧೩ ಮತ್ತು ೧೪ನೇ ಸಂಖ್ಯೆಯ ಮುಖ್ಯ ಶಿಲಾಶಾಸನಗಳು. ಒಂದು ಅಭಿಪ್ರಾಯದಂತೆ, ದಕ್ಷಿಣಭಾರತದಲ್ಲಿ ಮುಖ್ಯ ಹಾಗೂ ಲಘುಶಾಸನಗಳನ್ನು ಬರೆಸಲು ಆಯ್ಕೆಮಾಡಿರುವ ಸ್ಥಳಗಳನ್ನು ಗಮನಿಸಿದರೆ, ಈ ಪ್ರದೇಶಗಳು ಮೊದಲಿಗೆ ಸಾಮ್ರಾಜ್ಯದ ಹೊರಗೆ ಸ್ಥಳೀಯ ಸ್ವತಂತ್ರ ಅರಸರ ಅಧೀನದಲ್ಲಿದ್ದಾಗ ಲಘು ಶಿಲಾಶಾಸನ ಬರೆಸಲಾಯಿತು. ಸನ್ನತಿಯು ಅಶೋಕನ ಸಾಮ್ರಾಜ್ಯಕ್ಕೆ ಸೇರಿದ್ದಿತೆಂದು ಇದರಿಂದ ಸ್ಪಷ್ಟಪಡುತ್ತದೆ. ಅಲ್ಲದೆ, ಎರ್ರಗುಡಿಯಲ್ಲಾಗಲಿ, ಕರ್ನಾಟಕ-ಆಂಧ್ರಗಳ ಇತರ ಪ್ರದೇಶಗಳಲ್ಲಾಗಲಿ ಇಂತಹ ಪ್ರತ್ಯೇಕ ಶಿಲಾಶಾಸನಗಳು ಈವರೆಗೆ ಲಭ್ಯವಿಲ್ಲದಿರುವಾಗ ಸನ್ನತಿಯಲ್ಲಿ ದೊರೆತ ಈ ಶಾಸನಗಳು ಮುಖ್ಯವೆನಿಸುತ್ತವೆ. ಅಶೋಕ ದಕ್ಷಿಣದಲ್ಲಿ ಕೃಷ್ಣಾ-ಭೀಮಾ ದೋಅಬ್‌ಅನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡ ಸಂದರ್ಭದಲ್ಲಿ ಈ ಶಾಸನಗಳನ್ನು ಬರೆಸಿರಬೇಕು.[೨೦] ಈ ಪ್ರದೇಶದಲ್ಲಿ ಮುಖ್ಯ ಹಾಗೂ ಇತರ ಶಿಲಾಶಾಸನಗಳ ಹೆಚ್ಚಳಕ್ಕೆ ಇದೇ ಕಾರಣವೆನ್ನಬಹುದು. ಈ ಮುಖ್ಯಶಾಸನಗಳು ದೊರೆತ ರಣಮಂಡಲವೆಂಬ ಭಾಗವನ್ನು ಗಮನಿಸಿದರೆ, ಕರ್ನಾಟಕದ ಈ ಭಾಗವನ್ನು ವಶಪಡಿಸಿ ಕೊಳ್ಳಲು ಮೌರ್ಯಸೇನೆ ಪ್ರಯತ್ನಿಸಿದುದು ಇಲ್ಲಿಯೆ ಎಂಬುದಕ್ಕೆ ಸಮರ್ಥನೆ ದೊರೆತಂತಾಗುತ್ತದೆ.

ಸನ್ನತಿಯಲ್ಲಿ ಪ್ರತ್ಯೇಕ ಹಾಗೂ ಮುಖ್ಯ ಶಿಲಾಶಾಸನಗಳು ದೊರೆತಿರುವುದು ವಿಶೇಷ. ಸನ್ನತಿಯ ಮಟ್ಟಿಗೆ, ಪ್ರಾಗೈತಿಹಾಸಿಕ ಕಾಲದಿಂದಲೂ ನಿರಂತರ ಜನವಸತಿ ಕೇಂದ್ರವಾಗಿದ್ದು, ಚರಿತ್ರಾರಂಭಕಾಲದಲ್ಲಿ ಧಾರ್ಮಿಕ, ವಾಣಿಜ್ಯ ಮತ್ತು ರಾಜಕೀಯ ಪ್ರಾಮುಖ್ಯತೆ ಪಡೆದ ಕೇಂದ್ರವಾಗಿ ಬೆಳೆದಿರುವ ಸಾಧ್ಯತೆಯೆ ಹೆಚ್ಚಾಗಿ ಕಂಡುಬರುತ್ತದೆ. ಇದರಂತೆ ಕೃಷ್ಣಾನದಿಯ ಉಪನದಿಗಳ ದಡದ ಮೇಲಿರುವ ಇತರ ಎಡೆಗಳೂ ಇಂತಹದೇ ಪ್ರಾಮುಖ್ಯತೆ ಹೊಂದಿದ್ದು ದನ್ನು ಗಮನಿಸಲಾಗಿದೆ. ಅಶೋಕನ ಶಾಸನಗಳ ಪರಿಸರದಲ್ಲಿರುವ ಮಸ್ಕಿ ಹಾಗೂ ಬ್ರಹ್ಮಗಿರಿಯಂಥಾ ನಿವೇಶನಗಳನ್ನು ಗಮನಿಸಿದರೆ, ಇವು ಸಾಕಷ್ಟು ಅಭಿವೃದ್ಧಿ ಹೊಂದಿದ ನಗರಗಳಾಗಿರಲಿಲ್ಲವೆಂಬುದು ಸ್ಪಷ್ಟಪಡುತ್ತದೆ. ಆದರೆ ವಿಸ್ತಾರವಾದ ಕೋಟೆಯನ್ನು ತನ್ನ ಸುತ್ತಲೂ ಹೊಂದಿದ್ದ ಸನ್ನತಿ, ದಕ್ಷಿಣಭಾರತದಲ್ಲಿ ಮೆಗಸ್ತಾನೀಸ್ ಗುರುತಿಸಿದ ೩೦ ಪ್ರಕಾರ ಪಟ್ಟಣಗಳಲ್ಲಿ ಒಂದಾಗಿದ್ದಿರಬೇಕೆಂದು ತಿಳಿಯಬಹುದು.

ಅಮರಾವತಿ-ಧರಣಿಕೋಟ, ಭಟ್ಟಿಪ್ರೋಲು ಮತ್ತು ವಡ್ಡಮಾನುಗಳಂತಹ ಆಂಧ್ರ ಕರಾವಳಿ ಪ್ರದೇಶದ ನಿವೇಶನಗಳು, ಬೌದ್ಧಧರ್ಮದೊಡನೆ ಔತ್ತರೇಯ ಕಪ್ಪುಹೊಳಪುಳ್ಳ ಮೃತ್ಪಾತ್ರೆ (ಎನ್‌ಬಿಪಿ) ಮತ್ತು ಬೆಳ್ಳಿಯ ಮುದ್ರಾಂಕಿತ ನಾಣ್ಯಗಳು ಮೌರ್ಯಾರಂಭಕಾಲದಲ್ಲೆ ಇಲ್ಲಿ ಪ್ರವೇಶಿಸಿದುದನ್ನು ಸಮರ್ಥಿಸುತ್ತವೆ. ಸನ್ನತಿ ಪರಿಸರವೂ ಇದರ ವ್ಯಾಪ್ತಿಗೆ ಬರುವುದು ಇಲ್ಲಿ ಮುಖ್ಯವಾಗುತ್ತದೆ.

ನಂದರು ಮತ್ತು ಮೌರ್ಯರ ನಡುವೆ ಏರ್ಪಟ್ಟ ಕಲಹಗಳ ಪರಿಣಾಮವೆಂದರೆ, ಮೌರ್ಯರ ಪ್ರಾಬಲ್ಯ ದಖ್ಖನಿನ ಕೆಳಪ್ರದೇಶ ಮತ್ತು ದ್ರಾವಿಡದೇಶಗಳತ್ತ ವಿಸ್ತಾರಗೊಂಡಿದ್ದು ಶಾಸನಗಳ ಪ್ರಕಾರ, ಉತ್ತರಕರ್ನಾಟಕದ ಅದರಲ್ಲೂ ಸನ್ನತಿ ಪರಿಸರ ಪ್ರಮುಖ ಪಾತ್ರ ನಿರ್ವಹಿಸಿತೆನ್ನಬಹುದು. ಸನ್ನತಿ ಪ್ರದೇಶದ ಮೇಲೆ ಮೌರ್ಯಾಳ್ವಿಕೆಯ ಪ್ರಭಾವ ದಟ್ಟವಾಗಿದ್ದಿತೆನ್ನಲು ಇಲ್ಲಿ ದೊರೆತಿರುವ ಪುರಾತತ್ವೀಯ ವಸ್ತು-ವಿಶೇಷಗಳೆ ಸಾಕ್ಷಿಯಾಗಿವೆ. ಪ್ರಾಚೀನಕಾಲದ ಬೌದ್ಧಕೇಂದ್ರವೆಂದು ಈಗಾಗಲೇ ಗುರುತಿಸಲ್ಪಟ್ಟ ಸನ್ನತಿ, ಹೀನಯಾನ ಶಾಖೆಯ ಆರಾಧನಾಕೇಂದ್ರವಾಗಿದ್ದಿರಬೇಕೆಂಬ ಅಭಿಪ್ರಾಯವಿದೆ. ಈ ಪರಿಸರದ ಬೌದ್ಧಸ್ಮಾರಕಗಳು ಭೀಮಾನದಿಯ ಎರಡು ದಂಡೆಗಳ ಉದ್ದಕ್ಕೂ ಸುಮಾರು ೩-೪ ಕಿ.ಮೀ.ಗಳವರೆಗೆ, ಅಂದರೆ ಸನ್ನತಿಯಿಂದ ಕನಗನಹಳ್ಳಿಯವರೆಗೆ ವ್ಯಾಪಿಸಿರುವುದನ್ನು ಪುರಾತತ್ವೀಯ ಶೋಧಗಳು ಸ್ಪಷ್ಟಪಡಿಸಿವೆ. ವಾಸ್ತವದಲ್ಲಿ, ಈ ನಿವೇಶನದ ವಿಸ್ತಾರ ಸುಮಾರು ೫ ಕಿ.ಮೀ. ಇದ್ದು, ರಣಮಂಡಲದ ಪೂರ್ವಕ್ಕೆ ಕನಗನಹಳ್ಳಿವರೆಗೆ ಮುಂದುವರೆದಿದೆ.

ಮೌರ್ಯಕಾಲೀನ ಸ್ಮಾರಕಗಳ ಅಧ್ಯಯನ ಅರ್ಥಪೂರ್ಣವಾಗುವುದು ಸನ್ನತಿಯಲ್ಲಿ ದೊರೆತ ವಿಶಿಷ್ಟ ಚಿತ್ರಿತ ವೃತ್ತಶಿಲಾಫಲಕ ಇತ್ಯಾದಿಗಳ ಪ್ರಸ್ತಾಪದೊಡನೆ. ಈ ನಿವೇಶನದಲ್ಲಿ ಕಂಡುಬಂದ ಉತ್ತರಭಾರತದ ಕಪ್ಪುಹೊಳಪಿನ ಮೃತ್ಪಾತ್ರೆ ಚೂರುಗಳು ಮೌರ್ಯಕಾಲದ ಸಂಸ್ಕೃತಿ ಬಗೆಗೆ ತಕ್ಕಮಟ್ಟಿನ ಬೆಳಕು ಹಾಯಿಸಿದವು. ಇವುಗಳೊಡನೆ ದೊರೆತ ಹೊಳಪುಳ್ಳ ಕೆಂಪು ಮರಳುಕಲ್ಲಿನ ಚಿತ್ರಿತ ವೃತ್ತಫಲಕ ಒಂದು ಮಹತ್ವಪೂರ್ಣ ಕಲಾಕೃತಿಯೆಂದು ಪರಿಗಣಿಸಲ್ಪಟ್ಟಿದೆ. ಅ.ಸುಂದರ ಅವರು ಈ ವೃತ್ತಫಲಕವನ್ನು ವರ್ಣಿಸಿರುವುದು ಹೀಗೆ: ಸುಮಾರು ೧೫ ಸೆಂ.ಮೀ. ವ್ಯಾಸದ ಈ ಫಲಕ ಸು.೧ ಸೆಂ.ಮೀ.ನಷ್ಟು ಉಬ್ಬಿದೆ. ಮಧ್ಯದಲ್ಲಿ ಸಮಾನಾಂತರದಲ್ಲಿ ಕೇಂದ್ರದಿಂದ ಅಂಚಿನವರೆಗೂ ಉದ್ದವಿರುವ ಮೂರು ತಾಳೆಮರದಂತಹ ಮರಗಳಿವೆ. ಇವುಗಳ ನಡುವೆ ನಿಂತ ಭಂಗಿಯಲ್ಲಿಯ (ನಗ್ನ?) ಒಂದು ಸ್ತ್ರೀ ಉಬ್ಬು ಶಿಲ್ಪವಿದ್ದು, ವಿರಳವಾಗಿ ಆಭರಣಗಳಿಂದ ಅಲಂಕೃತವಾಗಿದೆ. ನೀಳ ಶರೀರ, ಅತಿ ಕಿರಿದಾದ ಸೊಂಟ, ವಿಶಾಲವಾದ ನಡುವಿನ ಕೆಳಭಾಗವಿದ್ದು, ಒಬ್ಬ ಸುಂದರ ಸ್ತ್ರೀಯ ಮಾತೃತ್ವದ ಲಕ್ಷಣಗಳನ್ನು ಮನಮುಟ್ಟುವಂತೆ ರೂಪಿಸಲಾಗಿದೆ. ಕೈಗಳನ್ನೆರಡನ್ನು ಬೀಸು ಮಾಡಲಾಗಿದೆ. ಕಾಲುಗಳ ಅಕ್ಕ-ಪಕ್ಕದಲ್ಲಿ ಒಂದೊಂದು ಹಂಸವಿದೆ. ತಲೆಯ ಬದಿಗಳಲ್ಲಿ ಜಿಂಕೆ-ಟಗರು, ಕುದುರೆ-ಸಿಂಹ ಮತ್ತು ಆನೆ(?)ಗಳಿವೆ. ಅಲ್ಲದೆ ಒಂದೊಂದು ಪುಷ್ಪಗಳಿವೆ. ಒಂದು ಭಾಗದಲ್ಲಿ ಪುಷ್ಪಚಿತ್ರದ ಬದಲು ಬ್ರಾಹ್ಮಿ ಅಕ್ಷರ 'ಮ'

ಇರುವಂತೆ ಕಾಣುತ್ತದೆ. ಇಂತಹ ಚಿತ್ರಫಲಕಗಳು ಮೌರ್ಯಕಾಲದ ಸಾಂಸ್ಕೃತಿಕ ಅವಶೇಷಗಳೊಡನೆ ಇದ್ದವು. ಬಹುಶಃ ಇದು ಸಂತನಾಭಿವೃದ್ಧಿ, ಕಟ್ಟಳೆಗಳಿಗೆ ಸಂಬಂಧಿಸಿದ ಫಲಕವಿರಬಹುದು.[೨೦]

ಬನವಾಸಿ ನಿವೇಶನ

ಮೌರ್ಯರ ಕಾಲದಿಂದಲೂ ಪ್ರಸಿದ್ಧಿ ಪಡೆದಿದ್ದ ಹಾಗೂ ಒಂದು ದೊಡ್ಡ ನಗರವೆನಿಸಿದ್ದ ಬನವಾಸಿಯು ಉತ್ತರಕನ್ನಡ ಜಿಲ್ಲೆ, ಸಿರಸಿ ತಾಲ್ಲೂಕಿನಲ್ಲಿ. ಕ್ರಿ.ಪೂ. ೩ನೇ ಶತಮಾನದಲ್ಲೆ ಬನವಾಸಿ ದೊಡ್ಡನಗರವೆನಿಸಿದ್ದಿತು. ಇದು ವಾಣಿಜ್ಯ ಚಟುವಟಿಕೆಗಳ ಪ್ರತಿಷ್ಠಿತ ನಗರವಾಗಿ ಬೆಳೆದಿದ್ದಿತೆನ್ನಲು ಇದರ ಮೂಲಕ ಹಾದುಹೋಗುತ್ತಿದ್ದ ವ್ಯಾಪಾರ ಸಂಬಂಧದ ಮಾರ್ಗವೂ ಇಲ್ಲಿ ಮುಖ್ಯವೆನಿಸುತ್ತದೆ. ಕಡಲತೀರ ಪ್ರದೇಶದಿಂದ ಒಳಪ್ರದೇಶಗಳಿಗೆ ಹೋಗುವ ಮಾರ್ಗಗಳು ಬನವಾಸಿ ಮೂಲಕ ಹಾದುಹೋಗುತ್ತಿದ್ದ ಬಗೆಗೆ ಹಾಗೂ ದಖ್ಖನ್ ಪ್ರಸ್ಥಭೂಮಿಯ ಸಂಪರ್ಕ ಪಶ್ಚಿಮ ಕಡಲತೀರದಿಂದಲೂ ಇಲ್ಲಿಗೆ ಇದ್ದಿತೆನ್ನುವ ಬಗೆಗೆ ಆಧಾರಗಳಿವೆ. ಆದ್ದರಿಂದಲೇ ಅಶೋಕ ಬನವಾಸಿಯತ್ತ ತನ್ನ ಗಮನಹರಿಸಿದುದು; ಹಾಗೂ ಪಾಟಲಿಪುತ್ರ ಮತ್ತು ಬನವಾಸಿಗಳ ನಡುವೆ ಸಂಪರ್ಕವಿರಿಸಿಕೊಂಡುದು ಮುಖ್ಯವಾಗಿದೆ.

ವೈಜಯಂತಿ ಎಂದು ಕರೆಸಿಕೊಂಡ ಬನವಾಸಿ, ಮತ್ತಷ್ಟು ಅಭಿವೃದ್ಧಿ ಹೊಂದಿದ ಪಟ್ಟಣವಾಗಿ ಬೆಳೆದುದು ಶಾತವಾಹನರ ಅವಧಿಯಲ್ಲಿ. ಇಲ್ಲಿ ನಡೆಸಲಾದ ಭೂಶೋಧನೆಯಲ್ಲಿ ಶಾತವಾಹನ ಕಾಲೀನ ನಗರರಚನೆಯ ಕುರುಹುಗಳು ಕಂಡುಬಂದಿವೆ. ಶಾತವಾಹನರ ಅವಧಿ ಯಲ್ಲಿಯೂ ವ್ಯಾಪಾರ-ವಾಣಿಜ್ಯ ಚಟುವಟಿಕೆಗಳ ಕೇಂದ್ರವಾಗಿ ಮುಂದುವರೆದುದು ಬನವಾಸಿ. ಇತಿಹಾಸಾರಂಭ ಕಾಲದ ನೆಲೆಯಾಗಿ, ಕರ್ನಾಟಕದ ಸನ್ನತಿ, ಚಂದ್ರವಳ್ಳಿ, ಬ್ರಹ್ಮಗಿರಿ, ಮಸ್ಕಿ, ಪಿಕ್ಲಿಹಾಳ, ತಿ.ನರಸೀಪುರ, ಹಳ್ಳೂರು, ಬಾದಾಮಿ, ಪಟ್ಟದಕಲ್ಲು, ಐಹೊಳೆ, ಜೇವರ್ಗಿ, ವಡಗಾಂವ್-ಮಾಧವಪುರ, ಹೆಮ್ಮಿಗೆ ಮುಂತಾದ ನೆಲೆಗಳ ಸಾಲಿಗೆ ಸೇರುವಂತದ್ದಾಗಿದ್ದು ಮುಖ್ಯವಾಗಿ, ಬನವಾಸಿಯನ್ನು ಗುರುತಿಸಲಾಗಿದೆ. ಇದು ಪಶ್ಚಿಮದಲ್ಲಿ ಶಾತವಾಹನರ ಆಡಳಿತದ ಕೇಂದ್ರವಾಗಿದ್ದಿತೆಂದು.

ಮೌರ್ಯರ ತರುವಾಯ ಬನವಾಸಿಯಲ್ಲಿ ಅಧಿಕಾರ ಸ್ಥಾಪಿಸಿದ ಶಾತವಾಹನರು, ಮೌರ್ಯರ ಪರಂಪರೆಯನ್ನು ಮುಂದುವರೆಸಿಕೊಂಡು ಬಂದರು. ಗೌತಮಿಪುತ್ರನ ನಾಸಿಕ ಶಾಸನ, ಮ್ಯಾಕೆದೋಣಿ ಶಾಸನ ಮತ್ತು ಹಿರೇಹಡಗಲಿ ತಾಮ್ರಶಾಸನಗಳು ಬನವಾಸಿಯಲ್ಲಿ ಶಾತವಾಹನರ ಆಳ್ವಿಕೆ ಇದ್ದುದನ್ನು ಸಮರ್ಥಿಸುತ್ತವೆ. ಶಕರನ್ನು ಸೋಲಿಸಿ ಶಾತವಾಹನರ ಪ್ರತಿಷ್ಠೆಯನ್ನು ಎತ್ತಿಹಿಡಿದ ಗೌತಮಿಪುತ್ರ ಶಾತಕರ್ಣಿಯ ಅನೇಕ ನಾಣ್ಯಗಳು ಬನವಾಸಿಯಲ್ಲಿ ದೊರೆತಿವೆ. ಬನವಾಸಿ ಸ್ವತಃ ಗೌತಮಿಪುತ್ರ ಶಾತಕರ್ಣಿಯ ಪಾಳೆಯಗಳಲ್ಲಿ ಒಂದಾಗಿದ್ದಿತು. ಈತನ ಮಗ ವಾಶಿಷ್ಠಿಪುತ್ರ ಶಿವಶ್ರೀ ಪುಳುಮಾವಿ ತನ್ನ ಅಧಿಕಾರವನ್ನು ಬಳ್ಳಾರಿ ಮತ್ತು ಕರ್ನಾಟಕದ ಸುತ್ತಮುತ್ತಲ ಪ್ರದೇಶಗಳು ಸೇರಿದಂತೆ ದಕ್ಷಿಣಾಪಥದ ಬಹುಭಾಗದ ಮೇಲೆ ಸ್ಥಾಪಿಸಿದ್ದುದು ದೃಢಪಟ್ಟಿದೆ. ಈತನ ಮಗ ಮತ್ತು ಉತ್ತರಾಧಿಕಾರಿಯಾಗಿದ್ದ ವಾಶಿಷ್ಠಿಪುತ್ರ ಶಿವಶ್ರೀ ಪುಳುಮಾವಿಯ ಶಾಸನ

ಬನವಾಸಿಯಲ್ಲಿ ಸಿಕ್ಕಿದೆ. ಈತನ ರಾಣಿ ಮಹಾದೇವಿಯ ಸ್ಮಾರಕಶಿಲೆ ಕುರಿತಾಗಿ ಸೂಚಿಸುತ್ತದೆ ಇದು. ಇವೆಲ್ಲವೂ ವ್ಯಕ್ತಪಡಿಸುವುದು, ಬನವಾಸಿ ಮತ್ತು ಕರ್ನಾಟಕದ ಇತರ ಪ್ರದೇಶಗಳ ಮೇಲೆ ಶಾತವಾಹನರು ನಡೆಸುತ್ತಿದ್ದ ಅಧಿಕಾರವನ್ನು ಕುರಿತು ಮಾಹಿತಿ ನೀಡುತ್ತದೆ.

ವಾಶಿಷ್ಠಿಪುತ್ರ ಶಿವಶ್ರೀ ಪುಳುಮಾವಿಯ ನಂತರ ಅಧಿಕಾರಕ್ಕೆ ಬಂದ ಅರಸರೆಂದರೆ ಶಿವಶ್ರೀ ಶಾತಕರ್ಣಿ, ಶಿವಸ್ಕಂದ ಮತ್ತು ಯಜ್ಞಶ್ರೀ. ಯಜ್ಞಶ್ರೀ ಶಾತಕರ್ಣಿಯ ನಾಣ್ಯಗಳು ಬನವಾಸಿಯಲ್ಲಿ ದೊರೆತಿವೆ. ಈ ದೃಷ್ಟಿಯಿಂದಲೂ ಬನವಾಸಿ ಈ ಅರಸರ ರಾಜಧಾನಿಯಾಗಿದ್ದುದು ಸ್ಪಷ್ಟ. ಯಜ್ಞಶ್ರೀ ಶಾತಕರ್ಣಿಯ ನಂತರ ಶಾತವಾಹನ ರಾಜ್ಯ ಹಲವು ಭಾಗಗಳಾಗಿ ಒಡೆದು ಪರಸ್ಪರ ಸಂಬಂಧಿತ ವಂಶಗಳ ಅಧೀನಕ್ಕೆ ಸೇರಿ ಹೋಯಿತು. ಶಾತವಾಹನರ ನಂತರ ಬನವಾಸಿ ಪ್ರಾಂತ್ಯದಲ್ಲಿ ಆಳ್ವಿಕೆಯನ್ನು ಆರಂಭಿಸಿದವರೆಂದರೆ ಅವರ ಸಂಬಂಧಿಕರಾದ ಚುಟು-ಆನಂದ ಶಾತಕರ್ಣಿ ಮನೆತನದವರು.

ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕಿನ ಮಳವಳ್ಳಿ ಮತ್ತು ಬನವಾಸಿಗಳಲ್ಲಿ ದೊರೆತ ಶಾಸನಗಳಿಂದ ಚುಟುಗಳು ಶಾತವಾಹನರ ಅಧೀನರಾಗಿ ಬನವಾಸಿ ಪ್ರದೇಶವನ್ನು ಆಳುತ್ತಿದ್ದರೆಂದು ದೃಢಪಡುತ್ತದೆ. ವಿಣ್ಹುಕುಡ ಚುಟುಕುಲಾನಂದ ಶಾತಕರ್ಣಿ ಬನವಾಸಿಯನ್ನು ಆಳುತ್ತಿದ್ದನೆಂದು ಮಳವಳ್ಳಿ ಶಾಸನ ಹೇಳಿದರೆ, ಬನವಾಸಿಯ ನಾಗರಕಲ್ಲಿನ ಶಾಸನ ಇದನ್ನು ಸಮರ್ಥಿಸುತ್ತದೆ. ಈತನ ಮಗಳು ಶಿವಸ್ಕಂದ ನಾಗಶ್ರೀಯ ಮಗನೊಬ್ಬ ಯುವರಾಜನಾಗಿದ್ದುದನ್ನು ಉಲ್ಲೇಖಿಸುತ್ತದೆ. ವಾಸ್ತವದಲ್ಲಿ, ಶಾತವಾಹನರೊಡನೆ ನಿಕಟ ಸಂಪರ್ಕವಿರಿಸಿಕೊಂಡಿದ್ದ ಚುಟುಗಳು ರಾಜವಂಶೀಕರಾಗಿದ್ದು ಇವರನ್ನು ಆನಂದವಂಶದವರೆಂತಲೂ ಸಂಬೋಧಿಸಿದೆ. ಇವರು ತಮ್ಮನ್ನು ಹಾರಿತೀಪುತ್ರರೆಂದು, ಮಾನವ್ಯಗೋತ್ರದವರೆಂದು ಕರೆದುಕೊಂಡಿದ್ದಾರೆ. ಇವರ ಆಳ್ವಿಕೆಯ ಅವಧಿ ಕ್ರಿ.ಶ.೨ ರಿಂದ ೩ನೇ ಶತಮಾನವಾಗಿದೆ.

ಈಗಾಗಲೆ ಗಮನಿಸಿದಂತೆ, ಬನವಾಸಿಯೂ ಸೇರಿದಂತೆ, ಕಾರವಾರ, ಚಂದ್ರವಳ್ಳಿ ಮೊದಲಾದೆಡೆಗಳಲ್ಲಿ ಚುಟುಗಳ ನಾಣ್ಯಗಳು ಬೆಳಕಿಗೆ ಬಂದಿವೆ. ಈ ಕುರಿತು ಸಾಕಷ್ಟು ಚರ್ಚೆ ನಡೆದಿದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದುದು, ಬನವಾಸಿಯು ಶಾತವಾಹನ ಅರಸರು ಮತ್ತು ಚುಟುಗಳಂತಹ ನಿಕಟ ಸಂಬಂಧಿಗಳ ಆಡಳಿತಕೇಂದ್ರವಾಗಿ ಒಂದೆರಡು ಶತಮಾನಗಳ ಕಾಲ ಮುಂದುವರೆಯಿತು ಎಂಬುದನ್ನು ಶಾಸನಗಳು ಪುಷ್ಠಿ ಕೊಡುತ್ತವೆ. ಈ ರೀತಿಯಾಗಿ ಲಕ್ಷ್ಮಣ್ ತೆಲಗಾವಿಯವರು ತಮ್ಮ ಬರವಣಿಗೆಗಳಲ್ಲಿ ದಾಖಲಿಸಿರುವುದನ್ನು ಕಾಣಬಹುದು.

ಕೋಟೆ-ನಗರ : ಮೌರ್ಯರು ಮತ್ತು ಶಾತವಾಹನರ ಕಾಲದಲ್ಲಿ ಬನವಾಸಿ ಪ್ರಸಿದ್ಧ ನಗರವಾಗಿದ್ದಿತೆಂಬುದನ್ನು ಗಮನಿಸಲಾಗಿದೆ. ಈ ಪರಿಸರದಲ್ಲಿ ಕೈಗೊಳ್ಳಲಾದ ಭೂ ಶೋಧನೆಯಿಂದ ಆ ಕಾಲದ ಸಂಸ್ಕೃತಿಯ ವಿವರಗಳು ದೊರೆತಿವೆ. ಇವುಗಳಲ್ಲಿ ಶಾತವಾಹನಕಾಲೀನ ವಾಸ್ತುಶಿಲ್ಪ, ನಾಣ್ಯ, ಮಣಿ, ಮಡಿಕೆ, ಶಾಸನ ಮುಖ್ಯವಾದುವು. ಬನವಾಸಿ ನಗರನಿವೇಶನವೆಂಬುದು ಈ ನಗರರಚನೆಯನ್ನು ಗಮನಿಸಿದರೆ ಸ್ಪಷ್ಟವಾಗುತ್ತದೆ.

ಮೊದಲಿಗೆ ಇಲ್ಲಿ ಗಮನಿಸಬೇಕಾದುದೆಂದರೆ ಭೂಶೋಧನೆಯಲ್ಲಿ ಬೆಳಕಿಗೆ ಬಂದ ವಸ್ತುಅವಶೇಷಗಳು. ಹೀಗಾಗಿ ಬನವಾಸಿಕೋಟೆಯ ಒಳ ಮತ್ತು ಹೊರಪ್ರದೇಶಗಳು ಮುಖ್ಯವೆನಿಸುತ್ತವೆ. ಈ ಕೋಟೆ ಅತ್ಯಂತ ಪ್ರಾಚೀನವೆನ್ನುವುದಕ್ಕೆ ಇದರಲ್ಲಿ ದೊರೆತ ಅವಶೇಷಗಳೇ ಸಾಕ್ಷಿಯಾಗಿದ್ದು ಇಮ್ಮಡಿ ಪುಲಕೇಶಿಯ ಐಹೊಳೆ ಪ್ರಶಸ್ತಿಶಾಸನದಲ್ಲಿ ಈ ಕೋಟೆಯನ್ನು 'ಜಲದುರ್ಗ'ವೆಂದು ಕರೆದಿರುವುದು ಗಮನಾರ್ಹ. ಇಲ್ಲಿ ಹರಿಯುವ ವರದಾನದಿ. ಅರ್ಧವೃತ್ತಾಕಾರದಲ್ಲಿ ಮೂರುಕಡೆಯಿಂದ ಸುತ್ತುವರಿದು ಹರಿಯುವುದರಿಂದ ಬನವಾಸಿಗೆ ಸ್ವಾಭಾವಿಕ ರಕ್ಷಣೆ ದೊರೆತಂತಾಗಿದೆ. ಬನವಾಸಿ ಸುತ್ತುವರೆಯಲ್ಪಟ್ಟಿರುವುದು ಈ ಕೋಟೆಯಿಂದ. ಉತ್ತರ-ದಕ್ಷಿಣದಿಕ್ಕುಗಳಲ್ಲಿ ಉದ್ದವಾಗಿದ್ದು, ದೀರ್ಘ ಅಂಡಾಕೃತಿಯಲ್ಲಿದೆ. ಕೋಟೆಯ ಸುತ್ತಲೂ ಇರುವ ಕಂದಕವು ಅಗಲ ಆಳವೂ ಆಗಿದ್ದು, ಕೋಟೆಗೋಡೆ ಮತ್ತು ಕಂದಕಗಳಿಗೆ ಅಂತರವಿಲ್ಲದಿರುವುದು ಇಲ್ಲಿಯ ವೈಶಿಷ್ಟ್ಯ. ನದಿಯಿಂದ ತೋಡಲಾದ ಕಾಲುವೆ ಮೂಲಕ ಹರಿಯುವ ನೀರು ಈ ಕಂದಕಕ್ಕೆ ಸರಬರಾಜಾಗುವ ವ್ಯವಸ್ಥೆಯಿದೆ. ಚರಿತ್ರೆ ಹೇಳುವಂತೆ, ಈ ಕೋಟೆ ನಿರ್ಮಾಣಗೊಂಡುದು ಚುಟು ಅರಸರಿಂದ, ಕ್ರಿ.ಶ.೧-೨ನೇ ಶತಮಾನದಲ್ಲಿ. ಇಟ್ಟಿಗೆಯಲ್ಲಿ ಈ ಕೋಟೆಯನ್ನು ನಿರ್ಮಿಸಲಾಯಿತು. ಕೋಟೆಗೆ ಬಳಸಲಾದ ಅಗಲವಾದ ದೊಡ್ಡ ಇಟ್ಟಿಗೆಗಳ ಅಳತೆ ೪೫x೨೪x೮ ಸೆಂ.ಮೀ. ಚುಟು ಅರಸರ ಆಳ್ವಿಕೆಯ ನಂತರ ಶಿಥಿಲಗೊಂಡ ಕೋಟೆಯನ್ನು ಭದ್ರಪಡಿಸಿ ಬಳಸಿಕೊಂಡವರು ಕದಂಬ ಅರಸರು. ಗುಲ್ಬರ್ಗಾ ಜಿಲ್ಲೆ ಸನ್ನತಿಕೋಟೆಯಷ್ಟೆ ಬನವಾಸಿಕೋಟೆಯೂ ಪುರಾತನವೆಂಬುದರಲ್ಲಿ ಸಂಶಯವಿಲ್ಲ.

ಬನವಾಸಿಕೋಟೆಯ ಹೊರಭಾಗದಲ್ಲಿ, ದೋಣಿಗುಡ್ಡ, ಹೂವಿನಕೊಪ್ಪಲು, ಮಾರಿಹಿತ್ತಲು, ಆಸ್ಪತ್ರೆ ಬ್ಯಾಣ ಮುಂತಾದೆಡೆಯಲ್ಲಿ, ಕೋಟೆಯ ಒಳಭಾಗದಲ್ಲಿ ಶಾತವಾಹನಕಾಲೀನ ಹಲವಾರು ಕುರುಹುಗಳು ಕಂಡುಬಂದಿವೆ. ದೋಣಿಗುಡ್ಡ ಉತ್ಖನನದಲ್ಲಿ ಮೊದಲಬಾರಿಗೆ ಗಜಪೃಷ್ಠಾಕಾರದ, ಕುದುರೆ, ಲಾಳಾಕಾರದ ಕಟ್ಟಡದ ಅವಶೇಷಗಳು ಬೆಳಕಿಗೆ ಬಂದವು. ಕೋಟೆಯ ಒಳಭಾಗದಲ್ಲಿ ಕೈಗೊಂಡ ಉತ್ಖನನದಲ್ಲಿ ದೊಡ್ಡ ಹಾಗೂ ಉತ್ತಮಸ್ಥಿತಿಯಲ್ಲಿರುವ ಇನ್ನೊಂದು ಇಂತಹದ್ದೇ ಗಜಪೃಷ್ಠಾಕಾರದ ದೇವಗೃಹ ತಳಪಾಯ ಗೋಚರಿಸಿತು. ದೋಣಿಗುಡ್ಡದ ಉತ್ಖನನದಲ್ಲಿ ಕಂಡುಬಂದ ಈ ಬಗೆಯ ಕಟ್ಟಡ ಮೂರು ವಲಯಗಳಿಂದ ಕೂಡಿದ್ದು, ಈ ವಲಯಗಳ ಮಧ್ಯೆ ಇಕ್ಕಟ್ಟಾದ ಪ್ರದಕ್ಷಿಣಪಥ ಇರುವುದೆಂದು ಭಾವಿಸಲಾಯಿತು. ಇದರ ಒಳಭಾಗದ ಮಧ್ಯೆ ಸುಮಾರು ೧.೭೫ ಮೀಟರ್ ಎತ್ತರದ ಜಗಲಿ ಅಥವಾ ಕಟ್ಟೆಯಿದ್ದು, ಇಲ್ಲಿ ಪೂಜಾವಿಧಿಗಳನ್ನು ಆಚರಿಸುತ್ತಿದ್ದಿರಬಹುದೆಂದು ತರ್ಕಿಸಲಾಯಿತು. ಸಾಕಷ್ಟು ನಾಶಗೊಂಡ ಪ್ರಯುಕ್ತ ದೇವಗೃಹವೆನ್ನಬಹುದಾದ ಈ ವಾಸ್ತುಭಾಗದ ಅಧ್ಯಯನ ಇನ್ನೂ ಸಮರ್ಪಕವಾಗಿ ನಡೆಸಲಾಗಿಲ್ಲವೆಂಬುದನ್ನು ಗಮನಿಸಬೇಕು. ಹಾಗೆಯೇ, ಕೋಟೆಯ ಒಳಭಾಗದಲ್ಲಿ ಶೋಧಗೊಂಡ ಇನ್ನೊಂದು ಇಂತಹದ್ದೇ ಕಟ್ಟಡ ಹಲವು ದೃಷ್ಟಿಯಿಂದ ವಿಶಿಷ್ಟವಾದುದು. ಈ ಕಟ್ಟಡ ಎರಡು ವಲಯಗಳಿಂದ ಕೂಡಿರುವಂತಹದ್ದಾಗಿದೆ. ಇದು ನಿರ್ಮಾಣಗೊಂಡಿರುವುದು ದೊಡ್ಡಗಾತ್ರದ (೪೨x೨೭x೭ ಸೆಂ.ಮೀ.)

ಕೆಂಪುಇಟ್ಟಿಗೆಗಳಿಂದ. ಹೊರವಲಯದ ಗೋಡೆ ಇದರ ಒಳವಲಯದ ಗೋಡೆಗಿಂತ ಹೆಚ್ಚು ದಪ್ಪವಿರುವುದು ವಿಶೇಷ. ಈ ಕಟ್ಟಡದ ಮುಂಭಾಗದಲ್ಲಿ ಆಯಾತಾಕಾರದ ಕೊಠಡಿಗಳು ಮತ್ತು ಹಿಂಭಾಗದಲ್ಲಿ ಎತ್ತರದ ಜಗಲಿ ಇರುವಂತೆ ತೋರುತ್ತದೆ. ಇದು ಲಾಳಾಕಾರದ ಮುಖ್ಯ ಕಟ್ಟಡಕ್ಕೇ ಹೊಂದಿಕೊಂಡಿರುವ ಪ್ರಯುಕ್ತ ಅದಕ್ಕನುಗುಣವಾಗಿ ಮೇಲಿನ ಭಾಗಗಳನ್ನು ನಿರ್ಮಿಸಿದ್ದಿರಬೇಕೆಂದು ತೋರುತ್ತದೆ. ದಪ್ಪಗೋಡೆಗಳಿಂದ ನಿರ್ಮಾಣಗೊಂಡ ಶಾತವಾಹನ ದೇವಮಂದಿರಗಳು ಆ ಕಾಲದ ವಾಸ್ತುಭದ್ರತೆಯನ್ನು ಸೂಚಿಸುತ್ತವೆಂದು ವ್ಯಕ್ತಪಡುತ್ತದೆ.

ಬನವಾಸಿಕೋಟೆ ಭೂಶೋಧನೆಯಲ್ಲಿ ಕಂಡುಬಂದ ಇತರ ಪ್ರಾಚ್ಯಾವಶೇಷಗಳಲ್ಲಿ ಮುಖ್ಯವಾದವೆಂದರೆ, ಹೊಳಪುಳ್ಳ ಮತ್ತು ತೆಳ್ಳನೆಯ ಕಪ್ಪು-ಕೆಂಪು ಮಡಿಕೆ ಚೂರುಗಳು, ಕೆಂಪುಲೇಪದ ಮೇಲೆ ಬಿಳಿವರ್ಣದಿಂದ ವಿನ್ಯಾಸಗೊಂಡ ಚಿತ್ರಿತ ಮಡಿಕೆ ಚೂರುಗಳು, ರೋಮನ್ನರ ಮಡಿಕೆಗಳನ್ನು ಹೋಲುವ ರೌಲೆಟೆಡ್, ಸಾಮಿಯನ್ ಮಡಿಕೆ ಚೂರುಗಳು, ಚಿನ್ನದ ಲೇಪವುಳ್ಳ ಗಾಜಿನ ಮತ್ತು ಹರಳುಕಲ್ಲಿನ ಮಣಿಗಳು, ಮೌರ್ಯಕಾಲೀನ ಮುದ್ರಾಂಕಿತ ನಾಣ್ಯ ದೊರೆತಿವೆ. ಗೌತಮಿಪುತ್ರ ಶಾತಕರ್ಣಿಯ ಹೆಸರುಳ್ಳ ನಾಣ್ಯಚೂರುಗಳು; ಮುಖ್ಯವಾಗಿ, ಶಾತವಾಹನ-ಕದಂಬ ಕಾಲದ್ದೆಂದು ಹೇಳಬಹುದಾದ ಹಾಗೂ ಕಾರ್ತಿಕೇಯ ಅಥವಾ ಸ್ಕಂದನ ವಿಗ್ರಹವೆಂದು ತಿಳಿಯಬಹುದಾದ ಶಿಲ್ಪ-ಇವು ಈ ಶೋಧದಿಂದಲೆ ಬೆಳಕಿಗೆ ಬಂದವು. ಈ ಕೋಟೆಯ ಕೆಳಪದರಿನಲ್ಲಿ ಕಂಡುಬರುವ ಇಟ್ಟಿಗೆಕಟ್ಟಡ, ಶಿವಶ್ರೀ ಪುಳುಮಾವಿ ಶಾಸನದ ಮೇಲೆ ಕೆತ್ತಲಾಗಿರುವ ಚೈತ್ಯವಿನ್ಯಾಸ ಮುಂತಾದುವು ಶಾತವಾಹನಕಾಲದ ಬನವಾಸಿಯಲ್ಲಿದ್ದ ಕ್ಷಾತ್ರವಾಸ್ತುರಚನೆಯ ಕುರುಹುಗಳು.

ಬೃಹತ್‌ಶಿಲಾಸಂಸ್ಕೃತಿಯ ಹಂತದಿಂದಲೇ ಬನವಾಸಿ ಪ್ರದೇಶದಲ್ಲಿ ಸುಲಭವಾಗಿ ದೊರೆಯುತ್ತಿದ್ದ ಜಂಬಿಟ್ಟಿಗೆಕಲ್ಲಿನ ಉಪಯೋಗವಿದ್ದಿತೆಂಬುದು ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶ. ಈ ಪರಂಪರೆ ಶಾತವಾಹನರಕಾಲಕ್ಕೂ ಮುಂದುವರೆದಿದೆ. ಆದರೆ ಶಾತವಾಹನರ ನಿಕಟವರ್ತಿಗಳಾದ ಚುಟುಗಳು ನಿರ್ಮಿಸಿದ ಬನವಾಸಿಕೋಟೆ ಒಳಗೊಂಡಿರುವುದು ಸುಟ್ಟ ಇಟ್ಟಿಗೆಯನ್ನು ಮೇಲೆಯೇ ನೋಡಿದಂತೆ, ಈ ಕೋಟೆ ರಚನೆಗೊಂಡಿರುವುದು ಅಂಡಾಕಾರ ವಿನ್ಯಾಸದ ಆಧಾರದ ಮೇಲೆ. ಜಂಬಿಟ್ಟಿಗೆಕಲ್ಲಿನ ಆಯತಾಕಾರದ ಇಟ್ಟಿಗೆಗಳು ಬಳಕೆಗೊಂಡುದು ಆದಿಕದಂಬರ ಕಾಲದಲ್ಲಿ ಮಾತ್ರ ಎನ್ನುವುದು ಮುಖ್ಯ.

ಬನವಾಸಿ ನಗರರಚನೆಯನ್ನು ಗಮನಿಸಿದರೆ ಹಲವಾರು ಮಹತ್ವದ ಅಂಶಗಳು ವ್ಯಕ್ತಪಡುತ್ತವೆ. ಪುರಾತತ್ವಜ್ಞರು ನಡೆಸಿರುವ ಅಧ್ಯಯನಗಳು ಈ ನಿಟ್ಟಿನಲ್ಲಿ ಸಾಕಷ್ಟು ಬೆಳಕು ಚೆಲ್ಲುತ್ತವೆ. ಬನವಾಸಿನಗರದ ರಸ್ತೆಗಳು ಸಾಕಷ್ಟು ಅಗಲವಾಗಿದ್ದವು. ಇಟ್ಟಿಗೆಯನ್ನು ಬಳಸಿದಾಗ ಇವು ಅಂಡಾಕೃತಿಯಲ್ಲಿರುವುದು ಗೋಚರಿಸುತ್ತದೆಂದು ತಿಳಿದುಬರುತ್ತದೆ. ಈ ರಸ್ತೆಗಳಿಗೆ ಅಡ್ಡವಾಗಿ ಅಲ್ಲಲ್ಲಿ ಸಮಾನಾಂತರ ಕಾಲುದಾರಿಗಳಿದ್ದುದನ್ನು ಹಾಗೂ ಮುಖ್ಯರಸ್ತೆಯ ಎರಡು ಬದಿಗಳಲ್ಲೂ

ಇಟ್ಟಿಗೆಕಟ್ಟಡಗಳಿದ್ದುದನ್ನು ಗುರುತಿಸಲಾಗಿದೆ. ವಸತಿಗೃಹಗಳಲ್ಲಿ ಇಟ್ಟಿಗೆ ಆವರಣವಿರುವ ಬಾವಿಗಳಿದ್ದು ನಗರದ ಸುತ್ತಲೂ ಕೋಟೆ ಗೋಡೆಯಿದ್ದು, ವಿಶಾಲ ಕಂದಕಗಳಿಂದ ಆವೃತವಾಗಿದ್ದಿತು. ಸನ್ನತಿಯಲ್ಲಿದ್ದಂತೆಯೆ ಬನವಾಸಿಯಲ್ಲಿಯೂ ನದಿದಡದ ಪಟ್ಟಣಗಳಲ್ಲಿದ್ದಂತಹ ಹಾಗೂ ಇಟ್ಟಿಗೆಯಲ್ಲಿ ನಿರ್ಮಾಣಗೊಂಡಂತಹ ಸ್ನಾನಘಟ್ಟಗಳಿದ್ದವು. ಗಮನಾರ್ಹ ಅಂಶವೆಂದರೆ, ಹರಪ್ಪ - ಮೊಹೆಂಜೊದಾರೊ ಸಂಸ್ಕೃತಿಯನ್ನು ಹೋಲುವ ಸುಸಜ್ಜಿತ ನಗರ ಇಲ್ಲಿದ್ದಿತ್ತೆಂಬುದು.

ಕೆರೆ: ಕೆರೆಗಳ ನಿರ್ಮಾಣ ಕುರಿತ ವಿವರಗಳನ್ನು ಇಲ್ಲಿ ಪರಿಶೀಲಿಸಬಹುದು. ಬನವಾಸಿಯ ಬೃಹತ್ತಾದ ಕೆರೆಗಳು ಇಟ್ಟಿಗೆಯಿಂದ ನಿರ್ಮಾಣಗೊಂಡಂತಹವು. ವಿಣ್ಹುಕಡ ಚುಟುಕುಲಾನಂದ ಶಾತಕರ್ಣಿಯ ಮಗಳು ಶಿವಸ್ಕಂದ ನಾಗಸಿರಿ ಬನವಾಸಿಯಲ್ಲಿ ಕೆರೆಯೊಂದನ್ನು ಕಟ್ಟಿಸಿದಳೆಂಬ ಉಲ್ಲೇಖವಿದೆ. ಈಗ ತಿಳಿದುಬಂದಿರುವಂತೆ, ಆದಿಮಧುಕೇಶ್ವರ ದೇವಾಲಯ ಸಮೀಪದಲ್ಲಿ ಇಟ್ಟಿಗೆಕಟ್ಟೆಯ ಅವಶೇಷವಿರುವ ಕೆರೆಯೆ ಇದಾಗಿರಬೇಕು. ಇದರ ಅಕ್ಕಪಕ್ಕಗಳಲ್ಲಿರುವ ಇಟ್ಟಿಗೆ ಅವಶೇಷಗಳ ಪ್ರಕಾರ ಇಲ್ಲಿ ನಗರವೊಂದು ಇದ್ದಿರಬೇಕೆಂಬ ಶಂಕೆಗೆ ದಾರಿ ಮಾಡಿಕೊಡುತ್ತದೆ. ಗುಡ್ನಾಪುರದ ಸ್ತಂಭಶಾಸನದಲ್ಲಿ ಉಲ್ಲೇಖಗೊಂಡ ಗುಡ್ಡತಟಾಕವೆ ಈಕೆ ತೋಡಿಸಿದ ಕೆರೆಯಾಗಿರಬಹುದೆಂದು ಭಾವಿಸಲಾಗುತ್ತದೆ.

ಬೌದ್ಧಧರ್ಮ: ಬನವಾಸಿಯಲ್ಲಿ ಬೌದ್ಧ ಧರ್ಮಕ್ಕೆ ಸಂಬಂಧಿತವಾದ ಪ್ರಾಚೀನ ಕಾಲದಲ್ಲಿ ವಿವಿಧ ಕಾಮಗಾರಿಗಳು ವಿವಿಧ ಚಟುವಟಿಕೆಗೆ ಹೆಸರಾಗಿತ್ತು. ರಾಜಾಶ್ರಯಕ್ಕೆ ಪಾತ್ರವಾದ ಬೌದ್ಧ ಧರ್ಮವು ರಾಜರು ಮತ್ತು ಪ್ರಜೆಗಳ ಮೇಲೆ ಸಮಾನ ಪ್ರಭಾವ ಬೀರಿದ್ದಿತು. ಇಲ್ಲಿ ವಿಕಾಸ ಹೊಂದಿದ ಮೌರ್ಯಕಾಲೀನ ಕಾಲಘಟ್ಟದಲ್ಲಿ ಬೌದ್ಧಧರ್ಮದ ಬಗೆಗೆ ಹಿಂದೆಯೆ ಪ್ರಸ್ತಾಪಿಸಲಾಗಿದೆ. ಮೌರ್ಯಕಾಲೀನ ಸಂಸ್ಕೃತಿಯ ಪ್ರಭಾವಕ್ಕೆ ಬನವಾಸಿ ಒಳಪಟ್ಟಿದ್ದರೂ ಆ ಅವಧಿಯ ಸ್ಮಾರಕಗಳನ್ನು ನಿರ್ದಿಷ್ಟವಾಗಿ ಗುರುತಿಸಲಾಗಿಲ್ಲ; ಆಗಿನ ವಾಸ್ತು ಮತ್ತು ಮೂರ್ತಿಶಿಲ್ಪಗಳು ಶೋಧಗೊಂಡಿಲ್ಲ. ಆದರೆ ಚುಟು-ಶಾತವಾಹನ ಆಡಳಿತಾವಧಿಯ ಬನವಾಸಿಯಲ್ಲಿ, ಬೌದ್ಧಧರ್ಮ ಚಟುವಟಿಕೆಗಳು ತೀವ್ರವಾಗಿದ್ದವು. ಈ ಧರ್ಮಕ್ಕೆ ಸಂಬಂಧಿಸಿದ ಹಲವಾರು ಸ್ಮಾರಕಗಳನ್ನು ಶೋಧಿಸಿ ಈಗ ಬೆಳಕಿಗೆ ತರಲಾಗಿದೆ. ಎಚ್.ಆರ್. ರಘುನಾಥಭಟ್ಟರು, ಬೌದ್ಧಧರ್ಮ ಉತ್ತರಾಪಥ-ದಕ್ಷಿಣಾಪಥ-ಶ್ರೀಲಂಕೆಗಳ ಮಧ್ಯದ ಒಂದು 'ಧರ್ಮಸೇತು'ವಾಗಿದ್ದಿರಬಹುದೆಂಬ; ಅಭಿಪ್ರಾಯ ಪಡುತ್ತಾರೆ. ಬನವಾಸಿಯಲ್ಲಿ ನಡೆಸಲಾದ ಉತ್ಖನನಗಳಲ್ಲಿ ದೊರೆತ ಮುದ್ರಾಂಕಿತ ನಾಣ್ಯವು ಕೂಡ ಈ ಪ್ರಾಚೀನ ಮೌರ್ಯ ಸಂಪರ್ಕವನ್ನೇ ಪ್ರಾಯಶಃ ರುಜುವಾತುಪಡಿಸುತ್ತದೆಂಬ; ಹಾಗೂ ಅಗೆದು ತೆಗೆದಾಗ ಶಾತವಾಹನ ಕಾಲೀನ ಚೈತ್ಯಾಲಯದ ಅಡಿಪಾಯದ ಕೆಳಸ್ತರದಲ್ಲಿ ದೊರೆತ ಈ ನಾಣ್ಯವು ಶಾತವಾಹನ ಪೂರ್ವ ಕಾಲದ್ದೆಂಬ ವಿವರಗಳನ್ನು ಒದಗಿಸುತ್ತಾರೆ. ಅವರೆ ಮುಂದುವರೆದು ಹೇಳುವಂತೆ, ಕ್ರಿಪೂ. ೧ನೇ ಶತಮಾನದಲ್ಲಿ ಮಹಾರಾಷ್ಟ್ರದ ಪೂನಾ ಜಿಲ್ಲೆಗೆ ಸೇರಿದ ಕಾರ್ಲೆಯಲ್ಲಿ ನಿರ್ಮಿತವಾದ ಬೌದ್ಧ ಚೈತ್ಯಾಲಯದ ಮುಖವಾಡವನ್ನು (ಚೈತ್ಯ), ಶಾಸನಶಿಲ್ಪವನ್ನು ಕೆತ್ತಿಸಿದನು. ಈತ ಕೆತ್ತಿಸಿದ ಮಹಾಚೈತ್ಯ ವಿನ್ಯಾಸಕ್ಕೂ ಬನವಾಸಿಯಲ್ಲಿ ದೊರೆತ ಶಾತವಾಹನ

ಶಾಸನಶಿಲೆಯ ಮೇಲ್ತುದಿಯಲ್ಲಿ ಕಂಡರಿಸಲಾದ ಚೈತ್ಯವಿನ್ಯಾಸಕ್ಕೂ ಸಾಮ್ಯವಿದೆ. ಈ ಎಲ್ಲ ಆಕರಗಳನ್ನಾಧರಿಸಿ ಹೇಳುವುದಾದರೆ, ಕ್ರಿ.ಪೂ.೩-೨-೧ನೇ ಶತಮಾನಗಳಲ್ಲಿ ಬನವಾಸಿಯಲ್ಲಿ ಹೀನಯಾನ ಪಂಥದ ಥೇರವಾದವಿತ್ತು.

ಬೌದ್ಧಧರ್ಮ ಬನವಾಸಿಯಲ್ಲಿ ಪ್ರಬಲಗೊಂಡುದುದು ಚುಟು-ಶಾತವಾಹನರ ಕಾಲದಲ್ಲಿ ಎಂಬುದು ನಿರ್ವಿವಾದ ಸಂಗತಿ. ಬೌದ್ಧಧರ್ಮ ವಿಸ್ತಾರವಾಗಿ ಬೆಳೆಯಲು ಕಾರಣವಾದುದು ಅರಸರು ಮತ್ತು ಪ್ರಜೆಗಳು ನೀಡಿದ ಪೋಷಣೆ ಮತ್ತು ಪ್ರೋತ್ಸಾಹ. ರಘುನಾಥಭಟ್ಟರ ವಿವರಣೆಯನ್ನು ಇಲ್ಲಿ ಗಮನಿಸುವುದಾದರೆ, ದಕ್ಷಿಣಾಪಥದ ಕೃಷ್ಣಾಕಣಿವೆಯ ಹಲವೆಡೆ ಪಸರಿಸಿದ್ದ ಮತೀಯ ಹಿನ್ನೆಲೆಯಲ್ಲಿ ಚುಟು-ಶಾತವಾಹನ-ಇಕ್ಷ್ವಾಕು ಮತ್ತು ಇತರೆ ರಾಜಮನೆತನಗಳ ಪ್ರೋತ್ಸಾಹ, ಸಮಾಜದ ವಿವಿಧ ಸ್ತರದ ಜನತೆ ವರ್ತಕವರ್ಗ ತೋರಿಸಿದ ಆಸಕ್ತಿ, ಗೌರವ-ಭಕ್ತಿಯಿಂದಾಗಿ ಮಹಾಯಾನ ಬೌದ್ಧಮತೀಯವು ಅಗತ್ಯಕ್ಕನುಗುಣವಾಗಿ ಬುದ್ಧ-ಬೋಧಿಸತ್ವ, ಯಕ್ಷ-ಯಕ್ಷಿ, ನಾಗ-ನಾಗಿನಿ ಮುಂತಾದ ಮೂರ್ತಿಪೂಜೆ-ವಿಗ್ರಹ ಬೇಡಿಕೆಯ ಪೂರೈಕೆ, ಇದೆಲ್ಲವನ್ನು ಸಾಧ್ಯವಾಗಿಸಲಾಯಿತು. ಕೃಷಿ-ವಾಣಿಜ್ಯ-ಉದ್ಯಮಗಳ ಪ್ರಗತಿ, ದೇಶ-ವಿದೇಶಗಳ ಸಂಪರ್ಕಗಳಿಂದಾಗಿ ಸಮಕಾಲೀನ ಸಮಾಜೋ-ಧಾರ್ಮಿಕ ಜೀವನಕ್ಕೆ ಹೊಸತಿರುವು ನೀಡಲಾಯಿತು. ಶಾಸನ, ವಾಸ್ತುಶಿಲ್ಪ, ನಾಣ್ಯ ಮತ್ತಿತರ ಪ್ರಾಚ್ಯವಸ್ತು- ವಿಶೇಷಗಳು ಇದನ್ನು ರುಜುವಾತುಪಡಿಸುತ್ತವೆ. ಇದುವರೆಗೆ ನಡೆದ ಸಂಶೋಧನೆಗಳನ್ನು ಆಧರಿಸಿ ಹೇಳುವುದಾದರೆ, ಬನವಾಸಿಯಲ್ಲಿ ಬೌದ್ಧಮತ ಕ್ರಿಸ್ತಶಕೆಯ ಆರಂಭದ ಎರಡು-ಮೂರು ಶತಮಾನಗಳಲ್ಲಿ ಸಾಕಷ್ಟು ಜನಪ್ರಿಯವಾಗಿತ್ತು. ಹಲವು ಚೈತ್ಯಾಲಯಗಳು, ಸ್ತೂಪಗಳು ಇದ್ದಿರಬಹುದಾದ ಕುರುಹುಗಳನ್ನು ಅಲ್ಲಲ್ಲಿ ನೋಡಬಹುದು.

ಚೈತ್ಯಾಲಯಗಳಿಗೆ ಸಂಬಂಧಿಸಿದಂತೆ, ಬನವಾಸಿಯಲ್ಲಿ ನಡೆದ ಭೂಶೋಧನೆಗಳು ಹೊಸ ಬೆಳಕು ಚೆಲ್ಲಿವೆ. ಕೆಲವು ಚೈತ್ಯಾಲಯಗಳ ತಳಪಾಯಗಳು ಗೋಚರಿಸಿವೆ. ಇವುಗಳ ರಚನೆ, ಬಳಸಲಾದ ೪೦x೮ ಸೆಂ.ಮೀ. ಗಾತ್ರದ ದೊಡ್ಡ ಇಟ್ಟಿಗೆ, ದೊರೆತ ಮಡಿಕೆ-ಕುಡಿಕೆ, ಮಣಿ, ಶಿಲ್ಪ ಮುಂತಾದ ಅವಶೇಷಗಳು ಚುಟು-ಶಾತವಾಹನ ಅವಧಿಗೆ ಸೇರಿದವೆಂಬುದು ದೃಢಪಟ್ಟಿದೆ. ಪುರಾತತ್ವಜ್ಞರು ಗುರುತಿಸುವಂತೆ, ಬನವಾಸಿಯ ಎರಡು ಚೈತ್ಯಾಲಯಗಳ ಪ್ರವೇಶದ್ವಾರಕ್ಕೆ ಸಂಬಂಧಿಸಿದ ಸರಳ ಚಂದ್ರಶಿಲೆ ನಾಗಾರ್ಜುನಕೊಂಡದ ಚೈತ್ಯಾಲಯಶಿಲೆ ಹಾಗೂ ಶ್ರೀಲಂಕೆಯ 'ವನವಾಸವಿಹಾರ'ದ ಚಂದ್ರಶಿಲೆಗಳಿಗೆ ಹೋಲುತ್ತದೆ. ಅ. ಸುಂದರವರು ಬನವಾಸಿ ಬಳಿಯ ಕಡಗೋಡಿನಲ್ಲಿ ಗುರುತಿಸಿದ ಮೂಲತಃ ಬೌದ್ಧಸ್ತೂಪವಾಗಿದ್ದಿರಬಹುದಾದ ಇಟ್ಟಿಗೆ-ಮಣ್ಣಿನ ದಿನ್ನೆ; ಎಚ್.ಆರ್. ರಘುನಾಥಭಟ್ಟರು ಗುರುತಿಸಿದಂತೆ ವರದಾನದಿಯಾಚೆಗಿನ ದಡದಲ್ಲಿ, ಅಂದರೆ ಬನವಾಸಿಯ ಆಗ್ನೇಯಭಾಗದಲ್ಲಿ ಗುರುತಿಸಿದ ಕೆಲವು ಇಟ್ಟಿಗೆದಿನ್ನೆಗಳು ಮತ್ತು ಬುದ್ಧನದೆಂದು ಊಹಿಸಬಹುದಾದ ಒಂದು ಪ್ರಾಚೀನ ವಿಗ್ರಹದ ಪಾದಭಾಗವು ದೊರೆತಿದ್ದು ಇವೆಲ್ಲವೂ ಅಧ್ಯಯನದ ದೃಷ್ಟಿಯಿಂದ ಗಮನಿಸಲರ್ಹವಾದುವು. ಸುಡಾವೆಮಣ್ಣಿನಲ್ಲಿ ತಯಾರಾದ ಸ್ತೂಪಾಕಾರದ ಪುಟ್ಟ ಮುಚ್ಚಳದಂಥಾ ಭಾಗಗಳೂ ಇವರ ಸಂಶೋಧನೆಯಲ್ಲಿ ಸೇರಿವೆ. ಇವುಗಳ ಮೇಲೆ

ಆಕರ್ಷಕ ಶೈಲಿಯಲ್ಲಿ ಹೂಬಳ್ಳಿ, ಆನೆಗಳ ಸಾಲು ಮತ್ತಿತರ ಅಲಂಕರಣೆಗಳನ್ನು ವಿನ್ಯಾಸಗೊಳಿಸಲಾಗಿದೆ.

ವಿಣ್ಹುಕಡ ಚುಟುಕುಲಾನಂದ ಶಾತಕರ್ಣಿಯ ಮಗಳು ಶಿವಸ್ಕಂದ ನಾಗಶ್ರೀ (ಶಿವಖಡ ನಾಗಸಿರಿ) ಹಾಕಿಸಿದ ಮುಚಲಿಂದ ನಾಗಪ್ರತಿಮೆಯ ಶಿಲಾಫಲಕ ಹಾಗೂ ಕಟ್ಟಿಸಿದ ತಟಾಕ ಮತ್ತು ಒಂದು ವಿಹಾರ-ಇವುಗಳನ್ನು ಈ ಸಂಬಂಧದಲ್ಲಿ ಉದಾಹರಿಸಲಾಗುತ್ತದೆ. ಆದರೆ ಈಕೆ ನಿರ್ಮಿಸಿದ ವಿಹಾರದ ನೆಲೆಯನ್ನು ಇನ್ನೂ ಸರಿಯಾಗಿ ನಿರ್ಧರಿಸಲಾಗಿಲ್ಲ. ಹಾಗೆಯೇ, ಇಲ್ಲಿ ಪ್ರಸ್ತಾಪಿಸಬಹುದಾದ ಇನ್ನೊಂದು ಉದಾಹರಣೆಯೆಂದರೆ, ವಾಶಿಷ್ಠಿಪುತ್ರ ಶಿವಶ್ರೀ ಪುಳುಮಾವಿಯ ಮಹಾದೇವಿಯ ಛಾಯಾಪ್ರಸ್ತರದ ಮೇಲ್ತುದಿಯಲ್ಲಿ ಕೆತ್ತಿರುವ ಚೈತ್ಯವಿನ್ಯಾಸವಾಗಿದೆ. ಸಮಕಾಲೀನ ಚೈತ್ಯದ ಗವಾಕ್ಷಿಗೆ ಮಾದರಿಯಂತಿರುವ ಚೈತ್ಯವಿನ್ಯಾಸ ಬನವಾಸಿಯಲ್ಲಿ ಮೊದಲಬಾರಿಗೆ ಪತ್ತೆಯಾಯಿತೆಂಬುದು ಪರಿಶೀಲನಾರ್ಹ ಸಂಗತಿ. ಹಾಗೆಯೇ, ಇನ್ನೂ ಸಂಶೋಧನೆಯಾಗಬೇಕಿರುವುದು ಕ್ರಿ.ಶ. ೭ನೇ ಶತಮಾನದ ಆರಂಭದಲ್ಲಿ ಬನವಾಸಿಪ್ರದೇಶಕ್ಕೆ ಬಂದಿರಬಹುದಾದ ಚೀನೀಯಾತ್ರಿಕ ಹ್ಯೂಯೆನ್‌ತ್ಸಾಂಗ್ ಪ್ರಸ್ತಾಪಿಸಿರುವ ಬೌದ್ಧ ಸಂಘಾರಾಮಗಳ ವಿಚಾರವಾಗಿದೆ. ಬನವಾಸಿಯ ಈಶಾನ್ಯದಿಕ್ಕಿನಲ್ಲಿ ನೂರು ಬೌದ್ಧಸಂಘಾರಾಮಗಳನ್ನು ಸಂದರ್ಶಿಸಿದ ಈ ಯಾತ್ರಿಕ. ಹೀನಯಾನ-ಮಹಾಯಾನಪಂಥದ ಹತ್ತುಸಾವಿರ ಬೌದ್ಧಭಿಕ್ಷುಗಳು ಅಲ್ಲಿದ್ದರೆಂದು ಕೆಲವು ದಾಖಲೆಗಳು ಹೇಳುತ್ತವೆ. ನಾಗಶ್ರೀಯ ಬೌದ್ಧವಿಹಾರದಂತೆಯೆ ಸಂಘಾರಾಮಗಳ ನೆಲೆಯನ್ನೂ ಅನ್ವೇಷಿಸಬೇಕಿದೆ. ಬನವಾಸಿಯ ಬೌದ್ಧಧರ್ಮದ ಚಟುವಟಿಕೆ ಮತ್ತು ಅವಶೇಷಗಳ ಮೇಲೆ ಖಚಿತ ಬೆಳಕು ಹಾಯಿಸಿ ಶೋಧಿಸಬೇಕಿದೆ.

ಮೇಲೆ ಪ್ರಸ್ತಾಪಿಸಿದಂತೆ ಬನವಾಸಿಯಲ್ಲಿ ನೆಲೆಗೊಂಡಿದ್ದ ಬೌದ್ಧಧರ್ಮದ ವಿವಿಧ ಪಂಥಗಳು ರಾಜರು ಮತ್ತು ಪ್ರಜೆಗಳ ಮೇಲೆ ಸಾಕಷ್ಟು ಪ್ರಭಾವ ಬೀರಿದ್ದವು. ಈ ಹಿನ್ನೆಲೆಯಲ್ಲಿ, ಬನವಾಸಿಯಲ್ಲಿ ಮೌರ್ಯರಕಾಲದಿಂದ ಕಲ್ಯಾಣದ ಚಾಲುಕ್ಯರವರೆಗೆ ಬೆಳೆದುಬಂದ ಬೌದ್ಧಮತದ ವಿವರಗಳನ್ನು ಮೂರು ಮಜಲುಗಳನ್ನು ಗುರುತಿಸಬಹುದೆನ್ನುತ್ತಾರೆ ಸಂಶೋಧಕ ರಘುನಾಥ ಭಟ್. ಅವುಗಳೆಂದರೆ ಮೌರ್ಯಕಾಲದ ಹೀನಯಾನ-ಥೇರವಾದ, ಚುಟು-ಶಾತವಾಹನ-ಇಕ್ಷ್ವಾಕುಗಳ ಕಾಲದ ಮಹಾಯಾನ-ಮಹೀಷಾಸಕ ಬೌದ್ಧಪಂಥ, ಆ ನಂತರದ ಕೆಲವು ಶತಮಾನಗಳಲ್ಲಿ ಬೆಳೆದು ಬಂದ ವಜ್ರಯಾನ ತಾಂತ್ರಿಕಪಂಥ-ಇವೇ ಆ ಮೂರು ಮಜಲುಗಳು. ಒಟ್ಟಿನಲ್ಲಿ, ಬನವಾಸಿ ಆಶ್ರಯ ನೀಡಿದ ಥೇರವಾದ, ಮಹೀಷಾಸಕಪಂಥ ಮತ್ತು ವಜ್ರಯಾನಗಳು ಕ್ರಿಪೂ.೩ನೇ ಶತಮಾನದಿಂದ ೧೨ನೇ ಶತಮಾನದವರೆಗೆ, ಅಂದರೆ ಸಾವಿರದ ಐದುನೂರು ವರ್ಷಗಳ ತನಕ ಅಲ್ಲಿಯ ಸಾಂಸ್ಕೃತಿಕಜೀವನದ ಮೇಲೆ ಅಗಾಧ ಪರಿಣಾಮಗಳನ್ನು ಉಂಟು ಮಾಡಿದವೆಂಬುದನ್ನು ಮರೆಯುವಂತಿಲ್ಲ.

ಶಿಲ್ಪ: ಬನವಾಸಿಯ ನಾಗಶಿಲ್ಪವು ವಿದ್ವಾಂಸರ ಗಮನವನ್ನು ಅಪಾರವಾಗಿ ಸೆಳೆದಿದ್ದು, ಚುಟು-ಶಾತವಾಹನಕಾಲೀನ ಶಿಲಾಶಿಲ್ಪಗಳಿಗೆ ಅತ್ಯುತ್ತಮ ಉದಾಹರಣೆಯಾಗಿ ನಿಲ್ಲುತ್ತದೆ. ಮಧುಕೇಶ್ವರ

ದೇವಾಲಯದ ಪ್ರಾಂಗಣದಲ್ಲಿ ಶಾಸನೋಕ್ತ ಶಿಲ್ಪವಿದೆ. ಕರ್ನಾಟಕದ ಪ್ರಾಚೀನತಮ ಶಿಲ್ಪಶಾಸನಗಳಲ್ಲೇ ಪ್ರಮುಖವಾದುದೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದರ ಕಾಲ ಕ್ರಿ.ಶ. ೨೬೨. ಈ ನಾಗಶಿಲ್ಪವನ್ನು ಕೆತ್ತಿದವನು ನಟಕ(ಣಟಕ-ನರ್ತಕ)ನೆಂಬ ಶಿಲ್ಪಿ; ವೈಜಯಂತಿ ಅಥವಾ ಬನವಾಸಿಯ ಶಿಲ್ಪಾಚಾರ್ಯ ನಾಗಿದ್ದ ದಮೋರಕ (ಧರ್ಮರಕ್ಷಕ)ನ ಶಿಷ್ಯನಾಗಿದ್ದಾನೆ. ಅಮಾತ್ಯ ಸ್ಕಂದಸ್ವಾತಿಯ ನಿರ್ದೇಶನದಲ್ಲಿ ನಟಕನು ಈ ಶಿಲ್ಪವನ್ನು ಮಾಡಿದನಂತೆ. ಶಾಸನಪಾಠದ ಸಾರಾಂಶ ಇಂತಿದೆ: ಹಾರಿತೀಪುತ್ರ ವಿಣ್ಹುಕಡ ಚುಟುಕುಲಾನಂದ ಶಾತಕರ್ಣಿರಾಜನ ಹನ್ನೆರಡನೆಯ ವರ್ಷದಲ್ಲಿ, ಹೇಮಂತಋತುವಿನ ಏಳನೆಯ ಪಕ್ಷದ ಮೊದಲ ದಿನದಂದು ಮಹಾಭುವಿವಂಶದ ಮಹಾರಾಜನ ಬಾಲಿಕೆಯಾದ, ಪುತ್ರವತಿಯಾದ, ಪೂಜ್ಯ ಯುವರಾಜಮಾತೆಯೂ ಆದ ಸಿವಖಡನಾಗಸಿರಿ ಯೆಂಬುವಳು ನಾಗಪ್ರತಿಮೆ, ಕೆರೆ ಹಾಗೂ ವಿಹಾರವನ್ನು ಧರ್ಮಾರ್ಥವಾಗಿ ದಾನಮಾಡಿದಳು. ಇವುಗಳ ಮೇಲ್ವಿಚಾರಣೆ ಮಾಡಿದವ ಅಮಾತ್ಯ (ಅಧಿಕಾರಿ) ಖಡಸಾತಿ (ಸ್ಕಂದಸ್ವಾತಿ); ನಾಗಪ್ರತಿಮೆಯನ್ನು ಬನವಾಸಿಯ ಆಚಾರಿಯಾದ ದಮೋರಕನ ಶಿಷ್ಯ ಣಟಕ (ನರ್ತಕ) ನೆಂಬವನು ತಯಾರಿಸಿದ್ದಾನೆ.

ಒಟ್ಟಿನಲ್ಲಿ, ತನ್ನ ತಂದೆ ವಿಣ್ಹುಕಡ ಚುಟುಕುಲಾನಂದ ಶಾತಕರ್ಣಿಯ ೧೨ನೇ ವರ್ಷದ ಆಳ್ವಿಕೆಯ ವರ್ಷದಲ್ಲಿ, ಶಿವಸ್ಕಂದ ನಾಗಶ್ರೀಯು ಒಂದು ವಿಹಾರ, ನಾಗಶಿಲ್ಪ ಮತ್ತು ಒಂದು ತಟಕವನ್ನು ಮಾಡಿಸಿ ದಾನಮಾಡಿದಳು.

ಶಿವಸ್ಕಂದನಾಗಶ್ರೀಯನ್ನು ಶಾಸನದಲ್ಲಿ ಗುರುತಿಸಿರುವುದು ಮಹಾಭೋಜಿಯೆಂದು. ಮಹಾಭುವಿವಂಶದವಳು ಇದ್ದಿರಬೇಕೆಂದು ಭಾವಿಸಲಾಗಿದೆ. ಮಹಾರಾಜನ ಬಾಲಿಕೆ, ಪುತ್ರವತಿ, ಪೂಜ್ಯ ಅಥವಾ ಶ್ರೇಷ್ಠ ಯುವರಾಜಮಾತೆ ಇತ್ಯಾದಿಯಾಗಿಯೂ ಈಕೆಯನ್ನು ಬಣ್ಣಿಸಿರುವುದುಂಟು. ಇದು ಚುಟು-ಶಾತವಾಹನರ ಕಾಲದಲ್ಲಿ ಸ್ತ್ರೀಯರಿಗೆ ದೊರೆಯುತ್ತಿದ್ದ ವಿಶೇಷ ಸ್ಥಾನಮಾನದ ದ್ಯೋತಕವೇ ಅಥವಾ ಶಾತವಾಹನರ ಆಳ್ವಿಕೆಯಿದ್ದ ಸನ್ನತಿ, ಬೆಳ್ವಾಡಗಿ, ಅಮರಾವತಿ, ನಾಗಾರ್ಜುನಕೊಂಡ ಮೊದಲಾದೆಡೆಗಳಲ್ಲಿ ಕಂಡುಬಂದ ಹಾಗೆ ಸ್ತ್ರೀಯರನ್ನೆ ಪ್ರಧಾನವಾಗಿ ಚಿತ್ರಿಸಿರುವ ಅಸಂಖ್ಯ ಶಿಲ್ಪಗಳನ್ನು ಇದಕ್ಕೆ ಪೂರಕವಾಗಿ ಉದಾಹರಿಸಲಾಗುತ್ತದೆ. ಈ ನಾಗಶಿಲಾಶಾಸನವನ್ನು ವಿವರವಾಗಿ ವಿಮರ್ಶಿಸಿರುವ ಎಚ್.ಆರ್. ರಘುನಾಥಭಟ್ಟರು ಭಾವಿಸುವಂತೆ, ಈ ಶಾಸನೋಕ್ತ ಶಿವಸ್ಕಂದ ನಾಗಶ್ರೀ ಹಾಗೂ ನಾಗಪ್ರತಿಮೆ, ಕನ್ಹೇರಿಶಾಸನದ ನಾಗಮೂಲನಿಕಾ ಮುಂತಾದುವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಚುಟುರಾಜರು ಮೂಲತಃ ನಾಗವಂಶಜರೆಂಬ ಮಾತಿಗೆ ಪುಷ್ಟಿ ದೊರೆಯುವಂತೆ ತೋರುತ್ತದೆ. ಬೌದ್ಧಧರ್ಮದ ಜಾತಕಕಥೆಗಳಲ್ಲಿ ಮುಚಲಿಂದ ನಾಗನ ವರ್ಣನೆ ವಿಶೇಷವಾಗಿ ಕಂಡುಬರುತ್ತಿದ್ದು, ಆತನನ್ನು ಗೌತಮಬುದ್ಧನಿಗೆ ರಕ್ಷಣೆ ನೀಡಿದವನೆಂದು ಗೌರವಿಸುತ್ತಾರೆ. ಅಂತೆಯೆ, ಶಾತವಾಹನಕಾಲೀನ ಶಾಸನ, ಶಿಲ್ಪ, ಕಲೆಗಳಲ್ಲಿ ನಾಗಗಳ ಚಿತ್ರಣ ಕಂಡುಬರುತ್ತದೆ. ನಾಗಾರ್ಜುನಕೊಂಡ, ಅಮರಾವತಿ ಮೊದಲಾದೆಡೆಗಳಲ್ಲಿ ಕೆಲವು ಅಪೂರ್ವವಾದ ನಾಗಶಿಲ್ಪಗಳಿವೆ. ಈ ಸಾಲಿಗೆ ಬನವಾಸಿಯ ನಾಗಪ್ರತಿಮೆಯನ್ನೂ ಸೇರಿಸಬಹುದು.

ಐದುಹೆಡೆಯುಳ್ಳ ನಾಗಪ್ರತಿಮೆಯ ಶಿಲ್ಪಲಕ್ಷಣಗಳು ವಿಶಿಷ್ಟವಾಗಿವೆ. ಕಲಾತಜ್ಞರ ದೃಷ್ಟಿಯಲ್ಲಿ ಇದೊಂದು ಪ್ರಾಚೀನ ಶಿಲ್ಪರತ್ನ. ಇದನ್ನು ನಯವಾಗಿ ಹಾಗೂ ನೈಜವಾಗಿ ಕೆತ್ತಲ್ಪಟ್ಟದ್ದು. ನಾಗರವು ಆಚೀಚೆಗೆ ಎರಡೆರಡು ಸುರುಳಿ ಸುತ್ತಿಕೊಂಡಿದೆ. ಅಂದರೆ ತನ್ನ ಮೈಯನ್ನು ನಾಲ್ಕು ಸುರುಳಿಗಳನ್ನಾಗಿ ಸುತ್ತಿ ತನ್ನ ಬಾಲವನ್ನು ತನ್ನ ಬಲಗಡೆಗೆ ಕೆಳಬದಿಯಲ್ಲಿಯ ಸುರುಳಿಗೆ ಹೊಂದಿಕೊಂಡಂತೆ ಮಡಿಚಿ ನಿಂತಂತಿದೆ. ಕಣ್ಣು, ಬಾಯಿ, ಹೆಡೆಯ ಒಳಭಾಗದ ಮಡಿಕೆ, ಎದೆಯ ಮೇಲಿನ ಗೆರೆ ಇತ್ಯಾದಿಯೆಲ್ಲವೂ ವಿವರವಾಗಿ ಚಿತ್ರಿತವಾಗಿವೆ. ಹಾರದ ಮಧ್ಯದಲ್ಲಿ ಆಚೀಚೆ ಅಂಚುಳ್ಳ ದಪ್ಪನಾದ ದೊಡ್ಡಮಣಿಯನ್ನು ಬಿಡಿಸಲಾಗಿದೆ. ಈ ನಾಗ ಪ್ರತಿಮೆಯ ಸುತ್ತಲೂ ನಯಗೊಳಿಸಿದ ಪಟ್ಟಿಕೆಗಳ ಚೌಕಟ್ಟಿದ್ದು, ಅದರ ಅಗಲ ೧೦ ಸೆಂ.ಮೀ. ಶಾಸನಪಾಠವನ್ನು ಕೊರೆಯಲಾಗಿದೆ. ಅಕ್ಕಪಕ್ಕದ ಲಂಬಾಂತರ ಪಟ್ಟಿಕೆಗಳ ಮೇಲೆ. ನಾಗಪ್ರತಿಮೆ ಸೃಷ್ಟಿಗೊಳ್ಳಲು ಕಾರಣಕರ್ತರಾದ ದಮೋರಕ ಮತ್ತು ನಟಕರು ಕರ್ನಾಟಕದ ಅತ್ಯಂತ ಪ್ರಾಚೀನ ಶಿಲ್ಪಿದ್ವಯರೆಂದು ಭಾವಿಸಬಹುದೆನ್ನುತ್ತಾರೆ ರಘುನಾಥಭಟ್. ಅವರ ಪ್ರಕಾರ, ಶಿಲ್ಪಿಗಳ ಉಬ್ಬುಗೆತ್ತನೆಶಿಲ್ಪಗಳಲ್ಲಿ ಬನವಾಸಿ ನಾಗಶಿಲ್ಪವೆ ಬಹುಶಃ ಬಹು ಪುರಾತನವಾದುದು.

ಬನವಾಸಿಯಲ್ಲಿ ದೊರೆತ ಇದೇ ತರದ ಇನ್ನೊಂದು ನಾಗಪ್ರತಿಮೆಯನ್ನೂ ಇಲ್ಲಿಯೆ ಗಮನಿಸಬಹುದು. ಇದು ಸಹ ಚುಟು-ಶಾತಕರ್ಣಿಗಳ ಕಾಲಕ್ಕೆ ಸೇರಿದುದು; ಶಿವಸ್ಕಂದ ನಾಗಶ್ರೀಯ ಶಾಸನೋಕ್ತ ನಾಗಪ್ರತಿಮೆಯ ಹೋಲಿಕೆಯುಳ್ಳದ್ದಾಗಿದ್ದು, ಇದು ಕೆತ್ತಲ್ಪಟ್ಟಿರುವುದು ಅಗಲವಾದ ಹಾಸುಗಲ್ಲಿನ ಮೇಲೆ. ಇದರ ಎತ್ತರ-೧೧೫ ಸೆಂ.ಮೀ., ಅಗಲ-೮೫ ಸೆಂ.ಮೀ., ದಪ್ಪ-೧೦ ಸೆಂ.ಮೀ. ಇದು ಸಹಾ ಐದುಹೆಡೆಗಳುಳ್ಳ ನಾಗಶಿಲ್ಪವಾಗಿದ್ದು ತಲೆಯಭಾಗಗಳು ಒಡೆದು ಹೋಗಿರುವುದರಿಂದ ಇದರ ಪೂರ್ಣಚಿತ್ರ ಅಲಭ್ಯವಾಗಿದೆ. ಬಲಭಾಗದ ಕೆಳಗಿನ ಹೆಡೆಯ ಭಾಗ ಮಾತ್ರ ಕಾಣುತ್ತಿದ್ದು, ಈ ಶಿಲ್ಪದ ಸ್ವರೂಪವನ್ನು ನಿರ್ಧರಿಸಲು ಸಹಾಯಕವಾಗಿದೆ. ಈ ಶಿಲ್ಪದ ಕಂಠದಲ್ಲಿ ಮಣಿಹಾರವನ್ನು ಬಿಡಿಸಲಾಗಿದೆ. ಇದು ಅರ್ಧ ಕೆತ್ತಿದ ಹಾರವಾಗಿದ್ದು, ಇದನ್ನು ಕೇವಲ ರೇಖೆಗಳಿಂದ ತೋರಿಸಲಾಗಿದೆ. ಶಿಲ್ಪಿಯ ಕಲಾಚಾತುರ್ಯ ಈ ಶಿಲ್ಪದಲ್ಲೂ ವ್ಯಕ್ತಗೊಂಡಿದೆಯೆನ್ನುವುದಕ್ಕೆ ಇದನ್ನು ಕೆತ್ತಿರುವ ರೀತಿ, ಹೆಡೆಯ ನೈಜತೆ ಹಾಗೂ ದೇಹದ ಸುರುಳಿಗಳ ಪ್ರಮಾಣಬದ್ಧ ಅಳತೆಗಳು ಬಹುಮುಖ್ಯ ಕಾರಣವೆನಿಸಿವೆ.

ಮೇಲಿನ ಎರಡನೆ ನಾಗಶಿಲ್ಪವನ್ನು ಶೋಧಿಸಿದ ಆರ್.ಎಚ್. ಕುಲಕರ್ಣಿಯವರು ಅಭಿಪ್ರಾಯಿಸುವಂತೆ, ಶಿವಸ್ಕಂದ ನಾಗಶ್ರೀಯ ಶಾಸನೋಕ್ತ ನಾಗಪ್ರತಿಮೆಗೆ ಈ ಪ್ರತಿಮೆಯನ್ನು ಹೋಲಿಸಬಹುದು. ಆದರೆ ಶೈಲಿಯಲ್ಲಿ ಈ ಎರಡೂ ಶಿಲ್ಪಗಳು ಸ್ವಲ್ಪಮಟ್ಟಿಗೆ ಭಿನ್ನವಾಗಿವೆ. ಪ್ರಸ್ತುತ ಶಿಲ್ಪದ ದೇಹ ಶಾಸನೋಕ್ತಶಿಲ್ಪದ ಹಾಗೆ ನೀಳವಾಗಿರದೆ, ದಪ್ಪವಾಗಿ, ಅಗಲವಾಗಿ ಮೈಯನ್ನು ಹರಡಿಕೊಂಡಂತೆ ಇದೆ. ಶೈಲಿಯಲ್ಲಿ ಇದನ್ನು ಸನ್ನತಿಯ ನಾಗಪ್ರತಿಮೆಗೆ ಹೋಲಿಸಬಹುದಾಗಿದೆ. ಸುರುಳಿಗಳನ್ನು ಸುತ್ತಿರುವ ರೀತಿಯಲ್ಲಿ ವಿಭಿನ್ನತೆಯಿದ್ದರೂ ದೇಹದ ಆಕೃತಿಗಳಲ್ಲಿ ಸಾಮ್ಯತೆಯಿದೆ. ಬಾಲವನ್ನು ಮಡಿಚಿರುವ ರೀತಿಯಲ್ಲಿಯೆ ಸನ್ನತಿಶಿಲ್ಪದಲ್ಲೂ

ಬಲಕ್ಕೆ ಇದೆ. ಆದರೆ ಅದು ಬನವಾಸಿಯ ನಾಗಪ್ರತಿಮೆಶಿಲ್ಪಗಳಲ್ಲಿ ಇರುವ ಹಾಗೂ ಸುರಳಿಯ ಹಿಂಭಾಗದಿಂದ ಚಾಚಿಕೊಳ್ಳದೆ ಮೇಲ್ಭಾಗದಿಂದ ಹೊರಚಾಚಿದೆ. ಈ ಶಿಲ್ಪವು ದೇಹವನ್ನು ಹರಡಿರುವ ರೀತಿ ಪ್ರಸ್ತುತ ನಾಗಶಿಲ್ಪಕ್ಕೆ ಹೆಚ್ಚು ಸಾಮ್ಯಗೊಳ್ಳುತ್ತದೆ.[೨೨] ಸಾಮಾನ್ಯವಾಗಿ ಇಂತಹ ನಾಗಪ್ರತಿಮೆಗಳು ಬೌದ್ಧಧರ್ಮದ ಚೌಕಟ್ಟಿನಲ್ಲಿ ನಿರ್ಮಾಣ ಗೊಂಡುದನ್ನು ಗುರುತಿಸಲಾಗಿದೆ. ನಾಗ-ನಾಗಮುಚಲಿಂದವು ಬೌದ್ಧಧರ್ಮದ ಅವಿಭಾಜ್ಯ ಅಂಗವಾಗಿ ಪರಿಗಣಿಸಲ್ಪಟ್ಟಿರುವುದೆ ಇದಕ್ಕೆ ಕಾರಣ. ಆಂಧ್ರದ ಅಮರಾವತಿ, ನಾಗಾರ್ಜುನ ಕೊಂಡ ಮತ್ತು ಸನ್ನತಿ ಉತ್ಖನನಗಳಲ್ಲಿ ಇಂತಹ ಶಿಲ್ಪಗಳು ದೊರೆತಿರುವುದು ಈ ಹಿನ್ನೆಲೆಯಲ್ಲಿಯೆ. ಆದ್ದರಿಂದಲೇ ಬೌದ್ಧಧರ್ಮದಲ್ಲಿ ಅತ್ಯಂತ ಅಮೂಲ್ಯ ಮತ್ತು ಪೂಜ್ಯನೀಯ ಸಾಂಕೇತಿಕ ಆಕೃತಿಯಾಗಿ ನಾಗಶಿಲ್ಪ ಕಂಡುಬರುತ್ತದೆ. ಬನವಾಸಿ ಪರಿಸರದಲ್ಲಿ ಪ್ರಭಾವ ಬೀರಿದ್ದ ಬೌದ್ಧಮತ ಚಟುವಟಿಕೆಗಳನ್ನು ಪರಿಶೀಲಿಸುವ ಸಂಬಂಧದಲ್ಲಿ ಇಂತಹ ಶಿಲ್ಪಗಳು ನಿರ್ವಹಿಸುವ ಪಾತ್ರ ಮಹತ್ವದ್ದು.

ಕ್ರಿಸ್ತಶಕ ೨-೩ನೇ ಶತಮಾನಗಳಿಗೆ ಸೇರಿದ ಇತರೆ ಶಿಲ್ಪಗಳು ಬನವಾಸಿಯಲ್ಲಿ ದೊರೆತಿವೆ. ಈ ನಿಟ್ಟಿನಲ್ಲಿ ಅವಶ್ಯವಾಗಿ ಗಮನಿಸಬೇಕಾದುದು ಹಾರಿತಿ ಶಿಲ್ಪವಾಗಿದೆ. ಇದನ್ನು ಬೌದ್ಧಮಾತೃದೇವತೆ ಯೆಂದು ಗುರುತಿಸಲಾಗಿದೆ. ಬನವಾಸಿಯಲ್ಲಿ ಜನಪ್ರಿಯವಾಗತೊಡಗಿದ್ದ ಬೌದ್ಧಧರ್ಮದ ಹಿನ್ನೆಲೆಯಲ್ಲಿ ಇಂಥಾ ವಿಗ್ರಹ ಇಲ್ಲಿ ಕಂಡುಬಂದಿದ್ದರೆ ಆಶ್ಚರ್ಯವಿಲ್ಲ. ಚುಟು-ಶಾತವಾಹನರು 'ಹಾರಿತೀಪುತ್ರ' ರೆಂದು ತಮ್ಮನ್ನು ಕರೆದುಕೊಂಡಿರುವ ಹಿನ್ನೆಲೆಯಲ್ಲಿ ಈ ಶಿಲ್ಪ ಮಹತ್ವ ಕಂಡುಕೊಂಡಂತೆ ತೋರುತ್ತದೆ. ಈ ಶಿಲ್ಪದ ಬಗೆಗೆ ರಘುನಾಥಭಟ್ಟರ ಅಭಿಪ್ರಾಯವೆಂದರೆ, ಈ ವಿಗ್ರಹ ಬೌದ್ಧ ಜಾನಪದ ಮಾತೃದೇವತೆಯಾಗಿದ್ದು, 'ಪುತ್ರಸಂತಾನ' ಹಾಗೂ 'ಫಲವತ್ತತೆ' ಯನ್ನು ಸಂಕೇತಿಸುತ್ತದೆ. ದ್ವಿಭುಜದೇವಿ ಶಿಲ್ಪವು ಎತ್ತರವಾದ ಆಸನದಲ್ಲಿ ಕಾಲು ಅಗಲಿಸಿ ಕುಳಿತಿದ್ದು, ಎಡತೊಡೆಯ ಮೇಲೆ ಪುಟ್ಟಮಗುವನ್ನು ಕುಳ್ಳಿರಿಸಿಕೊಂಡು ಬಲಗೈಯಲ್ಲಿ ಫಲವನ್ನೂ ಹಿಡಿದಿದ್ದಾಳೆ. ದುಂಡುಮುಖ, ಕುಚ, ಎದ್ದುಕಾಣುವ ಮೈಮಾಟ, ವಿವರಪೂರ್ಣವಾದ ಕೇಶಲಂಕಾರ, ಭಾರವಾದ ಕರ್ಣಾಭರಣ, ಕುತ್ತಿಗೆಯ ತುಂಬ ಇರುವ ಹಾರಗಳು, ಬಲವಾದ ಕಾಲು ಬಳೆಗಳು, ಶಿಲ್ಪದ ಹಿಂಗಡೆ ವಿವರವಾಗಿ ಕೆತ್ತಿರುವ ರೀತಿ ಮುಂತಾದವು ನಿಜಕ್ಕೂ ಸ್ವಾರಸ್ಯಕರವಾಗಿವೆ. ಮುಖ, ಮೊಣಕಾಲು ಭಾಗಗಳು ಚಿಪ್ಪೆದ್ದು ಹೋಗಿದ್ದರೂ ಉಳಿದ ವಿವರಗಳಿಂದಾಗಿ ಈ ವಿಗ್ರಹವನ್ನು ಹಾರೀತೀ ಎಂದು ಗುರುತಿಸುವುದು ಸುಲಭ ಸಾಧ್ಯವಾಗಿದೆ. ಮೈಮಾಟದಲ್ಲಿ ಮಥುರಾ ಯಕ್ಷಶಿಲ್ಪಶೈಲಿಯನ್ನು ಹೋಲುತ್ತದೆಂದು ಭಾವಿಸಲಾದ ದುಂಡುಶಿಲ್ಪದ ಪುರುಷನಮೂರ್ತಿಯೊಂದು ಬನವಾಸಿಯಲ್ಲಿದೆ. ಇದು ಕ್ರಿ.ಶ.೨-೩ನೇ ಶತಮಾನದ್ದಿರಬೇಕೆಂದು ಭಾವಿಸಲಾಗಿದೆ. ಅಲ್ಲದೆ, ಇದು ಬೌದ್ಧರ ಧನಾಧಿಪನಾಗಿದ್ದು, (ಹಿಂದೂ) ಕುಬೇರನ ಸರಿಸಮಾನ ದೇವತೆಯಾಗಿರುವನೆಂದು ತಿಳಿಯಲಾದ ಬೌದ್ಧ ಜಂಬಾಲ ನನ್ನು ಪ್ರತಿನಿಧಿಸುವ ಶಿಲ್ಪಗಳು ಬನವಾಸಿಯಲ್ಲಿ ಬೆಳಕಿಗೆ ಬಂದಿವೆ. ಡೊಳ್ಳುಹೊಟ್ಟೆಯಲ್ಲಿ ಎದ್ದು ಕಾಣುವ ಮೈಮಾಟ, ಎಡಗೈಯಲ್ಲಿ ಹಿಡಿದಿರುವ ಮುಂಗುಸಿಯಾಕಾರದ ಉದ್ದನೆಯ ಹಣದ ಚೀಲ, ಬಲಗೈಯಲ್ಲಿ ಪಾನಪಾತ್ರೆ ಅಥವಾ ಬಹುಬೀಜಫಲ ಹಿಡಿದುಕೊಂಡು

ನಿಂತಿರುವ ರೀತಿ, ಕಟಿವಸ್ತ್ರದ ಬದಿಗಂಟು-ಕುಚ್ಚುಗಳನ್ನು ಎದ್ದುಕಾಣುವಂತೆ ಚಿತ್ರಿಸಿರುವುದೆಲ್ಲವೂ, ಚುಟು-ಶಾತವಾಹನರ ಶೈಲಿಯಲ್ಲಿವೆ. ನಾಗಾರ್ಜುನಕೊಂಡ ಹಾಗೂ ಶ್ರೀಲಂಕೆಯ ಕೆಲವು ಶಿಲ್ಪಗಳ ಶೈಲಿಯನ್ನು ನೆನಪಿಗೆ ತರುವಂತಿವೆ.

ಬೌದ್ಧಧರ್ಮದ ಕುರುಹುಗಳೆನ್ನಬಹುದಾದ ಮತ್ತು ಚುಟು-ಶಾತವಾಹನರ ಕಾಲಕ್ಕೇ ಆರೋಪಿಸಬಹುದಾದ ಪ್ರಾಣಿ, ಪಕ್ಷಿ ಮತ್ತು ಮನುಷ್ಯರ ವಿವಿಧ ಆಕೃತಿಯ ಶಿಲ್ಪಗಳು ಸಾಕಷ್ಟು ಸಂಖ್ಯೆಯಲ್ಲಿವೆ. ಆದರೆ ಇವುಗಳ ವ್ಯವಸ್ಥಿತ ಅಧ್ಯಯನ ಆಗಬೇಕಷ್ಟೆ. ಇವುಗಳೇ ಅಲ್ಲದೆ, ಶಾತವಾಹನ-ಆದಿಕದಂಬರ ಸಂಧಿಕಾಲದವಾದ ಕ್ರಿ.ಶ.೩-೪ನೇ ಶತಮಾನದ ಶಿಲ್ಪಗಳೂ ಬನವಾಸಿ ನೆಲೆಯಲ್ಲಿದ್ದು, ಶಿಲ್ಪಕಲೆ ಪ್ರಗತಿ ಹೊಂದಿದುದನ್ನು ತೋರಿಸಿಕೊಡುತ್ತವೆ. ಈ ಮೇಲೆಯೆ ನೋಡಿದಂತೆ, ಯಕ್ಷ-ಯಕ್ಷಿ, ಕಾರ್ತಿಕೇಯ, ಹಾರೀತಿ, ಸ್ಮಾರಕಶಿಲೆ ಇತ್ಯಾದಿ ಚುಟು-ಶಾತವಾಹನ ಕಾಲದ ಬೌದ್ಧಶಿಲ್ಪಗಳ ಶೋಧ ಬನವಾಸಿ ನೆಲೆಯ ಸಂಸ್ಕೃತಿಯ ಬಗೆಗೆ ವಿಶೇಷ ಬೆಳಕು ಹಾಯಿಸುವಲ್ಲಿ ನೆರವಾಗಿರುವುದುಂಟು. ಅಶೋಕನ ಕಾಲದಿಂದಲೂ ಬೌದ್ಧಧರ್ಮದ ಕೇಂದ್ರವಾಗಿ ಬೆಳೆದ ಬನವಾಸಿ ಆ ಸಂಬಂಧದ ಕೆಲವು ಸ್ಮಾರಕಗಳನ್ನು ಹೊಂದಿದುದು ಸಹಜ. ಶಿವಸ್ಕಂದ ನಾಗಶ್ರೀಯ ನಿರ್ಮಾಣಗಳು ಈ ನಿಟ್ಟಿನಲ್ಲಿ ಕೆಲವು ಉದಾಹರಣೆಗಳಾಗಿವೆ. ಈ ಬಿಡಿ ಶಿಲ್ಪಗಳೆಲ್ಲವೂ ಹಸಿರುಛಾಯೆಯ ಬಳಪದಕಲ್ಲಿನಲ್ಲಿ ನಿರ್ಮಾಣಗೊಂಡಂತವು. ಬನವಾಸಿ ಪರಿಸರದಲ್ಲಿ ಈ ಶಿಲೆ ವಿಪುಲವಾಗಿ ದೊರೆಯುವುದೇ ಇದಕ್ಕೆ ಕಾರಣ. ಗುಡ್ನಾಪುರದಲ್ಲಿ ದೊರೆತ ಕುಬ್ಜವಿಗ್ರಹ ಅಥವಾ ಯಕ್ಷ, ಹೈಗುಂದದ ಬೃಹತ್‌ಯಕ್ಷಗಳು ಬನವಾಸಿಯಲ್ಲಿ ದೊರೆತ ಶಿಲ್ಪಗಳನ್ನು ಹೋಲುತ್ತವೆ ಗುಡ್ನಾಪುರದ ಕುಬ್ಜಯಕ್ಷಮೂರ್ತಿ ಅನುಪಮವಾಗಿದ್ದು, ಬನವಾಸಿ ಕಲಾಪರಂಪರೆಯ ಸ್ವಂತಿಕೆಯ ಹೆಗ್ಗುರುತಾಗಿರುವುದೆಂದು ಪರಿಗಣಿತವಾಗಿದೆ.

ಚುಟು-ಶಾತವಾಹನರ ಅವಧಿಗೆ ಸೇರಿದ ಮಣ್ಣಿನಗೊಂಬೆಗಳು ಅಥವಾ ಮೃಣ್ಮೂರ್ತಿಗಳು ಗಮನಸೆಳೆಯುತ್ತಿದ್ದು. ಕೆಲವು ಯಕ್ಷ-ಯಕ್ಷಿಯರ ಸುಡಾವೆಮಣ್ಣಿನ ಚಿಕ್ಕಗಾತ್ರದ ಪ್ರತಿಮೆಗಳು, ಪ್ರಾಣಿ, ಪಕ್ಷಿವಿಗ್ರಹಗಳು, ಸ್ತೂಪಮಾದರಿಯ ವಿಗ್ರಹಗಳು ಮುಂತಾದ ಬನವಾಸಿ ಪರಿಸರದಲ್ಲಿ ಬೆಳಕಿಗೆಬಂದಿವೆ. ಇವುಗಳಲ್ಲಿ ಕೆಲವು ಬೌದ್ಧಧರ್ಮದ ಕುರುಹುಗಳಾಗಿರಬಹುದೆಂದು ಭಾವಿಸಲಾಗುತ್ತದೆ. ಸನ್ನತಿ, ಚಂದ್ರವಳ್ಳಿ, ವಡಗಾಂವ್-ಮಾಧವಪುರ ಮುಂತಾದ ನೆಲೆಗಳಲ್ಲಿ ದೊರೆತ ವೈವಿಧ್ಯಮಯ ಗೊಂಬೆಗಳಂತೆಯೆ ಬನವಾಸಿಯ ಈ ಗೊಂಬೆಗಳೂ ಕಲಾಪೂರ್ಣ ವಾದುವು. ಮುಖ್ಯವಾಗಿ, ಮಾನವಾಕೃತಿ ಗೊಂಬೆಗಳು ಚುಟು-ಶಾತವಾಹನರ ಕಾಲದವಾಗಿದ್ದು, ಉತ್ತಮ ಕಲಾಕೃತಿಗಳು ಅರಸರ ಸಿರಿವಂತರ ಕೊಡುಗೆಗಳಾದರೆ, ಈ ಮೃಣ್ಮೂರ್ತಿಗಳು ಅಥವಾ ಮಣ್ಣಿನ ಕಲಾಕೃತಿಗಳು ಜನ ಸಾಮಾನ್ಯರ ಕೊಡುಗೆಗಳೆಂಬುದನ್ನು ಪ್ರತಿನಿಧಿಸುವಂತಿವೆ.

ಸಂಶೋಧಕ ಗುರುನಾಥಭಟ್‌ರವರು ಪರಿಶೀಲಿಸುವಂತೆ ಬನವಾಸಿಯ ಶಾತವಾಹನಕಾಲೀನ ಮೃಣ್ಮೂರ್ತಿಗಳು (ಟೆರಾಕಾಟಾ) ವಿಶೇಷವಾಗಿ ಗಮನ ಸೆಳೆಯುವಂತವೆನ್ನುತ್ತಲೆ, ಈ ಮೂರ್ತಿಗಳು

ಒಳಗೆ ಪೊಳ್ಳಾಗಿದ್ದು ಹೊರಗೆ ನಯಗೊಳಿಸಿದ (ಹೊಳೆಯುವಷ್ಟು) ಕೆಂಪುಬಣ್ಣದ ಈ ಪುಟ್ಟ ಪುಟ್ಟ ಗೊಂಬೆಗಳನ್ನು ಬಹುಶಃ ಅಚ್ಚಿನಿಂದ ತಯಾರಿಸುತ್ತಿದ್ದಿರಬೇಕು. ಇವುಗಳಲ್ಲಿ ಯಕ್ಷ-ಯಕ್ಷಿಗಳೂ ಕುದುರೆ, ಹಂದಿ ಮುಂತಾದ ಪ್ರಾಣಿಗಳೂ ವಿವಿಧ ಭಂಗಿಯ ಸ್ತ್ರೀವಿಗ್ರಹಗಳೂ ಪರಿಶೀಲನ ಯೋಗ್ಯವಾಗಿದ್ದು ಆಭರಣಶೈಲಿ, ಕೇಶಶೃಂಗಾರ, ಭಾವಭಂಗಿಗಳಲ್ಲೆಲ್ಲ ಜನಪದೀಯ ಸತ್ವ ಸೊಬಗುಗಳು ಸಮರ್ಥವಾಗಿ ಮೂಡಿಬಂದಿವೆ. ಸನ್ನತಿ, ಬ್ರಹ್ಮಪುರಿ ಮುಂತಾದೆಡೆಗಳಲ್ಲಿ ದೊರೆತ ಸಮಕಾಲೀನ ಮೃಣ್ಮೂರ್ತಿಗಳಲ್ಲಿ ಕಂಡುಬರುವ ಶೈಲಿಯಂತಿದೆ. ಅದರಲ್ಲೂ ಮುಖಭಾವ ಬಹಳ ಮುದ್ದಾಗಿದ್ದು ಸದಾ ಹಸನ್ಮುಖದಲ್ಲಿರುವಂತಿದೆ. ಆದರೆ ಕೈ ಕಾಲು ಬೆರಳುಗಳನ್ನು ವಿವರಪೂರ್ಣವಾಗಿ ಚಿತ್ರಿಸಿಲ್ಲ. ಬಹುಶಃ ಅಚ್ಚಿನಲ್ಲಿ ತಯಾರಿಸಿದ್ದರಿಂದ ಹೀಗಾಗಿರಬೇಕು. ಅದೇನಿದ್ದರೂ ಈ ಪುಟ್ಟಗೊಂಬೆಗಳನ್ನು ಪರಿಶೀಲಿಸಿದರೆ ಶಾತವಾಹನರ ಸಾಂಸ್ಕೃತಿಕ ಜೀವನ-ಉಡುಪು ತೊಡಪು, ಕೇಶಾಲಂಕಾರ, ಆಭರಣದ ಮಾದರಿ ಮುಂತಾದವು ತಿಳಿಯಬಹುದಾಗಿದೆ.

ಶಾಸನ : ಶಾಸನಗಳಮಟ್ಟಿಗೆ, ಬನವಾಸಿಯೂ ಗಣನೀಯ ಸ್ಥಾನ ಪಡೆದುಕೊಂಡಿದೆ ಎನ್ನಬಹುದು. ಇಲ್ಲಿ ದೊರೆತ ಶಾತವಾಹನ ಶಾಸನಗಳು ಬನವಾಸಿ ಚರಿತ್ರೆಯ ಪುನಾರಚನೆಗೆ ಸಹಕಾರಿಯೆನಿಸಿವೆ. ವಾಶಿಷ್ಠಿಪುತ್ರ ಶಿವಶ್ರೀ ಪುಳುಮಾವಿಯ ಶಿಲಾಶಾಸನ ಬೆಳಕಿಗೆ ಬರುವುದ ರೊಡನೆ ಬನವಾಸಿ ಪ್ರದೇಶ ಶಾತವಾಹನರ ಒಡೆತನಕ್ಕೆ ಒಳಪಟ್ಟಿದುದು ಸ್ಪಷ್ಟಗೊಂಡಿತು. ಸನ್ನತಿಯನ್ನು ಹೊರತುಪಡಿಸಿದರೆ ಶಾತವಾಹನರ ಅಮೂಲ್ಯವಾದ ಶಾಸನ-ದಾಖಲೆ ದೊರೆತುದು ಬನವಾಸಿಯಲ್ಲೆ. ಸನ್ನತಿಯನ್ನು ಶಾತವಾಹನರು ತಮ್ಮ ಆಡಳಿತ ಕೇಂದ್ರವಾಗಿಸಿಕೊಂಡಿದ್ದರೆ, ಅದೇ ಸಂದರ್ಭದಲ್ಲಿ ಇವರ ಸಂಬಂಧಿಕರಾದ ಚುಟು-ಆನಂದ ಶಾತಕರ್ಣಿ ಮನೆತನದವರು ಬನವಾಸಿ ಪ್ರದೇಶದಲ್ಲಿ ಆಳ್ವಿಕೆ ನಡೆಸುತ್ತಿದ್ದುದು ಆ ನಂತರ ಇನ್ನಷ್ಟು ದೃಢಪಟ್ಟ ಸಂಗತಿಯಾಗಿದೆ.

ವಾಶಿಷ್ಠಿಪುತ್ರ ಶಿವಶ್ರೀ ಪುಳುಮಾವಿಯ ಶಾಸನದ ಭಾಷೆ ಪ್ರಾಕೃತ. ಈ ಶಾಸನದ ಕಾಲ ಕ್ರಿ.ಶ.ಸು.೨ನೇ ಶತಮಾನದ ಉತ್ತರಾರ್ಧ. ಈ ಶಿಲೆಯ ಉದ್ದ ೧ ಸೆಂ.ಮೀ., ಅಗಲ ೦.೫ ಮೀ., ಹಾಗೂ ದಪ್ಪ ೨೫ ಸೆಂ.ಮೀ. ಸ್ಥಳೀಯವಾಗಿ ದೊರೆಯದ ಬೂದುಬಣ್ಣದ ಕಣಶಿಲೆಯ ವರ್ಗಕ್ಕೆ ಸೇರಿದ ಈ ಶಾಸನಶಿಲೆಯಾಗಿದೆ. ಸ್ಮಾರಕಶಿಲಾಶಾಸನವೆನಿಸಿರುವ ಈ ಶಾಸನದ ಪಾಠ ಕೇವಲ ಎರಡುಸಾಲಿನದು. 'ಮಂಗಳವಾಗಲಿ, ವಾಸಿಷ್ಠೀಪುತ್ರ ಸಿವಸಿರಿ ಪುಳುಮಾವಿರಾಜನ ಮಹಾದೇವಿಯ ಛಾಯಾಶಿಲೆ' ಎಂಬುದು ಇದರ ಅನುವಾದ. ಇಲ್ಲಿಯ ಮಹಾದೇವಿಯು ಮಹಾರಾಣಿ ಎಂದಾದರೆ, ಛಾಯಾಶಿಲೆಯು ಸ್ಮಾರಕಶಿಲೆ ಎಂದಾಗುತ್ತದೆ. ಶಾಸನದಲ್ಲಿ ವಿವರಗಳಿಲ್ಲದ್ದರಿಂದ ಮಹಾದೇವಿಯ ವ್ಯಕ್ತಿತ್ವದ ಸುಳಿವು ಸಿಕ್ಕುವುದಿಲ್ಲ. ಬಹುಶಃ ಮಹಾದೇವಿ ಬನವಾಸಿಯಲ್ಲೆ ಅಸುನೀಗಿದ್ದರಿಂದಾಗಿ ಅವಳ ನೆನಪಿಗೆ ಈ ಸ್ಮಾರಕಶಿಲೆಯನ್ನು ನಿಲ್ಲಿಸಿರಬಹುದು. ಆಂಧ್ರದ ನಾಗಾರ್ಜುನಕೊಂಡ, ಗುಲ್ಬರ್ಗಾ ಜಿಲ್ಲೆಯ ಸನ್ನತಿ, ಬೆಳ್ವಾಡಗಿ ಮುಂತಾದ ಎಡೆಗಳಲ್ಲಿ ಈಗಾಗಲೇ ಇಂತಹ ಸ್ಮಾರಕಶಿಲೆಗಳು ವರದಿಯಾಗಿರುವುದರಿಂದ, ಶಾತವಾಹನಕಾಲೀನ ಸ್ತ್ರೀಯರಿಗೆ

ಸಂಬಂಧಿಸಿದಂತೆ ಮಹತ್ವದ ಸಾಂಸ್ಕೃತಿಕ ದಾಖಲೆಯಾಗಿ ನಿಲ್ಲುತ್ತದೆ. ಮಹಾದೇವಿಯ ಸ್ಮಾರಕಶಿಲೆ ಸಮರ್ಥಿಸಲೆತ್ನಿಸಲು ಚಿತ್ರಗಳನ್ನು ಕಲ್ಲಿನಮೇಲೆ ಬರೆಸಿ ಸಂಬಂಧಿಸಿದವರ ನೆನಪನ್ನು ಸ್ಥಿರಗೊಳಿಸುವಂತಹ ಆಗಾಗಲೇ ರೂಢಿಯಲ್ಲಿದ್ದ ಪದ್ಧತಿಯಾಗಿದೆ. ಈವರೆಗೆ ತಿಳಿದುಬಂದಂತೆ, ಬನವಾಸಿ ಪ್ರದೇಶದಲ್ಲಿ ದೊರೆತ ಶಾಸನಗಳಲ್ಲೆ ಇದು ಅತ್ಯಂತ ಪ್ರಾಚೀನವಾದುದು.

ಬನವಾಸಿಯ ಪ್ರಾಕೃತ ಶಾಸನಬರಹಗಳ ಪೈಕಿ ಈಗಾಗಲೇ ಗಮನಿಸಲಾದ ಇನ್ನೊಂದು ದಾಖಲೆಯೆಂದರೆ ಶಿವಸ್ಕಂದ ನಾಗಶ್ರೀಗೆ ಸಂಬಂಧಿಸಿದುದು. ಈ ಶಾಸನಪಾಠವನ್ನು ಮೇಲೆಯೆ ಪ್ರಸ್ತಾಪಿಸಲಾಗಿದ್ದು ನಾಗಶಿಲಾಶಾಸನದ ವೈಶಿಷ್ಟ್ಯಗಳನ್ನು ಪರಿಶೀಲಿಸುವುದಾದರೆ, ಬನವಾಸಿಯನ್ನಾಳಿದ ಚುಟು-ಶಾತವಾಹನರ ಚರಿತ್ರೆಯ ಪುನಾರಚನೆಗೆ ಇದರಿಂದ ದೊರೆತ ನೆರವು ಅಪಾರ. ಸಮಕಾಲೀನ ಲಿಪಿ ಮತ್ತು ಭಾಷೆಗಳ ಅಧ್ಯಯನಕ್ಕೆ ಇದೊಂದು ಉಪಯುಕ್ತ ಆಕರ. ಯುವರಾಜಮಾತೆಯೊಬ್ಬಳು ನೀಡಿದ ದಾನವನ್ನು ಆಗಿನ ಸ್ತ್ರೀಯರ ಸ್ಥಾನಮಾನಗಳ ನೆಲೆಯಲ್ಲಿ ಉದಾಹರಿಸಲು ನೆರವಾಗುತ್ತದೆ. ಕರ್ನಾಟಕದಲ್ಲಿ, ಮುಖ್ಯವಾಗಿ ಶಾತವಾಹನಕಾಲೀನ ಭೂಪ್ರದೇಶಗಳಲ್ಲಿ ನಾಗಾರಾಧನೆ, ನಾಗಶಿಲ್ಪಗಳ ನಿರ್ಮಾಣ, ನಾಗಸಂಬಂಧಿ ಎಡೆಗಳ ಬೆಳವಣಿಗೆ ಇತ್ಯಾದಿ ಕುರಿತು ಪುನರ್‌ವಿಮರ್ಶಿಸಲು ನೆರವಾಗುತ್ತದೆ.

ಕೇವಲ ಶಿಲ್ಪ, ಕಲೆಗಳಲ್ಲಿ ಮಾತ್ರವೆ ನಾಗನನ್ನು ಚಿತ್ರಿಸಿ ದಾಖಲುಗೊಳಿಸದೆ, ತಮ್ಮ ನಿತ್ಯಬದುಕಿನಲ್ಲೂ ಅಂದಿನ ಜನ ನಾಗನನ್ನು ಹಲವು ವಿಧದಲ್ಲಿ ಗೌರವಿಸುತ್ತಿದ್ದರೆಂಬುದಕ್ಕೆ ಇದೊಂದು ಪ್ರಬಲ ಸಾಕ್ಷ್ಯವೆನಿಸಿದೆಯೆನ್ನಲಡ್ಡಿಯಿಲ್ಲ. ಮುಚಲಿಂದ ನಾಗನ ವರ್ಣನೆ ಬೌದ್ಧ ಧರ್ಮ ಮತ್ತು ಜಾತಕಕಥೆಗಳಲ್ಲಿ ವಿಶೇಷವಾಗಿ ಕಂಡುಬರುವ ಹಿನ್ನೆಲೆಯಲ್ಲಿ ಈ ನಾಗಶಾಸನವು ಮಹತ್ವದ್ದೆನಿಸುತ್ತದೆ. ಬೌದ್ಧಕಥೆಗಳು ಹೇಳುವಂತೆ, ಈ ನಾಗಮುಚಲಿಂದ ಭೀಕರ ಬಿರುಗಾಳಿ ಸಂದರ್ಭದಲ್ಲಿ ಸಿದ್ಧಾರ್ಥನ ತಪಸ್ಸಿಗೆ ಭಂಗಬಾರದಂತೆ ತನ್ನ ಹೆಡೆಗಳನ್ನು ಅಗಲಿಸಿ ಅದರ ಅಡಿಯಲ್ಲಿ ಏಳುದಿನಗಳ ಕಾಲ ಅವನನ್ನು ಸಂರಕ್ಷಿಸಿತು. ಈ ಕಾರಣಕ್ಕಾಗಿ, ಸಹಜವಾಗಿಯೆ ಆ ನಂತರ ಬೌದ್ಧ ಧಾರ್ಮಿಕಕ್ಷೇತ್ರಗಳಲ್ಲಿ ನಾಗ ಪವಿತ್ರಸಂಕೇತವಾಗಿ, ಆಕರ್ಷಕ ಕಲಾ ಕೃತಿಯಾಗಿ ಕಾಣಿಸಿಕೊಳ್ಳತೊಡಗಿತು.

ಶಾಸನೋಕ್ತ ಬನವಾಸಿಯ ವರ್ಣನೆ ಸಹಾ ಇಲ್ಲಿ ಪ್ರಸ್ತಾಪಿಸಲರ್ಹವಾದುದು. ಆಗಿನ ವ್ಯಕ್ತಿಗಳು, ಅರಸರು ಸಹಾ ಬನವಾಸಿಯ ವರ್ಣನೆಯಲ್ಲಿ ಕಾಣಸಿಕ್ಕುವುದು ಇಲ್ಲಿಯ ವೈಶಿಷ್ಟ್ಯ ಕಾರ್ಲೆಯಲ್ಲಿರುವ ಬನವಾಸಿಯನ್ನು ಉಲ್ಲೇಖಿಸುವ ಅತ್ಯಂತ ಪ್ರಾಚೀನಶಾಸನವನ್ನು ಮೊದಲಿಗೆ ಉದಾಹರಿಸಬಹುದು. ಚೈತ್ಯದ ಮೇಲೆ ಹೊಸಬೆಳಕನ್ನು ಬೀರುವಂತದ್ದೆಂದು ಪರಿಗಣಿತವಾದ ಈ ಶಾಸನಪಾಠ, ಕೊರೆಯಲ್ಪಟ್ಟಿರುವುದು ಅಲ್ಲಿರುವ ಮಹಾಚೈತ್ಯದ ವರಾಂಡದ ಎಡಭಾಗದ ಗಜಶಿಲ್ಪಗಳ ಮೇಲ್ಭಾಗದಲ್ಲಿರುವ ಉಬ್ಬುಪಟ್ಟಿಕೆಯ ಮೇಲೆ. ಇಡೀ ಜಂಬೂದ್ವೀಪದಲ್ಲೇ ಉತ್ತಮವಾದ ಶಿಲಾಗೃಹವನ್ನು ನಿರ್ಮಿಸಿದವನು ಬನವಾಸಿಯ ಒಬ್ಬ ಶೆಟ್ಟಿಯಾದ ಭೂತಪಾಲನೆಂಬುದು ಈ

ಪಾಠದ ಸಾರ. ಎರಡನೆಯದಾಗಿ, ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕಿನ ಮಳವಳ್ಳಿಯ ಕಲ್ಲೇಶ್ವರ ದೇವಾಲಯದ ಎದುರಿನ ಶಿಲಾಸ್ತಂಭಶಾಸನವನ್ನು ನೋಡಬಹುದು. ಚುಟು-ಶಾತವಾಹನ ರಾಜನಾದ ವಿಣ್ಹುಕಡ ಚುಟುಕುಲಾನಂದ ಶಾತಕರ್ಣಿಯು ತನ್ನನ್ನು ಈ ಶಾಸನದಲ್ಲಿ ಕರೆದುಕೊಂಡಿರುವುದು ವೈಜಯಂತಿಪುರದ ರಾಜನೆಂದೆ. ನಾಗಾರ್ಜುನಕೊಂಡದ ಬಳಿ ಸೇಟಗಿರಿಯ ಕ್ರಿ.ಶ. ೨೭೮ರ ಶಾಸನದಲ್ಲಿ, ಅಷ್ಟಭುಜಸ್ವಾಮಿಯ ಶಿಲ್ಪದ ಪ್ರತಿಷ್ಠಾಪನಾ ಮಹೋತ್ಸವದಲ್ಲಿ ಭಾಗವಹಿಸಿದ ವಿಷ್ಣುರುದ್ರ ಶಿವಲಾನಂದ ಶಾತಕರ್ಣಿಯು ಬನವಾಸಿಯವನೆಂದು ಹೇಳಿರುವುದನ್ನು ಇನ್ನೊಂದು ಉದಾಹರಣೆಯಾಗಿ ಉಲ್ಲೇಖಿಸಬಹುದು. ನಾಗಾರ್ಜುನಕೊಂಡದ ಬಳಿಯ ಕೊಟ್ಟಂಪಲುಗು ಶಾಸನವೊಂದು ಇಕ್ಷ್ವಾಕುವಂಶದ ವೀರಪುರಿಸದತ್ತನ ಪುತ್ರಿ ಕೊದಬಾಲಸಿರಿ ಎಂಬವಳು ತಾನು ಬನವಾಸಿ ಮಹಾರಾಜನ ಮಹಾದೇವಿಯೆಂದು ಹೇಳಿಕೊಂಡಿರುವುದನ್ನು ದಾಖಲಿಸಿದೆ. ಅಭಿಮಾನದ ನೆಲೆಯಲ್ಲಿ ಅಂದಿನವರು ಬನವಾಸಿಯನ್ನು ತಮ್ಮ ಊರೆಂದು ಹೇಳಿಕೊಂಡಿರುವುದು ವಿಶೇಷ. ಸರ್ವರ ಪ್ರೀತಿಗೆ ಪಾತ್ರವಾಗಿದ್ದ ಊರು ಬನವಾಸಿ. ಈ ಊರನ್ನು ಮತ್ತು ಈ ನಾಡನ್ನು ನೂರಾರು ಶಾಸನಗಳು ವರ್ಣಿಸಿದ್ದುದರಲ್ಲಿ ಆಶ್ಚರ್ಯವೇನೂ ಇಲ್ಲ.

ಬನವಾಸಿಯ ಭೂಶೋಧನೆಯಲ್ಲಿ, ಶಾತವಾಹನಪೂರ್ವ ಪದರಿನಲ್ಲಿ ಚೌರಸಾಕಾರದ ಮುದ್ರಾಂಕಿತ ನಾಣ್ಯ ದೊರೆತು ಮೌರ್ಯರ ಕಾಲದಲ್ಲಿ ಇಲ್ಲಿ ನೆಲೆಗೊಂಡಿದ್ದ ವಾಣಿಜ್ಯ ಚಟುವಟಿಕೆಗಳ ಬಗೆಗೆ ಸುಳಿವು ನೀಡಿತು. ನಂತರದ ಕಾಲದ ನಾಣ್ಯಗಳು ಸಹಜವಾಗಿಯೆ ಶಾತವಾಹನ ಅರಸರವು. ಆರಂಭದ ನಾಣ್ಯಗಳು ಪ್ರಾಯಶಃ ಗೌತಮಿಪುತ್ರ ಶಾತಕರ್ಣಿಗೆ ಸೇರಿದುವು. ಸೀಸಲೋಹದಲ್ಲಿ ಟಂಕಿತವಾದ ಈತನ ನಾಣ್ಯದ ಮೇಲ್ಮುಖದಲ್ಲಿ 'ಗೌತಮಿಪುತಸಾ' ಎಂಬ ಬರವಣಿಗೆಯನ್ನು ಹಾಗೂ ಹಿಮ್ಮುಖದಲ್ಲಿ ಉಜ್ಜೈನ್ ಸಂಕೇತವನ್ನು ಹೊಂದಿದೆ. ಹಾಗೆಯೇ, ಯಜ್ಞಶ್ರೀ ಶಾತಕರ್ಣಿಯ ನಾಣ್ಯಗಳೂ ದೊರೆತಿವೆ. ಇವೆಲ್ಲವುಗಳ ಮೇಲ್ಮುಖದಲ್ಲಿ ಸೊಂಡಿಲನ್ನು ಮೇಲೆತ್ತಿ ನಿಂತ ಅಲಂಕೃತ ಆನೆಯ ಚಿತ್ರವಿದೆ. ವಾಶಿಷ್ಠಿಪುತ್ರ ಶಿವಸಿರಿ ಪುಳುಮಾವಿಯ ಶಾಸನದ ಹಿನ್ನೆಲೆಯಲ್ಲಿ ಈ ನಾಣ್ಯಗಳಿಗೆ ಮಹತ್ವವಿದೆ.

ಚುಟು ಶಾತವಾಹನರ ಸೀಸದನಾಣ್ಯಗಳು ಚುಟುಕಲಾನಂದ, ಮುಡಾನಂದ ಮತ್ತು ಶಿವಲಾನಂದರಿಗೆ ಸಂಬಂಧಿಸಿದುವು. ಬನವಾಸಿ ಪ್ರದೇಶದಲ್ಲಿ ಮೊದಲಬಾರಿಗೆ ಬೆಳಕಿಗೆ ಬಂದಿತೆಂದು ಭಾವಿಸಲಾದ ಹಾಗೂ ಮುಡಾನಂದನ ಉತ್ತರಾಧಿಕಾರಿಯೆಂದು ತಿಳಿಯಲಾದ ಚುಟು ಶಾತವಾಹನ ಅರಸ ಶಿವಲಾನಂದನ ನಾಣ್ಯದ ಮೇಲ್ಮುಖದಲ್ಲಿ ಆರೇಳು ಬಾಗುಗಳಿರುವ ಬೆಟ್ಟ, ಅದರ ಬುಡದಲ್ಲಿರುವ ನದಿ ಸಂಕೇತದ ಗೆರೆ, ಮೇಲ್ಭಾಗದಲ್ಲಿ ಲಾಳಾಕಾರದಲ್ಲಿರುವ 'ರಾಜ್ಞೊ ಶಿವಲಾನಂದಸಾ' ಎಂಬ ಬ್ರಾಹ್ಮೀಲಿಪಿಯ ಬರಹಗಳಿವೆ. ಹಿಮ್ಮುಖದಲ್ಲಿ ಬೇಲಿಯೊಳಗಿರುವ ಬೋಧಿವೃಕ್ಷ, ಅದರ ಪಕ್ಕದಲ್ಲಿ ಬಾಣವೇರಿಸಿ ನಿಲ್ಲಿಸಿರುವ ಬಿಲ್ಲುಗಳಿವೆ. ಈತ ಬನವಾಸಿಯಲ್ಲಾಳಿದ ಚುಟುವಂಶದ ಇನ್ನೊಬ್ಬ ರಾಜನಿರಬೇಕೆಂದು ಊಹಿಸಲಾಗುತ್ತದೆ.

ಶಿವಲಾನಂದನ ನಾಣ್ಯದ ಹಿಮ್ಮುಖದಲ್ಲಿರುವ ನಂದಿಪಾದ ಚಿಹ್ನೆ ಕುರಿತು ವ್ಯಕ್ತಪಟ್ಟಿರುವ ಅಭಿಪ್ರಾಯವನ್ನು ಇಲ್ಲಿ ಉಲ್ಲೇಖಿಸಬಹುದು. ಬನವಾಸಿಯ ಚುಟು-ಆನಂದ ಮನೆತನದವರ ಹೆಸರುಗಳು ಅವರು ಅನುಸರಿಸಿದ್ದಿರಬಹುದಾದ ವೈಷ್ಣವಪಂಥ ಪ್ರಭಾವದ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿದ್ದಿರಬೇಕೆಂಬ ಊಹೆಯಿದೆ. ವಿಷ್ಣು-ಸ್ಕಂದ-ಚುಟುಕುಲಾನಂದ ಶಾತಕರ್ಣಿ, ವಿಷ್ಣು-ರುದ್ರ-ಶಿವಲಾನಂದ-ಶಾತಕರ್ಣಿ ಇತ್ಯಾದಿ ಹೆಸರುಗಳೆ ಇದನ್ನು ಸಮರ್ಥಿಸುತ್ತವೆಂದು ಭಾವಿಸ ಲಾಗುತ್ತದೆ.[೩] ಚುಟುಕುಲಾನಂದ, ಮುಡಾನಂದ ಮತ್ತು ಶಿವಲಾನಂದರ ಸೀಸದನಾಣ್ಯಗಳ ಮೇಲೆ ಚಿತ್ರಿತಗೊಂಡಿರುವ ಕಮಾನುಗಳುಳ್ಳ ಗುಡ್ಡ ಸಾಂಕೇತಿಕವಾಗಿ ಸ್ತೂಪದಂತೆ ಕಾಣುತ್ತದೆನ್ನುತ್ತಾರೆ ರಘುನಾಥಭಟ್. ಅವರು ಹೇಳುವಂತೆ, ಈ ನಾಣ್ಯಗಳ ಮತ್ತೊಂದೆಡೆ ಚಿತ್ರಿಸಿರುವ ಕಟಾಂಜನದೊಳಗಣ ಬೋಧಿವೃಕ್ಷ ಸಿಂಹಳದ 'ಬೋಧಿಘರ್' ಸಂಪ್ರದಾಯವನ್ನು ನೆನಪಿಗೆ ತರುತ್ತದೆ. ಶ್ರೀಲಂಕೆಗೆ ಬಂದ ಮಹಿಂದ, ಸಂಗಮಿತ್ರೆಯರು ನೆಟ್ಟ ಬೋಧಿವೃಕ್ಷ ಸತತ ಆರಾಧನೆಗೆ ಒಳಗಾಗಿ ಕ್ರಮೇಣ ಈ 'ಬೋಧಿವೃಕ್ಷಾರಾಧನೆ' 'ಬೋಧಿಘರ್' ರಚನೆಗೆ ಸ್ಫೂರ್ತಿ ನೀಡಿರಬೇಕು. ಸ್ತೂಪ, ಚೈತ್ಯಗಳ ನಿರ್ಮಾಣದೊಟ್ಟಿಗೆ ಈ ಬಗೆಯ ಸಂಪ್ರದಾಯವೂ ಬನವಾಸಿಯಲ್ಲಿ ಬೆಳೆದುಬಂದಿರಬಹುದು. ಇದರ ಕುರುಹಾಗಿ ಚುಟುನಾಣ್ಯಗಳ ಮೇಲೆ ಈ ಬಗೆಯ ಸಾಂಕೇತಿಕಚಿತ್ರಗಳು ಮೂಡಿರಬಹುದು. ಕರ್ನಾಟಕದಲ್ಲಿ ಇದುವರೆಗೆ ದೊರೆತ ಚುಟು-ಶಾತವಾಹನರ ನಾಣ್ಯಗಳ ಮೇಲೆ ಕಂಡುಬರುವ ಚಿತ್ರಗಳಾದರೂ ಆ ಕಾಲದ ಕಲಾಪ್ರೌಢಿಮೆಯನ್ನು ಪ್ರತಿನಿಧೀಕರಿಸುತ್ತವೆ ಯೆನ್ನುತ್ತಾರೆ ಭಟ್. ಅವರು ಗುರುತಿಸುವಂತೆ, ನಂದಿ, ಆನೆ ಮುಂತಾದ ಪ್ರಾಣಿಗಳ ಚಿತ್ರಗಳೂ ಬೇಲಿಯೊಳಗೆ ನೆಟ್ಟ ಅಶ್ವತ್ಥ(ಬೋಧಿ)ವೃಕ್ಷ, ಧನುಸ್ಸು, ಗುಡ್ಡ, ಚಂದ್ರ, ಸೂರ್ಯ ಮುಂತಾದ ಸಾಂಕೇತಿಕಚಿಹ್ನೆಗಳೂ ಸಾಕಷ್ಟು ನೈಜವಾಗಿಯೇ ಮೂಡಿಬಂದಿವೆ. ಲೋಹಮಾಧ್ಯಮವಾದ್ದರಿಂದ ಹಾಗೂ ಅಚ್ಚಿನಲ್ಲಿ ತಯಾರಿಸಿದ್ದರಿಂದ ಇವುಗಳ ಚಿತ್ರಶೈಲಿ ಶಿಲಾಶಿಲ್ಪ ಇಲ್ಲವೆ ಮಣ್ಣಿನ ವಿಗ್ರಹಶೈಲಿಗಿಂತ ತುಸು ಭಿನ್ನವಾಗಿದ್ದರೂ ಒಟ್ಟಾರೆ ಇವು ಶಾತವಾಹನಕಾಲೀನ ಕಲಾಪರಂಪರೆಗನುಗುಣವಾಗಿವೆಯೆಂಬುದನ್ನು ಮರೆಯುವಂತಿಲ್ಲ. ಶಾತವಾಹನರ ಮಾಂಡಲಿಕರಾದ ಮಹಾರಥಿಗಳ ನಾಣ್ಯಗಳೂ ಬನವಾಸಿ ಪರಿಸರದಲ್ಲಿ ದೊರೆತಿವೆ.

ಭಾಷೆ-ಲಿಪಿ : ಭಾಷೆ ಮತ್ತು ಲಿಪಿಗಳ ದೃಷ್ಟಿಯಿಂದ, ಕರ್ನಾಟಕದ ಮಟ್ಟಿಗೆ, ಚುಟು-ಶಾತವಾಹನರ ಕಾಲ ಮಹತ್ವದ ಘಟ್ಟ. ಆಗ ವ್ಯಾಪಕವಾಗಿ ಉಪಯೋಗದಲ್ಲಿದ್ದ ಪ್ರಾಕೃತ ಭಾಷೆಯ ಬೆಳವಣಿಗೆಗೆ ಈ ಅರಸರ ಕೊಡುಗೆ ಗಣನೀಯವಾದುದು. ಪ್ರಾಕೃತಭಾಷೆಯನ್ನು ರಾಜಭಾಷೆಯಾಗಿ ಕಡ್ಡಾಯಗೊಳಿಸುವಲ್ಲಿ ಈ ಅರಸರು ಕೈಗೊಂಡ ಕ್ರಮದ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸದಿರುವಂತಿಲ್ಲ. ಪ್ರಾಕೃತ ಕೇವಲ ವ್ಯವಹಾರಭಾಷೆಯಾಗಿ ಬಳಕೆಗೊಳ್ಳದೆ, ಜನ ಭಾಷೆಯಾಗಿಯೂ ಇದ್ದಿತೆಂಬುದು ಸ್ಪಷ್ಟ. 'ಕಾವ್ಯಮೀಮಾಂಸೆ'ಯ ಪ್ರಕಾರ, ಕುಂತಳ ಶಾತವಾಹನ ಅರಸನೊಬ್ಬ ತನ್ನ ಆಸ್ಥಾನದಲ್ಲಿ ಕೇವಲ ಪ್ರಾಕೃತಭಾಷೆಯನ್ನೆ ಬಳಸಬೇಕೆಂದು ಆಜ್ಞೆ ಮಾಡಿದ್ದನಂತೆ.

ಲಿಪಿ ಸೌಂದರ್ಯವೂ ಈ ನಿಟ್ಟಿನಲ್ಲಿ ಗಮನಿಸಬೇಕಾದ್ದೆ. ಕಲಾತ್ಮಕ ಲಿಪಿಬಳಕೆ ಈ ಅವಧಿಯ ವೈಶಿಷ್ಟ್ಯ. ತ್ರಿಕೋನ ತಲೆಕಟ್ಟು, ಆಲಂಕಾರಿಕ ಬಾಲ ಇತ್ಯಾದಿ ಕೆಲವು ವಿಶೇಷಗಳು. ವಾಶಿಷ್ಠಿಪುತ್ರ ಶಿವಶ್ರೀ ಪುಳುಮಾವಿರಾಜನ ಮಹಾದೇವಿಯ ಸ್ಮಾರಕಶಿಲಾಶಾಸನ ಇದಕ್ಕೊಂದು ಉದಾಹರಣೆ. ಹಾಗೆಯೇ, ಮುದ್ದಾದ ಬ್ರಾಹ್ಮಿಲಿಪಿಗೆ ಇನ್ನೊಂದು ಉದಾಹರಣೆಯಾಗಿ ಹಾರಿತೀ ಪುತ್ರ ವಿಣ್ಹುಕಡ ಚುಟುಕುಲಾನಂದ ಶಾತಕರ್ಣಿ ಕಾಲದ ನಾಗಪ್ರತಿಮಾಶಾಸನವನ್ನು ಉಲ್ಲೇಖಿಸಬಹುದು. ಅಶೋಕನ ಕಾಲದ ಲಿಪಿಗಿಂತ ಹೆಚ್ಚು ದುಂಡನೆಯ ಅಕ್ಷರಗಳು ಹಾಗೂ ಕೆಲವು ಲಿಪಿಗಳಿಗೆ ಸಂಬಂಧಿಸಿದ ಆಲಂಕಾರಿಕ ಬಾಲಗಳು ಈ ಶಾಸನದಲ್ಲಿ ಕಂಡುಬರುತ್ತವೆ.

ಇನ್ನೊಂದು ಅಂಶವೆಂದರೆ, ಶಾತವಾಹನರ ನಾಣ್ಯಗಳ ಮೇಲೆ ವಿಶೇಷವಾಗಿ ಮೂಡಿಸಲಾಗಿರುವ ಕಿರು ನಾಮಾಂಕನಗಳು ಸ್ವಾಭಾವಿಕವಾಗಿಯೇ ಅವರ ಸಾಮಂತರ ನಾಣ್ಯಗಳ ಮೇಲೂ ಕಂಡುಬರುವುದುಂಟು. ನಾಣ್ಯಗಳ ಆಕೃತಿಗಳ ಜೊತೆಗೆ ಕಿರುನಾಮಾಂಕನಗಳು ವಿಕಸನ ಕ್ರಮದಲ್ಲಿ ಉಂಟಾದ ಆ ಕಾಲದ ಲಿಪಿಸ್ವರೂಪವನ್ನು ತೋರಿಸಿಕೊಡುವಲ್ಲಿ ಸಹಕಾರಿಯೆನಿಸಿವೆ.

ಬನವಾಸಿ-ರೋಮ್ ಸಂಬಂಧ: ಬನವಾಸಿ ಮತ್ತು ರೋಮ್ ನಡುವಣ ಸಂಬಂಧ ಕೇವಲ ವಾಣಿಜ್ಯ ಚಟುವಟಿಕೆಗಳಿಗೆ ಸೀಮಿತವಾಗಿರದೆ ಸಾಂಸ್ಕೃತಿಕ ಮಹತ್ವದ್ದೂ ಆಗಿದ್ದಿತೆಂದು ಹೇಳಲಡ್ಡಿಯಿಲ್ಲ. ಕರ್ನಾಟಕವನ್ನೊಳಗೊಂಡಂತೆ ದಕ್ಷಿಣಭಾರತದಲ್ಲಿ ರೋಮನ್ ನಾಣ್ಯ ಮತ್ತಿತರ ವಸ್ತು-ವಿಶೇಷಗಳು ದೊರೆತಿದ್ದು, ಅವುಗಳು ಈಗಾಗಲೆ ಸಾಕಷ್ಟುಮಟ್ಟಿಗೆ ವರದಿಯಾಗಿವೆ. ಚಂದ್ರವಳ್ಳಿ, ಬ್ರಹ್ಮಗಿರಿ, ಮಸ್ಕಿ, ಸನ್ನತಿ, ವಡಗಾಂವ್-ಮಾಧವಪುರ, ಬೆಂಗಳೂರಿನ ಯಶವಂತಪುರ ಮತ್ತು ಎಚ್.ಎ.ಎಲ್. ಹಾಗೂ ಅಕ್ಕಿಆಲೂರು ನಿವೇಶನಗಳು ಕರ್ನಾಟಕ-ರೋಮ್ ಸಂಪರ್ಕಗಳ ಬಗೆಗೆ ಬೆಳಕುಚೆಲ್ಲುತ್ತವೆ. ದಕ್ಷಿಣಾಪಥ-ರೋಮ್ ನಡುವಣ ವಾಣಿಜ್ಯಸಂಬಂಧಗಳನ್ನು ಸಮರ್ಥಿಸಲು ದೊರೆತ ಅವಶೇಷಗಳಲ್ಲಿ ರೋಮನ್ನರ ಚಿನ್ನ ಮತ್ತು ಬೆಳ್ಳಿನಾಣ್ಯಗಳು, ಮಡಿಕೆಗಳು, ಶಿಲಾಪದಕ ಇತ್ಯಾದಿ ಪರಿಶೀಲನಾರ್ಹವಾದುವು. ಕರ್ನಾಟಕದಲ್ಲಿ ಈವರೆಗೆ ದೊರೆತ ನಾಣ್ಯಗಳಲ್ಲಿ ಹೆಚ್ಚಿನವು ಅಗಸ್ಟಸ್ ಮತ್ತು ಟೈಬೀರಿಯಸ್ ಚಕ್ರವರ್ತಿಗಳವು; ಕ್ರಿ.ಶ. ೧ನೇ ಶತಮಾನದವುಗಳಾದ 'ದಿನಾರಿ' ಎಂದು ಕರೆಯಲಾಗುವ ಬೆಳ್ಳಿನಾಣ್ಯಗಳಾಗಿದ್ದು ಪ್ರಾಯಶಃ ದಕ್ಷಿಣಭಾರತ ಆಗ ಸಂಪದ್ಭರಿತವಾಗಿದ್ದಿರಬೇಕೆಂಬುದನ್ನು ಇದು ದೃಢಪಡಿಸುತ್ತದೆ. ಮುತ್ತು-ರತ್ನ, ಸಾಂಬಾರಪದಾರ್ಥ ಮುಂತಾದವುಗಳಿಗಾಗಿ ರೋಮನ್ ವರ್ತಕರು ಉತ್ತರಕನ್ನಡದ ಪ್ರದೇಶದೊಡನೆ ವ್ಯಾಪಾರ ಸಂಬಂಧ ಕುದುರಿಸಿಕೊಂಡಿದ್ದುದನ್ನು ಗಮನಿಸಿದರೆ, ಕಾರವಾರ ಬಂದರು ಆಗಾಗಲೆ ಪಡೆದಿದ್ದ ಪ್ರಾಮುಖ್ಯತೆ ಮನದಟ್ಟಾಗುತ್ತದೆ. ಈ ದೃಷ್ಟಿಯಿಂದ, ಬನವಾಸಿಯಲ್ಲಿ ದೊರೆತ ರೋಮನ್ನರ ನಾಣ್ಯ ಇನ್ನಿತರ ವಸ್ತು-ವಿಶೇಷಗಳು ಮಹತ್ವದವು.

ರೋಮನ್ನರು ಬನವಾಸಿಯೊಡನೆ ಸ್ಥಾಪಿಸಿಕೊಂಡಿದ್ದ ವಾಣಿಜ್ಯಸಂಬಂಧದ ಬಗೆಗೆ ಸುಳಿವು ನೀಡುವ ಮುಖ್ಯ ಆಧಾರಗಳೆಂದರೆ ರೋಮನ್ ಮಡಿಕೆ, ನಾಣ್ಯಪದಕದ ಕಲ್ಲಚ್ಚು, ಮಣಿ,

‘ಕ್ಯಾಮಿಯೊ’ ಇತ್ಯಾದಿ. ರಸೆಟ್‌ಕೋಟೆಡ್ ಕೆಯೊಲಿನ್ ಪೇಂಟೆಡ್ ಮಡಿಕೆ, ಸಾಮಿಯನ್ ಬಟ್ಟಲಿನ ಚೂರುಗಳು ಹಾಗೂ ಆ್ಯಂಪೋರಾದಂಥಾ ಮಡಿಕೆಭಾಗಗಳು ರೋಮನ್ನರಿಗೆ ಸಂಬಂಧಿಸಿದುವು. ಇವರು ಮಡಿಕೆಗಳನ್ನು ಅನುಕರಿಸಿದ ರೌಲೆಟೆಡ್ ಮಡಿಕೆಚೂರು ಮತ್ತಿತರ ವಸ್ತು-ವಿಶೇಷಗಳೂ ಇಲ್ಲದಿಲ್ಲ. ಬನವಾಸಿಕೋಟೆಯ ಹೊರವಲಯದಲ್ಲಿ ದೊರೆತ ರೋಮನ್ ನಾಣ್ಯಪದಕದ ಕಲ್ಲಚ್ಚು ವೈಶಿಷ್ಟ್ಯಪೂರ್ಣ ವಸ್ತುವಾಗಿದ್ದು ಮೂಲ ರೋಮನ್ ನಾಣ್ಯದ ಚಿತ್ರವನ್ನು ಅನುಕರಿಸಿ ಸ್ಥಳೀಯವಾಗಿ ತಯಾರಿಸಿರಬಹುದಾದ ಕಲ್ಲಚ್ಚು ಆಗಿದೆ. ರಘುನಾಥಭಟ್ಟರು ಚಿತ್ರಿಸುವಂತೆ, ರೋಮನ್ ಸಾಮ್ರಾಟ ಟೈಬೀರಿಯಸ್‌ನ ನಾಣ್ಯದ ಹಿಮ್ಮುಖದಲ್ಲಿ ಕಂಡುಬರುವ ಚಿತ್ರ-ಬರಹಗಳನ್ನು ಆದಷ್ಟು ಪ್ರಾಮಾಣಿಕವಾಗಿ ಅನುಕರಿಸಲಾಗಿದೆ. ಮೂಲ ರೋಮನ್‌ನಾಣ್ಯದ ಚಿತ್ರ-ಬರಹಗಳೊಡನೆ ಇದನ್ನು ಹೋಲಿಸಿದರೆ ಇದು ಇನ್ನೂ ಸ್ಪಷ್ಟವಾಗುತ್ತದೆ. ಸ್ತ್ರೀದೇವತೆಯು ಎತ್ತರವಾದ ಸ್ಟೂಲಿನ ಮೇಲೆ ಕುಳಿತಿದ್ದಾಳೆ. ಎತ್ತಿದ ಬಲಗೈಯಲ್ಲಿ ಉದ್ದನೆಯ ದಂಡ ಹಿಡಿದಿದ್ದಾಳೆ. ಎಡಗೈಯಲ್ಲಿ ಗಿಡದ ಟೊಂಗೆಯನ್ನು ಹಿಡಿದುಕೊಂಡಿದ್ದಾಳೆ. ಈ ಚಿತ್ರದ ಬಲಭಾಗದಲ್ಲಿ, ಪುಟ್ಟ ಮಣಿಚುಕ್ಕೆಗಳಿಂದುಂಟಾದ ವೃತ್ತದಲ್ಲಿ ನಾಣ್ಯಬರಹವಿದೆ (‘ಮ್ಯಾಕ್ಸಿಮ್ ಪಾಂಟಿಫ್’). ಇವಿಷ್ಟನ್ನೂ ಒಳ್ಳೆಯ ಬಳಪದ ಮೃದುಕಲ್ಲಿನಲ್ಲಿ ಸೂಕ್ಷ್ಮವಾಗಿ ಕೆತ್ತಲಾಗಿದೆ. ಈ ನಾಣ್ಯಪದಕಕ್ಕೆ ತೊಟ್ಟು ಇಡಲು ಅನುಕೂಲವಾಗುವಂತೆ ತುದಿಯಲ್ಲಿ ಪುಟ್ಟ ಕೊಳವೆಯನ್ನು ಅಚ್ಚಿಸಲಾಗಿದ್ದು ದಾರಪೋಣಿಸಲು ಅನುಕೂಲ ಮಾಡಲಾಗಿದೆ.[೩೪]

ಇನ್ನೊಂದು ಕುತೂಹಲಕಾರಿಯಾದ ವಸ್ತುವೆಂದರೆ ರೋಮನ್ ‘ಕ್ಯಾಮಿಯೊ’. ಇದೊಂದು ಬೆಲೆಯುಳ್ಳ ಹರಳುಕಲ್ಲಿನ ಅವಶೇಷ. ಇದು ಬನವಾಸಿಕೋಟೆಯ ಒಳಭಾಗದಲ್ಲಿ ದೊರೆತಿದ್ದು, ಇಂಟಾಗ್ಲಿಯೊ ಎಂಬುದು ಇದಕ್ಕಿರುವ ಇನ್ನೊಂದು ಹೆಸರು. ಇದು ಬಿಳಿ ಮತ್ತು ಕಂದುಮಣ್ಣು ಬಣ್ಣವುಳ್ಳ ಎರಡು ಪದರುಗಳುಳ್ಳ ಹರಳುಕಲ್ಲಾಗಿದೆ. ಇದನ್ನು ಚಾಲ್ಸಿಡಾನಿಯ ಪ್ರಭೇದವಾದ ಅಗೇಟ್ ಅಥವಾ ಸಾರ್ಡೊನಿಕ್ಸ್ ಎಂದು ಕರೆಯಲಾಗಿದೆ. ಇದರ ಮೇಲ್ಪದರದಲ್ಲಿ ಸೂಕ್ಷ್ಮವಾಗಿ ಕಂಡರಿಸಲಾಗಿರುವ ಉಬ್ಬುಶಿಲ್ಪ ಗಮನ ಸೆಳೆಯುತ್ತದೆ. ಈ ರೋಮನ್ ‘ಕ್ಯಾಮಿಯೊ’ ಕುರಿತ ರಘುನಾಥಭಟ್ಟರ ವರ್ಣನೆ: ಬನವಾಸಿ ಕ್ಯಾಮಿಯೋದ ಮೇಲೆ ರಾಜಗಾಂಭೀರ್ಯವುಳ್ಳ ರೋಮನ್ ಗಣ್ಯವ್ಯಕ್ತಿ ರೂಪಶಿಲ್ಪವು (ಪೋರ್‌ಟ್ರೈಚರ್) ಸೂಕ್ಷ್ಮವಾಗಿ ಕಾಣುತ್ತದೆ. ಬಲಕ್ಕೆ ಮುಖಮಾಡಿದ ಪ್ರಧಾನಪುರುಷನ ಶಿಲ್ಪವನ್ನು ‘ಪ್ರೊಫೈಲ್’ ಮಾದರಿಯಲ್ಲಿ ಕೆತ್ತಲಾಗಿದೆ. ವೇಷಭೂಷಣ ಒಳಗೊಂಡು ನಿಂತ ಭಂಗಿಯಲ್ಲಿದ್ದು ನೋಡುಗರನ್ನು ಆಕರ್ಷಿಸುವಂತಿದೆ. ರೋಮನ್ ‘ಗಾಲಾ’ (ಪುಚ್ಛಗಳಿಂದ ಅಲಂಕೃತವಾದ ಟೊಪ್ಪಿ), ಅಲಂಕೃತ ಎದೆಪಟ್ಟಿ, ವಿಶಿಷ್ಟವಾದ ರೋಮನ್ ಶಿರೋಭಾಗ, ನೀಳ ಗರುಡಮೂಗು, ಚೂಪಾದಗದ್ದ, ಚುರುಕುನೇತ್ರ ಮುಂತಾದವು ರೋಮನ್ ರಾಜಪುರುಷನ ಮೆರುಗನ್ನು ಹೆಚ್ಚಿಸುತ್ತವೆ. ಇವೆಲ್ಲವು ಅಗಸ್ಟಸ್‌ನ ರೂಪಚಿತ್ರಕಲೆಯ ಕೆಲವು ಪ್ರಧಾನಲಕ್ಷಣಗಳೆನ್ನಬಹುದು. ಕ್ರಿಸ್ತಶಕಾರಂಭದ ಶತಕಗಳಲ್ಲಿ ಈ ಬಗೆಯ ಕಲಾತ್ಮಕ ಪೆಂಟೆಂಡ್‌ಗಳನ್ನು ಪ್ರಚಾರ ಮಾಧ್ಯಮವಾಗಿ ಅಗಸ್ಟಸ್ ದೊರೆ ಬಳಕೆಯಲ್ಲಿ ತಂದನೆಂದು ಹೇಳಲಾಗಿದೆ. ಬನವಾಸಿಯ ಕ್ಯಾಮಿಯೊ ರೋಮನ್

ಸ್ಫುರದ್ರೂಪಿ ರಾಜಪುರುಷನ ಚಿತ್ರವು ವಿಶಿಷ್ಟ ಸ್ವರೂಪ, ಶೈಲಿ ಮತ್ತು ತಂತ್ರಗಳಲ್ಲಿ, ಅಂದಚಂದದಲ್ಲಿ ವಿಶಿಷ್ಟ ಕಲಾಸೃಷ್ಟಿಯಾಗಿದೆ. ರೋಮ್‌ನ ವ್ಯಕ್ತಿಚಿತ್ರಕಲೆ ಎಷ್ಟು ಸೊಗಸಾಗಿ ರೂಪುತಳೆಯಿತೆಂಬುದು ಇಂತಹ ನಿದರ್ಶನಗಳಿಂದ ಮನದಟ್ಟಾಗುತ್ತದೆ. ಇದರಲ್ಲಿ ಮೂಡಿಬಂದ ವಾಸ್ತವತೆ, ನಿಖರತೆ, ಸೂಕ್ಷ್ಮತೆ ಬೆರಗುಗೊಳಿಸುವಂತದ್ದು, ಗ್ರೀಕ್‌ಕಲೆಯ ಆದರ್ಶವಾದಿತ್ವ, ಸರಳೀಕೃತ ಸಾರ್ವತ್ರಿಕತೆಗಿಂತ ಭಿನ್ನವಾದ ಈ ರೋಮನ್‌ಕಲೆಯಲ್ಲಿ ದೈಹಿಕ ಅಂಗಲಕ್ಷಣಗಳನ್ನು ತುಂಬ ಪ್ರಾಮಾಣಿಕವಾಗಿ, ಆದಷ್ಟು ಯಥಾವತ್ತಾಗಿ ಪಡಿಮೂಡಿಸಲಾಗಿದೆ. ಒಬ್ಬ ಬಲಿಷ್ಠ ಸೇನಾನಿಯ ಸ್ಫುರದ್ರೂಪ, ಸೂಕ್ಷ್ಮ ತೀಕ್ಷ್ಣದೃಷ್ಟಿ, ಬಿಗಿಹಿಡಿದ ತುಟಿ, ನಿಖರವಾದ ಚೂಪುಗದ್ದ ಮುಂತಾದ ದೈಹಿಕ ಲಕ್ಷಣಗಳು ರೇಖಾಪ್ರಧಾನವಾಗಿ ಮೂಡಿಬಂದಿವೆ. ಹಾಗಾಗಿಯೆ ಇದೊಂದು ಉತ್ತಮ ಕಿರುಕಲಾಕೃತಿಯೆನ್ನಿಸಿ ಕೊಳ್ಳುತ್ತದೆ.[೨೫]

ಧಾರ್ಮಿಕವಾಗಿ, ಬನವಾಸಿ ಬೌದ್ಧಧರ್ಮದ ಕೇಂದ್ರವಾಗಿದ್ದಿತೆಂಬುದನ್ನು ಈಗಾಗಲೆ ಗಮನಿಸಲಾಗಿದ್ದು, ಬೌದ್ಧಧರ್ಮದ ಪ್ರಭಾವವು ಆ ನಂತರವೂ ಕೆಲವು ಶತಮಾನಗಳವರೆಗೆ ಬನವಾಸಿಯಲ್ಲಿ ಮುಂದುವರೆದುಕೊಂಡು ಬಂದುದಕ್ಕೆ ಆಧಾರಗಳಿವೆ. ಎಂ.ಬಿ. ನೇಗಿನಹಾಳರ ಪ್ರಕಾರ, ಬನವಾಸಿಯೇ ಬಹುಶಃ ಪ್ರಾಚೀನ ಕನ್ನಡ ಸಂಸ್ಕೃತಿಯ ಕೇಂದ್ರಪಟ್ಟಣವಾಗಿತ್ತು. ಆರ್ಯ ಭಾಷೆಗಳ ಪ್ರಾಬಲ್ಯದಿಂದಾಗಿ ಪೈಠಾಣವು ಸಾವಕಾಶವಾಗಿ ತನ್ನ ಕನ್ನಡತನವನ್ನು ಕಳೆದುಕೊಳ್ಳುತ್ತ ನಡೆಯಿತು. ಆನಂತರ ಶಾತವಾಹನ ಸಾಮ್ರಾಜ್ಯದ ಪ್ರಾಂತೀಯ ರಾಜಧಾನಿಯಾಗಿ ಬನವಾಸಿ ವಿಕಾಸ ಹೊಂದತೊಡಗಿತು.

ಚುಟುಪೂರ್ವದ ಅಂದರೆ ಶಾತವಾಹನಕಾಲದ ಪ್ರಾಕೃತಬರಹವೊಂದು ದೊರೆತಿದ್ದು, ಅದರಲ್ಲಿ ಆ ಮನೆತನದ ರಾಣಿಯೊಬ್ಬಳ ಸಮಾಧಿಯನ್ನು (ಛಾಯಾಪ್ರತಿಮೆ) ಉಲ್ಲೇಖಿಸಿದೆ. ನಾಗಾರ್ಜುನಕೊಂಡದಲ್ಲಿ ದೊರೆತ ಪ್ರಾಕೃತ ಬರಹದಲ್ಲಿ ವೈಜಯಂತಿಯ ದೊರೆ(ಚುಟು/ಶಾತವಾಹನ)ಯ ರಾಣಿಯಾದ 'ಕೊದಬಾಲಸಿರಿ' ಎಂಬುವಳು ಬೌದ್ಧಚೈತ್ಯವೊಂದನ್ನು ಕಟ್ಟಿಸಿದಳೆಂದು ಹೇಳುತ್ತದೆ. ಬನವಾಸಿಯ ವ್ಯಾಪಾರಿ ಭೂತಪಾಲನು ಕಾರ್ಲೆಯ ಚೈತ್ಯವನ್ನು ನಿರ್ಮಿಸಿ, ಬೌದ್ಧಧರ್ಮವನ್ನು ಪ್ರಚುರಪಡಿಸಿ ಈ ಭಾಗದಲ್ಲಿ ಹಲವಾರು ಸಂಘಾರಾಮಗಳನ್ನು ನಿರ್ಮಿಸಿದ ಥೇರ ರಕ್ಖಿತನೆಂಬ ಭಿಕ್ಷು ಬನವಾಸಿಯನ್ನು ತನ್ನ ಕೇಂದ್ರವಾಗಿ ಮಾಡಿಕೊಂಡಿದ್ದ. ಇವೆಲ್ಲ ಸಾಕ್ಷ್ಯಾಧಾರಗಳಿಂದ ಟಾಲಮಿ ಉಲ್ಲೇಖಿಸಿರುವಂತೆ, ಬನವಾಸಿಯು ಅಶೋಕನ ಕಾಲದಿಂದಲೂ ಕರ್ನಾಟಕದ ದೊಡ್ಡ ಸಾಂಸ್ಕೃತಿಕಕೇಂದ್ರವಾಗಿದ್ದುದು ಸ್ಪಷ್ಟವಾಗುತ್ತದೆ. ಕ್ರಿಸ್ತಶಕದ ಪ್ರಾರಂಭಕ್ಕಾಗಲೆ ಈ ಪಟ್ಟಣ ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿವೆತ್ತಿದ್ದು ಬೆರಗುಗೊಳಿಸುವ ಸಂಗತಿಯಾಗಿದೆ.[೨೬] ಈ ಮೇಲಿನಂತೆ ಹಲವು ಸಂಶೋಧನ ಬಗೆಯ ಮಾದರಿಗಳನ್ನು ಲಕ್ಷ್ಮಣ್ ತೆಲಗಾವಿ ಅವರ ಬರಹದಲ್ಲಿ ಕಾಣಬಹುದು.

ಚಂದ್ರವಳ್ಳಿ ನಿವೇಶನ

ಚಿತ್ರದುರ್ಗ ಬಳಿಯ ಚಂದ್ರವಳ್ಳಿ ನಿವೇಶನವು ಚಿತ್ರದುರ್ಗ-ಇಂಗಳದಹಾಳು ತಾಮ್ರಗಣಿಗಳ ಪರಿಸರದಲ್ಲಿ ಕಂಡುಬಂದಿದ್ದು, ಚಂದ್ರವಳ್ಳಿ ಮತ್ತು ಬ್ರಹ್ಮಗಿರಿಗಳನ್ನು ಈ ಸಾಲಿನಲ್ಲಿ

ಗುರುತಿಸಲಾಗುತ್ತದೆ. ಗಣಿಗಾರಿಕೆ ಮತ್ತು ಖನಿಜ ಸಂಪನ್ಮೂಲಗಳು ಚಂದ್ರವಳ್ಳಿ ಪ್ರದೇಶದಿಂದ ಸುಮಾರು ೧೫-೨೦ ಕಿ.ಮೀ. ವ್ಯಾಪ್ತಿಯಲ್ಲಿವೆ. ಯಾವುದೆ ನದಿತಟದಲ್ಲಿಲ್ಲದ ಚಂದ್ರವಳ್ಳಿ ಪ್ರಾಚೀನನಗರ ಪ್ರದೇಶದಲ್ಲಿ ಸಂಸ್ಕೃತಿ ವಿಕಾಸಗೊಂಡುದುದು ವಿಶೇಷ. ನೀರಿನ ಆಸರೆಗಾಗಿ ಹಾಗೂ ನೀರಾವರಿ ಕೃಷಿಗಳಿಗಾಗಿ ಈ ಪ್ರದೇಶದ ಕಣಿವೆಗಳಲ್ಲಿ ಅಥವಾ ಗೊಂದಿಗಳಲ್ಲಿ ನಿರ್ಮಿಸಲಾದ ಕೃತಕ ಕೆರೆ-ಕಟ್ಟೆಗಳು ನೆರವಾಗುತ್ತಿದ್ದವೆಂಬುದೆ ಇದಕ್ಕೆ ದೊರೆಯಬಹುದಾದ ಉತ್ತರ. ಚಿತ್ರದುರ್ಗ ಬೆಟ್ಟ ಮತ್ತು ಪರಿಸರದಲ್ಲಿ ಕಾಲಕಾಲಕ್ಕೆ ನಿರ್ಮಾಣಗೊಂಡ ಕೃತಕ ಜಲಾಶಯಗಳು ಮತ್ತು ಅವುಗಳ ಸರಣಿಯನ್ನು ಗಮನಿಸಿದರೆ ಇದು ಅರಿವಿಗೆ ಬರುತ್ತದೆ. ಇಲ್ಲಿ ಪರಿಗಣನಾರ್ಹವಾದುದು ಚಂದ್ರವಳ್ಳಿ ಪರಿಸರಕ್ಕೆ ಅನುಕೂಲಕರವಾದ ಭೌಗೋಳಿಕ ಹಾಗೂ ಪ್ರಾಕೃತಿಕ ಪರಿಸರವಾಗಿದೆ. ಚಿತ್ರದುರ್ಗ ಬೆಟ್ಟದ ಪಶ್ಚಿಮದ ತಪ್ಪಲಿನಲ್ಲಿ ನೆಲೆಗೊಂಡಿದ್ದ ಚಂದ್ರವಳ್ಳಿ ಪ್ರಾಚೀನಪಟ್ಟಣ ನಿವೇಶನಕ್ಕೆ ಹೊಂದಿಕೊಂಡಿರುವ ಹೂಲಿಗೊಂದಿ, ಬಸವನಗೊಂದಿ, ಬಾರಲಗೊಂದಿ ಮತ್ತು ನೇರಲಗೊಂದಿ ಎಂಬ ನಾಲ್ಕು ಗೊಂದಿಗಳು ಅಥವಾ ಉಪಕಣಿವೆಗಳು ದೊರೆತಿವೆ.

ಚಂದ್ರವಳ್ಳಿ ಕಣಿವೆ: ಮೇಲಿನ ನಾಲ್ಕೂ ಗೊಂದಿಗಳ ಒಟ್ಟು ಪರಿಸರವನ್ನೆ ಚಂದ್ರವಳ್ಳಿಕಣಿವೆ ಎನ್ನಲಾಗುತ್ತದೆ. ಈ ಕಣಿವೆಯ ವಿಶಿಷ್ಟವೆಂದರೆ ತ್ರಿಕೋನಾಕಾರವಾಗಿರುವುದು. ನೈಸರ್ಗಿಕವಾಗಿ, ಚಿತ್ರದುರ್ಗಬೆಟ್ಟ ಮತ್ತು ಕಿರುಬನಕಲ್ಲುಗುಡ್ಡಗಳು ಪರಸ್ಪರ ವಿರುದ್ಧವಾಗಿರುವ ಎರಡು ಬದಿಗಳಾಗಿರುವಂತೆ ತೋರುತ್ತದೆ. ಚೋಳಗುಡ್ಡಸಾಲು ಇವುಗಳ ಕೊನೆಯ ಅಥವಾ ಬುಡದ ಸ್ಥಾನವಾಗಿರುವಂತೆ ಕಂಡುಬರುತ್ತದೆ. ವಾಸ್ತವದಲ್ಲಿ, ಈ ವಲಯ ಚಂದ್ರವಳ್ಳಿಕಣಿವೆ ನಿವೇಶನದ ವಿಸ್ತರಣೆಯೂ ಆಗಿರುವುದು ಗಮನಾರ್ಹ. ಈ ಮೂರು ಕಣಿವೆಮಾರ್ಗಗಳಿಂದಲೂ ಈ ನಿವೇಶನಸ್ಥಾನವನ್ನು ಪ್ರವೇಶಿಸಬಹುದು.

ಚಂದ್ರವಳ್ಳಿಕಣಿವೆ ಪರಿಸರದ ನಾಲ್ಕು ಗೊಂದಿಗಳ ಪೈಕಿ ಹೂಲಿಯಗೊಂದಿ ಅಥವಾ ಹುಲಿಯಗೊಂದಿ ಕಣಿವೆ ಅತ್ಯಂತ ರಮಣೀಯವಾದುದು. ಎಲ್ಲ ಕಾಲದಲ್ಲಿಯೂ ಸಮೃದ್ಧವಾಗಿರುವ ನೀರು, ಉತ್ತಮ ಹವೆ, ದಟ್ಟ ಅರಣ್ಯಪರಿಸರ, ಅಧಿಕ ಆಹಾರ ಲಭ್ಯತೆ- ಇವೆ ಮೊದಲಾದ ಅನುಕೂಲತೆಯಿಂದಾಗಿ ಮಾನವ ಇಲ್ಲಿ ಆಸರೆಪಡೆಯಲು ಆಲೋಚಿಸಿದುದು ಸಹಜ. ವಾಸ್ತವದಲ್ಲಿ, ಇದೊಂದು ಇಕ್ಕಟ್ಟಾದ ಗೊಂದಿ ಅಥವಾ ಕಣಿವೆ. ಚಂದ್ರವಳ್ಳಿ ಪ್ರದೇಶದಿಂದ ಹದ್ದಿನಬಂಡೆಕಣಿವೆ ಮತ್ತು ಧವಳಪ್ಪನಗುಡ್ಡ ಪರಿಸರಕ್ಕೆ ಪ್ರವೇಶಿಸಲು ಹೆಬ್ಬಾಗಿಲಿನಂತಿದೆ. ಹೂಲಿ(ಯ)ಗೊಂದಿಯೆಂದರೆ, ಇಕ್ಕಟ್ಟಾದ ಎಡೆಯಲ್ಲಿ ನೀರು ಹರಿಯುವ ಕಣಿವೆಯೆಂದೇ ಅರ್ಥ. ಆದರೆ ಚಂದ್ರವಳ್ಳಿ ಪರಿಸರದ ಬಂಡೆಯೊಂದರ ಮೇಲೆ ಉಜ್ಜಿ ಮೂಡಿಸಲಾಗಿರುವ ಬೃಹತ್‌ಗಾತ್ರದ ಪಟ್ಟೆಹುಲಿಯ ರೇಖಾಕೃತಿಯ ಕಾರಣದಿಂದಾಗಿ, ಜನರು ಈ ಕಣಿವೆಯನ್ನು ಹುಲಿಯಗೊಂದಿ ಅಥವಾ ಹುಲೇಗೊಂದಿ ಎಂದು ತಪ್ಪಾಗಿ ಕರೆದಿರುವುದುಂಟು. ಆದರೆ ಪ್ರಾಚೀನಕಾಲದಲ್ಲೆ ಈ ಹೂಲಿಗೊಂದಿ ಕಣಿವೆಗೆ ಅಡ್ಡಗಟ್ಟೆ, ನಿರ್ಮಿಸಿ ನೀರು ಸಂಗ್ರಹಿಸಿ, ಅದನ್ನು ನಿತ್ಯಬಳಕೆಗೂ ವ್ಯವಸಾಯಕ್ಕೂ ಬಳಸಿಕೊಳ್ಳುತ್ತಿದ್ದರೆಂದು ಭಾವಿಸಬಹುದು. ಕಾರಣ ಇಲ್ಲಿ ಮೂರು ಅಥವಾ ನಾಲ್ಕು ಕಟ್ಟೆಗಳಿದ್ದ

ಕುರುಹುಗಳು ಗೋಚರಿಸಿವೆ. ಇಲ್ಲಿಯೆ ಕ್ರಿಶ. ೩ನೇ ಶತಮಾನದಲ್ಲಿ ಮಯೂರವರ್ಮ ನಿರ್ಮಿಸಿದ ಅಥವಾ ದುರಸ್ತಿಗೊಳಿಸಿದ ತಟಾಕವೂ ಇದ್ದಿರಬೇಕು. ಹಿಂದೆ ಇಲ್ಲಿ ಇಟ್ಟಿಗೆಯಲ್ಲಿ ನಿರ್ಮಾಣ ಗೊಂಡಿದ್ದ ಕಟ್ಟೆಯ ಅವಶೇಷಗಳು ಕಂಡುಬಂದಿದ್ದು, ಈ ಹೂಲಿಗೊಂದಿಯ ಮೇಲುಬದಿಯಲ್ಲಿ ನೆಲಸಿರುವ ಅಂಕಲಿಮಠ ಈ ಪ್ರದೇಶದ ಪೂರ್ವಚರಿತ್ರೆಯ ಸುಳಿವನ್ನು ನೀಡುವಂತದ್ದು. ಸನಿಹದ ಧವಳಪ್ಪನಗುಡ್ಡದಂತೆಯೆ ಇದು ಈ ಪರಿಸರಕ್ಕೆ ಧಾರ್ಮಿಕ, ಆಧ್ಯಾತ್ಮಿಕ ಹಾಗೂ ಶೈಕ್ಷಣಿಕ ಮಹತ್ವತೆಯನ್ನು ತಂದುಕೊಟ್ಟಿದೆ.

ಚಂದ್ರವಳ್ಳಿಕೆರೆ ಆಣೆಕಟ್ಟಿನ ಮೇಲುಭಾಗದಲ್ಲಿ, ಅಂದರೆ ಈ ಕೆರೆಗೆ ನೀರು ಹರಿದುಬರುವ ಮೇಲುಹಂತದ ಪ್ರದೇಶದಲ್ಲಿ ಅಲ್ಲಲ್ಲಿ ಸಣ್ಣಪುಟ್ಟ ಅಡ್ಡಗಟ್ಟೆಗಳಿದ್ದುದನ್ನು ಸೂಕ್ಷ್ಮವಾಗಿ ಗುರುತಿಸ ಬಹುದು. ಧವಳಪ್ಪನಗುಡ್ಡದ ಬಳಿಯಿರುವ ದೊಡ್ಡ ಕಣಿವೆಗೆ ಅಡ್ಡಲಾಗಿ ನಿರ್ಮಿಸಿರುವ ಪ್ರಾಚೀನ ಒಡ್ಡನ್ನು ಈಗಲೂ ನೋಡಬಹುದು. ಅದೇ ಸ್ಥಳದ ಕೆಳಹಂತದಲ್ಲಿ, ನೇರಲಗೊಂದಿಯಲ್ಲಿ ಚಿತ್ರದುರ್ಗಗುಡ್ಡದಿಂದ ಬಸಿಯುವ ನೀರನ್ನು ಸಂಗ್ರಹಿಸಿಟ್ಟುಕೊಳ್ಳಲು ಗುಡ್ಡಕ್ಕೆ ಹೊಂದಿಕೊಂಡಂತೆ ನಿರ್ಮಾಣಗೊಂಡಿದ್ದ ಇನ್ನೊಂದು ಕಟ್ಟೆಯನ್ನೂ ಈಗ ಗುರುತಿಸಲಾಗಿದೆ. ಇದು ಸಂಪೂರ್ಣವಾಗಿ ಹಾಳಾಗಿದ್ದರೂ ಚಂದ್ರವಳ್ಳಿಯಲ್ಲಿದ್ದ ಒಂದುಭಾಗದ ಜನಕ್ಕೆ ಹಾಗೂ ನೆಲಕ್ಕೆ ಇದು ಸಹ ಹಿಂದೊಮ್ಮೆ ನೀರುಣಿಸುತ್ತಿದ್ದಿತೆಂಬುದನ್ನು ನಿರಾಕರಿಸುವಂತಿಲ್ಲ. ಈ ನೇರಲಗೊಂದಿಯನ್ನು ಸುತ್ತುವರೆದಿರುವ ಗುಡ್ಡದಮೇಲೂ(ಚಿತ್ರದುರ್ಗಬೆಟ್ಟವನ್ನು ಹೊರತುಪಡಿಸಿ) ಈಗ ಗುರುತಿಸಲಾಗದಷ್ಟರ ಮಟ್ಟಿಗೆ ಮುಚ್ಚಿಹೋಗಿರುವ ಸಣ್ಣಸಣ್ಣ ಕಟ್ಟೆಗಳು ಗೋಚರಿಸುತ್ತವೆ. ಈ ವ್ಯವಸ್ಥೆಯ ಕಾರಣದಿಂದ ಪೂರ್ವದ ಮತ್ತು ಶಾತವಾಹನಕಾಲೀನ ಜನರು ಇಲ್ಲಿ ನೆಮ್ಮದಿಯಿಂದ ಬದುಕಿದರು; ಉತ್ತಮ ನಾಗರಿಕ ಪರಿಸರವನ್ನು ರೂಪಿಸಿಕೊಂಡರು. ದೇಶ-ವಿದೇಶಗಳ ಜನರು ಇಲ್ಲಿಗೆ ಬಂದುಹೋಗಲು ಅಥವಾ ಸಂಪರ್ಕವಿರಿಸಿಕೊಳ್ಳಲು ಸಾಧ್ಯವಾಗಿದ್ದು ಈ ಕಾರಣದಿಂದಲೇ.

ಚಿತ್ರದುರ್ಗಬೆಟ್ಟದ ತಪ್ಪಲಿನ ನಾಲ್ಕು ಗೊಂದಿಗಳಲ್ಲಿ ನೆಲೆಗೊಂಡಿದ್ದ ಚರಿತ್ರಾರಂಭ ಕಾಲದ ಸಂಸ್ಕೃತಿಯು ಮುಖ್ಯವಾಗಿ ಶಾತವಾಹನಕಾಲದ ಜನಜೀವನಕ್ಕೆ ಸಂಬಂಧಿಸಿದೆ. ಅಲ್ಲದೆ, ಈ ಪರಿಸರದಲ್ಲಿರುವ ಚಿತ್ರದುರ್ಗಗುಡ್ಡವಲ್ಲದೆ ಚೋಳಗುಡ್ಡ, ಕಿರುಬನಕಲ್ಲುಗುಡ್ಡ, ಹೋತನಕಲ್ಲುಗುಡ್ಡ ಮತ್ತಿತರ ಗುಡ್ಡಗಳಿದ್ದು ಅವು ಪರೋಕ್ಷವಾಗಿ ಪ್ರಾಚೀನ ಮಾನವನ ವಾಸಕ್ಕೆ ಅವಕಾಶ ಕಲ್ಪಿಸಿದುದು ಸ್ಪಷ್ಟಪಟ್ಟಿದೆ. ನೂತನಶಿಲಾಯುಗದಿಂದ ಆರಂಭಗೊಂಡು ಕಬ್ಬಿಣಯುಗದ ಆರಂಭದ ವರೆಗೂ ಇಲ್ಲಿ ಜನವಸತಿ ಇದ್ದುದನ್ನು ಸ್ಥಳದಲ್ಲಿ ಕೈಗೊಳ್ಳಲಾದ ಭೂಶೋಧನೆಗಳು ಸಮರ್ಥಿಸಿವೆ. ಶಾತವಾಹನ ಅರಸರ ಹಾಗೂ ಮಾಂಡಲಿಕರ ಪ್ರಭಾವ ಇಲ್ಲಿ ಉಂಟಾಗುತ್ತಿದ್ದಂತೆಯೆ ನಗರಸಂಸ್ಕೃತಿಯ ಕುರುಹುಗಳು ಗೋಚರಿಸಿದವು.

ಚಂದ್ರವಳ್ಳಿ ನಿವೇಶನದಲ್ಲಿ ಹೀಗಿರುವ ಹಳೆಯ ಮತ್ತು ಹೊಸ ಎರಡುಹಳ್ಳಗಳು ಅಸ್ತಿತ್ವದಲ್ಲಿದ್ದು, ಕ್ರಮಬದ್ಧ ಭೂಶೋಧನೆಗೆ ಅಡ್ಡಿ ಒಡ್ಡಿವೆ. ಈ ಮೇಲಿನ ಗೊಂದಿಗಳಲ್ಲಿ ಸಂಗ್ರಹವಾದ

ಮಳೆನೀರು ಹರಿಯುವುದು ಈ ಹಳ್ಳಗಳ ಮೂಲಕವೆ. ಅಲ್ಲದೆ, ಮೇಲು ಹಂತದಲ್ಲಿ ಅಂದರೆ ಹೂಲಿಗೊಂದಿಯಲ್ಲಿ, ಪ್ರಾಚೀನ ಕೆರೆನಿವೇಶನದಲ್ಲಿ ಈಗ ಹೊಸಕೆರೆ ನಿರ್ಮಾಣಗೊಂಡಿದೆ. ಹೀಗಾಗಿ ಈಗ ಸ್ವಲ್ಪಮಟ್ಟಿನ ನೀರಿನ ಹರಿವಿನ ಒತ್ತಡ ಕಡಿಮೆಯಾಗಿದೆಯೆನ್ನಬಹುದು.

ಉತ್ಖನನ ವರದಿಗಳು: ಶಾತವಾಹನಕಾಲೀನ ಮಹತ್ವದ ನೆಲೆಗಳಲ್ಲಿ ಚಂದ್ರವಳ್ಳಿಯೂ ಒಂದೆಂಬುದು ಈಗಾಗಲೆ ದೃಢಪಟ್ಟಿರುವ ಸಂಗತಿ. ವಡಗಾಂವ್-ಮಾಧವಪುರ, ಬನವಾಸಿ, ಸನ್ನತಿಗಳಲ್ಲಿ ಕಂಡುಬಂದಿರುವ ಇಟ್ಟಿಗೆಯ ಕಟ್ಟಡಗಳುಳ್ಳ ನಿವೇಶನಗಳ ಸಾಲಿಗೆ ಸೇರುವಂತಹದ್ದಾಗಿದ್ದು, ಚಂದ್ರವಳ್ಳಿ ನಗರನಿವೇಶನ ಮಾತ್ರವಲ್ಲದೆ, ವಡಗಾಂವ್-ಮಾಧವಪುರ ಇನ್ನಿತರ ನಗರಗಳಂತೆ ಪ್ರಮುಖ ವಾಣಿಜ್ಯಕೇಂದ್ರವೂ ಆಗಿದ್ದಿತು. ಇಲ್ಲಿ ದೊರೆತಿರುವ ನಾಣ್ಯಗಳು, ಕಲಾಕೃತಿಗಳು, ಮೃತ್ಪಾತ್ರೆಗಳು, ಸರಗಳ ಮಣಿಗಳು ಹಾಗೂ ಇಟ್ಟಿಗೆ ಕಟ್ಟಡಗಳು ಇದನ್ನು ಸಮರ್ಥಿಸುತ್ತವೆ. ವಡಗಾಂವ್-ಮಾಧವಪುರ ನಿವೇಶನದಲ್ಲಿ ಕಂಡುಬಂದಿರುವಂತ ಆಯತಾಕಾರದ ಕೋಣೆಗಳಿರುವ ಸಾರ್ವಜನಿಕ ಕಟ್ಟಡಗಳು, ಚೌಕಾಕೃತಿಯ ಕೋಣೆ, ದೀರ್ಘಾಯತ ಹಜಾರ, ವೃತ್ತಾಕಾರದ ಬಾವಿ, ಕಣಜಗಳಿರುವ ವಸತಿಗಳು, ದೀರ್ಘವು ಅಗಲವು ಆಗಿರುವ ರಸ್ತೆ ಇತ್ಯಾದಿಗಳು ಚಂದ್ರವಳ್ಳಿಯಲ್ಲಿ ಕಂಡುಬಂದಿದ್ದು, ಇದೊಂದು ವ್ಯವಸ್ಥಿತ ನಗರವಾಗಿದ್ದಿತೆಂದು ವ್ಯಕ್ತಪಡುತ್ತದೆ. ಇಲ್ಲಿ ನಡೆದ ಉತ್ಖನನಗಳ ವರದಿಗಳು ತೋರಿಸುವಂತೆ, ಶಾತವಾಹನಕಾಲದ ನಗರವಿನ್ಯಾಸವನ್ನು ಸಮರ್ಥಿಸುವ ಕನಿಷ್ಠ ನಾಲ್ಕು ಕೋಣೆಗಳುಳ್ಳ ಇಟ್ಟಿಗೆಯಲ್ಲಿ ನಿರ್ಮಿಸಲಾದ ಒಂದು ಕಟ್ಟಡ ಹಾಗೂ ಒಂದೇಸಾಲಿನಲ್ಲಿ ಒಂದರಪಕ್ಕದಲ್ಲೊಂದರಂತೆ ಇರುವ ಬಹುಕೊಠಡಿಗಳುಳ್ಳ ಕಟ್ಟಡಗಳ ಅವಶೇಷಗಳು ದೊರೆತಿವೆ. ಕಲಸುಮಣ್ಣಿನಿಂದ ಕಟ್ಟಿದ ಇಟ್ಟಿಗೆಕಟ್ಟಡಗಳು ಶಾತವಾಹನ ಕಾಲೀನ ವಾಸ್ತುನಿರ್ಮಾಣದ ತಂತ್ರ ಮತ್ತು ಪರಂಪರೆಗೆ ತಕ್ಕ ಉದಾಹರಣೆಗಳಂತಿವೆ.

ಚಂದ್ರವಳ್ಳಿಯಲ್ಲಿ ದೊರೆತ ಇಟ್ಟಿಗೆ, ಹೆಂಚು, ವಿವಿಧ ವರ್ಣದ ಗಾಜಿನಬಳೆಗಳು, ಮಣಿಗಳು, ಕಪ್ಪೆಚಿಪ್ಪುಗಳು, ಆಗಿನ ಜನಜೀವನ ಕುರಿತು ಸ್ಥೂಲಪರಿಚಯ ನೀಡುತ್ತವೆ. ಶಾತವಾಹನಕಾಲದ ಜನರ ಸದಭಿರುಚಿಯ ಸಂಕೇತವೆನಿಸುವಂತಹವು ಪಿಂಗಾಣಿ ಮಣ್ಣಿನಿಂದ ತಯಾರಾದ ಮೃತ್ಪಾತ್ರೆಗಳು. ವರ್ಣಾಲಂಕಾರವಿರುವ ವಿವಿಧ ಬಗೆಯ ಮಡಿಕೆ-ಕುಡಿಕೆಗಳಿವೆ. ವಿವಿಧಗಾತ್ರದ ಜಾಡಿ, ಬಟ್ಟಲು, ತಟ್ಟೆ ಹಾಗೂ ಪಾತ್ರೆಗಳು ಭೂಶೋಧನೆಯಲ್ಲಿ ದೊರೆತಿವೆ.

ಚಂದ್ರವಳ್ಳಿಯು ಸ್ಥಳೀಯಸರ್ಕಾರದ ಆಡಳಿತಕೇಂದ್ರವಾಗಿದ್ದು, ಚೀನಾ ಮತ್ತು ರೋಮ್ ದೇಶಗಳೊಂದಿಗೆ ಸಂಪರ್ಕಹೊಂದಿದ್ದ ಪ್ರಮುಖ ಔದ್ಯಮಿಕ ಮತ್ತು ವಾಣಿಜ್ಯಕೇಂದ್ರವೂ ಆಗಿದ್ದಿತು. ಕ್ರಿ.ಶ.೩೦೦ರವರೆಗೆ ಈ ನಗರ ಅಸ್ತಿತ್ವದಲ್ಲಿದ್ದು ಬೆಳವಣಿಗೆಕಂಡುದನ್ನು ಮಯೂರವರ್ಮನ ಶಾಸನ ಸಮರ್ಥಿಸುತ್ತದೆನ್ನುತ್ತಾರೆ ಸಂಶೋಧಕ ಎಂ.ಎಚ್. ಕೃಷ್ಣರವರು. ಚಂದ್ರವಳ್ಳಿ ಕೊಂಚಮಟ್ಟಿಗೆ ಪೈಠಾಣ ನಿವೇಶನವನ್ನು ಹೋಲುತ್ತದೆ. ರೋಮ್ ಚಕ್ರಾಧಿಪತ್ಯದ ಚಿನ್ನ-ಬೆಳ್ಳಿ ನಾಣ್ಯಗಳ ಹುಂಡಿ ದೊರೆತಿರುವ ನಿವೇಶನಗಳಲ್ಲಿ ಚಂದ್ರವಳ್ಳಿಯೂ ಒಂದೆಂಬುದು ಗಮನಾರ್ಹ. ಹೊರದೇಶದ

ಜನರೊಂದಿಗೆ ಏರ್ಪಟ್ಟ ವಾಣಿಜ್ಯ-ವ್ಯಾಪಾರಗಳಿಂದ ಸ್ಥಳೀಯ ಜನರು, ಅಂದರೆ ಮುಖ್ಯವಾಗಿ ವರ್ತಕರು ಶ್ರೀಮಂತರಾಗಿದ್ದಿರಬೇಕು; ಅಲ್ಲಿನ ಜನರು ಶ್ರೀಮಂತವರ್ಗದವರಾಗಿದ್ದು, ಐಷಾರಾಮ ಜೀವನಶೈಲಿಯನ್ನೂ ರೂಢಿಸಿಕೊಂಡಿದ್ದಿರಬೇಕೆಂಬ ಅಭಿಪ್ರಾಯವಿದೆ. ಚಂದ್ರವಳ್ಳಿ ನಿವೇಶನದಲ್ಲಿ ಕ್ರಿ.ಶ. ೧೧ನೇ ಶತಮಾನಕ್ಕೆ ಸೇರಿದುವೆನ್ನಲ್ಲಾದ ಚೀನಾದ ಸುಂಗ್ ಚಕ್ರವರ್ತಿಗಳ ತಾಮ್ರ ಅಥವಾ ಮಿಶ್ರಲೋಹದ ನಾಣ್ಯಗಳು ದೊರೆತಿವೆ. ಇವುಗಳ ಆಧಾರದ ಮೇಲೆ ಆ ಕಾಲದವರೆಗೂ ಚಂದ್ರವಳ್ಳಿಪಟ್ಟಣ ಅಸ್ತಿತ್ವದಲ್ಲಿದ್ದಿರಬೇಕೆಂದು ಕೆಲವರು ಊಹಿಸುವುದುಂಟು.

ಮೂರ್ತಿಗಳು-ಗೊಂಬೆಗಳು: ಚಂದ್ರವಳ್ಳಿಯಲ್ಲಿ ದೊರೆತ ಶಿಲೆ, ಲೋಹ ಮತ್ತು ಮಣ್ಣಿನಲ್ಲಿ ತಯಾರಿಸಿದ ಮೂರ್ತಿಗಳನ್ನು, ಗೊಂಬೆಗಳನ್ನು ಇಲ್ಲಿ ಗಮನಿಸಬಹುದು. ವಿಗ್ರಹಗಳು ಕಂಚಿನಲ್ಲಿ ಹಾಗೂ ಗೊಂಬೆಗಳು ಮಣ್ಣಿನಲ್ಲಿ ಇರುವುದು ವಿಶೇಷ. ಇವು ದೊರೆತಿರುವುದು ಉತ್ಖನನ ಸಂದರ್ಭಗಳಲ್ಲಿ. ಇವು ವೈವಿಧ್ಯಮಯವಾದುವು ಮಾತ್ರವಲ್ಲ, ಕಲಾಪೂರ್ಣವೂ ಆದುವೆನ್ನುತ್ತಾರೆ ಕಲಾತಜ್ಞರು. ಅಪರೂಪದ ಕಲಾಕೃತಿಗಳಲ್ಲಿ ಚಿತ್ರದುರ್ಗ ಪರಿಸರದಲ್ಲಿ ದೊರೆತ ಸಾಲಭಂಜಿಕಾಮೂರ್ತಿ ಮತ್ತು ಹಸು-ಕರುವಿನ ಎರಡು ಅಪೂರ್ವ ಕಂಚಿನಗೊಂಬೆಗಳಾದರೆ, ಇದೇ ಸ್ಥಳದಲ್ಲಿ ಮಣ್ಣಿನಶಿಲ್ಪಗಳು ಮುಖ್ಯವಾಗಿವೆ. ವಿದ್ವಾಂಸರ ಪ್ರಕಾರ, ಈ ಗೊಂಬೆಗಳ ಕಾಲ ಕ್ರಿ.ಶ.ಸು. ೧-೨ನೇ ಶತಮಾನ.[೬] ಸಾಲಭಂಜಿಕಾಮೂರ್ತಿ ಕ್ರಿ.ಶ.ಸು. ೧-೨ನೇ ಶತಮಾನದ ಅಮರಾವತಿ ಬೌದ್ಧಸ್ತೂಪದ ಕೆಲವು ಶಿಲ್ಪಗಳಲ್ಲಿಯ, ಅಲಂಕೃತ ಸ್ತ್ರೀ ಉಬ್ಬುಶಿಲ್ಪಗಳ ಲಕ್ಷಣ ಮತ್ತು ಶೈಲಿಯನ್ನು ಹೋಲುವ ಒಂದು ಉತ್ಕೃಷ್ಟ ಕಲಾಕೃತಿಯಾಗಿದೆ. ಅಲ್ಲದೆ, ಕಾರ್ಲೆಯ ಕ್ರಿ.ಶ. ೧ನೇ ಶತಮಾನದ ದಂಪತಿಮೂರ್ತಿಗಳ ನೆನಪನ್ನೂ ತರುತ್ತದೆ.

ಅಪರೂಪದ ಕಂಚಿನಮೂರ್ತಿಯೆಂಬ ಪ್ರಶಂಸೆಗೆ ಪಾತ್ರವಾಗಿರುವ ಇನ್ನೊಂದು ಮೂರ್ತಿಯೆಂದರೆ ಕರುವಿಗೆ ಮೊಲೆಯುಣಿಸುತ್ತಿರುವ ಹಸು. ತಾಂತ್ರಿಕವಾಗಿ ಹಾಗೂ ಆಭರಣಗಳ ಮಾದರಿಗಳಿಂದಾಗಿ ಈ ಮೂರ್ತಿಯು ಮಧ್ಯಯುಗೀನ ಮತ್ತು ಆ ನಂತರದ ಇಂಥಾ ಕಂಚಿನವಿಗ್ರಹಗಳಿಗಿಂತ ತೀರಾ ಭಿನ್ನವಾಗಿದೆಯೆನ್ನಲಾಗುತ್ತದೆ. ಹಸು ಮೊಲೆಯನ್ನು ಕಚ್ಚಿದ ತನ್ನ ಕರುವಿನೊಂದಿಗೆ ಅಗಲವಾದ ಚೌಕೋನದ ತೆಳ್ಳನೆಯ ತಟ್ಟೆಯ ಮೇಲೆ ನಿಂತಿರುವಂತೆ ಬಿಡಿಸಲ್ಪಟ್ಟಿರುವುದು ನೋಡುಗರನ್ನು ಆಕರ್ಷಿತವಾಗಿದ್ದು ಪರಿಗಣಿಸಲರ್ಹವಾದುದು ಸಾಲಭಂಜಿಕಾ ಮೂರ್ತಿಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಶಾತವಾಹನಕಾಲದ ಕಂಚಿನ ಕಲಾಕೃತಿ ದೊರೆಯುತ್ತಿರುವುದು ಇದೇ ಪ್ರಥಮವೆಂಬ ಅಭಿಪ್ರಾಯವಿದೆ. ಈ ಪರಿಸರದಲ್ಲಿ ದೊರೆತ ಮಣ್ಣಿನಗೊಂಬೆಗಳ ಪೈಕಿ ಪ್ರಾಣಿ ಮತ್ತು ಮಾನವಾಕೃತಿಗಳು ವೈವಿಧ್ಯತೆಯಿಂದಲೂ ಚೆಲುವಿನಿಂದಲೂ ಕೂಡಿವೆಯೆಂಬ ಪ್ರಶಂಸೆಗೆ ಪಾತ್ರವಾಗಿವೆ. ಶಾತವಾಹನಕಾಲದ ಕಲಾವಂತಿಕೆ ಮತ್ತು ಅಭಿರುಚಿಗಳಿಗೆ ಇವು ಸಾಕ್ಷಿಯಂತಿವೆ.

ಚಂದ್ರವಳ್ಳಿಯ ಶಿವಲಿಂಗವು ದೊರೆತಿದ್ದು ಅ. ಸುಂದರರವರು ಅಭಿಪ್ರಾಯಿಸುವಂತೆ "ಅಂಕೋಲದ ಬಳಿ ಬೋಳೆಯಲ್ಲಿ ದೊರೆತ ಕ್ರಿ.ಶ.೧-೨ನೇ ಶತಮಾನದ ಶಿವಲಿಂಗಕ್ಕೆ

ಹೋಲುತ್ತದೆನ್ನುತ್ತಾರೆ”.[೩೮] ಇದು ಕದಂಬ ಮಯೂರವರ್ಮನ ಕಾಲದ್ದೆಂದು ತರ್ಕಿಸಿದರೂ ಕದಂಬರು ಶಾತವಾಹನರ ತರುವಾಯದ ಅರಸರಾದ್ದರಿಂದ, ಶಾತವಾಹನ-ಕದಂಬ ಶೈಲಿಯ ಪ್ರಭಾವ ಈ ಅವಧಿಯ ಶಿಲ್ಪಗಳ ಮೇಲೆ ಆಗಿದೆ.

ಮೇಲೆ ಪ್ರಸ್ತಾಪಿಸಿರುವ ಭೂವೈಜ್ಞಾನಿಕ, ಪುರಾತತ್ವೀಯ, ಚಾರಿತ್ರಿಕ, ಭಾಷಿಕ, ಇತ್ಯಾದಿ ಸಂಗತಿಗಳನ್ನು, ವಾದಗಳನ್ನು ವಿಶ್ಲೇಷಿಸುವ ಮುನ್ನ, ಇಂತಹದೇ ಇನ್ನೊಂದು ಸ್ಥಳನಾಮ ಸಮಸ್ಯೆಯೊಂದರತ್ತ ವಿದ್ವಾಂಸರ ಗಮನ ಸೆಳೆಯುವುದು ಅಗತ್ಯವೆಂದು ತೋರುತ್ತದೆ.

ಐತಿಹ್ಯ ಹೇಳುವಂತೆ, ಹೊಯ್ಸಳ ವೀರಬಲ್ಲಾಳನು ಬೇಟೆಗಾಗಿ ಇಲ್ಲಿಗೆ (ಬೆಂಗಳೂರು ಪರಿಸರಕ್ಕೆ) ಬಂದಾಗ, ಅವನು ಹಸಿವಿನಿಂದ ಬಳಲುತ್ತಿದ್ದಾಗ ಒಬ್ಬಳು ಅಜ್ಜಿ ‘ಬೆಂದಕಾಳನ್ನು’ ಆತನಿಗೆ ನೀಡಿ ಸಂತೃಪ್ತಿ ಪಡಿಸಿದಳು. ತಾನು ತಿಂದ ಬೆಂದಕಾಳಿನ ಹೆಸರನ್ನೆ ಆಧರಿಸಿ ಆ ಸ್ಥಳನ್ನು ‘ಬೆಂದಕಾಳೂರು’ ಎಂದು ವೀರಬಲ್ಲಾಳನು ಕರೆದನು. ಇದು ಕಾಲಾನುಕ್ರಮದಲ್ಲಿ ಬೆಂಗಳೂರು ಎಂದಾಯಿತು. ಬೇಗೂರಿನಲ್ಲಿ ದೊರೆತ ೯ನೇ ಶತಮಾನದ ಶಾಸನವೊಂದರಲ್ಲಿ ಇದನ್ನು ‘ಬೆಂಗಳೂರು’ ಎಂದು ಉಲ್ಲೇಖಿಸುತ್ತದೆ. ಕೆಲವು ಸಂಶೋಧನೆಗಳ ನಂತರ ಈ ಕಥೆಯು ಸುಳ್ಳಾಗಿಸುತ್ತದೆಯೆಂದು, ಬೆಂಗಳೂರು ಅಥವಾ ರಕ್ತಹೊನ್ನೆಯ ಮರದಿಂದ ಈ ಹೆಸರು ಬಂದಿರಬಹುದೆಂದು ಅಭಿಪ್ರಾಯಪಡಲಾಗಿದೆ. ಪ್ರಾಗೈತಿಹಾಸಿಕ ಕಾಲದಿಂದಲೂ ಈ ಪ್ರದೇಶ ಜನವಾಸ್ತವುಳ್ಳದ್ದಾಗಿದ್ದಿತೆಂಬುದನ್ನು ಪುರಾತತ್ವ ಶೋಧನೆಗಳು ದೃಢಪಡಿಸಿವೆ.

ಡಾ. ಕೊ.ವ್ಯಾ. ರಮೇಶ ಅವರು ಬೆಂದಕಾಳೂರಿನ ಕಥೆಯನ್ನು ಪ್ರಸ್ತಾಪಿಸುತ್ತಾ ಅದರ ಕಾಲವನ್ನು ಕ್ರಿ.ಶ. ೧೧-೧೨ನೇ ಶತಮಾನಗಳೆಂದು ಸೂಚಿಸಿದ್ದಾರೆ. ಅಲ್ಲದೆ, ಬೆಂಗಳೂರು ಸ್ಥಳನಾಮಕ್ಕೆ ಸಂಬಂಧಿಸಿದ ಎರಡನೆ ಕಥೆಯನ್ನು ಅವರು ಹೀಗೆ ಕೊಟ್ಟಿದ್ದಾರೆ. ಹೊಸನಗರ ಒಂದನ್ನು ಕಟ್ಟಿಸುವ ಸಲುವಾಗಿ ಕ್ರಿ.ಶ. ೧೬ನೇ ಶತಮಾನದಲ್ಲಿ ಕೆಂಪೇಗೌಡನು ಅಲ್ಲಿಯ ಮರಗಳನ್ನು ಸುಟ್ಟು ಹಾಕಿದ್ದಾಗಿ, ಆ ಸ್ಥಳದಲ್ಲಿ ನಿರ್ಮಾಣಗೊಂಡ ನಗರಕ್ಕೆ ‘ಬೆಂದಕಾಡೂರು’ ಎಂದು ಹೆಸರಾಗಿ ಕಾಲಕ್ರಮದಲ್ಲಿ ಅದೇ ಬೆಂಗಳೂರು ಎಂದಾಯಿತು. ಅವರು ಮುಂದುವರೆದು, ಕ್ರಿ.ಶ. ೯ನೇ ಶತಮಾನದಷ್ಟು ಹಿಂದೆಯೆ ಬೇಗೂರು ಶಾಸನದಲ್ಲಿ ಬೆಂಗಳೂರು ಎಂಬ ಸ್ಥಳನಾಮವು ಉಲ್ಲೇಖಿತವಾಗಿರುವ ಕಾರಣ, ಮೇಲಿನ ಎರಡು ಐತಿಹ್ಯಗಳು ಕೇವಲ ಕಟ್ಟುಕತೆಗಳು ಎಂದು ಕರೆದವರು ಬಹಳ.

ಆದರೆ ಬೆಂಗಳೂರಿನ ಸ್ಥಳನಾಮವನ್ನು ನಿರ್ಧರಿಸುವ ದೃಷ್ಟಿಯಿಂದ ಡಾ. ರಮೇಶರವರು ಮಾಡಿರುವ ವಿಶ್ಲೇಷಣೆ ಅತಿಮುಖ್ಯವಾದುದು. ಅವರ ಪ್ರಕಾರ, ಬೆಂಗಳೂರು ನಗರ ಬೆಳೆದಿರುವುದು ಕೆಲವು ಬೆಣಚುಕಲ್ಲಿನ ಗುಡ್ಡೆಗಳ ಸುತ್ತ. ಬೆಣಚು ಕಲ್ಲಿನ ಪ್ರಾಚೀನ ದ್ರಾವಿಡ ರೂಪವು ಪೆಣ್ಣಲ್ ಎಂದೂ ಹಳಗನ್ನಡ ರೂಪವು ಬೆಣ್ಣಲ್>ಬೆಙ್ಗಲ್ ಎಂದೂ ಇದ್ದು, ಅವರ ಸುತ್ತಮುತ್ತ ಬೆಳೆದ ಊರಿಗೆ ಹಿಂದಿನಿಂದಲೂ ಬೆಣ್ಣಲೂರು>ಬೆಂಗಳೂರು ಎಂದಾಗಿರಬೇಕೆನ್ನುತ್ತಾರೆ.

ಬೆಂಗಳೂರು ಸ್ಥಳನಾಮ ಕುರಿತ ಚರ್ಚೆಯ ಹಿನ್ನೆಲೆಯಲ್ಲಿ 'ಬೆಂದಕಾಳೂರು' ರೂಪವನ್ನು ನಿರಾಕರಿಸುತ್ತ, ಕುಚೋದ್ಯಕ್ಕೆಂಬಂತೆ ಉದಾಹರಿಸುತ್ತ ಬಂದ ವಿದ್ವಾಂಸರು,ಜನಪದ ನಿರುಕ್ತಿಯನ್ನು ಸ್ವಲ್ಪಮಟ್ಟಿಗಾದರೂ ಪರಿಶೀಲಿಸುವ ತಾಳ್ಮೆ ವಹಿಸಿದ್ದ ಪಕ್ಷದಲ್ಲಿ, ಭೂ ವೈಜ್ಞಾನಿಕ ವೈಶಿಷ್ಟ್ಯವನ್ನೊಳಗೊಂಡ ಸ್ಥಳನಾಮದ ಖಚಿತರೂಪವನ್ನು ಬಹುಹಿಂದಿಯೆ ಗುರುತಿಸಬಹುದಿತ್ತೆಂದೆನಿಸುತ್ತದೆ. ಪ್ರಸ್ತುತ ಚರ್ಚೆಯ ಹಿನ್ನೆಲೆಯಲ್ಲಿ ಪ್ರಸ್ತಾಪಿಸಬೇಕಾದ ಸಂಗತಿಯೆಂದರೆ, ಬೆಣಚುಕಲ್ಲಿನ ಹಿನ್ನೆಲೆಯಲ್ಲಿ 'ಬೆಣ್ಜ(ಬೆಂಚ>ಚೆಂತ>ಬೆಂದ)+ಕಲ್ಲು(=ಬೆಣ್ಗಲ್)+ ಊರು' ಆಗಿ, ಜನಪದರ ಬಾಯಲ್ಲಿ 'ಕಲ್ಲು>ಕಾಳು' ಆಗಿ 'ಬೆಂದಕಾಳೂರು' ಪ್ರಚಾರಕ್ಕೆ ಬಂದಿತು; ಅಡುಗೋಲಜ್ಜಿ ಕಥೆಯಾಗಿ ಪರಿವರ್ತನೆಗೊಂಡು ವಿದ್ವಾಂಸರ ದಿಕ್ಕುಗೆಡಿಸಿತು! ವಾಸ್ತವದಲ್ಲಿ, 'ಬೆಂದಕಾಳೂರು' ಎಂಬುದು ಬೆಣಚುಕಲ್ಲು ಊರಿನ ಪರ್ಯಾಯ ರೂಪವೆ, ಅಂದರೆ 'ಬೆಂದಕಲ್ಲೂರು' ರೂಪವೆ ಆಗಿದ್ದು, ಇಂದಿನ ಬೆಂಗಳೂರು ಸ್ಥಳನಾಮದ ಮೂಲ ಹಾಗೂ ಖಚಿತ-ರೂಪವೆ ಆಗಿರುತ್ತದೆ. ಈ ಕಾರಣಕ್ಕಾಗಿ 'ಬೆಂದಕಾಳೂರು' ಎನ್ನುವುದು ಕೇವಲ ಕಪೋಲಕಲ್ಪಿತವಾದುದೆಂಬ ಅಭಿಪ್ರಾಯವನ್ನು ಇನ್ನು ಮುಂದೆ ನಮ್ಮ ವಿದ್ವಾಂಸರು ಬಿಟ್ಟು ಕೊಡುವುದು ಅಗತ್ಯ ಎಂಬ ವಾದವನ್ನು ಲಕ್ಷ್ಮಣ್ ತೆಲಗಾವಿಯವರು ತಮ್ಮದೇ ಆದ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.[೩೯]

೩.೬. ನಾಣ್ಯಗಳ ಅಧ್ಯಯನ

ನಾಣ್ಯಗಳ ಅಧ್ಯಯನವು ನಾಣ್ಯಶಾಸ್ತ್ರವಾಗಿದ್ದು ದೇಶದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸ ರಚನೆಯಲ್ಲಿ ನಾಣ್ಯಶಾಸ್ತ್ರದ ಪಾತ್ರ ಅತೀ ಮಹತ್ವದ್ದು, ಶಾಸನಗಳು ಮತ್ತು ಸಾಹಿತ್ಯಿಕ ಗ್ರಂಥಗಳು ತಿಳಿಸುವ ಇತಿಹಾಸವನ್ನು ಹೆಚ್ಚಿನ ರೀತಿಯಲ್ಲಿ ಸ್ಪಷ್ಟೀಕರಿಸಲು ನಾಣ್ಯಗಳು ಮೂಲ ಆಕರಗಳಾಗಿವೆ. ನಾಣ್ಯಗಳ ಶೋಧನೆಯಾಗದೆ ಇದ್ದಲ್ಲಿ ಭಾರತ ಹಾಗೂ ಇತರೆ ರಾಷ್ಟ್ರಗಳ ಸಂಬಂಧವೆ ತಿಳಿಯುತ್ತಿರಲಿಲ್ಲ. ಗುಪ್ತರ ಕಾಲದ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳು ಗುಪ್ತರ ಕಾಲ ಸುವರ್ಣಯುಗವೆಂಬುದನ್ನು ಸ್ಪಷ್ಟೀಕರಿಸುತ್ತದೆ.

ನಾಣ್ಯಗಳ ಬಳಕೆ ಎಂದು ಆರಂಭವಾಯಿತು ಎಂದು ಹೇಳುವುದು ಕಷ್ಟ ಆದರೆ. ಸ್ಥಳೀಯ ಇತಿಹಾಸಕ್ಕೆ ಸಂಬಂಧಿಸಿದಂತೆ ಮುದ್ರಾಂಕಿತ ನಾಣ್ಯಗಳೆ ಅತ್ಯಂತ ಪ್ರಾಚೀನ ನಾಣ್ಯಗಳಾಗಿವೆ. ನಾಣ್ಯಗಳು ಗತಕಾಲದ ಅವಶೇಷವಾದರೂ ಅಂದಿನ ಕಾಲದ ಸಂಕೇತವಾಗಿದೆ. ನಾಣ್ಯದ ಮುಂಭಾಗ ಮತ್ತು ಹಿಂಭಾಗದಲ್ಲಿರುವ ರಾಜ ಮತ್ತು ಲಿಪಿಯನ್ನೊಳಗೊಂಡ ಶಾಸನ ಇತಿಹಾಸ ಮತ್ತು ಭಾಷೆಗೆ ಸಂಬಂಧಿಸಿದ್ದಾಗಿದೆ.

ಪ್ರಾಚೀನಕಾಲದ ವಸ್ತುವಿನಿಮಯ ಪದ್ಧತಿ ರೂಢಿಯಲ್ಲಿತ್ತು. ಚೀನಾದಂತ ದೇಶದಲ್ಲಿ ಕವಡೆಗಳನ್ನು ವ್ಯಾಪಾರದ ಸಂಕೇತವಾದ ಕೊಡುಕೊಳ್ಳುವಿಕೆಯಲ್ಲಿ ಬಳಸಲಾಗುತ್ತಿತ್ತು. ತದನಂತರ ಹಂತ ಹಂತವಾಗಿ ಹಲವು ಬಗೆಯ ನಾಣ್ಯಗಳನ್ನು ವಸ್ತುವಿನಿಮಯವಾಗಿ ಬಳಸಲಾಯಿತು. ಹಾಗಾಗಿ ಹಲವು ಲೋಹಗಳನ್ನು ನಾಣ್ಯಗಳ ತಯಾರಿಕೆಯ ಟಂಕಸಾಲೆಗಳಲ್ಲಿ ಟಂಕಿಸಲಾಗುತ್ತಿತ್ತು.

ಅವುಗಳಲ್ಲಿ ಸುಟ್ಟ ಮಣ್ಣಿನ ನಾಣ್ಯ, ತಾಮ್ರ, ತವರ, ಸೀಸ, ಚಿನ್ನ, ಬೆಳ್ಳಿ, ಕಬ್ಬಿಣದಂತಹ ಹಲವು ಬಗೆಯ ಲೋಹಗಳಿಂದ ತಯಾರಿಸಿದ ಗದ್ಯಾಣ, ಜಿತಾಲ್, ದಾಮ್, ಟಂಕ, ಪಣ, ವೀಸ, ಭಾಗ,ಕಾಸು, ಗದ್ಯಾಮ, ಹೊನ್ನು, ನಿಮ್ಮ, ವರಿಷ್ಠ, ರೂಪಾಯಿ ಮುಂತಾದ ಸಂಕೇತಗಳ ಮೂಲಕ ವ್ಯಾಪಾರ ವಿನಿಮಯದಲ್ಲಿ ಕಾಣಿಸಿಕೊಂಡವು. ಒಂದು ಪ್ರಾಂತ್ಯದ ಸಂಪೂರ್ಣ ಸುವ್ಯವಸ್ಥೆಯ ಆಧಾರದ ಮೇಲೆ ನಾಣ್ಯಗಳು ಪಾತ್ರವಹಿಸಿದವು.

ನಾಣ್ಯ ಸಂಶೋಧನೆಯ ಅಧ್ಯಯನ

ಕರ್ನಾಟಕದಲ್ಲಿ ವ್ಯಾಪಾರ-ವಹಿವಾಟುಗಳಲ್ಲಿ ನಾಣ್ಯಗಳನ್ನು ಬಳಸುವ ಪದ್ಧತಿ ಆರಂಭವಾದ ನಿರ್ದಿಷ್ಟ ಕಾಲಮಾನ ಗೊತ್ತುಪಡಿಸುವುದು ಅಸಾಧ್ಯವೆಂದು ನಾಣ್ಯಶಾಸ್ತ್ರಜ್ಞರ ಅಭಿಮತವಾಗಿದೆ. ಭಾರತದ ಇತರ ಭಾಗಗಳಲ್ಲಿದ್ದಂತೆ ಕರ್ನಾಟಕದಲ್ಲಿಯೂ ಪಡಿಯಚ್ಚಿನ ಅಥವಾ ಮುದ್ರಾಂಕಿತ (ಪಂಚ್‌ಮಾರ್ಕ್ಡ್) ನಾಣ್ಯಗಳೆ ಚಲಾವಣೆಯಲ್ಲಿದ್ದು, ಬೆಳ್ಳಿ ನಾಣ್ಯಗಳನ್ನು ಉತ್ತರದಿಂದ ಕರ್ನಾಟಕದವರೆಗೆ ವರ್ತಕರು ತಂದು ವಿನಿಮಯ ಮಾಡುತ್ತಿದ್ದರು. ಇವು ದಕ್ಷಿಣ ಭಾರತದ ಇತರೆಡೆಗಳಲ್ಲೂ ಪಸರಿಸಿದವು. ನಾಣ್ಯಗಳು ಹೆಚ್ಚು ಸಂಖ್ಯೆಯಲ್ಲಿ ದೊರೆತಿರುವುದರಿಂದ, ಇವು ತೆರಿಗೆಗಳ ವಸೂಲಿಗೆ, ಅಧಿಕಾರಿಗಳಿಗೆ ಸಂಬಳಗಳನ್ನು ನಗದಾಗಿ ನೀಡುವುದಕ್ಕೆ ಸಹಕಾರಿಯಾಗಿದ್ದವು; ಇವುಗಳಲ್ಲಿ ಕಂಡುಬರುವ ಸಮರೂಪತೆಯಿಂದಾಗಿ ವಿಶಾಲವ್ಯಾಪ್ತಿಯ ಪ್ರದೇಶದಲ್ಲಿ ಮಾರುಕಟ್ಟೆಯ ವಿನಿಮಯಗಳನ್ನು ಸುಗಮಗೊಳಿಸಿದ್ದಿರಬೇಕೆಂದು ಒಪ್ಪುವುದಾಗಿದೆ. ಕರ್ನಾಟಕದಲ್ಲಿ ಬನವಾಸಿ, ಚಂದ್ರವಳ್ಳಿ, ಹಲವಾಗಿಲು, ಧಾರವಾಡ, ಚಿಕ್ಕಿಸಿಂದಗಿ, ಮಸ್ಕಿ, ವಡಗಾಂವ್, ಮಾಧವಪುರ, ರಾಯಚೂರು, ಸನ್ನತಿ ಮತ್ತು ಗುಲ್ಬರ್ಗಾಗಳಲ್ಲಿ ಇಂತಹ ನಾಣ್ಯಗಳು ದೊರೆತಿವೆ.

ಕೆಲವರು ಹೇಳುವಂತೆ ನಾಣ್ಯಗಳು ಉತ್ತರ ಭಾರತದಲ್ಲಿ ಮಾತ್ರವೇ ಟಂಕಿಸಲ್ಪಟ್ಟವು ಎಂದು, ಆದರೆ ಎ.ವಿ. ನರಸಿಂಹ ಮೂರ್ತಿಯವರು ಹೇಳುವಂತೆ, "ಕರ್ನಾಟಕವು ಮೌರ್ಯ ಸಾಮ್ರಾಜ್ಯದ ಒಂದು ಭಾಗವಾಗಿದ್ದುದರಿಂದ ಮೌರ್ಯರ ಪ್ರಸಿದ್ಧ ಮುದ್ರಾಂಕಿತ ನಾಣ್ಯಗಳು ಇಲ್ಲಿಯೂ ಪ್ರಚಾರದಲ್ಲಿದ್ದವು. ನಾಣ್ಯಗಳನ್ನು ಹೊರಗಿನಿಂದ ತರಿಸಿಕೊಳ್ಳಲಾಗುತ್ತಿತ್ತೆ ಎಂಬುದನ್ನೂ ಪ್ರಶ್ನೆಯಾಗಿಯೇ ಉಳಿದಿರುವಾಗಲೆ, ಕರ್ನಾಟಕದಲ್ಲಿ ಕ್ರಿಸ್ತಪೂರ್ವದಲ್ಲಿಯೆ ಲೋಹರಚನಾಶಾಸ್ತ್ರ ಮತ್ತು ತಂತ್ರ ಬೆಳೆದುಕೊಂಡು ಬಂದಿತ್ತು. ಮೌರ್ಯರ ಕಾಲದಲ್ಲಿಯೂ ಈ ಕಲೆ ಕರ್ನಾಟಕದಲ್ಲಿದ್ದಿತು. ಆದ್ದರಿಂದ ಕರ್ನಾಟಕದಲ್ಲಿ ದೊರೆತ ಮೌರ್ಯರ ಮುದ್ರಾಂಕಿತ ನಾಣ್ಯಗಳನ್ನು ಕರ್ನಾಟಕದಲ್ಲಿಯೇ ಟಂಕಿಸಿರಬಹುದೆಂಬ ಅಭಿಪ್ರಾಯವಿದ್ದು, ಮೌರ್ಯರ ಸಂಕೇತ ಮತ್ತು ನಾಣ್ಯ ರಚನಾತಂತ್ರವನ್ನೆ ಬಳಸಲಾಗಿರಬಹುದಾಗಿದೆ.

ಕರ್ನಾಟಕದಲ್ಲಿ ದೊರೆತಿರುವ ಮುಂದ್ರಾಕಿತ ನಾಣ್ಯಗಳ ಪ್ರಮಾಣ ಗಮನಿಸುವುದಾದರೆ, ನೆರೆಯ ರಾಜ್ಯಗಳಾದ ಕೇರಳ, ತಮಿಳುನಾಡು ಮತ್ತು ಆಂಧ್ರಪ್ರದೇಶಗಳಲ್ಲಿ ದೊರೆತಿದೆ. ಆದಾಗ್ಯೂ ಕರ್ನಾಟಕದ ಕೊಪ್ಪಳ ಜಿಲ್ಲೆ ಚಿಕ್ಕ ಸಿಂದಗಿಯಲ್ಲಿ ಆಕಸ್ಮಿಕವಾಗಿ ದೊರೆತ ಮುದ್ರಾಂಕಿತ

ನಾಣ್ಯಗಳ ಒಂದು ರಾಶಿ ವಿದ್ವಾಂಸರಲ್ಲಿ ಆಶಾಭಾವನೆ ಮೂಡಲು ಕಾರಣವಾಯಿತು. ಲಿಪಿಶಾಸ್ತ್ರದ ಪ್ರಕಾರ, ಈ ನಾಣ್ಯಗಳ ಮೇಲಿರುವ ಬ್ರಾಹ್ಮಿಲಿಪಿಯ ಶೈಲಿ ಕ್ರಿಶ. ೨-೩ನೇ ಶತಮಾನದ್ದೆನ್ನಲಾಗುತ್ತದೆ. ಮೌರ್‍ಯರ ನಾಣ್ಯ ಲಕ್ಷಣಗಳನ್ನು ಹೋಲುತ್ತವೆನ್ನುವುದು ಈ ನಾಣ್ಯಗಳ ವೈಶಿಷ್ಟ್ಯ. ಇವುಗಳನ್ನು ಟಂಕಿಸಿದುದು ಕರ್ನಾಟಕದಲ್ಲೊ, ಹೊರರಾಜ್ಯಗಳಲ್ಲೋ ಎಂಬುದಿನ್ನೂ ಇತ್ಯಾರ್ಥಗೊಂಡಿಲ್ಲವಾದ್ದರಿಂದ ಅವುಗಳ ಮೂಲ ಕುರಿತ ಜಿಜ್ಞಾಸೆ ಮುಂದುವರೆದಿರುವುದು ತೀರಾ ಸಹಜ. ಆದರೆ ಮೌರ್‍ಯ ನಾಣ್ಯಗಳ ತಾಂತ್ರಿಕತೆಗಿಂತ ಚಿಕ್ಕಸಿಂದಗಿ ನಾಣ್ಯಗಳು ಕೆಳಸ್ತರದಲ್ಲಿರುವುದರಿಂದ ಇಲ್ಲೇ ತಯಾರಾಗಿರಬೇಕೆಂಬ ಅಭಿಪ್ರಾಯವೂ ಇದೆ. ಇದು ಖಚಿತವಾದರೆ, ಇವು ಕರ್ನಾಟಕದ ಪ್ರಾಚೀನತಮ ನಾಣ್ಯಗಳೆಂಬ ಹೆಗ್ಗಳಿಕೆಗೆ ಪಾತ್ರವಾಗುತ್ತವೆ ಎನ್ನುವುದುಂಟು. ಅಲ್ಲದೆ, ಮಸ್ಕಿ ಭೂಶೋಧನೆಯಲ್ಲಿ ದೊರೆತ ಆರುಗೆರೆ ಚಂದ್ರ, ಎತ್ತು, ಆನೆಗಳ ಚಿಹ್ನೆ, ಸಹಿತವಿರುವ ಮುದ್ರಾಂಕಿತ ನಾಣ್ಯಗಳು ಮೌರ್‍ಯರಿಗಿಂತಲೂ ಹಿಂದಿನವೆಂದು ತೀರ್ಮಾನಗೊಂಡಿರುವುದರಿಂದ, ಕರ್ನಾಟಕದಲ್ಲಿ ದೊರೆತ ನಾಣ್ಯಗಳ ಪೈಕಿ ಇವೇ ಅತಿ ಪ್ರಾಚೀನವಾದುವೆಂತಲೂ ಹೇಳಲಾಗುತ್ತದೆ.

ಕಲಾ ಇತಿಹಾಸಕಾರರು ನಾಣ್ಯಕಲೆಯ ಬೆಳವಣಿಗೆಯನ್ನು ಗುರುತಿಸುವುದು ಮುದ್ರಾಂಕಿತ ನಾಣ್ಯಗಳಿಂದ. ಈ ನಾಣ್ಯಗಳ ಮೇಲಿನ ವೈವಿಧ್ಯಮಯ ರೇಖಾಕೃತಿಗಳು ಆ ಕಾಲದ ಕಲೆಯ ಅವಿಭಾಜ್ಯ ಅಂಗಗಳಾಗಿವೆಯೆಂದು ಅವರು ಅಭಿಪ್ರಾಯಿಸುತ್ತಾರೆ. ಆ ನಂತರದ ಕಾಲದಲ್ಲಿ ಕಂಡುಬರುವ ಭಾವಾಕೃತಿಗಳು ಈ ನಾಣ್ಯಗಳ ಮೇಲೆ ಕಂಡು ಬಾರದಿರುವುದೆ ಇದಕ್ಕೆ ಕಾರಣ. ಕಲಾ ಇತಿಹಾಸ ದೃಷ್ಟಿಯಿಂದ ಮುದ್ರಾಂಕಿತ ನಾಣ್ಯಗಳನ್ನು ವಿಶ್ಲೇಷಿಸಲೆತ್ನಿಸಿರುವ ಆರ್.ಎಚ್. ಕುಲಕರ್ಣಿಯವರು ಹೇಳುವಂತೆ, ಮುದ್ರಾಂಕಿತ, ನಾಣ್ಯಗಳ ಮೇಲೆ ಸಾಮಾನ್ಯವಾಗಿ ಸೂರ್‍ಯ, ಚಂದ್ರ, ನದಿ, ಬೆಟ್ಟ, ಸ್ತೂಪಾಕೃತಿ, ಆನೆ, ಬಿಲ್ಲು, ಬಾಣ, ಶ್ರೀವತ್ಸದಂಥ ಆಕೃತಿ, ಗೂಳಿಯ ಕೊಂಬು(ಟಾರಿನ್) ಮುಂತಾದ ಆಕೃತಿಗಳು ಕಂಡುಬರುತ್ತವೆ. ಶೈಲಿಯ ದೃಷ್ಟಿಯಿಂದ ಇವುಗಳನ್ನು ಗಮನಿಸಿದರೆ ಆಕೃತಿಗಳಲ್ಲಿನ ಪ್ರಬುದ್ಧತೆ ಇನ್ನೂ ಅಪಕ್ವವಾಗಿದೆಯೆಂದು ಹೇಳಬಹುದು. ಈ ಅಪಕ್ವತೆಗೆ ಕಾರಣ ಇನ್ನೂ ಆಗ ಅಚ್ಚುಹಾಕುವ ತಂತ್ರಜ್ಞಾನ ಉನ್ನತಿ ಹೊಂದಿರಲಿಲ್ಲವೆಂದು ತೋರುತ್ತದೆ. ಇದಕ್ಕೆ ಪುಷ್ಟಿ ನೀಡುವಂತೆ ಈ ಆಕೃತಿಗಳು ಮತ್ತು ನಾಣ್ಯಗಳ ಆಕರಗಳು ನಿರ್ದಿಷ್ಟವಾದ ರೇಖೆಯನ್ನು ಹೊಂದುವಂತೆ ಇರದೇ ಇರಬಹುದು. ಚೌಕ, ತ್ರಾಪಿಜ್ಯ, ಆಯತ ಹೀಗೆ ವೃತ್ತಾಕಾರವಲ್ಲದ ಆಕೃತಿಗಳು ಮುದ್ರಾಂಕಿತಗಷ್ಟೆ ರೂಪುಗೊಳ್ಳುತ್ತಿದ್ದ ಬೌದ್ಧ ಕಾಲ, ಬೌದ್ಧಪೂರ್ವಕಾಲದ ಸ್ಥಳೀಯ ಕಲಾಪ್ರಕಾರಗಳಲ್ಲಿಯ ಕೆಲವು ಆಕೃತಿಗಳು ಮುದ್ರಾಂಕಿತ ನಾಣ್ಯಗಳ ಆಕೃತಿಗಳಿಗೆ ಹೆಚ್ಚು ಸಮೀಪವಾಗಿವೆ. ಉದಾಹರಣೆಗೆ, ಆ ಕಾಲದ ಸುಡಾವೆಮಣ್ಣಿನ ಆಕೃತಿಗಳಿಗೆ ಕಲೆ ಸರಿಸುಮಾರು ಇದೇ ಕಾಲದಲ್ಲಿ ಪ್ರಾರಂಭವಾದ ವೃತ್ತಾಕಾರದ ಚಪ್ಪಟೆ ಶಿಲೆಗಳು(ಡಿಸ್ಕ್‌ಸ್ಟೋನ್ಸ್) ಮತ್ತು ಉಂಗುರಶಿಲೆಗಳು(ರಿಂಗ್ ಸ್ಟೋನ್ಸ್). ಇವುಗಳ ಮೇಲಿನ ಆಕೃತಿಗಳು ಬಹುತೇಕವಾಗಿ ಸಂಜ್ಞೆಗಳೆ ಆಗಿವೆ. ಹೀಗಾಗಿ ಮುದ್ರಾಂಕಿತ ನಾಣ್ಯಗಳ ಕಲೆಯನ್ನು ಅಂದಿನ ಕಾಲದ ಕಲಾ ಸಂವೇದನೆಗಳ ಚೌಕಟ್ಟಿನಲ್ಲಿಯೆ ನೋಡಬೇಕಾಗುತ್ತದೆ.

ದುಂಡಾಗಿ ಇಲ್ಲವೆ ಚೌಕೋನಾಕೃತಿಯಲ್ಲಿದ್ದ ಮುದ್ರಾಂಕಿತ ನಾಣ್ಯಗಳು ಬೆಳ್ಳಿ ಮತ್ತು ತಾಮ್ರ ಮಿಶ್ರಣದವು; ನಾಣ್ಯಗಳು ಒಂದು ಆಕಾರ ಮತ್ತು ತೂಕ ಹೊಂದಿದ್ದು, ಭಾರತ ಮೂಲದವೆ ಆಗಿರುವುದೆನ್ನಬಹುದು. ಈ ನಾಣ್ಯಗಳು ಪ್ರಾರಂಭಗೊಂಡ ಕಾಲವನ್ನು ಕ್ರಿ.ಪೂ.ಸು. ೫೦೦ ಎನ್ನಲಾಗುತ್ತದೆ. ಕರ್ನಾಟಕದ ಮಟ್ಟಿಗೆ, ಮೊದಲಿಗೆ ಈ ಮುದ್ರಾಂಕಿತ ನಾಣ್ಯಗಳನ್ನು ಪರಿಚಯಿಸಿದವರು ಎಂ.ಎಚ್. ಕೃಷ್ಣ. ಆರಂಭದಲ್ಲಿ ೧೯ ಬೆಳ್ಳಿಯ ಮುದ್ರಾಂಕಿತ ನಾಣ್ಯಗಳನ್ನು ಪರಿಶೀಲಿಸಿದ ಅವರು, ತೂಕದ ಆಧಾರದ ಮೇಲೆ ಅವುಗಳನ್ನು ಕಾರ್ಷಪಣ, ಅರ್ಧಕಾರ್ಷಪಣ ಎಂದು ನಿರ್ಧರಿಸಿದರು. ಆ ನಂತರ ಮತ್ತೆ ೧೧ ಬೆಳ್ಳಿಯ ಮುದ್ರಾಂಕಿತ ನಾಣ್ಯಗಳನ್ನು ಅಧ್ಯಯನ ಮಾಡಿದರಲ್ಲದೆ, ಇವು ಮೌರ್ಯ ಚಕ್ರಾಧಿಪತ್ಯದ ನಾಣ್ಯಗಳೆಂತಲೂ ವ್ಯಾಪಾರದ ಮೂಲಕ ಇವು ಕರ್ನಾಟಕವನ್ನು ಪ್ರವೇಶಿಸಿದವೆಂತಲೂ ವಿವರಿಸಿದರು.

ಶಾತವಾಹನರ ಚರಿತ್ರೆಗೆ ಹೆಚ್ಚಿನ ಹೊತ್ತು ದೊರೆತುದು ಚಂದ್ರವಳ್ಳಿಯಲ್ಲಿ ನಡೆಸಲಾದ ಉತ್ಖನನದ ನಂತರ ಎಂಬುದು ಸ್ಪಷ್ಟ. ಈ ನಿವೇಶನದಲ್ಲಿ ದೊರೆತ ನಾಣ್ಯಗಳಿಂದಾಗಿ ಚಂದ್ರವಳ್ಳಿ ಪ್ರದೇಶವು ಶಾತವಾಹನರ ಪ್ರಾದೇಶಿಕ ರಾಜಧಾನಿಗಳಲ್ಲಿ ಒಂದೆಂಬ ಅಭಿಪ್ರಾಯ ಮೂಡುವಂತಾಯಿತು. ಈ ನಾಣ್ಯಗಳಲ್ಲಿ ಬಹುಪಾಲು ಶಾತವಾಹನ ಅರಸರಿಗಿಂತ ಅವರ ಸಾಮಂತರೆನ್ನಬಹುದಾದ ಮಹಾರಥಿಗಳಿಗೆ ಸೇರಿದವು. ಸಡಕಣ ಕಳಲಾಯ ಮಹಾರಥಿ, ಮುಡಾನಂದ, ಚುಟುಕುಡಾನಂದ ಇತ್ಯಾದಿ ಹೆಸರಿನವರು ಗೋದಾವರಿ ತೀರದ ಪೈಠಾಣ (ಪ್ರತಿಷ್ಠಾನ)ದಲ್ಲಿ ಅಧಿಕಾರ ಸ್ಥಾಪಿಸಿದ್ದ ಶಾತವಾಹನರ ಪ್ರಾಂತಾಧಿಕಾರಿಗಳು ಅಥವಾ ಶಾತವಾಹನರ ರಾಜವಂಶದವರಾಗಿರಬೇಕೆಂದು ಭಾವಿಸಲಾಗುತ್ತದೆ. ಇವರ ಚರಿತ್ರೆಯನ್ನು ಅರಿಯಲು ಈ ನಾಣ್ಯಗಳೇ ಪ್ರಮುಖ ಆಧಾರವಾಗಿದ್ದರಿಂದ, ಇವುಗಳ ವಿವರಗಳನ್ನು ಕಾಲಾನುಕ್ರಮಣಿಕೆಯ ಪ್ರಕಾರವೇ ಗಮನಿಸುವುದು ಅಗತ್ಯವಾಗಿದೆ.

ಶಾತವಾಹನರು ಮತ್ತು ಅವರ ಮಾಂಡಲಿಕರ ನಾಣ್ಯಗಳ ಸಂಗ್ರಹಣೆಯಲ್ಲಿ ಎಂ.ಎಚ್. ಕೃಷ್ಣ ಅವರದು ಪ್ರಮುಖ ಪಾತ್ರ. ಚಂದ್ರವಳ್ಳಿಯಲ್ಲಿ ಕೈಗೊಂಡ ಉತ್ಖನನದ ವೇಳೆಗೆ ಸುಮಾರು ೨೫ಕ್ಕೂ ಹೆಚ್ಚು ನಾಣ್ಯಗಳನ್ನು ಅವರು ಶೋಧಿಸಿದರು. ಮಾರ್ಟಿಮರ್ ನಾಣ್ಯಗಳು ೫೫. ಇವುಗಳಲ್ಲಿ ೨ ಬೆಳ್ಳಿಯವು; ಉಳಿದವು ಸೀಸ ಮತ್ತು ಪೊಟಿನ್ ಲೋಹದವು. ಶಾತವಾಹನರ ಮೂರು ನಾಣ್ಯಗಳಲ್ಲಿ ಒಂದು ಪುಳು ಮಾವಿಯದಾಗಿದ್ದರೆ, ಇನ್ನೆರಡು ಯಜ್ಞ ಶಾತಕರ್ಣಿಯವು. ಒಂದು ಮುಖ ಬರಿದಾಗಿರುವ ಬೆಳ್ಳಿಯ ನಾಣ್ಯ ಅಚ್ಚೊತ್ತಿದಂತಹದ್ದು. ಇದರ ಇನ್ನೊಂದು ಮುಖದಲ್ಲಿ ಸೂರ್ಯ, ಕಮಲ, ಬಾಣ ಮೊದಲಾದ ಐದು ಗುರುತುಗಳನ್ನು ಅಚ್ಚೊತ್ತಲಾಗಿದೆ. ಉತ್ತರ ಭಾರತದಲ್ಲಿ ಕ್ರಿ.ಪೂ.ಸು. ೪ನೇ ಶತಮಾನದಿಂದ ಬಳಕೆಯಲ್ಲಿದ್ದ ಈ ನಾಣ್ಯಗಳು, ದಕ್ಷಿಣದಲ್ಲಿ ಕ್ರಿಪೂ. ೨ನೇ ಶತಮಾನದಿಂದ ಕ್ರಿಶ. ೨ನೇ ಶತಮಾನದವರೆಗೆ ಚಲಾವಣೆಯಲ್ಲಿದ್ದವೆಂದು ತಿಳಿದುಬರುತ್ತದೆ. ಈಗ ತಿಳಿದಮಟ್ಟಿಗೆ, ಭಾರತದಲ್ಲಿ ಚಲಾವಣೆಯಲ್ಲಿದ್ದ ಅತ್ಯಂತ ಪ್ರಾಚೀನ ನಾಣ್ಯವೆಂದರೆ ಇದೇ ಎಂಬುದು ಗಮನಾರ್ಹ.

ಕೃಷ್ಣ ಮತ್ತು ವ್ಹೀಲರ್ ಅವರ ಸಂಗ್ರಹಗಳಲ್ಲಿ ಶಾತವಾಹನ ಅರಸರು ಮತ್ತು ಅವರ ಮಾಂಡಲಿಕರನ್ನು ಕುರಿತು ಬೆಳಕು ಚೆಲ್ಲುತ್ತವೆ. ಚಂದ್ರವಳ್ಳಿ ನಾಣ್ಯಗಳು ಶಾತವಾಹನರ ಪ್ರಸಿದ್ಧ ಹಾಗೂ ಪ್ರಬಲ ಅರಸರಾಗಿದ್ದ ಗೌತಮಿಪುತ್ರ ಶಾತಕರ್ಣಿ(ಕ್ರಿ.ಶ. ೬೦-೯೦), ಈತನ ಮಗ ವಾಶಿಷ್ಠಿಪುತ್ರ ಪುಳುಮಾವಿ(ಕ್ರಿ.ಶ.ಸು.೧೩೦-೧೫೯) ಹಾಗೂ ಸ್ವಲ್ಪ ಕಾಲಾನಂತರ ಸಿಂಹಾಸವನ್ನೇರಿದ ಗೌತಮಿಪುತ್ರ ಯಜ್ಞ ಶಾತಕರ್ಣಿ (ಕ್ರಿ.ಶ.ಸು. ೧೭೦-೧೯೮)ಗಳನ್ನೇ ಅಲ್ಲದೆ, ಉತ್ತರ ಮತ್ತು ದಕ್ಷಿಣ ಕರ್ನಾಟಕ ಪ್ರದೇಶಗಳಲ್ಲಿ ಶಾತವಾಹನರ ಸಾಮಂತರೆನಿಸಿಕೊಂಡ ಸಡಕಣ ಕಳಲಾಯ ಮಹಾರಥಿ, ಸಡಕಣ ಕಣಸ ಮಹಾರಥಿ ಮತ್ತು ಸಡಕಣ ಚಟಕಣ್ಣ ಮಹಾರಥಿಯರನ್ನು ಪ್ರಸ್ತಾಪಿಸುತ್ತವೆ. ಈ ನಾಣ್ಯಗಳಿಂದಾದ ಉಪಕಾರವೆಂದರೆ, ಮೊದಲಬಾರಿಗೆ ಕೆಲವು ಪ್ರಮುಖ ಶಾತವಾಹನ ಅರಸರ ಹಾಗೂ ಮಾಂಡಲಿಕರ ಕಾಲಾನುಕ್ರಮ ತಿಳಿದುಬಂದಿದ್ದು, ಸಡಕಣ ಚಕಟಣ್ಣ ಮಹಾರಥಿ ಮತ್ತು ಸಡಕಣ ಕಣಸ ಮಹಾರಥಿ ಪುತಸ ಎಂಬೀರ್ವ ಮಾಂಡಲಿಕರ ಹೆಸರುಗಳು ಬೆಳಕಿಗೆ ಬಂದಿವೆ.

ಸಡಕಣ ಕಳಲಾಯ ಮಹಾರಥಿಯ ಎರಡು ವಿಧದ ದುಂಡು ನಾಣ್ಯಗಳು ದೊರೆತಿವೆ. ಒಂದು ವಿಧದ ನಾಣ್ಯದ ಮುಖದಲ್ಲಿ ಬೇಲಿಯಿಂದ ಸುತ್ತುವರೆಯಲ್ಪಟ್ಟ ವೃಕ್ಷ, ಗುಡ್ಡ, ಅದರ ಮೇಲೆ ಬಿದಿಗೆ ಚಂದ್ರನಾಕೃತಿ, ನದಿಯನ್ನು ಸಂಕೇತಿಸುವ ಗೆರೆಯ ಚಿಹ್ನೆಗಳಿದ್ದರೆ, ಇನ್ನೊಂದು ಮುಖದಲ್ಲಿ ಇಣಿಯುಳ್ಳ ನಂದಿಯ ಉಬ್ಬುಚಿತ್ರ ಹಾಗೂ ಅದರ ಸುತ್ತಲೂ ಬ್ರಾಹ್ಮಿಲಿಪಿಯಲ್ಲಿ 'ಸಡಕಣ ಕಳಲಾಯ ಮಹಾರಥಿಸ' ಎಂದು ಮೂಡಿಸಲಾಗಿದೆ. ಇನ್ನೊಂದು ವಿಧದ ನಾಣ್ಯದ ಒಂದು ಮುಖದಲ್ಲಿ ಬಿದಿಗೆ ಚಂದ್ರ ಮತ್ತು ಗುಡ್ಡ ಹಾಗೂ ಇದರ ಕೆಳಗೆ ನದಿಯನ್ನು ತೋರಿಸುವ ರೇಖೆ, ಎಡಬದಿಯಲ್ಲಿ ತ್ರಿಕೋನಾಕೃತಿ, ಜೋಡಿಮೀನು, ಬಲಬದಿಯಲ್ಲಿ ನಂದಿಪಾದ ಹಾಗೂ ನದಿ ಚಿಹ್ನೆಗಳು, ಬುಡದಲ್ಲಿ ಶ್ರೀವತ್ಸ ಮತ್ತು ಸ್ವಸ್ತಿಕ ಚಿಹ್ನೆಗಳಿವೆ. ಈ ನಾಣ್ಯಗಳು ವೈವಿಧ್ಯಮಯವಾಗಿರುವುದರ ಜೊತೆಗೆ ರಾಜರ ಮತ್ತು ಅವರ ಮಾಂಡಲಿಕರ ಸಾಮಾಜಿಕ, ಸಾಂಸ್ಕೃತಿಕ ನಂಬಿಕೆ-ಆಚರಣೆಗಳನ್ನು ವ್ಯಕ್ತಪಡಿಸುವಂತಹವು.

ಬನವಾಸಿಯಲ್ಲಿ ದೊರೆತ ಗೌತಮಿಪುತ್ರನ ಸೀಸದ ನಾಣ್ಯವೊಂದರ ಮೇಲಿನ ಕೆಲವು ಚಿಹ್ನೆಗಳು ಚಂದ್ರವಳ್ಳಿಯಲ್ಲಿ ದೊರೆತ ವಶಿಷ್ಠಿಪುತ್ರ ಪುಳುಮಾವಿಯ ನಾಣ್ಯದ ಮೇಲೂ ಕಂಡುಬಂದಿರುವುದನ್ನು ಗುರುತಿಸಲಾಗಿದೆ. ಉದಾಹರಣೆಗೆ, 'ಪುಳುಮಾವಿ' ಎಂದು ಬ್ರಾಹ್ಮಿಲಿಪಿಯಲ್ಲಿ ಬರೆಯಲಾದ ಈ ನಾಣ್ಯದ ಹಿಂಬದಿಯಲ್ಲಿ ಸೊಂಡಿಲನ್ನು ಎತ್ತಿಕೊಂಡಿರುವ ಆನೆಯ ಚಿತ್ರವೂ ಎರಡೂ ಮಗ್ಗುಲ ಮಧ್ಯದಲ್ಲಿ ಪುಟ್ಟ ಉಬ್ಬು ಇರುವ ಉಜ್ಜೈನ ಸಂಕೇತವೂ ಇವೆ. ಗೌತಮಿಪುತ್ರ ಶಾತಕರ್ಣಿಯಲ್ಲದೆ, ಈತನ ಮಗ ವಾಶಿಷ್ಠಿಪುತ್ರ ಪುಳುಮಾವಿ ಮತ್ತು ಯಜ್ಞಶ್ರೀ ಶಾತಕರ್ಣಿಯರ ನಾಣ್ಯಗಳು ಚಂದ್ರವಳ್ಳಿ ಪ್ರದೇಶದಲ್ಲಿ ದೊರೆತಿರುವುದು ಇಲ್ಲಿಯ ವೈಶಿಷ್ಟ್ಯ. ವಶಿಷ್ಠಪುತ್ರ ಪುಲುಮಾವಿ ಮತ್ತು ಯಜ್ಞಶ್ರೀ ಶಾತಕರ್ಣಿಯರ ಹೆಸರುಗಳುಳ್ಳ ನಾಣ್ಯಗಳು ಪ್ರತ್ಯೇಕವಾಗಿದ್ದರೂ ಇವು ಹೊಂದಿರುವ ಚಿಹ್ನೆಗಳು ಮಾತ್ರ ಒಂದೇ ತೆರನಾದವು. ಮೇಲ್ಮುಖದಲ್ಲಿ ಆನೆಯ ಉಬ್ಬುಚಿತ್ರ ಮತ್ತು ಅರಸನ ಹೆಸರಿದ್ದರೆ; ಹಿಮ್ಮುಖದಲ್ಲಿ ಉಜ್ಜೈನ ಚಿಹ್ನೆ ಕಂಡುಬರುತ್ತದೆ.

ಹೊಸ ಬಗೆಯ ನಾಣ್ಯಗಳ ಸಂಶೋಧನೆ-ಚಂದ್ರವಳ್ಳಿಯ ಸಿಂಹ ಚಿಹ್ನೆಯ ನಾಣ್ಯ: ಚಂದ್ರವಳ್ಳಿಯಲ್ಲಿ ಲಕ್ಷ್ಮಣ್ ತೆಲಗಾವಿಯವರು ಸಂಗ್ರಹಿಸಿದ ಹೊಸ ನಾಣ್ಯವೊಂದರ ಬಗೆಗೆ ಇಲ್ಲಿ ಪ್ರಸ್ತಾಪಿಸುವುದು ಅಗತ್ಯ. ಈ ನಿವೇಶನದಲ್ಲಿ ಈತನಕ ಬೆಳಕಿಗೆ ಬಂದ ಪ್ರಮುಖ ನಾಣ್ಯಗಳು ಆನೆ, ವೃಷಭ ಚಿಹ್ನೆಗಳನ್ನು ಹೊಂದಿರುವಂತಹವು. ಉಳಿದ ಸಣ್ಣ ಅಳತೆಯ ನಾಣ್ಯಗಳು ಉಜ್ಜೈನ ಚಿಹ್ನೆ, ಚೈತ್ಯ ಚಿಹ್ನೆ ಇತ್ಯಾದಿ ಚಿಹ್ನೆಗಳಿಂದ ಕೂಡಿವೆ. ಆದರೆ ಭೂಶೋಧನೆಯ ಯಾವ ಹಂತದಲ್ಲೂ ಈ ನಿವೇಶನದಲ್ಲಿ ಸಿಂಹಚಿಹ್ನೆಯುಳ್ಳ ನಾಣ್ಯ ದೊರೆತ ಬಗೆಗೆ ವರದಿಯಾಗಿರಲಿಲ್ಲ. ಈಗ ಇದೇ ನಿವೇಶನದಲ್ಲಿ ಮೇಲ್ಮುಖದಲ್ಲಿ ಸಿಂಹಚಿಹ್ನೆ ಹೊಂದಿರುವ ನಾಣ್ಯ ದೊರೆತಿರುವುದು ಗಮನಾರ್ಹ.

ಈಗ ದೊರೆತಿರುವ ಸಿಂಹಲಾಂಛನದ ನಾಣ್ಯವು ಸೀಸಲೋಹದ್ದು ಮತ್ತು ತಕ್ಕಮಟ್ಟಿಗೆ ದುಂಡಾಕಾರದಲ್ಲಿರುವಂತಹದ್ದು. ಇದರ ಮೇಲ್ಮುಖದಲ್ಲಿ ಬಲಮುಖನಾಗಿ ನಿಮಿರಿನಿಂತಿರುವ ಸಿಂಹ. ಇದರ ಬಾಲ ಡೊಂಕಾಗಿ ಮೇಲೆದ್ದು ನಿಂತಿದೆ. ಬಿಲ್ಲು-ಬಾಣ, ಖಡ್ಗ ಹಾಗೂ ಅಕ್ಷರಗಳಿವೆ. ಹಿಮ್ಮುಖದಲ್ಲಿ ಚೈತ್ಯ ಮತ್ತು ವೃಕ್ಷ ಚಿಹ್ನೆಗಳಿವೆ. ಈ ವಿಧದ ನಾಣ್ಯಗಳು ಆಂಧ್ರಪ್ರದೇಶ ಅಥವಾ ಪೂರ್ವದಖ್ಖನಿನವೆಂದು ಭಾವಿಸಲಾಗುತ್ತದೆ. ಈ ನಾಣ್ಯಗಳನ್ನು ವಶಿಷ್ಠಿಪುತ್ರ ಪುಳುಮಾವಿ, ವಾಶಿಷ್ಠಿಪುತ್ರ, ಶಾತಕರ್ಣಿ, ಶಕ ಶಾತಕರ್ಣಿ ಗೌತಮಿಪುತ್ರ ಶಾತಕರ್ಣಿ ಹಾಗೂ ಶಾತವಾಹನರಿಗೆ ಆರೋಪಿಸಲಾಗಿದ್ದು, ಆಂಧ್ರಪ್ರದೇಶದ ಮಟ್ಟಿಗೆ ಕೃಷ್ಣ ಮತ್ತು ಗೋದಾವರಿ ಜಿಲ್ಲೆಗಳು ಹಾಗೂ ಧರಣಿಕೋಟ (ಗುಂಟೂರು ಜಿಲ್ಲೆ) ಮತ್ತು ಮುಖಲಿಂಗಂ ನಿವೇಶನಗಳಲ್ಲಿ ಈ ನಾಣ್ಯಗಳು ಬಳಕೆಯಲ್ಲಿದ್ದ ಪ್ರದೇಶಗಳೆಂದು ಗುರುತಿಸಲಾಗಿದೆ.

ಸಿಂಹ ಚಿಹ್ನೆಯ ಒಂದೇ ಒಂದು ನಾಣ್ಯ ಚಂದ್ರವಳ್ಳಿ ನಿವೇಶನದಲ್ಲಿ ಈಗ ದೊರೆತಿರುವುದರಿಂದ, ಇದನ್ನು ಸರಿಯಾಗಿ ಗುರುತಿಸುವಿಕೆಯ ಕಾರ್ಯ ಇನ್ನೂ ತೊಡಕಿನದಾಗಿಯೆ ಉಳಿದಿದೆಯೆನ್ನಲಡ್ಡಿಯಿಲ್ಲ. ಆದರೆ ಚಂದ್ರವಳ್ಳಿ ನಿವೇಶನದಲ್ಲಿ ಈವರೆಗೆ ಕೈಗೊಳ್ಳಲಾಗದ ೩-೪ ಹಂತಗಳ ಭೂಶೋಧನೆ ಮತ್ತು ನಿರಂತರವಾದ ಸರ್ವೇಕ್ಷಣ ಕಾರ್ಯಗಳ ತರುವಾಯವೂ ಸಿಂಹ ಚಿಹ್ನೆಯ ನಾಣ್ಯ ದೊರೆತಿರಲಿಲ್ಲವೆಂಬುದು ಇಲ್ಲಿ ಮುಖ್ಯ. ಪ್ರಸ್ತುತ ನಾಣ್ಯದ ಹಿನ್ನೆಲೆಯಲ್ಲಿ, ದಕ್ಷಿಣದಲ್ಲಿ ಶಾತವಾಹನ ಅರಸರ ಅಧಿಕಾರ ವಿಸ್ತರಣೆ ಕುರಿತು ಮರು ಆಲೋಚಿಸಲು ಅವಕಾಶವಿದೆ.

ತೊರೆಓಬೇನಹಳ್ಳಿಯ ಕುದುರೆ ಚಿಹ್ನೆಯ ನಾಣ್ಯಗಳು: ಶಾತವಾಹನರ ಕಾಲೀನ ಸಂಸ್ಕೃತಿ ಇದ್ದಿರಬೇಕೆಂದು ಶಂಕಿಸಬಹುದಾದ ಈಚೆಗೆ ಬೆಳಕಿಗೆ ಬಂದ ಹಾಗೂ ಶಾತವಾಹನ ಅರಸರ ನಾಣ್ಯಗಳು ದೊರೆಯುವ ಇನ್ನೊಂದು ನಿವೇಶನವೆಂದರೆ ತೊರೆ ಓಬೇನಹಳ್ಳಿ; ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕಿನಲ್ಲಿರುವ ಪುಟ್ಟಗ್ರಾಮ. ವಾಸ್ತವದಲ್ಲಿ, ಇದು ವೇದಾವತಿ ನದಿ ದಂಡೆ ಮೇಲಿರುವ ಎಡೆ. ವೇದಾವತಿ ಜಲಾನಯನ ಪ್ರದೇಶವೆಂದು ಕರೆಯಲ್ಪಟ್ಟಿರುವ ಚಿತ್ರದುರ್ಗ ಜಿಲ್ಲೆಯಲ್ಲಿ ಈ ನದಿ ಹರಿವಿನ ವ್ಯಾಪ್ತಿಯಲ್ಲಿರುವ ತಾಲ್ಲೂಕುಗಳೆಂದರೆ ಹೊಸದುರ್ಗ, ಹಿರಿಯೂರು,

ಚಳ್ಳಕೆರೆ ಮತ್ತು ಮೊಳಕಾಲ್ಮೂರು. ಕೆಳಕಣಿವೆಯಲ್ಲಿ ಈ ನದಿಗೆ ಇರುವ ಹೆಸರು ಚಿನ್ನಹಗರಿ/ಸಣ್ಣಹಗರಿ. ಚರಿತ್ರ ಪೂರ್ವಕಾಲದಿಂದಲೂ ಈ ನದಿ ಕಣಿವೆ ಜನವಸತಿಯ ತಾಣವಾಗಿದ್ದಿತೆನ್ನಲು, ಈ ನದಿಯ ಎರಡೂ ದಂಡೆಗಳಲ್ಲಿ ಕಂಡುಬರುವ ಪ್ರಾಚೀನ ಜನಜೀವನ ಕುರುಹುಗಳೆ ಸಾಕ್ಷಿ. ಈ ತನಕ ದಂಡೆಗಳಲ್ಲಿ ಕೈಗೊಳ್ಳಲಾದ ಪರಿವೀಕ್ಷಣ ಕಾರ್ಯದಲ್ಲಿ ಚಳ್ಳಕೆರೆ ತಾಲ್ಲೂಕಿನಲ್ಲಿ ಈ ನದಿದಂಡೆಯ ಗ್ರಾಮಗಳ ಪೈಕಿ ಲಕಮಗೊಂಡನಹಳ್ಳಿ, ನಾಗಗೊಂಡನಹಳ್ಳಿ ಮೊದಲಾದ ಎಡೆಗಳಲ್ಲಿ ಬೃಹತ್‌ಶಿಲಾಸಂಸ್ಕೃತಿ ಕುರುಹುಗಳನ್ನು ಈಗಾಗಲೆ ಚಿತ್ರದುರ್ಗ ಸಂಶೋಧನ ತಂಡವು ಬೆಳಕಿಗೆ ತಂದಿದೆ.[೪೦] ಈಗ ಈವರೆಗೆ ಈ ಜಿಲ್ಲೆಯಲ್ಲಿ ವರದಿಯಾಗದ ಶಾತವಾಹನ ಅರಸರ ಹೊಸ ನಾಣ್ಯಗಳಿಂದಾಗಿ (ನಾಣ್ಯರಾಶಿಯಿಂದಾಗಿ) ಈ ನದಿಕಣಿವೆ ಮತ್ತೊಮ್ಮೆ ಸಂಶೋಧಕರ ಗಮನ ಸೆಳೆದಿದೆ.

ಈಗಿನ ತೊರೆ ಓಬೇನಹಳ್ಳಿ ಗ್ರಾಮವು ಹೊಸದು; ಹಳೆಯ ಗ್ರಾಮ ನಿವೇಶನವು ನದಿಗೆ ಸನಿಹದಲ್ಲಿದೆ. ಗ್ರಾಮದ ಹಳೆಯ ನಿವೇಶನದಲ್ಲಿ ಕಂಡುಬರುವ ಚಾರಿತ್ರಿಕ ಅವಶೇಷಗಳಲ್ಲಿ ಶಾತವಾಹನಕಾಲೀನ ಇಟ್ಟಿಗೆಗಳನ್ನು ಹೋಲುವ ಪ್ರಾಚೀನ ಇಟ್ಟಿಗೆಗಳು, ದೊಡ್ಡದಾದ ಪ್ರಾಚೀನ ಶಿವಲಿಂಗ, ಸುಮಾರು ೧೭ನೇ ಶತಮಾನಕ್ಕೆ ಸೇರಿದ ಪುರುಷನೋರ್ವನ ಶಿಲ್ಪ ಇತ್ಯಾದಿ ಮುಖ್ಯವಾದವು. ಶಾತವಾಹನ ಅರಸರ ನಾಣ್ಯಗಳು ಇಲ್ಲಿ ಒಟ್ಟಾಗಿ ದೊರಕುವುದನ್ನು ಗಮನಿಸಿದರೆ, ಶಾತವಾಹನ ಸಂಸ್ಕೃತಿಕಾಲದ ಜನರು ಇಲ್ಲಿ ನೆಲಸಿದ್ದಿರಬಹುದು; ಅಥವಾ ಈ ನಾಣ್ಯಗಳು ಬೇರೆಡೆಯಿಂದ ಇಲ್ಲಿಯವರೆಗೆ ಚಲಾವಣೆಗೊಂಡಿದ್ದಿರಬಹುದು.

ತೊರೆ ಓಬೇನಹಳ್ಳಿಯಲ್ಲಿ ಈಗ ದೊರೆತಿರುವ ಸೀಸದ ನಾಣ್ಯರಾಶಿಯಲ್ಲಿ ಕೆಲವನ್ನುಳಿದು ಇತರ ಬಹುಪಾಲು ನಾಣ್ಯಗಳು ಎರಡೂ ಬದಿಗಳಲ್ಲಿ ಸ್ಪಷ್ಟವಾಗಿ ಏನನ್ನೂ ಗುರುತಿಸಲಾಗದಷ್ಟು ಸವೆದು ಹೋಗಿವೆ ಹಾಗೂ 'ಆಕ್ಸಿಡೇಷನ್ ಕ್ರಿಯೆ'ಗೆ ತುತ್ತಾಗಿ ಅಸ್ಪಷ್ಟವಾಗಿವೆ. ದೀರ್ಘಕಾಲದವರೆಗೆ ಚಲಾವಣೆಯಲ್ಲಿದ್ದುದೆ ಈ ನಾಣ್ಯಗಳ ಸವೆತಕ್ಕೆ ಕಾರಣವಿದ್ದಿರಬಹುದು. ಆದರೂ ಕೆಲವು ನಾಣ್ಯಗಳಲ್ಲಾದರೂ ಕೆಲವು ಚಿಹ್ನೆಗಳನ್ನು ಗುರುತಿಸಬಹುದು. ಈ ನಾಣ್ಯಗಳ ಮೇಲ್ಮುಖದಲ್ಲಿ ಕಂಡುಬರುವುದು ಬಲಮುಖವಾಗಿ ನಿಂತಿರುವ ಕುದುರೆಯ ಚಿತ್ರ, ಕುದುರೆಯ ಮುಂದೆ ಗೋಳಾಕಾರದ ವಸ್ತುವೊಂದು (ಸ್ಫಿರಿಕಲ್ ಆಬ್ಜೆಕ್ಟ್) ಇದೆ. ಇದರ ಮೇಲೆ ಶ್ರೀವತ್ಸ ಚಿಹ್ನೆಯಿದೆ. ನಾಣ್ಯದ ಹಿಮ್ಮುಖದಲ್ಲಿ ಆರು ಕಮಾನುಗಳುಳ್ಳ ಚೈತ್ಯ ಹಾಗೂ ಅದರ ಮೇಲಿನ ಬದಿಗೆ ಚಂದ್ರಾಕೃತಿ; ಕಟಾಂಜನ ಅಥವಾ ಬೇಲಿಯಲ್ಲಿನ ವೃಕ್ಷ; ಹಾಗೂ ಬುಡದಲ್ಲಿ ಚುಕ್ಕೆಗಳ ಸಹಿತವಿರುವ ಅಲೆಗಳು ಅಥವಾ ನದಿ ಚಿಹ್ನೆ; ಕುದುರೆ ಚಿಹ್ನೆಯ ಈ ನಾಣ್ಯಗಳು ಒಂದೇ ಆಕಾರ ಮತ್ತು ತೂಕದವೆಂಬಂತೆ ತೋರಿದರೂ ಅವುಗಳ ಮೇಲ್ಮುಖ ಹಾಗೂ ಹಿಮ್ಮುಖಗಳಲ್ಲಿಯ ಚಿಹ್ನೆಗಳಲ್ಲಿ ಕಂಡುಬರುವ ಕೆಲವು ವ್ಯತ್ಯಾಸಗಳಿಂದಾಗಿ ಇವುಗಳನ್ನು ನಿಖರವಾಗಿ ಗುರುತಿಸುವುದು ಸುಲಭವಲ್ಲ.

ನಾಣ್ಯಗಳಲ್ಲಿ ಅಕ್ಷರಗಳು ಸಾಕಷ್ಟು ಅಳಿಸಿಹೋಗಿರುವುದರಿಂದ ಅರಸ ಅಥವಾ ಆಡಳಿತಗಾರನ ಹೆಸರನ್ನು ನಿರ್ದಿಷ್ಟವಾಗಿ ಓದಲಾಗುತ್ತಿಲ್ಲ. ಆದರೆ ನಾಣ್ಯಗಳ ಮೇಲ್ಮುಖ ಮತ್ತು ಹಿಮ್ಮುಖಗಳಲ್ಲಿ ಉಳಿಸಿಕೊಂಡಿರುವ ಕೆಲವು ಚಿಹ್ನೆಗಳನ್ನಾದರೂ ಗಮನಿಸಿ ಹೇಳುವುದಾದರೆ, ಇವು ಶಾತವಾಹನ ಅರಸ ವಾಶಿಷ್ಠಿಪುತ್ರ ಪುಳುಮಾವಿಯ ಅವಧಿಯವೆಂದು ತರ್ಕಿಸಬಹುದು. ಏಕೆಂದರೆ ನಾಣ್ಯದ ಮೇಲೆ 'ರಾಣೋ... ಪುಳುಮಾವಿಸ' ಎಂಬ ಬರಹವಿದ್ದರೆ ಅದರ ಮಧ್ಯದ 'ವಾಶಿಷ್ಠಿಪುತಸ' ಎಂಬುದು ಲೋಪವಾಗಿರುವ ಸಾಧ್ಯತೆಯಿರುತ್ತದೆಂದು ಅಭಿಪ್ರಾಯಿಸಲಾಗುತ್ತದೆ. ಪ್ರಸ್ತುತ ಕುದುರೆ ಚಿಹ್ನೆಯ ನಾಣ್ಯಗಳು ವರದಿಯಾಗಿರುವ ನೆಲೆಗಳೆಂದರೆ ಆಂಧ್ರಪ್ರದೇಶದ ಅನಂತಪುರ, ಕಡಪ, ಕೃಷ್ಣಾ, ಗೋದಾವರಿ ಜಿಲ್ಲೆಗಳಲ್ಲಿ ಈ ನಾಣ್ಯಗಳು ಈ ಪ್ರದೇಶಗಳಲ್ಲಿ ವ್ಯಾಪಕವಾಗಿ ಚಲಾವಣೆಯಲ್ಲಿದುದ್ದನ್ನು ಗುರುತಿಸಲಾಗಿದೆ. ಎಡಗಡೆ ಮುಖಮಾಡಿ ನಿಂತ ಕುದುರೆಯ ಚಿಹ್ನೆಯುಳ್ಳ ನಾಣ್ಯಗಳು ವಾಶಿಷ್ಠಿಪುತ್ರ ಪುಳುಮಾವಿ, ವಶಿಷ್ಠಪುತ್ರ ಶಾತಕರ್ಣಿ, ಗೌತಮಿಪುತ್ರ ಯಜ್ಞ ಶಾತಕರ್ಣಿ ಮತ್ತು ಚಂದ್ರಶಾಂತಕರ್ಣಿಯರ ಕೊಡುಗೆಗಳಾದರೆ; ಬಲಗಡೆ ಮುಖಮಾಡಿ ನಿಂತಿರುವ ಕುದುರೆಯಿರುವ ನಾಣ್ಯವನ್ನು ಹೊರತಂದವನು ಗೌತಮಿಪುತ್ರ ಯಜ್ಞಶಾತಕರ್ಣಿ. ಸಂಶೋಧಕ ಮಾಲಾದತ್ತಾರವರು ವ್ಯಕ್ತಪಡಿಸುವಂತೆ, ಉಜ್ಜೈನ ಚಿಹ್ನೆ ಸಹಿತವಿರುವ ಕುದುರೆಲಾಂಛನದ ನಾಣ್ಯ ಆಂಧ್ರಪ್ರದೇಶಕ್ಕೆ ಅಪರೂಪದ್ದಾಗಿದ್ದು, ಆದರೆ ಮೇಲ್ಮುಖದಲ್ಲಿ ಕುದುರೆಯನ್ನು ಹಾಗೂ ಹಿಮ್ಮುಖದಲ್ಲಿ ವೃಕ್ಷ ಸಹಿತವಿರುವ ಚೈತ್ಯ ಚಿಹ್ನೆಗಳನ್ನು ಹೊಂದಿರುವ ನಾಣ್ಯಗಳು ಅನಂತಪುರ ಮತ್ತು ಕಡಪ ಜಿಲ್ಲೆಗಳಲ್ಲಿ ದೊರೆತಿದ್ದು, ಅವು ವಾಶಿಷ್ಠಿಪುತ್ರ, ಪುಳುಮಾವಿ ಮತ್ತು ವಾಶಿಷ್ಠಿಪುತ್ರ ಶಾತಕರ್ಣಿಯರಿಗೆ ಸಂಬಂಧಿಸಿದವಾಗಿವೆ. ಈ ನಾಣ್ಯಗಳು ಕೃಷ್ಣ-ಗೋದಾವರಿ ಪ್ರದೇಶಗಳವರೆಗೆ, ಅಂದರೆ ತಮಿಳುನಾಡಿನ ಸಮೀಪದ ಪರಿಸರದವರೆಗೆ ಪ್ರಸಾರದಲ್ಲಿದ್ದವು. ವಾಶಿಷ್ಠಿಪುತ್ರ ಪುಳುಮಾಮಿಯ ಅಧಿಕಾರವು ದಕ್ಷಿಣ ಆಂಧ್ರದವರೆಗೆ ವಿಸ್ತರಿಸಿದ್ದಿತೆಂದು ಇದರಿಂದ ವ್ಯಕ್ತಪಡುತ್ತದೆ. ಆದರೆ ಈ ಪ್ರದೇಶದವರೆಗೆ ಈತನ ಆಳ್ವಿಕೆ ವಿಸ್ತರಿಸಿದ್ದಿತೆಂಬುದನ್ನು ಸಮರ್ಥಿಸಲು ಶಾಸನಾಧಾರ ದೊರೆಯುವುದಿಲ್ಲ.

ಈ ಹಿನ್ನೆಲೆಯಲ್ಲಿ, ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕಿನ ತೊರೆ ಓಬೇನಹಳ್ಳಿ ಪರಿಸರದಲ್ಲಿ, ಅಂದರೆ ವೇದಾವತಿ ನದಿ ದಂಡೆಯಲ್ಲಿ ದೊರೆತ ವಾಸಿಷ್ಠಪುತ್ರ ಪುಳುಮಾವಿಯ ನಾಣ್ಯಗಳು, ಈ ಜಿಲ್ಲೆಯ ಮಟ್ಟಿಗೆ ಮೊದಲಬಾರಿಗೆ ವರದಿಯಾದಂತಿದೆವೆನ್ನಬೇಕು. ಚಿತ್ರದುರ್ಗ ಸಮೀಪದ ಚಂದ್ರವಳ್ಳಿಯಲ್ಲಿ ವಾಶಿಷ್ಠಿಪುತ್ರ ಪುಳುಮಾವಿಯ ನಾಣ್ಯಗಳು ದೊರೆತಿವೆಯೆಂದಾದರೂ ಮೇಲ್ಮುಖದಲ್ಲಿ ಕುದುರೆ ಚಿಹ್ನೆಯಿರುವ ನಾಣ್ಯಗಳು ಕಂಡುಬಂದಿಲ್ಲ; ಅಥವಾ ಈವರೆಗೆ ವರದಿಯಾಗಿಲ್ಲವೆನ್ನುವುದು ಗಮನಾರ್ಹ. ಇದೇ ಜಿಲ್ಲೆಯ ಬ್ರಹ್ಮಗಿರಿ, ಚಿಪ್ಪಿನಕೆರೆ ಮೊದಲಾದ ನಿವೇಶನಗಳಲ್ಲಿಯೂ ಈ ಬಗೆಯ ನಾಣ್ಯಗಳು ದೊರೆಯದಿರುವುದು ವಿಚಾರಾರ್ಹ ಸಂಗತಿ. ಹೀಗಾಗಿ, ಶಾತವಾಹನರು ಪ್ರಾದೇಶಿಕವಾಗಿ ಮುದ್ರಿಸಿ ಚಲಾವಣೆಗೆ ತಂದ ನಾಣ್ಯಗಳು ಈ ಜಿಲ್ಲೆಯ ಕೆಲವು ಭಾಗಗಳಲ್ಲಾದರೂ ಪ್ರಚಲಿತದಲ್ಲಿದ್ದವೆಂಬುದನ್ನು ಗಮನಿಸಬೇಕು. ಆದರೆ ಈ

ನಾಣ್ಯಗಳು ಚಂದ್ರವಳ್ಳಿಯವರೆಗೆ ಹರಿದು ಬರಲಿಲ್ಲವೇಕೆ? ಶಾತವಾಹನ ಅರಸರ ನೇರ ಆಳ್ವಿಕೆಗೆ ಚಂದ್ರವಳ್ಳಿ ಒಳಪಟ್ಟಿರಲಿಲ್ಲವೇ? ಇವೆಲ್ಲ ಏನೇ ಇದ್ದರೂ, ಆಂಧ್ರಪ್ರದೇಶದ ಅನಂತಪುರ ಮತ್ತು ಕಡಪ ಜಿಲ್ಲೆಗಳಲ್ಲಿ ಕುದುರೆ ಚಿಹ್ನೆಯ ನಾಣ್ಯಗಳು ವಿಪುಲವಾಗಿ ಚಲಾವಣೆಯಲ್ಲಿದ್ದುದನ್ನು ಗಮನಿಸಿದರೆ, ಈ ಪ್ರದೇಶಗಳಿಗೆ ಸಮೀಪವಿರುವ ಚಿತ್ರದುರ್ಗ ಜಿಲ್ಲೆಗೂ ಯಾವುದೋ ಮಾರ್ಗದಿಂದ ಇವು ಹರಿದುಬಂದಿರುವ ಸಾಧ್ಯತೆ ಬಗೆಗೆ ಪರಿಶೀಲಿಸುವುದು ಅಗತ್ಯ, ನದಿ ದಂಡೆಯ ಗ್ರಾಮಗಳಿಗೆ ದೂರ ಪ್ರದೇಶಗಳಿಂದ ವಲಸೆ ಬಂದ ಅಂದಿನ ಜನರಿಂದಲೂ ಇವು ಈ ಜಿಲ್ಲೆಯವರೆಗೆ ಪಸರಿಸಿದ್ದಿರಬಹುದು. ವೇದಾವತಿ ನದಿಯ ಎರಡೂ ದಂಡೆಗಳ ಇತರ ನಿವೇಶನಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡುವುದರ ಮೂಲಕ ಇಂತಹ ಜಿಜ್ಞಾಸೆಯನ್ನು ಪರಿಹರಿಸಬಹುದು; ಹಾಗೆಯೆ, ಶಾತವಾಹನ ಕಾಲೀನ ಚಿತ್ರದುರ್ಗ ಜಿಲ್ಲೆಯ ರಾಜಕೀಯ ಹಾಗೂ ಸಾಂಸ್ಕೃತಿಕ ನಕ್ಷೆಯನ್ನು ಪುನಾರಚಿಸಲೂ ಸಾಧ್ಯವಾಗಬಹುದು.[೪೧]

ಮುದ್ರಾಂಕಿತ ನಾಣ್ಯಗಳು

ಮೌರ್ಯಕಾಲೀನ ವ್ಯಾಪಾರ-ವ್ಯವಹಾರಗಳಲ್ಲಿ ಅಧಿಕೃತ ನಾಣ್ಯಪದ್ಧತಿ ಆರಂಭಗೊಂಡುದೊಂದು ಪ್ರಮುಖ ಬೆಳವಣಿಗೆ. ಬ್ರಹ್ಮಗಿರಿಯಲ್ಲಿ ಎಂ.ಎಚ್. ಕೃಷ್ಣ ಇವರು ಕೈಗೊಂಡ ಉತ್ಖನನದಲ್ಲಿ ದೊರೆತ ನಾಣ್ಯವು ಅಸ್ಪಷ್ಟವಾಗಿದ್ದಿತು. ಆದರೆ ಮಗಧ ಸಾರ್ವಭೌಮರ ಟಂಕಸಾಲೆಗಳಿಂದ ಹೊರಡುತ್ತಿದ್ದುದು ಪಣ, ಅರ್ಧಪಣ, ಪಾದ ಮತ್ತು ಅಷ್ಟಭಾಗ ಅಥವಾ ಅರ್ಧಪಾದಿಕ ಎಂಬ ಬೆಳ್ಳಿಯ ನಾಲ್ಕು ತರಗತಿಯ ನಾಣ್ಯಗಳು. ಇಲ್ಲಿಯವರೆಗೂ ೫೦ ರಿಂದ ೫೨ ಗ್ರೇನು ತೂಕವುಳ್ಳ ಒಂದೇ ತರಗತಿಯ ನಾಣ್ಯಗಳು ಮಗಧರಾಜ್ಯದಲ್ಲೆಲ್ಲ ಬಳಕೆಯಲ್ಲಿದ್ದವೆಂದು ಕಂಡುಬಂದಿದೆ. ಅವುಗಳನ್ನು ಗುರುತಿಸಿರುವುದು ಪಣ ಅಥವಾ ಕಾರ್ಷ ಪಣಗಳೆಂದು ಆರ್.ಎಸ್. ಶರ್ಮಾ ಅವರ ಪ್ರಕಾರ, ನವಿಲು, ಬೆಟ್ಟ ಹಾಗೂ ಬಾಲಚಂದ್ರ- ಸಂಕೇತಗಳಿರುವ ಕಚ್ಚು ಗುರುತಿನ ಬೆಳ್ಳಿನಾಣ್ಯಗಳು, ಮೌರ್ಯ ಸಾಮ್ರಾಜ್ಯದ ಅಧಿಕೃತ ನಾಣ್ಯಗಳಾಗಿದ್ದವೆಂದು ತೋರುತ್ತದೆ.[೪೨] ಇವು ಮೌರ್ಯರ ನಾಣ್ಯಗಳೇ ಎಂಬುದನ್ನು ಒಪ್ಪಿಕೊಳ್ಳಲು ನಿರಾಕರಿಸುವ ಕೆಲವು ವಿದ್ವಾಂಸರು, ಇವು ಮೌರ್ಯರ ನಾಣ್ಯಗಳ ಮಾದರಿಯಲ್ಲಿವೆ ಎಂದಿದ್ದಾರೆ. ಅವು ಕಾರ್ಷಪಣ, ಅರ್ಧಕಾರ್ಷಪಣ ಹಾಗೂ ಒಂದು ಮೂರಾಂಶ ಕಾರ್ಷಪಣ ಶ್ರೇಣಿಗಳಲ್ಲಿದ್ದು, ಅನುಕ್ರಮವಾಗಿ ೫೨, ೨೮ ಹಾಗೂ ೧೩ ಗ್ರೇನುಗಳಷ್ಟಿವೆ. ಈ ನಾಣ್ಯಗಳು ಹೊಂದಿರುವ ಚಿಹ್ನೆಗಳೆಂದರೆ, ಸೂರ್ಯ, ವೃಷಭ, ಆನೆ, ಚೈತ್ಯ, ನವಿಲು ಮತ್ತು ಸ್ವಸ್ತಿಕ.[೪೩] ಈ ಅವಧಿಯಲ್ಲಿ ನಾಣ್ಯಗಳನ್ನು ತಯಾರಿಸಲು ತಾಮ್ರವನ್ನು ಬಳಸಲಾಗುತ್ತಿತ್ತೆಂದು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಉಲ್ಲೇಖಗೊಂಡಿದೆ.

ಶಾತವಾಹನರು ಸೀಸ ಮತ್ತು ಪೊಟಿನ್‌ನಾಣ್ಯಗಳನ್ನು ಹೆಚ್ಚು ಪ್ರಚಾರದಲ್ಲಿ ತಂದರು. ಶಾತವಾಹನರು ಮೌರ್ಯರ ನಾಣ್ಯಗಳಿಂದ ಪ್ರಭಾವಿತರಾಗಿದ್ದರೆನ್ನುವಲ್ಲಿ ಸಂದೇಹವಿಲ್ಲ. ಸನ್ನತಿ ಭೂಶೋಧನೆಯಲ್ಲಿ ಶಾತವಾಹನರ ಅಚ್ಚೊತ್ತಿದ ಸೀಸದ ಮತ್ತು ತಾಮ್ರದನಾಣ್ಯಗಳು ಬೆಳಕಿಗೆ

ಬಂದಿವೆ. ಇವುಗಳ ಪೈಕಿ ಸಿರಿ ಶಾತವಾಹನನ ಸೀಸದನಾಣ್ಯಗಳ ಮೇಲಿನ ಚಿಹ್ನೆಗಳು ಮೌರ್ಯರ ಅಚ್ಚೊತ್ತಿದ ನಾಣ್ಯಗಳ ಮೇಲಿನ ಚಿಹ್ನೆಗಳಂತೆಯೇ ಇವೆ. ಉದಾಹರಣೆಗೆ, ಕಮಾನಿನ ಆಕಾರದಲ್ಲಿ ತೋರಿಸಲಾದ ಬೆಟ್ಟ ಇತ್ಯಾದಿ. ೧೯೯೩-೯೪ನೇ ಸಾಲಿನಲ್ಲಿ ಕೈಗೊಳ್ಳಲಾದ ಸನ್ನತಿ ಉತ್ಖನನದಲ್ಲಿ ಅಚ್ಚೊತ್ತಿದ ಎಂಟು ಬೆಳ್ಳಿಯನಾಣ್ಯಗಳು ದೊರೆತುದುದನ್ನು ಇಲ್ಲಿ ಪ್ರಸ್ತಾಪಿಸಬಹುದು.

ಸನ್ನತಿಯಲ್ಲಿ ದೊರೆತ ಶಾತವಾಹನಕಾಲೀನ ನಾಣ್ಯಗಳ ಬಗೆಗೆ ವ್ಯಕ್ತಗೊಂಡಿರುವ ವಿದ್ವಾಂಸರ ಅಭಿಪ್ರಾಯಗಳ ಪಂಕ್ತಿಗೆ ಎ.ವಿ. ನರಸಿಂಹಮೂರ್ತಿಯವರ ಅನಿಸಿಕೆ ಮುಖ್ಯವಾದುದು. ಸನ್ನತಿಯಲ್ಲಿ ನಡೆಯುತ್ತಿರುವ ಉತ್ಖನನ ನಾಣ್ಯಶಾಸ್ತ್ರದೃಷ್ಟಿಯಿಂದ ಉತ್ತಮ ಫಲಿತಾಂಶಗಳನ್ನು ನೀಡಬಲ್ಲದೆಂಬುದನ್ನು ಅನೇಕ ವಿದ್ವಾಂಸರು ಮನಗಂಡಿಲ್ಲವೆನ್ನುತ್ತಾರೆ. "ವಿವಾದಾಸ್ಪದವಾಗಿದ್ದರೂ ಶಾತವಾಹನರ ಮೊದಲನೆ ದೊರೆ ಶಾತವಾಹನನ ನಾಣ್ಯಗಳು ಇಲ್ಲಿ ದೊರಕಿವೆ. ನಾಣ್ಯಗಳ ಮೇಲಿರುವ ಮೂರು ಶಿಖರಗಳ ಬೆಟ್ಟ ಮೌರ್ಯರ ನಾಣ್ಯಗಳ ಮೇಲಿರುವ ಈ ಚಿಹ್ನೆಗೆ ಅತ್ಯಂತ ಸಮೀಪವಾಗಿದ್ದು, ಮೊದಲನೇ ಶಾತವಾಹನ ದೊರೆ ಶಾತವಾಹನನು ಮೌರ್ಯ ರಾಜ್ಯಪಾಲರನ್ನು ಸೋಲಿಸಿ ಕರ್ನಾಟಕ ಪ್ರದೇಶವನ್ನು ಗೆದ್ದು ಕೊಂಡುದರ ಜ್ಞಾಪಕಾರ್ಥವಾಗಿ ಟಂಕಿಸಲಾದ ನಾಣ್ಯಗಳೆಂದು ತಿಳಿಯಲು ಅವಕಾಶವಿದೆ. ಅಲ್ಲದೆ, ಆ ನಂತರದ ಕೊನೆಯ ಶಾತವಾಹನ ರಾಜರು ಮಾತ್ರ ಕರ್ನಾಟಕದಲ್ಲಿ ರಾಜ್ಯವಾಳಿದರೆಂಬ ಸಿದ್ಧ ಚರಿತ್ರೆಯನ್ನು ತಪ್ಪಾಗಿಸಿ, ಆರಂಭದಿಂದಲೂ ಅವರು ಇಲ್ಲಿಯೆ ಇದ್ದರೆಂಬುದನ್ನು ದೃಢಪಡಿಸುತ್ತದೆ."

ಚಂದ್ರವಳ್ಳಿಯಲ್ಲಿ ನಡೆಸಲಾದ ಉತ್ಖನನದ ನಂತರವೆ ಶಾತವಾಹನರ ಚರಿತ್ರೆಗೆ ಹೆಚ್ಚಿನ ಮಹತ್ವ ಬಂದಿತು. ಈ ನಿವೇಶನದಲ್ಲಿ ದೊರೆತ ನಾಣ್ಯಗಳಿಂದಾಗಿ ಚಂದ್ರವಳ್ಳಿ ಪ್ರದೇಶವು ಶಾತವಾಹನರ ಪ್ರಾದೇಶಿಕ ರಾಜಧಾನಿಗಳಲ್ಲಿ ಒಂದೆಂಬ ಅಭಿಪ್ರಾಯ ಮೂಡುವಂತಾಯಿತು. ಏಕೆಂದರೆ ನಾಣ್ಯಗಳಲ್ಲಿ ಬಹುಪಾಲಿನವರು ಶಾತವಾಹನ ಅರಸರಿಗಿಂತ ಅವರ ಸಾಮಂತರೆನ್ನ ಬಹುದಾದ ಮಹಾರಥಿಗಳಿಗೆ ಸೇರಿದುವು. ಸಡಕಣ ಕಳಲಾಯ ಮಹಾರಥಿ, ಮುಡಾನಂದ, ಚುಟುಕುಡಾನಂದ ಇತ್ಯಾದಿ ಹೆಸರಿನವರು ಗೋದಾವರಿತೀರದ ಪೈಠಾಣ(ಪ್ರತಿಷ್ಠಾನ) ದಲ್ಲಿ ಅಧಿಕಾರ ಸ್ಥಾಪಿಸಿದ್ದ ಶಾತವಾಹನರ ಪ್ರಾಂತಾಧಿಕಾರಿಗಳು ಅಥವಾ ಶಾತವಾಹನರ ರಾಜವಂಶ ದವರಾಗಿರಬೇಕೆಂದು ಭಾವಿಸಲಾಗುತ್ತದೆ. ಇವರ ಚರಿತ್ರೆಯನ್ನು ಅರಿಯಲು ಈ ನಾಣ್ಯಗಳೇ ಪ್ರಮುಖ ಆಧಾರವಾದ್ದರಿಂದ, ಇವುಗಳ ವಿವರಗಳನ್ನು ಕಾಲಾನುಕ್ರಮಣಿಕೆಯ ಪ್ರಕಾರ ಗಮನಿಸುವುದು ಅಗತ್ಯ.

ಶಾತವಾಹನರು ಮತ್ತು ಅವರ ಮಾಂಡಲಿಕರ ನಾಣ್ಯಗಳ ಸಂಗ್ರಹಣೆಯಲ್ಲಿ ಎಂ.ಎಚ್.ಕೃಷ್ಣ ಅವರದು ಪ್ರಮುಖ ಪಾತ್ರ. ಚಂದ್ರವಳ್ಳಿಯಲ್ಲಿ ಕೈಗೊಂಡ ಉತ್ಖನನದ ವೇಳೆಗೆ ಸುಮಾರು ೨೫ಕ್ಕೂ ಹೆಚ್ಚು ನಾಣ್ಯಗಳನ್ನು ಅವರು ಶೋಧಿಸಿದರು. ಮಾರ್ಟಿಮರ್ ವ್ಹೀಲರ್ ನೇತೃತ್ವದಲ್ಲಿ ಚಂದ್ರವಳ್ಳಿಯಲ್ಲಿ ನಡೆಸಲಾದ ಭೂಶೋಧನೆಯಲ್ಲಿ (೧೯೪೭) ದೊರೆತ ನಾಣ್ಯಗಳು ೫೫. ಇವುಗಳಲ್ಲಿ ೨ ಬೆಳ್ಳಿಯವು; ಉಳಿದವು ಸೀಸ ಮತ್ತು ಪೊಟಿನ್‌ಲೋಹದವು. ಇವುಗಳಲ್ಲಿ ಸ್ಪಷ್ಟವಾಗಿ ಕಾಣುವ ೪೫ ನಾಣ್ಯಗಳು ಶಾತವಾಹನರವು ಮತ್ತು ಅವರ ಸಾಮಂತರವು.

ಶಾತವಾಹನರ ಮೂರುನಾಣ್ಯಗಳಲ್ಲಿ ಒಂದು ಪುಳುಮಾವಿಯದಾಗಿದ್ದರೆ, ಇನ್ನೆರಡು ಯಜ್ಞ ಶಾತಕರ್ಣಿಯವು. ಒಂದು ಮುಖ ಬರಿದಾಗಿರುವ ಬೆಳ್ಳಿಯ ನಾಣ್ಯ ಅಚ್ಚೊತ್ತಿದಂತ್ತಿದ್ದರೆ. ಇದರ ಇನ್ನೊಂದು ಮುಖದಲ್ಲಿ ಸೂರ್ಯ, ಕಮಲ, ಬಾಣ ಮೊದಲಾದ ಐದು ಗುರುತುಗಳನ್ನು ಅಚ್ಚೊತ್ತಲಾಗಿದೆ. ಉತ್ತರಭಾರತದಲ್ಲಿ ಕ್ರಿ.ಪೂ.ಸು. ೪ನೇ ಶತಮಾನದಿಂದ ಬಳಕೆಯಲ್ಲಿದ್ದ ಈ ನಾಣ್ಯಗಳು, ದಕ್ಷಿಣದಲ್ಲಿ ಕ್ರಿ.ಪೂ.೨ನೇ ಶತಮಾನದಿಂದ ಕ್ರಿ.ಶ. ೨ನೇ ಶತಮಾನದವರೆಗೆ ಚಲಾವಣೆಯಲ್ಲಿದ್ದವೆಂದು ತಿಳಿದುಬರುತ್ತದೆ. ಈಗ ತಿಳಿದಮಟ್ಟಿಗೆ, ಭಾರತದಲ್ಲಿ ಚಲಾವಣೆಯಲ್ಲಿದ್ದ ಅತ್ಯಂತ ಪ್ರಾಚೀನನಾಣ್ಯವೆಂದರೆ ಇದೇ ಎಂಬುದು ಗಮನಾರ್ಹ.

ಕೃಷ್ಣ ಮತ್ತು ವ್ಹೀಲರ್ ಅವರ ಸಂಗ್ರಹಗಳು ಶಾತವಾಹನ ಅರಸರು ಮತ್ತು ಅವರ ಮಾಂಡಲಿಕರನ್ನು ಕುರಿತು ಬೆಳಕುಚೆಲ್ಲುತ್ತವೆ. ಚಂದ್ರವಳ್ಳಿ ನಾಣ್ಯಗಳು ಶಾತವಾಹನರ ಪ್ರಸಿದ್ಧ ಹಾಗೂ ಪ್ರಬಲ ಅರಸರಾಗಿದ್ದ ಗೌತಮಿಪುತ್ರ ಶಾತಕರ್ಣಿ (ಕ್ರಿ.ಶ.ಸು. ೬೦-೯೦), ಈತನ ಮಗ ವಾಶಿಷ್ಠಿಪುತ್ರ ಪುಳುಮಾವಿ (ಕ್ರಿ.ಶ.ಸು. ೧೩೦-೧೫೫) ಹಾಗೂ ಸ್ವಲ್ಪ ಕಾಲಾನಂತರ ಸಿಂಹಾಸನವನ್ನೇರಿದ ಗೌತಮಿಪುತ್ರ ಯಜ್ಞ ಶಾತಕರ್ಣಿ(ಕ್ರಿ.ಶ.ಸು. ೧೭೦-೧೯೮)ಗಳನ್ನೇ ಅಲ್ಲದೆ, ಉತ್ತರ ಮತ್ತು ದಕ್ಷಿಣಕರ್ನಾಟಕ ಪ್ರದೇಶಗಳಲ್ಲಿ ಶಾತವಾಹನರ ಸಾಮಂತರೆನಿಸಿಕೊಂಡ ಸಡಕಣ ಕಳಲಾಯ ಮಹಾರಥಿ, ಸಡಕಣ ಕಣಸ ಮಹಾರಥಿ ಮತ್ತು ಸಡಕಣ ಚಟಕಣ್ಣ ಮಹಾರಥಿಯರನ್ನೂ ಪ್ರಸ್ತಾಪಿಸುತ್ತವೆ. ಈ ನಾಣ್ಯಗಳಿಂದಾದ ಉಪಕಾರವೆಂದರೆ, ಮೊದಲಬಾರಿಗೆ ಕೆಲವು ಪ್ರಮುಖ ಶಾತವಾಹನ ಅರಸರ ಹಾಗೂ ಮಾಂಡಲಿಕರ ಕಾಲಾನುಕ್ರಮ ತಿಳಿದುಬಂದುದು; ಹಾಗೂ ಸಡಕಣ ಚಟಕಣ್ಣ ಮಹಾರಥಿ ಮತ್ತು ಸಡಕಣ ಕಣಸ ಮಹಾರಥಿ ಪುತಸ ಎಂಬೀರ್ವರು ಮಾಂಡಲಿಕರ ಹೆಸರುಗಳು ಬೆಳಕಿಗೆಬಂದವು.

ಸಡಕಣ ಕಳಲಾಯ ಮಹಾರಥಿಯ ಎರಡು ವಿಧದ ದುಂಡುನಾಣ್ಯಗಳು ದೊರೆತಿದ್ದು, ಒಂದು ವಿಧದ ನಾಣ್ಯದ, ಒಂದು ಮುಖದಲ್ಲಿ ಬೇಲಿಯಿಂದ ಸುತ್ತುವರೆಯಲ್ಪಟ್ಟ ವೃಕ್ಷ, ಗುಡ್ಡ, ಅದರ ಮೇಲೆ ಬಿದಿಗೆ ಚಂದ್ರನಾಕೃತಿ, ನದಿಯನ್ನು ಸಂಕೇತಿಸುವ ಗೆರೆಯ ಚಿಹ್ನೆಗಳಿದ್ದರೆ, ಇನ್ನೊಂದು ಮುಖದಲ್ಲಿ ಇಣಿಯುಳ್ಳ ನಂದಿಯ ಉಬ್ಬುಚಿತ್ರ ಹಾಗೂ ಅದರ ಸುತ್ತಲೂ ಬ್ರಾಹ್ಮಿಲಿಪಿಯಲ್ಲಿ 'ಸಡಕಣ ಕಳಲಾಯ ಮಹಾರಥಿಸ' ಎಂದು ಮೂಡಿಸಲಾಗಿದೆ. ಇನ್ನೊಂದು ವಿಧದ ನಾಣ್ಯದ ಒಂದು ಮುಖದಲ್ಲಿ ಬಿದಿಗೆಚಂದ್ರ ಮತ್ತು ಗುಡ್ಡ ಹಾಗೂ ಇದರ ಕೆಳಗೆ ನದಿಯನ್ನು ತೋರಿಸುವ ರೇಖೆ, ಎಡಬದಿಯಲ್ಲಿ ತ್ರಿಕೋನಾಕೃತಿ, ಜೋಡಿಮೀನು, ಬಲಬದಿಯಲ್ಲಿ ನಂದಿಪಾದ ಹಾಗೂ ನದಿಚಿಹ್ನೆಗಳು, ಬುಡದಲ್ಲಿ ಶ್ರೀವತ್ಸ ಮತ್ತು ಸ್ವಸ್ತಿಕಚಿಹ್ನೆಗಳಿವೆ. ಚಂದ್ರವಳ್ಳಿ ಭೂಶೋಧನೆಯಲ್ಲಿ ದೊರೆತ ನಾಣ್ಯಗಳಿಂದ ತಿಳಿದುಬಂದ ವಿವರಗಳಿವು. ಈ ನಾಣ್ಯಗಳು ವೈವಿಧ್ಯಮಯವಾಗಿರುವುದರೊಂದಿಗೆ ರಾಜರ ಮತ್ತು ಅವರ ಮಾಂಡಲಿಕರ ಸಾಮಾಜಿಕ, ಸಾಂಸ್ಕೃತಿಕ ನಂಬುಗೆ-ಆಚರಣೆಗಳನ್ನು ವ್ಯಕ್ತಪಡಿಸುವಂತವಾಗಿವೆ.

ಬನವಾಸಿಯಲ್ಲಿ ದೊರೆತ ಗೌತಮಿಪುತ್ರನ ಸೀಸದನಾಣ್ಯವೊಂದರ ಮೇಲಿನ ಕೆಲವು ಚಿಹ್ನೆಗಳು ಚಂದ್ರವಳ್ಳಿಯಲ್ಲಿ ದೊರೆತ ವಾಶಿಷ್ಠಿಪುತ್ರ ಪುಳುಮಾವಿಯ ನಾಣ್ಯದ ಮೇಲೂ ಕಂಡು ಬಂದಿರುವುದನ್ನು ಗುರುತಿಸಲಾಗಿದೆ. ಉದಾಹರಣೆಗೆ, 'ಪುಳುಮಾವಿ' ಎಂದು ಬ್ರಾಹ್ಮಿಲಿಪಿಯಲ್ಲಿ

ಬರೆಯಲಾದ ಈ ನಾಣ್ಯದ ಹಿಂಬದಿಯಲ್ಲಿ ಸೊಂಡಿಲನ್ನು ಎತ್ತಿಕೊಂಡಿರುವ ಆನೆಯಚಿತ್ರವೂ ಎರಡೂ ಮಗ್ಗುಲ ಮಧ್ಯದಲ್ಲಿ ಪುಟ್ಟ ಉಬ್ಬು ಇರುವ ಉಜ್ಜೈನ ಸಂಕೇತವೂ ಇವೆ. ಗೌತಮಿಪುತ್ರ ಶಾತಕರ್ಣಿಯಲ್ಲದೆ, ಈತನ ಮಗ ವಾಶಿಷ್ಠಿಪುತ್ರ ಪುಳುಮಾವಿ ಮತ್ತು ಯಜ್ಞಶ್ರೀ ಶಾತಕರ್ಣಿಯರ ನಾಣ್ಯಗಳು ಚಂದ್ರವಳ್ಳಿ ಪ್ರದೇಶದಲ್ಲಿ ದೊರೆತಿರುವುದು ಇಲ್ಲಿಯ ವೈಶಿಷ್ಟ್ಯ. ವಾಶಿಷ್ಠಿಪುತ್ರ ಪುಳುಮಾವಿ ಮತ್ತು ಯಜ್ಞಶ್ರೀ ಶಾತಕರ್ಣಿಯರ ಹೆಸರುಗಳುಳ್ಳ ನಾಣ್ಯಗಳು ಪ್ರತ್ಯೇಕವಾಗಿದ್ದರೂ ಇವು ಹೊಂದಿರುವ ಚಿಹ್ನೆಗಳು ಮಾತ್ರ ಒಂದೇ ತೆರನಾದವು. ಮೇಲ್ಮುಖದಲ್ಲಿ ಆನೆಯ ಉಬ್ಬುಚಿತ್ರ ಮತ್ತು ಅರಸನ ಹೆಸರಿದ್ದರೆ, ಹಿಮ್ಮುಖದಲ್ಲಿ ಉಜ್ಜೈನ ಚಿಹ್ನೆ ಕಂಡುಬರುತ್ತದೆ.[೧೭] ಹೀಗೆ ತೆಲಗಾವಿಯವರು ಶಾಸನ, ನಿವೇಶನ, ಶಿಲ್ಪ, ವೀರಗಲ್ಲು, ಕೋಟೆ, ಬಯಲುಬಂಡೆ ರೇಖಾಕೃತಿಗಳು, ಐತಿಹ್ಯ, ಸಮಾಧಿ, ಎಡೆ ವರದಿ ಇತ್ಯಾದಿಗಳನ್ನು, ಉತ್ಖನನ ಭೂಶೋಧನೆ, ಪ್ರಾಕ್ತನನದ ಮೂಲಕವೇ ಚರಿತ್ರೆಗೆ ಬೇಕಾದ ಸಂಶೋಧನಾತ್ಮಕ ಸಾಕ್ಷಿಗಳನ್ನು ಶೋಧಿಸಿ, ಪರಿಷ್ಕರಿಸಿ ಅಧ್ಯಯನಿಸಿ, ಈ ಹಿಂದಿನ ಅಧ್ಯಯನಕಾರರು ಮಾಡಿದ ತಪ್ಪುಗಳನ್ನು ಅನ್ವೇಷಿಸಿ, ಅಂತವುಗಳಿಗೆ ಸ್ಪಷ್ಟ ಸಾಕ್ಷಿ ನೀಡಿ ಚರಿತ್ರೆಯ ಪುನರ್‌ರಚನೆಗೆ ಮಾಹಿತಿ ಒದಗಿಸಿ ಅಧ್ಯಯನ ಲೋಕಕ್ಕೆ ಸಮರ್ಪಿಸಿದ್ದಾರೆ.

ಟಿಪ್ಪಣಿಗಳು

೧. ಲಕ್ಷ್ಮಣ್ ತೆಲಗಾವಿ, ಸಂಶೋಧನ, ೧೯೯೧, ಪು. ೧೭.

೨. ಲಕ್ಷ್ಮಣ್ ತೆಲಗಾವಿ, ೭೭ ಪಾಳೆಯಗಾರರು ಸಂಖ್ಯಾ ಆಶಯ ನೆಲೆಗಳು ಚಾರಿತ್ರಿಕ ವಿವೇಚನೆ, ೨೦೧೦, ಪು. ೭೭.

೩. ಲಕ್ಷ್ಮಣ್ ತೆಲಗಾವಿ, ಚಿತ್ರದುರ್ಗ ನಾಯಕ ಅರಸರು ರಾಜಕೀಯ ಚಿತ್ರ, ೨೦೦೯, ಪು. ೭೩.

೪. ಲಕ್ಷ್ಮಣ್ ತೆಲಗಾವಿ, ಚಿತ್ರದುರ್ಗ ಪರಿಸರದ ಬಯಲುಬಂಡೆ ರೇಖಾಕೃತಿಗಳು, ಅಪ್ರಕಟಿತ ಪ್ರಬಂಧ, ೨೦೧೧, ಪು. ೩೫.

೫. ಲಕ್ಷ್ಮಣ್ ತೆಲಗಾವಿ, ಇತಿಹಾಸ ದರ್ಶನ, ಸಂಪುಟ ೧೪, ೧೯೯೯, ಪು. ೫೩.

೬. ಲಕ್ಷ್ಮಣ್ ತೆಲಗಾವಿ, ಚರಿತ್ರೆ ಅಧ್ಯಯನ, ಸಂಪುಟ ೫, ಸಂಚಿಕೆ ೧, ೨೦೦೯, ಪು. ೧೯.

೭. ಲಕ್ಷ್ಮಣ್ ತೆಲಗಾವಿ, ಇತಿಹಾಸ ದರ್ಶನ-೧೨, ೧೯೯೭, ಪು. ೨೮-೩೧.

೮. ಅದೇ, ಪು. ೬೫.

೯. ಷೇಕ್ ಅಲಿ ಬಿ., ಕರ್ನಾಟಕ ಚರಿತ್ರೆ, ಸಂಪುಟ-೧, ೧೯೯೭, ಪು. ೩೪೦-೩೪೧.

೧೦. ಲಕ್ಷ್ಮಣ್ ತೆಲಗಾವಿ, ಇತಿಹಾಸ ದರ್ಶನ, ಸಂಪುಟ-೧೨, ೧೯೯೭, ಪು. ೨೮-೩೧.

೧೧. ಲಕ್ಷ್ಮಣ್ ತೆಲಗಾವಿ, ಚರಿತ್ರೆ ಅಧ್ಯಯನ, ಸಂಪುಟ ೪, ಸಂಚಿಕೆ ೧, ೨೦೦೮, ಪು. ೫೪-೫೬.

೧೨. ಲಕ್ಷ್ಮಣ್ ತೆಲಗಾವಿ, ಚರಿತ್ರೆ ಅಧ್ಯಯನ, ಸಂಪುಟ ೫, ಸಂಚಿಕೆ ೧, ೨೦೦೯, ಪು. ೭೫.

೧೩. ಚಿತ್ರದುರ್ಗ ಜಿಲ್ಲಾ ಸಮಾಚಾರ ಪತ್ರಿಕಾ ವರದಿ, ಅಕ್ಟೋಬರ್, ೧೯೯೫, ಪು. ೨೭.

೧೪. ರೈಸ್ ಬಿ.ಎಲ್., ಎಫಿಗ್ರಫಿ ಕರ್ನಾಟಕ, ಸಂಪುಟ-೧೧, ೧೯೦೩, ಚಿತ್ರದುರ್ಗ, ಪು. ೮.

೧೫. ಷೇಕ್ ಅಲಿ ಬಿ., ಕರ್ನಾಟಕ ಚರಿತ್ರೆ, ಸಂಪುಟ-೧, ೧೯೯೭, ಪು. ೭೯.

೧೬. ಅದೇ, ಪು. ೧೧೧.

೧೭. ಅದೇ, ಪು. ೩೩೫-೩೩೭.

೧೮. ಅದೇ, ಪು. ೩೩೭.

೧೯. ಲಕ್ಷ್ಮಣ್ ತೆಲಗಾವಿ, ಇತಿಹಾಸ ದರ್ಶನ, ಸಂಪುಟ-೪, ೧೯೮೯, ಪು. ೨೯-೩೦.

೨೦. ಲಕ್ಷ್ಮಣ್ ತೆಲಗಾವಿ, ಮೌರ್ಯ ಮತ್ತು ಶಾತವಾಹನಯುಗ, ೨೦೦೪, ಪು. ೩೯.

೨೧. ಅದೇ, ಪು. ೪೩.

೨೨. ಲಕ್ಷ್ಮಣ್ ತೆಲಗಾವಿ, ಇತಿಹಾಸ ದರ್ಶನ, ಸಂಪುಟ-೧೭, ೨೦೦೨, ಪು. ೪೮-೪೯.

೨೩. ಲಕ್ಷ್ಮಣ್ ತೆಲಗಾವಿ, ಇತಿಹಾಸ ದರ್ಶನ, ಸಂಪುಟ-೯, ೧೯೯೪, ಪು. ೧೦-೧೧.

೨೪. ಷೇಕ್ ಅಲಿ ಬಿ., ಕರ್ನಾಟಕ ಚರಿತ್ರೆ, ಸಂಪುಟ-೧, ೧೯೯೭, ಪು. ೨೯೮.

೨೫. ಲಕ್ಷ್ಮಣ್ ತೆಲಗಾವಿ, ಇತಿಹಾಸ ದರ್ಶನ, ಸಂಪುಟ-೧೩, ೧೯೯೮, ಪು. ೬-೭.

೨೬. ಲಕ್ಷ್ಮಣ್ ತೆಲಗಾವಿ, ಇತಿಹಾಸ ದರ್ಶನ, ಸಂಪುಟ-೧೭, ೨೦೦೨, ಪು. ೧-೧೧.

೨೭. ಲಕ್ಷ್ಮಣ್ ತೆಲಗಾವಿ, ಮೌರ್ಯ ಮತ್ತು ಶಾತವಾಹನಯುಗ, ೨೦೦೪, ಪು. ೩೯.

೨೮. ಲಕ್ಷ್ಮಣ್ ತೆಲಗಾವಿ, ಐತಿಹಾಸಿಕ ಚಿತ್ರದುರ್ಗ, ೧೯೭೯, ಪು. ೧೨.

೨೯. ಲಕ್ಷ್ಮಣ್ ತೆಲಗಾವಿ, ಚಿತ್ರದುರ್ಗ ದರ್ಶಿನಿ, ೧೯೮೦, ಪು. ೭೩.

೩೦. ವಿಶ್ವೇಶ್ವರ, ಸಂಶೋಧನ, ೧೯೯೧, ಪು. ೭೩೭.

೩೧. ಷೇಕ್ ಅಲಿ ಬಿ., ಕರ್ನಾಟಕ ಚರಿತ್ರೆ, ಸಂಪುಟ-೧, ೧೯೭೭, ಪು. ೨೯೭.

೩೨. ಲಕ್ಷ್ಮಣ್ ತೆಲಗಾವಿ, ಇತಿಹಾಸ ದರ್ಶನ, ಸಂಪುಟ-೧೩, ೧೯೯೮, ಪು. ೮೮.

೩೩. ಷೇಕ್ ಅಲಿ ಬಿ., ಕರ್ನಾಟಕ ಚರಿತ್ರೆ, ಸಂಪುಟ-೧, ೧೯೯೭, ಪು. ೩೧೫.

೩೪. ಲಕ್ಷ್ಮಣ್ ತೆಲಗಾವಿ, ಇತಿಹಾಸ ದರ್ಶನ, ಸಂಪುಟ-೬, ೧೯೯೧, ಪು. ೭-೮.

೩೫. ಅದೇ, ಪು. ೯.

೩೬. ಷೇಕ್ ಅಲಿ ಬಿ., ಕರ್ನಾಟಕ ಚರಿತ್ರೆ, ಸಂಪುಟ-೧, ೧೯೯೭, ಪು. ೪೨೫-೪೨೬.

೩೭. ಅದೇ, ಪು. ೩೪೬-೩೪೯.

೩೮. ಅದೇ, ಪು. ೪೧೪.

೩೯. ಲಕ್ಷ್ಮಣ್ ತೆಲಗಾವಿ, ಇತಿಹಾಸ ದರ್ಶನ, ಸಂಪುಟ-೧೨, ೧೯೯೭, ಪು. ೫೯.

೪೦. ಚಿತ್ರದುರ್ಗ ಜಿಲ್ಲಾ ಸಮಾಚಾರ ಪತ್ರಿಕಾ ವರದಿ, ಆಗಸ್ಟ್ ೧೯೯೮, ಪು. ೨.

೪೧. ಲಕ್ಷ್ಮಣ್ ತೆಲಗಾವಿ, ಮೌರ್ಯ ಮತ್ತು ಶಾತವಾಹನಯುಗ, ೨೦೦೪, ಪು. ೭೩.

೪೨. ಶರ್ಮಾ ತಿ.ತ., ಚಾರಿತ್ರಿಕ ದಾಖಲೆಗಳು, ೧೯೯೭, ಪು. ೧೪೩.

೪೩. ಷೇಕ್ ಅಲಿ ಬಿ., ಕರ್ನಾಟಕ ಚರಿತ್ರೆ, ಸಂಪುಟ-೧, ೧೯೯೭, ಪು. ೨೯೫.

೪೪. ಕೃಷ್ಣಪ್ಪ, ಗೋಪಾಲ್, ಚಿಂತನೆಗಳು ಮತ್ತು ಬರಹಗಳು, ೧೯೯೯, ಪು. ೧೨-೧೩.

೪೫. ಲಕ್ಷ್ಮಣ್ ತೆಲಗಾವಿ, ಮೌರ್ಯ ಮತ್ತು ಶಾತವಾಹನಯುಗ, ೨೦೦೪, ಪು. ೭೮-೭೯.

♦♦

ಅಧ್ಯಾಯ : ನಾಲ್ಕು

ಪ್ರಾಚೀನ, ಮಧ್ಯಕಾಲೀನ ಹಾಗೂ ಆಧುನಿಕ ಕರ್ನಾಟಕ ಚರಿತ್ರೆಯ ಅಧ್ಯಯನ

ಅಧ್ಯಾಯ : ನಾಲ್ಕು

ಪ್ರಾಚೀನ, ಮಧ್ಯಕಾಲೀನ ಹಾಗೂ ಆಧುನಿಕ ಕರ್ನಾಟಕ ಚರಿತ್ರೆಯ ಅಧ್ಯಯನ

ರಾಜಶಾಹಿ ಅಧ್ಯಯನ

ತೆಲಗಾವಿಯವರು ರಾಜಶಾಹಿಗಳ ಅಧ್ಯಯನವನ್ನು ಕರ್ನಾಟಕದ ಚರಿತ್ರೆಗೆ ಸಂಬಂಧಿಸಿದಂತೆ ವಿಶಿಷ್ಟರೂಪದಲ್ಲಿ ಅಧ್ಯಯನ ಕೈಗೊಂಡಿದ್ದಾರೆ. ಹಾಗಾದರೆ ಈತನಕ ರಾಜಶಾಹಿಗಳ ಅಧ್ಯಯನ ನಡೆದಿಲ್ಲವೆ? ಅಥವಾ ಈ ಬಗ್ಗೆ ಯಾವುದೇ ಗ್ರಂಥಗಳು ಪ್ರಕಟವಾಗಿಲ್ಲವೆ? ಎಂಬಂತಹ ಪ್ರಶ್ನೆಗಳು ಮೂಡುವುದು ಸಹಜ. ಇಂತಹ ಸಹಜ ಪ್ರಶ್ನೆಗಳಿಗೆ ಉತ್ತರವೂ ಸಹಜವಾಗಿಯೆ, ಅಧ್ಯಯನಗಳು ನಡೆದಿವೆ, ಗ್ರಂಥಗಳು ಪ್ರಕಟವಾಗಿವೆ. ಅಂದ ಮೇಲೆಯೂ ಪುನರ್ ಅಧ್ಯಯನದ ಅಗತ್ಯವಿತ್ತೆ ಎಂಬ ಪ್ರಶ್ನೆಗಳು ಸಹಜ. ಆದರೆ ಎಷ್ಟೇ ಅಧ್ಯಯನಗಳು ಚರಿತ್ರೆಗೆ ಸಂಬಂಧಿಸಿದ ಸಂಶೋಧಕರೂ ಅಧ್ಯಯನಿಸಿದರು. ಬಿತ್ತರಿಸಿದ್ದರೂ ಬಿತ್ತರಿಸಿದಂತಹ ಚರಿತ್ರೆಯು ಕೇವಲ ಸಿದ್ಧಮಾದರಿಯ ಅಥವಾ ಕೆಲವು ಊಹೆಯಿಂದಾದ, ಮತ್ತೆ ಕೆಲವು ಸಣ್ಣಪುಟ್ಟ ಶಾಸನ ಪಳೆಯುಳಿಕೆಗಳ ಮೂಲಕವಾಗಿಯೂ ಮತ್ತು ಯಾರೋ ಕಲ್ಪಿತವಾಗಿ ಹೇಳಿದಂತ ಕಥೆಗಳನ್ನು ಉತ್ಪ್ರೇಕ್ಷೆಯಿಂದಲೇ ವರ್ಣಿಸಿ ತಯಾರಿಸಿದಂತ ಚರಿತ್ರೆಯಾಗಿದೆ.

ಪ್ರಸ್ತುತ ಅಧ್ಯಯನಕಾರರು ಪ್ರಸ್ತುತ ಸಂದರ್ಭದ ವಿಜ್ಞಾನ, ತಂತ್ರಜ್ಞಾನ ಹಾಗೂ ಮಾಹಿತಿ ಸಂವಹನ ಬಳಸಿಕೊಂಡು ಪ್ರಾಕ್ತನದೊಂದಿಗೆ, ಕ್ಷೇತ್ರಕಾರ್ಯ ಕೈಗೊಂಡು ಸ್ಥಳೀಯವಾಗಿ ದೊರೆಯುವ ಜನಾಭಿಪ್ರಾಯದೊಂದಿಗೆ ಮೌಖಿಕ ಆಕರಗಳಾದ ಜನಪದ, ನಂಬಿಕೆ, ಕಥೆ, ಗಾದೆ, ಲಾವಣಿ ಇತ್ಯಾದಿಗಳನ್ನು ಬಳಸಿಕೊಂಡು ಆ ಮೌಖಿಕ ಸಾಹಿತ್ಯದಲ್ಲಿರುವ ಅಂಶಗಳನ್ನು ಒರೆಹಚ್ಚಿ ನೋಡುವ, ಅಂತದ್ದಕ್ಕೆ ಸಾಕ್ಷಿಯಾಗಿ ಮತ್ತು ಸಾಕ್ಷಿಯನ್ನು ಪತ್ತೆಹಚ್ಚುವ ಮತ್ತು ಪೂರಕ ಮಾಹಿತಿ ನೀಡುವ ಶಾಸನ, ವೀರಗಲ್ಲು, ವಂಶಾವಳಿ, ಖಿಸ್ಮೈರು, ನಾಣ್ಯ, ಅವಶೇಷ ಮುಂತಾದವುಗಳು ಇವತ್ತೂ ಯಾರ ಬಳಿಯಲ್ಲಿ ಇರಬಹುದೆಂದು ಪತ್ತೆ ಮಾಡಿ ಅವರಿಂದ ಅವುಗಳನ್ನು ಪಡೆದು ಅವು ನೀಡುವಂತ ಮಾಹಿತಿ ಮತ್ತು ಜನಪದದಲ್ಲಿರುವಂತಹ ಮಾಹಿತಿ ಹಾಗೂ ಈಗಾಗಲೇ ಸಿದ್ಧರೂಪದಲ್ಲಿರಬಹುದಾದ ಚರಿತ್ರೆ ಇವುಗಳನ್ನು ತೌಲನಿಕವಾಗಿ ವಿಮರ್ಶಿಸುವ

ಹಾಗೂ ಸಿದ್ಧರೂಪದಲ್ಲಿರುವ ಚರಿತ್ರೆಯನ್ನು ಪುನರ್ ಅಧ್ಯಯನಕ್ಕೆ ಒಳಪಡಿಸಲಾಗಿದ್ದು ಹೊಸ ರೀತಿಯ ಇತಿಹಾಸ ಸೃಷ್ಟಿಸುವ, ಈಗಾಗಲೆ ಚರಿತ್ರೆಯಲ್ಲಿ ತಪ್ಪಾಗಿ ದಾಖಲಾದ ತಪ್ಪುಗಳನ್ನು ಪತ್ತೆ ಹಚ್ಚಿ ಸತ್ಯಗಳನ್ನು ಹೊರಗೆಳೆದು ಶುದ್ಧ ಇತಿಹಾಸ ಸೃಷ್ಟಿಸುವ ಸಂಕಲ್ಪ ತೊಟ್ಟು ರಾಜಶಾಹಿ ಕಾಲಘಟ್ಟವನ್ನು ವಿಶಿಷ್ಟ ಬಗೆಯಲ್ಲಿ ಕಟ್ಟಿಕೊಡುವ ಪ್ರಾಮಾಣಿಕ ಪ್ರಯತ್ನ ಈದಾಗಿದೆ. ಅಂತಹ ರಾಜಶಾಹಿ ಅಧ್ಯಯನದಲ್ಲಿ ಚಿತ್ರದುರ್ಗ ನಾಯಕರ ರಾಜಶಾಹಿಯು ಒಂದಾಗಿದ್ದು ಅದರ ಅಧ್ಯಯನದ ಮಹತ್ವತೆ ಈ ಮುಂದಿನ ರೀತಿಯಲ್ಲಿ ವರದಿ ಮಾಡಿದ್ದಾರೆ.

೪.೧. ಚಿತ್ರದುರ್ಗದ ಅರಸರು

ಲಕ್ಷ್ಮಣ್ ತೆಲಗಾವಿಯವರು ದಕ್ಷಿಣ ಭಾರತಕ್ಕೆ ಸೇರಿದ ಕರ್ನಾಟಕದ ಚಿತ್ರದುರ್ಗವನ್ನು ಅಧ್ಯಯನ ಸಂಶೋಧನಾ ಕೇಂದ್ರವನ್ನಾಗಿ ಮಾಡಿಕೊಂಡರು. ಕಾರಣ ಅಂದಿನ ದಕ್ಷಿಣ ಕರ್ನಾಟಕದಲ್ಲಿ ವಿಜಯನಗರ, ಬಹುಮನಿ, ಮೈಸೂರು ಹಾಗೂ ಮರಾಠರ ಪೇಶ್ವೆಯೊಂದಿಗೆ ಮುಖಾಮುಖಿಯಾದಂತಹ ರಾಜಶಾಹಿಯಾಗಿದ್ದು ಸ್ಥಳೀಯ ಕೋಟೆಯ ದುರ್ಗದ ಆಡಳಿತ. ಅಂದಿನ ನವಾಬ ಹೈದರ ಅಲಿಖಾನ್ ಮತ್ತು ಮರಾಠರಿಗೆ ಒಂದಲ್ಲ ಒಂದು ಕಾಲದಲ್ಲಿ, ಒಂದಲ್ಲ ಒಂದು ಕಾರಣಕ್ಕೆ ನೇರ ರಾಜಕೀಯ ಸವಾಲೆಸೆದ ರಾಜಶಾಹಿ ಚಿತ್ರದುರ್ಗದ್ದು. ದುರ್ಗದ ಬಗ್ಗೆ ಅನೇಕ ಅಧ್ಯಯನಗಳಿದ್ದರು, ಗ್ರಂಥಗಳಿದ್ದರು ಅಧ್ಯಯನಿಸಿದಂತೆ ಒಂದೊಂದು ಹೊಸ ತಿರುವು ಒಳಪುಗಳು ದುರ್ಗದ ರಾಜಶಾಹಿಗಳಲ್ಲಿ ದೊರೆತಿದೆ. ಇದನ್ನು ಸಾಮಾನ್ಯ ಅಧ್ಯಯನದಂತೆ ನಡೆಸಲು ಅಸಾಧ್ಯ ಏಕೆಂದರೆ ಈತನಕ ಬಂದಿರುವ ಅಧ್ಯಯನಗಳು ಚಿತ್ರದುರ್ಗ ನಾಯಕ ಅರಸರ ಚರಿತ್ರೆಯನ್ನು ಸಮಗ್ರವಾಗಿ ಬದಲಾಯಿಸಿ ನಿಶ್ಚಿತ ರೂಪಕೊಡಲಾಗಿಲ್ಲ. ಈ ಕೊರತೆ ನಿವಾರಿಸಲು ಹಲವು ಸಂಶೋಧನಾವಲಯದ ಒತ್ತಾಸೆ, ಸ್ವತಃ ತಿಳಿಯಬೇಕೆಂಬ ಕುತೂಹಲ ಡಾ.ಡಿ. ರಾಜೇಂದ್ರನಾಯಕರಂತ ಒಲವುಳ್ಳವರ ಒತ್ತಾಸೆ ಸಂಶೋಧನಾ ತಂಡದವರ ದಣಿವಾರದ ಸಂಶೋಧನಾದಾಹ, ಇವೆಲ್ಲವೂ ಚಿತ್ರದುರ್ಗದ ರಾಜಶಾಹಿ ಅಧ್ಯಯನಕ್ಕೆ ಮುನ್ನುಡಿಯಾಗಿದೆ.

ಐತಿಹಾಸಿಕವಾಗಿ ಮದಕರಿನಾಯಕರು ಎಂತಲೇ ಪ್ರಸಿದ್ಧಿ ಪಡೆದ ಚಿತ್ರದುರ್ಗವನ್ನು ಕೇಂದ್ರವಾಗಿರಿಸಿಕೊಂಡು ಒಟ್ಟು ಹದಿಮೂರು ಮಂದಿ ಪಾಳೆಯಗಾರರು ಅಥವಾ ನಾಯಕರು ಅರಸರಾಗಿ ಕ್ರಿ.ಶ. ೧೫೬೮ ರಿಂದ ೧೭೭೯ರವರೆಗೆ ಒಟ್ಟು ೨೧೧ ವರ್ಷಗಳ ಕಾಲ ಆಳ್ವಿಕೆಯನ್ನು ನಡೆಸಿ ಪಾಳೆಯಗಾರರ ಛಾಪನ್ನು ಮೂಡಿಸಿದವರಾಗಿದ್ದಾರೆ.

ವಾಲ್ಮೀಕಿ ಗೋತ್ರದ ಶ್ರೀಮನ್ಮರಿಹಾನಾಯಕಾಚಾರ್ಯ ಕಾಮಗೇತಿ ಕಸ್ತೂರಿ ಎಂಬ ಅಭಿದಾನ ಧರಿಸಿಕೊಂಡು ಆಳ್ವಿಕೆಗೆ ವಿಜಯನಗರದ ಸಾಮಂತರಾಗಿ ಚಿತ್ರದುರ್ಗ ಪ್ರದೇಶದಲ್ಲಿ ಆಳ್ವಿಕೆಯನ್ನಾರಂಭಿಸಿ ಆನಂತರ ಸ್ವತಂತ್ರರಾಗಿ ಕ್ರಿಯಾಶೀಲರಾದರಿವರು ಕಾಮಗೇತಿ ಕುಲದ ನಾಯಕ ಜನಾಂಗದವರು.

ದುರ್ಗಾವನ್ನಾಳಿದ ಒಟ್ಟು ೧೩ ಜನ ಅರಸರಲ್ಲಿ ಪಾಳೆಯಗಾರ ಆಡಳಿತ ವ್ಯವಸ್ಥೆಗೆ ತಳಪಾಯ ಹಾಕಿದ ಮತ್ತಿ ತಿಮ್ಮಣ್ಣ ನಾಯಕ ಮೊದಲಿಗನಾಗಿದ್ದಾರೆ. ಮತ್ತಿ ತಿಮ್ಮಣ್ಣ ನಾಯಕನು ಆನೆಗೊಂದಿಯ ಅಂದರೆ ವಿಜಯನಗರದ ಪ್ರತಿನಿಧಿಯಾಗಿ ನಂತರ ಕ್ರಿ.ಶ. ೧೫೬೦ರಲ್ಲಿ ಹೊಳಲ್ಕೆರೆ, ಹಿರಿಯೂರುಗಳಲ್ಲಿ ಆಳ್ವಿಕೆ ನಡೆಸುತ್ತಲೆ ಕ್ರಿ.ಶ. ೧೫೬೮ರಲ್ಲಿ ಚಿತ್ರದುರ್ಗಕ್ಕೆ ನೇಮಿಸಲ್ಪಟ್ಟು, ಕಲ್ಬುರ್ಗಿ ಕೋಟೆಯನ್ನು ಜಯಿಸಿ ಚಿತ್ರದುರ್ಗದಲ್ಲಿ ಕೋಟೆ-ಕೊತ್ತಲಗಳ ಕಾಮಗಾರಿ ಕೈಗೊಂಡು ಸ್ವತಂತ್ರ ರಾಜನಂತೆಯೆ ಆಡಳಿತ ನಡೆಸಿ ವಿಜಯನಗರದ ಅರಸರ ಮೂಲಕವೆ ಸೆರೆಯಲ್ಲಿ ಬಂಧಿಯಾಗಿ ಮರಣ ಹೊಂದಿದ ಈತನು ೧೫೬೮ ರಿಂದ ೧೫೮೯ರ ತನಕ ಅಂದರೆ ಒಟ್ಟು ೨೧ ವರ್ಷಗಳ ಕಾಲ ಸುದೀರ್ಘ ಆಡಳಿತ ನಡೆಸಿ ಪಾಳೆಯಗಾರಿಕೆಗೆ ಬುನಾದಿ ಹಾಕಿದ ಮೊದಲ ನಾಯಕ ದೊರೆಯಾಗಿ ಆಡಳಿತ ನಡೆಸಿದನು. ಈ ಮಾಹಿತಿಯನ್ನು ಚಿನ್ಮೂಲಾದ್ರಿಯ ಪೂರ್ವಾಪರ ವಿಚಾರ ವಿಸ್ತಾರ ಎಂಬ ವಂಶಾವಳಿ ಹಾಗೂ ಕೆಲವು ಅಧ್ಯಯನಗಳಿಂದ ಸ್ಥಳೀಯ ಮೌಖಿಕ ಆಕರಗಳಿಂದಲೂ ಶೋಧಿಸಿ ಈ ಮಾಹಿತಿಯನ್ನು ಬಿತ್ತರಿಸಲಾಗಿದೆ. ಈತನ ನಂತರ ಈತನ ಮಗ(ದ್ರಾವ್ಯಾನ್ನದ) ಒಂದನೆ ಓಬಣ್ಣನಾಯಕನು ಚಿತ್ರದುರ್ಗದ ನಾಯಕನಾಗಿ ಕ್ರಿ.ಶ. ೧೫೮೯ಲ್ಲಿ ಅಧಿಕಾರ ವಹಿಸಿಕೊಂಡು ಅಣ್ಣಾಗಾರ ಓಬಣ್ಣ, ಠಾಣ್ಯದ ಓಬಳನಾಯಕ, ಗಡ್ಡದ ಮದಕರಿ ನಾಯಕನೆಂತಲೂ ಖ್ಯಾತಿಯಾಗಿದ್ದನು. ಈತನಿಗೆ ರಸಸಿದ್ಧರು "ಮದಕರಿ" ಎಂಬ ಹೆಸರನ್ನಿಟ್ಟು ಹೊಸ ಪರಿಕಲ್ಪನೆ ಕೊಟ್ಟು ಪ್ರೋತ್ಸಾಹಿಸಿದರು. ಪರಿಣಾಮ ವಿಜಯನಗರದ ಒಡೆತನ ತಪ್ಪಿಸಿ ದುರ್ಗವನ್ನು ಸ್ವತಂತ್ರ ಮಾಡಿಕೊಂಡ ಹಾಗೂ ಖ್ಯಾತವೀರಸೇನಾನಿ ಗುಂಟನೂರು ಮಲ್ಲಪ್ಪ ಎಂಬುವನನ್ನು ಪ್ರಧಾನಿಯಾಗಿಯೂ ನೇಮಿಸಿಕೊಂಡು ಹಲವು ಜನಹಿತಕಾರ್ಯಕ್ಕೆ, ಸ್ವತಂತ್ರ ಆಡಳಿತಕ್ಕೆ ಬುನಾದಿ ಹಾಕಿದ ನಾಯಕನಾಗಿದ್ದರಿಂದ ಈತನನ್ನು ಒಂದನೆ ಮದಕರಿನಾಯಕನೆಂತಲೂ ಕರೆಯುವ ವಾಡಿಕೆಯಿದೆ. ನಂತರ ೧೬೦೩ರಲ್ಲಿ ಈತನು ಮೃತವಾದ ನಂತರ ಆಡಳಿತ ಮುಕ್ತಾಯಗೊಂಡು ಈತನ ಮಗ ಒಂದನೆ ಕಸ್ತೂರಿ ರಂಗಪ್ಪ ನಾಯಕನು ದುರ್ಗದ ಅರಸನಾದ ಈತನು ಕ್ರಿ.ಶ. ೧೬೦೩ ರಿಂದ ೧೬೫೨ರವರೆಗಿನ ತನ್ನ ಆಳ್ವಿಕೆ ನಡೆಸಿದ, ತದನಂತರ ಇಮ್ಮಡಿ ಮದಕರಿನಾಯಕನು ಕ್ರಿ.ಶ. ೧೫೬೨ ರಿಂದ ೧೬೭೫ರ ತನಕ ದುರ್ಗದ ದೊರೆಯಾದನು. ಈತನಿಗೆ ಗಂಡು ಸಂತಾನವಿಲ್ಲದ ಕಾರಣಕ್ಕಾಗಿ ಈತನ ತಮ್ಮನ ಸಾಕು ಮಗ ಓಬಣ್ಣ ನಾಯಕನಿಗೆ ಪಟ್ಟವಾಯಿತು. ಓಬಣ್ಣನಾಯಕನನ್ನು ಸ್ಥಳೀಯ ಗುರಿಕಾರರು ಹಾಗೂ ದಳವಾಯಿಗಳು ಕೊಲೆ ಮಾಡಿದರು. ನಂತರ ಕಸ್ತೂರಿ ರಂಗಪ್ಪ ನಾಯಕನ ಹಿರಿಯಮಗನಾದ ಸರ್ಜೆರಾಯನ ಹಿರಿಯ ಪುತ್ರ ಚಿಕ್ಕಣ್ಣ ನಾಯಕನಿಗೆ ೧೬೭೫ರಲ್ಲಿಯೇ ಪಟ್ಟಕಟ್ಟಲಾಯಿತು. ಕಸ್ತೂರಿ ಚಿಕ್ಕಣ್ಣನಾಯಕನು ಕ್ರಿ.ಶ. ೧೬೭೫ ರಿಂದ ೧೬೮೬ರ ತನಕ ಆಳ್ವಿಕೆ ನಡೆಸಿದರು.

ಚಿಕ್ಕಣ್ಣ ನಾಯಕನು ಸಂತಾನವಿಲ್ಲದೆ ತೀರಿಹೋದ ನಂತರ ಚಿಕ್ಕಣ್ಣನಾಯಕನ ಅಣ್ಣ ಮುಮ್ಮಡಿ ಮದಕರಿನಾಯಕನೆಂದು ಕರೆಯಲ್ಪಡುವ ಲಿಂಗಣ್ಣ ನಾಯಕನು ಕ್ರಿ.ಶ. ೧೬೮೬ರಿಂದ ೧೬೮೮ರವರೆಗೂ

ಆಡಳಿತ ನಡೆಸಿ, ದಳವಾಯಿಗಳ ಕುತಂತ್ರದಿಂದ ಬಲಿಯಾದನು. ನಂತರ ಮುದ್ದಣ್ಣವೆಂಬ ದುರ್ಗದ ದಳವಾಯಿಯು ಚಿಕ್ಕಣ್ಣ ನಾಯಕನ ತಮ್ಮ ಚಿಕ್ಕಮದಕರಿನಾಯಕನ ಎರಡನೆ ಕುಮಾರ ದೊಣ್ಣೆ ರಂಗಪ್ಪನಾಯಕನನ್ನು ನೆಪ ಮಾತ್ರಕ್ಕೆ ದುರ್ಗದ ದೊರೆಯಾಗಿ ನೇಮಿಸಿದನು ಮತ್ತೆ ಎಂದಿನಂತೆಯೆ ದಳವಾಯಿಗಳ ಉಪಟಳದಿಂದಾಗಿ ಈತನು ತೀರಿಹೋದ ನಂತರ ಇಸಾಮುದ್ರದ ಮಾದಯ್ಯನ ಮಗನಾದ ಸೂರ್ಯಕಾಂತಿ ರಂಗಪ್ಪನಾಯಕನನ್ನು ೧೬೮೯ರಲ್ಲಿ ಪಟ್ಟಕ್ಕೇರಿಸಲಾಗಿ ಈತನು ಕೆಲವೆ ದಿನಗಳಲ್ಲಿ ತೀರಿಹೋದರಿಂದ, ಬುಳ್ಳನಾಯಕನ ಸಂತತಿಯವನಾದ ಬಿಚ್ಚುಗತ್ತಿ ಭರಮಣ್ಣ ನಾಯಕನಿಗೆ ಪಟ್ಟ ಕಟ್ಟಲಾಗಿ ಈತನು ೧೬೮೯ ರಿಂದ ೧೭೨೧ರವರೆಗೆ ಮರಾಠರ ೯ ದೊರೆಗಳೊಂದಿಗೆ ಮುಖಾಮುಖಿಯಾಗಿ ಹೋರಾಡಿ ಶೌರ್ಯ ಸಾಹಸಕ್ಕೆ ಹೆಸರಾಗಿ, ಅನೇಕ ಜನೋಪಕಾರಿ, ಕೆಲಸ ಕಾರ್ಯಗಳನ್ನು ಕೈಗೊಂಡು ಚಿತ್ರದುರ್ಗದ ಖ್ಯಾತಿಯನ್ನು ಉತ್ತುಂಗಕ್ಕೆ ಹೊತ್ತೊಯ್ದು. ಈತನ ಮರಣ ಹೊಂದಿದ ನಂತರ ಈತನ ಮಗ ಹಿರೇಮದಕರಿನಾಯಕನು ಕ್ರಿ.ಶ. ೧೭೨೧ ರಿಂದ ೧೭೪೮ರ ತನಕ ಆಳ್ವಿಕೆ ನಡೆಸಿ ಸುತ್ತ-ಮುತ್ತಲ ಪಾಳೆಯಗಾರರ ಒಗ್ಗಟ್ಟಿನ ಒಕ್ಕೂಟದ ದಾಳಿಯಿಂದ ಹತನಾದ, ತರುವಾಯ ಹಿರೇಮದಕರಿನಾಯಕನ ಪುತ್ರನಾದ ಇಮ್ಮಡಿ ಕಸ್ತೂರಿ ರಂಗಪ್ಪ ನಾಯಕ ೧೭೪೯ ರಿಂದ ೧೭೫೪ರ ತನಕ ಆಳ್ವಿಕೆ ನಡೆಸಿ ಮರಾಠರು, ಆನೆಗುಂದಿ ಮತ್ತು ರಾಯದುರ್ಗದವರೊಡನೆ ಹೋರಾಡಿದನು ಹಾಗೂ ಅನಾರೋಗ್ಯ ಮತ್ತು ಕೆಲವು ಆಸ್ಥಾನದ ಹಿತಶತೃಗಳ ಕುತಂತ್ರದಿಂದ ಸಾವನ್ನಪ್ಪಿದನು. ನಂತರ ಈತನು ತಾಯಿ ಓಬವ್ವ ನಾಗತಿಯು ತಾನೇ ಅಧಿಕಾರ ವಹಿಸಿಕೊಂಡು ಆಳ್ವಿಕೆ ನಡೆಸಿದಳು ಹಾಗೂ ದಂಡಿನ ಜಂಪಣ್ಣನಾಯಕ, ದೊಡ್ಡ ಮದಕರಿನಾಯಕ ಹೀಗೆ ಕ್ರಮಾನುಗತವಾಗಿ ಆಳ್ವಿಕೆ ನಡೆಸಿದರು. ನಂತರ ತೊದಲು ಭರಮಪ್ಪನ ಮಗನಾದ ರಾಜವೀರ ಮದಕರಿಯು ೧೭೫೪ ರಿಂದ ೧೭೭೯ರ ತನಕ ದುರ್ಗದ ಅರಸನಾದ. ಮದಕರಿನಾಯಕನು ಓಬವ್ವ ನಾಗತಿಯ ಮಾನಸ ಪುತ್ರನಾಗಿದ್ದಾನೆ. ಈ ನಾಯಕನು ಶ್ರೀರಂಗಪಟ್ಟಣದ ನವಾಬ ಹೈದರ್ ಅಲಿಖಾನ್ ಮತ್ತು ಮರಾಠರೊಂದಿಗೆ ಶೌರ್ಯ ಸಾಹಸದೊಂದಿಗೆ ಹೋರಾಡಿ ದುರ್ಗಕ್ಕಾಗಿ ಪ್ರಾಣವನ್ನೆ ತೆತ್ತನು. ತನ್ನದೆ ರಾಜಕೀಯ ದೃಷ್ಟಿಕೋನ ಹಲವು ಅಭಿವೃದ್ಧಿಕಾರ್ಯ ಹಾಗೂ ಶೌರ್ಯಕ್ಕೆ ಹೆಸರಾಗಿಯೂ ಹೈದರ್, ಟಿಪ್ಪು ಮತ್ತು ಮರಾಠರಿಗೆ ನೇರ ಸವಾಲೇಸೆದ ವೀರಗ್ರಣಿ ರಾಜವೀರ ಮದಕರಿನಾಯಕನಾಗಿದ್ದಾನೆ. ಹೀಗೆ ಚಿತ್ರದುರ್ಗದಲ್ಲಿ ಕ್ರಿ.ಶ. ೧೫೬೮ ರಿಂದ ೧೭೭೯ರ ತನಕ ೧೩ ಮಂದಿ ಅರಸರು ೨೧೧ ವರ್ಷ ಆಳ್ವಿಕೆ ನಡೆಸಿ, ಭಾರತದ ಅದರಲ್ಲೂ ಕರ್ನಾಟಕದಲ್ಲಿ ಹೊಸ ಇತಿಹಾಸ ಸೃಷ್ಟಿಸಿದವರಾಗಿದ್ದಾರೆ. ಮದಕರಿನಾಯಕನು ಚಿಕ್ಕವನಾಗಿದ್ದ ಸಮಯದಲ್ಲಿ ಬುಡಕಟ್ಟಿನ ಸಾಹಸ ಶೌರ್ಯವು ರಕ್ತದಲ್ಲಿಯೆ ಕರಗತವಾಗಿಯೂ ಮತ್ತು ರಾಜಕಾರಣದ ದೂರದೃಷ್ಟಿ ಗೊತ್ತಿದ್ದರಿಂದಾಗಿ ಮದಕರಿನಾಯಕ ಸ್ವತಂತ್ರವಾಗಿ ಆಳ್ವಿಕೆಗೆ ತಯಾರಾಗಿ ಪಟ್ಟವೇರುವತನಕ ಚಿತ್ರದುರ್ಗವನ್ನು ಓಬವ್ವನಾಗತಿಯು (ಹಿರೇಮದಕರಿನಾಯಕನ ಹೆಂಡತಿ) ಕ್ರಿ.ಶ. ೧೭೫೪ ರಿಂದ ೧೭೫೬ರವರೆಗೆ ಎರಡು ವರ್ಷ ಯಶಸ್ವಿಯಾಗಿ ರಾಜನಂತೆಯೆ

ಗಾಂಭೀರ್ಯವಾಗಿ ಆಳ್ವಿಕೆ ನಡೆಸಿದ್ದಾಳೆ. ಹೀಗೆ ಬಖೈರ್ ಮತ್ತು ಸ್ಥಳೀಯರ ಮೂಲಕ, ಕೆಲವು ಉತ್ಪನ್ನಗಳ ಮೂಲಕ ಸಂಶೋಧನಾ ತಂಡದ ಸಹಕಾರದೊಂದಿಗೆ ಹೊಸ ಇತಿಹಾಸ ಶೋಧಿಸಿದ ಶುದ್ಧ ಹಸ್ತದ ಚರಿತ್ರಕಾರರಾಗಿದ್ದಾರೆ.[೧]

ಮೌರ್ಯ ಮತ್ತು ಶಾತವಾಹನರ ಅಧ್ಯಯನ

ಇದು ಚರಿತ್ರೆ ವಿಭಾಗದ ಯೋಜನೆಯಾಗಿದ್ದು, ಆನಂತರ ಕೃತಿಯಾಗಿ ಪ್ರಕಟವಾಗಿದೆ. ಮಾನವ ಸಂಸ್ಕೃತಿಯ ಬೆಳವಣಿಗೆಯ ಹಂತದಲ್ಲಿ ನೈಸರ್ಗಿಕ, ಜೈವಿಕ, ಬೌದ್ಧಿಕ ಸಂಘರ್ಷಗಳೊಡನೆಯೆ ಹೊಂದಿಕೊಳ್ಳುವ, ಎದುರಿಸುವ, ನಿವಾರಿಸಿಕೊಳ್ಳುವ, ಪರಿವರ್ತಿಸಿಕೊಳ್ಳುವ ಪ್ರಯತ್ನವು ನಿರಂತರವಾಗಿ ಮುಂದುವರಿದಿದೆ. ಆದರೆ ಇಂತವುಗಳನ್ನು ಅಧ್ಯಯನಿಸಿ, ಒಂದು ಚೌಕಟ್ಟಿಗೆ ತಂದು ತಾತ್ವಿಕ ರೂಪಕೊಡುವಾಗ, ಸಂಶೋಧಕನಿಗೆ ಲಭಿಸುವ ಆಕರ. ಸಾಮಗ್ರಿ ಉಪಕರಣ, ಸ್ಮಾರಕ, ಶಾಸನ, ಲಿಪಿ ಇತ್ಯಾದಿಗಳೆಲ್ಲವೂ ಇದ್ದಾಗಿಯೂ ಪರಿಕಲ್ಪನಾತ್ಮಕ ನೆಲೆಯಲ್ಲಿ ಗುರುತಿಸುವುದು ಸುಲಭವಲ್ಲ. ಏಕೆಂದರೆ ಆಕರಗಳ ಕೊರತೆಗಾಗಲಿ ಭೌತಿಕ ಸಾಕ್ಷಿಗಳಿಗಾಗಲಿ ಹಿನ್ನೆಡೆಯಾಗದು, ಹಿನ್ನೆಡೆಯಾಗುವುದು ನಮ್ಮ ಅರಿವು. ಆಳದ ಅಧ್ಯಯನ, ಪರಿಶ್ರಮ, ಅನ್ವೇಷಣೆ, ವಸ್ತುನಿಷ್ಠತೆ ಇತ್ಯಾದಿಗಳು ಬಹುಮುಖ್ಯವೆನಿಸುತ್ತವೆ. ಅವಸರದಿಂದಾಗಿಯೂ, ಭಾವುಕ ನೆಲೆಯ ನಿರೂಪಣೆಗಳು ನಾಜೂಕಾಗಿ ನಂಬಿಸುವ ಅಪಾಯಕಾರಿ ಸಮರ್ಥನೆಗಳು, ಅರ್ಥಕ್ಕೆ ಹೊಸ ಅರ್ಥಗಳು ಪುನರ್‌ವ್ಯಾಖ್ಯಾನಗಳ ಮರುವ್ಯಾಖ್ಯಾನಗಳು ಹೀಗೆ ಅನೇಕ ಬಾರಿ ಸಿದ್ಧರೂಪದಲ್ಲಿದ್ದ ಸಿದ್ಧಾಂತದ ಚೌಕಟ್ಟಿಗೆ ತಂದು ವ್ಯಾಖ್ಯಾನಿಸಿದರೆ ಸತ್ಯಗಳನ್ನೆ ಮರೆಮಾಚುವ ಅಪಾಯಕಾರಿ ಸಂಗತಿಗಳು ಜನಮಾಸದಲ್ಲಿ ತುಂಬಿ ಇತಿಹಾಸವೇ ಬೇರೊಂದು ದಿಕ್ಕಿನತ್ತ ಸಾಗುವ ಅಪಾಯವಿದೆ. ಇಂತಹ ಅಪಾಯಕಾರಿ ಸಂಗತಿಗಳ ದೊಡ್ಡ ಪಟ್ಟಿಯೆ ಇರುವಾಗ ರಾಜಪ್ರಭುತ್ವದ ಅಧ್ಯಯನವಂತೂ ಹಲವು ಉತ್ಪ್ರೇಕ್ಷೆ, ಸ್ವಾಮಿನಿಷ್ಠೆ, ಪೂರ್ವಾಗ್ರಹ ಪೀಡಿತನ ಅಥವಾ ಆಧಾರವಿಲ್ಲದ ಸ್ಥಳೀಯ ಮಾಹಿತಿ, ನಿಖರವಾಗಿಲ್ಲದ ದಾಖಲೆಗಳು ಪ್ರತಿಷ್ಠೆಗಾಗಿ, ಅಭಿಮಾನಕ್ಕಾಗಿ, ಸ್ಥಳೀಯ ಕಾರಣಕ್ಕಾಗಿ ಹೆಸರಿಗಾಗಿ ಮಾಡಿದ ಅಧ್ಯಯನಗಳು ಹಲವಾರು ಇವೆ. ಅಂತಹ ಅಧ್ಯಯನ ಅಧ್ಯಯನಿಸಿ ಅಧ್ಯಯನದಿಂದ ಬಿಟ್ಟು ಹೋಗಿರುವ ಐತಿಹಾಸಿಕ ಸತ್ಯಗಳನ್ನು ಅಧ್ಯಯನ ಮಾಡಲು ನಿಷ್ಠಾವಂತ ಸಂಶೋಧಕನಿಂದ ಮಾತ್ರ ಸಾಧ್ಯವಾಗಿದೆ. ಅಂತಹ ಕಾರ್ಯಕ್ಕಾಗಿ ತೆಲಗಾವಿಯವರು ರಾಜಪ್ರಭುತ್ವಗಳಾದ, ಮೌರ್ಯ, ಶಾತವಾಹನ, ವಿಜಯನಗರದ ಅರಸರು, ಚಿತ್ರದುರ್ಗದ ರಾಜರು ಅಥವಾ ಪಾಳೆಯಗಾರರನ್ನು ಕುರಿತು ಅಧ್ಯಯನಿಸಿದ್ದಾರೆ. ಇಂತಹ ಅಧ್ಯಯನಗಳನ್ನು ಕೈಗೊಳ್ಳುವ ಹಂತದಲ್ಲಿ ಅದಕ್ಕೂ ಹಿಂದಿನ ರಾಜಶಾಹಿಗಳ ಅಧ್ಯಯನದ ಪರಿಚಯ ಮತ್ತು ನಂತರದ ಸ್ಥಿತಿಗತಿಯ ಮಾಹಿತಿಯನ್ನು ನಿರೂಪಿಸುತ್ತಾರೆ. ತೆಲಗಾವಿಯಂತ ಪ್ರತಿಭಾವಂತ ಸಂಶೋಧಕರು ಈಗಾಗಲೇ ರಚಿತಗೊಂಡಿದ್ದ ಮೌರ್ಯ ಮತ್ತು ಶಾತವಾಹನರ ಸಂಸ್ಕೃತಿಗಳನ್ನು ಶಾಸನ, ಸ್ಮಾರಕ, ಲಿಪಿ, ಸಾಹಿತ್ಯ, ನಿವೇಶನಗಳನ್ನು ಕ್ಷೇತ್ರಕಾರ್ಯದ ಮೂಲಕವೇ ಗುರುತಿಸಿ ಸಂಶೋಧನೆ ಕೈಕೊಂಡು ಓದುಗರ ಮುಂದಿಟ್ಟಿದ್ದಾರೆ.[೨]

೪.೨. ಮೌರ್ಯರ ಕಾಲದ ಸಂಸ್ಕೃತಿ

ಮೌರ್ಯರ ಕಾಲಕ್ಕೆ ಸಂಬಂಧಿಸಿದ ನಿವೇಶನಗಳು ಹಾಗೂ ಶಾಸನಗಳು ಗೋಡೆ ಬರಹಗಳು ಸ್ಮಾರಕಗಳು ಇತ್ಯಾದಿಗಳನ್ನು ಚಿತ್ರದುರ್ಗ, ರಾಯಚೂರು, ಕೊಪ್ಪಳ, ಬಳ್ಳಾರಿ, ದಕ್ಷಿಣಕನ್ನಡ ಹೀಗೆ ಹಲವು ಜಿಲ್ಲೆ, ತಾಲ್ಲೂಕು ಗ್ರಾಮಾಂತರ ಪ್ರದೇಶದಲ್ಲಿ ಅಧ್ಯಯಿನಿಸಿರುವುದನ್ನು ಕಾಣಬಹುದಾಗಿದೆ.

ನಂದರ ಆಡಳಿತವನ್ನು ಕೊನೆಗಾಣಿಸಿ ಮೌರ್ಯ ಸಾಮ್ರಾಜ್ಯ ಸ್ಥಾಪನೆ ಮಾಡಿದವನು ಚಂದ್ರುಗುಪ್ತಮೌರ್ಯ. ಈತನ ತರುವಾಯ ಈತನ ಮಗ ಬಿಂಬಸಾರ ಹಾಗೂ ದೇವನಾಂ ಪ್ರಿಯ ಎಂಬ ಬಿರುದಾಂಕಿತದ ಪಾತ್ರನಾಗಿದ್ದ, ಅಶೋಕನು ಮೌರ್ಯ ವಂಶಕ್ಕೆ ಸೇರಿದವರಾಗಿದ್ದು ಅಶೋಕನ ಕ್ರಿಪೂ. (೨೭೩-೨೩೨) ಯಶಸ್ವಿ ಆಡಳಿತಗಾರರಾಗಿದ್ದರು. ಆಳ್ವಿಕೆಯ ಅವಧಿಯಲ್ಲಿ ಅಶೋಕನ ಶಾಸನಗಳು ದೊರೆತ ಕರ್ನಾಟಕದಲ್ಲಿ ೧೪ ಶಾಸನಗಳು ಬೆಳಕಿಗೆ ಬಂದಿವೆ. ಈ ಶಾಸನಗಳು ಲಘು ಶಾಸನಗಳಾಗಿದ್ದು ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಸಿದ್ಧಾಪುರ, ಜಟಿಂಗರಾಮೇಶ್ವರ, ಬಳ್ಳಾರಿ ಜಿಲ್ಲೆಯ ನಿಟ್ಟೂರು ಮತ್ತು ಉದೇಗೊಳಂ, ಕೊಪ್ಪಳ ಜಿಲ್ಲೆಯ ಗವಿಮಠ ಮತ್ತು ಪಾಲ್ಕಿಗುಂಡ ಹಾಗೂ ರಾಯಚೂರು ಜಿಲ್ಲೆಯ ಮಸ್ಕಿ, ಗುಲ್ಬರ್ಗ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಸನ್ನತಿಯಲ್ಲಿ ಶೋಧನೆಗೊಂಡಿರುವ ಶಾಸನಗಳಾಗಿವೆ. ಶಾಸನಗಳು ಕೆಲವು ಸಲ ಭಿನ್ನತೆಗೆ ಒಳಗಾಗಿ ೧೭ ಶಾಸನಗಳಿವೆ ಎಂಬ ಅಭಿಪ್ರಾಯವಿದ್ದು ೧೭ ಶಾಸನಗಳಲ್ಲಿ ೧೩ ಲಿಪಿ ಶಾಸನಗಳು ಉಳಿದ ೪ ಮುಖ್ಯ ಶಿಲಾಶಾಸನಗಳಾಗಿದ್ದು ಅವು ಬ್ರಹ್ಮಗಿರಿ ೨, ಸಿದ್ಧಾಪುರ ೨, ಜಟಂಗರಾಮೇಶ್ವರದಲ್ಲಿ ೨, ನಿಟ್ಟೂರು ೨, ಉದ್ದೇಗೊಳಂ ೨, ಮಸ್ಕಿಯಲ್ಲಿ ೧, ಗವಿಮಠದಲ್ಲಿ ೧, ಪಾಲ್ಕಿಗುಂಡದಲ್ಲಿ ೧, ಹೀಗೆ ಒಟ್ಟು ೧೩ ಶಾಸನಗಳು ಹಾಗೂ ಸನ್ನತಿಯಲ್ಲಿ ಒಟ್ಟು ೪ ಮುಖ್ಯ ಶಿಲಾಶಾಸನಗಳು ದೊರೆತಿದ್ದು ಮೊದಲನೆ ಭಾಗದಲ್ಲಿ ರೂಪನಾಥ, ಎರಡನೆ ಭಾಗದಲ್ಲಿ ಎರ್ರಗುಡಿಯ ಶಾಸನಗಳಿವೆ ಎಂಬ ವಾದವಿದೆ.

ಅಶೋಕನ ವ್ಯಾಪ್ತಿಗೆ ಸೇರುವ ಮೊದಲು ಹಲವು ಪ್ರದೇಶಗಳು ಸ್ಥಳೀಯ ಸ್ವತಂತ್ರ ಅರಸರ ಅಧೀನವಾಗಿದ್ದವು. ಹಾಗೆಯೇ ಸನ್ನತಿಯಲ್ಲಿ ದೊರೆತ ಪ್ರತ್ಯೇಕ ಶಿಲಾಶಾಸನದಿಂದಾಗಿ ಗುಲ್ಬರ್ಗ ಜಿಲ್ಲೆ ಪರಿಸರವು ಮೌರ್ಯ ಸಾಮ್ರಾಜ್ಯದ ಭಾಗವಾಗಿತ್ತೆಂದು ಗೊತ್ತಾಗಿದ್ದು ಕರ್ನಾಟಕದಲ್ಲಿ ಗುಲ್ಬರ್ಗ, ರಾಯಚೂರು, ಕೊಪ್ಪಳ, ಬಳ್ಳಾರಿ, ಚಿತ್ರದುರ್ಗವು ಮೌರ್ಯ ಸಾಮ್ರಾಜ್ಯದ ಆಳ್ವಿಕೆಗೆ ಒಳಪಟ್ಟಿದ್ದವು. ಹಾಗೆಯೆ ದಕ್ಷಿಣ ಮೇರೆಯಲ್ಲಿದ್ದ ಚೋಳ, ಪಾಂಡ್ಯ, ಕೇರಳ, ಸಿಂಹಳ ಇವುಗಳ ಬಾಂಧವ್ಯ ಕುರಿತು ಸಾಹಿತ್ಯ ಅಧಾರಗಳಿವೆ.

ಅಶೋಕನು ಉಜ್ಜನಿಯಿಂದ ದಕ್ಷಿಣಪಥಕ್ಕೆ ಕೈಗೊಂಡ ಧರ್ಮ ವಿಜಯಯಾತ್ರೆ ಮುನ್ನವೆ ಬೌದ್ಧ ಸನ್ಯಾಸಿಗಳು ಸಂಚರಿಸಿ ಯೋಜನಾಬದ್ಧವಾಗಿ ವ್ಯವಹರಿಸಿ ಅನುಕೂಲಕರ ವಾತಾವರಣ ಸೃಷ್ಟಿಸಿದರು. ಹೀಗಾಗಿಯೆ ಬೌದ್ಧ ಸಾಹಿತ್ಯ, ವಾಣಿಜ್ಯ ಮಾರ್ಗಗಳು ಹಸ್ತಿನಾಪುರ, ಅಹಿಚ್ಚತ್ರ, ಕಣುವಾ, ಶ್ರಾವಸ್ತಿ, ಮಿಥಿಲಾ, ಚಂಪಾ ಮುಂತಾದ ಕಡೆಗಳಿಂದ ತಾಮ್ರಲಿಪಿಗಳು ದೊರೆತಿವೆ.

ಹಾಗೇನೆ ಮೌರ್ಯರ ಆಡಳಿತ ದೃಷ್ಟಿಯಿಂದ ಆಂಧ್ರಪ್ರದೇಶ ಆಯಕಟ್ಟಿನ ಸ್ಥಳವಾಗಿತ್ತು. ವೀರಾಂಪುರನಲ್ಲಿ ಮೌರ್ಯರ ಹಣ ಮುದ್ರಿಸುವ ಟಂಕಸಾಲೆ ಇದ್ದಿತು. ಕೇರಳ ಮತ್ತು ನೈರುತ್ಯ ಸಮುದ್ರ ತೀರಗಳು ತಮಿಳುನಾಡಿನ ಕೆಲವು ಭಾಗಗಳು ಮಧ್ಯಪ್ರದೇಶ, ಶ್ರೀಕಾಕುಳಂ ಜಿಲ್ಲೆಯ ಗುಂಟುಪಲ್ಲಿಯಲ್ಲಿಯೂ ಬೌದ್ಧಧರ್ಮದ ಕುರುಹು ಕಾಣುತ್ತೇವೆ. ಬೃಹತ್ ಶಿಲಾ ಸಂಸ್ಕೃತಿ ಮತ್ತು ಖನಿಜ ನಿಕ್ಷೇಪಗಳು ವಿಧರ್ಭದಿಂದ ತಮಿಳುನಾಡು ಕರ್ನಾಟಕದಿಂದ ಕೇರಳದ ಕೆಲವು ಕಡೆಗಳಲ್ಲಿ ಪರಿಕರ ತಯಾರಿಕೆಗೆ ಗುಡ್ಡಗಾಡು, ಕಮ್ಮಾರರ ಪರಿಕರಗಳು ಹಾಗೂ ಕೃಷಿಕರು ಬಳಸುತ್ತಿದ್ದ ಮತ್ತು ಇಲ್ಲಿನ ಸಮುದಾಯಗಳು ಬಗ್ಗೆ ಬುಡಕಟ್ಟಿನ ಜನರೊಂದಿಗಿನ ಸಂಬಂಧ ತಿಳಿಸುತ್ತವೆ. ಸುವರ್ಣ ಗಿರಿಯು ಮೌರ್ಯ ಕಾಲದ ರಾಜಧಾನಿ ಮತ್ತು ಪ್ರವರ್ಧಮಾನ ಹೊಂದಿದ ನಗರವಾಗಿತ್ತು. ಸನ್ನತಿಯಲ್ಲಿ ಮೌರ್ಯ ಮತ್ತು ಶಾತವಾಹನರ ಪೈಕಿ ಪ್ರಮುಖ ೪೦ ಶಾಸನಗಳು ೮೦ಕ್ಕೂ ಹೆಚ್ಚು ಕಲ್ಲಿನ ಬರಹಗಳು ಲಭ್ಯವಾಗಿವೆ.

ಮೌರ್ಯ ಸಾಮ್ರಾಜ್ಯವು ನಿರಂಕುಶ ಪ್ರಭುತ್ವಕ್ಕೆ ಒಳಪಟ್ಟಿದ್ದು ಆ ಪ್ರಾಂತ್ಯಗಳಲ್ಲಿ ಆಡಳಿತ ನಡೆಸುವವರು ರಾಜಕುಮಾರರೆ ಆಗಿದ್ದು, ಗಣಿಗಾರಿಕೆ, ಮದ್ಯಪಾನ ತಯಾರಿಕೆ, ಶಸ್ತ್ರಾಸ್ತ್ರ ತಯಾರಿಕೆ ನಡೆಸುತ್ತಿದ್ದು ಧರ್ಮ ಮಹಾಮಾತ್ರರೆಂಬ ಅಧಿಕಾರಿಗಳ ಮೂಲಕ ಬುದ್ಧನ ಸಂದೇಶ ಪ್ರಚಾರ ಮಾಡುತ್ತಿದ್ದರು. ಈತನ ಶಾಸನಗಳು ಬ್ರಾಹ್ಮಿ, ಖರೋಷ್ಠಿ, ಅರಾಮೈಕಾ ಹಾಗೂ ಗ್ರೀಕ್ ಲಿಪಿಗಳಲ್ಲಿವೆ. ಅಶೋಕನು ವಶಪಡಿಸಿಕೊಂಡ ಪ್ರದೇಶಗಳಲ್ಲಿ ಸ್ಥಳೀಯ ಲಿಪಿಗಳ ಮೂಲಕ ಶಾಸನ ಬರೆಯಿಸಿ ಧರ್ಮ ಸಂದೇಶ ಎಲ್ಲಾ ಜನರಿಗೂ ತಿಳಿಯುವಂತೆ ಮಾಡುತ್ತಿದ್ದನು. ಸಿಂಹಳದ ಅನುರಾಧಪುರದ ಬಳಿ ದೊರೆತ ಕ್ರಿ.ಪೂ. ೫–೪ನೇ ಶತಮಾನದಲ್ಲಿ ದಾಮಿಲಿ, ಪೊಲಿಂಡಿ ಪಿರ್ವಿಯಾಗಿದ್ದು ಪ್ರಾಕೃತ ಭಾಷೆಯ ಮಟ್ಟಿಗೆ ಈತನ ಶಾಸನಗಳೆ ಮೊತ್ತ ಮೊದಲ ದಾಖಲೆಗಳಾಗಿವೆ. ಆದ್ದರಿಂದಲೆ ಕರ್ನಾಟಕ ತುಂಬಾ ಕಂಡು ಬರುತ್ತವೆ. ಅಶೋಕನ ಶಾಸನಗಳಿರುವುದು ಪ್ರಾಕೃತದಲ್ಲಿಯೆ ಇರುವುದರಿಂದ ರಾಜಭಾಷೆಯು ಪ್ರಾಕೃತವೆ ಆಗಿದೆ ಬಂಡೆಗಳ ಮೇಲೆ ಶಾಸನಗಳನ್ನು ಬರೆಸಿದವನು ಅಶೋಕನೆ ಆಗಿದ್ದಾನೆ. ಇದರ ಜೊತೆಯಾಗಿಯೆ ಹೇಳುವ ಮುಖ್ಯ ವಿಷಯವೆಂದರೆ ಅತ್ಯಂತ ಪ್ರಾಚೀನ ಲಿಪಿಕಾರರಲ್ಲಿ ಚಂಪಕನು ಮೊದಲಿಗನಾಗಿದ್ದಾನೆ. ಇದೇ ಕಾಲದಲ್ಲಿಯೆ ಈ ರಾಜ್ಯದಲ್ಲಿ ಬೆಳ್ಳಿ ನಾಣ್ಯಗಳು ಅಧಿಕೃತ ನಾಣ್ಯಗಳಾಗಿ ಚಲಾವಣೆಗೊಂಡಿದ್ದವು.

ಬ್ರಹ್ಮಗಿರಿ, ಸನ್ನತಿ ಮತ್ತು ಬನವಾಸಿ ಪ್ರಾಂತ್ಯಗಳು ಬಹುಮುಖ್ಯ ನಿವೇಶನಗಳಾಗಿವೆ. ಕರ್ನಾಟಕದಲ್ಲಿ ಬೌದ್ಧ ಧರ್ಮ ಬೆಳೆಯಲಿಕ್ಕೆ ಮೌರ್ಯರ ಕೊಡುಗೆ ಅಪಾರವಾಗಿದ್ದು ಧಾರ್ಮಿಕ ಶಾಂತಿಯಾತ್ರೆ, ವಿದೇಶಿ ಮತ್ತು ಅಂತರ್‌ರಾಜ್ಯದೊಂದಿಗೆ ಉತ್ತಮ ಸಂಬಂಧ ವಹಿವಾಟು ಇಟ್ಟುಕೊಂಡವರೆಂದರೆ ಮೌರ್ಯರಾಗಿದ್ದಾರೆ.

೪.೩. ಶಾತವಾಹನರ ಕಾಲದ ಸಂಸ್ಕೃತಿ

ಕರ್ನಾಟಕ ಸಂಸ್ಕೃತಿ ಶ್ರೀಮಂತಿಕೆಗೆ ಸ್ಪಂದಿಸಿದ ಮೌರ್ಯರ ನಂತರ ಸಾಮ್ರಾಜ್ಯಶಾಹಿ ಆಡಳಿತ ವ್ಯವಸ್ಥೆ ಎಂದರೆ ಶಾತವಾಹನರದು. ಇವರ ಸಂಸ್ಕೃತಿಯು ಬಹುಮುಖ್ಯವಾಗಿದ್ದು

ಅದನ್ನು ಚಿತ್ರದುರ್ಗ, ಗುಲ್ಬರ್ಗ, ಬೆಳಗಾವಿ, ಬಾಗಲಕೋಟೆ, ಹಾವೇರಿ, ಶಿವಮೊಗ್ಗ, ರಾಯಚೂರು, ಬಳ್ಳಾರಿ, ಮೈಸೂರು, ಕೋಲಾರ ಬೆಂಗಳೂರು ಗ್ರಾಮಾಂತರ, ಉತ್ತರ ಕನ್ನಡದ ಕೆಲವು ತಾಲ್ಲೂಕು ಗ್ರಾಮಾಂತರ ತಳಹದಿಯಲ್ಲಿ ಶಾತವಾಹನರ ಅದ್ಭುತ ಕೊಡುಗೆಗಳನ್ನು ನೋಡಬಹುದಾಗಿದೆ.

ದಕ್ಷಿಣದಲ್ಲಿ ಅಧಿಕಾರ ಸ್ಥಾಪಿಸಿದ ಶಾತವಾಹನರು ಮೌರ್ಯ ಸಾಮ್ರಾಜ್ಯದ ಮುಂದುವರಿಕೆಗಾಗಿ ಸಾಮ್ರಾಜ್ಯ ನಿರ್ಮಾಣದಲ್ಲಿ ತೊಡಗಿಸಿಕೊಂಡರು ಆದರೆ ಆಡಳಿತ, ರಾಜ್ಯವ್ಯವಸ್ಥೆ, ಇತ್ಯಾದಿಗಳೆಲ್ಲವೂ ಮೌರ್ಯರ ಮಾದರಿಯಾಗಿದ್ದವು ಕಾರಣ ಮೌರ್ಯರ ಅವನತಿ ಮತ್ತು ಶಾತವಾಹನರ ಪ್ರಗತಿಗಳ ಅಂತರ ಕೇವಲ ೧೦೦ ವರ್ಷ ಮಾತ್ರ ಬಹಳಷ್ಟು ವಿದ್ವಾಂಸರು, ಇಲ್ಲಿಯ ತನಕ ಬಂದ ಕೆಲವು ಕೃತಿಗಳಲ್ಲಿ ಶಾತವಾಹನರು ಆಂಧ್ರದವರೆಂದು ನಂಬಿಸಲಾಗಿತ್ತು. ಆದರೆ ಇವರು ಯಾವ ಶಾಸನಗಳಲ್ಲಿಯೂ ಆಂಧ್ರದವರೆಂದು ಹೇಳಿಕೊಂಡಿಲ್ಲ. ಇವರ ಆರಂಭದ ಶಾಸನಗಳು ದೊರೆತಿರುವುದು. ಮಹಾರಾಷ್ಟ್ರದಲ್ಲಿ ಗೋದಾವರಿ ನದಿಯ ಮೇಲ್ಭಾಗದ ಕಣಿವೆಯು ಇವರ ಬದುಕಿನ ಭಾಗವಾಗಿದ್ದಿತು. ಹಾಗೆಯೇ ಆಂಧ್ರದ ಕರ್ನೂಲು, ಶ್ರೀಶೈಲ ಬೆಟ್ಟ, ಮಹೇಂದ್ರ ನಾಗಾರ್ಜುನಕೊಂಡ, ಶ್ವೇತಗಿರಿ ಪ್ರಾಂತ್ಯಗಳು ಇವರುಗಳ ಆಡಳಿತಕ್ಕೆ ಒಳಪಟ್ಟಿದ್ದವು. ಶಾಸನಗಳು ಮತ್ತು ನಿವೇಶನಗಳು ಕ್ಷೇತ್ರಕಾರ್ಯದ ಮೂಲಕ ಗುರುತಿಸಿದಂತೆ ಶಾತವಾಹನರ ಮೊದಲ ರಾಜಧಾನಿ ಮಹಾರಾಷ್ಟ್ರದ ಜುನ್ನಾರ್ ನಂತರ ಕೊಲ್ಲಾಪುರ, ಸತರಾ ತೆಲಂಗಾಣಗಳಾಗಿವೆ.

ಚಿಕ್ಕಮಗಳೂರಿನಲ್ಲಿ ದೊರೆತ ೧೮ನೇ ಶತಮಾನದ ಶಾಸನವು ಕರ್ನಾಟಕದಲ್ಲಿ ನೆಲೆಸಿ ದ್ದಾರೆಂಬುದಕ್ಕೆ ಲಿಖಿತ ಆಧಾರವಾಗಿದ್ದು. ಪ್ರಾಕೃತ ಭಾಷೆಯ ಮಳವಳ್ಳಿ, ಬನವಾಸಿ, ತಾಳಗುಂದದ ಸ್ತಂಬಶಾಸನ, ಸನ್ನತಿ ಪರಿಸರದಲ್ಲಿ ದೊರೆತ ೬೦ಕ್ಕೂ ಹೆಚ್ಚಿನ ಪ್ರಾಕೃತ ಶಾಸನಗಳು ಲಭ್ಯವಾಗಿವೆ. ಉತ್ತರಭಾಗದಲ್ಲಿ ಬಳ್ಳಾರಿ ಶಾತವಾಹನರ ಕೊನೆಯ ದೊರೆ ವಾಶಿಷ್ಟ ಪುತ್ರ ಪುಳುಮಾಯಿಯ, ಎರಡು ಶಾಸನವು ಆದವಾನಿ, ಗದಗ, ಚಂದ್ರವಳ್ಳಿ ಭೂ ಶೋಧನೆಯಲ್ಲಿ ಕಂಡುಬಂದಿವೆ.

ಶಾತವಾಹನರದು ಬಹುದೊಡ್ಡ ರಾಜ್ಯವಾಗಿದ್ದರಿಂದ ಚುಟುಕುಲದ; ಮಹಾರಥಿಗಳು ಕರ್ನಾಟಕದ ಬಹುಮಟ್ಟಿನ ಸಾಮಂತರು. ಮಹಾರಥಿಗಳಾಗಿಯು ಮತ್ತೊಂದು ಮನೆತನದ ಚುಟುಗಳು ಈ ಮೊದಲು ಕರ್ನಾಟಕದಲ್ಲಿ ಮೌರ್ಯ ಸಾಮಂತರಾಗಿದ್ದವರು ಮೌರ್ಯರ ಅವನತಿಯ ನಂತರ ಚಿತ್ರದುರ್ಗ, ಕಾರವಾರ ಬನವಾಸಿಗಳಲ್ಲಿ ಸ್ವತಂತ್ರ್ಯವಾಗಿ ರಾಜ್ಯದ ಆಡಳಿತವನ್ನು ಮಹಾರಥಿಯರೆಂಬ ಅಭಿದಾನದೊಂದಿಗೆ ಆಳ್ವಿಕೆ ನಡೆಸಿದರು. ನಂತರ ಆನಂದ ವಂಶದವರು ಮಹಾರಥಿಗಳ ನಂತರ ಅಧಿಕಾರದಲ್ಲಿ ಮುಂದುವರಿದರು. ಇವರು ಸಮ್ಮಿಶ್ರಲೋಹಗಳನ್ನು ಸ್ವತಂತ್ರವಾಗಿ ಮುದ್ರಿಸಿ ನಾಣ್ಯ ರೂಪದಲ್ಲಿ ಬಿಡುಗಡೆ ಮಾಡಿದ್ದಾರೆ. ಶಾತವಾಹನ ರಾಜರು ಈ ವಂಶದವರಿಗೆ ಈ ತರದ ಅಧಿಕಾರ ಕೊಟ್ಟಿರುವುದು ವಿಶಿಷ್ಟ.

ಇಕ್ಷ್ವಾಕು ವಂಶದವರು ಹೊರತಂದ ನಾಣ್ಯವು ಶಾತವಾಹನರ ನಾಣ್ಯದ ಯಥಾವತ್ತಾದ ನಕಲಾಗಿದೆ. ಭೂಶೋದನೆಯ ಸಂದರ್ಭದಲ್ಲಿ ಶೋಧನೆಗೆ ಒಳಪಟ್ಟ ನಿವೇಶನವೆಂದರೆ ಸನ್ನತಿ,

ಬನವಾಸಿ, ಚಂದ್ರವಳ್ಳಿ, ವಡಂಗಾವೆ, ಮಾದವಪುರ ಇವೆಲ್ಲವೂ ಉಪಕೇಂದ್ರಗಳಾಗಿದ್ದು, ಗುಲ್ಬರ್ಗದ ಸನ್ನತಿಯು ಶಾತವಾಹನರ ನೇರ ಆಡಳಿತಕ್ಕೆ ಒಳಪಟ್ಟಿದ್ದಿತ್ತು. ನೇರವಾದ ಶಾತವಾಹನರ ಪ್ರಮುಖ ಆಡಳಿತ ಕೇಂದ್ರವೆಂದರೆ ಸನ್ನತಿ ಮತ್ತು ಬನವಾಸಿ ನಿವೇಶನ ಗುಲ್ಬರ್ಗ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನಲ್ಲಿವೆ. ಬನವಾಸಿ ಅಶೋಕನ ಕಾಲದ ಸುವರ್ಣಗಿರಿಯಾಗಿತ್ತು. ಇಲ್ಲಿ ಹಲವು ಕಬ್ಬಿಣದ ಮೊಳೆ, ಮೂಳೆ, ಬಳೆ, ಆಭರಣಗಳು ದೊರೆತಿದ್ದು ಈ ಪ್ರಾಂತ್ಯವು ನಗರವಾಗಿತ್ತು. ಕಾರಣ ಸುಧಾರಿತಗೊಂಡ ಇಟ್ಟಿಗೆಗಳಿಂದ ಸುತ್ತುವರಿದ ಕೋಟೆಯಿದೆ. ಬೌದ್ಧಸ್ತೂಪಗಳು ಶಿಲ್ಪ, ಸುಟ್ಟುಮಣ್ಣಿನ ಗೊಂಬೆಗಳು, ದಂತದಿಂದ ತಯಾರಿಸಿದ ಸ್ತೂಪದ ಆಕೃತಿಗಳು, ಕಬ್ಬಿಣ, ಬೆಳ್ಳಿ, ಸ್ಫಟಿಕ, ತಾಮ್ರ, ಕಲ್ಲಿನ ಒನಕೆ ಮುಂತಾದವು ಕಂಡು ಬಂದಿದ್ದು ೧೯೮೬ರಲ್ಲಿ ಸರಕು ಕೋಟೆಯ ತಳಪಾಯದಲ್ಲಿ ಸೀಸದ ನಾಣ್ಯಗಳು, ಬ್ರಾಹ್ಮಿಲಿಪಿಯ ಶಾಸನಗಳು ದೊರೆತಿದ್ದು ಈ ಶಾಸನಗಳಲ್ಲಿ ೮೦ಕ್ಕೂ ಅಧಿಕ ಶಾಸನಗಳು ಶಾತವಾಹನರಾಗಿವೆ. ಸ್ಮಾರಕ, ಶಿಲಾಬರಹ ಶಾಸನಗಳಲ್ಲಿ ಬೌದ್ಧ ವಿದ್ಯಾಲಯವು ಜೇವರ್ಗಿ ತಾಲ್ಲೂಕು ಔರಾದಲ್ಲಿ ಕಂಡು ಬರುವ ಜ್ಞಾನ ಕೇಂದ್ರವಾಗಿದ್ದು ಬನವಾಸಿ ನಿವೇಶನ ಕ್ರಿ.ಪೂ. ೩ನೇ ಶತಮಾನದಲ್ಲಿ ಬಹುದೊಡ್ಡ ನಗರವಾಗಿದ್ದು ಶಕರನ್ನು ಸೋಲಿಸಿ ಶಾತವಾಹನರ ಪ್ರತಿಷ್ಠೆ ಎತ್ತಿಹಿಡಿದ ಬಗ್ಗೆ ಗೌತಮಿಪುತ್ರ ಶಾತಕರ್ಣಿಯ ಅನೇಕ ನಾಣ್ಯಗಳು ಈ ಬನವಾಸಿಯ ನಿವೇಶನದಲ್ಲಿ ದೊರೆತಿವೆ. ಇದೊಂದು ಕೋಟೆ ನಗರವಾಗಿತ್ತು. ಆ ಕಾರಣದಿಂದಲೆ ಬೌದ್ಧ ಧರ್ಮದ ಕುರುಹುಗಳು ಕೆರೆ, ಶಿಲ್ಪ, ಶಾಸನಗಳಲ್ಲಿ ಕಂಡುಬಂದಿದ್ದು ಇಲ್ಲಿನ ಶಾಸನಗಳು ಪ್ರಾಕೃತ ಭಾಷೆಯಲ್ಲಿವೆ. ರೋಮ್‌ನೊಂದಿಗೆ ವ್ಯಾಪಾರ ಸಂಬಂಧ ಹೊಂದಿದ್ದು ದಿನಾರಿ ಎಂಬ ನಾಣ್ಯವು ೧ನೇ ಶತಮಾನದಾಗಿದ್ದು ಆಗಸ್ಟಸ್ ಮತ್ತು ಟೈಬೀರಿಯಸ್‌ಗೆ ಸೇರಿದ್ದವು. ರೋಮನ್ ಕ್ಯಾಮಿಯೋ ಎಂಬುವರು ಚಂದ್ರವಳ್ಳಿ ನಿವೇಶನ ಮತ್ತು ಕಣಿವೆ ಉತ್ಪನ್ನನದ ವರದಿ ಮಾಡಿದ ಹಾಗೆ ಚಂದ್ರವಳ್ಳಿಯು ಸ್ಥಳೀಯ ಸರ್ಕಾರದ ಆಡಳಿತ ಕೇಂದ್ರವಾಗಿ ಚೀನ ಮತ್ತು ರೋಮ್‌ನೊಂದಿಗೆ ಔದ್ಯಮಿಕ ಮತ್ತು ವಾಣಿಜ್ಯ ಕೇಂದ್ರವಾಗಿದ್ದು. ಕುರುಹುಗಳಾಗಿ ಮೂರ್ತಿಗಳು, ಬೊಂಬೆಗಳು, ನಾಣ್ಯಗಳು ದೊರೆತಿದ್ದು ಅವು ಸಿಡಕ ಮತ್ತು ಕಳಲಾಯ ಮಹಾರಥಿ. ಮುಡಾನಂದ ಚಟುಕಾನಂದರವರಿಗೆ ಸಂಬಂಧಿಸಿದ ನಾಣ್ಯಗಳಾದ ಸಿಂಹ ಚಿಹ್ನೆ, ಕುದುರೆ ಚಿಹ್ನೆ ಹಾಗೂ ಬಂಡೆ ಮೇಲಿನ ಬರಹವು ಚಿತ್ರದುರ್ಗ ಬೆಟ್ಟದಲ್ಲಿನ ನಾಗತೀರ್ಥ ಕೆಂಪಯ್ಯನ ಕೋಟೆ, ಬ್ರಹ್ಮಗಿರಿ ನಿವೇಶನದ ವಡಂಗಾವ, ಮಾದವಪುರ,. ಮಸ್ಕಿ, ಸಂಗನಕಲ್ಲು, ಅಕ್ಕಿಆಲೂರು, ನೂರುಂಬಾತ, ಬನಹಳ್ಳಿ, ತಲಕಾಡು, ರಾಜಘಟ್ಟ, ಚೈತ್ತಾಲಯ, ಬೆಳವಾಡಗಿ, ಹಾರಣಗೇರಿ, ಪಿಕ್ಲಿಹಾಳ, ಮ್ಯಾಕದೋಣೆ, ಬಳ್ಳಿಗಾವಿ, ಅನುವನಹಳ್ಳಿ ಮುಂತಾದ ಕುರುಹುಗಳು ದೊರೆತಿದ್ದು, ಕರ್ನಾಟಕದಲ್ಲಿ ಶಾತವಾಹನ ಸಂಸ್ಕೃತಿ ಹೊಂದಿರುವ ನೂರಾರು ಎಡೆಗಳಿವೆ ಮತ್ತು ಕೆಲವು ಸರ್ವೇಕ್ಷಣಕಾರ್ಯದಿಂದ ಗುರುತಿಸಲಾಗಿದೆ. ಇಂತವುಗಳ ಬಗ್ಗೆ ದಾಖಲೆ ಮತ್ತು ಶೋಧನೆ ನಡೆದರೆ ಮತ್ತಷ್ಟು ಮಾಹಿತಿ ಲಭ್ಯವಿದೆ ಎಂದಿದ್ದಾರೆ.

ಕರ್ನಾಟಕದಲ್ಲಿನ ಹಲವು ಶಾಸನ, ನಿವೇಶನ ಇತ್ಯಾದಿಗಳನ್ನು ವಸ್ತು ನಿಷ್ಠವಾಗಿ ಅಧ್ಯಯನಿಸಿ ಸಂಶೋಧನಾ ವಲಯಕ್ಕೆ ನೀಡಲು ನಿವೇಶನಗಳ ಅಧ್ಯಯನ ಕೈಗೊಂಡಿದ್ದು ಅವು ಈ

ಕೆಳಗಿನಂತಿವೆ. ಅಶೋಕನ ಶಾಸನಗಳು ಪ್ರಾಕೃತ ಬ್ರಾಹ್ಮಿಲಿಪಿಯಲ್ಲಿರುವುದರಿಂದ ಕೆಲವು ಅಧ್ಯಯನಕಾರರಿಗೆ, ಸಂಶೋಧಕರಿಗೆ ಮಾಹಿತಿಯ ಸಮಸ್ಯೆಯಾಗಬಾರದೆಂಬ ಕಾರಣಕ್ಕಾಗಿ ತೆಲಗಾವಿಯವರು ಕನ್ನಡಕ್ಕೆ ಅನುವಾದದ ನೆರವು ನೀಡಿ ವಿದ್ವಾಂಸರಿಗೆ ಅನುಕೂಲ ಮಾಡಿದ್ದಾರೆ. ಅಂತಹ ಅನುವಾದಗೊಂಡ ಶಾಸನಗಳಿಂದ ಕನ್ನಡ ಅಧ್ಯಯನಕಾರರಿಗೆ ಇಲ್ಲಿಯ ತನಕ ಕಾರಣವಾದ ಕೆಲವು ಒಳನೋಟಗಳು ಇದರ ಮೂಲಕ ದೊರೆಯುವಂತಾಗಿದೆ. ಅವುಗಳೆಂದರೆ ಬ್ರಹ್ಮಗಿರಿ ಶಾಸನ, ನಿಟ್ಟೂರು ಶಾಸನ(೨)ನೇ ಸನ್ನತ್ತಿ ಶಾಸನ ಹನ್ನೆರಡನೆಯ ಮುಖ್ಯ ಶಿಲಾಶಾಸನ ಭಾಗ, ಹದಿನಾಲ್ಕನೆಯ ಮುಖ್ಯ ಶಿಲಾಶಾಸನ, ಮೊದಲನೆಯ ಪ್ರತ್ಯೇಕ ಶಾಸನ, ಎರಡನೆಯ ಪ್ರತ್ಯೇಕ ಶಾಸನ, ಗಿರಿನಾರ್ ಶಾಸನ, ೯ನೇ ಶಿಲಾಶಾಸನ, ರಾಮಪೂರ್ವ ಸ್ತಂಭಾಶಾಸನ, ೫ನೇ ಶಾಸನ, ಡೆಲ್ಲಿ ಟೋಪ್ರಾಸ್ತಂಭ ಶಾಸನ, ೭ನೇ ಶಾಸನ ಮುಂತಾದ ಈ ಎಲ್ಲಾ ಶಾಸನಗಳಲ್ಲಿ ಅಶೋಕನು ತಾನು ನಡೆದುಬಂದ ಹಾದಿ, ಸಾಧನೆ. ಧರ್ಮಕ್ಕಾಗಿ ಅದರಲ್ಲೂ ಬೌದ್ಧ ಧರ್ಮದ ಪ್ರಗತಿಗೆ ಕೈಗೊಂಡ ಕ್ರಮಗಳು 'ದೇವನಾಂಪ್ರಿಯ'ನೆಂಬ ಬಿರುದಿನೊಂದಿಗೆ ಸರ್ವರನ್ನು ಶಾಂತಿ ನೆಲೆಯಿಂದ ನೋಡುವ ಪ್ರಯತ್ನವನ್ನು ಪ್ರಸ್ತುತ ಶಾಸನಗಳಿಂದ ತಿಳಿಯಬಹುದಾಗಿದೆ.[೩]

ಪುರಾತತ್ವ ನಿವೇಶನಗಳು (ಮೌರ್ಯ ಮತ್ತು ಶಾತವಾಹನರ ಕಾಲ)

ಕರ್ನಾಟಕದಲ್ಲಿ ಮೌರ್ಯ ಮತ್ತು ಶಾತವಾಹನರ ಕಾಲದ ಚರಿತ್ರೆ ತಿಳಿಯುವಲ್ಲಿ ಪ್ರಸ್ತುತ ಸಮಯದಲ್ಲಿಯೂ ಹಲವು ನಿವೇಶನಗಳಿವೆ. ಆ ನಿವೇಶನಗಳ ಮೂಲಕವೆ ಕರ್ನಾಟಕ ಇತಿಹಾಸಕ್ಕೆ ಅದರ ಸಂಸ್ಕೃತಿಯ ಪ್ರತಿಷ್ಠೆಗೆ ಸಾಕ್ಷಿಯಾಗಿ ಕರ್ನಾಟಕವು ಅಂತರ್‌ರಾಜ್ಯ ಮತ್ತು ವಿದೇಶದೊಂದಿಗೆ ಹೊಂದಿದ ವ್ಯಾಪಾರ–ವಾಣಿಜ್ಯ ಸಂಬಂಧಗಳು, ಸಂಸ್ಕೃತಿಗಳ ಮುಖಾಮುಖಿ ಯನ್ನು ನಿವೇಶನಗಳ ಮೂಲಕ ಕಂಡುಕೊಂಡಿವೆ. ಈ ನಿವೇಶನಗಳು ಬಹುಕಾಲದವರೆಗೂ ಅಜ್ಞಾತದಲ್ಲಿದ್ದು ಅಗತ್ಯವಿದ್ದ ಸಮಯಕ್ಕೆ, ಕ್ರಮಕ್ಕನುಗುಣವಾಗಿ ಬಹಳಷ್ಟು ಅಧ್ಯಯನಕಾರರು ಸಮಗ್ರವಾಗಿ ಒಂದೆಡೆ ತರಲು ಪ್ರಯತ್ನಿಸಿರಲಿಲ್ಲ. ಕೆಲವು ಅಧ್ಯಯನಕಾರರು ಪುರಾತತ್ವ ನಿವೇಶನಗಳನ್ನು ಪತ್ತೆ ಮಾಡಿದರೂ, ಅಲ್ಲಲ್ಲಿ ಪ್ರತ್ಯೇಕವೆಂಬಂತೆ ನೋಡಲಾಗುತ್ತಿತ್ತು. ಆದರೆ ತೆಲಗಾವಿಯವರು ಬಿಡಿ ಬಿಡಿಯಾಗಿದ್ದ ಮಾಹಿತಿಯನ್ನು ಅಧ್ಯಯನಕಾರರು ಗುರುತಿಸಿ ದಂತೆಯೆ ಅವೆಲ್ಲಾವುಗಳನ್ನು ಒಂದೆಡೆ ಸೇರಿಸಿ ಸಂಗ್ರಹ ಮಾಡಿ ಅಧ್ಯಯನಕ್ಕೆ ಅನುಕೂಲ ಮಾಡಿಕೊಡುವ ಜೊತೆಗೆ, ಹಲವು ಅನುಮಾನ, ಸಂಶಯಗಳಿಗೆ ಅವಕಾಶ ಕೊಡದಂತೆ ಸಂಶೋಧಕರಿಗೆ ಗೊಂದಲ ಉಂಟಾಗಬಾರದು ಎಂಬ ಕಾರಣಕ್ಕಾಗಿ ಕ್ರಮವಾಗಿ ಸಂಗ್ರಹಿಸಿ ಕಾಲಾನುಕ್ರಮವಾಗಿ ಗುರುತಿಸಿ, ಸಾರಸತ್ವ ಲೋಕಕ್ಕೆ ಅರ್ಪಿಸಿದವರೆಂದರೆ ತೆಲಗಾವಿಯವರು ಅರ್ಪಿಸಿದ ಅಂತಹ ಪುರಾತತ್ವ ನಿವೇಶನಗಳು ಈ ಕೆಳಗಿನಂತಿವೆ.

ಇಂದಿಗೆ ೭ ಲಕ್ಷದಿಂದ ೧.೨೫ ಲಕ್ಷ ವರ್ಷಗಳಷ್ಟು ಪೂರ್ವದ್ದು ಹಳೇ ಶಿಲಾಯುಗ ಸಂಸ್ಕೃತಿ. ಅದರಲ್ಲಿ ಆದಿಹಳೆ ಶಿಲಾಯುಗ ಸಂಸ್ಕೃತಿಯ ನಿವೇಶನಗಳೆಂದರೆ ತುಮಕೂರು ಜಿಲ್ಲೆ, ಗುಲ್ಬರ್ಗ ಜಿಲ್ಲೆ, ಬಾಗಲಕೋಟೆ ಜಿಲ್ಲೆ, ಬಿಜಾಪುರ ಜಿಲ್ಲೆ, ಬೆಳಗಾವಿ ಜಿಲ್ಲೆ, ಹಾಸನ ಜಿಲ್ಲೆ,

ಮಂಡ್ಯ ಜಿಲ್ಲೆ, ದಾವಣಗೆರೆ ಜಿಲ್ಲೆ, ಧಾರವಾಡ ಜಿಲ್ಲೆ, ಚಿತ್ರದುರ್ಗ ಜಿಲ್ಲೆ, ಬೀದರ್‌ಜಿಲ್ಲೆ, ರಾಯಚೂರು ಜಿಲ್ಲೆ, ಮೈಸೂರು ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ, ದಕ್ಷಿಣಕನ್ನಡ ಜಿಲ್ಲೆ ಈ ಎಲ್ಲಾ ಜಿಲ್ಲೆಗಳು ಹಾಗೂ ತಾಲ್ಲೂಕು, ಗ್ರಾಮಾಂತರ ಪ್ರದೇಶಗಳಲ್ಲಿ ಮೌರ್ಯ ಮತ್ತು ಶಾತವಾಹನರ ಸಂಸ್ಕೃತಿಗೆ ಸಂಬಂಧಿಸಿದ ಹಲವು ನಿವೇಶನಗಳು ಮತ್ತು ಹಲವು ವಸ್ತುಗಳು ದೊರೆತಿವೆ. (೧೦,೦೦೦ ವರ್ಷಗಳಿಂದ ೪೦,೦೦೦ ವರ್ಷಗಳಷ್ಟು ಪೂರ್ವದ್ದು) ಮಧ್ಯಹಳೆ ಶಿಲಾಯುಗದ ಸಂಸ್ಕೃತಿಯು ಕರ್ನಾಟಕದ ಜಿಲ್ಲೆಗಳಾದ ಕೊಪ್ಪಳ ಜಿಲ್ಲೆ, ಗುಲಬರ್ಗ ಜಿಲ್ಲೆ, ಬಾಗಲಕೋಟೆ ಜಿಲ್ಲೆ, ರಾಯಚೂರು ಜಿಲ್ಲೆ, ಬೆಳಗಾವಿ ಜಿಲ್ಲೆ, ತುಮಕೂರು ಜಿಲ್ಲೆ, ಬಿಜಾಪುರ ಜಿಲ್ಲೆ, ದಾವಣಗೆರೆ ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆ, ಬೀದರ್ ಜಿಲ್ಲೆ, ಧಾರವಾಡ ಜಿಲ್ಲೆ, ಶಿವಮೊಗ್ಗ ಜಿಲ್ಲೆ, ಮಂಡ್ಯಜಿಲ್ಲೆ, ಹಾವೇರಿ ಜಿಲ್ಲೆ, ಮೈಸೂರು ಜಿಲ್ಲೆ, ಹಾಸನ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ ಮುಂತಾದ ಪ್ರದೇಶಗಳಲ್ಲಿ ಮಾನವ ಸಂಸ್ಕೃತಿ ವಿಕಾಸದ ಹಲವು ಮುಖಗಳ ಆಕರಗಳು (ರಾಜಶಾಹಿ ಕಾಲಘಟ್ಟದ) ಜನ ಜೀವನ ಇತ್ಯಾದಿಗಳನ್ನು ಈ ಕಾಲದಲ್ಲಿ ದೊರೆಯಬಹುದಾದ ಆಕರಗಳನ್ನು ಈ ನಿವೇಶನಗಳ ಮೂಲಕ ಕಾಣಬಹುದಾಗಿದೆ.

ಹಳೆ ಶಿಲಾಯುಗದ ಅಂತ್ಯದ ಬದುಕು ಹೇಗಿತ್ತು ಎಂಬುದನ್ನು ಕೆಲವು ಪುರಾತತ್ವ ನಿವೇಶನಗಳ ಮೂಲಕ ಪತ್ತೆ ಮಾಡಿದ್ದಾರೆ(ಇಂದಿಗೆ ೧೦.೦೦೦ಗಳಷ್ಟು ಹಿಂದೆ ೨೫.೦೦೦ ವರ್ಷಗಳಷ್ಟು ಪೂರ್ವ ಅಂತ್ಯ ಹಳೇ ಶಿಲಾಯುಗದ ಸಂಸ್ಕೃತಿ). ಅಲ್ಲಿ ದೊರೆಯುವ ಮಾನವರ ಗೃಹಉಪಯೋಗಿ ಪಳೆಯುಳಿಕೆಗಳು. ಪ್ರಾಣಿಪಕ್ಷಿಗಳು, ನಾಣ್ಯಗಳು, ಪರಿಕರಗಳು ಬದುಕಿನ ರೂಪಾಂತರಗಳನ್ನು ಆಸಕ್ತಿ ಅಭಿರುಚಿಗಳನ್ನು ಈ ನಿವೇಶನಗಳ ಮೂಲಕ ಗುರುತಿಸಲಾಗಿದೆ. ಅವುಗಳೆಂದರೆ ಬಾಗಲಕೋಟೆ ಜಿಲ್ಲೆ, ಗದಗಜಿಲ್ಲೆ, ಚಿಕ್ಕಮಗಳೂರು ಜಿಲ್ಲೆ, ದಾವಣಗೆರೆ ಜಿಲ್ಲೆ, ಬೀದರ ಜಿಲ್ಲೆ, ಬಿಜಾಪುರ ಜಿಲ್ಲೆ, ದಕ್ಷಿಣಾಕನ್ನಡ ಜಿಲ್ಲೆ ಮುಂತಾದ ಕಡೆಗಳಲ್ಲಿ ದೊರೆಯುವ ನಿವೇಶನವು ಇಂತಹ ಮಹತ್ವದ ಐತಿಹಾಸಿಕ ಸಂಶೋಧನೆಗೆ ಮಾಹಿತಿ ಲಭಿಸುವಂತಹ ನಿವೇಶನಗಳು ಲಭ್ಯವಾಗಿವೆ.

ಸೂಕ್ಷ್ಮ ಶಿಲಾಯುಗ (೨೫೦೦ ವರ್ಷಗಳಿಂದ ೧೦೦೦ ವರ್ಷ ಪೂರ್ವದ್ದು):– ಮಾನವ ವಿಕಾಸಗೊಂಡಂತೆ ಆತನ ಆಸಕ್ತಿ ಅಭಿರುಚಿ ಜ್ಞಾನವಿಲ್ಲದೂ ವಿಕಾಸಗೊಳ್ಳುತ್ತವೆ. ವಿಕಾಸಗೊಂಡಂತೆ ಅಂದಿನ ಸಮಾಜವು ಸ್ಥಿತ್ಯಂತರಕ್ಕೆ ಒಳಗಾಗುತ್ತದೆ. ಅಂತಹ ಸ್ಥಿತ್ಯಂತರ ಕಂಡುಕೊಂಡ ಪುರಾತತ್ವ ನಿವೇಶನಗಳೆಂದರೆ ಗುಲ್ಬರ್ಗ ಜಿಲ್ಲೆ, ತುಮಕೂರು ಜಿಲ್ಲೆ, ಬಿಜಾಪುರ ಜಿಲ್ಲೆ, ಬಾಗಲಕೋಟೆ ಜಿಲ್ಲೆ, ಬಳ್ಳಾರಿ ಜಿಲ್ಲೆ, ಬೀದರ್ ಜಿಲ್ಲೆ, ದಾವಣಗೆರೆ ಜಿಲ್ಲೆ, ಬೆಳಗಾವಿ ಜಿಲ್ಲೆ, ಹಾವೇರಿ ಜಿಲ್ಲೆ, ಕೊಪ್ಪಳ ಜಿಲ್ಲೆ, ಚಿತ್ರದುರ್ಗ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ, ಚಿಕ್ಕಮಗಳೂರು ಜಿಲ್ಲೆ, ಚಾಮರಾಜನಗರ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ, ಹಾಸನ ಜಿಲ್ಲೆ, ಮೈಸೂರು ಜಿಲ್ಲೆ, ಮಂಡ್ಯಜಿಲ್ಲೆ, ರಾಯಚೂರು ಜಿಲ್ಲೆ, ಧಾರವಾಡ ಜಿಲ್ಲೆಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸ್ಥಿತ್ಯಂತರಗೊಂಡ ಸೂಕ್ಷ್ಮ ಶಿಲಾಯುಗದ ನಿವೇಶನಗಳು ಕಂಡುಬರುತ್ತವೆ.

ನೂತನ ಶಿಲಾಯುಗ (ಕ್ರಿಪೂ. ೨೩೦೦ ಕಾಲಮಾನ):- ಶಿಲಾ ತಾಮ್ರಯುಗದ ಸಂಸ್ಕೃತಿಯ ಮೂಲಕ ಮಾನವನ ವಿಕಾಸವು ಸೂಕ್ಷ್ಮ ಯುಗದಿಂದ ನೂತನ ಶಿಲಾಯುಗದ ಸ್ಥಿತ್ಯಂತರಗೊಂಡಿತು. ಈ ಯುಗದ ಆರಂಭವನ್ನು ತಾಮ್ರಯುಗದ ಮೂಲಕ ಗುರುತಿಸಬಹುದಾಗಿದೆ. ಆ ಯುಗದ ಪಳೆಯುಳಿಕೆಗಳು ಬಳ್ಳಾರಿ ಜಿಲ್ಲೆ, ಬಿಜಾಪುರ ಜಿಲ್ಲೆ, ಕೊಪ್ಪಳ ಜಿಲ್ಲೆ, ಬೀದರ್ ಜಿಲ್ಲೆ, ಗುಲ್ಬರ್ಗ ಜಿಲ್ಲೆ, ರಾಯಚೂರು ಜಿಲ್ಲೆ, ಹಾವೇರಿ ಜಿಲ್ಲೆ, ಬಾಗಲಕೋಟೆ ಜಿಲ್ಲೆ, ಗದಗ ಜಿಲ್ಲೆ, ಬೆಳಗಾವಿ ಜಿಲ್ಲೆ, ದಾವಣಗೆರೆ ಜಿಲ್ಲೆ, ಶಿವಮೊಗ್ಗ ಜಿಲ್ಲೆ, ಮೈಸೂರು ಜಿಲ್ಲೆ, ಚಾಮರಾಜನಗರ ಜಿಲ್ಲೆ, ತುಮಕೂರು ಜಿಲ್ಲೆ, ಕೋಲಾರ ಜಿಲ್ಲೆ, ಚಿತ್ರದುರ್ಗ ಜಿಲ್ಲೆ, ಮಂಡ್ಯ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಮತ್ತು ನಗರ ಜಿಲ್ಲೆ, ಧಾರವಾಡ ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆ, ಹಾಸನ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ ಹಾಗೂ ತಾಲ್ಲೂಕು ಗ್ರಾಮಾಂತರ ಪ್ರದೇಶಗಳಲ್ಲಿ ಕಂಡುಬರುವ ನಿವೇಶನಗಳ ಮೂಲಕ ಸಂಸ್ಕೃತಿಯ ವಿಕಾಸದ ಹಾದಿಯ ಹಲವು ನೋಟಗಳು ದೊರೆಯುತ್ತವೆ.

ಕಬ್ಬಿಣ ಯುಗದ ಬೃಹತ್ ಶಿಲಾಯುಗ (ಕ್ರಿಪೂ. ೬೦೦ ಕ್ರಿಶ. ೧ನೇ ಶತಮಾನ):- ಕಬ್ಬಿಣ ಯುಗವು ಮಾನವನ ಬದುಕಿನ ಉತ್ತುಂಗ ಮಟ್ಟದ ಸಂಸ್ಕೃತಿ ಮತ್ತು ವಿಕಾಸಕ್ಕೆ ಮುನ್ನುಡಿ ಬರೆಯುವಂತದ್ದಾಗಿದ್ದು ಮಾನವನ ಬಳಕೆಯ ಕುರುಹುಗಳಾಗಿ ಕೋಲಾರ ಜಿಲ್ಲೆ, ಚಾಮರಾಜ ನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಮತ್ತು ನಗರ ಜಿಲ್ಲೆ, ತುಮಕೂರು ಜಿಲ್ಲೆ, ಉಡುಪಿ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ, ಗುಲ್ಬರ್ಗ ಜಿಲ್ಲೆ, ಕೊಪ್ಪಳ ಜಿಲ್ಲೆ, ಬಳ್ಳಾರಿ ಜಿಲ್ಲೆ, ಗದಗ ಜಿಲ್ಲೆ, ಬೆಳಗಾವಿ ಜಿಲ್ಲೆ, ಹಾವೇರಿ ಜಿಲ್ಲೆ, ಬಿಜಾಪುರ ಜಿಲ್ಲೆ, ಬಾಗಲಕೋಟೆ ಜಿಲ್ಲೆ, ರಾಯಚೂರು ಜಿಲ್ಲೆ, ಬೀದರ್ ಜಿಲ್ಲೆ, ದಾವಣಗೆರೆ ಜಿಲ್ಲೆ, ಶಿವಮೊಗ್ಗ ಜಿಲ್ಲೆ, ಮೈಸೂರು ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆ, ಮಂಡ್ಯ ಜಿಲ್ಲೆ, ಚಿತ್ರದುರ್ಗ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ, ಧಾರವಾಡ ಜಿಲ್ಲೆ, ಹಾಸನ ಜಿಲ್ಲೆ ಮುಂತಾದೆಡೆ ಕಬ್ಬಿಣಯುಗಕ್ಕೆ ಸಂಬಂಧಿಸಿದ ನಿಕ್ಷೇಪ ಹಾಗೂ ಪುರಾತತ್ವ ನಿವೇಶನಗಳು ದೊರೆಯುತ್ತವೆ. ಈ ಮೇಲಿನ ಎಲ್ಲಾ ಯುಗಗಳಲ್ಲಿ ಮಾನವ ಬದುಕಿನ ವಿಕಾಸ ಅಭಿವೃದ್ಧಿಗೆ ಸಂಬಂಧಿಸಿದ ಸಾಕ್ಷಿಗಳನ್ನು ಇತಿಹಾಸ ಗುರುತಿಸುವಂತೆ ಒಂದು ದಾಖಲೆಯ ರೂಪದಲ್ಲಿ ಕಂಡಬರುವುದೆಂದರೆ ಸುಶಿಕ್ಷಿತ ಸಂಸ್ಕೃತಿ ಯುಗ ಎಂದು ವಿದ್ಯುತ್ ವಲಯ ಗುರುತಿಸುತ್ತದೆ. ಹೀಗೆ ಗುರುತಿಸುವುದು ಅಧ್ಯಯನಕಾರರು, ಅಧ್ಯಯದ ಹಿತದೃಷ್ಟಿಯಿಂದ ಮಾಡಿಕೊಂಡ ಮಾನದಂಡವಾಗಿದೆ. ಮಾನದಂಡ ಅಗತ್ಯವಿಲ್ಲದ ಸಂಸ್ಕೃತಿಯು ಅನೇಕ ಕಡೆಗಳಲ್ಲಿ ಬೆಳಕು ಕಂಡರು ಇತಿಹಾಸದ ಕಾಲಘಟ್ಟವನ್ನು ಸಂಸ್ಕೃತಿಯ ಮೂಲಕ ಗುರುತಿಸುವುದು ಚರಿತ್ರೆಯ ಸ್ವರೂಪವಾಗಿದೆ.

ಇತಿಹಾಸ ಮಾನವನ ಸಮಗ್ರ ಬದುಕಿನ ವಿಕಾಸ ಮತ್ತು ಸ್ಥಿತ್ಯಂತರ ಕುರಿತಾದ್ದುದಾಗಿದ್ದು, ಸ್ಥಿತ್ಯಂತರದ ಸ್ಥಿತಿಯನ್ನು ಆಯಾ ಕಾಲಘಟ್ಟದಲ್ಲಿ, ಕಾಲಘಟ್ಟದ ಪರಿಕರಗಳನ್ನು ಬೀದರ್ ಜಿಲ್ಲೆ, ಹಾವೇರಿ ಜಿಲ್ಲೆ, ಗುಲ್ಬರ್ಗ ಜಿಲ್ಲೆ, ಗದಗ ಜಿಲ್ಲೆ, ಕೊಪ್ಪಳ ಜಿಲ್ಲೆ, ಧಾರವಾಡ ಜಿಲ್ಲೆ, ಬಾಗಲಕೋಟೆ

ಜಿಲ್ಲೆ, ಬಿಜಾಪುರ ಜಿಲ್ಲೆ, ರಾಯಚೂರು ಜಿಲ್ಲೆ, ಬಳ್ಳಾರಿ ಜಿಲ್ಲೆ, ಬೆಳಗಾವಿ ಜಿಲ್ಲೆ, ತುಮಕೂರು ಜಿಲ್ಲೆ, ಮೈಸೂರು ಜಿಲ್ಲೆ, ಚಾಮರಾಜನಗರ ಜಿಲ್ಲೆ, ಮಂಡ್ಯ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಮತ್ತು ನಗರ ಜಿಲ್ಲೆ, ಶಿವಮೊಗ್ಗ ಜಿಲ್ಲೆ, ದಾವಣಗೆರೆ ಜಿಲ್ಲೆ, ಚಿತ್ರದುರ್ಗ ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆ, ಹಾಸನ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ ಮುಂತಾಡೆಗಳಲ್ಲಿ ಕಾಣಬಹುದಾಗಿದೆ.

೪.೪. ವಿಜಯನಗರದ ರಾಜಪ್ರಭುತ್ವ

ಚರಿತ್ರೆಯ ಸಂಶೋಧನಾ ಸಂದರ್ಭದಲ್ಲಿ ಉಳಿದೆಲ್ಲಾ ದಾಖಲೆಗಳಿಗಿಂತ ಹೆಚ್ಚು ಉಪಯುಕ್ತ ದಾಖಲೆಗಳೆಂದರೆ ಬಖೈರುಗಳು, ಆಯಾಕಾಲಘಟ್ಟದ, ರಾಜನ ಆಡಳಿತ, ಹಲವು ಪ್ರಸಂಗಗಳು ರಾಜಕೀಯ ವರದಿ ಇತ್ಯಾದಿಗಳನ್ನು ಹೆಚ್ಚು ನಂಬಲಾರ್ಹವಾದುದು ಎಂಬ ಅಭಿಪ್ರಾಯ ಸಂಶೋಧನಾ ವಲಯದಲ್ಲಿನ ಚರ್ಚಿತ ವಿಷಯ. ಏಕೆಂದರೆ ಒಖೈರು ಮತ್ತು ನಾಮವಳಿಗಿಂತ ನಿಖರ ಕಾರಣ ಯಾವುದೊ ಒಬ್ಬ ಜನ ಸಾಮಾನ್ಯ ವ್ಯಕ್ತಿಯಿಂದ ರಚನೆಯಾಗಿರದೆ ಆಯಾ ಸಂಸ್ಥಾನದಲ್ಲಿನ ಸೇವಕರು, ಅಧಿಕಾರಿಗಳು, ಪ್ರತಿನಿಧಿಗಳು, ಸಾಮಂತರು, ರಾಯಭಾರಿಗಳು ದಾಖಲಿಸಿರುವಂತವಾಗಿವೆ. ಸಮಕಾಲೀನ ಸಂದರ್ಭದ ರಾಜಕಾರಣದಲ್ಲಿ ಹೇಗೆ ವಿದೇಶಾಂಗ ಸಚಿವರಿದ್ದಂತೆ ಅಂದಿನ ಕಾಲದಲ್ಲಿ ಒಬ್ಬರು ಮತ್ತೊಬ್ಬರ ಆಸ್ಥಾನಗಳಲ್ಲಿ ರಾಯಭಾರಿಗಳಾಗಿದ್ದರು. ಅಂತವರಿಂದ ರಚಿಸಿದ ಈ ದಾಖಲೆಗಳು ರಾಜವಂಶಕ್ಕೆ ಸೇರಿದ ರಾಜಕೀಯ ದಾಖಲೆಗಳಾಗಿವೆ. ಇವುಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ವಿಜಯನಗರದ ಚರಿತ್ರೆಗೆ ಸಂಬಂಧಿಸಿದಂತೆ ತೆಲುಗಿನಲ್ಲಿ ರಚಿತವಾದ ರಾಯವಾಚಕಮು ಹಾಗೂ ಕನ್ನಡದ ಶ್ರೀಕೃಷ್ಣದೇವರಾಯನ ದಿನಚರಿಗಳು ಬಹುಮುಖ್ಯವಾಗಿವೆ.

ತೆಲಗಾವಿಯವರು ಚಿತ್ರದುರ್ಗದ ಚರಿತ್ರೆ ಸಂಶೋಧಿಸುವ ಸಂದರ್ಭದಲ್ಲಿ ಚಿತ್ರದುರ್ಗದ ಬಖೈರು, ಹೈದರ್-ನಾಮೆ ಮುಂತಾದ ದಾಖಲೆಗಳ ಅಧ್ಯಯನದ ಸಂದರ್ಭದಲ್ಲಿ ಆಕಸ್ಮಿಕವಾಗಿ ಅಧ್ಯಯನದ ದೃಷ್ಟಿ ವಿಜಯನಗರದತ್ತ ಬಿದ್ದಿತು. ಪರಿಣಾಮ ಚಿತ್ರದುರ್ಗದ ಬಖೈರು ಮತ್ತು ಹೈದರ್-ನಾಮೆ ಬಖೈರನ ಜೊತೆಗೆ ರಾಮರಾಜನ ಒಖೈರು ಅರಿಯುವುದು ಅನಿವಾರ್ಯವಾಯಿತು. ಆದ್ದರಿಂದಲೆ ಕೆ.ಎಸ್. ನೀಲಕಂಠಶಾಸ್ತ್ರಿ ಮತ್ತು ಎನ್. ವೆಂಕಟರಮಣಯ್ಯನವರು ಒಟ್ಟಾಗಿ ಪ್ರಕಟಿಸಿದ ಬಖೈರ್‌ನ ಮೂಲಪಾಠ ಪುನರ್ ಅಧ್ಯಯನದ ಅನಿವಾರ್ಯತೆ ತಂದಿತು.[೪]

ಚರಿತ್ರೆಕಾರರು ನಿರ್ಣಯಿಸಿದ ಪ್ರಕಾರ ರಾಮರಾಜನ ಬಖೈರನ್ನು ನಿರೂಪಿಸಿದ ರಾಮಾಜಿ ತಿರುಮಲ ಹರಿಕಾರಿಯು ಕ್ರಿ.ಶ.೧೫೮೪ ರಿಂದ ೧೬೧೪ರವರೆಗೆ ಪೆನ್ನುಗೊಂಡದ ಅರಸ ಇಮ್ಮಡಿ ವೆಂಕಟನ ಆಸ್ಥಾನದಲ್ಲಿದ್ದು, ರಕ್ಕಸಗಿ-ತಂಗಡಗಿ ಎಂಬ ನಿರ್ಣಾಯಕ ಯುದ್ಧ ನಡೆಯುವ ಒಂದು ವರ್ಷ ಮೊದಲೆ ವಿಜಯನಗರದಲ್ಲಿನ ರಾಮರಾಯನ ಆಸ್ಥಾನದಲ್ಲಿದ್ದನೆಂಬುದು ದೃಢಪಟ್ಟಿದ್ದು ೧೫೬೪-೬೫ರಲ್ಲಿಯೆ ವಿಜಯನಗರದಲ್ಲಿ ಸಂಭವಿಸಿದ ಸಂಗತಿಗಳನ್ನು ತನ್ನ ಬಖೈರಿನಲ್ಲಿ ನಿರೂಪಿಸಲು ಯತ್ನಿಸಿರುವುದಾಗಿ ಕಂಡುಬರುತ್ತದೆ. ಹಾಗೆಯೆ ಕೆಲವು ಸಂಗತಿಗಳನ್ನು ಯುದ್ಧ ನಡೆದು ೩೪ ವರ್ಷಗಳ ತರುವಾಯ ಯುದ್ಧದ ಘಟನೆಗಳನ್ನು ಬಖೈರು ರೂಪದಲ್ಲಿಯೇ

ಇಮ್ಮಡಿ ವೆಂಕಟರ ಆದೇಶದ ಮೇರೆಗೆ ಪೂರ್ಣವಾಗಿ ಮುಕ್ತಾಯಗೊಳಿಸಿದನೆಂಬುದು ಕೆಲವು ದಾಖಲೆಗಳು ಹೇಳುತ್ತಿವೆ.

ಆದರೆ ಕೆಲವು ಕಾಲ್ಪನಿಕ, ಕೆಲವು ಸಲ ಅನಿವಾರ್ಯತೆಯಿಂದಾದ ಅತಿಶಯೋಕ್ತಿ ಇರುವುದರಿಂದಲೂ ಕೆಲವು ಸಂಶೋಧಕರು ಗೊಂದಲಕ್ಕೆ ಒಳಗಾದರೆ ಮತ್ತೆ ಕೆಲವು ಸಂಶೋಧಕರಿಗೆ ಭಾಷೆಯು ಕ್ಲಿಷ್ಟವಾಗಿರುವುದರಿಂದ ಅಸ್ಪಷ್ಟತೆ ಕಾಣುವುದು ಸಹಜವಾಗಿದೆ. ಆದರೆ ಅಧ್ಯಯನಕಾರನು ನಿರೀಕ್ಷಿಸುವ ಮಟ್ಟಿಗೆ ಅಧ್ಯಯನಕ್ಕೆ ಒಳಪಡಿಸಿ ಇಂತಹ ಮಹತ್ವ ಕೃತಿಯನ್ನು ವಿಮರ್ಶಿಸಿ ಕನ್ನಡಿಗರ ಸಂಶೋಧನಾಸಕ್ತರ ಕೈಗೆ ಇಟ್ಟವರೆಂದರೆ ಲಕ್ಷ್ಮಣ್ ತೆಲಗಾವಿಯವರು. ಇಲ್ಲಿ ಅಧ್ಯಯನಕಾರರು ಕಂಡುಕೊಂಡ ವಾಸ್ತವಾಂಶವೆಂದರೆ ರಾಮರಾಯನು ಆಕಸ್ಮಿಕವಾಗಿ ನಿಜಾಮಶಾಹಿ ಸೈನಿಕರ ಕೈಗೆ ಸಿಕ್ಕು, ಸುರಕ್ಷಿತವಾಗಿ ನಿಜಾಮಶಾಹಿಯ ಹತ್ತಿರ ಬರುತ್ತಾನೆ. ಆದರೆ ಅಲ್ಲಿ ಬಾದಶಹನ ಆದೇಶದಿಂದಾಗಿ ರಾಮರಾಯನನ್ನು ಸಾಯಿಸಲಾಗಿ ನಂತರ, ವಿಜಯನಗರದ ಸೈನ್ಯವನ್ನು ಹೆದರಿಸಲಿಕ್ಕೆ ತಲೆಯನ್ನು ಪ್ರದರ್ಶಿಸಲಾಯಿತು. ರಾಮರಾಯ ಸತ್ತ ನಂತರ ರಾಮರಾಯನ ರುಂಡವನ್ನು ಸಾಕುಮಗ ಬಿಜಾಪುರದ ಆದಿಲ್‌ಶಾಹನು ಕಾಶಿಗೆ ಕಳುಹಿಸಿ ಕೊನೆಯ ಗೌರವ ಸಲ್ಲಿಸಿದನೆಂದು ಈ ಬಖೈರಿನಲ್ಲಿ ಮಾತ್ರ ಪ್ರಸ್ತಾಪಿಸಲಾಗಿದೆ.

ಈ ಕಾರಣಕ್ಕಾಗಿಯೇ ಲಕ್ಷ್ಮಣ್ ತೆಲಗಾವಿಯವರು ಯುದ್ಧವನ್ನು ಅಧಿಕೃತ ಮತ್ತು ಸಮರ್ಥವಾಗಿ ನಿಖರವಾಗಿ ದಾಖಲಿಸಿರುವ ಏಕೈಕ ಹಿಂದು ಆಧಾರದ ಗ್ರಂಥವಾಗಿ ರಾಮರಾಜನ ಬಖೈರ್‌ನ್ನು ಸಂಶೋಧನಾ ವಲಯದಲ್ಲಿ ಚರ್ಚೆ ಆಗುವಂತೆ ಮಾಡಿದವರು ತೆಲಗಾವಿ ಮಾತ್ರ.[೫]

ಸುವರ್ಣ ಕರ್ನಾಟಕ ಸವಿ ನೆನಪಿಗಾಗಿ ಕನ್ನಡ ವಿಶ್ವವಿದ್ಯಾಲಯವು ಪ್ರಸಾರಾಂಗ ೨೦೦೬ರಲ್ಲಿ ಕೆಲವು ನಾಡು-ನುಡಿ-ಸಂಸ್ಕೃತಿ-ಕಲೆ ಗುರುತಿಸಿ, ಪುನರ್ ಕಟ್ಟುವ ಕೆಲಸಕ್ಕೆ ಮುಂದಾಗಿದ್ದು ಲಕ್ಷ್ಮಣ್ ತೆಲಗಾವಿಯವರ ಸಂಪಾದಕತ್ವದಲ್ಲಿ ಮೂಡಿ ಬಂದ ಜೀರ್ಣ ವಿಜಯನಗರಾದರ್ಶನಂ ಒಂದಾಗಿದೆ. ಹಂಪಿಯನ್ನು ಕುರಿತು ಹಲವು ಇತಿಹಾಸಕಾರರು, ಸಾಕಷ್ಟು ಮಾಹಿತಿಯನ್ನು ನೀಡಿದರೂ ಇನ್ನೂ ಅದೆಷ್ಟೂ ವಿಷಯಗಳು. ಬಗೆದಂತೆ ಬರುವ ಹಾಗೆ ವಿಷಯಗಳ ಸರಮಾಲೆಯೆ ಬರುತ್ತಿವೆ. ಹಂಪಿ ಅಥವಾ ವಿಜಯನಗರವನ್ನು ಕುರಿತಾದ ಅಧ್ಯಯನಕ್ಕೆ ಮತ್ತೊಂದು ವಿಶಿಷ್ಟ ಆಕರದ ದಾಖಲೆ ಎಂದರೆ ಈ ಕೃತಿಯಾಗಿದೆ. ಇದರಿಂದ ಹಲವು ಮಾಹಿತಿಗಳು ಲಭ್ಯವಿದ್ದು ವಿಜಯನಗರದ ಸೂಕ್ಷ್ಮ ಸಂಶೋಧನೆಗೆ ಬಳಸಿಕೊಂಡವರೆಂದರೆ ಲಕ್ಷ್ಮಣ್ ತೆಲಗಾವಿಯವರು.

ಇತಿಹಾಸ ಎಂಬುದು ನಿರಂತರ ಮತ್ತು ಜೀವಂತ ಹಾಗೂ ಚಲನಶೀಲತೆಯಿಂದ ಕೂಡಿರುವಂತದ್ದು. ಯಾವುದೇ ಒಂದು ಚರಿತ್ರೆಯು ಹೀಗೆಯಿತ್ತು. ಹೀಗೆಯೇ ಇರಬೇಕು, ಮುಂದೆಯೂ ಹೀಗೆಯೆ ನಡೆಯಬೇಕೆಂಬುದು ಚರಿತ್ರೆಯ ಸ್ವರೂಪವಲ್ಲ. ಏಕೆಂದರೆ ಕೆಲವೆ ಕೆಲವರಿಗೆ ಮಾತ್ರ ಇತಿಹಾಸ ಎಂಬ ಪರಿಕಲ್ಪನೆಯ ಬಗ್ಗೆ ವಿಶೇಷ ಮನೋಭಾವ ಬಂದಿರುತ್ತದೆ. ಕಾರಣ ಮಾನವನ ಮಾನವೀಯ ಬದುಕು ಬದಲಾಗುತ್ತಿದೆ. ಸಾಕ್ಷರತೆ ಹೆಚ್ಚುತ್ತಿದೆ. ವಿಜ್ಞಾನ

ಮತ್ತು ತಂತ್ರಜ್ಞಾನ ಹಿಂದೆಂದಿಗಿಂತ ಹೆಚ್ಚು ಬಳಕೆಯಾಗುತ್ತಿದೆ. ಕೆಲವೆ ಕೆಲವು ಮನೋಭಾವದವರ ಪ್ರಕಾರ ಇತಿಹಾಸ ಎಂಬುದು ಕೆಲವರಿಗೆ ಮಾತ್ರ ಸ್ವತ್ತು ಇನ್ನುಳಿದ ಮತ್ತೊಂದು ವರ್ಗದ ಇತಿಹಾಸವಲ್ಲ ಎಂಬುದು ಕೆಲವು ಸಂಕುಚಿತ ಮನಸ್ಸಿನವರ ವಾದವಾಗಿದೆ. ಆದರೆ ಇಂದು ಇಂತಹ ಮನೋವ್ಯಾಧಿಯನ್ನು ಒಪ್ಪಲು ಸಾಧ್ಯವಿಲ್ಲವಾಗಿದೆ.

ಚರಿತ್ರೆಯನ್ನು ಎಷ್ಟೇ ಹುರುಪಿಯಿಂದ ಉತ್ಸಾಹದಿಂದ, ಇತಿಹಾಸಕಾರ ಬಗೆದರು ಅಗೋಚರವಾದದ್ದು: ಇನ್ನೂ ಇರುತ್ತದೆ. ಅದಕ್ಕೆ ವಿಜಯನಗರ ಇತಿಹಾಸ ಒಂದು ಉದಾಹರಣೆಯಾಗಿದೆ. ಆದರೆ ಅದರ ಸಮಕಾಲೀನ ಪ್ರತಿಷ್ಠೆಯ ಪಾಳೆಯಗಾರಶಾಹಿ ಚಿತ್ರದುರ್ಗ ಮತ್ತು ಇತರೇ ಪಾಳೆಯಪಟ್ಟುಗಳ ಇತಿಹಾಸ ಪೂರ್ಣ ಮುಗಿದ ಅಧ್ಯಾಯ, ಅಲ್ಲಿ ಶೋಧಿಸಬೇಕಾದುದ್ದು ಏನು ಇಲ್ಲವೆಂಬ ತಿರ್ಮಾನಕ್ಕೆ ಹಲವು ವಿದ್ವಾಂಸರು ಬಂದು ಬಿಡುತ್ತಾರೆ. ವಿಜಯನಗರ ಮತ್ತು ಮೈಸೂರು ಸಂಸ್ಥಾನದ ಬಗ್ಗೆ ಹೊಂದಿರುವಂತ ಸಂಶೋಧನಾ ತುಡಿತ ಪಾಳೆಯಗಾರರ ಇತಿಹಾಸಕ್ಕೆ ಇಲ್ಲದಿರುವುದು ತಾರತಮ್ಯತೆಯ ಸಂಶೋಧನ ಗುಣವಾಗಿದೆ. ಈ ಕಾರಣಕ್ಕಾಗಿ ಹೊಸ ಆಲೋಚನೆಗಳನ್ನು ಮೈಗೂಡಿಸಿಕೊಂಡು ಶಿಸ್ತು ಬದ್ಧವಾಗಿ ವ್ಯಕ್ತಿಗಳ, ವಸ್ತುಗಳ ಮರುಶೋಧನೆಗಳು, ಸಂಶೋಧನದ ಹೊಸ ದೃಷ್ಟಿ–ಧೋರಣೆಗಳ ಚಿಂತನೆ ನಡೆಸಿದ್ದವರು ತೆಲಗಾವಿಯವರು. ಇವರು ಇತಿಹಾಸ ಪುನರ್‌ರಚಿಸುವುದರೊಂದಿಗೆ ಎಲ್ಲಾ ಕಾಲಮಾನಗಳಲ್ಲಿ ಸಂಶೋಧಕರಲ್ಲಿರಬಹುದಾದ ದೃಷ್ಟಿಕೋನಗಳನ್ನು ಅರಿತು ತಮ್ಮ ಸಂಶೋಧನಾ ದಾರಿಯನ್ನು ಬದಲಿಸಿಕೊಂಡರು. ಈ ತನಕ ಇತಿಹಾಸದ ಅಧ್ಯಯನಗಳು ಕೇವಲ ಪ್ರಾಂತೀಯ, ಮತೀಯ, ಪಂಥೀಯ, ಭಾಷೆಯ ನೆಲೆಯಿಂದಲೂ, ವಸಾಹತುಶಾಹಿಯ ಪರ ಮತ್ತು ವಿರೋಧವಾಗಿಯೇ ಬೆಳೆದು ಬರುತ್ತಿರುವುದು. ಒಂದು ರೀತಿಯ ಅಪಾಯಕಾರಿಯದುದೆಂಬುದನ್ನು ಪತ್ತೆ ಮಾಡುತ್ತಾರೆ. ಇಂದಿನ ದಿನಮಾನಗಳಲ್ಲಿ ಬಹು ಜನರಿಗೆ ಪ್ರತಿಯೊಂದು ಘಟನೆಯ ಹಿನ್ನೆಲೆಯು ಬೇಕು. ಆದರೆ ಶೋಧಕರಿಗೆ ಬೇಕಾಗಿರುವುದೇ ಬೇರೆ. ಕೇವಲ ಹೆಸರಿಗಾಗಿ ಪ್ರತಿಷ್ಠೆಗಾಗಿ, ಒಂದು ಜಾತಿಗಾಗಿ, ಶೋಧಿಸುವುದು ಆಗಿರುವುದರಿಂದ ಇತಿಹಾಸದಲ್ಲಿ ವಸ್ತುನಿಷ್ಠತೆ ಪೂರ್ವ ಪ್ರಮಾಣ ಇತಿಹಾಸ ದೊರೆಯುವುದಾದರೂ ಹೇಗೆ? ವೈಚಾರಿಕ ಸಂಘರ್ಷದಲ್ಲಿ ವೈಯಕ್ತಿಕ ನಿಲುವನ್ನು ಹುಟ್ಟು ಹಾಕಿ ವೈಚಾರಿಕ ಸಂಘರ್ಷವಷ್ಟೆ ಅಲ್ಲ ನಿಜ ಸಂಘರ್ಷವನ್ನು ಹುಟ್ಟು ಹಾಕಿರುವುದರಿಂದಲೂ, ಚರಿತ್ರೆಯು ವಸ್ತುನಿಷ್ಠವಾಗಿ ದೊರೆಯಲಾರದು. ಇಂತಹ ನಿಲುವಿಗೆ ಅಪವಾದವೆಂಬಂತೆ ಪ್ರಸ್ತುತತೆಯ, ಸ್ಥಳೀಯ, ಮೌಖಿಕ ಚರಿತ್ರೆಯ ಹುಡುಕಾಟದ ಮೂಲಕ ಈ ಮೊದಲಿನ ನಿಲವುಗಳನ್ನು ಚಿಂತಿಸುವ, ಪ್ರಶ್ನಿಸುವ, ಅದಕ್ಕೆ ಮತ್ತೊಂದು ರೀತಿಯ ಪರಿಹಾರ ಸೂಚಿಸುವ ಆದಷ್ಟು ಸಾಮ್ರಾಜ್ಯಶಾಹಿ, ರಾಜಪ್ರಭುತ್ವ ರಾಷ್ಟ್ರೀಯ ಧೋರಣೆಯನ್ನು ಹೊಸ ಆಲೋಚನೆಯೊಂದಿಗೆ ಆಲೋಚಿಸಿ ದೇಶೀಯ ನೆಲೆಯಲ್ಲಿ ಪುನರ್‌ವಿಮರ್ಶಿಸಿ ಹೊಸ ಆಲೋಚನೆ ಹುಟ್ಟು ಹಾಕುವಂತೆ ಮಾಡಲ್ಪಟ್ಟವರ ಹೊಸ ಪಡೆಯ ಮುಂಚೂಣಿಯ ಕರ್ನಾಟಕ ಇತಿಹಾಸದ ವಿಭಿನ್ನ ನೋಟಗಾರ ತೆಲಗಾವಿಯವರು. ಸಿದ್ಧ ಮಾದರಿ, ಅನ್ಯಮಾದರಿ ಜಾಗತಿಕ

ದೃಷ್ಟಿಕೋನವನ್ನು ನೋಡುವ ಜೊತೆಗೆ ಪರ್ಯಾಯವೆಂಬಂತೆ ವಿಭಿನ್ನ ಹೊಸ ಶೋಧಗಳನ್ನು ಸೃಜಿಸುವುದು ತೆಲಗಾವಿ ಮತ್ತು ಅವರ ತಂಡದ ಕರ್ತವ್ಯವಾಗಿದೆ.

ಆ ನಿಟ್ಟಿನಲ್ಲಿ ಇತಿಹಾಸ ರಚನೆಗೆ ಸ್ಥಳೀಯ ಆಕರಗಳು ಸ್ಥಳೀಯ ಪರಿಕಲ್ಪನೆಗಳು ಸ್ಥಳೀಯ ಸಮುದಾಯದ ಸಂಪರ್ಕ ಇಟ್ಟುಕೊಂಡಾಗ, ನಿಗೂಢವಾಗಿರುವಂತ ಎಷ್ಟೋ ವಿಷಯವನ್ನು ಹೊರ ತರಲಿಕ್ಕೆ ಸಾಧ್ಯವಾಗಿದೆ. ಸ್ಥಳೀಯರ ಕಥೆ, ಕವನ, ಕಾವ್ಯ, ಹಾಡು, ಗೀತೆ ಇತ್ಯಾದಿಗಳಲ್ಲಿ ಮಾಸದೆ ಹಲವು ವಿಷಯಗಳು ಜನಸಾಮಾನ್ಯರಲ್ಲಿ ಅಡಕವಾಗಿವೆ. ಅವುಗಳ ಮೂಲಕ ಕೆಲವು ದಾಖಲೆ ಬೆನ್ನತ್ತಿಯು ಹೊಸ ರೂಪ ಕೊಡಬೇಕಾಗಿದುದ್ದನ್ನು ಕಂಡುಕೊಂಡು ಸಂಶೋಧಿಸಿ ದವರಾಗಿದ್ದಾರೆ.

ಇದರಿಂದಾಗಿ ಹೊಸ ಅಧ್ಯಯನ ಶಾಖೆಗಳು ಉಗಮಗೊಳ್ಳಲಿಕ್ಕೆ ಸಾಧ್ಯವಿದೆ ಎಂಬುದನ್ನು ತೋರಿಸುವ ಪ್ರಯತ್ನ ನಿರಂತರವಾಗಿರಬೇಕೆಂಬುದೆ. ತೆಲಗಾವಿಯವರ ಆಶಯ ಹೇಗೆ ಚರಿತ್ರೆ ಶೋಧಿಸುವುದನ್ನು ಪ್ರಶ್ನೆ ಮಾಡಿಕೊಂಡು ಸೃಜಿಸಬೇಕೆನ್ನುವುದನ್ನು ಓದುಗಲೋಕಕ್ಕೆ ತಿಳಿಸಿ ಕೊಟ್ಟವರಾಗಿದ್ದಾರೆ.

ಟಿಪ್ಪಣಿಗಳು

೧. ಲಕ್ಷ್ಮಣ್ ತೆಲಗಾವಿ, ಚಿತ್ರದುರ್ಗ ನಾಯಕ ಅರಸರು: ರಾಜಕೀಯ ಚಿತ್ರ, ೨೦೦೯, ಪು. ೨೯-೩೪.

೨. ಲಕ್ಷ್ಮಣ್ ತೆಲಗಾವಿ, ಮೌರ್ಯ ಮತ್ತು ಶಾತವಾಹನ ಯುಗ, ೨೦೦೪, ಪು. ೧೪-೧೫.

೩. ಲಕ್ಷ್ಮಣ್ ತೆಲಗಾವಿ, ಸ್ಥಳೀಯ ಚರಿತ್ರೆ: ಅಧ್ಯಯನ ಸ್ವರೂಪ ಮತ್ತು ತಾತ್ವಿಕತೆ, ೨೦೦೩, ಪು. ೭೪-೭೫.

೪. ಲಕ್ಷ್ಮಣ್ ತೆಲಗಾವಿ, ರಾಮಾಜಿತಿರುಮಲ ಹರಿಕಾರೆಯ ರಾಮರಾಜನ ಬಖೈರು, ೨೦೦೬, ಪು. ೧೯-೨೪.

೫. ಲಕ್ಷ್ಮಣ್ ತೆಲಗಾವಿ, ಕೆ. ರಾಮಸ್ವಾಮಯ್ಯಂಗಾರ್ ಅವರ ಜೀರ್ಣವಿಜಯ ನಗರಾದರ್ಶಂ, ೨೦೦೬, ಪು. ೩೩-೩೪.

◆◆

ಅಧ್ಯಾಯ : ಐದು

ಚರಿತ್ರೆ ಲೇಖನಶಾಸ್ತ್ರ ಹಿನ್ನೆಲೆಯಲ್ಲಿ ಲಕ್ಷ್ಮಣ್ ತೆಲಗಾವಿ ಅವರ ಕೃತಿಗಳ ಅವಲೋಕನ

ಅಧ್ಯಾಯ : ಐದು

ಚರಿತ್ರೆ ಲೇಖನಶಾಸ್ತ್ರ ಹಿನ್ನೆಲೆಯಲ್ಲಿ ಲಕ್ಷ್ಮಣ್ ತೆಲಗಾವಿ ಅವರ ಕೃತಿಗಳ ಅವಲೋಕನ

ಚರಿತ್ರೆ ಲೇಖನಶಾಸ್ತ್ರ ಹಿನ್ನೆಲೆಯಲ್ಲಿ ಲಕ್ಷ್ಮಣ್ ತೆಲಗಾವಿ ಅವರ ಕೃತಿಗಳು, ಲೇಖನಗಳು ಹಾಗೂ ಸ್ಮರಣಾ ಅಭಿನಂದಾನ ಗ್ರಂಥಗಳನ್ನು ಈ ಕೆಳಕಂಡಂತೆ ವರ್ಗೀಕರಿಸಿ ಅಧ್ಯಾಯಿನಿಸಲಾಗಿದೆ.

೧. ಕೃತಿಗಳು

೨. ಲೇಖನಗಳು

೩. ಸ್ಮರಣಾ ಸಂಚಿಕೆ ಮತ್ತು ಅಭಿನಂದನಾ ಗ್ರಂಥಗಳು.

೫.೧. ಕೃತಿಗಳು

ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು (೧೯೭೬)

ಮೂಲತಃ ಜೋಯಿಸರು ಕರ್ನಾಟಕದ ಈಗಿನ ಬಳ್ಳಾರಿ ಜಿಲ್ಲೆಯ ಕೊಟ್ಟೂರು ಬಳಿಯಿರುವ ಅಂಬಳಿ ಗ್ರಾಮದವರು. ಹಲವು ಕಾರಣಾಂತರಗಳಿಂದ ಅಂಬಳಿ ಗ್ರಾಮದಿಂದ ಇವರ ಪೂರ್ವಜರು ಸುಮಾರು ೩೦೦ ವರ್ಷಗಳ ಹಿಂದೆ ಚಿತ್ರದುರ್ಗ ತಾಲ್ಲೂಕು ಹುಲ್ಲೂರಿಗೆ ವಲಸೆ ಬಂದರು. ೧೮೯೨ರ ಮಾರ್ಚ್ ೨೯ ರಂದು ಪುರೋಹಿತಶಾಹಿ ವರ್ಗದಲ್ಲಿ ಜೋಯಿಸರು ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಚಿತ್ರದುರ್ಗದಲ್ಲಿ ಪೂರೈಸಿದರು. ಮೆಟ್ರಿಕ್ ಪರೀಕ್ಷೆ ಪಾಸ್‌ಮಾಡಿ ಸರಕಾರಿ ನೌಕರಿಯಲ್ಲಿ ಸೇವೆ ಸಲ್ಲಿಸಿದರು. ನಂತರ ಕಾನೂನು ಪರೀಕ್ಷೆಯನ್ನು ಮುಗಿಸಿ ವಕೀಲ ವೃತ್ತಿಯನ್ನು ಆರಂಭಿಸಿದರು. ನಂತರ ಪತ್ರಿಕೆ ವರದಿಗಾರನಾಗಿ ಪತ್ರಿಕೋದ್ಯಮ ಸಂಘದ ಸ್ಥಾಯಿಸಮಿತಿಯ ಅಧ್ಯಕ್ಷರಾಗಿ, ಮೈಸೂರು ಸಂಸ್ಥಾನದ ಐತಿಹಾಸಿಕ ದಾಖಲೆ ಶೋಧದ ಯೋಜನಾ ಪ್ರಜಾಪ್ರತಿನಿಧಿ ಸದಸ್ಯನಾಗಿ ದುಡಿದಿದ್ದಾರೆ. ಚಿತ್ರದುರ್ಗದ ಪ್ರಾಚ್ಯವಸ್ತು ಪ್ರದರ್ಶನಾಲಯ ವನ್ನು ರಾಜ್ಯಪಾಲರಿಂದ ಚಾಲನೆಗೊಳಿಸಿ ಕ್ಯೂರಿಟರ್ ಆಗಿದ್ದರು. ಇದು ಇವರ ಶುದ್ಧಾಹಸ್ತದ ವೃತ್ತಿಯಾಗಿದೆ.

ಸಂಶೋಧನೆಯು ಇವರ ಪ್ರವೃತ್ತಿಯಾಗಿದ್ದು ಕರ್ನಾಟಕ ಇತಿಹಾಸದ ಹಲವು ಪರಿಕಲ್ಪನೆಗಳಾದ ಐತಿಹಾಸಿಕ ಸ್ಥಳಗಳು. ವ್ಯಕ್ತಿಗಳು, ಭಾಷೆ, ಧರ್ಮ, ಸಂಸ್ಕೃತಿ, ಶೌರ್ಯ, ಸಾತ್ವಿಕತೆ, ಆದರ್ಶ, ಉದಾರತೆ ಮೊದಲಾದ ಗುಣಗಳನ್ನು ಚರಿತ್ರೆಯ ಹಿನ್ನೆಲೆಯಲ್ಲಿ ಸರಳ ಭಾಷೆಯಲ್ಲಿ ಜನಸಾಮಾನ್ಯರಿಗೆ ತಿಳಿಯಪಡಿಸಿದ್ದು ಇವರ ಇತಿಹಾಸದ ಪ್ರೇಮವನ್ನು ಬಿಂಬಿಸುತ್ತದೆ. ೧೯೨೨ ರಿಂದ ೧೯೫೬ರ ಅವಧಿಯಲ್ಲಿ ೩೦೦ಕ್ಕೂ ಹೆಚ್ಚು ಲೇಖನಗಳನ್ನು ೧೦ ಕೃತಿಗಳನ್ನು ೪ ಹಸ್ತಪ್ರತಿ ಸಂಗ್ರಹ ಹಾಗೂ ಚಿತ್ರದುರ್ಗದ ಬಖೈರು ಐತಿಹಾಸಿಕ ದಾಖಲೆಗಳ ಲೇಖನಗಳು. ಕನ್ನಡ ಸಾಹಿತ್ಯ ಪರಿಷತ್ತಿನ ಪತ್ರಿಕೆ, ಪ್ರಬುದ್ಧ ಕರ್ನಾಟಕ, ಶರಣ ಸಾಹಿತ್ಯ, ಜಯ ಕರ್ನಾಟಕ ಸೇರಿದಂತೆ ೫೦ಕ್ಕೂ ಹೆಚ್ಚು ನಿಯತಕಾಲಿಕೆಗಳು, ಜನಪದ ಗೀತೆಗಳು. ಲಾವಣಿಗಳು, ನಾಣ್ಯ, ಮಡಿಕೆ, ಕುಡಿಕೆ ಶಾಸನ, ಓಲೆ, ಶಿಲ್ಪ, ವೀರಗಲ್ಲು, ಮಾಸ್ತಿಗಲ್ಲು, ಕತ್ತಿಗುರಾಣಿ, ಕವಚ, ಛಾಯಾಚಿತ್ರ ಇತ್ಯಾದಿಗಳನ್ನು ಸಂಗ್ರಹಿಸಿದ್ದರು. ಕ್ಷೇತ್ರಕಾರ್ಯಕ್ಕೆ ಸಾಕ್ಷಿಯಾಗಿದ್ದ ಜೋಯಿಸರನ್ನು ಪ್ರಸ್ತುತ ಹಲವು ಗ್ರಾಮಗಳ ಹಿರಿಯರು ಈಗಲೂ ನೆನಪಿಸಿಕೊಳ್ಳುತ್ತಾರೆ. ಪಾಳೆಪಟ್ಟುಗಳಲ್ಲದೆ ಬೌದ್ಧಧರ್ಮ, ವೀರಶೈವಧರ್ಮ, ಸಾಹಿತ್ಯ, ಸಂತರು, ಮಠ ಇತ್ಯಾದಿಗಳನ್ನು ಕುರಿತು ಸಂಶೋಧನಾತ್ಮಕ ಲೇಖನ ಬರೆದಿದ್ದಾರೆ. ಜೋಯಿಸರ ಬಹು ಅಚ್ಚುಮೆಚ್ಚಿನ ಸಂಶೋಧನವೆಂದರೆ ಕುಮ್ಮಟವೀರ ಕುಮಾರರಾಮ, ಉಚ್ಚಂಗಿ ದುರ್ಗದ ಪಾಂಡ್ಯರು, ಚಿತ್ರದುರ್ಗದ ನಾಯಕ ಅರಸರ ಸಂಶೋಧನೆಗಳು ಅಚ್ಚುಮೆಚ್ಚಾಗಿದೆ. ದುರ್ಗದ ಬಗ್ಗೆ ಅವಿತಿರುವ ಹುನ್ನಾರು, ವಿಷಯಗಳನ್ನು ಸಂಶೋಧನ ಲೋಕಕ್ಕೆ ಅನ್ವೇಷಿಸಿ ಅರ್ಪಿಸಿದ್ದಾರೆ. ಆದ್ದರಿಂದಲೆ ಜನರು ಅಭಿಮಾನದಿಂದ "ಇತಿಹಾಸದ ಸಂಶೋಧನ ಪ್ರಸಕ್ತ ಐತಿಹ್ಯ ವಿಮರ್ಶನ ವಿಚಕ್ಷಣ" ಎಂಬ ಬಿರುದು ಕೊಟ್ಟಿದ್ದಾರೆ.

ಜೋಯಿಸರು ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ೬ ತಿಂಗಳು ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ಶಿಕ್ಷೆ ಅನುಭವಿಸಿದ್ದರು. ೧೯೪೨ರ ಸಂದರ್ಭದಲ್ಲಿ ಮೈಸೂರು ಅರಮನೆ ಸತ್ಯಾಗ್ರಹದಲ್ಲಿ ಸಕ್ರಿಯರಾಗಿ ಕಾನೂನು ಭಂಗ ಚಳುವಳಿಗೆ ದುಮುಕಿದರು ಹಾಗೂ ಗಾಂಧೀಜಿಯವರ ಅನುಯಾಯಿಯಾಗಿದ್ದು ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿದ್ದರು. ಇಂತಹ ಹೋರಾಟಕ್ಕೆ ತನ್ನ ವ್ಯಕ್ತಿತ್ವದ ಬದುಕನ್ನೆ ಮುಡುಪಾಗಿಟ್ಟರು, ಕರ್ನಾಟಕ ಏಕೀಕರಣ ಚಳುವಳಿ. ಹಿರಿಯ ರಾಷ್ಟ್ರೀಯ ನಾಯಕರ ಆದರ್ಶ ಇತ್ಯಾದಿಗಳನ್ನು ಭಾಷಣದ ಮೂಲಕ ಸಮಾಜಕ್ಕೆ ತಿಳಿಯಲಾರಂಭಿಸಿದರು. ಎಸ್. ನಿಜಲಿಂಗಪ್ಪ, ಮಹಮ್ಮದ್ ಇಮಾಂರೆಂಬ ಜನನಾಯಕ ರೊಂದಿಗೂ ಬಾಂಧವ್ಯ ಹಾಗೂ ಸಮಾಜದ ಸುಧಾರಣೆ ಕುರಿತು ಚರ್ಚಿಸುತ್ತಿದ್ದರು ಮತ್ತು ಸಮೃದ್ಧ ಕರ್ನಾಟಕದ ಕನಸು ಕಂಡಿದ್ದ ಜೋಯಿಸರು ಹಲವು ಪ್ರದೇಶಗಳಿಗೆ ಹೋಗಿ ಸಂಘಟಿಸಿ ಕ್ಷೇತ್ರಕಾರ್ಯ ಮಾಡಿ ವರದಿ ತಯಾರಿಸಿದ್ದರು. ಆದವಾನಿ, ಆಲೂರು, ಆರ್ಕಾಡು, ಅನಂತಪುರ, ಬಳ್ಳಾರಿ ಸೇರಿ ಅಖಂಡ ಕರ್ನಾಟಕದ ಭಾಗವಾಗಬೇಕೆಂದು ಹೋರಾಟ ಮಾಡಿದವರು. ೧೯೫೬ರಲ್ಲಿ ಹೊಸ ಮೈಸೂರು ರಾಜ್ಯ ಉದಯವಾದಾಗ ಎಲ್ಲಾ

ಹೋರಾಟಗಾರರಿಗಿಂತ ಹೆಚ್ಚು ಸಂಭ್ರಮಪಟ್ಟಿದ್ದವರು. ಎಸ್. ನಿಜಲಿಂಗಪ್ಪನವರು ತೀರಿದಾಗ ಜೋಯಿಸರು ಶ್ರದ್ಧಾಂಜಲಿಯನ್ನು ವಿಧಾನಸಭೆಯಲ್ಲಿ ಅರ್ಪಿಸಿದ್ದಾರೆಂದರೆ ಕರ್ನಾಟಕದ ಬಗ್ಗೆ ಜೋಯಿಸರಿಗಿದ್ದ ಅಭಿಮಾನ ಅದಮ್ಯವಾದುದಾಗಿದೆ.

೧೯೭೬ರಲ್ಲಿ ಜೋಯಿಸರ ಸ್ಮರಣಾರ್ಥ ಗ್ರಂಥ ಪ್ರಕಟಣ ಸಮಿತಿ ರಚನೆಗೊಂಡಿದ್ದು ಜೋಯಿಸರ ಲೇಖನಗಳನ್ನು ಆಯ್ದು ೫೨೦ ಪುಟದ ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು ಎಂಬ ಗ್ರಂಥವನ್ನು ಹೊರತರಲಾಯಿತು. ೧೯೯೫ರಲ್ಲಿ ಮೌಲಿಕವಾದ ೫೦ ಲೇಖನಗಳನ್ನು ಆಯ್ದು ೬೫೦ ಪುಟಗಳ ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನ ಲೇಖನಗಳ ಸಂಗ್ರಹ ಬಿಡುಗಡೆಗೊಳಿಸಿದರು. ಹಾಗೆಯೇ ಜೀವನ ಚರಿತ್ರೆಯ ಗ್ರಂಥರೂಪ, ಹಲವು ಸಂಪುಟಗಳ ಮೂಲಕ ಸಂಶೋಧನ ದಿಕ್ಕುಗಳನ್ನು ತರುವುದರ ಮೂಲಕ ಕರ್ನಾಟಕದ ಇತಿಹಾಸ ಅದರಲ್ಲೂ, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಕಟ್ಟಿಕೊಟ್ಟ ಧೀಮಂತ ಸಂಶೋಧಕನನ್ನು ವಿಶ್ವವಿದ್ಯಾಲಯದ ಚೌಕಟ್ಟು ಮತ್ತು ಅದನ್ನು ಮೀರಿ ಬೆಳೆಯುವಂತೆ ಅವರುಗಳ ಸಂಶೋಧನ ಗುಣವನ್ನು ತಿಳಿಸುವಲ್ಲಿ ಸಂಶೋಧಕರನ್ನೆ ಸಂಶೋಧಿಸಿದವರು ಮತ್ತೊಬ್ಬ ಸಂಶೋಧಕ ತೆಲಗಾವಿಯಾಗಿದ್ದಾರೆ.

ಐತಿಹಾಸಿಕ ಚಿತ್ರದುರ್ಗ : ೧೯೭೭ರಲ್ಲಿ ಜಿಲ್ಲಾ ಇತಿಹಾಸ ಸಂಶೋಧನಾ ಮಂಡಲಿ ಚಿತ್ರದುರ್ಗ ಅವರು "ಐತಿಹಾಸಿಕ ಚಿತ್ರದುರ್ಗ" ಎಂಬ ಶೀರ್ಷಿಕೆಯ ಕಿರುಕೃತಿಯು ಸಂಪಾದನೆ ಯನ್ನು ಲಕ್ಷ್ಮಣ್ ತೆಲಗಾವಿ, ಕೆ. ವೆಂಕಣ್ಣಾಚಾರ್‌ರವರು ರಚಿಸಿದ್ದಾರೆ. ಚಿತ್ರದುರ್ಗದ ಚರಿತ್ರೆಗೆ ಸಂಬಂಧಿಸಿದಂತೆ ಹಲವು ತರದ ಐತಿಹ್ಯಗಳಿವೆ. ಆ ಐತಿಹ್ಯಗಳು ಕೆಲವು ಸುಳ್ಳು ಅಥವಾ ಸತ್ಯದಿಂದಲೆ ಕೂಡಿವೆ ಎನ್ನುವುದಕ್ಕಿಂತ ಆ ಐತಿಹ್ಯ ಮೂಲಕ ದುರ್ಗದ ಚರಿತ್ರೆಯನ್ನು ರಚಿಸಲು ಪೂರಕ ಆಕರವನ್ನಾಗಿ ಬಳಸಿಕೊಳ್ಳಬಹುದಾಗಿದೆ ಎಂಬುದನ್ನು ಈ ಇಬ್ಬರು ತೋರಿಸಿಕೊಟ್ಟಿದ್ದಾರೆ.

ಜನರ ಮನದಾಳದಲ್ಲಿ ಅಭಿವ್ಯಕ್ತಿಗೊಂಡಿರುವ ದುರ್ಗದ ಚರಿತ್ರೆಯನ್ನು ಸಮಗ್ರವಾಗಿ ರಚಿಸಲು ಇದರಿಂದಲೂ ಪ್ರಯೋಜನ ಪಡೆಯಬಹುದು. ದುರ್ಗದಲ್ಲಿ ಈಗಾಗಲೇ ನೆಲೆಸಿರುವ, ಚಿನ್ಮೂಲಾದಿ, ಹಿಡಂಬಪಟ್ಟಣ, ಪರಮಭಕ್ತ ವೆಂಕಣ್ಣ, ಶ್ರೀಪಾತಾಳೇಶ್ವರ, ನವದರ್ಗಿಯರು, ಭೇಟಿ ಉತ್ಸವ, ಸಿದ್ಧರದರ್ಶನ, ಏಕನಾಥೇಶ್ವರಿ, ಉತ್ಸವಾಂಬ, ತಲೆ ಒಡಕ ಈರಣ್ಣ, ಕಂಬದಮ್ಮ ಅರಳಿಮರ ಹೀಗೆ ಬರುವ ಎಲ್ಲಾ ಸಂಗತಿಗಳ ಒಂದೊಂದು ರೀತಿಯ ಐತಿಹ್ಯವಿದ್ದು ಕೇಳಲು ರಂಜನೀಯವಾಗಿಯೂ, ಕುತೂಹಲಕಾರಿಯಾಗಿಯೂ ಇರುವುದರ ಜೊತೆಗೆ, ಸಂಶೋಧಕರಿಗೆ ಹಲವು ತರದ ಮಾಹಿತಿ ಒದಗಿಸುವಂತ ಕೆಲವು ಕಲ್ಪಿತತೆಯಿಂದ ಕೂಡಿವೆ. ಆ ಕಲ್ಪನೆಗಳನ್ನು ಹೋಗಲಾಡಿಸಲು ಇದರಿಂದ ಸಾಧ್ಯವಾಗಿದೆ.

ಚಿತ್ರದುರ್ಗ ದರ್ಶಿನಿ

ಬಯಲು ಮತ್ತು ವಸ್ತುಸಂಗ್ರಹಾಲಯವೆಂದು ಕರೆಯಬಹುದಾದ ಸ್ಥಳವೆಂದರೆ ಚಿತ್ರದುರ್ಗದ ಬೆಟ್ಟ ಕೋಟೆ. ಇಲ್ಲಿನ ಪ್ರಾಚ್ಯವಸ್ತುಗಳನ್ನು ನೋಡಲು ಬರುವ ಕರ್ನಾಟಕದ ಪ್ರವಾಸಿಗರನ್ನು

ಗಮನದಲ್ಲಿರಿಸಿಕೊಂಡು "ಚಿತ್ರದುರ್ಗದರ್ಶಿನಿ"ಯನ್ನು ಇತಿಹಾಸ ಸಂಶೋಧನ ಮಂಡಲಿ ೧೯೯೦ರಲ್ಲಿ ಲಕ್ಷ್ಮಣ್ ತೆಲಗಾವಿ ಮತ್ತು ಕೆ. ವೆಂಕಣ್ಣಚಾರ್, ಹು.ಶ್ರೀ ಪಾಂಡುರಂಗ ಜೋಯಿಸ್ ಅವರು ಬೃಂದಾವನ ಮುದ್ರಣ ಮೈಸೂರು ಪ್ರಕಾಶನದೊಂದಿಗೆ ಸಿದ್ಧಪಡಿಸಲಾಗಿದೆ. ಈ ಕೃತಿಯು ಪ್ರವಾಸಿಗರ ಗಮನ ಸೆಳೆಯುವ ಮತ್ತು ದುರ್ಗದ ಸ್ಮಾರಕ ಹಾಗೂ ಸ್ಥಳಗಳ ಬಗೆಗೆ ಸಂಪೂರ್ಣ ವಿವರ ಹೊಂದಿ, ಇದು ಸ್ಥಳ ಪರಿಶೀಲನೆ, ಅಧ್ಯಯನ ಹಾಗೂ ಸಂದರ್ಶನಗಳ ಮೂಲಕ ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ ಮತ್ತು ಖಚಿತ ಇತಿಹಾಸ ನಿರೂಪಣೆಗೆ ಇಲ್ಲಿ ಒತ್ತುಕೊಡುವ ಬಗೆಗೆ ಎಚ್ಚರಿಕೆ ವಹಿಸಿಯೂ ಸಿದ್ಧಪಡಿಸಿದೆ.

ಈ ಮೊದಲಿನಿಂದಲೂ ಚಿತ್ರದುರ್ಗ ಇತಿಹಾಸದ ಬಗೆಗಿನ, ಕಾಲ್ಪನಿಕ ಕಥೆಗಳು, ಅಸಂಬದ್ಧ ಹೇಳಿಕೆಗಳು ಹಾಗೂ ಆಧಾರರಹಿತ ಸಂಗತಿಗಳನ್ನು ದೂರವಿರಿಸಲಾಗಿ, ಜನಜನಿತವೆನಿಸುವ ಕೆಲವು ಸಂಗತಿಗಳ ನೆರಳಿನಲ್ಲಿ, ಕೆಲವು ಘಟನೆಗಳ, ಸ್ಥಳಗಳ ಹಾಗೂ ವ್ಯಕ್ತಿಗಳ ಬಗೆಗೆ ವಿವರಣೆ ನೀಡಲಾಗಿದೆ.

ಮುಂದಿನ ತಲೆಮಾರುಗಳು ದುರ್ಗ ಮತ್ತು ಅಲ್ಲಿನ ಇತಿಹಾಸ ಕುರಿತು ಸಂಶೋಧನೆ ನಡೆಸುವವರಿಗೆ ಸೂಕ್ಷ್ಮವಾಗಿ ಗಮನಿಸಿದಷ್ಟು ಕುತೂಹಲಕಾರಿ ಹೊಸ ವಿಷಯಗಳು ಗಮನಕ್ಕೆ ಬರುತ್ತವೆ.

ಈ ಕೃತಿಯು ಹಲವು ಕೃತಿಗಳ ಆಧಾರದ ಮೇಲೆಯು, ಹಲವು ಸಂಶೋಧಕರ ಮಾಹಿತಿಯ ಮೇಲೆಯೂ ನಿಂತಿದ್ದು, ಚಿತ್ರದುರ್ಗ ನೋಡಲು ಬರುವವರಿಗೆ ಸರಳವೂ, ಸಂಪೂರ್ಣವೂ ಆದ ಒಂದು ಕೈಪಿಡಿಯನ್ನು ತಯಾರಿಸಿ ಚಾರಿತ್ರಿಕ ಚಿತ್ರದುರ್ಗದ ವೀಕ್ಷಣೆಗೆ ಹೊಸ ಆಯಾಮ ನೀಡಿದ್ದಾರೆ. ಇಂದು ಇದರ ಉಪಯೋಗವನ್ನು ಜನತೆ ಬಹುವಾಗಿ ಪಡೆದುಕೊಂಡಿದ್ದಾರೆ.

ಹರತಿಸಿರಿ : ೧೯೮೭ರಲ್ಲಿ ಸಂಪಾದಿಸಲ್ಪಟ್ಟ ಈ ಸಂಪುಟದಲ್ಲಿ ಹೆಚ್.ವಿ. ವೀರನಾಯಕರ ನ್ನೊಳಗೊಂಡಂತೆ ಅನೇಕ ಐತಿಹ್ಯ ಅಂಶಗಳನ್ನು ಒಳಗೊಂಡಿದ್ದು ಹೆಚ್.ವಿ. ವೀರನಾಯಕ 'ಹರತಿ' ಅವರ ನೆನಪಿನ ಈ ಸಂಪುಟದಲ್ಲಿ. ಗ್ರಾಮೀಣ ಪ್ರದೇಶದಲ್ಲಿ ಮಂಕುಗೊಳ್ಳುತ್ತಿರುವ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳನ್ನು ಪುನರ್‌ಜ್ಜೀವನಗೊಳಿಸುವುದ ರೊಡನೆ ಹಳ್ಳಿಯ ಜನತೆಯ ಬೌದ್ಧಿಕ ಬೆಳವಣಿಗೆಗೆ ಪ್ರೇರಕವಾಗಿ ನಿಲ್ಲುವ ಆಶಯದೊಡನೆ "ವಾಲ್ಮೀಕಿ ಸಾಹಿತ್ಯಸಂಪದ" ಎನ್ನುವ ಪ್ರಕಾಶನ ಸಂಸ್ಥೆಯನ್ನು ಸ್ಥಾಪಿಸಿ ಆ ಮೂಲಕ ಐತಿಹಾಸಿಕ ಸಂಶೋಧನ ಗ್ರಂಥಗಳನ್ನು, ತೌಲನಿಕ ಸಾಹಿತ್ಯ ಕೃತಿಗಳನ್ನು ಪ್ರಕಟಗೊಳಿಸುವ ಹಾಗೂ ಇತಿಹಾಸ, ಕಲೆ, ಸಾಹಿತ್ಯ, ಸಂಶೋಧನೆ, ಸಮಾಜಸೇವೆ ಮೊದಲಾದ ಕ್ಷೇತ್ರಗಳಲ್ಲಿ ಶ್ಲಾಘನೀಯ ಸೇವೆಸಲ್ಲಿಸಿದ ಮಹನೀಯರನ್ನು ಪುರಸ್ಕರಿಸುವ ಮಹೋದ್ದೇಶಗಳನ್ನು ಇಟ್ಟುಕೊಂಡು, ಆ ದಿಸೆಯಲ್ಲಿ ಪ್ರಾಮಾಣಿಕ ಪ್ರಯತ್ನ ನಡೆಸಿದ್ದವರು ಎಚ್.ವಿ. ವೀರನಾಯಕರು. ಇವರು ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಹಾಗೂ ಸಾಹಿತ್ಯ ಸೇವ

ಕಾರ್ಯವನ್ನು ಮುಂದುವರಿಸಿದವರೆಂಬಂತೆ ತಮ್ಮ ಜೀವಿತ ಕಾಲದಲ್ಲಿ ಈ ಬಗೆಯ ಚಟುವಟಿಕೆಗಳಲ್ಲಿ ಸ್ವಯಂ ತೊಡಗಿಸಿಕೊಂಡವರು 'ಹರತಿ' ಎಂಬ ಕಾವ್ಯಾನಾಮ ಹಾಗೂ ಇತಿಹಾಸತಜ್ಞಶ್ರೀ ಎಂಬ ಅಭಿದಾನಗಳೊಡನೆ ಇತಿಹಾಸ ಮತ್ತು ಸಾಹಿತ್ಯ ಕ್ಷೇತ್ರಗಳಿಗೆ ತಮ್ಮ ಮಟ್ಟಿನ ಸೇವೆಗೈದು ಕಣ್ಮರೆಯಾದ ಅವರ ನೆನಪಿಗಾಗಿ ಈ 'ಹರತಿಸಿರಿ' ಸಂಪುಟವನ್ನು ಹೊರತರಲಾಗಿದೆ.

ಇತಿಹಾಸ ಶೋಧನೆಯಲ್ಲಿ ಆಸಕ್ತರಾಗಿದ್ದ ವೀರನಾಯಕರು ಸೃಜನಶೀಲ ಸಾಹಿತ್ಯ ಕ್ಷೇತ್ರದತ್ತ ತಮ್ಮ ಗಮನಹರಿಸಿದುದು ಕುತೂಹಲಕಾರಿಯಾದುದು. ಅದರ ಫಲವಾಗಿ ಅವರು ಮೂರು ಕಾದಂಬರಿಗಳನ್ನು ಹಾಗೂ ಮೂರು ನಾಟಕಗಳನ್ನು ಬರೆದಿರುವರು. ಈ ಎಲ್ಲ ಕೃತಿಗಳು ವಸ್ತುವಾಗಿ ಚರಿತ್ರೆಯು ವಿಜೃಂಭಿಸಿದೆಯೆನ್ನುವುದು ಗಮನಿಸಬೇಕಾದ ಸಂಗತಿ ಹಾಗೂ ನಾಟಕಕಾರರಾಗಿ ಅವರು ಎಷ್ಟರಮಟ್ಟಿಗೆ ಯಶಸ್ವಿಯಾಗಿದ್ದಾರೆ ಇತ್ಯಾದಿಗಳ ಚರ್ಚೆ ಇಲ್ಲಿ ಅಪ್ರಸ್ತುತವಾದರೂ ಮೂಲವಸ್ತುವಿನ ಬಳಕೆಯಲ್ಲಿ ಅವರು ತೋರಿರುವ ಜಾಣ್ಮೆ, ತಾಳ್ಮೆ ನಿರೂಪಣ ಸಾಮರ್ಥ್ಯಗಳು ಗಮನಸೆಳೆಯಬಹುದಾದ ಅಂಶಗಳಾಗಿ ಕಾಣಬರುತ್ತವೆ.

ಚರಿತ್ರೆ ಸಾಹಿತ್ಯ ಮತ್ತು ಸಂಸ್ಕೃತಿಗಳ ಅಧ್ಯಯನದ ವ್ಯಾಪ್ತಿಯು ಈಗೀಗ ವಿಶಾಲಗೊಳ್ಳುತ್ತಿದೆ. ವೈಜ್ಞಾನಿಕ ದೃಷ್ಟಿ ಮತ್ತು ವಿಧಾನಗಳನ್ನುಸರಿಸಿದ ಬರಹಗಳು ಹೊರಬರುತ್ತಿವೆ. ಸಂಕೀರ್ಣ ರೂಪದ ಎಷ್ಟೋ ಅಂಶಗಳನ್ನು ಕೆದಕಿ ವಿವರವಾಗಿ, ಕರಾರುವಕ್ಕಾಗಿ ಬರೆಯಲಾಗುತ್ತಿದೆ. ಪ್ರತಿಭಾನ್ವಿತ ಸಂಶೋಧಕರ ತಂಡವೇ ಈ ನಿಟ್ಟಿನಲ್ಲಿ ಉತ್ಸಾಹದಿಂದ ಕೆಲಸ ಮಾಡುತ್ತಿದೆ. ಅಂತಹ ವಿದ್ವಾಂಸರು ಹಾಗೂ ಶೋಧಕರಿಂದ ಆಯಾ ಕ್ಷೇತ್ರದ ಸಂಶೋಧನ ಸಮಸ್ಯೆಯನ್ನು ಕುರಿತು ವಿದ್ವತ್ಪೂರ್ಣ ಪ್ರಬಂಧಗಳನ್ನು ಆಹ್ವಾನಿಸಿ ಈ ಸಂಪುಟದಲ್ಲಿ ಅಚ್ಚು ಹಾಕಿದೆ ಹಾಗೂ ಇತ್ತೀಚಿನ ಶೋಧನೆಗಳನ್ನು ದಾಖಲಿಸಿದ್ದು, ಈ ಕೃತಿಯಲ್ಲಿ ಎಲ್ಲ ಪ್ರಬಂಧಗಳನ್ನು ೫ ಭಾಗಗಳಾಗಿ ವಿಂಗಡಿಸಿ ಇಲ್ಲಿ ಪ್ರಕಟಿಸಿದೆ.

೧ನೆಯ ಭಾಗವು ಚರಿತ್ರೆ, ಸಾಹಿತ್ಯ ಹಾಗೂ ಸಂಸ್ಕೃತಿಯ ಸಂಶೋಧನೆಗೆ ಸಂಬಂಧಿಸಿದ ಪ್ರಬಂಧಗಳನ್ನು ಒಳಗೊಂಡಿದೆ.

೨ನೆಯ ಭಾಗವು ಶಾಸನ ಅಧ್ಯಯನ ಕುರಿತು ಪ್ರಬಂಧಗಳನ್ನು ಒಳಗೊಂಡಿದೆ.

೩ನೆಯ ಭಾಗವು ಜಾನಪದ ಸಂಶೋಧನೆಯನ್ನು ಕುರಿತು ಪ್ರಬಂಧಗಳನ್ನು ಒಳಗೊಂಡಿದೆ.

೪ನೆಯ ಭಾಗವು ಚಾರಿತ್ರಿಕ ಕಾವ್ಯ ಕುರಿತ ಪ್ರಬಂಧಗಳು ಹಾಗೂ ಮೂಲ ದಾಖಲೆಗಳ ಮಾಹಿತಿಯನ್ನು ಒಳಗೊಂಡಿದೆ.

೫ನೆಯ ಭಾಗವು ಎಚ್.ವಿ. ವೀರನಾಯಕರ ಬದುಕು-ಬರಹಕ್ಕೆ ಮೀಸಲಿರಿಸಲಾಗಿದೆ ಮತ್ತು ಈ ಭಾಗದಲ್ಲಿ ೯ ಪ್ರಬಂಧಗಳನ್ನು ಮಾತ್ರ ಸೇರಿಸಿದ್ದು ಅವರನ್ನು ಹತ್ತಿರದಿಂದ, ಬಲ್ಲವರಿಂದ ಹಾಗೂ ಅವರ ಕೃತಿಗಳ ಪರಿಚಯವಿರುವವರಿಂದ ಅವರ ಗುಣಾವಗುಣಗಳ, ಬದುಕಿನ ನೈಜ

ಘಟನೆಗಳ ವಸ್ತುನಿಷ್ಠ ವಿಮರ್ಶೆ ಈ ಕೃತಿಯ ಅಂತಿಮದಲ್ಲಿ ನಡೆದಿದೆ. ಇದು ಲಕ್ಷ್ಮಣ್ ತೆಲಗಾವಿಯವರ ಸಂಶೋಧನೆ ದಾರಿಗೆ ಮುನ್ನುಡಿ ಬರೆದ ಗ್ರಂಥ. ಇದರಿಂದ ಲಕ್ಷ್ಮಣ್ ತೆಲಗಾವಿಯವರ ಹೆಸರು ಖ್ಯಾತಿಯಾಗಿದ್ದು ಶ್ಲಾಘನೀಯವಾದುದು.

ಇದು ಚಿತ್ರದುರ್ಗ - ೧೯೯೭ರಲ್ಲಿ ಲಕ್ಷ್ಮಣ್ ತೆಲಗಾವಿಯವರು ಸಂಪಾದಿಸಲ್ಪಟ್ಟ ಈ ಕೃತಿಯು ಚಿತ್ರದುರ್ಗದ ಕೋಟೆ ಪರಿಸರದ ಬಗ್ಗೆ ಹೆಚ್ಚಿನ ಮಾಹಿತಿ ನೀಡುವ ಕೃತಿಯಾಗಿದೆ. ಚಿತ್ರದುರ್ಗದ ಬೆಟ್ಟ, ಗುಡ್ಡ, ಚಂದ್ರವಳ್ಳಿಕೆರೆ. ವಿದ್ಯಾ ಕೇಂದ್ರಗಳು, ದೇವಾಲಯಗಳು, ಕೆಂಪಯ್ಯನ ಕೋಟೆ, ಚಿತ್ರದುರ್ಗದ ಐತಿಹಾಸಿಕ ಹಿನ್ನೆಲೆ ಮತ್ತು ವಿಜಯನಗರದ ಆಡಳಿತದಲ್ಲಿ ಕಂಡುಬರುವ ಕಲಾಭಿರುಚಿಯೊಂದಿಗೆ ಚಿತ್ರದುರ್ಗದ ನಾಯಕರ ಕಲಾಭಿರುಚಿಯನ್ನು ಬೆಸೆಯುವುದರ ಕುರಿತು ಸುದೀರ್ಘ ಮಾಹಿತಿ ನೀಡುತ್ತದೆ ಹಾಗೂ ನಾಯಕರ ಬದುಕಿನ ಚಿತ್ರಣ ಮತ್ತು ಮಾನವನ ಬದುಕಿನ ವೈವಿಧ್ಯ ವಿಶಿಷ್ಟಗಳು ಭಿನ್ನ ಭಿನ್ನ ಸ್ಥಿತಿಯ ತಂತ್ರಗಳು ಹೈದರಾಲಿಯು ಚಿತ್ರದುರ್ಗ ಕೋಟೆಗೆ ಹೇಗೆ ಮುತ್ತಿಗೆ ಹಾಕಿದ ಎಂಬುದನ್ನು ನಿಖರವಾದ ಮಾಹಿತಿಯನ್ನು ನೀಡುವುದರ ಜೊತೆಗೆ ಕೋಟೆಯ ವೈಶಿಷ್ಟ್ಯತೆ, ಸ್ಮಾರಕ; ಶಿಲ್ಪ ಚಿತ್ರಗಳ ಕುರಿತಂತೆಯು ಸಂಪೂರ್ಣ ಮಾಹಿತಿಯನ್ನೊಳಗೊಂಡಿದೆ.

ಬುರುಗು

೧೯೯೯ರಲ್ಲಿ ಹರ್ತಿಕೋಟೆಯ ವಾಲ್ಮೀಕಿ ಸಾಹಿತ್ಯ ಸಂಪದದವರು 'ಬುರುಗು' ಎಂಬ ಶೀರ್ಷಿಕೆಯೊಂದಿಗೆ ಚರಿತ್ರೆ ಚಿಂತಕ ಲಕ್ಷ್ಮಣ್ ತೆಲಗಾವಿಯವರ ಮೂಲಕ ಚಿಂತನಾ ಲೇಖನಗಳ ಕೃತಿ ರಚನೆಗೆ ಪ್ರೋತ್ಸಾಹ ನೀಡಿದರು. ಪರಿಣಾಮವಾಗಿ ಬಂದಂತ ಲೇಖನಗಳ ಸಾರಾಂಶ ಈ ರೀತಿಯಿದೆ. ವಿವಿಧ ಸಂದರ್ಭದ ಭಾಷಣ, ಉಪನ್ಯಾಸ, ಆಕಾಶವಾಣಿಯಲ್ಲಿ ಮಂಡಿಸಿದ ಚಿಂತನೆಗಳ ಸಾರವೇ ಈ ಬುರುಗು.

ಮಾನವ-ಸಾಮಾಜಿಕ ಪಶು? ಎಂಬ ಲೇಖನದಲ್ಲಿ ಮಾನವನಿಗೆ ಸಂಬಂಧಿಸಿದಂತೆ ಜೈವಿಕ, ಸಾಮಾಜಿಕ, ಸಾಂಸ್ಕೃತಿಕ ಹಂತಗಳನ್ನು ಹೇಗೆ ಹಾದು ಬಂದವು, ಮಾನವ ಹೇಗೆ ತನ್ನ ಜೀವನ ವಿಧಾನ ವ್ಯವಸ್ಥೆಯನ್ನು ಚೌಕಟ್ಟಿನಲ್ಲಿಟ್ಟುಕೊಂಡು ವಿಕಾಸ ಹೊಂದಿದ್ದಾನೆಂಬುದನ್ನು ಈ ಕೃತಿಯಲ್ಲಿ ತಿಳಿಸಿದ್ದಾರೆ. ಆದರೆ ಎಂಥದ್ದೆ ವ್ಯವಸ್ಥೆ ಬಂದೊದಗಿದರು. ನೀತಿಸಂಹಿತೆಯಲ್ಲಿ ಬದುಕಿದರೂ ಇಂದಿಗೂ ಅನೇಕ ಸಂದರ್ಭಗಳಲ್ಲಿ ಪಶುವಿನಂತೆಯೆ ವರ್ತಿಸುತ್ತಾರೆ. ಆದ್ದರಿಂದಲೇ ಮಾನವನು ಸಾಮಾಜಿಕ ಪಶು ಅಥವಾ ಪ್ರಾಣಿಯ ಸ್ಥಾನಮಾನ ಅಲಂಕರಿಸಿದ್ದಾನೆಂದು ಮನಃಶಾಸ್ತ್ರೀಯ, ಸಮಾಜಶಾಸ್ತ್ರಿಯ ಮತ್ತು ಚರಿತ್ರೆಯ ಹಿನ್ನೆಲೆಯಲ್ಲಿ ಅಧ್ಯಯನಿಸಿದ್ದಾರೆ.

"ಪ್ರಭುತ್ವ ಮತ್ತು ಧರ್ಮ" ಎಂಬ ಲೇಖನದಲ್ಲಿ ಮುಗ್ಧ ಜನರನ್ನು ಧರ್ಮದ ಹೆಸರಿನಲ್ಲಿ ಹೇಗೆ ಅಸಮಾನತೆಯನ್ನು ಸೃಷ್ಟಿ ಮಾಡಬಹುದು ಮತ್ತು ಅಧೋಗತಿಗೆ ತಳ್ಳಬಹುದೆಂಬುದು ಕೃತಿಯಲ್ಲಿ ಪಡಿಸಿದ್ದಾರೆ.

ನಾಗರಿಕತೆ-ನೆಲೆ-ಬೆಲೆ ಮನೆ ಕಟ್ಟಿದಾಕ್ಷಣ, ಬದುಕು ಕಟ್ಟಿಕೊಂಡಾಕ್ಷಣ ನಾವು ನಾಗರಿಕ ರಾಗಿದ್ದೇವೆಂಬುದು ಸುಳ್ಳು, ಅಸ್ಸೀರಸ್-ರೋಮ್, ಈಜಿಪ್ಟನಂತಹ ಸಾಮ್ರಾಜ್ಯಶಾಹಿಗಳು ಇಡೀ

ಜಗತ್ತಿನಲ್ಲಿಯೆ ನಾವೇ ಶ್ರೇಷ್ಠ ನಾಗರಿಕರೆನಿಸಿಕೊಂಡರು. ಯುದ್ಧದಂತಹ ಮರಣ ಹೋಮದಲ್ಲಿ ಬೆಂದು ಹೋದರು. ಆದ್ದರಿಂದ ಸಾತ್ವಿಕ ಗುಣ, ಆಧ್ಯಾತ್ಮ ಚೈತನ್ಯಗಳ ಬಲದಿಂದಲೆ ಎಲ್ಲರನ್ನು ವಿಶ್ವಾಸದಿಂದ ಸಂಬಂಧ ಹೊಂದಬೇಕು. ಅದುವೆ ನಾಗರಿಕತೆ ಎಂಬುದನ್ನು ಚಾರಿತ್ರಿಕ ಘಟನೆಯ ಮೂಲಕ ತಿಳಿಸುತ್ತಾರೆ.

ನಾಲ್ಕನೇ ಲೇಖನವಾದ ಚರಿತ್ರೆಯ ಪಾಠ ಎಂಬುದರಲ್ಲಿ ಹಿಂದಿನಿಂದಲೂ ಇಂದಿನ ತನಕವೂ ಮಾನವನ ಸ್ವಾರ್ಥ, ಕ್ರೌರ್ಯ, ಸಂಕುಚಿತ ವರ್ತನೆಗಳಿಂದ ಆದ ಅನಾಹುತಗಳನ್ನು ಹೇಳುತ್ತಲೇ ಶಾಂತಿ, ಸಹಬಾಳ್ವೆ, ಪ್ರೀತಿಯ ವಾತಾವರಣ ನಿರ್ಮಾಣ ಮಾಡಿದರೆ ಮಾತ್ರ ಬದುಕಲು ಸಾಧ್ಯವೆಂಬುದನ್ನು ಉದಾಹರಣೆ ಮೂಲಕ ಕಟ್ಟಿಕೊಟ್ಟಿದ್ದಾರೆ.

ಚಾರಿತ್ರಿಕ ಸತ್ಯ ಎಂಬ ೫ನೇ ಲೇಖನದಲ್ಲಿ ಚರಿತ್ರೆಯ ಸೃಷ್ಟಿಯು ವಸ್ತುವಿಷಯವಾಗಿಯೂ ಮಾನವ ನಿಷ್ಠವಾಗಿಯೂ, ರಚಿತವಾಗಿ ಮಾನವನ ಬದುಕಿನ ವಿವಿಧ ಮುಖಗಳನ್ನು ಪರಿಚಯಿಸುವಂತಹ ಚರಿತ್ರೆ ಮಾತ್ರ ಒಪ್ಪಲು ಸಾಧ್ಯವೆಂಬದನ್ನು ಕಟ್ಟಿಕೊಟ್ಟಿದ್ದಾರೆ. ೬ನೇ ಲೇಖನವಾದ ಚರಿತ್ರೆ ಮತ್ತು ವ್ಯಾಖ್ಯಾನದಲ್ಲಿ ಕೇವಲ ವ್ಯಾಖ್ಯಾನ ಕೊಡುವುದು ಮಾತ್ರ ಚರಿತ್ರೆಯಾಗಿರದೆ ಪೂರ್ವಗ್ರಹ ಪೀಡಿತನಾಗದೆ ವಸ್ತುನಿಷ್ಠವಾಗಿ ಒಂದು ಪರಿಕಲ್ಪನೆ ಅರ್ಥೈಸಿದರೆ ಮಾತ್ರ ಚರಿತ್ರೆಯಾಗುವುದೆಂಬುದು ಈ ಲೇಖನದ ಮೂಲಕ ತಿಳಿಸುತ್ತಾರೆ. ೭ನೇ ಲೇಖನವಾದ ಚರಿತ್ರೆಯ ಪುನಾರಚನೆ ಎಂಬುದರಲ್ಲಿ ಸಿದ್ಧಮಾದರಿಯ ಅಥವಾ ಕೆಲವೆ ಜನವರ್ಗದ ಚರಿತ್ರೆಯ ಆಚೆ ಹೊಸ ಸಿದ್ಧಾಂತಗಳ ಹೊಸ ದೃಷ್ಟಿಕೋನದ ಸಮಗ್ರ ಚರಿತ್ರೆ ಶೋಧಿಸಿ ಸತ್ಯಗಳನ್ನು ಅನಾವರಣಗೊಳಿಸುವುದಾಗಿದೆನ್ನುತ್ತಾರೆ. ೮ನೇ ಲೇಖನವಾದ ನಾಯಕ-ನಿಜನಾಯಕನಲ್ಲಿ ನಾಯಕ ಹೇಗೆ ರೂಪಿತನಾಗುತ್ತಾನೆ. ಆತನ ಗುಣವಿಶೇಷಗಳೇನು? ಮತ್ತು ಚರಿತ್ರೆಯಲ್ಲಿ ಎಂತಹ ನಾಯಕರಿರುತ್ತಾರೆ ಅಥವಾ ಅಂತ ನಾಯಕರು ಚರಿತ್ರೆಯಲ್ಲಿ ಚರಿತ್ರೆಯಾಗಿಯೇ ಹೊಸ ಬದುಕನ್ನು ಕಟ್ಟಿಕೊಂಡದ್ದನ್ನು ತಿಳಿಸಲೆತ್ನಿಸುತ್ತಾರೆ. ನಂತರ ೯ನೇ ಲೇಖನವಾದ ಸ್ಮಾರಕ ಪ್ರೇರಣೆ ಎಂಬುದರಲ್ಲಿ ಸ್ಮಾರಕಗಳು ಕೇವಲ ಕಲ್ಲಿನಿಂದ ಚೆಂದಕ್ಕೆ ಮಾಡಿದಂತವಾಗಿರದೆ ಅನೇಕ ಸಾಧನೆಯ ಸಂಕೇತ ಮತ್ತು ಮೌಲ್ಯಗಳ ಸಂಕೇತವಾಗಿಯೂ ಇರುವಂತ ಸ್ಮಾರಕಗಳಿಂದ ಮತ್ತಷ್ಟು ಹುರುಪಿನಿಂದ ಸಾಧನೆಗೈಯ್ಯಲಿಕ್ಕೆ ಪ್ರೇರಣೆ ನೀಡುವವು ಎಂಬುದನ್ನು ತಿಳಿಸುತ್ತಾರೆ. ಇನ್ನು ೧೦ನೇ ಲೇಖನದಲ್ಲಿ ನಿಗೂಢ ಸ್ಮಾರಕದಲ್ಲಿ ಕೆಲವು ಸ್ಮಾರಕಗಳನ್ನು ನೋಡಿದ ಕೂಡಲೆ ಕೆಲವು ನಿಗೂಢ ಪ್ರಶ್ನೆಗಳನ್ನಿಟ್ಟುಕೊಂಡು ಆ ನಿಗೂಢತೆಯನ್ನು ಅರಿಯಲು ಪ್ರಯತ್ನಿಸುತ್ತಾರೆ. ಅದು ಹೇಗೆ ಸಾಧ್ಯವಿದೆ ಎಂಬುದನ್ನು ತಿಳಿಸುತ್ತಾರೆ.

೧೧ನೇ ಲೇಖನದಲ್ಲಿ ಸಮಕಾಲೀನ ಪ್ರಜ್ಞೆ ಎಂಬುದರಲ್ಲಿ ಮಾನವನು ಬೌದ್ಧಿಕವಾಗಿ ಸುಧಾರಿತಗೊಂಡಂತೆ, ಗಂಭೀರ ಚಿಂತನೆಗಳ ಪರಿಣಾಮ ವಿಶ್ವದ ನಿಗೂಢ ಸಂಗತಿಗಳನ್ನು ಹೇಗೆ ಬಹಿರಂಗಗೊಳ್ಳಲ್ಪಡುವವು ಎಂಬುದನ್ನು ತಿಳಿಸುತ್ತಾರೆ. ೧೨ನೇ ಲೇಖನವಾದ “ದೇವರೆಂಬ

ಹುಸಿ ಸತ್ಯದಲ್ಲಿ" ನಮಗೆ ಜಾತಿಗೊಂದು, ಧರ್ಮಕ್ಕೊಂದು ದೇವರು ಬೇಡದೆ ಇಡೀ ಮಾನವ ಸಂಕುಲವನ್ನು ಸರಿಯಾದ ದಿಕ್ಕಿನತ್ತ ಕೊಂಡೊಯ್ಯುವ ಮಾನವತಾ ಧರ್ಮ ಮಾತ್ರ ಇದ್ದರೆ ಸಾಕೆಂಬುದನ್ನು ಮನಗಾಣಿಸುತ್ತಾರೆ. ೧೩ನೇ ಲೇಖನವಾದ ವಿಜ್ಞಾನ ಮತ್ತು ದೇವರು ಎಂಬುದರಲ್ಲಿ ನಿಸರ್ಗದ ರಹಸ್ಯಗಳನ್ನು ಗ್ರಹಿಸಿ ಅದರಿಂದಾಗುವ ಪ್ರವೇಶವನ್ನು ದೇವರಿಗಿಂತ ಹೆಚ್ಚು ಕಾಣಲು ಸಾಧ್ಯ ಇದು ವೈಜ್ಞಾನಿಕ ಕಾರ್ಯದ ಮೂಲಕ ಮಾತ್ರ ಸಾಧ್ಯವೆನ್ನುತ್ತಾರೆ.

ಹೀಗೆ ಉನ್ನತ ಗುರಿ ಸ್ವಾನುಭವ, ಕ್ರಿಯಾನುಭವ, ಮೌನಿಗಳೆ ಮಾನಿಗಳು, ಅವಸರದ ಪ್ರತಿಫಲ, ಸಿರಿಸಂಪತ್ತು, ದಯೆ, ಕರುಣೆ, ಗುಣಸ್ವಭಾವ, ಹೊಗಳಿಕೆಯೆಂಬದುದ್ದು ಸತ್ಯದ ಆಚೆ ಈಚೆ ಪಾಪ ಮತ್ತು ತಪ್ಪು, ಅರಿದಡೆ ಶರಣ, ವಿದ್ವಾಂಸ, ಅಂದು-ಇಂದು, ಒಣ ಪಾಂಡಿತ್ಯ ಮತ್ತು ಕೀರ್ತಿ, ಬಿ.ಆರ್. ಅಂಬೇಡ್ಕರ್ ಮೂರು ಕಟ್ಟಳೆಗಳು, ಕಲಿವಾಲನ ಕ್ರೂರ ಮಗ ಎಂಬ ಒಟ್ಟು ೩೧ ಅರ್ಥಗರ್ಭಿತ ಲೇಖನದಲ್ಲಿ ಚರಿತ್ರೆಯಿಂದ ಆರಂಭವಾಗಿ ಬದುಕಿನ ಮೌಲ್ಯಗಳು, ವಿಜ್ಞಾನ ಯುಗದಲ್ಲಿನ ಒಳನೋಟ, ಕ್ರಿಯೆ, ಪ್ರತಿಕ್ರಿಯೆ, ಸಾಮಾಜಿಕ ನ್ಯಾಯ ಇತ್ಯಾದಿ ಹಲವು ಅಂಶಗಳನ್ನು ಒಳಗೊಂಡಂತಹ ಸತ್ಯಗಳನ್ನು ವಾಸ್ತವ ಬದುಕಿನೊಂದಿಗೆ ಮುಖಾಮುಖಿಯಾಗಿಸಿ ಓದುಗ ಲೋಕಕ್ಕೆ ಹಾಗೂ ನಮ್ಮ ಚಿಂತನೆಗೆ ದಾರಿ ಮಾಡಿಕೊಡುವಂತಹ ಲೇಖನಗಳಾಗಿವೆ.

ಜಾಗತಿಕ ಇತಿಹಾಸವನ್ನು ಬರೆಯುವಂತವರು, ಬರೆದವರು, ಬರೆಯುವವರು ಸಾಕಷ್ಟು ಆದರೆ ಸ್ಥಳೀಯ, ಪ್ರಾದೇಶಿಕ, ಮೌಖಿಕ ಚರಿತ್ರೆ ಬರೆಯುವವರು ವಿರಳ. ಇಂತಹ ಕೊರತೆ ನೀಗಿಸಬೇಕೆಂದರೆ ಇಂತಹ ಚರಿತ್ರೆ ರಚಿಸುವುದು ಅನಿವಾರ್ಯವಾಗಿದೆ ಎಂದೇ ಹೇಳಬಹುದು.

ಹಿಂದುಳಿದ ವರ್ಗಗಳ ಮತ್ತು ದಲಿತ ಚಳುವಳಿ : ಇದು ಚರಿತ್ರೆ ವಿಭಾಗದ ೧೯೯೮-೯೯ನೇ ಸಾಲಿನ ಯೋಜನೆಯಾಗಿದೆ. ಭಾರತದ ಸಾಮಾಜಿಕ ವ್ಯವಸ್ಥೆಯನ್ನು ತುಂಬಾ ಮಾರ್ಮಿಕವಾಗಿ ಅಧ್ಯಯನ ಮಾಡಿ, ಅರ್ಥಗರ್ಭಿತ ಕೃತಿಯನ್ನು ಕೊಟ್ಟಿದ್ದಾರೆ. ಇಲ್ಲಿರುವಂತ ಜಾತಿ-ಉಪಜಾತಿ ಪಂಗಡ, ಉಪಪಂಗಡ, ಮತ ಪಂಥಗಳು, ಇವುಗಳಲ್ಲಿನ ಸ್ತರ ವ್ಯವಸ್ಥೆ, ಸಾಮಾಜಿಕ ಅಂತಸ್ತು, ಹಿಂದುಳಿದವರು ಮತ್ತು ದಲಿತರ ಅರ್ಥ, ಹಿನ್ನೆಲೆ, ಚಳವಳಿ, ಮೀಸಲಾತಿಗೆ ಮೀಸಲಾದ ದೇಶಿಯ ಮತ್ತು ರಾಜ್ಯದ ಆಯೋಗಗಳ ಶಿಫಾರಸ್ಸು, ಜಾರಿಯಾದ ಆದೇಶ, ಮೀಸಲಾತಿಗಳು, ಸ್ಥಾನಮಾನ ಪಡೆಯಲಿಕ್ಕೆ ಕಟ್ಟಿಕೊಂಡ ಸಂಘಟನೆಗಳು, ಮೀಸಲಾತಿ ಮತ್ತು ಅದರಿಂದಾದ ಪ್ರಯೋಜನ ಸಮಸ್ಯೆ ಸಿಗಬೇಕಾದ ಮೀಸಲಾತಿಯ ಅನಿವಾರ್ಯತೆ, ಹಲವು ಸರ್ಕಾರದಿಂದ ಜಾರಿ ಹೊಂದಿದ ಕೋಷ್ಟಕಗಳ ಮೂಲಕ ಅಂಕಿಸಂಖ್ಯೆಗಳ ಸಹಿತವಾಗಿ ವಿಸ್ತೃತರೂಪದ ಚರ್ಚೆಯನ್ನು ಮಾಡುತ್ತಲೇ ಆದ ಅನ್ಯಾಯ ತಿಳಿಸುತ್ತಾ, ನ್ಯಾಯದ ಬಗ್ಗೆ ಒತ್ತಾಯಿಸುತ್ತಾ, ಅಲಕ್ಷಿತರ, ನೊಂದವರ, ಬಡವರ, ಅಲಕ್ಷಿತರ, ಅಸ್ಪೃಶ್ಯರ ದೀನಾಯ ಬವಣೆಯನ್ನು ನೀಡಿ ಸರ್ಕಾರಕ್ಕೆ ಮತ್ತು ಸಮಾಜಕ್ಕೆ ಎಚ್ಚರಿಕೆ ಸಂದೇಶವನ್ನು ಈ ಕೃತಿಯ ಮೂಲಕ ಲಕ್ಷ್ಮಣ್ ತೆಲಗಾವಿ ನೀಡಿದ್ದಾರೆ.

ಈ ಕೃತಿಯು ಅನೇಕ ಸಂಶೋಧಕರಿಗೆ ಸಂಘಟನೆಗಳಿಗೆ ಹಾಗೂ ಹೋರಾಟಗಾರರಿಗೂ ಉಪಯುಕ್ತವಾದದು. ಇದರ ಪ್ರಯೋಜನವು ಪಡೆಯುವವರ ಮೇಲಿದೆ. ಇಂತಹ ಕೃತಿಯನ್ನು ಸಂಶೋಧನಾ ಚಿಂತಕ ಲಕ್ಷ್ಮಣ್ ತೆಲಗಾವಿಯವರು ೧೯೯೯ರಲ್ಲಿ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಮೂಲಕ ಓದುಗ ಬಳಗಕ್ಕೆ ಅರ್ಪಿಸಿದ್ದಾರೆ.

ಸ್ಥಳೀಯ ಚರಿತ್ರೆ - ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ : ೨೦೦೦ರ ಮಾರ್ಚ್‌ನಲ್ಲಿ ಧಾರವಾಡದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಮಂಡಿಸಿದ ಲೇಖನಗಳ ಸಂಕಲನ ಇದಾಗಿದೆ. ಸಮಕಾಲೀನತೆ ಹಾಗೂ ಸದಸ್ಯದ ಜಾಗತೀಕರಣದ ನೆಲೆಯಲ್ಲಿ ಸ್ಥಳೀಯ ಆಕರ, ಸ್ಥಳೀಯ ದೃಷ್ಟಿಕೋನ, ಸ್ಥಳೀಯ ಭಾಷೆಯೊಂದಿಗೆ ನಮ್ಮ ಚರಿತ್ರೆಯನ್ನು ರಾಷ್ಟ್ರೀಯ ಘನತೆಗೆ ಧಕ್ಕೆಯಾಗದಂತೆ, ದೇಶಿ ಚರಿತ್ರೆಗೆ ಒಂದು ನಿರ್ದಿಷ್ಟ ತಾತ್ವಿಕ ಚೌಕಟ್ಟನ್ನು ಹಾಕಿಕೊಡುವ ಪ್ರಯತ್ನದ ಮೂಲಕ ವಿಶ್ಲೇಷಣೆಗೆ ಒಳಪಟ್ಟಿದೆ.

ಈ ಕೃತಿಯಲ್ಲಿ ಒಟ್ಟು ೬ ಲೇಖನಗಳಿದ್ದು ನಾಡಿನ ವಿವಿಧ ವಿದ್ವಾಂಸರಿಂದ ಹೊರತಂದಂತಹ ತಾತ್ವಿಕ ನೆಲೆಗಟ್ಟಿನ ಮಾಹಿತಿ ನೀಡಲಾಗಿದೆ. ಇಂತಹ ಅರ್ಥಗರ್ಭಿತ ಲೇಖನಗಳ ಸಂಪಾದನೆಯು ಲಕ್ಷ್ಮಣ್ ತೆಲಗಾವಿಯವರದಾಗಿದ್ದು. ಈ ಪ್ರಸ್ತಾವನೆಯಲ್ಲಿ ಅವರೇ ನಿರೂಪಿಸುವಂತೆ ಮೊದಲು ನನ್ನ ಗ್ರಾಮ, ನನ್ನ ಇತಿಹಾಸ, ಆ ಮೂಲಕ ರಾಷ್ಟ್ರೀಯ ಚರಿತ್ರೆಗಳನ್ನು, ಕೊಡುಗೆಯನ್ನು ಹೇಗೆ ನೀಡಬಹುದಾಗಿದೆ. ಅಂತಹ ಸಂದರ್ಭದಲ್ಲಿ ಈಗಾಗಲೇ ಇರುವ ತಾತ್ವಿಕ ಚೌಕಟ್ಟುಗಳು ಹೇಗೆ ಸೆಣಸಾಡಬಲ್ಲವು. ಅವೆಲ್ಲವು ಸ್ಥಳೀಯ ಚರಿತ್ರೆಗೆ ಹೇಗೆ ಉತ್ತರವಾಗಬಲ್ಲದು ಎಂಬುದನ್ನು ಕೃತಿಯಲ್ಲಿ "ಸ್ಥಳೀಯ ಚರಿತ್ರೆ" ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ" ಎಂಬ ಶೀರ್ಷಿಕೆಯೊಂದಿಗೆ ನೀಡಿದ್ದಾರೆ. ಈ ಕೃತಿಯು ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರಸಾರಾಂಗದ ಮೂಲಕ ೨೦೦೩ರಲ್ಲಿ ನಾಡಿನ ಓದುಗ ಲೋಕಕ್ಕೆ ಅರ್ಪಿತವಾಗಿದ್ದು ಈ ಕೃತಿಯಿಂದಲೇ ಅನೇಕ ಸಂಶೋಧಕರು ಸ್ಥಳೀಯ, ಪ್ರಾದೇಶಿಕ, ಮೌಖಿಕ ಚರಿತ್ರೆಯನ್ನು ವೈಜ್ಞಾನಿಕವಾಗಿಯೂ, ವ್ಯಾಪಕವಾಗಿಯೂ, ವಸ್ತುನಿಷ್ಠವಾಗಿಯೂ ರಚಿಸುವಂತಹ ಪ್ರಯೋಜನ ಪಡೆದುಕೊಂಡಿದ್ದಾರೆ.

ಡಾ. ಎಚ್.ಆರ್. ರಘುನಾಥ ಭಟ್ಟ ಸ್ಮರಣೆ

ಮಾನಸ ಗಂಗೋತ್ರಿಯ ವಿಶ್ವವಿದ್ಯಾಲಯವು ಇಬ್ಬರು ಮಹಾನ್ ವಿದ್ವಾಂಸರ ಸಮಾಗಮನಕ್ಕೆ ಸಾಕ್ಷಿಯಾಗಿದುದು ೧೯೭೨ರಲ್ಲಿ ಪ್ರಕಟಗೊಂಡ ಇತಿಹಾಸ ವಾರ್ಷಿಕ ಸಂಚಿಕೆ ಮೂಲಕ ಸಂಚಿಕೆಯ ಮೂಲಕ ಆರಂಭವಾದ ಸ್ನೇಹ ಸಂಬಂಧ ಉದ್ಯೋಗ, ಕ್ಷೇತ್ರ, ಸಂಶೋಧನಾ ಕ್ಷೇತ್ರದಲ್ಲಿಯೂ ಒಡನಾಡಿಯಾಗುವ, ನಾಡಿನ ಐತಿಹಾಸಿಕ ಲೋಕಕ್ಕೆ ಏನಾದರೂ ಕೊಡಲೇಬೇಕೆಂಬ ಹೆಬ್ಬಯಕೆಯೊಂದಿಗೆ. ಹೆಜ್ಜೆ ಹಾಕಿದರು. ಕೆಲವು ವರ್ಷ ಉಪಜೀವನ ಮತ್ತು ಬೋಧನಾ ಲೋಕಕ್ಕೆ ಪಾದಾರ್ಪಣೆ ಮಾಡಿದರು. ಸಂಶೋಧನಾ ಪ್ರವೃತ್ತಿಯ ಗೆಳೆತನಕ್ಕೆ ಯಾವುದೇ ಭಂಗ ಬರಲಿಲ್ಲ. ಸ್ಥಳಬದಲಾದರು, ಗುಣಬದಲಾಗದೆ ಸಂಶೋಧನಾ ಲೋಕದಲ್ಲಿ ದೀರ್ಘ ಪಯಣ

ಮುಂದುವರಿಯುತ್ತವೆ. ಇದಕ್ಕೆ ಮೂರು ದಶಕಗಳ ಒಡನಾಟವು 'ಸಾಕ್ಷಿ' ಯಾಯಿತು. ಆದರೆ ದಿಢೀರನೆ ಸಂಭವಿಸಿದ ಕಾಲಭೈರವನ ಹೊಡೆತಕ್ಕೆ ಡಾ. ರಘುನಾಥ್ ಭಟ್ಟರೆಂಬ ಸಂಶೋಧನಾ ಕೊಂಡಿ ಕಳಚಿದ ಸುದ್ದಿಯು ಮತ್ತೊಂದು ಕೊಂಡಿಗೆ ತಿಳಿದ ತಕ್ಷಣ ಜಂಗಬಲವೇ ಕುಸಿದಂತಾಗಿ ಮರುಗಿದರಲ್ಲದೆ, ಸಂಶೋಧನಾ ಲೋಕದ ಒಂದು ಜ್ಯೋತಿ ನಂದಿದ್ದನ್ನು ಸಹಿಸಲಾಗದಿದ್ದರು. ಸಾವು ಎನ್ನುವಂತದ್ದು ಅನಿವಾರ್ಯವಾದ್ದರಿಂದ ಅವರ ನೆನಪು ಕೇವಲ ನೆನಪಾಗಿಯೆ ಉಳಿದ ಸಂಶೋಧನಾ ವಲಯದಲ್ಲಿ ನೆನಪಾಗಿ ಹಾಗೆಯೆ ಕರಗಬಾರದು, ಅದು ಕೃತಿಯ ರೂಪದಲ್ಲಿ ಬಂದರೆ ಆದರಿಂದ ಹಲವು ವಿದ್ವಾಂಸರಿಗೆ ದಾರಿದೀಪವಾಗುವಂತೆ ಮಾಡಬೇಕೆನ್ನುವ ಒತ್ತಾಸೆಯಿಂದಲೇ ಭಟ್ಟರ ಪರಮಾಪ್ತ ತೆಲಗಾವಿಯವರು ಡಾ. ಎಚ್.ಆರ್. ರಘುನಾಥ್ ಭಟ್ಟ ಸ್ಮರಣೆ ಎಂಬ ಶೀರ್ಷಿಕೆಯೊಂದಿಗೆ ವಿದ್ವತ್‌ಲೋಕಕ್ಕೆ ಅರ್ಪಣೆ ಮಾಡುವ ದೃಷ್ಟಿಯಿಂದ ಭಟ್ಟರ ಅನುಯಾಯಿಗಳು, ಬುದ್ಧಿಜೀವಿಗಳು, ಒಡನಾಡಿಗಳು, ಸಂಶೋಧನಾ ಲೋಕದ ಸಂಶೋಧಕರಿಂದ ಅರ್ಥ ಗರ್ಭಿತ ಲೇಖನಗಳನ್ನು ಬರೆಯಿಸಿ ಪುಸ್ತಕ ರೂಪದಲ್ಲಿ ಹೊರತಂದವರು ತೆಲಗಾವಿ. ಒಬ್ಬ ಸಂಶೋಧಕ ಮತ್ತೊಬ್ಬ ಸಂಶೋಧಕರಿಗೆ ನೀಡುವ ಅಪೂರ್ವ ಕೊಡುಗೆ ಸ್ಮರಣ ಸಂಶೋಧನಾ ಕೊಡುಗೆಯಾಗಿದೆ.

ಕೆಲವರು ಬದುಕಿದ್ದಾಗಲೆ ಸತ್ತಿರುತ್ತಾರೆ. ಆದರೆ ಕೆಲವರು ಮಾತ್ರ ಸತ್ತ ಮೇಲೆಯು ಬದುಕಿರುತ್ತಾರೆ. ಸತ್ತ ಮೇಲೆಯು ಬದುಕಿದವರೆಂದರೆ, ಸೃಜನಶೀಲ, ಹಸನ್ಮುಖಿ, ಆಕರ್ಷಕ ವ್ಯಕ್ತಿತ್ವ ಸ್ವರೂಪಿ, ಉತ್ಸಾಹಿ ಕ್ರಿಯಾಶೀಲ, ಸಮರ್ಥ ಶ್ರದ್ಧಾವಂತ, ವಿದ್ವಾನ್ ವಿನಯಭೂಷಣ, ವಿದ್ವತ್ ಹುಡುಕಾಟದ ಪ್ರವೃತ್ತಿ ಸಂಗ್ರಹ ಸಾಮರ್ಥ್ಯ ಮೂರ್ತಿ, ಪಾರದರ್ಶಕ ವಿಮರ್ಶಗುಣ ಹೊಂದಿದ, ಇಷ್ಟ ಲಿಂಗದಂತೆ ಎದೆಯ ಮೇಲೆ ಕ್ಯಾಮಾರಾ ನೇತುಹಾಕಿಕೊಂಡು ಸದಾ ಆಲೋಚನೆಯಲ್ಲಿ ತೊಡಗುತ್ತಿದ್ದ ಭಟ್ಟರು, ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕು ಹರೀಶಿ ಎಂಬ ಗ್ರಾಮದಲ್ಲಿ ದಿನಾಂಕ ೨೧, ಅಕ್ಟೋಬರ್ ೧೯೪೬ರಲ್ಲಿ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಎಸ್.ಎಸ್.ಎಲ್.ಸಿ.ಯಿಂದಲೇ ಪ್ರಥಮ ರ್‍ಯಾಂಕ್‌ಗಳನ್ನು ಗಳಿಸುತ್ತಲೆ ಉನ್ನತ ಶಿಕ್ಷಣ ಹಂತದವರೆಗೂ ಪಡೆದುಕೊಂಡು, ೧೯೭೨ರಿಂದ ೨೦೦೩ರ ತನಕ ಒಟ್ಟು ೩೦ ವರ್ಷಗಳ ಕಾಲ ಬೋಧನೆಯಲ್ಲಿ ಅಧ್ಯಾಪಕರಾಗಿ, ರೀಡರ್‌ರಾಗಿ, ಪ್ರಾಧ್ಯಾಪಕರಾಗಿ, ಸಂಶೋಧನಾ ಕ್ಷೇತ್ರದಲ್ಲಿ ೨೮ ವರ್ಷ ಅನುಭವ ಪಡೆದು, ಪಿಎಚ್.ಡಿ.ಗೆ ೬, ಎಂ.ಫಿಲ್.ಗೆ ೬ ಜನರಿಗೆ ಮಾರ್ಗದರ್ಶಕರಾಗಿ, ೬೦ ವಿದ್ಯಾರ್ಥಿಗಳಿಗೆ ಎಂ.ಎ. ಪ್ರಬಂಧಗಳ ಮಾರ್ಗದರ್ಶಕರಾಗಿಯೂ, ವಿಭಾಗೀಯ ಸಂಶೋಧನಾ ಯೋಜನೆಯಲ್ಲಿ ವೈಯಕ್ತಿಕ ಸಂಶೋಧನಾ, ಸಂದರ್ಶಕ ಪ್ರಾಧ್ಯಾಪಕರಾಗಿ, ೫೦ಕ್ಕೂ ಹೆಚ್ಚು ಉಪನ್ಯಾಸ ಕಾರ್ಯಕ್ರಮ ನೀಡಿದವರು. ೧೮೦ಕ್ಕೂ ಅಧಿಕ ವಿಚಾರಸಂಕಿರಣಗಳು ಮತ್ತು ಅಧಿವೇಶನಗಳಲ್ಲಿ ಭಾಗಿಯಾಗಿ, ೧೨ಕ್ಕೂ ಅಧಿಕ ಕೃತಿ ರಚಿಸಿ, ಹಲವು ಪುರಸ್ಕಾರ, ಪುಸ್ತಕ ವಿಮರ್ಶೆ ಪ್ರತಿಷ್ಠಿತ ಸಂಸ್ಥೆಗಳ ಸದಸ್ಯತ್ವ, ಶಾತವಾಹನರ ಸೋಂದ ಅರಸರ ನಾಣ್ಯ, ರೋಮನ್ ಅವಶೇಷ, ಶಿಲ್ಪಗಳು, ಕೊಪ್ಪಹೆಗ್ಗಡೆ ಹಳ್ಳಿ, ಬನವಾಸಿ, ಇನಾಮ್

ಗಾಂವ್, ತಲಕಾಡು, ಗುಡ್ನಾಪುರ, ಮೊದಲಾದ ಸ್ಥಳಗಳನ್ನು ಉತ್ಖನ್ನದ ಕ್ಯಾಂಪ್‌ಗಳಲ್ಲಿ ಸಕ್ರಿಯವಾಗಿಯೂ ಕಾರ್ಯಪ್ರವೃತ್ತರಾದರು. ಬೌದ್ಧ, ಜೈನ, ಶೈವ, ಕ್ರೈಸ್ತ ಧರ್ಮಗಳ ವಾಸ್ತುಶಿಲ್ಪ ವಿಶೇಷಗಳನ್ನು ಅಧ್ಯಯನಿಸಿಯೂ, ಮೌರ್ಯ, ಶಾತವಾಹನ, ಕದಂಬ, ಚಾಲುಕ್ಯ, ಹೊಯ್ಸಳ, ವಿಜಯನಗರ, ಕೆಳದಿ, ಸ್ವಾದಿ, ಬೀಳಿಗಿಗಳಂತ ಸಂಸ್ಥಾನಿಕರ ಬಹುಮುಖಿ ಅಧ್ಯಯನ ಮಾಡಿ ಪ್ರಾದೇಶಿಕ ಇತಿಹಾಸ ರಚನೆಯ ವಿಧಿ-ವಿಧಾನಗಳನ್ನು ಸೂಕ್ಷ್ಮ ಸ್ತರದಲ್ಲಿ ಶ್ರುತಪಡಿಸುವ ಪುರಾತತ್ವ ನೂತನ ದೃಷ್ಟಿಕೋನದಿಂದ ವಿಶ್ಲೇಷಿಸುವ ಸಾಮರ್ಥ್ಯ ಮೈಗೂಡಿಸಿಕೊಂಡಂತಹ ವ್ಯಕ್ತಿ ಭಟ್ಟರಾಗಿದ್ದಾರೆ.

ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳ ಮೇಲೆ ಆಗಾದ ಹಿಡಿತ ಸಾಧಿಸಿದ್ದು, ಭಾಷೆ ಬಳಕೆ, ಪದಸ್ಪಷ್ಟ ಉಚ್ಚಾರ, ಲಯಬದ್ಧ ಎರಿಳಿತ, ಮೈಗೂಡಿಸಿಕೊಂಡು ಯಾವುದೇ ವಿಷಯವನ್ನು ಬಹುಜ್ಞಾನಗಳ ತಿಳುವಳಿಕೆಯ ನೆಲೆಯಲ್ಲಿ ಮಂಡಿಸುವ ಕಲೆಗಾರಿಕೆಗೆ ನಿಬ್ಬರಗಾದವರು ಬಹಳ ಜನರಿದ್ದಾರೆ. ಇಂತಹ ಮಂಡನೆ ಸಂದರ್ಭದಲ್ಲಿ ಪೂರಕ ದಾಖಲೆ, ನಾಣ್ಯ, ಛಾಯಾಚಿತ್ರ, ಶಾಸನಪಡಿಯಚ್ಚು, ಚಿತ್ರವನ್ನು ತಾವೇ ಬಿಡಿಸಿ ಸುಲಭವಾಗಿ ಅರ್ಥವಾಗುವಂತೆ ಮಂಡಿಸುತ್ತಿದ್ದರು. ಹಲವು ಸಾಂಸ್ಕೃತಿಕ ಕಾರ್ಯ ಇತರೆ ಕಾರ್ಯ ಹಾಗೂ ಕಲಾಪಗಳಲ್ಲಿ ಕಡ್ಡಾಯವಾಗಿ ಪಾಲ್ಗೊಂಡು ಪಾದರಸದಂತೆ ಕ್ರಿಯಾಶೀಲರಾಗಿರುತ್ತಿದ್ದರಿಂದಲೆ, ಲೇಪಾಕ್ಷಿ, ಬ್ರಾಹ್ಮಿಬರಹ, ಅರೇಬಿಕ್ ಲಿಪಿ ಶೈಲಿಯ ಪರ್ಶಿಯನ್ ಶಾಸನ, ಅಸ್ಸಾಂ, ಬಂಗಾಳ, ಕೇರಳ, ಗೋವಾ ಮತ್ತು ಮುಂಡಾ ಜನಾಂಗವನ್ನು ಅಧ್ಯಯನದ ವ್ಯಾಪ್ತಿಗೆ ಹರಡಿಸಿಕೊಂಡಿದ್ದಕ್ಕೆ ಸಾಕ್ಷಿಯಾಗಿದೆ. ಕೆಲವು ದೂರದ ಸಂಶೋಧಕರಿಗೆ ಸಂಶೋಧನಾ ಸಮಸ್ಯೆಗೆ ಅಂಚೆ ಕಾರ್ಡಿನ ಮೂಲಕ ಉತ್ತರಿಸುತ್ತಿದ್ದರು. ಆದ್ದರಿಂದಲೆ ಮೂಲೆ ಮೂಲೆಯಲ್ಲಿಯೂ ಸಂಶೋಧನಾ ಶಿಷ್ಯರನ್ನು ಹುಟ್ಟುಹಾಕಿ ದೈವಾದೀನ ರಾಗಿದ್ದಾರೆ. ಇಂತಹ ಸಂಶೋಧನಾ ಪಟುವನ್ನು ಹೆಮ್ಮೆಯಿಂದಲೆ ಬರಹ ರೂಪದಲ್ಲಿ ಸ್ಮರಿಸಿದವರೆಂದರೆ ತೆಲಗಾವಿ ಮಾತ್ರ ಹೀಗಿದ್ದರು; ನಮ್ಮ ಭಟ್ಟರು ಎಂಬ ಲಕ್ಷ್ಮಣ್ ತೆಲಗಾವಿ ಬಹು ಭಾಷೆಗಳ ಪಂಡಿತರೆಂಬ ಡಾ. ಕೆ.ಎಂ. ಸುರೇಶ್ ಆತ್ಮೀಯಗುರು ಗೆಳೆಯ ಎಂಬ ಡಾ. ಬಾಲಸುಬ್ರಣ್ಯಂ, ಸಮರ್ಥಕ ಮಾರ್ಗದರ್ಶಕರೆಂಬ ಡಾ. ಸಿ.ಎಸ್. ವಾಸುದೇವನ್ ಪ್ರತಿಭಾನ್ವಿತಗುರು ಎಂಬ ಡಾ. ವಾಸುದೇವ ಬಡಿಗೇರ, ಪ್ರೀತಿಯ ಗುರುಗಳು ಎಂಬ ರಮೇಶ್ ನಾಯಕ, ಚೈತನ್ಯಶೀಲ ವ್ಯಕ್ತಿ ಎಂಬ ಡಾ. ಕೆ.ಜಿ. ಭಟ್‌ಸೂರಿ, ಯುವ ಸಂಶೋಧಕರ ದಾರಿದೀಪವೆಂಬ ಡಾ. ಡಿ.ವಿ. ಪರಮಶಿವಮೂರ್ತಿ, ಸಂಶೋಧನಾ ಕ್ಷೇತ್ರದಲ್ಲೊಂದು ಗಟ್ಟಿಕಾಳು ಎಂಬ ಡಾ. ಎಫ್.ಟಿ. ಹಳ್ಳಿಕೇರಿ, ಸೃಜನಶೀಲ ಸಂಶೋಧಕನೆಂಬ ಡಾ. ಕೆ. ರವೀಂದ್ರನಾಥ್, ಸಂಶೋಧನಾ ಕ್ಷೇತ್ರದ ಕಾಮನಬಿಲ್ಲು ಎಂಬ ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಮುಂತಾದವರ ಅಭಿಮಾನದ ಬರಹವು ಓದುಗ ಲೋಕಕ್ಕೆ ಉಪಯುಕ್ತ ಗ್ರಂಥವಾಗಿದೆ. ಇಂತಹ ಗ್ರಂಥಕ್ಕೆ ಕಾರಣಕರ್ತ ಸಂಶೋಧಕ ಲಕ್ಷ್ಮಣ್‌ತೆಲಗಾವಿಯವರು ಕ್ರಿಯಾಶೀಲ ಸಂಪಾದಕರಾಗಿ, ಸೃಜನಶೀಲ ಸಂಪಾದಕರಾಗಿ ಕೆಲಸ ಮಾಡಿದ್ದಾರೆ.

ಮೌರ್ಯ ಮತ್ತು ಶಾತವಾಹನ ಯುಗ : ೨೦೦೪ರಲ್ಲಿ ಪ್ರಕಟಗೊಂಡ ಈ ಕೃತಿಯು ಒಳಗೊಂಡಿರುವ ಪ್ರಮುಖ ಅಂಶವೆಂದರೆ ಮೌರ್ಯರು ಮತ್ತು ಶಾತವಾಹನರ ಆಡಳಿತಾವಧಿಯ ವಿವರಗಳು. ಇದು ಕ್ರಿಪೂ. ೩ನೇ ಶತಮಾನದಿಂದ ಕ್ರಿ.ಶ. ೩ನೇ ಶತಮಾನದ ಕಾಲಾವಧಿಯಾಗಿದ್ದು, ರಾಜಕೀಯ ವ್ಯವಸ್ಥೆಗೆ ಭದ್ರಬುನಾದಿ ಹಾಕಿದ ಅವಧಿ ಮೌರ್ಯಾಡಳಿತದ್ದು; ಶಿಸ್ತಿನ ಸೇನಾ ಏರ್ಪಾಡು ವ್ಯಾಪಾರ-ವ್ಯವಹಾರಗಳಲ್ಲಿ ಅಧಿಕೃತ ನಾಣ್ಯ ಪದ್ಧತಿಯ ಬಳಕೆ ಹಾಗೂ ಲಿಪಿಯ ಬಳಕೆಯು ವ್ಯಾಪಕವಾಗಿದೆ. ಭಾಷೆ, ಸಾಹಿತ್ಯ, ಕಲೆಗಳ ಪ್ರಾರಂಭದ ಹಂತವಾಗಿದ್ದು ಕೆಂಪು ಮರಳಿನ ಚಿತ್ರಿತ ವೃತ್ತ, ಫಲಕಶೋಧ, ಕೋಟೆಗಳ ನಿರ್ಮಾಣ ಮುಂತಾದ ಕೊಡುಗೆಗಳನ್ನು ಕಾಣಬಹುದಾಗಿದೆ. ಬೃಹತ್ ಶಿಲಾಸಂಸ್ಕೃತಿಯ ಜನರು ಕಬ್ಬಿಣದ ಅದಿರನ್ನು ಕರಗಿಸುವುದರಲ್ಲಿ ಮತ್ತು ಕಮ್ಮಾರಿಕೆಯಲ್ಲಿ ಪರಿಣಿತರಾದವರು. ಇಂಥ ಬೃಹತ್ ಆರ್ಥಿಕ ಕ್ಷೇತ್ರವನ್ನು ವಶಪಡಿಸಿಕೊಳ್ಳುವಲ್ಲಿ ಅಶೋಕನಿಗಿದ್ದ ಆಸಕ್ತಿಯೆಂದರೆ, ಲೋಹೋದ್ಯಮದಲ್ಲಿ ಸಿದ್ಧಿ ಪಡೆದ ದೊಡ್ಡ ಸಮುದಾಯವೊಂದನ್ನು ಸುಲಭದಲ್ಲಿ ತನ್ನ ಹಿಡಿತದಲ್ಲಿರಿಸಿಕೊಳ್ಳುವುದು ಮತ್ತು ಆರ್ಥಿಕ ಲಾಭ ಪಡೆದುಕೊಳ್ಳುವುದಾಗಿತ್ತು. ಕರ್ನಾಟಕದಲ್ಲಿ ಪ್ರಥಮ ನಿರ್ದಿಷ್ಟ ಲಿಪಿ ಬಳಕೆಯೊಡನೆ ಲಿಖಿತ ದಾಖಲೆಗಳನ್ನು ಸೃಷ್ಟಿಸಿದ ಹಾಗೂ ಬರಹ ಸಂಸ್ಕೃತಿಯನ್ನು ಹರಡಿದ ಚಕ್ರವರ್ತಿ ಅಶೋಕನಾಗಿದ್ದು, ಕ್ರಿಪೂ. ೩ನೇ ಶತಮಾನದ ವೇಳೆಗಾಗಲೆ ಬ್ರಾಹ್ಮಿಲಿಪಿ ಮತ್ತು ಪ್ರಾಕೃತ ಭಾಷೆ, ಉಪಭಾಷೆಗಳು ಹೆಚ್ಚು ಸುಧಾರಣೆಗೊಳಪಟ್ಟಿದ್ದವೆಂಬುದಕ್ಕೆ ಪುರಾವೆ ಒದಗಿಸಲಾಗಿದುದು ಬಂಡೆ ಬರಹಗಳು, ಧರ್ಮ, ಭಾಷೆ ಮತ್ತು ಲಿಪಿ ಇವುಗಳಿಂದ ದೇಶದ ಒಗ್ಗಟ್ಟನ್ನು ಬಲಪಡಿಸುವುದು, ಐಕ್ಯಗೊಳಿಸುವುದು ಅಶೋಕನ ಹೆಗ್ಗಳಿಕೆಯಾಗಿದ್ದಿತು.

ಮೌರ್ಯರಂತೆಯೆ ಶಾತವಾಹನರು ಮತ್ತು ಅವರ ಸಾಮಂತರ ಕೊಡುಗೆಗಳು ಸಾಂಸ್ಕೃತಿಕವಾಗಿ ಮಹತ್ವಪೂರ್ಣವಾದವಾಗಿದ್ದು, ಶಾತವಾಹನರು ಸಹ ಮೌರ್ಯರಂತೆಯೇ, ಬೃಹತ್ ಶಿಲಾಯುಗದ ಜನರೊಡನೆ ನೇರ ಸಂಪರ್ಕ ಹೊಂದಿದ್ದವರು. ಬೃಹತ್ ಶಿಲಾಸಮಾಧಿ ಕಾಲಕ್ಕೂ ಶಾತವಾಹನರ ಕಾಲಕ್ಕೂ ಕಬ್ಬಿಣದ ಕೃಷಿ ಉಪಕರಣಗಳ ಆಕರಗಳಲ್ಲಿ ಹೆಚ್ಚು ಮಾರ್ಪಾಡು ಕಂಡು ಬರುವುದಿಲ್ಲ ಎನ್ನುವುದೇ ಇದನ್ನು ಸಮರ್ಥಿಸುತ್ತದೆ. ಶಾತವಾಹನರಲ್ಲಿ 'ತಾಯಿಕಟ್ಟೆ ಸಮಾಜ ರಚನೆ'ಯ ಕುರುಹುಗಳು ಕಂಡುಬರುತ್ತವೆನ್ನುವುದನ್ನು ಈ ಅರಸರ ಹೆಸರುಗಳೆ ಸೂಚಿಸುತ್ತವೆನ್ನುವುದು ಇಲ್ಲಿ ಗಮನಾರ್ಹವಾಗಿದೆ. ಶಾತವಾಹನರ ಕಾಲದ ಸಮಾಜವು ಮಹಿಳಾ ಪ್ರಧಾನ ಸಮಾಜವಾಗಿದ್ದಿರ ಬೇಕೆಂದು ತರ್ಕಿಸಬಹುದಾದರೂ, ಸಿಂಹಾಸನದ ಹಕ್ಕುದಾರನಾಗಿದ್ದವನು ರಾಜಕುಮಾರನೆ ಹಾಗೂ ಆರ್ಯ ಧರ್ಮವನ್ನೆ ಈ ಅರಸರು ಸಹ ಪ್ರತಿಪಾದಿಸಿದರು. ಆದರೆ ಅನ್ಯಾಯುತ ಬೌದ್ಧಮತ ಸಹಿಷ್ಣುಗಳೂ ಆಗಿದ್ದರೂ ಮತ್ತು ಅಶೋಕನ ಕಾಲದ ಹಲವಾರು ಪದ್ಧತಿಗಳು ಇವರ ಕಾಲದಲ್ಲೂ ಮುಂದುವರೆದವು. ಅವು ವಾಸ್ತುಶಿಲ್ಪ, ಲಿಪಿ, ಭಾಷೆ ಇತ್ಯಾದಿ ಕೆಲವು ಉದಾಹರಣೆಗಳಾಗಿವೆ. ಈ ಅರಸರ ರಾಜಕೀಯ ಪ್ರವೃತ್ತಿ ಕುರಿತು ಉದ್ಗ್ರಂಥಗಳೆ ರಚನೆಗೊಂಡಿವೆ.

ಕರ್ನಾಟಕದ ಮಟ್ಟಿಗೆ ಚರಿತ್ರಾರಂಭಕಾಲದ ಸಂಸ್ಕೃತಿಯ ವೈಭವವನ್ನು ಪ್ರತಿಬಿಂಬಿಸುವಲ್ಲಿ ಬಹುಮುಖ್ಯ ಪಾತ್ರವಹಿಸಿರುವರು. ಹೀಗೆ ಮೌರ್ಯರು ಮತ್ತು ಶಾತವಾಹನರು ತಮ್ಮದೇ ಕೊಡುಗೆ ನೀಡಿ ನಾಡು-ನುಡಿಯ ಕಟ್ಟಲು ನೆರವಾಗಿದ್ದಾರೆ.

ಚಿತ್ರದುರ್ಗ ಜಿಲ್ಲಾ ಇತಿಹಾಸ ಅಧ್ಯಯನದ ವ್ಯಾಪಕತೆ ಮತ್ತು ಸಾಧ್ಯತೆ-ಒಂದು ಶತಮಾನ: "ಇತಿಹಾಸ ಅಧ್ಯಯನ ಮತ್ತು ಸಂಶೋಧನೆ" ಎಂಬುದು ಸದ್ದುಗದ್ದಲವಿಲ್ಲದೆ ನಡೆಯುವಂತಹ, ಒಂದು ಗಂಭೀರ ವಿದ್ವತ್ ಚಟುವಟಿಕೆ, ಇತಿಹಾಸದ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಒಂದು ಜಿಲ್ಲಾ ವ್ಯಾಪ್ತಿಯಲ್ಲಿ ದೊರೆಯಬಲ್ಲ, ಹಲವು ವಿಧದ ಮಾಹಿತಿಯನ್ನು ಒಂದೆಡೆ ಸಂಗ್ರಹಿಸಿಕೊಡುವುದು ತುಂಬಾ ಕಷ್ಟದ ಕೆಲಸ, ಅದರಲ್ಲೂ ಕಾಲ ಮತ್ತು ವಿಷಯಕ್ಕನುಗುಣವಾಗಿ ಇಂತಹ ಮಾಹಿತಿಯನ್ನು ವರ್ಗೀಕರಿಸಿಕೊಡುವುದು ಸುಲಭವಲ್ಲ. ಆ ಮೂಲಕ ಇತಿಹಾಸ ವಸ್ತು ಕಾಲಕಾಲಕ್ಕೆ ಪ್ರಜ್ಞಾವಂತಿಕೆಯ ನೆಲೆಯಲ್ಲಿ ಬಳಕೆಗೊಂಡು ಜನಜೀವನದ ಮೇಲೆ ಇತರ ಕ್ಷೇತ್ರಗಳ ಮೇಲೆ ಪ್ರಭಾವ ಬೀರುವಂತ ಸಂದರ್ಭಗಳನ್ನು ಹೇಗೆ ಸೃಷ್ಟಿಸಿಕೊಂಡಿತೆಂಬುದನ್ನು ಹೇಳುವ ಪ್ರಯತ್ನ ಇದಾಗಿದೆ.

ಈ ಕೃತಿಯಲ್ಲಿ ಚಿತ್ರದುರ್ಗದ ಸಂಕ್ಷಿಪ್ತ ಪರಿಚಯ ಚಿತ್ರದುರ್ಗ ಒಂದು ತಾಲ್ಲೂಕಾಗಿ, ಒಂದು ಜಿಲ್ಲೆಯಾಗಿ, ಪಾಳೆಯಗಾರರ ನೆಲೆಯಾಗಿ ಕರ್ನಾಟಕಕ್ಕೆ ಕೊಡುಗೆ ನೀಡಿದ, ಅನ್ಯ ದೇಶೀಯ ಸಂಸ್ಥಾನಗಳು ಮತ್ತು ದೇಶಿಯ ಸಂಸ್ಥಾನಗಳೊಂದಿಗಿನ ಸಂಘರ್ಷ-ಶೌರ್ಯ, ಹೋರಾಟ, ಸಂಧಾನ ಜನಹಿತ ಕಾರ್ಯಕ್ರಮಗಳು ಹೇಗೆ ಮೂಡಿಬಂದವು ಎಂಬುದರ ಜೊತೆಗೆ, ಬಹುಹಿಂದಿನಿಂದಲೂ ದುರ್ಗದ ಬಗ್ಗೆ ಶೋಧಿತವಾದ ಸಂಶೋಧನೆಯ ಮೆಲುಕು ಮತ್ತು ಸಂಶೋಧನೆಯ ಸಾಧ್ಯತೆಗಳನ್ನು ಕರಾರುವಕ್ಕಾಗಿ ತಿಳಿಸುತ್ತಾರೆ. ಕಳೆದ ನೂರು ವರ್ಷಗಳಿಂದ ಚಿತ್ರದುರ್ಗವು ಸಂಶೋಧಕರೊಂದಿಗೆ, ಯಾತ್ರಿಕರೊಂದಿಗೆ, ಹೇಗೆ ಮುಖಾಮುಖಿಯಾಯಿತು ಎಂಬುದನ್ನು ಈ ಕೃತಿಯು ತಿಳಿಸುತ್ತದೆ. ಇದು ಕೇವಲ ಶೈಕ್ಷಣಿಕ ವಲಯಕ್ಕೆ ಸೀಮಿತವಾಗದೆ, ಸರ್ವಕ್ಷೇತ್ರಕ್ಕೂ ವ್ಯಾಪಿಸಿ ಅರ್ಥಪೂರ್ಣವಾಗಿದೆ. ಇಂತಹ ಉತ್ಕೃಷ್ಟ ಕೃತಿಯನ್ನು ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆಯವರು ೨೦೦೪ರಲ್ಲಿ "ಚಿತ್ರದುರ್ಗ ಜಿಲ್ಲಾ ಇತಿಹಾಸ ಅಧ್ಯಯನದ ವ್ಯಾಪಕತೆ ಮತ್ತು ಸಾಧ್ಯತೆ-ಒಂದು ಶತಮಾನ" ಎಂಬ ಶೀರ್ಷಿಕೆಯಡಿಯಲ್ಲಿ ಲಕ್ಷ್ಮಣ್ ತೆಲಗಾವಿಯವರು ರಚಿಸಿಕೊಟ್ಟಿದ್ದಾರೆ.

ಇತಿಹಾಸಕಾರ ಹೆಚ್.ವಿ. ವೀರನಾಯಕ 'ಹರತಿ' : ೨೦೦೪ರಲ್ಲಿ ಪ್ರಕಟಗೊಂಡ ಈ ಕೃತಿಯು ವೀರನಾಯಕರ ಜೀವನ ಚಿತ್ರಣ ಹಾಗೂ ಹರತಿ ಎಂಬುದರ ಹಿನ್ನೆಲೆಯ ಶೀರ್ಷಿಕೆಯೊಂದಿಗೆ ಸಮಾಜ ಚಿಂತಕ. ಶಿಕ್ಷಣ ಪ್ರೇಮಿ, ಪ್ರಗತಿಪರ ಕೃಷಿಕ, ರಾಜಕೀಯ ಧುರೀಣ, ಹೋರಾಟಗಾರ, ಸಾಹಿತ್ಯ ಪ್ರೇಮಿ ಹಾಗೂ ಸಂಶೋಧಕರಾದ ವೀರನಾಯಕರ ಸಂಪೂರ್ಣ ಜೀವನ ಚಿತ್ರಣವನ್ನು ಕಟ್ಟಿಕೊಡುವುದರ ಜೊತೆಗೆ ಹರತಿ ಎಂಬ ನಾಮದ ಹಿನ್ನೆಲೆಯ ಕುರಿತಂತೆ ಸ್ಪಷ್ಟ ಮಾಹಿತಿಯನ್ನು ಈ ಕೃತಿಯಲ್ಲಿ ನೀಡಿದ್ದಾರೆ.

ಹರತಿ ಎಂಬುದರ ಹಿನ್ನೆಲೆ ನೋಡಿದಾಗ ಹರ್ತಿಕೋಟೆಯು ನಿಡುಗಲ್ಲು, ದೊಡ್ಡೇರಿ, ರತ್ನಗಿರಿ, ಐಮಂಗಲಗಳನ್ನು ತಮ್ಮ ಕೇಂದ್ರವನ್ನಾಗಿಸಿಕೊಂಡು ಆಳ್ವಿಕೆ ನಡೆಸಿದ 'ಹರತಿ' ಮನೆತನದ ನಾಯಕ ರಾಜಧಾನಿಯಾಗಿದ್ದು, ಇಲ್ಲಿ ಆಳ್ವಿಕೆ ನಡೆಸಿದ ನಾಯಕರನ್ನು ಕುರಿತು ಸಮಕಾಲೀನ ದಾಖಲೆಗಳು, ಶಾಸನಗಳು ಮಾತ್ರವಲ್ಲದೆ ಕೆಲವು ಜನಪದ ಕಾವ್ಯಗಳು ಪ್ರಸ್ತಾಪಿಸುತ್ತವೆ.

ಹರತಿ ಎಂಬುದು ಪ್ರಾಚೀನ ನಾಯಕ ಮನೆತನಗಳಲ್ಲಿ ಒಂದಾಗಿದ್ದು, ಈ ನಾಯಕರು ತಮ್ಮ ಮೂಲ ದೇವತೆ 'ಹರತಿ'. ಕಾರಣದಿಂದಾಗಿ ಹರತಿ ನಾಯಕರೆಂತಲೂ ಹರತೇಯರು ಎಂತಲೂ ಹೇಳಿಕೊಂಡಿದ್ದು, ಕಾಲಕ್ರಮೇಣ ಕೆಲವರು ವಿವಿಧ ಶಾಖೆಗಳಲ್ಲಿ ಹಂಚಿ ಹೋದ ಈ ನಾಯಕ ಮನೆತನದವರ ಇತಿಹಾಸ, ಗೋಜಲಿನಿಂದ ಕೂಡಿದೆಯೆಂಬುದರಲ್ಲಿ ಸಂದೇಹವಿಲ್ಲ. ಆದರೆ ಲಭ್ಯವಿರುವ ದಾಖಲೆ. ಶಾಸನ, ನಿರೂಪ ಹಾಗೂ ಕೆಲವು ಅಧ್ಯಯನಗಳಿಂದ ಈ ಮನೆತನದವರ ಐತಿಹಾಸಿಕ ಹಿನ್ನೆಲೆಯನ್ನು ಸ್ಥೂಲವಾಗಿಯಾದರೂ ನಿರೂಪಿಸಬಹುದು. ದಾಖಲೆ, ಶಾಸನ ಇತ್ಯಾದಿಗಳಲ್ಲಿ ನಿರೂಪಿತವಾದ ಐತಿಹಾಸಿಕ ಅಂಶಗಳನ್ನು ಕ್ರೋಢೀಕರಿಸಿ ಹರತಿ ಮನೆತನದವರ ಸ್ಥೂಲ ಸ್ವರೂಪದ ಇತಿಹಾಸವನ್ನು ಬರೆಯಲಾಗಿದೆ. ಹರತಿಯ 'ತಿಪ್ಪರಾಜ'ನೆಂಬುವರು ಹರತಿ ಮನೆತನದ ಸ್ಥಾಪಕನೆನ್ನಲಾಗುತ್ತದೆ. (ಈತನ ಕಾಲಾವಧಿ ಸುಮಾರು ೧೩೪೦-೧೩೩೫) ವಿಜಯನಗರದ ಸಂಗಮ ಮನೆತನದ ಹರಿಹರ ಮತ್ತು ಬುಕ್ಕರಾಯರ ಸಮಕಾಲೀನನಾಗಿದ್ದು, ಅವರ ಸೈನ್ಯದಲ್ಲಿ ದಳಪತಿಯಾಗಿದ್ದವನು(ತಿಪ್ಪರಾಜನ ಹಿರಿಯರು ಬಿಜಾಪುರದ ಹರತಿ ಸಾವಡದ ಪ್ರಾಂತದವರಾಗಿದ್ದಿರ ಬೇಕೆಂಬ ಅಭಿಪ್ರಾಯವಿದೆ.) ಹಾಗೂ ತನ್ನ ಪರಾಕ್ರಮವನ್ನು ತೋರಿದುದರಿಂದಲೆ ಬುಕ್ಕರಾಯನಿಂದ ವೇದಾವತಿ ತೀರದ ಭೂಭಾಗವೆಲ್ಲ ಜಹಗೀರಾಗಿ ದೊರೆಯಿತು. ಹೀಗೆ ತನ್ನ ಪೂರ್ವಿಕರ ಸ್ಮರಣೆಗೆ ಅಲ್ಲಲ್ಲಿ ಊರುಗಳನ್ನು ಸ್ಥಾಪಿಸತೊಡಗಿದ ತಿಪ್ಪರಾಜನಿಂದ ಹರತಿ/ಹರ್ತಿಕೋಟೆ ಸ್ಥಾಪನೆಗೊಂಡಿತು ಹಾಗೂ ತಿಪ್ಪರಾಜನ ವಂಶಸ್ಥರು ಹರತಿ ಮನೆತನದ ಕೀರ್ತಿಯನ್ನು ಮುಂದುವರೆಸಿದರು ಎಂಬ ಹಲವು ವಿಷಯಗಳನ್ನು ಈ ಕೃತಿಯಲ್ಲಿ ದಾಖಲಿಸಿದ್ದಾರೆ.

ಕೆ. ರಾಮಸ್ವಾಮಿಯ್ಯಾಂಗಾರ್ ಅವರ ಜೀರ್ಣವಿಜಯನಗರಾದರ್ಶಂ : ಲಕ್ಷ್ಮಣ್ ತೆಲಗಾವಿ ಅವರ ಸಂಪಾದಕತ್ವದ ಈ ಕೈಪಿಡಿಯು ೨೦೦೬ರಲ್ಲಿ ಪ್ರಕಟಗೊಂಡ ಕನ್ನಡ ಕೃತಿಯಾದ 'ಜೀರ್ಣವಿಜಯನಗರಾದರ್ಶಂ' ಎಂಬುದನ್ನು ರಚಿಸಿದವರು ಕೆ. ರಾಮಸ್ವಾಮಿಯ್ಯಾಂಗಾರ್ ಎಂಬ ಪ್ರೌಢ ಶಾಲಾ ಮುಖ್ಯೋಪಾಧ್ಯಾಯರು. ಮೈಸೂರಿನ ಕರ್ನಾಟಕ ಗ್ರಂಥಮಾಲೆಯು ತನ್ನ ೭೪ನೇ ಕೃತಿಯಾಗಿ ಇದನ್ನು ಮುದ್ರಿಸಿ ಹೊರತಂದಿತು. ಈ ಕೃತಿಯು ಹಂಪಿ ಕುರಿತು ಪ್ರವಾಸ ಕಥನವಷ್ಟೇ ಆಗಿರದೇ ಪ್ರವಾಸಿ ಕೈಪಿಡಿಯೂ ಆಗಿದೆಯೆಂಬುದು ವಿಶೇಷ. ಲಭ್ಯವಿರುವ ಹಂಪಿ ಕೈಪಿಡಿಗಳ ಪೈಕಿ ಇದು ಮೊದಲನೆಯದೆಂದು ತೋರುವುದರಿಂದ ಇದನ್ನು ಹಂಪಿ ಕುರಿತ ಪ್ರಥಮ ಪ್ರವಾಸಿ ಕೈಪಿಡಿಯೆಂದು ಕರೆಯುವುದರಲ್ಲಿ ಔಚಿತ್ಯವಿದೆ.

ವಿಜಯನಗರ ಚರಿತ್ರೆ ಮತ್ತು ಹಂಪಿ ಸ್ಮಾರಕಗಳ ಬಗೆಗೆ ಈ ಕೈಪಿಡಿಯ ಕರ್ತೃ ರಾಮಸ್ವಾಮಿಯ್ಯಾಂಗಾರ್ ಅವರು ಹೊಂದಿರುವ ಪ್ರೀತಿ-ಅಭಿಮಾನಗಳು ಎಣೆಯಿಲ್ಲದ್ದವು. ಅವರು

ಈ ಮಹಾಸಾಮ್ರಾಜ್ಯದ ಚರಿತ್ರೆಯನ್ನು ಆದ್ಯಂತವಾಗಿ ಅಭ್ಯಸಿಸಿರುವರೆಂಬುದು ಈ ಕೃತಿಯಿಂದ ಸ್ಪಷ್ಟಪಡುತ್ತದೆ. ಮುಖ್ಯವಾಗಿ ಅವರು ತಮ್ಮ ಕೃತಿಯನ್ನು ಪೂರ್ವಭಾಗ ಮತ್ತು ಉತ್ತರಭಾಗಗಳಾಗಿ ವಿಂಗಡಿಸಿ ವಿಷಯವನ್ನು ನಿರೂಪಿಸಿದ್ದಾರೆ. ಪೂರ್ವಭಾಗದಲ್ಲಿ ವಿಜಯನಗರದ ಒಟ್ಟು ಚರಿತ್ರೆಯನ್ನು ಸಂಕ್ಷಿಪ್ತವಾಗಿ ಚಿತ್ರಿಸಿಕೊಟ್ಟಿದ್ದಾರೆ. ಉತ್ತರ ಭಾಗದಲ್ಲಿ ಹಂಪಿ ಸ್ಮಾರಕಗಳನ್ನು ಪರಿಚಯಿಸಿದ್ದಾರೆ. ಹಂಪಿ ಸ್ಮಾರಕಗಳ ಮಧ್ಯೆ ಸಾಮಾನ್ಯ ಪ್ರವಾಸಿಗರು ಸ್ವತಂತ್ರವಾಗಿ ಸುತ್ತಾಡಿ ಅವುಗಳನ್ನು ಸಮಗ್ರವಾಗಿ ವೀಕ್ಷಿಸುವಮಟ್ಟಿಗೆ ಹಾಗೂ ಮಾರ್ಗದರ್ಶನ ನೀಡುವ ಉಪಯುಕ್ತ ಕೃತಿಯಾಗಿದೆ. ಶ್ರೀಯುತರು ಹಂಪಿ ಪರಿಸರದಲ್ಲಿ ಕೆಲವು ದಿವಸಗಳ ಕಾಲ ತಂಗಿದ್ದು, ಸ್ಮಾರಕಗಳ ಪ್ರತ್ಯಕ್ಷ ಪರಿಶೀಲನೆಯೊಂದಿಗೆ ಅವುಗಳನ್ನು ತೀರಾ ಸರಳ ಹಾಗೂ ಆತ್ಮೀಯ ಶೈಲಿಯಲ್ಲಿ ಸುಂದರವಾಗಿ ಪರಿಚಯಿಸಿರುವುದು ವಿಶೇಷವಾಗಿದೆ. ವಿಜಯನಗರ ಚರಿತ್ರೆ ಹಂಪಿ ಸ್ಮಾರಕ ಹಾಗೂ ಪ್ರವಾಸ ಹವ್ಯಾಸಗಳ ಬಗೆಗೆ ಹೆಚ್ಚಿನ ಮಾಹಿತಿಯನ್ನು ಈ ಕೃತಿಯಲ್ಲಿ ಸಂಪೂರ್ಣವಾಗಿ ಕಾಣಬಹುದಾಗಿದೆ.

ಚಿತ್ರದುರ್ಗ ನಾಯಕ ಅರಸರ ಚರಿತ್ರೆ ಮತ್ತು ಸಂಸ್ಕೃತಿ : ೨೦೦೭ರಲ್ಲಿ ಪ್ರಕಟವಾದ ಈ ಕೃತಿಯನ್ನು ಲಕ್ಷ್ಮಣ್ ತೆಲಗಾವಿ ಅವರು ಸ್ಥಳೀಯ ಚರಿತ್ರೆ ರಚನಾ ದೃಷ್ಟಿಯನ್ನಿಟ್ಟುಕೊಂಡು ಬರೆಯಲಾದ ಬರವಣಿಗೆಯಾಗಿದ್ದು, ವಿಜಯನಗರೋತ್ತರ ಪ್ರಮುಖ ಅರಸುಮನೆತನಗಳಲ್ಲಿ ಚಿತ್ರದುರ್ಗ ನಾಯಕ ಸಂಸ್ಥಾನವು ಒಂದಾಗಿದ್ದು, ಈ ನಾಯಕ ಅರಸರು ತಮ್ಮ ಕಾಲಾವಧಿಯಲ್ಲಿ ನಿರ್ಮಿಸಿದ ಕೋಟೆ ಕೊತ್ತಲ, ಶಾಸನ ಕಟ್ಟಡಗಳು, ನಾಣ್ಯ, ದೇವಾಲಯ, ವಾಸ್ತುಶಿಲ್ಪ, ವೀರಗಲ್ಲು ಇತ್ಯಾದಿ ಸಮಕಾಲೀನ ದಾಖಲೆಯ ದಿನಚರಿಯನ್ನು ಆಧರಿಸಿ ರಚಿಸಲಾಗಿದೆ. ಸಾಂಪ್ರದಾಯಿಕ ಇತಿಹಾಸದ ಬರವಣಿಗೆಗಿಂತ ಸಮಕಾಲೀನ ಮನೋಧರ್ಮದೊಂದಿಗೆ ಭಿನ್ನವಾದ ವ್ಯಾಖ್ಯಾನವನ್ನು ನಿಷ್ಠೆಯ ನೆಲೆಯಲ್ಲಿ ರಚಿಸಲಾದ ಕೃತಿಯಾಗಿದೆ. ಇದರಲ್ಲಿ ಊಳಿಗಮಾನ್ಯ ಸಂಸ್ಕೃತಿಯ ಅಡಿಯಲ್ಲಿ ತಮ್ಮ ಇರುವಿಕೆ ಹಾಗೂ ಸಮಕಾಲೀನ ಸಮುದಾಯಗಳ ಜೊತೆಗೆ ಗುರುತಿಸಿಕೊಳ್ಳುವಲ್ಲಿ ಈ ನಾಯಕ ಅರಸರು ತೋರಿದ ಅನ್ಯೂನತೆಯ ಅಂಶಗಳೆ ಇಲ್ಲಿ ಪ್ರಧಾನವಾಗಿರುವುದನ್ನು ಕಾಣಬಹುದಾಗಿದೆ.

ಕರ್ನಾಟಕದ ಪಾಳೆಯಗಾರರ ನ್ಯಾಯಾಡಳಿತ : ಪಾಳೆಯಗಾರಶಾಹಿಯನ್ನು ಫ್ಯೂಡಲ್‌ಗಳು, ನಿರಂಕುಶವಾದಿಗಳು, ದಾಳಿಕೋರರು, ಕಟುಕರು, ಮೋಸಗಾರರು, ರೌಡಿಗಳು, ಭಯೋತ್ಪಾದಕರು ಎಂಬುದಾಗಿ ಕೆಲವು ಅಸಂಬದ್ಧ ಚರಿತ್ರೆಕಾರರು ಜನ ಮತ್ತು ಜೀವವಿರೋಧಿ ಪ್ರಭುತ್ವ ಎಂಬಂತೆ ಬಿಂಬಿಸಿದ್ದರ ಪರಿಣಾಮ, ಈ ವ್ಯವಸ್ಥೆಯಲ್ಲಿ ತಂದ ನ್ಯಾಯಾಂಗ ವ್ಯವಸ್ಥೆಗೆ ಕಪ್ಪು ಚುಕ್ಕೆ ಬಂದಿತು. ಇಂತಹ ಅಪವಾದಗಳನ್ನು ಅಲ್ಲಗಳೆದು ಪಾಳೆಯಗಾರರು ಶೋಷಿತ ನೆಲೆಯಿಂದ ಬಂದು ಸಾಮಾನ್ಯರಂತೆ ಆಡಳಿತ ನಡೆಸಿದವರು.

ಜನರ ನೇರ ಸಂಪರ್ಕದ ಕೇಂದ್ರಬಿಂದು ಗ್ರಾಮ, ಆ ಗ್ರಾಮದ ಕಟ್ಟೆ ಮನೆಯೆ ಆ ಗ್ರಾಮದ ಸರ್ವ ವ್ಯಾಜ್ಯಗಳನ್ನು ತೀರ್ಮಾನಿಸುವ ಮೊದಲ ಹಂತದ ನ್ಯಾಯಾಂಗ ವ್ಯವಸ್ಥೆಯಾಗಿದ್ದು

ಅದರ ಸ್ವರೂಪಕ್ಕೆ ತಕ್ಕ ಹಾಗೆ ಬೇರೊಂದು ಕಡೆಗೆ ವರ್ಗಾವಣೆಗೊಂಡು ನಾಯಕನ ಆ ಸ್ಥಾನವೇ ಸರ್ವೋಚ್ಚ ನ್ಯಾಯಾಂಗ ವ್ಯವಸ್ಥೆಯಾಗಿತ್ತು. ವಿವಿಧ, ತಂತ್ರಗಳ ಮೂಲಕ ತಪ್ಪಿತಸ್ಥರನ್ನು ಪತ್ತೆ ಮಾಡಿ ಶಿಕ್ಷಿಸುವ, ದಂಡಿಸುವ, ಬಹಿಷ್ಕರಿಸುವಂತ ವ್ಯವಸ್ಥೆಗಳನ್ನು ರೂಢಿಸಿಕೊಳ್ಳಲಾಗಿತ್ತು. ಆದರೆ ಇಲ್ಲಿಯ ತನಕವೂ ಪಾಳೆಯಗಾರಶಾಹಿ ಧೋರಣೆಯನ್ನು ನ್ಯಾಯಾಡಳಿತದ ನೆಲೆಯಲ್ಲಿ ಸರಿಯಾಗಿ-ನ್ಯಾಯಯುತವಾಗಿ ನಿರೂಪಿಸುವಲ್ಲಿ ಚರಿತ್ರೆಕಾರರು ಮುಂದಾಗಲಿಲ್ಲ. ಹೇಗೆ ಸಾಮ್ರಾಟರು ನ್ಯಾಯಾಂಗ ವ್ಯವಸ್ಥೆಯಡಿ ನ್ಯಾಯ ತೀರ್ಮಾನಿಸುತ್ತಿದ್ದರೋ ಅದೇ ತೆರನಾಗಿ ನ್ಯಾಯಪರ ಆಡಳಿತ ನಡೆಸಲು ಮುಂದಾಗಿದ್ದು, ಅದಕ್ಕೆ ಸಾಕ್ಷಿ ಎಂಬಂತೆ ಈಗಲೂ ನ್ಯಾಯ ಮನೆಕಟ್ಟೆಗಳು ದೊರೆಯುವವು. ಉದಾ:- ಬಿಚ್ಚುಗತ್ತಿ ಭರಮಣ್ಣನಾಯಕನ ಅವಧಿಯಲ್ಲಿ ದಾವಣಗೆರೆ ವಾಡಿಕೆಯ, ಗೌಡಿಕೆ ವ್ಯಾಜ್ಯದ ತೀರ್ಮಾನ, ಮದ್ದಿಹಳ್ಳಿಯ ಮಾದಿಗತನದ ವ್ಯಾಜ್ಯ, ಈ ಸಂಬಂಧವಾಗಿ ತಾಮ್ರಪತ್ರಗಳು, ಸ್ಫಟಿಕವಾಗಿ ಮತ್ತು ಕೆಲವು ಸಂಶೋಧಕರಿಂದ ಪತ್ತೆಯಾದ ಟಿಪ್ಪಣಿಗಳೇ ಬಹುಮುಖ್ಯ ಸಾಕ್ಷಿಯಾಗಿವೆ.

ಕರ್ನಾಟಕದ ಪಾಳೆಯಗಾರರ ನ್ಯಾಯಾಡಳಿತ ವ್ಯವಸ್ಥೆ ಕುರಿತಾದ ವಸ್ತುನಿಷ್ಠ ಅಧ್ಯಯನಗೈಯಲು ಈ ಕಿರುಕೃತಿಯು ತುಂಬಾ ಉಪಯುಕ್ತವಾದುದು. ಇದರ ಮಾಹಿತಿಯಿಂದ ಮರೆಮಾಚಿದ ನ್ಯಾಯಾಂಗ ವ್ಯವಸ್ಥೆ ಮತ್ತು ಆಡಳಿತ ವೈಖರಿ ಜನಪರ ಕಾರ್ಯಗಳನ್ನು ಪತ್ತೆ ಮಾಡಿ ಜನಸಾಮಾನ್ಯರಿಗೆ ಮುಟ್ಟಿಸಲು ಮತ್ತು ಸಂಶೋಧಕರಿಗೆ ಮಾರ್ಗದರ್ಶಿಯಾಗಬಲ್ಲದಾಗಿದೆ. ಇಂತಹ ಒಂದು ಮಾಹಿತಿಯನ್ನು ೨೦೦೮ರಲ್ಲಿ ಜಿ.ಎಚ್. ಪ್ರಸಾದ್‌ರವರ ಅಭಿನಂದನಾ ಗ್ರಂಥದಲ್ಲಿ ಲಕ್ಷ್ಮಣ್ ತೆಲಗಾವಿಯವರು ಕರ್ನಾಟಕದ ಪಾಳೆಯಗಾರರ ನ್ಯಾಯಾಡಳಿತ ಎಂಬ ಶೀರ್ಷಿಕೆಯೊದಿಗೆ ಕೊಡುಗೆ ನೀಡುವ ಮೂಲಕ ಪಾಳೆಯಗಾರರ ಬಗೆಗಿನ ತಪ್ಪು ಗ್ರಹಿಕೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಬಹುಮಟ್ಟಿಗೆ ಸಹಕಾರಿಯಾಗಿದೆ.

ಚಿತ್ರದುರ್ಗ ನಾಯಕ ಅರಸರು-ರಾಜಕೀಯ ಚಿತ್ರ : ಈ ಕೃತಿಯು ೨೦೦೯ರಲ್ಲಿ ಮುದ್ರಣ ಕಂಡಿದ್ದು. ಈ ಕೃತಿಯು ಚಿತ್ರದುರ್ಗ ನಾಯಕ ಅರಸರರಾಜಕೀಯ ಸಾಧನೆಗಳನ್ನು ಸಂಕ್ಷಿಪ್ತವಾಗಿ ಹಾಗೂ ಖಚಿತವಾಗಿ ನಿರೂಪಿಸುವ ಪ್ರಯತ್ನ ಇಲ್ಲಿಯದು ಮತ್ತು ಚಿತ್ರದುರ್ಗದ ಪ್ರಾರಂಭಿಕ ಅರಸ ಮತ್ತಿತಿಮ್ಮಣ್ಣನಾಯಕನ ಆಡಳಿತದಿಂದ ಹಿಡಿದು ಕೊನೆಯ ನಾಯಕ ರಾಜವೀರ ಮದಕರಿನಾಯಕನವರೆಗೂ ಜೀವನ ಹಿನ್ನೆಲೆ ಆಡಳಿತ. ಆಡಳಿತ ಅವಧಿ ಹಾಗೂ ಸಾಧನೆಗಳನ್ನು ಕುರಿತಂತೆ ವಿವರಣೆಗಳಿರುವುದನ್ನು ನೋಡಬಹುದಾಗಿದೆ ಮತ್ತು ಬಹುಮುಖ್ಯವಾಗಿ ಚಿತ್ರದುರ್ಗ ನಾಯಕ ಅರಸರ ಕುರಿತಂತೆ ಸಂಪೂರ್ಣವಾಗಿ ಘಟನೆಗಳ ಕಾಲಾನುಕ್ರಮಣಿಕೆ ಕುರಿತಂತೆ ಮಾಹಿತಿಯನ್ನು ನೋಡಬಹುದಾಗಿದೆ.

ವಿಜಯನಗರಕಾಲದ ರಾಮಾನುಜಕೂಟಗಳು

ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರಿಂದ ೨೦೦೯ರಲ್ಲಿ ಪ್ರಕಟಿತಗೊಂಡ ಲಕ್ಷ್ಮಣ್ ತೆಲಗಾವಿ ಅವರ ಮತ್ತೊಂದು ಕಿರುಹೊತ್ತಿಗೆ "ವಿಜಯನಗರ ಕಾಲದ ರಾಮಾನುಕೂಟ ಗಳು" ಎಂಬ ಶೀರ್ಷಿಕೆಯೊಂದಿಗೆ ಹೊರಬಂದ ಈ ಹೊತ್ತಿಗೆಗೆ ಅತೀ ಮಹತ್ವವಿದೆ. ಕಾರಣ

ಚಿತ್ರದುರ್ಗ ಮೂಲ ಅರಿಯುವ ಹಂತದಲ್ಲಿ ವಿಜಯನಗರವೂ ಚಿತ್ರದುರ್ಗದೊಂದಿಗೆ ಹೇಗೆ ಸಂಬಂಧ ಹೊಂದಿತ್ತೆಂಬ ಕುತೂಹಲದಿಂದಲೇ ಈ ಕೃತಿ ಬರಲು ಸಾಧ್ಯವಾಯಿತು. ದುರ್ಗದ ನಾಯಕರ ಮನೆದೇವರ ಶೋಧನದಲ್ಲಿ ಕಂಡುಕೊಂಡ ತಿರುವುಗಳೇ ರಾಮಾನುಜಕೂಟಗಳು ಇವು ವಿಜಯನಗರದಲ್ಲಿ ಸ್ಥಾಪನೆಯಾದ ಬಗ್ಗೆ ಮತ್ತು ಇವುಗಳಿಗೂ ಹಾಗೂ ದುರ್ಗದ ಅರಸರಿಗೂ ಇರುವ ಸಂಬಂಧವು ಹೇಗೆ ತಳುಕು ಹಾಕಿಕೊಂಡಿದೆ ಎಂಬುದನ್ನು ಶೋಧಿಸುವ ಸಂದರ್ಭದಲ್ಲಿಯೇ ಹಲವು ಮಾಹಿತಿಗಳು ದೊರೆಯಲಿಕ್ಕೆ ಸಾಧ್ಯವಾಯಿತು. ಇದು ವೈಷ್ಣವರ ಪ್ರಮುಖ ಕೇಂದ್ರ ವಿಠಲಾಪುರದಲ್ಲಿ ೧೬ನೇ ಶತಮಾನದಲ್ಲಿ ಅಸಂಖ್ಯಾತ ದೇವಾಲಯ, ಮಂಟಪ, ಕೊಳಗಳು, ಮಹದ್ವಾರಗಳು, ಮುಖ್ಯವಾಗಿ ನಿರ್ಮಾಣಗೊಂಡಂತೆಯೆ, ಇವುಗಳ ಜೊತೆಯಲ್ಲಿ ರಾಮಾನುಕೂಟಗಳು ಹೇಗೆ ಸ್ಥಾಪನೆಯಾದವು ಎಂಬುದನ್ನು ಲಕ್ಷ್ಮಣ್ ತೆಲಗಾವಿ ಅವರು ಶೋಧಿಸಿದರು. ಹಾಗೆಯೇ ಕರ್ನಾಟಕದಲ್ಲಿ ರಾಮಾನುಕೂಟಗಳಂತೆ ಶೈವಕೂಟಗಳು, ಉಚಿತ ಭೋಜನಗಳು ಇದ್ದವು ಎಂಬುದನ್ನು ಈ ಕಿರುಹೊತ್ತಿಗೆಯ ಮೂಲಕ ಶೋಧಿಸಿದ್ದಾರೆ.

ಮೂಲತಃ ತಮಿಳುನಾಡಿನವರಾದ ಆಳ್ವಾರರು ಎಂದರೆ ಶ್ರೀ ಮಹವಿಷ್ಣುವಿನ ದಿವ್ಯಕಟಾಕ್ಷಕ್ಕೆ ಪಾತ್ರರಾದವರೆಂತಲೂ, ಸದಾಕಾಲವು ದೈವತ್ವದಲ್ಲಿ ಮುಳುಗಿದವರು ಎಂತಲೂ, ಶ್ರೇಷ್ಠ ಕುಲದವರಿಗೂ ಆಶೀರ್ವಾದ ಮಾಡುವವರಾದ್ದರಿಂದಲೂ ಆಳುವವರು ಎಂತಲೂ ಕರೆಯ ಲಾಗುವುದು. ಇದರಲ್ಲಿ ೧೨ ಪ್ರಕಾರದ ಸಮೂಹಗಳನ್ನು ಗುರುತಿಸಬಹುದು. ಇವರ ಜೀವಿತ ಕಾಲವಾಧಿ ೩ರಿಂದ ೯ನೇ ಶತಮಾನ. ಅಂದರೆ ದಕ್ಷಿಣಾ ಭಾರತದ ಪಲ್ಲವ, ಚೋಳ, ಪಾಂಡ್ಯ ಎಂಬ ತಮಿಳು ರಾಜ್ಯಗಳಲ್ಲಿ ನೆಲೆಸಿದ್ದವರು. ಇಂಥವರನ್ನು ತಮಿಳು ಋಷಿಗಳೆಂದು ಇವರು ರಚಿಸಿದ ಗೀತೆಗಳನ್ನು ದಿವ್ಯಪ್ರಬಂಧವೆಂದು ಕರೆಯಲಾಗುವುದು. ಸಂಸ್ಕೃತ ಮತ್ತು ತಮಿಳುನಲ್ಲಿಯೂ ಜ್ಞಾನ ಹೊಂದಿ ಉಭಯ ವೇದಾಂತ ಪ್ರವರ್ತಕರೆನಿಸಿ ದೈವಾಂಶ ಸಂಭೂತರೆಂಬ ಭಕ್ತಿಗೆ ಪಾತ್ರರಾಗಿ ಶ್ರೀ ವೈಷ್ಣವ ಆಚಾರ್ಯ ಪರಂಪರೆಯನ್ನು ಹುಟ್ಟು ಹಾಕಿ, ಮುಂದೆ ತಮ್ಮನ್ನು ಐಯ್ಯಂಗಾರ್ ಎಂದು ಕರೆಸಿಕೊಂಡರು. ಈ ಪರಂಪರೆಯ ೧೧ನೇ ವಿಶಿಷ್ಟದ್ವೈತ ವಿಶ್ವಚಾರ್ಯರಾಗಿ ಅವತರಿಸಿದವರೇ ರಾಮಾನುಜಚಾರ್ಯ(೧೦೧೭-೧೧೩೭) ಆಳ್ವಾರರನ್ನು ದೇವರೆಂದು ಪರಿಗಣಿಸಿ ಮೂರ್ತಿಸ್ಥಾಪಿಸಿ ದೇವಾಲಯಗಳನ್ನು ಕಟ್ಟಿ ಆರಾಧಿಸುವ ಪ್ರಕ್ರಿಯೆ ಆರಂಭಿಸಿದವರೆ ರಾಮಾನುಜಾರ್ಯರು.

ಉದಾ:- ಶ್ರೀರಂಗಂ, ತಿರುಪತಿ-ಕಂಚಿ. ನಂತರ ವಿಜಯನಗರದಲ್ಲಿಯೂ ಈ ಪರಂಪರೆ ಚಾಲ್ತಿಗೆ ಬಂದಿತು. ಶ್ರೀ ವೈಷ್ಣವ ದೇವಾಲಯ ಕಟ್ಟಿಸಿ, ಪೂಜಿಸುವ ಕಾರ್ಯಗಳು ಜರುಗಿದಂತೆಯೇ ರಾಮಾನುಜರ ಪ್ರಭಾವದಿಂದಲೂ ಅವರ ಶಿಷ್ಯಂದಿರು, ಶ್ರೀ ವೈಷ್ಣವ ದೇವಾಲಯಗಳಿಗೆ ಹೊಂದಿಕೊಂಡಂತೆ ರಾಮಾನುಜಕೂಟಗಳನ್ನು ಸ್ಥಾಪಿಸುವ ಕಾರ್ಯ ಕೈಗೊಂಡರು. ಇವುಗಳು ಪ್ರಸಾದ ನಿಲಯಗಳಾಗಿ ಮುಂದುವರಿದವು. ನಂತರ ದೇವರ ಪೂಜೆಗಾಗಿ ಆ ಕೂಟಗಳಲ್ಲಿ ಧಾರ್ಮಿಕ ಸಂಗತಿ ಚರ್ಚಿಸುವ ಅವಕಾಶ ಪಡೆದುಕೊಂಡಿತು.

ಮೈಸೂರು ಪ್ರಾಂತ್ಯಗಳಲ್ಲಿ ಶ್ರೀ ವೈಷ್ಣವ ಪಂಥವು ವ್ಯಾಪಕವಾಗಿ ಬೆಳೆದುಬಂದಿತು. ಹೊಯ್ಸಳರ ರಾಜಧಾನಿಗಳಲ್ಲೊಂದಾಗಿದ್ದ "ತೊಣ್ಣೂರಿನಲ್ಲಿ ವಿಷ್ಣುವರ್ಧನನು ಕೆರೆಕಟ್ಟಿಸಿ

ರಾಮಾನುಜಕೂಟ ಸ್ಥಾಪಿಸಿದನು". ಇದೇ ಕರ್ನಾಟಕದ ಮೊದಲ ರಾಮಾನುಜಕೂಟವೆಂದು ಕರೆಯಬಹುದು. ಇವುಗಳನ್ನು ನಡೆಸಿಕೊಂಡು ಹೋಗಲು ಆದಾಯಕ್ಕಾಗಿ ಗ್ರಾಮಗಳನ್ನು ದತ್ತಿ ನೀಡಿದನು.

ವಿಜಯನಗರದ ಅರಸರು ಧರ್ಮಸಹಿಷ್ಣುತೆಗೆ ಹೆಸರಾಗಿ ಶ್ರೀ ವಿರೂಪಾಕ್ಷ ಎಂಬ ಅಂಕಿತದೊಡನೆ ರಾಜ್ಯಭಾರದ ನಿರ್ವಾಹಕರಾಗಿ ಸಂಗಮ ಅರಸರು ವೆಂಕಟೇಶನ್ ಎಂಬ ಅಂಕಿತ ಹಾಕಿಸುವುದರೊಡನೆ ಸಾಮ್ರಾಜ್ಯ ಪಾಲಿಸಿದರು. ಹಾಗೆಯೆ ಶೃಂಗೇರಿ ಪೀಠದ ವಿದ್ಯಾತೀರ್ಥರು, ವಿದ್ಯಾರಣ್ಯರಿಗೂ ಭಕ್ತಿ ಪ್ರದರ್ಶಿಸಿದರು. ಇಂತಹ ಶೈವ ಪಂಥವನ್ನು ಆರಾಧಿಸುತ್ತಿದ್ದವರು ೧೫ನೇ ಮಧ್ಯಾವಧಿಯಿಂದೀಚೆಗೆ ವಿಜಯನಗರದ ಅರಸರು, ಇವರು ಶ್ರೀ ವೈಷ್ಣವ ಪಂಥದತ್ತ ಒಲವು ತೋರಿದರು. ಅಚ್ಯುತರಾಯ, ಸದಾಶಿವರಾಯ ಮತ್ತು ಕೃಷ್ಣದೇವರಾಯರು, ಶ್ರೀವೈಷ್ಣವ ಪಂಥಕ್ಕೆ ಹೆಚ್ಚಿನ ಆದ್ಯತೆ ನೀಡಿದರು. ಪರಿಣಾಮವಾಗಿಯೆ ಕೃಷ್ಣದೇವರಾಯ ೧೫೧೫ರಲ್ಲಿ ಉದಯಗಿರಿ ವಶಪಡಿಸಿಕೊಂಡ ಸಂದರ್ಭದಲ್ಲಿ ಬಾಲಕೃಷ್ಣಮೂರ್ತಿಯನ್ನು ತಂದು ವಿಜಯನಗರದಲ್ಲಿ ಸ್ಥಾಪಿಸಿ ಬೃಹತ್ ದೇವಾಲಯ ಸ್ಥಾಪಿಸಿದರು. ತಿರುಪತಿ ವೆಂಕಟೇಶ, ಅಹೋಬಲಂನ ನರಸಿಂಹದೇವರು ಹಾಗೂ ಕಾಂಚಿಪುರಂನ ವರದರಾಜ ಸ್ವಾಮಿಗಳಿಗೆ ಅಪಾರ ದಾನದತ್ತಿ ನೀಡಿದ ನಂತರ ವೆಂಕಟ ತಾತಾಚಾರ್ಯರು ವಿಜಯನಗರ ಸಾಮ್ರಾಜ್ಯದ ಶ್ರೀ ವೈಷ್ಣವರ ಗುರುಗಳೆಂದು ಮಾನ್ಯ ಮಾಡಿದ್ದರು. ಇದೇ ವಿಜಯನಗರದ ಸಂತತಿಯವರಾದ ಅಚ್ಯುತರಾಯನು ಆನಂದದಲ್ಲಿ ದಾನ ಮಾಡಿದನು. ಹಾಗೆಯೇ ಸದಾಶಿವರಾಯರು ರಾಮರಾಜರ ಹಲವು ಗೋಪುರ, ಕಟ್ಟಡ, ಮಂಟಪ ಸ್ಥಾಪಿಸಿದರು. ನಂತರದ ಕಾಲದಲ್ಲಿ ಸಣ್ಣಪುಟ್ಟ ಬದಲಾವಣೆಗಳಾಗಿ ವಿಜಯನಗರದ ಭಕ್ತಿಯು ರೂಪಾಂತರ ಪಡೆದು ಇಮ್ಮಡಿ ವೆಂಕಟನ ಕಾಲದಿಂದ ಶ್ರೀ ವಿರೂಪಾಕ್ಷ ಅಂಕಿತದಿಂದ ಶ್ರೀ ವೆಂಕಟೇಶ ಅಂಕಿತ ಕಾಣಿಸತೊಡಗಿತು. ತಿರುಪತಿಯ ವೆಂಕಟೇಶನ ಸನ್ನಿಧಿಯಲ್ಲಿಯೇ ದಾನಗಳು ಆರಂಭವಾದವು. ಇದಕ್ಕಾಗಿ ಅಪಾರ ಮೌಲ್ಯದ ದಾನ, ಗ್ರಾಮಗಳ ದಾನ ನೀಡಿದರು. ಇವರ ಭಕ್ತಿಪೂರ್ವಕವಾಗಿ ಬಂಗಾರದಿಂದ ಕೂಡಿದ ನಾಣ್ಯದಲ್ಲಿ ಶ್ರೀ ವೆಂಕಟೇಶ್ವರಾಯ ನಮಃ ಎಂಬ ನಾಗರಿಲಿಪಿಯ ಬರಹವು ಚಾಲ್ತಿಗೆ ತಂದರು ಹಾಗೂ ಶ್ರೀರಂಗರಾಜ, ೩ನೇ ಶ್ರೀರಂಗನ ಸಹಕಾರ ಮತ್ತು ಭಕ್ತಿಯಿಂದಾಗಿಯೆ ವಿಜಯನಗರದಲ್ಲಿ ಶ್ರೀ ವೈಷ್ಣವ ದೇವಾಲಯಗಳು, ರಾಮಾನುಜಕೂಟಗಳು ಅಸ್ತಿತ್ವಕ್ಕೆ ಬಂದವು. ಕೃಷ್ಣದೇವರಾಯನ ಗುರು ವ್ಯಾಸತೀರ್ಥರ ಜೀವಿತಾನಾವಧಿಯಲ್ಲಿ ೧೩ ಮಂದಿ ಆಳ್ವಾರರ ವಿಗ್ರಹ ಸ್ಥಾಪಿಸಿದರು.

ಹೀಗೆ ಲಕ್ಷ್ಮಣ್ ತೆಲಗಾವಿಯರು ಒಂದು ಸೂಕ್ಷ್ಮ ಎಳೆ ಸಿಕ್ಕರು ಅದನ್ನು ಐತಿಹಾಸಿಕವಾಗಿ ಜೋಡಣೆ ಮಾಡಿ ನಿಖರ ಮಾಹಿತಿ ದೊರೆಯುವವರೆಗೂ ಬೆಂಬತ್ತಿ ಶೋಧಿಸಿಸುತ್ತಾರೆ. ಅದು ವಿಜಯನಗರವೆ ಆಗಲಿ ದುರ್ಗವೆ ಆಗಲಿ ಒಂದು ಸಣ್ಣಕಲ್ಲು ಸಿಕ್ಕರು ಆ ಕಲ್ಲು ಎಲ್ಲಿಂದ ಬಂತು? ಹೇಗೆ ಬಂತು? ಯಾವಾಗ ಬಂತು? ಎಂಬ ಪ್ರಶ್ನೆಯನ್ನಿಟ್ಟುಕೊಂಡು ಶೋಧಿಸಿ ಆ

ಕಲ್ಲು/ಕಟ್ಟಡಕ್ಕೆ ನಿರ್ದಿಷ್ಟ ರೂಪುಕೊಡುವಂತೆ ಸಂಶೋಧನೆಗೂ ಆಕರವಾಗುವುದನ್ನು ಪತ್ತೆ ಮಾಡುತ್ತಾರೆ.

ಎಪ್ಪತ್ತೇಳು ಪಾಳೆಯಗಾರರು ಸಂಖ್ಯಾ-ಆಶಯ ನೆಲೆಯ ಚಾರಿತ್ರಿಕ ವಿವೇಚನೆ

೨೦೧೦ರ ವಾಲ್ಮೀಕಿ ಸಾಹಿತ್ಯ ಸಂಪದ ಹರ್ತಿಕೋಟೆಯ ಮೂಲಕ ಪ್ರಕಟಿಸಿದ ಈ ಕೃತಿಯು ಪ್ರಾಚೀನ ಕಾಲದಿಂದಲೂ ಜಾನಪದದ ಬದುಕಿನಲ್ಲಿ ಮನೆಮಾತಾಗಿರುವ ಸಂಖ್ಯಾವಾಚಕ ೭, ೭ರಿಂದ ಆರಂಭವಾಗಿ ಕಥೆ, ಕಾದಂಬರಿ, ಜಾನಪದ ಹಾಡು, ಕಾವ್ಯ, ಶಾಸನ, ಕಡತ, ಬಖೈರು, ತಾಮ್ರಶಾಸನ ಮೌಖಿಕ ಸಂವಹನವಾಗಿಯೂ ಇಂದಿಗೂ ಜನರ ಒಡನಾಡಿಯಾಗಿರುವ, ಸಂದರ್ಭ, ಸಮಯ, ಸನ್ನಿವೇಶಕ್ಕೆ ತಕ್ಕಂತೆ ೭, ೭೦, ೭೭, ೭೦೦, ೭೦೧, ೭೭೦, ೭೭೭, ೭೦೭೦, ೭೭೦೦, ೭೭ ಸಾವಿರ ೭ ಲಕ್ಷ, ೭೭೭ ಸಾವಿರದ ೭೭೭, ೭ ಕೋಟಿ, ೭ ಲಕ್ಷ ೭೦ ಕೋಟಿ, ೭೭ ಕೋಟಿ, ೭೦೭೦ ಕೋಟಿ ಹೀಗೆ ನಾನಾ ಪ್ರಕಾರವಾಗಿ ಬಳಕೆಯಾಗಿ ಬಂದಿರುವಂತ್ತಿದ್ದಿದೆ.

ತೆಲಗಾವಿಯವರು ೭ರಿಂದ ಆರಂಭವಾದ ಈ ಸಂಖ್ಯೆ ಏಕೆ ಸಮಾಜದಲ್ಲಿ ಪ್ರತಿಷ್ಠೆ ಉಳಿಸಿಕೊಂಡಿದೆ ಎಂಬುದು ಮತ್ತು ಚಿತ್ರದುರ್ಗದ ಸಂಶೋಧನದ ಸಂದರ್ಭದಲ್ಲಿ ಮೌಖಿಕ ಕಥನದ ಮೂಲಕ ರಾಜವೀರ ಮದಕರಿ ನಾಯಕನು ೭೭ ಪಾಳೆಯಗಾರರ ಮಿಂಡನೆಂಬುದು ಇಂತಹ ಕೆಲವು ಪ್ರಸಂಗಗಳು ಜನಮನದಲ್ಲಿ ಏಕೆ ಮನೆ ಮಾಡಿಕೊಂಡಿದೆ? ನಿಜವಾಗಿಯೂ ೭೭ ಪಾಳೆಯಗಾರರು ಇದ್ದರೆ? ಹಾಗಾದರೆ ಎಲ್ಲಿ? ಯಾರ ಕಾಲದಲ್ಲಿ? ಹೇಗೆ ಸಾಧ್ಯ? ಇತ್ಯಾದಿ ಪ್ರಶ್ನೆಗಳನ್ನಿಟ್ಟುಕೊಂಡು ಇದನ್ನೇ ಏಕೆ ಒಂದು ಸಂಶೋಧನೆಯ ಪರಿಕಲ್ಪನೆಯನ್ನಾಗಿ ಮಾಡಿಕೊಳ್ಳಬಾರದು ಅಂದುಕೊಂಡು ಅಂದಿನಿಂದಲೆ ೭ರ ಸಂಖ್ಯೆಯ ಪತ್ತೇಧಾರಿ ಶುರು ಮಾಡಿದರು.

ಈ ಸಂಖ್ಯೆಯ ಸಾಂಕೇತಿಕ ಆಶಯದ ವಿಸ್ತಾರವು ಕದಂಬರಿಂದ ಆರಂಭವಾಗಿ ಆಂಧ್ರದ ಕಾಕತೀಯರಿಂದ ಹಿಡಿದು, ಕುಮ್ಮಟದುರ್ಗ, ವಿಜಯನಗರ - ಮೈಸೂರು ಸಂಸ್ಥಾನ- ಚಿತ್ರದುರ್ಗ ಹೀಗೆ ನಾನಾ ಪ್ರಕಾರವಾಗಿ ಸ್ಥಾನಮಾನ ಪಡೆದುಕೊಂಡಿದೆ. ಕದಂಬರ ಪ್ರಸಿದ್ಧ ಪ್ರಖ್ಯಾತ ದೊರೆ ಕದಂಬನಿಗೆ ಒಂದು ಸ್ಥಾನಮಾನ ಕೊಟ್ಟು ರಾಜ್ಯ ಸ್ಥಾಪನೆ ಮಾಡಿ ರಾಜ್ಯಭಾರಕ್ಕೆ ಬುನಾದಿ ಹಾಕಿದರು. ಈತನ ತರುವಾಯ ವೈಜಯಂತಿಯನ್ನು ೭೭ ಮಂದಿ ಅರಸರು ಪಟ್ಟವೇರಿದರು ಎಂಬುದು ಐತಿಹಾಸಿಕ ಉಲ್ಲೇಖ ಹೇಳುತ್ತದೆ. ಇದರಿಂದ ತಿಳಿದುಬರುವುದೇನೆಂದರೆ ಈ ಸಂಖ್ಯೆಯ ಪ್ರಯೋಗ ಬಹು ಹಿಂದಿಯೇ ನಡೆದಿದೆ ಎಂಬುದು ತಿಳಿಯುತ್ತದೆ.

೧೨ ಮತ್ತು ೧೩ನೇ ಶತಮಾನದ ತೆಲುಗು ಕಾವ್ಯ ಹಾಗೂ ಕೆಲವು ದಾಖಲೆಗಳ ಪ್ರಕಾರ ಮತ್ತು ಕಾಕತೀಯ ಅರಸರ ಕಾಲದ ರಾಜಕೀಯ ಸಂದರ್ಭ ವಿವರಿಸುವ ಪ್ರಕಾರ ಕಾಕತೀಯ ಅರಸರು "ನಾಯಂಕರ" ವ್ಯವಸ್ಥೆ ಸ್ಥಾಪಿಸಿ, ಕೆಲವು ವಿಭಾಗಗಳಾಗಿ ವಿಂಗಡಿಸಿ ಆಡಳಿತ

ನಡೆಸುತ್ತಿದ್ದರೆಂದು ಹಾಗೂ ಇದೇ ವ್ಯವಸ್ಥೆಯನ್ನು ವಿಜಯನಗರ ಅರಸರು ಅಳವಡಿಸಿಕೊಂಡರೆಂದು ತಿಳಿಯುವುದು. ಉದಾಹರಣೆಗೆ, ಕರ್ನಲ್ ಮೆಕೆಂಜಿ ಸಂಗ್ರಹಿಸಿದ ಅರಸರಿಗೆ ಸಂಬಂಧಿಸಿದ ಹಸ್ತಪ್ರತಿಯು ಹೇಳುವುದೇನೆಂದರೆ ಗಣಪತಿರಾಯನು ಎಲ್ಲಾ ಕುಲದ ನಾಯಕರನ್ನು ಸೇರಿಸಿ ನಾಯಂಕರ ಒಕ್ಕೂಟ ವ್ಯವಸ್ಥೆ ರಚಿಸಿದ್ದನೆಂದು ಮತ್ತು ಪ್ರತಾಪರುದ್ರನು ಪದ್ಮನಾಯಕರ ಕುಲಕ್ಕೆ ಸೇರಿದ ೭೭ ನಾಯಕರಿಂದ ಕೂಡಿದ ಆಡಳಿತ ವ್ಯವಸ್ಥೆ ರಚಿಸಿದ್ದನೆಂದು ತಿಳಿಸಿದರೆ, ಪಿ.ವಿ. ಪರಬ್ರಹ್ಮಶಾಸ್ತ್ರೀಯು ನಾಯಂಕರ ವ್ಯವಸ್ಥೆಯಲ್ಲಿ ೭೫ ಪ್ರಾಂತ್ಯಗಳನ್ನಾಗಿ ವಿಂಗಡಿಸಿ ಇಲ್ಲಿನ ಆಡಳಿತವು ೭೫ ಪ್ರಾಂತ್ಯಾ ಅಧಿಕಾರಿಗಳಿಗೆ ವಹಿಸಿಕೊಟ್ಟಿದ್ದರೆಂದು, ನಂತರ ಸಾಮ್ರಾಜ್ಯ ವಿಸ್ತಾರಗೊಂಡಂತೆ ಸಂಖ್ಯೆ ವೃದ್ಧಿಸಿ ೭೭ ಆಯ್ತು ಮತ್ತು ೭೭ ರಿಂದ ೩೦೦ ನಾಯಂಕರ ಅಧಿಕಾರಿಗಳು ಇದ್ದರೆಂದು ತಿಳಿಯುವುದು. ಇವರಿಗೆ ಸಂಬಂಧಿಸಿದ ಏಕಮ್ರನಾಥನ ಪ್ರತಾಪರುದ್ರಮನ ಚರಿತ್ರೆ ವಲಯದ ಈ ರಾಜ್ಯಗಳಲ್ಲಿ ೭೭ ಗೋತ್ರವಿದ್ದವೆಂತಲೂ ಇತಿಹಾಸಕಾರ ಎನ್. ವೆಂಕಟರಮಣಯ್ಯರು ಸಾಮ್ರಾಜ್ಯವನ್ನು ೭೭ ವಿಭಾಗಗಳಾಗಿ ಪ್ರತಾಪರುದ್ರ ವಿಂಗಡಿಸಿದ್ದರೆಂದು ಮುಂದಿನ ಪಾಲನಾಯಕನ ಅವಧಿಯಲ್ಲಿ ಆ ಸಂಖ್ಯೆ ೭೭ ಆಗಿ ಸ್ವತಂತ್ರರಾದರೆಂದು. ಈ ಪ್ರಾಂತ್ಯಾಧಿಕಾರಿಗಳು ವೇಲಮನಾಯಕನ ಕಾಲದಲ್ಲಿ, ವಿಜಯನಗರದ ಸಾಮ್ರಾಜ್ಯದಲ್ಲಿ ಅಮರನಾಯಕರಾಗಿಯೂ ನೇಮಕಗೊಂಡು ಆಡಳಿತಗಾರರಾಗಿ ರೂಪುಗೊಂಡರೆಂದು ತಿಳಿಸುತ್ತಾರೆ.

ವಿದ್ಯಾರಣ್ಯರ ಕಾಲಜ್ಞಾನವು ತಿಳಿಸುವಂತೆ ಕಾಕತೀಯರು ವಾರಂಗಲ್ ಮುಸ್ಲಿಂರ ವಶವಾದ ನಂತರ ತಮಿಳು, ತೆಲುಗು ಮತ್ತು ಕರ್ನಾಟಕದ ಕೋಲಾರವು ಒಳಗೊಂಡಂತೆ ವಿಜಯನಗರದ ಅಧಿಪತ್ಯಕ್ಕೆ ಬಂದಿದ್ದರಿಂದ, ಆಡಳಿತಗಾರರ ರಕ್ಷಣೆ ವಿಜಯನಗರದ ಅರಸರದ್ದಾಗಿದ್ದಿತ್ತು. ಕಾಕತೀಯರ ಅವಧಿಯಲ್ಲಿ ಪಾಳೆಯಪಟ್ಟುಗಳು ಅಥವಾ ಆಯಾ ಪ್ರಾಂತ್ಯದ ಸಂಖ್ಯೆ ೭೭ ಆಗಿದ್ದಿತು. ವಿಜಯನಗರವು ಬೃಹತ್ ಗಾತ್ರದ ರಾಜ್ಯವಾಗಿದ್ದರಿಂದ ೭೭ ಬದಲಾಗಿ ೨೦೦ಕ್ಕೂ ಅಧಿಕ ಪಾಳೆಯಪಟ್ಟುಗಳು ಜಾರಿಗೆ ಬಂದವು ಎಂಬುದನ್ನು ವಿದೇಶಿ ಪ್ರವಾಸಿಗ ನ್ಯೂನಿಜ್(ಪೋರ್ಚುಗಲ್) ತಿಳಿಸುತ್ತಾನೆ. ರಕ್ಕಸಗಿ-ತಂಗಡಗಿ ಯುದ್ಧದಲ್ಲಿ ೭೫ ವಂಶದ ನಾಯಕರು ಇದ್ದು ರಾಮರಾಯನ ಪರವಾಗಿ ಹೋರಾಡಿದರೆಂದು ತಿಳಿದುಬರುತ್ತದೆ.

೭೭ ಸಂಖ್ಯೆಗೆ ಮತಷ್ಟು ಸಾಕ್ಷಿಯಾಗಿ ಕರ್ನಾಟಕ ಚರಿತ್ರೆಯಲ್ಲಿ ಕುಮ್ಮಟದುರ್ಗದ ಕುಮಾರರಾಮನ ಆಡಳಿತದಲ್ಲಿ ೭೭ರ ಸಂಖ್ಯೆ ಉಪಯೋಗಿಸಲಾಗಿದೆ. ಭಟ್ಟರಹಳ್ಳಿಯ ಕೈಫಿಯತ್ತು ಕುಮಾರರಾಮನ ಕೈಫಿಯತ್ತು ಹಾಗೂ ಕುಮಾರರಾಮನ ಇತಿಹಾಸ ಶೋಧಿಸಿದ ಹುಲ್ಲೂರು ಶ್ರೀನಿವಾಸ ಜೋಯಿಸರು ತಿಳಿಸುವಂತೆ "ಶೂಲದ ಹಬ್ಬ"ದ ಸಂದರ್ಭದಲ್ಲಿ ೭೭ ಮನ್ನೆಯರು ಕುಮಾರರಾಮನ ಬಳಿಯಿದ್ದರೆಂತಲೂ, ಸ್ವತಃ ಕುಮಾರರಾಮನೆ ೭೭ ಸಂಖ್ಯೆಯ ಬೇಡರ ಪಡೆಕಟ್ಟಿ ಆಡಳಿತ ನಡೆಸಿದ್ದನೆಂದು ತಿಳಿಸುತ್ತಾರೆ. ಇದಕ್ಕೆ ಸಾಕ್ಷಿಯಾಗಿ ಹುಂಡಿಹೆತ್ತ ನಾಯಕನ ವೃತ್ತಾಂತ, ಹೊಳಲ್ಕೆರೆಯನಂದನಹೊಸೂರಿನಲ್ಲಿ ದೊರೆತ ತಾಮ್ರಪಟಗಳು ೭೭ ಖಾನರ ಗಂಡನೆಂದು ಪಾಳೆಯಗಾರರನ್ನು ಹೊಗಳಲಾಗಿದೆ. ಹಾಗೆಯೇ ಕೆಳದಿ ಮತ್ತು ಇಕ್ಕೇರಿ ಸಂಸ್ಥಾನಗಳಲ್ಲಿ ೭೭

ಪಾಳೆಯಗಾರರಿದ್ದಾರೆಂದು ನಂತರ ಸುಧಾರಿತಗೊಂಡು ೭೫ ಆಯ್ತು. ನಂತರ ೫೭ ಆಯಿತು ಎಂದು ತಿಳಿಸುವುದು. ಆರ್ಕಾಂಡ ಸ್ಥಾನದ ಕೈಫಿಯತ್ತು ೭೨ ಪಾಳೆಯಗಾರರೆಂದು, ತೆಲುಗು ಸೀಸಪದ್ಯ ೭೭ ಪಾಳೆಯಗಾರರನ್ನು ಪರಿಚಯಿಸುವುದು. ಚಂದ್ರಭೀಮನಸೇನನು ರಚಿಸಿದ ದಂಡಕದಲ್ಲಿ ರಾಜವೀರ ಮದಕರಿನಾಯಕನನ್ನು ೭೭ ಪಾಳೆಯಗಾರರ ಒಡೆಯನೆಂದು ತಿಳಿಸಿದರೆ ಜಾನಪದ- ಲಾವಣಿಗಳಲ್ಲಿ ೭೭ ಪಾಳೆಯಗಾರರ ಮಿಂಡನೆಂದು ಹೊಗಳಲಾಗಿದೆ. ೧೯೪೮ರಲ್ಲಿ ಕ್ಷಾತ್ರಾಂಶ ಪ್ರಭೋದ ಕೃತಿಯಲ್ಲಿ ರಕ್ಕಸಗಿತಂಗಡಿ ಯುದ್ಧದಲ್ಲಿ ೭೨ ನಾಯಕರು ಇದ್ದಾರೆಂದು ೧೯೭೨ರ ಸಂಪಾದಿತ ಕೃತಿ 'ವಾಲ್ಮೀಕಿ' ಸ್ಮರಣೆ ಸಂಚಿಕೆಯಲ್ಲಿ ೭೨ ಸಂಸ್ಥಾನಿಕರ ಪಟ್ಟಿಯನ್ನು ನೀಡಿದ್ದಾರೆ.

೭ರ ಸಂಖ್ಯೆಗೆ ಸೇರಿದಂತೆ ಜಾನಪದ ಮತ್ತು ಪದ್ಯ ಇತರೆಡೆ ಈ ರೀತಿಯಾಗಿ ಉಪಯೋಗವಾಗಿದೆ. ಜಾನಪದ ನೆಲೆಗಳಲ್ಲಿ ೭೭ ಬೆಡಗುಗಳಿದ್ದಾವೆಂದು ನಿಜಗುಣ ಶಿವಯೋಗಿ ಪದ್ಯಗಳಲ್ಲಿ ೭ ಸಂಖ್ಯೆ ಬಂದಿರುವುದು, ಅಳಿಯ ಸಂತಾನ 'ಯಪ್ಪತ್ತು ತಲೆ' ಸನತ್‌ಕುಮಾರಭಟಾರರ 'ಸಂಗಬಸವರಾಜನ ಕಾಲಜ್ಞಾನ ವಚನದಲ್ಲಿ ಕವಿತೆ' ಎಂಬುದು, ಕುರುಗೋಡು ಸಿಂದರ ಕಾಲ ೭೦೦ ಎಂತಲೂ, ನಂಜುಂಡಕವಿಯ ೭೦ ಪದಪ್ರಯೋಗ, ಸೊನ್ನಾಲಿಗ ಸಿದ್ಧರಾಮಯ್ಯನ ೭೭, ಕ್ರೈಸ್ತ ವಂಶಾವಳಿ ೭೭. ಹರಿಹರನ ತಾಮ್ರಶಾಸನದಲ್ಲಿ ೭೭, ಸಿದ್ಧೇಶ್ವರ ಚರಿತಮುದಲ್ಲಿ ೭೭. ತೆಲುಗುಸಾಹಿತ್ಯದಲ್ಲಿ ೭೭. ದಕ್ಷಿಣಾ ಸೊಲ್ಲಾಪುರ ಶಾಸನ ೭೭೦. ಮೇದರ ಕ್ಯಾತಯ್ಯನ ಕೋಲು ಪದದಲ್ಲಿ ೭೭೭, ಕಬೀರ ಸಾಹಿತ್ಯದಲ್ಲಿ ೭೭೦೦ ಎಂತಲೂ ಈ ಮೇಲಿನ ದಾಖಲೆಗಳು ೭೭ ಸಂಖ್ಯೆಗೆ ಸಂಬಂಧಿಸಿದಂತೆ ಮಾಹಿತಿ ನೀಡುತ್ತವೆ. ಆದರೆ ಈ ೭೭ ಎನ್ನುವಂತಹದ್ದು ಎಲ್ಲಾ ಕಾಲಘಟ್ಟಗಳಲ್ಲೂ ಇದ್ದಿರಲಿಲ್ಲವೆಂಬುದಕ್ಕೆ ಕೆಲವು ಉದಾಹರಣೆಗಳಿವೆ. ದಕ್ಷಿಣ ಭಾರತದ ಪೆನುಗೊಂಡ, ಕಡಪ, ತಲಚೇರಿ, ತಂಜಾವೂರು, ಆದವಾನಿ, ಚಂದ್ರಗಿರಿ, ಮಧುರೈ ಇಲ್ಲೆಲ್ಲಾ ಪಾಳೆಯಯಗಾರರಿದ್ದವರು. ಈ ಹಿಂದೆ ಹೇಳಿದಂತೆ ೭೭ ಸಂಖ್ಯೆಯ ಪಾಳೆಯಗಾರರಿರಲಿಲ್ಲ. ಅಂದಿನ ದಕ್ಷಿಣ ಭಾರತದ ವಿವಿಧ ರಾಜಾಶ್ರಯ ಸಾಲುಗಳಲ್ಲಿ ೨೬೦ಕ್ಕೂ ಹೆಚ್ಚು ನಾಯಕರಿದ್ದರೆಂದು ತಿಳಿಸುತ್ತಾರೆ. ಮರಾಠರು, ಹೈದ್ರಾಬಾದ್ ನಿಜಾಮ ಇಂಗ್ಲಿಷರ ಆಡಳಿತದ ಅವಧಿಯಲ್ಲಿ ಥಾಮಸ್ ಮನ್ರೋ ತಿಳಿಸುವಂತೆ ೮೦ ಮಂದಿ ಪಾಳೆಯಪಟ್ಟುಗಳು ಇದ್ದವು. ಇದಕ್ಕೆ ರಾಬರ್ಟ್ ಸಿವೆಲ್, ಪೋವೆಲ್ ಸಮ್ಮತಿಸಿದ್ದಾರೆ.

ಮೆಕೆಂಜಿ, ಟೇಲರ್, ಆನಂದರಂಗ ಪಿಳ್ಳೆ ೭೭ರ ಬದಲಾಗಿ ೭೨ ಪಾಳೆಯಗಾರರನ್ನು ಪ್ರಸ್ತಾಪಿಸುತ್ತಾರೆ. ಫ್ರೆಂಚ್ ಗೌರ್‍ನರ್ ಡೂಪ್ಲೆ ಆದೇಶದಲ್ಲಿ ೭೨ ಪಾಳೆಯಪಟ್ಟು ತಿಳಿಸುತ್ತಾನೆ. ಹಾಗೆಯೇ ಮಧುರೈ ರಾಜ್ಯವು ೭೨ ವಿಭಾಗವಾಗಿ ವಿಂಗಡಣೆಯಾಗಿತ್ತೆಂದು ಸತ್ಯನಾಥ ಅಯ್ಯಾರ್ ದಾಖಲಿಸಿದ್ದಾರೆ. ಮ್ಯಾಕ್ ಗ್ರಿಗೋರ್ ಕರ್ನಾಟಕದ ಪಾಳೆಯಗಾರರನ್ನು ಅಧ್ಯಯಿನಿಸುವಾಗ ಬೆಳಗಾಂ ವಿಭಾಗವು ೧೦೦ಕ್ಕೂ ಹೆಚ್ಚು ಪಾಳೆಯಗಾರರನ್ನು ಹೊಂದಿತ್ತೆಂದು, ಮೈಸೂರು

ಶ್ರೀರಂಗಪಟ್ಟಣದ ಇತಿಹಾಸ ಶೋಧಕ ಎಂ.ಎಸ್. ಪುಟ್ಟಣ್ಣನವರು ೬೦ ಪಾಳೆಯಗಾರರು ಇದ್ದರೆಂದು ದಾಖಲಿಸುತ್ತಾರೆ.

೧೮ನೇ ಶತಮಾನದ ನಂತರ ದುರ್ಬಲ ಅರಸರು ಆಡಳಿತವಹಿಸಿಕೊಂಡರು. ನಂತರ ಹೈದರ್ ಮತ್ತು ಟಿಪ್ಪುಸುಲ್ತಾನ್ ಅಧಿಕಾರ ವಹಿಸಿಕೊಂಡಾಗ ಬೃಹತ್ ಸಾಮ್ರಾಜ್ಯದ ಕನಸು ಹೊತ್ತಿದ್ದರಿವರು. ಪಾಳೆಯಗಾರ ಸಂಸ್ಕೃತಿಗೆ ಕೊನೆಗಾಣಿಸಲು ತನ್ನ ಸುತ್ತಮುತ್ತಲಿನ ಪ್ರದೇಶಗಳ ಪಾಳೆಯಗಾರರನ್ನು ಹತ್ತಿಕ್ಕಿ, ಆ ಮೂಲಕ ಪಾಶ್ಚಿಮಾತ್ಯ ಸಂಸ್ಕೃತಿಯ ಬದುಕಿಗಾಗಿ ಮುನ್ನುಡಿ ಬರೆಯಲು, ಪಾಳೆಯಗಾರರ ವ್ಯವಸ್ಥೆಯನ್ನು ಬೇರು ಸಹಿತ ಕಿತ್ತು ತಾನು ಯಶಸ್ವಿಯಾದರೆಂದು ಡಾಡ್‌ಬೆಲ್ ತಿಳಿಸುತ್ತಾನೆ.

ಹೈದರ್ ನಾಮ ಬಖೈರು ರಚಿಸಿದ ನಲ್ಲಪ್ಪ ೩೦೦ಕ್ಕೂ ಹೆಚ್ಚು ಸಂಸ್ಥಾನಗಳನ್ನು ಹೈದರ್ ಬಗ್ಗುಬಡಿದು ಅವುಗಳಿಗೆ ಸಾಮ್ರಾಟನಾದನೆಂದು ತಿಳಿಸುವರು. ಟಿಪ್ಪು ಮತ್ತು ಇಂಗ್ಲಿಷರ ನಡುವೆ ನಡೆದ ಕದನದ ನಂತರ ಪಾಳೆಯಗಾರರು ಮತ್ತು ಇಂಗ್ಲಿಷರ ನಡುವೆ ನಡೆದ ಕದನ, ನಂತರ ಪಾಳೆಯಗಾರರು ಇಂಗ್ಲಿಷರ ಅಧೀನಕ್ಕೆ ಬಂದರೆಂದು ಪಿ.ಬಿ. ರಾಮಚಂದ್ರರಾವ್ ತಿಳಿಸುವರು.

ಪಾಳೆಯಗಾರ ಸಂಸ್ಕೃತಿಯ ಸ್ಥಿತ್ಯಂತರ

ಪಾಳೆಯಗಾರ ಸಂಸ್ಕೃತಿಗೆ ತಿಲಾಂಜಲಿಯಿಟ್ಟ ನಿರ್ಮಾಪಕ ನಿರ್ವಾಹಕನೆಂದರೆ ಹೈದರ್‌ಅಲಿ. ಈತ ಪಾಳೆಯಗಾರರನ್ನು ಹತ್ತಿಕ್ಕಿದರೆ, ಈತನ ಮಗ ಟಿಪ್ಪುಸುಲ್ತಾನ್ ಈ ಸಂಸ್ಕೃತಿಯನ್ನು ನಾಶ ಮಾಡಿದ ಪಾಳೆಯಗಾರರು ಇಂಗ್ಲಿಷ್‌ರ ವಶನಾದ ನಂತರ ಬ್ರಿಟಿಷ್ ಸರ್ಕಾರವು, ಸಾಮಾನ್ಯ ಪ್ರಜೆಗಳಂತೆಯೆ ೧೮೭೭ರಲ್ಲಿ ಲಾರ್ಡ್ ಹೊಬಾರ್ಡನು ಸೇವೆಗೆ ಬಳಸಿಕೊಂಡನು. ಕೆಲವು ಕಾಲದ ನಂತರ ಶಸ್ತ್ರ ನಿಷೇಧ ಕಾಯಿದೆ ಏರಿದರು. ೧೮೭೯ರ ನಂತರ ಲಾರ್ಡ್‌ಮಾರ್ನಿಂಗ್‌ಟನ್ ಪಾಳೆಯಗಾರರಿಗೆ ಕೆಲವು ರಿಯಾಯಿತಿ ಮತ್ತು ಗೌರವದ ವೇತನ ಜಾರಿಗೆ ತಂದರೆಂದು ಎಂ. ಶಾಮರಾವ್ ಉಲ್ಲೇಖಿಸುತ್ತಾರೆ. ನಂತರ ಪೂರ್ಣಯ್ಯನವರು ದಿವಾನರಾಗಿದ್ದಂತಹ ಕಾಲದಲ್ಲಿಯೂ ಪ್ರಜಾ ಆಡಳಿತದಲ್ಲಿ ಮತ್ತು ಸೈನಿಕ ಆಡಳಿತದಲ್ಲಿ ಸೇರಿಸಿಕೊಂಡು ಗೌರವ ಮತ್ತು ಗೌರವ ವೇತನ ಮುಂತಾದ ಸೌಲಭ್ಯಗಳನ್ನು ಕಾಲಕ್ಕೆ ತಕ್ಕಂತೆ ಮಾರ್ಪಡಿಸಿ ನೀಡಿದರು. ಮಾರ್ಕ್‌ಕಬ್ಬನ್ ಕಮೀಷನರ್ ಆದಂತಹ ಸಂದರ್ಭದಲ್ಲಿ ಪಾಳೆಯಗಾರ ವಂಶೀಕರು ೮೬ ಜನರು ಗೌರವ ವೇತನ ಪಡೆಯುತ್ತಿದ್ದರೆಂದು ತಿಳಿಸಿದರು. ಹಾಗಾಗಿ ೧೬ ಪಾಳೆಯಗಾರರ ಮನೆತನದ ಮಾಹಿತಿ ಯಾತ್ರೆ ದೊರತಿದೆ. ಚಿತ್ರದುರ್ಗ ಮತ್ತು ಚಿಕ್ಕಬಳ್ಳಾಪುರದ ಪಾಳೆಯಗಾರರು ಮಾತ್ರ ಗೌರವ ವೇತನ ಪಡೆಯುತ್ತಿದಿದ್ದು ಸ್ವಾಭಿಮಾನ ಸಂಕೇತದಂತಿದೆ.

ಹೊಸ ಪರಿಕಲ್ಪನೆಗಳ ಹರಿಕಾರರಾಗಿ

ಇತಿಹಾಸ ವ್ರತಕೈಗೊಂಡ ಸ್ಥಳೀಯ ಇತಿಹಾಸಕಾರ ತೆಲಗಾವಿಯವರು '೭೭ ಪಾಳೆಯ ಗಾರರು', ಸಂಖ್ಯಾ ಆಶಯ ನೆಲೆಯ ಚಾರಿತ್ರಿಕ ವಿವೇಚನ ಎಂಬ ಶೀರ್ಷಿಕೆಯೊಂದಿಗೆ

ವಾಲ್ಮೀಕಿ ಸಾಹಿತ್ಯ ಸಂಪದದ ಮೂಲಕ ಪ್ರಕಟಿಸಿರುವ ಈ ಕೃತಿಯು ಆರು ಅಧ್ಯಾಯಗಳು ೬೨ ಪುಟಗಳನ್ನೊಳಗೊಂಡು ೧೮೫ಕ್ಕೂ ಅಧಿಕ ಟಿಪ್ಪಣಿಯೊಂದಿಗೆ ಸಂಶೋಧನ ಲೋಕಕ್ಕೆ ಹೊಸ ವ್ಯಾಖ್ಯಾನ ನೀಡಿದ್ದಾರೆ.

ಒಂದು ಸಂಶೋಧನೆಗೆ ಏನೆಲ್ಲಾ ಪರಿಕಲ್ಪನೆಗಳಿವೆ ಮತ್ತು ಆ ಪರಿಕಲ್ಪನೆಗಳಿಗೆ ಏನೆಲ್ಲಾ ದಾರಿಗಳಿದ್ದರೂ ಹೊಸ ದಾರಿ ನಂಬಲಾರ್ಹ ದಾರಿಯನ್ನು ಪ್ರತಿ ಪರಿಕಲ್ಪನೆಗೂ ಕಂಡುಕೊಳ್ಳುವುದು ತೆಲಗಾವಿಯವರ ವಿಶಿಷ್ಟಗುಣ. ಅಂತಹದರಲ್ಲಿ ಲಿಖಿತರೂಪದ ಇತಿಹಾಸಕ್ಕೆ ಪ್ರತಿಯಾಗಿ ಮೌಖಿಕ ಇತಿಹಾಸದ ಒಂದು ಮಗ್ಗಲು ಜಾನಪದ ಸಾಹಿತ್ಯವನ್ನು ಅಥವಾ ಅಲ್ಲಿನ ಶಬ್ದಗಳನ್ನು ಸಂಶೋಧನೆಗೆ ಬಳಸಿಕೊಳ್ಳುವುದರ ಮೂಲಕ ಜನಪದರ ಇತಿಹಾಸವನ್ನು ಜನಪರ ಇತಿಹಾಸವನ್ನಾಗಿ ಪರಿವರ್ತಿಸಲಿಕ್ಕೆ ಮುಂದಾದವರು, ಇಂಥವರು ಸಮಾಜದಲ್ಲಿ ವಿರಳವಾಗಿದ್ದರು ಆ ವಿರಳರಲ್ಲಿ ಇವರು ಸಹ ಒಬ್ಬರಾಗಿದ್ದಾರೆ.

ಸಂಖ್ಯಾಶಾಸ್ತ್ರೀಯ ದೃಷ್ಟಿಯಲ್ಲಿ ಎಲ್ಲಾ ಸಂಖ್ಯೆಗಳಿಗೂ ತನ್ನದೇ ಆದ ಸಂಸ್ಕೃತಿ ಮತ್ತು ಧಾರ್ಮಿಕ ಮಹತ್ವ ಹೊಂದಿದ್ದಾಗಿಯೂ, ೭೭ರ ಸಂಖ್ಯೆಗೆ ವಿಶೇಷವಾದ ಒಲವಿದೆ ಮತ್ತು ಜನರ ಮನದಲ್ಲಿ ೭೭ರ ಸಂಖ್ಯೆಗೆ ಸ್ಥಾನಮಾನದ ಆದ್ಯತೆ ಇರುವುದನ್ನು ಗಮನಿಸಿ ೭೭ರ ಸಂಖ್ಯೆಗೆ ವೈಜ್ಞಾನಿಕ ರೂಪದ ಸಂಶೋಧನ ವ್ಯಾಖ್ಯಾಯಾನ ನೀಡುವುದು ಎಂದು ತೀರ್ಮಾನಿಸಿ ಶೋಧಗೈಯುತ್ತಾರೆ. ಶೋಧದ ಸಂದರ್ಭದಲ್ಲಿ ಈ ಪರಿಕಲ್ಪನೆ ಹಲವು ಕವಲೊಡೆಯುವುದು. ಇತಿಹಾಸ, ದಾಖಲೆ, ಮೌಖಿಕ, ನಂಬಿಕೆ, ಕಥನ ಕಾವ್ಯ, ಜಾನಪದೀಯ ಹಾಗೂ ಕರ್ನಾಟಕದಿಂದ ಆಚೆಗೆ ಹೊರರಾಜ್ಯಗಳಾದ ತಮಿಳುನಾಡು, ಆಂಧ್ರಪ್ರದೇಶವನ್ನು ಒಳಗೊಂಡಂತಹ ವಿಸ್ತೃತ ಅಧ್ಯಯನ ಕೈಗೊಂಡು, ಹಲವು ದಾಖಲೆ ಪತ್ತೆ ಹಚ್ಚಿ ಶೋಧಿಸಿದಂತಹ ಕೃತಿಯಾಗಿದೆ. ಇಂತಹ ಸಂಶೋಧನ ಪಯಣದಲ್ಲಿ ಅಂಕೆ-ಸಂಖ್ಯೆಗಳಿಗೆ ಸೀಮಿತಗೊಳ್ಳದೇ ಆ ಕಾಲದ ವ್ಯವಸ್ಥೆ ಅದರ ಏಳುಬೀಳು ಚರ್ಚಿಸುತ್ತಾ ಇತಿಹಾಸವನ್ನು ಭಿನ್ನ ನೆಲೆಯಿಂದ ನೋಡುವ ಮೂಲಕ ಒಂದು ಸಂಖ್ಯೆ ಬೆನ್ನುಹತ್ತಿದ್ದರಿಂದ ಇತಿಹಾಸಕ್ಕೆ ಹಲವು ಮಗ್ಗಲುಗಳ ಜ್ಞಾನ ಲಭಿಸುವಂತಾಯಿತು.

೭೭ರ ಸಂಖ್ಯೆಗೆ ಹೊಸ ವ್ಯಾಖ್ಯಾನ

೭೭ ಎಂಬುದು ಜನಪದ ಆಶಯ ಸಂಕೇತವಾಗಿ, ಪ್ರದೇಶ, ಪಂಥ, ಸಮುದಾಯ, ಸಂದರ್ಭ, ಸನ್ನಿವೇಶ, ಉತ್ಪ್ರೇಕ್ಷೆ, ಪ್ರತಿಷ್ಠೆ ಪದವಾಗಿಯೂ, ಗುಣವಾಚಕವಾಗಿಯೂ ವಚನದಿಂದ ಹಿಡಿದು ಜನಸಾಮಾನ್ಯರ ಭಾಷೆಯಲ್ಲೂ ಬೆರೆತು ಹೋಗಿದೆ.

ಯಾವುದೇ ಕಾಲದಲ್ಲಿ ಯಾವುದೇ ಪ್ರದೇಶದಲ್ಲಿ ೭೭ ಸಂಖ್ಯೆಯ ನಿರ್ದಿಷ್ಟ, ನಿಖರವಾದ ಪಾಳೆಯಗಾರರು ಅಸ್ತಿತ್ವದಲ್ಲಿರಲಿಲ್ಲ. ಏಕೆಂದರೆ ಯಾವುದೋ ಸಂದರ್ಭದಲ್ಲಿ ಯಾರೋ ಹುಟ್ಟುಹಾಕಿದ್ದು, ಜಾನಪದರು ಸಂಪೋಷಿಸಿದರು. ಕೆಲವು ಅಧ್ಯಯನಕಾರರು ಇದನ್ನು ವೈಜ್ಞಾನಿಕವಾಗಿ

ಶೋಧಿಸುವ ಕಾರ್ಯ ಮಾಡದೆ ಜನರು ಹೇಳಿದ್ದನ್ನೇ ದಾಖಲಿಸಿಕೊಂಡಿದ್ದರಿಂದ, ಇತಿಹಾಸದ ಮತ್ತು ಇತರೆ ದಾಖಲೆಗಳಲ್ಲಿ ತಪ್ಪಾಗಿ ದಾಖಲೆಗೊಂಡಿದೆ. ಆದ್ದರಿಂದ ಇದೊಂದು ತಾಂತ್ರಿಕ ಮತ್ತು ಆಧ್ಯಾತ್ಮಿಕ ಭಾಗವಂತರ್ಗತ ಸಂಖ್ಯೆ. ನಂತರ ಅದು ವಿಸ್ತಾರಗೊಂಡು, ಇದೊಂದು ಕೇವಲ ಆಶಯದಿಂದ ಕೂಡಿರುವಂತದ್ದು. ಪರಿಣಾಮ ೭೭ ಪಾಳೆಯಗಾರರು ಇದ್ದಾರೆಂಬುದಕ್ಕೆ ನಿಖರ ಮತ್ತು ವೈಜ್ಞಾನಿಕ ದಾಖಲೆಗಳಿಲ್ಲ. ಆದ್ದರಿಂದ ಇದೊಂದು ವೈಜ್ಞಾನಿಕವಾಗಿ ಮುಂದುವರಿದುಕೊಂಡು ಬಂದಿದೆ.

ಹಲವು ಸಾಧಕರು ಇತಿಹಾಸವನ್ನು ಓದುವಂತಹ ಸಂದರ್ಭದಲ್ಲಿ ಒಂದು ವಿಷಯದಿಂದ ಮತ್ತೊಂದು ವಿಷಯದ ಸೃಷ್ಟಿಗೆ ದಿಕ್ಸೂಚಿಯಾದಂತೆ ೭೭ ಸಂಚಿಕೆಯ ಶೋಧದಿಂದ ಚರಿತ್ರೆ ಮತ್ತು ಜಾನಪದದ ನಡುವಣ ಅಂತರ್‌ಸಂಬಂಧ ಬೆಸೆದಿದ್ದು, ಕಂಡುಬರುವ ಜೊತೆಗೆ ಜಾನಪದ ಮತ್ತು ಇತಿಹಾಸ ಎರಡರಿಂದ ಸಮ್ಮಿಲನಗೊಂಡು ಜಾನಪದ ಇತಿಹಾಸ ಮತ್ತು ಐತಿಹಾಸಿಕ ಜಾನಪದ ಎಂಬ ಒಂದು ಹೊಸ ದಾಖಲೆಗೆ ಜನ್ಮ ನೀಡಿದಂತಾಗಿದೆ. ಇದೇ ತೆಲಗಾವಿಯವರ ಸಂಶೋಧನದ ವೈಶಿಷ್ಟ್ಯ. ಒಟ್ಟಾರೆ ೭ ಮತ್ತು ೭೭ ಸಂಖ್ಯೆ ಭಾರತೀಯರ ಮತ್ತು ಕನ್ನಡಿಗರ ಸಂಪ್ರದಾಯಕ ಮನಸ್ಸನ್ನು ಸಂಕೇತಿಸುತ್ತದೆ.

ಚಿತ್ರದುರ್ಗದ ಒನಕೆ ಓಬವ್ವ ಚಾರಿತ್ರಿಕ ವಿವೇಚನೆ

೨೦೧೦ರಲ್ಲಿ "ಚಿತ್ರದುರ್ಗದ ಒನಕೆ ಓಬವ್ವ ಚಾರಿತ್ರಿಕ ವಿವೇಚನೆ" ಎಂಬ ಶೀರ್ಷಿಕೆಯೊಂದಿಗೆ ಪ್ರಕಟಿತಗೊಂಡ ಈ ಹೊತ್ತಿಗೆಯು ವಿಶಿಷ್ಟ. ಏಕೆಂದರೆ ಸ್ವಾಮಿನಿಷ್ಠೆ, ಸಮಯಸ್ಪೂರ್ತಿ ತ್ಯಾಗಗಳಂತ ತ್ರಿಗುಣಗಳ ಗುಣಸಾಗರಿ ಒನಕೆ ಓಬವ್ವ ಚಿತ್ರದುರ್ಗ ಚರಿತ್ರೆಯಿಂದ ಬೇರ್ಪಡಿಸಲಾಗದಷ್ಟು ಗಟ್ಟಿಯಾಗಿ ಬೆಸೆದುಕೊಂಡು ಕರ್ನಾಟಕ ಚರಿತ್ರೆಯಲ್ಲಿ ಪ್ರಮುಖ ಸ್ಥಾನ ಪಡೆದಿದ್ದಾರೆ.

ಈಕೆಗೆ ಸಂಬಂಧಿಸಿದಂತೆ ಗ್ರಂಥಗಳು, ಪ್ರಬಂಧಗಳು, ಶಾಲಾಪಠ್ಯ ಪುಸ್ತಕಗಳು, ಸಿನಿಮಾಗಳು, ಕಥೆಗಳು, ಜಾನಪದಗೀತೆಗಳಲ್ಲಿ ಚಿತ್ರದುರ್ಗ ಕೊನೆಯ ಅರಸ ರಾಜ ವೀರಮದಕರಿನಾಯಕನ ಅವಧಿಯಲ್ಲಿ, ಹೈದರಾಲಿಯ ಸೈನ್ಯವು ಕಳ್ಳಗಂಡಿಯ ಮೂಲಕ ರಹಸ್ಯವಾಗಿ ಒಳನುಗ್ಗುವ ಸಂದರ್ಭವನ್ನು ಆಕಸ್ಮಿಕವಾಗಿ ನೋಡಿದಂತೆ, ಕೂಡಲೆ ಒನಕೆಯಿಂದ ಸದೆಬಡಿದು ಓಡಿಸಿದಂತೆ, ಆ ಸೈನ್ಯದಲ್ಲಿದ್ದ ಒಬ್ಬ ಸೈನಿಕ ತಪ್ಪಿಸಿಕೊಂಡು ಓಬವ್ವನನ್ನು ಹತ್ಯಗೈದನೆಂದು, ಆ ಮೂಲಕ ದುರ್ಗವನ್ನು ಸಂರಕ್ಷಣೆ ಮಾಡಿದಳೆಂದು ಈ ಕಾರಣವಾಗಿಯೇ ಆಕೆಯ ಬಗ್ಗೆ ಅಭಿಮಾನ ಅನುಕಂಪದಿಂದ ಜನ ಸಾಮಾನ್ಯರಲ್ಲಿ ಮನೆ ಮಾತಾಗಿದೆ. ಈ ಮೇಲಿನ ಘಟನೆಗೆ ಸಂಬಂಧಿಸಿದಂತೆ ಎಂ.ಎಸ್. ಪುಟ್ಟಣ್ಣ, ಹುಲ್ಲೂರು ಶ್ರೀನಿವಾಸಜೋಯಿಸರು ಮೇಲಿನ ಸಂಗತಿಗಳಿಗೆ ಆಧಾರ ಒದಗಿಸುತ್ತಾರೆ. ಆದರೆ ಸೂಕ್ಷ್ಮ ಸಂಶೋಧಕರಾದ ತೆಲಗಾವಿಯವರು ಹಲವು ಆಯಾಮಗಳ ಸಂಶೋಧನೆಗೆ ಮುಂದಾದಾಗ ಕಂಡುಕೊಂಡದ್ದೆ ಭಿನ್ನ; ಈಕೆಯನ್ನ ಕೆಲವರು ನಾಯಕ ಜನಾಂಗವೆಂತಲೂ ಕೆಲವರು ಛಲವಾದಿ ಸಮುದಾಯವೆಂತಲೂ ಗುರುತಿಸಿದ್ದರು. ಆದರೆ ಲಕ್ಷ್ಮಣ್‌ತೆಲಗಾವಿಯವರು ನೈಜತೆ ಕಂಡುಕೊಳ್ಳುವ ಪರಿಣಾಮ ರಹದಾರಿ ಪತ್ರ ನಿರೂಪ

ಅಧಿಕಾರಪತ್ರ, ಕೈಫಿಯತ್ತು ಮತ್ತು ಪ್ರೊ.ಎ.ಡಿ. ಕೃಷ್ಣಯ್ಯ, ಎ.ಡಿ. ನರಸಿಂಹಯ್ಯ ಮುಂತಾದವರ ಬಳಿಯಿದ್ದ ಕೆಲವು ದಾಖಲೆ ಜನಸಾಮಾನ್ಯರಲ್ಲಿ ಮನೆ ಮಾಡಿದ್ದ ಕೆಲವು ಮಾಹಿತಿಗಳು, ಬಹುಮುಖ್ಯವಾಗಿ ಓಬವ್ವಗೆ ಸಂಬಂಧಿಸಿದ ವಂಶಾವೃಕ್ಷದಿಂದಲೂ, ಕ್ಷೇತ್ರಕಾರ್ಯದಿಂದಲೂ ಓಬವ್ವನ ಪರಿಕಲ್ಪನೆಗೆ ಹೊಸ ವ್ಯಾಖ್ಯಾನ ಬರೆದವರೆಂದರೆ ತೆಲಗಾವಿಯವರು. ಅಧ್ಯಯನದಲ್ಲಿ ಬಳಸಿದಂತೆ ಓಬವ್ವ ಕಿಂಡಿ ಎಂದೆ ಪ್ರಸಿದ್ಧಿಯಾಗಿರುವ ದುರ್ಗದ ಕಿಂಡಿಯು ಓಬಕೆ ಕಿಂಡಿ, ಓಬಳಗುಂಡಿ, ಓಬವ್ವನ ಕಿಂಡಿ ಎಂದು ಕರೆಯುವ ಸ್ಥಳವು ಒಂದೆ ಆಗಿರದೆ ಕೋಟೆಯಲ್ಲಿರುವ ನೈಸರ್ಗಿಕ ಕಲ್ಲಿನ ಪೊಟರೆಯು ದಿಡ್ಡಿ ಬಾಗಿಲಾಗಿತ್ತೆಂದು ಶೋಧಿಸಿದ್ದಾರೆ ಹಾಗೂ ಚಿತ್ರದುರ್ಗವು ಹೈದರ್ ಅಲಿಖಾನ್‌ನ ವಶವಾದ ನಂತರ ಹಲವು ವರ್ಷಗಳ ಕಾಲ ಓಬವ್ವಳು ಬದುಕಿದ್ದು, ಸಾವನ್ನಪ್ಪಿದ ನಂತರ ಅವರ ವಂಶಜರು ಉಪಜೀವನಕ್ಕಾಗಿ ಆಂಧ್ರ ಮತ್ತು ಅನಂತಪುರ, ಕರ್ನಾಟಕದ ಕೆಲವು ಭಾಗಗಳಿಗೆ ಹೋಗಿದ್ದು, ಓಬವ್ವ ಛಲವಾದಿ ಸಮುದಾಯಕ್ಕೆ ಸೇರಿದವರಾಗಿದ್ದು, ಇದಕ್ಕೆ ಸಾಕ್ಷಿಯಾಗಿ ಇವರ ವಂಶಜರ ಹತ್ತಿರವಿರುವ ಹಲವು ದಾಖಲೆ ಮತ್ತು ವಂಶಾವೃಕ್ಷವು ಸಾಕ್ಷಿ ನೀಡುತ್ತದೆ. ಇಂತಹ ಸತ್ಯ ಸಂಗತಿ ಸಂಶೋಧಿಸಿದುದು ಅಸಾಮಾನ್ಯವಾದುದಾದರೂ ಓಬವ್ವನ ಬಗ್ಗೆ ಮತ್ತೊಂದು ರೀತಿಯಲ್ಲಿ ವಿದ್ವತ್ ವಲಯ ಚರ್ಚಿಸಿ, ಒಳಪಡಿಸಿ ಮತ್ತೊಂದು ಹೊಸ ಇತಿಹಾಸದ ಭಾಸ್ಯ ಬರೆಯಬೇಕಿತ್ತು. ಆದರೆ ಓಬವ್ವ ಕೆಳಜಾತಿಯವರೆಂತಲೊ, ಮಹಿಳೆಯಂತಲೊ, ಶೋಧಿಸಿದ ವ್ಯಕ್ತಿಯು ತಳಸಮುದಾಯದವರೆಂತಲೊ ಹಲವು ಕಾರಣದಿಂದಲೆ ಚರ್ಚೆಗೆ ಬಾರದಿರುವುದು ಒಬ್ಬ ಸಂಶೋಧಕನಿಗೆ ವಿದ್ವತ್‌ವಲಯ ತೋರಿಸುವ ಅಗೌರವವಾಗಿದೆ.

ಮಧ್ಯಕಾಲದಲ್ಲಿನ ಭಾರತೀಯ ಇತಿಹಾಸಕ್ಕೆ ಹಲವು ಮಗ್ಗಲುಗಳ ಆಯಾಮವಿದೆ. ಮೂಲತಃ ಸ್ಥಳೀಯ ಪಾಳೆಯಗಾರರ ಕಾಲಘಟ್ಟ ಮುಸ್ಲಿಂ ದೊರೆಗಳ ಸಾಮ್ರಾಜ್ಯ ವಿಸ್ತರಣೆಯ ಅಟ್ಟಹಾಸ ಒಂದೆಡೆಯಾದರೆ ಇಂಗ್ಲಿಷರ ಒಡೆದು ಆಳುವ ನೀತಿಯೊಂದಿಗೆ ಇಡೀ ಭಾರತವನ್ನೆ ಆಕ್ರಮಿಸಿ ಹಲವು ಶತಮಾನಗಳ ತನಕ ಇಲ್ಲಿನ ಜನಗಳ ಮೇಲೆ ಸವಾರಿ ಮಾಡಿದ್ದನ್ನು ಮಧ್ಯಯುಗ ದರ್ಶಿಸುತ್ತದೆ.

ಭಾರತದ ಇತಿಹಾಸದಲ್ಲಿ ಕರ್ನಾಟಕ ಇತಿಹಾಸ ರೋಚಕವೂ, ಕ್ಲಿಷ್ಟಕರವೂ, ಸೆಣಸಾಟದಿಂದಲೆ ಕೂಡಿರುವಂತದ್ದು ಇಂತಹ ರೋಚಕ ಇತಿಹಾಸಕ್ಕೆ ವಿಶಿಷ್ಟ ಪಾಳೆಯಪಟ್ಟು ಮತ್ತು ಚಿತ್ರದುರ್ಗದ ಸಂಸ್ಥಾನ ಇಲ್ಲಿನ ಪಾಳೆಯಗಾರರು ಮರಾಠರು, ಇಂಗ್ಲೀಷರು ಹಾಗೂ ಮುಸ್ಲಿಂ ದೊರೆಗಳಿಗೆ ಮುಖಾಮುಖಿಯಾಗುತ್ತದೆ, ತಮ್ಮತನ ಉಳಿಸಿಕೊಂಡು, ಬೆಳೆದು ಕನ್ನಡ ನಾಡಿನ ಸಂಸ್ಕೃತಿ ಚರಿತ್ರೆಯನ್ನು ಕಟ್ಟಿದ್ದು. ಆ ಸಂಸ್ಕೃತಿಗಳ ತಿಳುವಳಿಕೆ ಕೆಲವೆ ಕೆಲವು ಬ್ರಿಟಿಷ್ ಮತ್ತು ಇತರೆ ನಿಷ್ಠ ಅನುಯಾಯಿಗಳ ಹುನ್ನಾರದಿಂದ ಸ್ಥಳೀಯರ ಆಡಳಿತದ ಬಗ್ಗೆ ಯಾರಿಗೂ ತಿಳಿಯದಾಗಿದ್ದು, ಅದನ್ನು ತಿಳಿಸುವ ಕೆಲಸಗಳಲ್ಲಿ ತೊಡಗಿಸಿಕೊಂಡವರೆಂದರೆ ಹುಲ್ಲೂರು ಶ್ರೀನಿವಾಸ ಜೋಯಿಸರು ಮುಖ್ಯರು. ದುರ್ಗದ ಕೋಟೆಯೊಳಗೆ ಅವಿತಿರುವ ಇತಿಹಾಸಕ್ಕೆ ಅಕ್ಷರ ರೂಪಕೊಟ್ಟು ದಾಖಲಿಸಿ ಜನಸಾಮಾನ್ಯರಿಗೆ, ಸಂಶೋಧಕರಿಗೆ, ಉಪಯುಕ್ತವಾಗುವಂತೆ ಮಾಡಿದ್ದಾರೆ. ಇಂತಹವರು ಈಗ

ಇತಿಹಾಸದಲ್ಲಿ ಇತಿಹಾಸವಾಗಿದ್ದಾರೆ. ಇಂತಹವರನ್ನು ಪತ್ತೆಹಚ್ಚಿದವರು ಸಂಶೋಧನದ ಮರುಚಿಂತನೆಗೆ ಅಳವಡಿಸಿದವರು ವಸ್ತುನಿಷ್ಠವಾಗಿ ಬರಬೇಕೆನ್ನುವ ದೃಷ್ಟಿಕೋನದಿಂದ ಹುಲ್ಲೂರು ಶ್ರೀನಿವಾಸ ಜೋಯಿಸರನ್ನು ಅಧ್ಯಯನ ಮಾಡಿದವರು ಮತ್ತೊಬ್ಬ ಸಂಶೋಧಕ ಲಕ್ಷ್ಮಣ್ ತೆಲಗಾವಿಯವರು.

ದೊಡ್ಡೇರಿ ಕದನ (೧೬೮೯-೧೭೨೧)

"ದೊಡ್ಡೇರಿ ಕದನ : ಚರಿತ್ರೆ ಮತ್ತು ಜಾನಪದಗಳ ನೆಲೆಯಲ್ಲಿ" ಎಂಬ ಶೀರ್ಷಿಕೆಯೊಂದಿಗೆ ೨೦೧೧ರಲ್ಲಿ ಪ್ರಕಟಿತಗೊಂಡ ಸಂಶೋಧಿತ ಕೃತಿಯು ಎಲ್ಲಾ ಕೃತಿಗಳಿಗಿಂತ ಮಿಗಿಲಾದುದು. ಚಿತ್ರದುರ್ಗವನ್ನಾಳಿದ ನಾಯಕ ಪರಂಪರೆಯ ೧೦ನೇ ದೊರೆ ಬೆಂಕಿ ಭರಮೇಂದ್ರನೆಂಬ ಖ್ಯಾತಿಗೆ ಒಳಗಾದ ಬಿಚ್ಚುಗತ್ತಿಭರಮಣ್ಣ ನಾಯಕನ ಕಾಲಘಟ್ಟಗಳಲ್ಲಿ ನಡೆದಂತ ಕದನವಾಗಿದ್ದು, ಮೊಗಲರ, ಮರಾಠರ ಹಾಗೂ ನಾಯಕರ ನಡುವೆ ನಡೆದಂತಹ ಕದನವಾಗಿದ್ದು, ಚಿತ್ರದುರ್ಗ ಜಿಲ್ಲೆಯಲ್ಲಿ ನಡೆದ ನೇರ ಸಂಘರ್ಷದಿಂದ ಕೂಡಿದ, ದಕ್ಷಿಣ ಭಾರತದ ಇತಿಹಾಸದಲ್ಲಿಯೆ ಪ್ರಾಮುಖ್ಯತೆ ಪಡೆದಂತಹ ಯುದ್ಧವಾಗಿದೆ.

ದೊಡ್ಡೇರಿ ಕದನಕ್ಕೆ ಕಾರಣಗಳು

೧. ಯಾರ ದಬ್ಬಾಳಿಕೆಗೂ ಜಗ್ಗದ ಭರಮಣ್ಣನಾಯಕನಿಗೆ ಮೊಗಲರ ಪಡೆಯವನಾದ ಕರ್ನಾಟಕದ ಫೌಜುದಾರ ಹಾಗೂ ಸಿರಾ ಪ್ರಾಂತ್ಯದ ಅಧಿಕಾರಿಯಾಗಿದ್ದ ಸೈಯದ್‌ಖಾಸಿಂಖಾನನು ಚಿತ್ರದುರ್ಗದವರಿಂದ ಕಪ್ಪ ಕೇಳಲು ಮುಂದಾಗಿ ಪದೇ ಪದೇ ಪೀಡಿಸುತ್ತಿದ್ದನು.

೨. ಮೊಗಲ್ ದೊರೆ ಔರಂಗಜೇಬನ ಆಕ್ರಮಣ ನೀತಿ ಮತ್ತು ಪಾಳೆಯಗಾರರಿಗೆ ಕೊಡುತ್ತಿದ್ದ ಹಿಂಸೆಯಿಂದ ಚಿತ್ರದುರ್ಗದ ಪಾಳೆಯಗಾರರನ್ನು ರೊಚ್ಚಿಗೆಬ್ಬಿಸಿತು.

೩. ಮೊಗಲರ ಒತ್ತಡದ ಸಂದರ್ಭದಲ್ಲಿ ಮರಾಠರು ಕರ್ನಾಟದಲ್ಲಿ ತನ್ನದೇ ಛಾಪು ಮೂಡಿಸಿದ್ದರು. ಪರಿಣಾಮ ಮರಾಠರನ್ನು ಓಲೈಸಿ ಮುಂದೊಂದು ದಿನ ಯುದ್ಧ ಮಾಡುವ ಯೋಜನೆಯಿದ್ದಿತು.

೪. ೧೯೬೦ರಲ್ಲಿ ಕೆಲವು ನೆಪಗಳ ಮೂಲಕ ಸೈಯದ್ ಖಾಸಿಂಖಾನನು ದುರ್ಗದ ಮೇಲೆ ನೇರ ದೌರ್ಜನ್ಯ ನಡೆಸಿದ್ದರಿಂದ ಯುದ್ಧಕ್ಕೆ ಮತ್ತೊಂದು ಪ್ರಬಲವಾದ ಕಾರಣವಾಯಿತು.

ಯುದ್ಧ ನಡೆದ ಸ್ಥಳ

ಚಿತ್ರದುರ್ಗದ ಗಡಿಭಾಗ ಚಳ್ಳಕೆರೆ ತಾಲ್ಲೂಕಿನ ತಳಕು, ದೊಡ್ಡುಳ್ಳರ್ತಿ, ಚಿಕ್ಕ ಉಳ್ಳರ್ತಿ, ದುಗ್ಗವಾರ, ಯಾದಲಗಟ್ಟ, ಕಾಲುವೆಹಳ್ಳಿ, ಭರಮಸಾಗರ ಮೊದಲಾದ ಪ್ರದೇಶಗಳನ್ನೊಳಗೊಂಡ ಪರಿಸರವೇ ದೊಡ್ಡೇರಿ.

ಕದನದ ಕಲಿಗಳು

ಮೊಗಲರ ಪಡೆಯಿಂದ ಕರ್ನಾಟಕದ ಫೌಜುದಾರ ಸಿರಾ ಪ್ರಾಂತ್ಯದ ಅಧಿಕಾರಿ ಸೂಕ್ಷ್ಮಾತಿಸೂಕ್ಷ್ಮ ವೀರ ಸೇನಾನಿ ಸೈಯದ್ ಖಾಸಿಂಖಾನ್, ಮುರಾದ್‌ಖಾನ್, ಮಿರ್ಜಾಹಸನ್, ಸಾಜ್‌ಶಿಕನ್‌ಖಾನ್, ಹಿಮ್ಮತ್‌ಖಾನ್ ಮತ್ತು ಸುಸಜ್ಜಿತಗೊಂಡ ಸೇನಾನಿಗಳು ಭಾಗವಹಿಸಿದ್ದಾರೆ.

ಮರಾಠರ ಪರಾಕ್ರಮಿ ಸೇನಾಧಿಪತಿ ಸಂತಾಜಿ ಘೋರ್ಪಡೆ, ಈತನ ಆಕ್ರಮಣ, ದೌರ್ಜನ್ಯ, ಲೂಟಿ ಹೊಡೆಯುವ ಪರಿ, ದಾಳಿಯ ಕಲರವ, ಯುದ್ಧದ ನೀತಿ, ಸಂಪತ್ತಿನ ಕ್ರೋಢೀಕರಣ, ಸೈನಿಕರ ವ್ಯವಸ್ಥೆ ಇತ್ಯಾದಿಗಳೆಲ್ಲವೂ ಮೊಗಲರನ್ನು ಬೆಚ್ಚಿ ಬೀಳಿಸಿತು.

ಚಿತ್ರದುರ್ಗದ ಪ್ರಳಯರುದ್ರ ಬಿಚ್ಚುಗತ್ತಿಯ ಭರಮಣ್ಣನಾಯಕ, ಈತನ ಮಗ ಹಿರೇಮದಕರಿನಾಯಕ ಇವರ ಸಹಾಯಕರಾಗಿ ಸಂಬಂಧಿಗಳು, ಅತ್ಯುತ್ತಮ ವೀರಸೇನಾನಿಗಳಾಗಿದ್ದ ಗುಂಟುನೂರುಮಲ್ಲಪ್ಪ, ಹೊಳಲ್ಕೆರೆ ಬೊಮ್ಮಣ್ಣ, ದಳವಾಯಿಚಿಕ್ಕಣ್ಣ, ಕುಡಿತಿನಿ ವೆಂಕಟಣ್ಣ ಮತ್ತು ದುರ್ಗದ ಸೇನಾನಿಗಳು ಭಾಗವಹಿಸಿದ್ದರು.

ಯುದ್ಧದ ತೀವ್ರತೆ

ಖಾಸಿಂಖಾನನು ನೇರ ದೌರ್ಜನ್ಯದೊಂದಿಗೆ ತಳಕಿನಿಂದ ದೊಡ್ಡೇರಿವರೆಗೆ ಲಡಾಯಿ ಮಾಡುತ್ತಾ ದೊಡ್ಡೇರಿ ಕೋಟೆಯತ್ತ ಮುಂದುವರಿದ. ಇಷ್ಟೊತ್ತಿಗೆ ದುರ್ಗದ ಪರವಾಗಿ ಬಂದಿದ್ದ ಸೇನೆಯು ಅಶ್ವಸೇನೆ ಒಳಗೊಂಡಂತೆ ಯುದ್ಧ ಆರಂಭವಾಯಿತು. ಮರಾಠರ ಮತ್ತು ದುರ್ಗದವರ ಹೋರಾಟದ ಶೌರ್ಯ ಮತ್ತು ತಂತ್ರ ಹಾಗೂ ಎದೆಗಾರಿಕೆ ಅರಿತ ಮೊಗಲರಿಗೆ ದಿಕ್ಕು ತೋಚದಂತಾಯಿತು. ಇನ್ನೇನು ಸೋಲು ಖಚಿತವೆಂದರಿತ ಖಾಸಿಂಖಾನ್ ದೊಡ್ಡೇರಿ ಕೋಟೆಯೊಳಗೆ ಪ್ರವೇಶ ಪಡೆದುಕೊಂಡು ತಂಗಿದ. ಇದು ಯುದ್ಧದ ಆರಂಭವಾದರೆ ನಾಲ್ಕು ದಿವಸಗಳ ಕಾಲ ನಡೆದಂತಹ ಈ ಯುದ್ಧದಲ್ಲಿ ಮೊಗಲರ ಶಕ್ತಿಯೇ ಕುಂದಿತು. ಮೊಗಲರು ಒತ್ತು ತಂದ ಆಹಾರ ಸಾಮಗ್ರಿಗಳು ಖಾಲಿಯಾಗಿ ಹಸಿವಿನಿಂದ ಬಳಲಿ ಹಲವು ಸೈನಿಕರು ಸಾವನ್ನಪ್ಪಿದರು ಹಾಗೂ ಹಸಿವಿನಿಂದ ಆನೆ, ಕುದುರೆಗಳು ಸಾವನ್ನಪ್ಪಿದ್ದವು. ಹಾಗಾಗಿ ಮೊಗಲರ ಸೈನಿಕರು ಪ್ರಾಣ ಉಳಿಸಿಕೊಳ್ಳಲು ವಿವಿಧ ವೇಷ ಧರಿಸಿಕೊಂಡು ಪ್ರಾಣ ಉಳಿಸಿಕೊಂಡರು. ಕೆಲವರು ಯುದ್ಧದ ಶೌರ್ಯಕ್ಕೆ ಆತ್ಮಹತ್ಯೆ ಮಾಡಿಕೊಂಡರು. ಹೀಗೆ ಸಾಗುತ್ತಾ ಮುಂದುವರಿದ ದುರ್ಗದ ಪಡೆಯು ದೊಡ್ಡೇರಿ ಕೋಟೆಗೆ ಮುತ್ತಿಗೆ ಹಾಕಿ ತಮ್ಮ ವಶ ಮಾಡಿಕೊಂಡು ಜಯಶೀಲರಾದರು.

ಪರಿಣಾಮ

ಈ ಯುದ್ಧದ ಸೋಲಿನಿಂದ ಧೃತಿಗೆಟ್ಟ ಖಾಸಿಂಖಾನನು ಔರಂಗಜೇಬನಿಗೆ ಮುಖ ತೋರಿಸಬಾರದು ಎಂಬ ಕಾರಣಕ್ಕಾಗಿ ವಿಷ ಸೇವಿಸಿ ಕೋಟೆಯೊಳಗೆ ಆತ್ಮಹತ್ಯೆ ಮಾಡಿ ಕೊಂಡನೆಂದು ಮತ್ತು ಈ ಮೊದಲಿನಿಂದಲೂ ಅಫೀಮಿನ ಅಮಲು ರೂಢಿಸಿಕೊಂಡಿದ್ದರಿಂದ ಅಫೀಮು ದೊರೆಯದಿದ್ದ ಕಾರಣ ಮರಣ ಹೊಂದಿದನೆಂದು ಕೆಲವು ಇತಿಹಾಸಕಾರರ ವಾದ. ಏನೇ ಆದರೂ ದೊಡ್ಡೇರಿ ಕದನವು ಸಿರಾ ಪ್ರಾಂತ್ಯದ ಅಧಿಕಾರಿ ಸೈಯದ್ ಖಾಸಿಂಖಾನನನ್ನು ಅಂತ್ಯಗೊಳಿಸಿತು. ಹಾಗಾಗಿ ಮರಾಠರ ಸಂತಾಜಿ ಘೋರ್ಪಡೆಯ ಕೀರ್ತಿ ಸುತ್ತಮುತ್ತಲಿನ ರಾಜ್ಯಗಳಿಗೂ ಹಬ್ಬಿತು. ಆ ಮೂಲಕ ಸಂಪತ್ತು ಮತ್ತು ಸೇನೆಯ ವರ್ಚಸ್ಸು ವೃದ್ಧಿಸಿತು.

ಚಿತ್ರದುರ್ಗದ ಬಿಚ್ಚುಗತ್ತಿ ಭರಮಣ್ಣನಾಯಕ ಮತ್ತು ಆತನ ಬೆಂಬಲಿಗರ ಕೀರ್ತಿ ಹೆಚ್ಚುವಂತೆ ಮಾಡಿ ಯಶಸ್ವಿ ದೊರೆ ಎಂಬ ಪಾತ್ರಕ್ಕೆ ಒಳಗಾಗಿದ್ದರಿಂದ ಈತನನ್ನು ಬೆಂಕಿ ಭರಮನೆಂದು ಬಿರುದು ಅಲಂಕರಿಸಿಕೊಳ್ಳುವಂತಾಯಿತು.

ಮೊಗಲರ ದೊರೆ ಔರಂಗಜೇಬನಿಂದ ಹಿಡಿದು ಮುಸ್ಲಿಂ ನವಾಬ ಶ್ರೀರಂಗಪಟ್ಟಣದ ಹೈದರಾಲಿ, ಟಿಪ್ಪುವಿನತನಕ ಹಾಗೂ ದುರ್ಗದ ಕೆಲವು ದೊರೆಗಳ ನಂತರ ಮರಾಠರು ಇವರ ವೈರಿಗಳಾಗಿಯೂ ಬದಲಾದರೂ, ಪರಿಣಾಮ ಇವರೊಂದಿಗಿನ ಸಂಘರ್ಷ ಪದೇ ಪದೇ ನಡೆಯುತ್ತಲೇ ಹೋಯಿತು. ೮೫ ವರ್ಷಗಳ ನಂತರ ಚಿತ್ರದುರ್ಗದ ಕೊನೆಯ ದೊರೆ ರಾಜವೀರ ಮದಕರಿನಾಯಕನ ಅಂತ್ಯದವರೆಗೂ ದುರ್ಗವು ಮೊಗಲ್ ಮತ್ತು ಮರಾಠರಿಗೂ ಸಿಂಹಸ್ವಪ್ನ ಕೋಟೆಯಾಗಿದ್ದಿತ್ತೆಂಬುದಕ್ಕೆ ಹಲವು ಇತಿಹಾಸಗಳು ತಿಳಿಸುತ್ತವೆ. ಹೀಗೆ ರಾಜಕೀಯ ಏಳು-ಬೀಳು ಮತ್ತು ಪ್ರತಿಷ್ಠೆಯ ಸರ್ವನಾಶ ಎಲ್ಲವೂ ನಡೆದುಕೊಂಡು ಬಂದವು. ಇಂತಹ ಮಹತ್ವವಿರುವ ದುರ್ಗದ ಇತಿಹಾಸಕ್ಕೆ ಹಲವು ಇತಿಹಾಸ ಸಂಶೋಧಕರು ಪ್ರಾಮುಖ್ಯತೆ ಕೊಡದಿದ್ದಕ್ಕೆ ಕಾರಣಗಳು ಇನ್ನು ನಿಗೂಢವಾಗಿವೆ.

ಹಲವು ದಾಖಲೆ ಕ್ಷೇತ್ರಕಾರ್ಯಗಳ ಮೂಲಕ ಹೊಸ ವ್ಯಾಖ್ಯಾನದೊಂದಿಗೆ ಚರಿತ್ರೆಯನ್ನು ಮರುರೂಪಿಸಿದರೂ ಲಕ್ಷ್ಮಣ್ ತೆಲಗಾವಿಯವರ ಚರಿತ್ರೆಯ ದಾಹ ಇನ್ನೂ ತೀರಿಲ್ಲ. ಆದ್ದರಿಂದ ಅವರ ಸಂಶೋಧನದ ಮತ್ತೊಂದು ಆಶಯವು ಹಳೇ ದೊಡ್ಡೇರಿಯನ್ನು ಒಳಗೊಂಡಂತೆ ದೊಡ್ಡೇರಿ ಕದನದ ಗಡಿ ಗುರುತಿಸಿ ಪುರತಾತ್ವಿಕ ಶೋಧನೆಯೆಂದು ತಿಳಿಸುತ್ತಾರೆ. ಈ ಪರಿಸರದಲ್ಲಿ ಕೈಗೊಂಡು ಮತ್ತಷ್ಟು ನಿಖರತೆ ಮತ್ತು ಸೂಕ್ಷ್ಮ ಸಂಶೋಧನೆಯನ್ನು ನಡೆಸುವ ಅಗತ್ಯವನ್ನು ತಿಳಿಸುತ್ತಾರೆ.

ಯಂ. ವೀರಮುದ್ದಣ್ಣ ವಿರಚಿತ ಚಿತ್ರದುರ್ಗದ ಲಡಾಯಿ ಲಾವಣಿ

ಯಂ. ವೀರಮುದ್ದಣ್ಣ ವಿರಚಿತ ಚಿತ್ರದುರ್ಗದ ಲಡಾಯಿ ಲಾವಣಿ ಎಂಬ ಸಂಪಾದನ ಕೃತಿಯನ್ನು ೨೦೧೦ರಲ್ಲಿ ಪ್ರಕಟಿಸಲಾಗಿದ್ದು, ಈ ಕೃತಿಯ ಆಂತರ್ಯದಲ್ಲಿ ಅಡಗಿರುವ ಮಾಹಿತಿಯನ್ನು ಬಾಹ್ಯಗೊಳಿಸಿದವರೆಂದರೆ ಚರಿತ್ರೆ ಸಂಶೋಧಕ ಲಕ್ಷ್ಮಣ್ ತೆಲಗಾವಿಯವರು. ತಾವು ಕಟ್ಟಿದ ಸಂಶೋಧನ ತಂಡದೊಡನೆ ಚಿತ್ರದುರ್ಗದ ಐತಿಹಾಸಿಕ ಸಂಶೋಧನೆಗೆ ತೊಡಗಿರುವಂತ ಸಂದರ್ಭದಲ್ಲಿ ದುರ್ಗದ ಇತಿಹಾಸಕ್ಕೆ ಸಂಬಂಧಿಸಿದಂತೆ ನಾಯಕ ಸಂಸ್ಥಾನದ ಹಲವು ವಿಷಯಬಲ್ಲವರಾದ ತೆಲಗಾವಿಯವರ ಆತ್ಮೀಯರು ಸಂಪನ್ಮೂಲ ವ್ಯಕ್ತಿಗಳಾದ ಗಂಡುಗಲಿಯವರಾಗಿದ್ದಾರೆ. ಸಂಶೋಧನ ತಂಡವು ವಿಶ್ರಾಂತಿ ಪಡೆಯುವ ಸಂದರ್ಭದಲ್ಲಿ ಜೊತೆಯಲ್ಲಿಯೆ ಇರುತ್ತಿದ್ದ ಗಂಡುಗಲಿಯವರು ಲಾವಣಿ ಪದ ಹಾಡುತ್ತಾ ರಂಜಿಸುತ್ತಿದ್ದರು. ತೆಲಗಾವಿಯವರು ಆಗಾಗ್ಗೆ ಈ ಲಾವಣಿಯನ್ನು ಕೇಳುತ್ತಲೇ ಅದರೊಳಗೆ ಬರಬಹುದಾದ ಪಿರಿಯಾಪಟ್ಟಣ ಮತ್ತು ಚಿತ್ರದುರ್ಗದ ಯುದ್ಧದ ಘಟನೆಗಳನ್ನು ಸೂಕ್ಷ್ಮವಾಗಿ ಗ್ರಹಿಸಿದರು. ಕೂಡಲೆ ಗಂಡುಗಲಿ ಬೆನ್ನುಹತ್ತಿ ಮತ್ತೊಮ್ಮೆ ಹಾಡಿಸಿ ಇದು ಎಲ್ಲಿಂದ ಹೇಗೆ ಮನದಟ್ಟಾಯಿತೆಂದು

ಪತ್ತೆ ಹಚ್ಚಿದರು. ಗಂಡುಗಲಿಯವರು ಈ ಲಾವಣಿಯ ಪುಸ್ತಕವು ನನ್ನ ಮಾವನ ಹತ್ತಿರವಿದೆಯೆಂದು ಪ್ರಸ್ತಾಪಿಸಿದರು. ಕೂಡಲೇ ತೆಲಗಾವಿಯವರು ಇವರ ಮಾವನ ಪತ್ತೆದಾರಿ ಶುರು ಮಾಡಿದರು. ಗಂಡುಗಲಿಯವರ ಮಾವ ಚಿತ್ರದುರ್ಗ ಸಂಸ್ಥಾನದ ಚಪ್ಪೇ ಚಾವಡಿ ದಳವಾಯಿ ಕಾಟಪ್ಪನಾಯಕರ ವಂಶಕ್ಕೆ ಸೇರಿದವರು. ಪ್ರಸ್ತುತ ಭದ್ರಾವತಿಯಲ್ಲಿ ನೆಲೆಸಿರುವ ಸಿ. ಪರಶುರಾಮನಾಯಕರನ್ನ ಪತ್ತೆಹಚ್ಚಿ ಇವರ ಬಳಿಯಿದ್ದ ಲಾವಣಿ ಕೃತಿ ಪಡೆದುಕೊಳ್ಳುವುದರೊಂದಿಗೆ ಹಲವು ಮಾಹಿತಿಯನ್ನು ಕಲೆಹಾಕಿದರು. ಈ ಕೃತಿಯು ೧೯೦೫ರಲ್ಲಿ ಬೆಂಗಳೂರು ಬುಕ್ ಡಿಪೋದವರು ಪ್ರಕಾಶಕರರಾಗಿದ್ದು ೧೦ ಪುಟಗಳನ್ನೊಳಗೊಂಡ ಯಂ. ವೀರಮುದ್ದಣ್ಣರವರ ಕೃತಿಯಾಗಿದ್ದು "ಹೈದರಾಲಿ ಮತ್ತು ರಾಜಾವೀರ ಮದಕರಿನಾಯಕರನ್ನು ಕುರಿತದ್ದಾಗಿದೆ" ಚಿತ್ರದುರ್ಗದ ಲಡಾಯಿ ಲಾವಣಿ" ಎಂಬ ಶೀರ್ಷಿಕೆಯೊಂದಿಗೆ ಪ್ರಕಟಣೆಗೊಂಡಿದ್ದನ್ನು ಪತ್ತೆಹಚ್ಚಿ ಯಂ. ವೀರಮುದ್ದಣ್ಣನವರ ಪತ್ತೆಧಾರಿಯ ಕೆಲಸ ಆರಂಭಿಸಿದರು. ಪೂರಕ ಮಾಹಿತಿದಾರರಾಗಿ ಬೆಂಗಳೂರಿನ ಲಾವಣಿ ವಿದ್ವಾಂಸ ಬಿ. ರಾಮಯ್ಯ, ದಾವಣಗೆರೆ ಜಿಲ್ಲೆಯ ಮಾಯಾಕೊಂಡದ ಸ್ವಾತಂತ್ರ್ಯಯೋಧ ಲಾವಣಿಕಾರ ಕೆ. ಗೋವಿಂದಪ್ಪ, ಚಿತ್ರದುರ್ಗದ ಲಡಾಯಿ ಬಸವರಾಜಪ್ಪ, ಬೆಂಗಳೂರು ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಕೇಂದ್ರದ ಉದ್ಯೋಗಿ ಮುರಿಗೆಸ್ವಾಮಿ, ವಿದ್ವಾಂಸ ಎಸ್. ಶಿವಣ್ಣ ಮುಂತಾದುವರಿಂದ ಹಲವು ಮಾಹಿತಿ ಪಡೆದರು. ನಂತರ ವೀರ ಮುದ್ದಣ್ಣನವರ ಸ್ವರೂಪ ಹೇಗಿರಬಹುದೆಂದು ಕುತೂಹಲ ಹೆಚ್ಚಾದ ಪರಿಣಾಮ ಬೆಂಗಳೂರಿನ ತುಪ್ಪದ ವ್ಯಾಪಾರಿ ರುದ್ರಪ್ಪನ ಮೂಲಕ ಗುರುಸಿದ್ಧಯ್ಯರೆಂಬ ಕಲಾವಿದರ ಸಹಾಯದಲ್ಲಿ ಮುದ್ದಣ್ಣನವರ ಭಾವಚಿತ್ರ ಬರೆಸಿದ್ದರು. ಈ ಚಿತ್ರವನ್ನು ರುದ್ರಪ್ಪರಿಂದ ಪಡೆದುಕೊಳ್ಳುವುದರೊಂದಿಗೆ ಹಲವು ಉಪಯುಕ್ತ ಮಾಹಿತಿ ಕ್ರೂಢೀಕರಿಸಿದರು.

ಕರ್ನಾಟಕ ಚರಿತ್ರೆಕಾರರು ೩ನೇ ಸಂಪುಟದಲ್ಲಿ ಪ್ರಾಥಮಿಕ ಮಾಹಿತಿಯಂತೆ ಗುರುತಿಸಿದ್ದರೆ ಹೊರತು, ಪಿರಿಯಾಪಟ್ಟಣ ಮತ್ತು ಚಿತ್ರದುರ್ಗ ಲಡಾಯಿ ಲಾವಣಿಗಳ ಬಗ್ಗೆ ಪ್ರಸ್ತಾಪಿಸಿಲ್ಲ. ೧೯೦೩-೧೯೫೬ರ ಸಂದರ್ಭದಲ್ಲಿನ ಚಿತ್ರದುರ್ಗದ ಮುರುಘಮಠದ ಗುರುಪರಂಪರೆಯ ೧೭ನೇ ಅಧ್ಯಕ್ಷರಾದ ಋಷಿರಾಜ ಜಯದೇವ ಸ್ವಾಮೀಜಿ ಸೇರಿದಂತಹ ಲಾವಣಿಯು ೧೯೧೯ರಲ್ಲಿ ಯಂ. ವೀರಮುದ್ದಣ್ಣ ಹಾಡಿದಂತೆ "ಶ್ರೀ ಮುರುಘರಾಜೇಂದ್ರ ಸ್ವಾಮಿಗಳ ಲಾವಣಿ" ಎಂಬ ಶೀರ್ಷಿಕೆಯುಳ್ಳ ಪೂರ್ಣಪಾಠದ ಅನುಬಂಧದಲ್ಲಿ ಪ್ರಕಟಿಸಲಾಗಿದೆ.

೨೦೦೩ರಲ್ಲಿ ಮೊದಲ ಬಾರಿಗೆ ಪ್ರಾಥಮಿಕ ವಿವರ ಒಳಗೊಂಡ ಪ್ರಬಂಧವು ಇತಿಹಾಸ ದರ್ಶನದಲ್ಲಿ ದೊರೆಯಿತು. ಒಂದು ಶತಮಾನ ಕಾಲದ ನಂತರ ಈ ಲಾವಣಿಯು ಮತ್ತೊಮ್ಮೆ ಬೆಳಕು ಕಾಣುವಂತಾಯಿತು.

ಲಾವಣಿಯ ಕಥಾವಸ್ತು

ಅಪ್ಪಟ ಚಾರಿತ್ರಿಕ ಕಾಳಗದ ಕಥವಾಸ್ತುವನ್ನು ಹೊಂದಿದ ೧೭ನೇ ಶತಮಾನದ ಹಲವು ಮಾಹಿತಿ ಒದಗಿಸುವಂತಹ ವೀರ ಸಾಹಿತ್ಯವಾಗಿದೆ. ಪಿರಿಯಾಪಟ್ಟಣದ ಲಡಾಯಿ ಲಾವಣಿ

ಮತ್ತು ಚಿತ್ರದುರ್ಗದ ಲಡಾಯಿ ಲಾವಣಿ ಎಂಬ ಶೀರ್ಷಿಕೆಯೊಂದಿಗೆ ಲಾವಣಿ ಕಟ್ಟಿಹಾಡಿದ ಯಂ. ವೀರಮುದ್ದಣ್ಣನವರು ಪಿರಿಯಾಪಟ್ಟಣದ ಲಡಾಯಿ ಲಾವಣಿಯಲ್ಲಿ ೧೭ನೇ ಶತಮಾನದ ಪಿರಿಯಾಪಟ್ಟಣ ಸಂಸ್ಥಾನದ ಅರಸ ಚಂಗಾಳ್ವ ಸಂತತಿಯ ವೀರರಾಜನು ಮೈಸೂರಿನ ಪ್ರಸಿದ್ಧ ದೊರೆ ಕಂಠೀರವ ನರಸರಾಜ ಒಡೆಯರೊಡನೆ ನಡೆಸಿದ ಯುದ್ಧ ಘಟನೆಗಳು ಅಂದಿನ ಸ್ಥಿತಿಗತಿಯ ಬಗ್ಗೆ ಹೇಳುವಾಗಲೇ ಸ್ವತಃ ಮೈಸೂರಿನ ಸಂಸ್ಥಾನದವರಾದರು. ಪಿರಿಯಾಪಟ್ಟಣದ ಅರಸನ ಸ್ವಾಭಿಮಾನ, ಪರಾಕ್ರಮ, ಪ್ರಜೆಗಳ ಮೆಚ್ಚುಗೆಗೆ ಪಾತ್ರರಾದ ಹೆಸರಾಂತ ಚಕ್ರವರ್ತಿಯನ್ನು ಕುರಿತದ್ದಾಗಿ ಲಾವಣಿಯು ತಿಳಿಸಿಕೊಡುತ್ತದೆ. ಈಗಲೂ ಪಿರಿಯಾಪಟ್ಟಣದ ರಾಜನು ಯಾವ ರೀತಿಯಾಗಿ ಹೋರಾಡುತ್ತಲೇ ಪರಾಕ್ರಮಿಯಾಗಿ ಮೈಸೂರು ರಾಜರಿಂದ ಹತನಾದನು ಎಂಬುದನ್ನು ತಿಳಿಸುತ್ತದೆ. ಈ ಯುದ್ಧದಲ್ಲಿ ೧೬೪೫ರಲ್ಲಿ ಪಿರಿಯಾಪಟ್ಟಣ ಮೈಸೂರಿಗೆ ಸೇರಿದ್ದನ್ನು ಶ್ರೀಯುತರು ಗುರುತಿಸಿದ್ದಾರೆ.

"ಚಿತ್ರದುರ್ಗದ ಲಡಾಯಿ ಲಾವಣಿ" ಎಂಬ ಶೀರ್ಷಿಕೆಯಿಂದ ಹೊರಬಂದ ಲಾವಣಿಯು ಶ್ರೀರಂಗಪಟ್ಟಣದ ನವಾಬ ಹೈದರಾಲಿ ಮತ್ತು ಚಿತ್ರದುರ್ಗದ ರಾಜವೀರ ಮದಕರಿನಾಯಕರ ನಡುವೆ ನಡೆದ ನಿರ್ಣಾಯಕ ಯುದ್ಧದ ಸಂದರ್ಭ ಕುರಿತಾದ ಕಥಾವಸ್ತು ಹೊಂದಿದೆ. ಶ್ರೀರಂಗಪಟ್ಟಣದ ನವಾಬ ಹೈದರ್‌ಅಲಿಯು ಹೇಗಾದರೂ ಮಾಡಿ ಚಿತ್ರದುರ್ಗವನ್ನು ವಶಕ್ಕೆ ಪಡೆಯಲೇಬೇಕೆಂಬ ಹಠದಿಂದ ೧೭೬೨, ೧೭೭೪, ೧೭೭೭ರಲ್ಲಿ ೩ ಬಾರಿ ಪ್ರಯತ್ನ ನಡೆಸಿ ಉಕ್ಕಿನ ಕೋಟೆಯಂತಿರುವ ದುರ್ಗವನ್ನು ವಶಪಡಿಸಿಕೊಳ್ಳದೇ ಸಂಧಾನ ಒಪ್ಪಂದಗಳ ನಡುವೆಯೆ ರಾಜಿಯಾಗುತ್ತಿತ್ತು. ಆದರೆ ೧೭೭೯ರ ಅಂತಿಮ ಯುದ್ಧದಲ್ಲಿ ಗೆಲ್ಲಲೇಬೇಕೆಂಬ ಛಲದೊಂದಿಗೆ ಹೈದರಾಲಿಯು ಚಿತ್ರದುರ್ಗದ ಹಲವು ಗಡಿಪ್ರದೇಶ ಆಕ್ರಮಿಸಿಕೊಂಡನು, ಈ ವೇಳೆ ಜರಿಮಲೆ, ರಾಯದುರ್ಗ ಹಾಗೂ ಕುಂಬಿಪಾಲನಾಯಕ, ಕಳ್ಳಿಬೇಲಿ ನರಸಪ್ಪ ಮುಂತಾದವರು ದುರ್ಗದ ವಿರುದ್ಧ ಹೈದರಾಲಿಗೆ ಸಹಾಯ ಮಾಡಿದರು. ಇಷ್ಟೆಲ್ಲಾ ತಯಾರಿ ನಡೆಸಿಕೊಂಡು ಯುದ್ಧಕ್ಕೆ ಮೈಸೂರು ರಾಜರ ಅನುಮತಿ ಕೇಳಲು ಆ ರಾಜರು ರಾಜವೀರ ಮದಕರಿನಾಯಕನಿಗೆ ಸಂಪಿಗೆ ಸಿದ್ದೇಶ್ವರ, ಏಕನಾಥೇಶ್ವರ, ಉಚ್ಚಂಗಿಯವರ ದೈವ ಕೃಪೆಯಿದೆ ಎಂದು ಹಾಗಾಗಿ ಯುದ್ಧ ಬೇಡವೆಂತಲೂ ಹೇಳಿದರು. ಆದರೆ ಹೈದರಾಲಿ ಹಠ ಹಿಡಿದು ಒಪ್ಪಿಗೆ ಪಡೆದು ಅಪಾರ ಸೈನ್ಯದೊಂದಿಗೆ ದುರ್ಗಕ್ಕೆ ಮುತ್ತಿಗೆ ಹಾಕಿದರು. ಈ ಸಂದರ್ಭದಲ್ಲಿ ರಾಜವೀರ ಮದಕರಿನಾಯಕ ಮತ್ತು ಸೈನಿಕರು ಹೋರಾಡಿದ ಪರಿ, ದೇಶದ್ರೋಹಿಗಳು ಮಾಡಿದಂತಹ ದ್ರೋಹದಿಂದ ಅನಿವಾರ್ಯವಾಗಿ ರಾಜವೀರ ಮದಕರಿನಾಯಕ ಸೆರೆಸಿಕ್ಕಿದ್ದನ್ನು ವಿವರಿಸುತ್ತದೆ. ಹೀಗೆ ಹೈದರಾಲಿಯ ರಾಜಕೀಯ ಸ್ಥೈರ್ಯಕ್ಕೆ ನೇರ ಸವಾಲೆಸೆದ ನಾಯಕ ಸಂಸ್ಥಾನಗಳಲ್ಲಿ ಚಿತ್ರದುರ್ಗ ಪ್ರಥಮ ಮತ್ತು ಅಂತಿಮವಾಗಿದೆ. ಇದನ್ನು ವಿವರಿಸುವಂತಹ ಸಂದರ್ಭದಲ್ಲಿ ಮೈಸೂರಿನವರಾದ ಯಂ. ವೀರಮುದ್ದಣ್ಣ ರಾಜವೀರ ಮದಕರಿನಾಯಕನನ್ನು ಎಲ್ಲಿಯೂ ಅಪಮಾನ ಮಾಡದೇ ಆತನ ಪರಾಕ್ರಮವನ್ನು ಅಂದರೆ ಆಗಿನ ಯುದ್ಧದ ತೀವ್ರತೆಯು ೧೭

ವರ್ಷಕ್ಕೆ ಆಗುವಷ್ಟು ಯುದ್ಧ ಕೆಲವೇ ದಿನಮಾನಗಳಲ್ಲಿ ನಡೆದಿದ್ದು ಪಕ್ಷಪಾತವಿಲ್ಲದಂತಹ ಓದುಗ, ಕೇಳುಗರನ್ನು ರಂಜಿಸುವಂತೆ ಸಾಹಿತ್ಯದ ಬಳಕೆ ಉಪಮೆಯಗಳನ್ನು ಬಳಸಿಕೊಂಡು ಲಾವಣಿಯನ್ನು ರಚಿಸಿ ಓದುಗರಿಗೆ ನೀಡಿದ್ದಾರೆ.

ಲಾವಣಿಗೆ ಸಾಥ್ ಕೊಡುವ ದಾಖಲೆಗಳು

ಕರ್ನಾಟಕ ಕವಿಚರಿತ ಮಗ್ಗಲೂರು ಚನ್ನಬಸವಣ್ಣ, ಆಲೂರು ಚಿಕ್ಕಣ್ಣ, ಚನ್ನಬಸವಣ್ಣರ ಲಾವಣಿಗಳು, ಹುಲ್ಲೂರು ಶ್ರೀನಿವಾಸ ಜೋಯಿಸರ ಕೋಲುಪದ, ಇತಿಹಾಸದರ್ಶನ, ಚಾರಿತ್ರಿಕ ಲಾವಣಿಗಳು, ಹಿಸ್ಟಾರಿ ಆಫ್ ಮೈಸೂರು, ಭೀಮಾಜಿಪಂಥರ ಚಿತ್ರದುರ್ಗದ ಬಖೈರು ಇವೆಲ್ಲವೂ ಲಡಾಯಿ ಲಾವಣಿಯಲ್ಲಿರುವ ಕಥಾವಸ್ತುವನ್ನು ಅಧ್ಯಯಿನಿಸಲಿಕ್ಕೆ ಪೂರಕ ಮಾಹಿತಿ ಒದಗಿಸುತ್ತವೆ.

ಚಿತ್ರದುರ್ಗದ ಚರಿತ್ರೆಗೆ ಕುರಿತಾದ ಲಾವಣಿಗಳ ಪೈಕಿ ವೀರಮುದ್ದಣ್ಣ ರಚಿತವಾದ ಲಾವಣಿಯೆ ಪ್ರಥಮ ಪ್ರಕಟಿತ ಲಾವಣಿಯಾಗಿದೆ ಹಾಗೂ ಯಂ. ವೀರಮುದ್ರಣ್ಣನೇ ಪ್ರಥಮ ಚಾರಿತ್ರಿಕ ಲಾವಣಿಗಳ ಶೋಧಕನಾಗಿದ್ದ ಎಂಬುದಕ್ಕೆ ಕೆಲವು ಸಾಕ್ಷಿಗಳಿವೆ. ಆದರೆ ಇನ್ನೂ ಹಲವು ಲಾವಣಿಗಳ ಶೋಧನೆ ನಡೆಯಬೇಕಿದೆ. ಕೆಲವು ಲಾವಣಿಗಳು ಎಲ್ಲಿಯೂ ದಾಖಲಾಗದಿರುವುದು ವಿಪರ್ಯಾಸ. ಹೊಸ ಆಕರಗಳ ಹರಿಕಾರ ತೆಲಗಾವಿ ಒಂದು ಸಂಶೋಧನೆಯನ್ನು ಹಲವು ಆಕರಗಳಲ್ಲಿ ಸಂಗ್ರಹಿಸಲಿಕ್ಕೆ ಸಾಧ್ಯತೆಗಳಿರುವುದು ಸಂಶೋಧಕನ ಮನೋಧರ್ಮದ ಇಂಗಿತ ಆಧರಿಸಿದೆ. ಈ ಹಿನ್ನೆಲೆಯಲ್ಲಿ ಹಲವು ಆಕರಗಳಲ್ಲಿ ಸ್ಥಳೀಯ ಆಕಾರದ ಪ್ರಕಾರಕ್ಕೆ ಸೇರಿದ, ಜನಪದ ಸಾಹಿತ್ಯಕ್ಕೇ ಸೇರಿದ ಲಾವಣಿಯ ಮೂಲಕ ಚಿತ್ರದುರ್ಗ ಇತಿಹಾಸದ ಸಂಶೋಧನೆಗೆ ಆಕರಗಳಿಗೆ ಮೊದಲಮೆಟ್ಟಿಲನ್ನಾಗಿ ಮಾಡಿಕೊಂಡು ಅದರಲ್ಲಿದ್ದ ಅಪಾರ ಮಾಹಿತಿ ಕಣಜದಂತಿರುವ ಯಂ. ವೀರಮುದ್ದಣ್ಣನ ಚಿತ್ರದುರ್ಗದ ಲಡಾಯಿ ಲಾವಣಿಯ ಮೂಲಕ ಇತಿಹಾಸವನ್ನು ಹೀಗೂ ನಿಖರತೆಯಿಂದ ಶೋಧಿಸಬಹುದೆಂಬುದನ್ನು ಸಾಬೀತುಪಡಿಸಿದ್ದಾರೆ.

ರಾಮಾಜಿ ತಿರುಮಲ ಹರಿಕಾರೆಯ ರಾಮರಾಜನ ಬಖೈರು : ಎಂಬ ಈ ಸಂಪಾದಿತ ಕೃತಿಯು ೨೦೧೧ರಲ್ಲಿ ಮುದ್ರಣಗೊಂಡಿದ್ದು, ಈ ಕೃತಿಯು ವಿಜಯನಗರ ಇತಿಹಾಸಕ್ಕೆ ಸಂಬಂಧಿಸಿದ ರಾಜಕೀಯ ವರದಿ ಸ್ವರೂಪದ ಆಕರಗಳಲ್ಲಿ ತೆಲುಗಿನ ರಾಯವಾಚಕಮು ಹಾಗೂ ಕನ್ನಡದ ಶ್ರೀ ಕೃಷ್ಣದೇವರಾಯನ ದಿನಚರಿಗಳು ಈಗಾಗಲೆ ವಿದ್ವತ್ ಪ್ರಪಂಚದಲ್ಲಿ ಸಾಕಷ್ಟು ಪ್ರಚಾರದಲ್ಲಿದ್ದು, ಹಲವು ವಿದ್ವಾಂಸರಿಂದ ವ್ಯಾಪಕ ಚರ್ಚೆಗೊಳಪಟ್ಟಿವೆ. ಇವುಗಳ ಸಾಲಿಗೆ ಸೇರಲರ್ಹವಾದ ಕನ್ನಡದ ರಾಮರಾಜನ ಬಖೈರು ಪ್ರಮುಖವಾಗಿದೆ. ಆದರೆ ಚರ್ಚೆಯಾಗುವ ಮಟ್ಟಿಗೆ ವಿದ್ವಾಂಸರ ಗಮನವನ್ನು ಸೆಳೆದಂತಿಲ್ಲ. ಕಾರಣ ಈ ಬಖೈರಿನ ಪೂರ್ಣಪಠ್ಯವೂ ಸುಲಭದಲ್ಲಿ ಲಭ್ಯವಿಲ್ಲ ದಿರುವುದೊಂದು ಕಾರಣವಿದ್ದಿರಬಹುದು.

ಈ ಮೊದಲು ರಾಮರಾಯನ ಬಖೈರನ್ನು ಪ್ರಕಟಿಸಿದ ತಿ.ತಾ. ಶರ್ಮಾ (೧೯೨೨-೨೩) ಹಾಗೂ ಮರಾಠಿ ಬಖೈರನ್ನು ಪರಾಮರ್ಶಿಸುವುದರೊಡನೆ ನಾ. ಶ್ರೀ ರಾಜಪುರೋಹಿತ, ಇವರೀರ್ವರ ಪರಿಶ್ರಮದಿಂದ ಕನ್ನಡದ ಓದುಗರಿಗೆ ಈ ದಾಖಲೆಯ ಪರಿಚಯ ಸ್ವಲ್ಪಮಟ್ಟಿಗಾದರೂ

ಆದಂತಾಗಿದೆ. ಮೂಲ ಬಖೈರಿನ ಪಾಠವನ್ನೆ ಸರಳೀಕರಿಸಿ ಅದನ್ನು ನೇರವಾಗಿ ಓದುಗರಿಗೆ ತಲುಪಿಸಲು ಮಾಡಿರುವ ಪ್ರಯತ್ನವನ್ನು ಶ್ಲಾಘಿಸಲೇಬೇಕು ಹಾಗೂ ತಿ.ತಾ. ಶರ್ಮ ಅವರು ಸಂಪಾದಿಸಿದ ಚಾರಿತ್ರಿಕ ದಾಖಲೆಗಳು (೧೯೭೧) ಪುಸ್ತಕದಲ್ಲಿ ಹೈದರುನಾಮೆ ಮತ್ತು ವೀರರಾಜೇಂದ್ರರ ಪತ್ರಗಳೊಡನೆ ರಾಮರಾಯನ ಬಖೈರು ಸಹ ಸೇರಿಕೊಂಡಿದ್ದು, ಇವು ರಾಮರಾಜನ ಬಖೈರು ಮೂಲ ಪಾಠದ ಸರಳೀಕರಿಸಿದ ಪಠ್ಯದಂತಿದೆ. ಮೂಲ ಪಠ್ಯವು ಸಮಗ್ರವಾಗಿದ್ದು, ಹೇರಳ ಮಾಹಿತಿಯನ್ನೊಳಗೊಂಡಿದೆ. ಭಾಷಿಕವಾಗಿ ಸಮಕಾಲೀನ ಸೊಗಡನ್ನು ಮೈಗೂಡಿಸಿಕೊಂಡಿದೆ. ವಿಜಯನಗರದ ಕೊನೆಗಾಲದ ಇತಿಹಾಸದಲ್ಲಿಯ ಕೆಲವು ಸೂಕ್ಷ್ಮ ಸಂಗತಿಗಳನ್ನು ಅಭಿವ್ಯಕ್ತಿಸುತ್ತದೆ. ಈ ಕಾಲಾವಧಿಯ ಆಗು-ಹೋಗುಗಳನ್ನು ಚಿತ್ರಿಸುವಲ್ಲಿ ಲಭ್ಯವಿರುವ ಎಲ್ಲಾ ಮೂಲದ ಸಮಕಾಲೀನ ಆಕರಗಳನ್ನು ಬಳಸಿಕೊಂಡಿರುವ ನಮ್ಮ ವಿದ್ವಾಂಸರು ನಿರೀಕ್ಷಿಸಿದ ಮಟ್ಟಿಗೆ ಈ ಕೃತಿಯ ಪ್ರಯೋಜನ ಪಡೆದುಕೊಂಡಿಲ್ಲವೆಂಬುದು ನಿರ್ವಿವಾದ ಸಂಗತಿಯಾಗಿದೆ. ತಮ್ಮ ಅಧ್ಯಯನಗಳಲ್ಲಿ ಕೇವಲ ಉದಾಹರಿಸಲೆಂಬಂತೆ ಪ್ರಾಸಂಗಿಕವಾಗಿ ಪೂರಕ ದಾಖಲೆಯಾಗಿ ಇದನ್ನು ಉಲ್ಲೇಖಿಸಿರುವುದು ಕಂಡುಬರುತ್ತದೆ. ಆದ್ದರಿಂದ ಲಭ್ಯವಿರುವ ರಾಮರಾಜನ ಬಖೈರಿನ ಮೂಲ ಪಾಠವನ್ನು ಪ್ರತ್ಯೇಕವಾಗಿ ಪ್ರಕಟಿಸಿ ಅಧ್ಯಯನಾಸಕ್ತರಿಗೆ ಅಗತ್ಯ ಆಕರವಾಗಿ ಒದಗಿಸಲು ಈ ಕೃತಿಯಲ್ಲಿ ಪ್ರಯತ್ನಿಸಲಾಗಿದೆ.

ಈ ಕೃತಿಯಲ್ಲಿ ಮುಖ್ಯವಾದ ಬಖೈರುಗಳೆಂದರೆ "ರಾಜಕೀಯ ದಾಖಲೆಗಳು" ಎಂಬುದಾಗಿ ಹೇಳಲಾಗಿದ್ದು, ಶ್ರೀರಂಗಪಟ್ಟಣದ ಹೈದರ್‌ಅಲಿಯು ಚಿತ್ರದುರ್ಗದ ಮೇಲೆ ೪ ಬಾರಿ ಸೈನಿಕ ಕಾರ್ಯಾಚರಣೆ ನಡೆಸಿದ ಎಂಬುದಾಗಿ ಚಿತ್ರದುರ್ಗ ಬಖೈರು ತಿಳಿಸುತ್ತದೆ (೧೭೬೨, ೧೭೭೪, ೧೭೭೭, ೧೭೭೯) ಬಖೈರುಗಳನ್ನು ಕಾಗದದ ಮೇಲೆ ಬರೆಯಲಾಗಿದೆ. ಹೈದರ್‌ನಾಮೆಯ ಬಖೈರುಗಳೆಂಬ ೩ ಬಖೈರುಗಳು ಮಾತ್ರ ಈವರೆಗೆ ವಿದ್ವಾಂಸರ ಗಮನಕ್ಕೆ ಬಂದಿವೆ ಎಂಬ ವಿಷಯವನ್ನು ಈ ಕೃತಿಯಲ್ಲಿ ಕಾಣಬಹುದಾಗಿದೆ.

೫.೨. ಲೇಖನಗಳು

ಚಿತ್ರದುರ್ಗ ಸಂಶೋಧನ ತಂಡದ ಪಕ್ಷಿನೋಟ : ೧೯೭೭ರಲ್ಲಿ ರಚಿಸಲ್ಪಟ್ಟ ಈ ಕೃತಿಯಲ್ಲಿ ಲಕ್ಷ್ಮಣ್ ತೆಲಗಾವಿಯವರು ಚಿತ್ರದುರ್ಗದಲ್ಲಿ ಕಟ್ಟಿ ಬೆಳೆಸಿದ ಸಂಶೋಧನ ತಂಡದ ಕುರಿತು ಮತ್ತು ತಂಡದ ಸದಸ್ಯರ ಚಿತ್ರಣ ಕುರಿತಂತೆ ಸಂಪೂರ್ಣ ಮಾಹಿತಿಯಿದೆ. ಸಂಶೋಧನೆಯ ಬಗೆ ಕುರಿತಂತೆ ಮಾಹಿತಿ ಕಾಣಬಹುದಾಗಿದ್ದು ಈ ತಂಡವು ಸಂಶೋಧನ ಸಂದರ್ಭದಲ್ಲಿ ತೆಗೆದ ವಿವಿಧ ಬಗೆಯ ಛಾಯಾಚಿತ್ರಗಳನ್ನು ಸಹ ಮುದ್ರಿಸಲಾಗಿದೆ. ಈ ಛಾಯಾಚಿತ್ರಗಳ ಮೂಲಕವಾಗಿ ಚಿತ್ರದುರ್ಗ, ಬೆಟ್ಟ, ಗುಡ್ಡ ಮತ್ತು ಹೆಬ್ಬಂಡೆಗಳ ಮೇಲೆ ಕೆತ್ತಿರುವ ಹಲವು ರೇಖಾಕೃತಿಗಳನ್ನು ಹಾಗೂ ಶಿಲ್ಪಮೂರ್ತಿಗಳ ಕುರಿತಂತೆ ಮಾಹಿತಿಯನ್ನೊಳಗೊಂಡಿದೆ. ಸಂಶೋಧನದ ನಂತರ ಯಥಾ ರೀತಿಯಾಗಿಯೆ ಬಂಡೆಗಳನ್ನು ಸ್ವಚ್ಛಗೊಳಿಸುವ, ಬಣ್ಣ ಅಳಿಸುವ, ಹೀಗೆ ಹಲವು

ರೀತಿಯಾಗಿ ರೂಪಾಂತರಿಸಿ ಸಂಶೋಧನ ಅಧ್ಯಯನದ ಛಾಯೆ ಮೂಡಿರುವುದನ್ನು ಯಥಾ ರೀತಿ ಅಧ್ಯಯಿನಿಸಿ ನೈಜ ಮಾಹಿತಿಯನ್ನು ಈ ಕೃತಿಯ ಮೂಲಕ ತಿಳಿಸುವ ಪ್ರಯತ್ನ ಮಾಡಲಾಗಿದೆ.

ಕರೇ ಉಡುಸಲವ್ವನ ಸ್ಮಾರಕಶಿಲ್ಪ : ೧೯೯೯ರಲ್ಲಿ ಲಕ್ಷ್ಮಣ್ ತೆಲಗಾವಿಯವರು ಆಯಿತೋಳಿನ ಕರೇ ಉಡುಸಲವ್ವನ ಸ್ಮಾರಕಶಿಲ್ಪ ಎಂಬ ಶೀರ್ಷಿಕೆಯಡಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಚರಿತ್ರೆ ವಿಭಾಗದ ಮೂಲಕ ಇತಿಹಾಸ ದರ್ಶನದಲ್ಲಿ ಈ ಲೇಖನ ಮೂಡಿಬಂದಿದೆ. ಚಿತ್ರದುರ್ಗ ಸಮೀಪದ ಆದಿಪುರ ಅಥವಾ ಆಯಿತೋಳಿನ ಸುತ್ತ ಒಂದು ಗ್ರಾಮವಿದ್ದು, ಗ್ರಾಮದೇವತೆ ಕರಿಯಮ್ಮನ ಗುಡಿಯಲ್ಲಿ, ಕರೇ ಉಡುಸಲವ್ವನ ಶಿಲ್ಪವಿದ್ದು, ಸಿಡಿಕಂಬ ಹೊತ್ತ ಬಂಡಿಯ ಗಾಲಿಗೆ ಕರೇ ಉಡುಸಲವ್ವ ಬಿದ್ದ ಮಾಹಿತಿಯು ಲಿಖಿತ ಮತ್ತು ಮೌಖಿಕ ಆಕರಗಳು ದೊರೆಕಿಸುತ್ತವೆ. ಮುಂದೆ ಅದರ ಸವಿನೆನಪಿಗಾಗಿ ಅವರ ಮನೆಯವರು ಒಂದು ವಿಗ್ರಹ ಕೆತ್ತಿಸಿ ಆರಾಧನೆ ಮಾಡಿದರು. ಮುಂದೆ ಅನೇಕ ಜನರು ಇದನ್ನು ದೇವತೆಯಂತೆ ಆರಾಧಿಸಿ, ತಮ್ಮ ಕಷ್ಟ, ದುಃಖಗಳನ್ನು ಪರಿಹಾರ ಮಾಡುವಂತೆ ಕೇಳುವ ಜೊತೆಗೆ, ಸಂತಾನ ಭಾಗ್ಯವನ್ನು ಕರುಣಿಸಲು ಬೇಡುತ್ತಿದ್ದಾರೆ. ಒಟ್ಟಾರೆ ಆಕಸ್ಮಿಕವಾಗಿ ಬಲಿಯಾದ ಹುಡುಗಿಯೆ ದೇವತೆ ಎಂದು ಬಿಂಬಿಸಿದ್ದನ್ನು ಪತ್ತೇ ಹಚ್ಚಿ ಜನಮನದಲ್ಲಿದ್ದ ದೇವತೆಯ ಗೊಂದಲಕ್ಕೆ ಈ ಪ್ರಬಂಧವು ತೆರೆ ಎಳೆದಿದೆ.

ಹಬ್ಬ-ಉತ್ಸವ-ಜಾತ್ರೆಗಳು ಕೇವಲ ಮನೋರಂಜನೆಯ ಪ್ರತೀಕವಾಗಿಯೂ, ಧಾರ್ಮಿಕ, ಸಾಂಸ್ಕೃತಿ ಭಾವನಾತ್ಮಕತೆಯಿಂದ ಬಿಂಬಿತವಾಗಿಯೂ ಕೆಲವು ಪ್ರವಾಸಿ ತಾಣಗಳು ಶೈಕ್ಷಣಿಕ ಮನೋರಂಜನೆಯ ಮೋಜಿನ ತಾಣವಾಗಿ ಗುರುತಿಸುತ್ತೇವೆ. ಆದರೆ ಕೆಲವು ಸೂಕ್ಷ್ಮಾತಿ ಸೂಕ್ಷ್ಮ ಸಂಶೋಧಕರು ಇಂಥವುಗಳಿಂದಲೆ ಇವುಗಳ ಆಂತರ್ಯದಲ್ಲಿ ಅಡಗಿರುವ ಸತ್ಯಗಳನ್ನು ಹೊರಹಾಕಿ ಅಕ್ಷರ ರೂಪದ ಚರಿತ್ರೆಗೆ ಪರ್ಯಾಯವಾಗಿ ಮೌಖಿಕ ಚರಿತ್ರೆ ರಚಿಸಲು ಪೂರಕ ಆಕರಗಳನ್ನಾಗಿ ಬಳಸಿಕೊಳ್ಳಲು ಸಾಧ್ಯವಾಗಿದೆ.

ಉದಾ:- ದಾನಚಿಂತಾಮಣಿ ಅತ್ತಿಮಬ್ಬೆ ಮತ್ತು ಕವಿರನ್ನವರ್ಮ ಮುಖಾಮುಖಿ ಚಿಂತನೆಗಳ ಮೂಲಕ ಹೊಸದೊಂದು ವಿಚಾರವು ಹೊಳೆದಂತೆ, ವಿಜಯನಗರದ ಅರಸ ಒಂದನೇ ಬುಕ್ಕರಾಯನ ನಾಣ್ಯವನ್ನಾಧರಿಸಿದ ಕಾಳಾಮುಖ ಶೈವನಾದವನೆಂದು ಗುರುತಿಸಿ, ಆ ನಾಣ್ಯದ ಮೂಲಕವೇ ವೈದಿಕ ನೆಲೆಯಲ್ಲಿ ಚರಿತ್ರೆಯನ್ನು ರೂಪಿಸಲು ಸಾಧ್ಯವಾಗಿದೆ.

ಒಂದು ನಾಣ್ಯದಿಂದಲೆ ಏನೆಲ್ಲಾ ಆಗಬಹುದೆಂಬುದು ಮತ್ತು ಮೈಸೂರಿನ ಜಲ ವಿದ್ಯುತ್‌ಗಾರರ, ವಸಾಹತುಕಾಲೀನ ಕೃಷಿನೀತಿ, ಮಧ್ಯಯುಗದ ವಾಸ್ತುಶಿಲ್ಪ, ಆಗಿನ ಪರಿಭಾಷೆ ರಕ್ಷಣಾ ವಸ್ತುವಿನ ಆಧಾರಿತದ ಮರಾಠಿ ಆಕರದ ಬರಹಗಳು. ಹೀಗೆ ನಾನಾ ವಿಚಾರಗಳು ಕೆಲವು ಮೌಖಿಕ ಆಕರದಿಂದಲೂ ಪತ್ತೆ ಮಾಡಬಹುದಾಗಿದೆ. ಕೆಲವು ಕಲ್ಪಿತವಾದ, ಉತ್ಪ್ರೇಕ್ಷೆ ಇದ್ದಾಗಲೂ ವಿಸ್ತೃತ ಚರಿತ್ರೆ ಅಧ್ಯಯನಕ್ಕೆ ಒಂದು ಆಕರವಾಗಬಲ್ಲದು ಎಂಬುದನ್ನು ಈ

ಲೇಖನದಲ್ಲಿ ಗುರುತಿಸಿದ್ದಾರೆ. ಪ್ರಸಾರಾಂಗದ ಮೂಲಕ ಸಂಚಿಕೆ-೨, ಸಂಪುಟ ೧ರಲ್ಲಿ ೨೦೦೬ರಲ್ಲಿ ಮೂಡಿಬಂದ ಕೃತಿಯು ಮುಂದಿನ ತಲೆಮಾರಿನ ಸಂಶೋಧಕರಿಗೆ ನೆರವಾಗಬಲ್ಲದು.

ಇತಿಹಾಸ ದರ್ಶನ : ೧೯೯೯ರಲ್ಲಿ ಇತಿಹಾಸ ದರ್ಶನ ಸಂಪುಟ-೧೪ನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯಲ್ಲಿ ಲಕ್ಷ್ಮಣ್ ತೆಲಗಾವಿಯವರಿಂದ ಶೋಧಿತವಾದ ಲೇಖನವಾಗಿದೆ. ಚಿತ್ರದುರ್ಗದ ಇತಿಹಾಸವನ್ನು ಕೆದಕಿದಷ್ಟು ಹೊಸ ಮಾಹಿತಿಯು ಲಭ್ಯವಾಗಬಲ್ಲದು ಎಂಬುದನ್ನು ತೋರಿಸಿಕೊಡುವುದಾಗಿದೆ. ದುರ್ಗವನ್ನು ಎಷ್ಟೇ ಅಧ್ಯಯನಕ್ಕೆ ಒಳಪಡಿಸಿದರೂ ಇನ್ನೂ ಅಧ್ಯಯನಕ್ಕೊಳಪಡಬೇಕಾದ ಶಿಲ್ಪಗಳ ಸಂಖ್ಯೆಯೂ ಸಾಕಷ್ಟಿದೆ. ಕೋಟೆಯ ಪ್ರಕಾರ ದ್ವಾರಗಳೇ ಅಲ್ಲದೆ, ಗುಹಾಲಯಗಳಲ್ಲಿರುವ ಹಾಗೂ ಬಯಲು ಬಂಡೆಗಳ ಮೇಲೂ ಕೆತ್ತಲಾಗಿರುವ ವಿವಿಧ ಬಗೆಯ ಉಬ್ಬುಶಿಲ್ಪಗಳನ್ನು ಇನ್ನೂ ಕೂಡ ಪ್ರತ್ಯೇಕವಾಗಿ ಅಧ್ಯಯನ ಮಾಡಲಾಗಿಲ್ಲ. ಇಲ್ಲಿಯ ತನಕ ವ್ಯವಸ್ಥಿತ ಅಧ್ಯಯನ ನಡೆಸಲಾಗಿದ್ದರೆ ಅದು ಸ್ಮಾರಕಗಳ ಒಳಹೊರಗಿನ ಮತ್ತು ಬಯಲು ಬಂಡೆಗಳ ಮೇಲಿನ ಕೋಟೆಗಳನ್ನು ಮಾತ್ರ. ಈ ಪ್ರಬಂಧ ಮಾದರಿಯ ಲೇಖನಗಳಲ್ಲಿ ಈವರೆಗೂ ಗುರುತಿಸಲಾಗದ ಕೆಲವು ಪ್ರಾಕಾರ ಶಿಲ್ಪ ಹಾಗೂ ಬಿಡಿಶಿಲ್ಪಗಳ ಪೈಕಿ ಕೋಟೆಯ ಮೂರನೆ ಪ್ರಾಕಾರದ ಮೇಲಿನ ಒಂದು ಉಬ್ಬುಶಿಲ್ಪ, ಏಕನಾಥಮ್ಮ ಗುಡಿಯ ಹುಟ್ಟು ಬಂಡೆ ಮೇಲಿನ ಉಬ್ಬುಶಿಲ್ಪ ಹಾಗೂ ಬೆಟ್ಟ ಪರಿಸರದ ಧವಳಪ್ಪನ ಗುಡ್ಡದಲ್ಲಿರುವ ವಿಗ್ರಹ ಇವುಗಳನ್ನು ಕುರಿತು ವಿಸ್ತಾರವಾಗಿ ಚರ್ಚಿತವಾಗಿದ್ದು ಇಲ್ಲಿಯ ತನಕ ಮರೆಯಾಚಿದ್ದ ಎಷ್ಟೋ ಸತ್ಯಗಳನ್ನು ಇದು ಒಳಗೊಂಡಿದೆ.

ಕರ್ನಾಟಕ ಇತಿಹಾಸ ಅಕಾಡೆಮಿ (ರಿ), ಬೆಂಗಳೂರು ಇತಿಹಾಸ ದರ್ಶನ, ಸಂಪುಟ ೧೨, ೧೯೯೭ರಲ್ಲಿ ಲಕ್ಷ್ಮಣ್ ತೆಲಗಾವಿಯವರು "ಚಿತ್ರದುರ್ಗದ ಪ್ರಾಚೀನನಾಮ: ಮರುಪರಿಶೀಲನೆ" ಎಂಬ ಶೀರ್ಷಿಕೆಯೊಂದಿಗೆ ಹೊರಬಂದ ಈ ಕಿರುಹೊತ್ತಿಗೆಯು, ಚಿತ್ರದುರ್ಗ ಚರಿತ್ರೆಗೆ ಸಂಬಂಧಿಸಿದಂತೆ, ಚಿತ್ರದುರ್ಗ ಎಂಬ ನಾಮವು ಹೇಗೆ ಬಂದಿತೆಂಬುದನ್ನು ಹಲವರು ಸಂಶೋಧಿಸಿದರು ಹಾಗೂ ಕ್ರಿಸ್ತಶಕ ೨ನೇ ಶತಮಾನದಿಂದ ೧೧ನೇ ಶತಮಾನಗಳ ಕೆಲವು ಸಾಕ್ಷಿಗಳ ಮೂಲಕವೂ, ಭೂವೈಜ್ಞಾನಿಕ ಶೋಧನೆಗಳ ಮೂಲಕ, ಪುರಾತತ್ತ್ವೀಯ ಸಂಶೋಧನೆಗಳ ಮೂಲಕವೂ, ಕೆಲವು ಜಾನಪದೀಯ ಆಕರಗಳ ಮೂಲಕವೂ, ಶೋಧಿಸಿದ್ದು ಚಿತ್ರದುರ್ಗದ ನಾಮಗಳಿಗೆ ಇರುವ ವಾದಗಳಿಗೆ ತೆರೆ ಎಳೆದು ಸಂಶೋಧಕರಿಗೆ ಸಹಾಯವಾಗುವಂತಹ ಶೋಧನೆ ಮಾಡಿದ್ದಾರೆ.

ಚರಿತ್ರೆ ಅಧ್ಯಯನ ಸಂಪುಟ-೧, ಸಂಚಿಕೆ-೧ : ೨೦೦೫ರಲ್ಲಿ ಜುಲೈ-ಡಿಸೆಂಬರ್ ಮಾಹೆ, ಸಂಪುಟ ೧, ಸಂಚಿಕೆ ೧, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರಸಾರಾಂಗದ ವತಿಯಿಂದ "ಚರಿತ್ರೆ ಅಧ್ಯಯನ" ಎಂಬ ತಲೆಬರಹದ ಮೂಲಕ ಅರ್ಥಪೂರ್ಣ ಗ್ರಂಥವನ್ನು ಪ್ರಕಟಿಸಿದ್ದು, ಈ ಗ್ರಂಥದಲ್ಲಿ ಒಟ್ಟು ೧೬ ಅರ್ಥಪೂರ್ಣ ಲೇಖನಗಳನ್ನು ಲಕ್ಷ್ಮಣ್ ತೆಲಗಾವಿಯವರು ಸಂಪಾದಿಸಿ, ಓದುಗ ಲೋಕಕ್ಕೆ ಅರ್ಪಿಸಿದ್ದಾರೆ.

ಸಂಪಾದನೆಗೆ ಸೀಮಿತವಾಗದ ಲಕ್ಷ್ಮಣ್ ತೆಲಗಾವಿಯವರು "ದೊಡ್ಡೇರಿ ಕದನ - ಚಿತ್ರದುರ್ಗ ಚರಿತ್ರೆಯ ರೋಚಕ ಅಧ್ಯಾಯ" ಎಂಬ ಶೀರ್ಷಿಕೆಯಡಿಯಲ್ಲಿ ಕರ್ನಾಟಕದ ಪ್ರತಿಷ್ಠಿತ ಗಂಡು ಮೆಟ್ಟಿನ ನಾಡು ಚಿತ್ರದುರ್ಗದ ಶೌರ್ಯ ಸಾಹಸಕ್ಕೆ ಪಾಳೆಯಗಾರರು ಹೇಗೆ ಹೆಸರುವಾಸಿಯಾಗಿದ್ದರು. ಅಂದಿನ ಸಂದರ್ಭದಲ್ಲಿ ಮುಸ್ಲಿಂ ದೊರೆಗಳಿಗೆ ಸಿಂಹ ಸ್ವಪ್ನರಾಗಿದ್ದರು ಎಂಬುದರ ಜೊತೆಗೆ, ಕೆಲವು ಜನಪರ ಕಾರ್ಯಗಳನ್ನು ಜಾರಿಗೆ ತಂದು ನಿಭಾಯಿಸುವಲ್ಲಿ ಹೇಗೆ ಯಶಸ್ವಿಯಾದರು ಎಂಬುದನ್ನು, ಹಲವು ಸಾಕ್ಷಿಗಳ ಮೂಲಕವೆ ನಿರೂಪಿಸಿದ್ದಾರೆ.

ಇದೇ ಗ್ರಂಥದಲ್ಲಿ "ಹುಲ್ಲೂರು ಶ್ರೀನಿವಾಸ ಜೋಯಿಸ" ಎಂಬ ಶೀರ್ಷಿಕೆಯಡಿ ವ್ಯಕ್ತಿ-ವಿಚಾರದ ಮೂಲಕ ಚಿತ್ರದುರ್ಗದ ಚರಿತ್ರೆಗೆ ಸಂಬಂಧಿಸಿದಂತೆ ಮೊದಲ ಬಾರಿಗೆ ವಿಸ್ತೃತ ರೂಪದಲ್ಲಿ ಸಂಶೋಧನೆ ಮಾಡಿದವರೆಂದು ಮತ್ತು ಅವರು ಶೋಷಿಸಿದ ಹಲವು ಸಂಶೋಧನೆ ಪತ್ತೆ ಮಾಡಿ ಅದರ ಮೂಲಕ ದುರ್ಗದ ಇತಿಹಾಸದ ಶ್ರೀಮಂತಿಕೆಗೆ ಅಪಾರವೆನಿಸುವಷ್ಟು ಮಾಹಿತಿ ಪಡೆದುಕೊಂಡು ಅಂಥವರನ್ನು ಚರಿತ್ರಾ ಲೋಕಕ್ಕೆ ಹೊಸ ರೀತಿಯಲ್ಲಿ ಅರ್ಪಿಸಿದರು.

ಚರಿತ್ರೆ ಅಧ್ಯಯನ ಸಂಪುಟ-೨, ಸಂಚಿಕೆ-೧ : ೨೦೦೬ ಜುಲೈ-ಡಿಸೆಂಬರ್, ಸಂಪುಟ ೨, ಸಂಚಿಕೆ ೧, "ಚರಿತ್ರೆ ಅಧ್ಯಯನ" ಎಂಬ ಗ್ರಂಥವು ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಮೂಲಕ ಸಿ.ಆರ್. ಗೋವಿಂದರಾಜುರವರ ಸಂಪಾದಕತ್ವದಲ್ಲಿ ಮೂಡಿಬಂದಿದ್ದು ಒಟ್ಟು ೧೧ ಲೇಖನಗಳ ಹಂದರದಲ್ಲಿ "ಕರ್ನಾಟಕ ಬೇಡ ಸಮುದಾಯದ ಇತಿಹಾಸ ಮತ್ತು ಸಂಸ್ಕೃತಿ (ಚಿತ್ರದುರ್ಗ ಜಿಲ್ಲೆಯಲ್ಲಿ ಅನುಲಕ್ಷಿಸಿ)" ಎಂಬ ಶೀರ್ಷಿಕೆಯ ಮೂಲಕ ಕರ್ನಾಟಕದಲ್ಲಿ ಒಂದು ಕಾಲದಲ್ಲಿ ಫ್ಯೂಡಲ್‌ಗಳೆನಿಸಿದ್ದ ಪಾಳೆಯಗಾರರನ್ನು ಸಂಶೋಧಿಸಿ, ಇತರೆ ರಾಜಶಾಹಿ ಸಂಸ್ಥಾನಕ್ಕಿಂತಲೂ ಹೇಗೆ ಚಿತ್ರದುರ್ಗ ಸಂಸ್ಥಾನ ಭಿನ್ನ ಮತ್ತು ಯಾವ ರೀತಿಯ ಅಭಿವೃದ್ಧಿ ಕಾರ್ಯಗಳು ನಡೆಸಿದರು. ಆ ಮೂಲಕ ಕರ್ನಾಟಕ ಚರಿತ್ರೆಗೆ ಹೇಗೆ ಕೊಡುಗೆ ನೀಡಿದರು ಎಂಬುದನ್ನು ಚಿತ್ರದುರ್ಗದ ಚರಿತ್ರೆಯನ್ನು ಎಳೆ-ಎಳೆಯಾಗಿ ಬಿಡಿಸಿ ಓದುಗ ಲೋಕಕ್ಕೆ ಅರ್ಪಿಸಿದ್ದಾರೆ.

ಚರಿತ್ರೆ ಅಧ್ಯಯನ ಸಂಪುಟ-೨, ಸಂಚಿಕೆ-೨ : ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರಸಾರಾಂಗದ ವತಿಯಿಂದ "ಚರಿತ್ರೆ ಅಧ್ಯಯನ" ೨೦೦೭, ಜನವರಿ-ಜೂನ್‌ರ ಮಧ್ಯ ತಂದಂತಹ ಸಂಪುಟ ೩, ಸಂಚಿಕೆ ೨ ಎಂಬ ಗ್ರಂಥವು ಸಿ.ಆರ್. ಗೋವಿಂದರಾಜು ಅವರ ಸಂಪಾದಕತ್ವದಲ್ಲಿ ಮೂಡಿಬಂದಿದ್ದು, ಇದರಲ್ಲಿ ೧೨ ಲೇಖನಗಳನ್ನು ಒಳಗೊಂಡಂತಹ ಬಹುವಿಸ್ತಾರದ ಕೃತಿಯಾಗಿದ್ದು "ಕರ್ನಾಟಕ ಇತಿಹಾಸ ಸಂಶೋಧನೆ : ಕೆಲವು ಹೊಳಹುಗಳು" ಎಂಬ ಶೀರ್ಷಿಕೆಯ ಲೇಖನಿಯನ್ನು ಲಕ್ಷ್ಮಣ್ ತೆಲಗಾವಿಯವರು ರಚಿಸಿದ್ದಾರೆ. ಮಾನವ ಯಾವ ರೀತಿಯಾಗಿ ಅನಾಗರಿಕ ಪ್ರವೃತ್ತಿಯಿಂದ ನಾಗರಿಕ ಪ್ರವೃತ್ತಿಯತ್ತ ಧಾವಿಸಿದ, ಹೇಗೆ ರಾಜ್ಯಭಾರ ಕಟ್ಟಿದ ಎಂಬುದರ ವಿಷಯ ತಿಳಿಸುವ ಜೊತೆಗೆ ಕರ್ನಾಟಕದಲ್ಲಿರುವ ಅದರಲ್ಲಿ ದಕ್ಷಿಣ ಭಾರತದ ಪಾಳೆಯಗಾರರು ವಿಜಯನಗರ ಸಾಮ್ರಾಜ್ಯ, ಮೌರ್ಯರ ಆಡಳಿತ ಇತ್ಯಾದಿಗಳ ಬಗ್ಗೆ ಆಳವಾದ ಮಾಹಿತಿ ನೀಡಿ ಸಂಶೋಧಕರೆನಿಸಿ ಕೊಂಡರು. ಸಂಶೋಧನೆಯ ಸಂದರ್ಭದಲ್ಲಿ ಸೀಮಿತ ಆಕರಕ್ಕೆ ಸೀಮಿತವಾಗದೆ ಮೌಖಿಕದಂತಹ

ಸ್ಥಳೀಯ ಆಕರಗಳ ಮೂಲಕವೂ ವಿಶ್ವಕ್ಕೆ ಮುಖಾಮುಖಿಯಾಗಿ ರಚಿಸಲು ಸಾಧ್ಯವಾಗಿದೆ ಎಂಬುದನ್ನು ತಮ್ಮ ವಿದ್ವತ್ ಶೋಧದ ಮೂಲಕ ತಿಳಿಸುತ್ತಾರೆ.

ಚರಿತ್ರೆ ಅಧ್ಯಯನ ಸಂಪುಟ-೩, ಸಂಚಿಕೆ-೧ : ಕನ್ನಡ ವಿಶ್ವವಿದ್ಯಾಲಯ, ಹಂಪಿ ಪ್ರಸಾರಾಂಗದ ವತಿಯಿಂದ "ಚರಿತ್ರೆ ಅಧ್ಯಯನ" ಎಂಬ ಶೀರ್ಷಿಕೆಯಡಿ ೨೦೦೭ರಲ್ಲಿ ಸಂಚಿಕೆ ೧, ಸಂಪುಟ ೩ ಎಂಬ ಗ್ರಂಥವು ಕೆ. ಮೋಹನ್‌ಕೃಷ್ಣ ರೈ ಅವರ ಸಂಪಾದಕತ್ವದಲ್ಲಿ ಮೂಡಿಬಂದಿರುವುದು. ಈ ಎಲ್ಲಾ ಬರಹಗಳು ಚರಿತ್ರೆಯ ವಿವಿಧ ಆಯಾಮಗಳನ್ನು ತೋರಿಸುವಂತವಾಗಿವೆ. ಮೊದಲ ಲೇಖನವಾದ "ಕರ್ನಾಟಕದ ಸಮಕಾಲೀನ ಇತಿಹಾಸ - ಕೆಲವು ಪ್ರಶ್ನೆಗಳು" ಎಂಬ ಶೀರ್ಷಿಕೆಯು ಲಕ್ಷ್ಮಣ್ ತೆಲಗಾವಿಯವರಿಂದ ಮೂಡಿಬಂದಿದ್ದು, ವಿವಿಧ ವಿಶ್ವವಿದ್ಯಾಲಯದ ಅಧ್ಯಾಪಕ ಮತ್ತು ಸಂಶೋಧಕ ವೃಂದವು ಸಮಕಾಲೀನ ಸಂದರ್ಭಕ್ಕೆ ತಕ್ಕಂತೆ ಹೇಗೆಲ್ಲಾ ಚರಿತ್ರೆ ರಚನೆ ಸಾಧ್ಯವಿದೆ. ವಿವಿಧ ಸಂದರ್ಭದಲ್ಲಿ ಕೆಲವು ಪ್ರಶ್ನೆಗಳನ್ನು ಎದುರಿಸಿ ಚರಿತ್ರೆ ರಚಿಸಬಹುದಾಗಿದೆ. ಅದರಲ್ಲೂ ಪ್ರತಿಷ್ಠಿತ ರಾಜಶಾಹಿವಂಶಗಳು ಮತ್ತು ಕೆಲವು ಸ್ಥಳೀಯ ಸಂಸ್ಥಾನಗಳು, ಕನ್ನಡ ನಾಡಿನ ಸಂಸ್ಕೃತಿಗೆ ಹೇಗೆ ಕೊಡುಗೆ ನೀಡಿವೆ ಎಂಬುದು, ಆ ಕೊಡುಗೆಗಳು ಏಕೆ ಮರೆಮಾಚಿವೆ ಎನ್ನುತ್ತಲೇ, ಮರೆಮಾಚುವ ಮುನ್ನ, ಆ ಕೊಡುಗೆ ಮತ್ತು ಅಲ್ಲಿನ ಸಂಸ್ಕೃತಿಗಳನ್ನು ಅನಾವರಣಗೊಳಿಸುವುದು ಸಂಶೋಧಕರ ಮೇಲಿದೆ ಎಂಬುದನ್ನು ಈ ಕೃತಿಯಲ್ಲಿನ ಲೇಖನದ ಮೂಲಕ ಸಂಶೋಧಿಸಿದ್ದಾರೆ.

ಚರಿತ್ರೆ ಅಧ್ಯಯನ ಸಂಪುಟ-೪, ಸಂಚಿಕೆ-೧ : ಜುಲೈ-ಡಿಸೆಂಬರ್ ೨೦೦೮, ಸಂಪುಟ ೪, ಸಂಚಿಕೆ ೧, ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪ್ರಸಾರಾಂಗವು "ಚರಿತ್ರೆ ಅಧ್ಯಯನ" ಎಂಬ ಶೀರ್ಷಿಕೆಯಡಿ ವಿರೂಪಾಕ್ಷಿ ಪೂಜಾರಹಳ್ಳಿಯವರ ಸಂಪಾದಕತ್ವದಲ್ಲಿ ಹಲವು ವಿದ್ವತ್ ಮಾಹಿತಿ ನೀಡುವ ಲೇಖನಗಳನ್ನು ನಾಡಿನ ವಿವಿಧ ವಿದ್ವಾಂಸರಿಂದ ಸಂಪಾದಿಸಿದ್ದಾರೆ. ಅದರಲ್ಲಿ ಲಕ್ಷ್ಮಣ್ ತೆಲಗಾವಿಯವರು "ಚಿತ್ರದುರ್ಗದ ದೊರೆ ಕಸ್ತೂರಿ ಚಿಕ್ಕಣ್ಣನಾಯಕನ ಕಾಲದ ಶಾಸನ: ಹೊಸ ಶೋಧ ಎಂಬ ಲೇಖನದಲ್ಲಿ ನಿಡಗಲ್ಲು, ಹರಪನಹಳ್ಳಿ, ರಾಯದುರ್ಗ, ತರೀಕೆರೆ, ಬಿಜಾಪುರ, ಗೋಲ್ಕಂಡ ಮೊದಲಾದ ಸಂಸ್ಥಾನದೊಂದಿಗೆ ಹೋರಾಡಿ ಒಂದು ಚೌಕಟ್ಟು ನಿರ್ಮಿಸಿದ್ದರ ಪರಿಣಾಮ ಅದರ ನೆನಪಿಗಾಗಿ ಕೈಗೊಂಡ ಶೌರ್ಯ, ಸಾಹಸ, ಅಭಿವೃದ್ಧಿಯ ಸಂಕೇತವಾಗಿ ಇವತ್ತು ಕೂಡ ನಾಡಿನ ಅನೇಕ ಕಡೆಗಳಲ್ಲಿ ಈತನ ಶಾಸನ ಲಭ್ಯತೆಯನ್ನು ಶೋಧಿಸಿ ಅಂದಿನ ಚಿತ್ರಣವನ್ನು ಕೃತಿಯ ಮೂಲಕ ಹೊರತಂದವರೆ ಲಕ್ಷ್ಮಣ್ ತೆಲಗಾವಿಯಾಗಿದ್ದು ಅದರ ಲಾಭ ಅನೇಕರಿಗೆ ಆಗಿದೆ.

ಚರಿತ್ರೆ ಅಧ್ಯಯನ ಸಂಪುಟ-೫, ಸಂಚಿಕೆ-೧ : ಜುಲೈ-ಡಿಸೆಂಬರ್ ೨೦೦೯, ಸಂಪುಟ ೫, ಸಂಚಿಕೆ ೧ ಎಂಬ "ಚರಿತ್ರೆ ಅಧ್ಯಯನ" ಎಂಬ ಶೀರ್ಷಿಕೆಯು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿಯವರು ಚರಿತ್ರೆಗೆ ಸಂಬಂಧಿಸಿದ ಕೃತಿಯನ್ನು ಹೊರತಂದಿದ್ದು ಇದರ

ಸಂಪಾದಕರು ಎನ್. ಚಿನ್ನಸ್ವಾಮಿ ಸೋಸಲೆಯವರು ವಹಿಸಿಕೊಂಡು ಒಟ್ಟು ೧೧ ಲೇಖನಗಳನ್ನು ನಾಡಿನ ವಿವಿಧ ವಿದ್ವಾಂಸರಿಂದ ಸಂಪಾದಿಸಿದ್ದಾರೆ.

"ಇತಿಹಾಸದಲ್ಲಿ ಚಮ್ಮಾರರು - ಕೆಲವು ಟಿಪ್ಪಣಿಗಳು" ಎಂಬ ಶೀರ್ಷಿಕೆಯಡಿಯಲ್ಲಿ ಲಕ್ಷ್ಮಣ್ ತೆಲಗಾವಿಯವರು ಅರ್ಥಗರ್ಭಿತವಾದ ಲೇಖನ ರಚಿಸಿದ್ದಾರೆ. ಚಮ್ಮಾರ ಪದದ ಮೂಲ ಅರ್ಥ. ಹಲವು ರಾಜಶಾಹಿ ಕಾಲಘಟ್ಟಗಳಲ್ಲಿನ ಸ್ಥಾನಮಾನ, ಅಗತ್ಯತೆಯ ಮೇಲೆ ಶಾಸನಗಳು ಚೆಲ್ಲಿದ ಬೆಳಕು, ೯ನೇ ಶತಮಾನದ ವೀರಯೋಧ ಸಮಗಾರ ಚನ್ನ ಮತ್ತು ಸಮ್ಮಗಾಟಿ ಬೋಗೋಜರು ರಾಷ್ಟ್ರಕೂಟರ ವೀರಯೋಧರಾಗಿ ಹೇಗೆ ಶೌರ್ಯದಿಂದ ಸೇವೆ ಸಲ್ಲಿಸಿದರು. ಮುಂದೆ ಚಮ್ಮಾರ ವೃತ್ತಿಗೆ ದೊರೆತ ಸ್ಥಾನಮಾನಗಳು. ೧೨ನೇ ಶತಮಾನದಲ್ಲಿ ಕಾಯಕ ವೃತ್ತಿಗೆ ಸಂಬಂಧಿಸಿದ ಸ್ಥಾನಮಾನ, ಚರ್ಮದ ಗುರಾಣಿ, ಡೇರೆ, ಪಾದರಕ್ಷೆಯ ಮಹತ್ವ, ಕುರಂಗರಾಯರೆಂಬ ಚಮ್ಮಾರ ಪಾಳೆಯಗಾರನ ಸಂಕ್ಷಿಪ್ತ ಪರಿಚಯ. ಭರತ ಪುರಕೋಟೆ, ಸತ್ನಾಮ್‌ಪಂಥದ ಹಲವು ಘಟನೆಗಳು, ಭಾರತ ಸ್ವಾತಂತ್ರ ಸಂಗ್ರಾಮದಲ್ಲಿ ಹುತಾತ್ಮರಾದ ಚೌರಿಚಾರಾದ ಘಟನೆಯ ಹುತಾತ್ಮ, ರಾಮಪತಿ ಚಮ್ಮಾರಾನ ದೇಶಪ್ರೇಮದ ಸಂಗತಿಗಳು. ಹೀಗೆ ಅಸ್ಪೃಶ್ಯರೆನಿಸಿಕೊಂಡು, ಬಡತನ, ಅನಕ್ಷರತೆಯಿದ್ದಾಗಲೂ ದೇಶಕ್ಕೆ ತಮ್ಮದೇ ಆದ ಕೊಡುಗೆ ನೀಡಿದ ಚಮ್ಮಾರರ ನೈಜ ದರ್ಶನವನ್ನು ಈ ಗ್ರಂಥದಲ್ಲಿ ಶ್ರೀಯುತರು ನೀಡಿದ್ದಾರೆ.

ಚರಿತ್ರೆ ಅಧ್ಯಯನ ಸಂಪುಟ-೮, ಸಂಚಿಕೆ-೧ : ಚರಿತ್ರೆ ಅಧ್ಯಯನ ಎಂಬ ಗ್ರಂಥವನ್ನು ಪ್ರಸಾರಾಂಗವು ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಸಂಪುಟ ೮, ಸಂಚಿಕೆ ೧, ಜುಲೈ-ಡಿಸೆಂಬರ್-೨೦೧೨ರಲ್ಲಿ ವಿರೂಪಾಕ್ಷಿ ಪೂಜಾರಹಳ್ಳಿಯವರ ಸಂಪಾದಕತ್ವದಲ್ಲಿ ೧೭ ತರದ ವೈವಿಧ್ಯಮಯ ಲೇಖನಗಳಿದ್ದು, ಒಂದೊಂದು ಲೇಖನವು ಚರಿತ್ರೆಯ ವಿವಿಧ ಮಾಹಿತಿ ಕೊಡುವಂತದ್ದಾಗಿದೆ. "ಇತಿಹಾಸಶಾಸ್ತ್ರಜ್ಞ ಡಾ. ಎಂ.ವಿ. ಶ್ರೀನಿವಾಸ" ಎಂಬ ಶೀರ್ಷಿಕೆಯಡಿ ಬರಹದಲ್ಲಿ ಡಾ. ಎಂ.ವಿ. ಶ್ರೀನಿವಾಸರು ರೀಡರ್ ಆಗಿ ಸೇವೆ ಸಲ್ಲಿಸುತ್ತಿದ್ದ ಸಂದರ್ಭದಲ್ಲಿ ಚಿತ್ರದುರ್ಗದ ಬಗ್ಗೆ ಸಂಶೋಧನೆ ಕೈಗೊಂಡಿದ್ದವರು ಲಕ್ಷ್ಮಣ್ ತೆಲಗಾವಿಯವರು. ಇವರ ಸ್ನೇಹಿತರ ಮೂಲಕ ಪರಿಚಯವಾದ ಶ್ರೀನಿವಾಸರು ಕೆಲವೆ ದಿನಮಾನಗಳಲ್ಲಿ ಒಡನಾಡಿಯಾಗಿ ಹಳೆ ಮತ್ತು ಹೊಸ ತಲೆಮಾರಿನ ಕೊಂಡಿಯಾಗಿ, ಹಲವು ಮಾಹಿತಿಯನ್ನು ಲಕ್ಷ್ಮಣ್ ತೆಲಗಾವಿಯವರಿಗೂ ಹಾಗೂ ವಿದ್ವತ್ ಲೋಕಕ್ಕೆ ಹೇಗೆ ನೀಡಿದರು ಎಂಬುದನ್ನು, ಅಧ್ಯಯನ ಶಿಸ್ತು ದೃಷ್ಟಿಕೋನ, ನಿರೂಪಣಾ ಶೈಲಿ ಎಲ್ಲವೂ ವಿಭಿನ್ನ ಸಮಾಜದೊಂದಿಗಿನ ಸಂಪರ್ಕ ಹಾಗೂ ಹಲವು ತರದ ಸಂಶೋಧನೆ ನೀಡಿ ಓದುಗ ಮತ್ತು ವಿದ್ಯಾರ್ಥಿ ಲೋಕಕ್ಕೆ ಪ್ರಿಯರಾಗಲು ಹೇಗೆ ಸಾಧ್ಯವಾಯಿತೆಂದು ನಿರೂಪಿಸಿದ್ದಾರೆ.

ಚರಿತ್ರೆ ಅಧ್ಯಯನ ಸಂಪುಟ-೯, ಸಂಚಿಕೆ-೨ : ಪ್ರಸಾರಾಂಗವು ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ "ಚರಿತ್ರೆ ಅಧ್ಯಯನ" ಎಂಬ ಸಂಪುಟ-೯, ಸಂಚಿಕೆ-೨, ಜನವರಿ-ಜೂನ್-೨೦೧೩ರಲ್ಲಿ

ವಿರೂಪಾಕ್ಷಿ ಪೂಜಾರಹಳ್ಳಿಯವರ ಸಂಪಾದನೆಯಲ್ಲಿ ಮೂಡಿಬಂದಿದ್ದು, ಒಟ್ಟು ೧೮ ಲೇಖನಗಳನ್ನು ನಾಡಿನ ವಿವಿಧ ವಿದ್ವಾಂಸರಿಂದ ಸಂಪಾದಿಸಿದ್ದಾರೆ.

ಭಾರತದಲ್ಲಿ ಚಮ್ಮಾರರು - ಒಂದು ಸಮೀಕ್ಷೆ ಎಂಬ ಲೇಖವನ್ನು ಲಕ್ಷ್ಮಣ್ ತೆಲಗಾವಿಯವರು ವಿಶ್ಲೇಷಿಸಿದ್ದು ಲೇಖನವು ಚಮ್ಮಾರರನ್ನು ದೇಶದ ೨೩ ರಾಜ್ಯಗಳಲ್ಲಿ ಇವರ ನೆಲೆಯನ್ನು ಗುರುತಿಸಿ ಅದರಲ್ಲಿ ಉತ್ತರ ಪ್ರದೇಶದಲ್ಲಿ ಅತಿ ಹೆಚ್ಚು ಜನಸಂಖ್ಯೆ ಹೊಂದಿದ್ದು ೨೦೦೧ರ ಜನಗಣತಿ ಪ್ರಕಾರ ದೇಶದಲ್ಲಿ ೪ ಕೋಟಿಗೂ ಅಧಿಕಸಂಖ್ಯೆಯಿದೆ ಎಂಬುದು, ಕರ್ನಾಟಕದಲ್ಲಿಯೆ ೮೩ ಲಕ್ಷಯಿದೆ ಎಂದು ಶೋಧಿಸಿದ್ದಾರೆ. ಕರ್ನಾಟಕದ ಜಿಲ್ಲಾವಾರು ಜನಸಂಖ್ಯೆ ಮತ್ತು ರಾಜ್ಯವಾರು ಜನಸಂಖ್ಯೆ ಹಾಗೂ ಶೈಕ್ಷಣಿಕತೆಯನ್ನು ತಿಳಿಸಿ, ಇನ್ನೂ ಕೂಡ ಈ ಸಮುದಾಯ ಅನಕ್ಷರತೆ, ಬಡತನ, ಅಸ್ಪೃಶ್ಯತೆ, ಅವಕಾಶ ವಂಚಿತತೆಯಿಂದಲೆ ನರಳುತ್ತಿದ್ದ ರಾಜ್ಯ ಮತ್ತು ಕೇಂದ್ರ ಸರಕಾರಗಳು ಈ ಸಮುದಾಯಕ್ಕೆ ದೊರೆಯಬೇಕಾದ ಸೌಲಭ್ಯವನ್ನು ಸಂಪೂರ್ಣವಾಗಿ ಮುಟ್ಟಿಸುವಲ್ಲಿ ವಿಫಲರಾಗಿರುವುದನ್ನು, ಈ ಸಂಶೋಧಿತ ಗ್ರಂಥದ ಲೇಖನದಲ್ಲಿ ಶೋಧಿಸಿ ಅಧ್ಯಯನ ಲೋಕಕ್ಕೆ ಮಾಹಿತಿ ರವಾನಿಸಿದ್ದಾರೆ.

೫.೩. ಸ್ಮರಣಾ ಸಂಚಿಕೆ ಮತ್ತು ಅಭಿನಂದನಾ ಗ್ರಂಥಗಳು

ಕರ್ನಾಟಕ ಹಿಸ್ಟರಿ ಕಾಂಗ್ರೇಸ್ ಸ್ಟಡೀಸ್ ಇನ್ ಕರ್ನಾಟಕ ಹಿಸ್ಟರಿ ಅಂಡ್ ಕಲ್ಚರ್, ವಾಲ್ಯೂ–VII : ಕರ್ನಾಟಕ ಹಿಸ್ಟರಿ ಕಾಂಗ್ರೆಸ್ ಸ್ಟಡೀಸ್ ಇನ್ ಕರ್ನಾಟಕ ಹಿಸ್ಟರಿ ಅಂಡ್ ಕಲ್ಚರ್ ಸಿ. ಡಿಂಗ್ಸ್ ವ್ಯಾಲೂಂ-VI, ಜನವರಿ ೨೦೦೬ ಮತ್ತು ಸಿ. ಡಿಂಗ್ಸ್, ವ್ಯಾಲೂಂ–VII, ಅಕ್ಟೋಬರ್ ೨೦೦೬ರಲ್ಲಿ ಹೊರತಂದ ಲಕ್ಷ್ಮಣ್ ತೆಲಗಾವಿಯವರ ಲೇಖನದಲ್ಲಿ "ಹೈದರ್ ಅಲಿಯಲ್ಲಿ ರಾಜತ್ವದ ಹಕ್ಕಿನ ಕಲ್ಪನೆಯನ್ನು ಮೊದಲಿಗೆ ಮೂಡಿಸಿದವನು. ಚಿತ್ರದುರ್ಗದ ರಾಜವೀರ ಮದಕರಿ ನಾಯಕನೆ? ಮತ್ತು ನಾಲ್ಕನೇ ಆಂಗ್ಲೋ ಮೈಸೂರು ಯುದ್ಧ ಸಂದರ್ಭದಲ್ಲಿ (೧೭೯೮-೯೯) ಟಿಪ್ಪುಸುಲ್ತಾನ್ ಚಿತ್ರದುರ್ಗ ಕೋಟೆಯಲ್ಲಿ ರಕ್ಷಣೆ ಪಡೆಯಲು ಆಲೋಚಸಿದ್ದುದೇಕೆ" ಎಂಬ ಶೀರ್ಷಿಕೆಯಡಿ ಸಂಶೋಧಿತ ಕಿರುಗ್ರಂಥವಾಗಿದ್ದು, ಹೈದರ್‌ಅಲಿಯು ಕೇವಲ ದಳವಾಯಿಯಾಗಿದ್ದು ನಂತರ ಸರ್ವಾಧಿಕಾರಿಯಾಗಿ ವರ್ತಿಸುತ್ತಿದ್ದ ಸಂದರ್ಭದಲ್ಲಿ ಕಣ್ಣಿಗೆ ಬಿದ್ದುದ್ದೆ ಪ್ರತಿಷ್ಠಿತ ಪಾಳೆಯಗಾರರ ಕೋಟೆ ಚಿತ್ರದುರ್ಗ, ಏನಾದರೂ ಮಾಡಿ ಈ ಕೋಟೆ ವಶಪಡಿಸಿಕೊಳ್ಳಲು ಪ್ರಯತ್ನಿಸಿ ವಿಫಲವಾಗಿಯೂ ಮುಂದೆ ರಾಜತ್ವ ಎಂದರೇನು? ಎಂಬುದನ್ನು ಮದಕರಿ ನಾಯಕನಿಂದಲೆ ಕಲಿತು ರಾಜನಂತೆ ವರ್ತಿಸಿದ ಹಾಗೂ ಮದಕರಿನಾಯಕನನ್ನು ಸೋಲಿಸಿ ಕೋಟೆ ವಶಪಡಿಸಿಕೊಳ್ಳುವ ನಿರ್ಧಾರಕ್ಕೆ ಬಂದು ಸಫಲನಾದನು. ಆದರೆ ಕೆಲವು ದಿನಮಾನಗಳಲ್ಲಿ ಮರಾಠರು, ಬ್ರಿಟಿಷರಿಂದ ಉಪಟಳ ಶುರುವಾಗಿ ಅದರಿಂದ ಹೊರಬರಲು ಸೂಕ್ತವಾದ ರಕ್ಷಣಾ ಸ್ಥಳ ಕೋಟೆ ಎಂದು ಟಿಪ್ಪುವಿನ ಕೆಲವು ಆಪ್ತರು ಹೇಳಿದರು ಪರಿಣಾಮ, ಅಲ್ಲಿಗೆ ತೆರಳಲು ಮುಂದಾದರೂ ಕೆಲವು ಹಿತಶತೃಗಳು ಶ್ರೀರಂಗಪಟ್ಟಣದಲ್ಲಿಯೆ ಟಿಪ್ಪುವನ್ನು

ಉಳಿಯುವಂತೆ ಮಾಡಿದ್ದರಿಂದ ಸೆರೆಸಿಕ್ಕು ಹತನಾದ. ಆದರೆ ಟಿಪ್ಪುಸುಲ್ತಾನ ಕೋಟೆಗೆ ಬಂದಿದ್ದರೆ ಸುರಕ್ಷಿತವಾಗಿರಬಹುದಿತ್ತು ಎಂಬುದು ಈ ಕಿರುಗ್ರಂಥ ತಾತ್ಪರ್ಯ. ಒಟ್ಟಾರೆ ಲಕ್ಷ್ಮಣ್ ತೆಲಗಾವಿಯವರು ಸಂಶೋಧಿತ ಕೃತಿ, ಲೇಖನ, ಸಂಪಾದಿತ ಕೃತಿ, ಅಭಿನಂದನಾ ಕೃತಿ, ಕೆಲವು ಪ್ರಾಜೆಕ್ಟ್ ವರ್ಕ್‌ಗಳೆಲ್ಲವೂ ಹೊಸ ಆಲೋಚನೆಯೊಂದಿಗೆ, ನೈಜ ಸಂಶೋಧನ ಲೋಕಕ್ಕೆ ಕರೆದುಕೊಂಡು ಹೋಗುತ್ತಾರೆ.

ಇಲ್ಲಿಯತನಕವೂ ನೀಡಿದ ಸಂಶೋಧನೆಗಳನ್ನು ಜನಮುಖಿಯಾಗಿ, ಸಮಾಜಮುಖಿಯಾಗಿ, ಸಂದರ್ಭ, ಸನ್ನಿವೇಶಕ್ಕೆ ತಕ್ಕ ಹಾಗೆ ಅಳವಡಿಸಿಕೊಂಡು, ನ್ಯಾಯ ಸಿಗಬೇಕಾದವರಿಗೆ ನ್ಯಾಯ ಕೊಟ್ಟಾಗ ಮಾತ್ರ ಒಬ್ಬ ಸಂಶೋಧಕರ ಶ್ರಮ ಸಾರ್ಥಕವಾಗುವುದು. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ನಿಷ್ಕಲ್ಮಶ ಮನಸ್ಸಿನಿಂದ ಸಂಶೋಧನೆಯಲ್ಲಿ ಬಹುದೊಡ್ಡ ಸಾಧನೆ ಮಾಡಿದವರು ಲಕ್ಷ್ಮಣ್ ತೆಲಗಾವಿಯವರು.

◆◆

ಅಧ್ಯಾಯ : ಆರು

ಲಕ್ಷ್ಮಣ್ ತೆಲಗಾವಿಯವರ ಬಹುಮುಖ ಚಿಂತನೆಗಳು

೬.೧. ಹಿಂದುಳಿದ ವರ್ಗಗಳು ಮತ್ತು ದಲಿತ ಚಳುವಳಿ ನಡೆದು ಬಂದ ಹಾದಿ

೬.೨. ಹಿಂದುಳಿದವರ್ಗದವರ ಚಿಂತನೆ

೬.೩. ಏಕೀಕರಣೋತ್ತರ ಹಿಂದುಳಿದ ವರ್ಗಗಳ ಆಯೋಗಗಳ ರಚನೆ

೬.೪. ಸಾಮಾಜಿಕ ಚಿಂತನೆಗಳು

೬.೫. ಅಲಕ್ಷಿತರಪರ ಚಿಂತನೆಗಳು

೬.೬. ಪ್ರಾದೇಶಿಕ ಚರಿತ್ರೆಯ ಚಿಂತನೆಗಳು

೬.೭. ಸ್ಥಳೀಯ ಚರಿತ್ರೆಯ ಚಿಂತನೆಗಳು

೬.೮. ಮೌಖಿಕ ಚರಿತ್ರೆಯ ಚಿಂತನೆಗಳು

೬.೯. ಸಮಕಾಲೀನ ಚರಿತ್ರೆ ಕುರಿತ ಚಿಂತನೆಗಳು

೬.೧೦. ಅಧ್ಯಯನದ ಮಿತಿಗಳು

ಅಧ್ಯಾಯ : ಆರು

ಲಕ್ಷ್ಮಣ್ ತೆಲಗಾವಿಯವರ ಬಹುಮುಖ ಚಿಂತನೆಗಳು

ಸಮಾಜ ವಿಜ್ಞಾನ, ಚರಿತ್ರೆ ಶಿಸ್ತಿನ ಹಲವು ಮುಖಗಳ ಹರಿಕಾರರಾದ ಲಕ್ಷ್ಮಣ್ ತೆಲಗಾವಿಯವರ ಬಹುಮುಖ ಚಿಂತನೆಗಳ ಕುರಿತು ವಿಶ್ಲೇಷಿಸಲಾಗಿದೆ.

೬.೧. ಹಿಂದುಳಿದ ವರ್ಗಗಳು ಮತ್ತು ದಲಿತ ಚಳುವಳಿ ನಡೆದು ಬಂದ ಹಾದಿ

ಈಗಾಗಲೆ ಇತಿಹಾಸ ಪುಟಗಳಲ್ಲಿ ಸೇರಿ ಹೋದ ಹಲವು ವಿಷಯ ಮತ್ತು ಪರಿಸ್ಥಿತಿಗಳ ಕಾರಣದಿಂದಾಗಿ ಸಾಮಾಜಿಕ, ಆರ್ಥಿಕ, ರಾಜಕೀಯ ಕ್ಷೇತ್ರಗಳು ಕೆಲವೆ ಸಮುದಾಯಗಳ ಸ್ವತ್ತಾಗಿದೆ. ಕೆಲವು ಸಮುದಾಯಗಳು ಇದೇ ಸಮಾಜದಲ್ಲಿ ವಾಸಿಸುತ್ತಿದ್ದರು, ಬಾಹ್ಯ ಮತ್ತು ಆಂತರಿಕವಾಗಿ ಅಂಚಿಗೆ ತಳ್ಳಲ್ಪಟ್ಟ ಕಾರಣದಿಂದಾಗಿಯೆ ಬದುಕು ರೂಪಿಸಿಕೊಳ್ಳಲು ಹಲವು ಶತಮಾನಗಳ ಕಾಲ ಹೋರಾಟದ ಹಾದಿ ಹಿಡಿದಿರುವುದನ್ನು ಕಾಣುತ್ತೇವೆ. ರಾಜಕೀಯ, ಆರ್ಥಿಕ, ಸಾಮಾಜಿಕ ಸ್ಥಿತಿಗತಿಗೆ ಪೂರಕ ಶಕ್ತಿ ಎಂದರೆ ಧರ್ಮ ಮತ್ತು ಶಿಕ್ಷಣವಾಗಿದೆ. ಇವುಗಳ ತಳಹದಿಯ ಮೇಲೆಯೇ ಬದುಕು ರೂಪಗೊಳ್ಳುವುದನ್ನು ಕಾಣುತ್ತೇವೆ. ನಿಕೃಷ್ಟ ಪರಿಸ್ಥಿತಿಗೆ ಒಳಗಾದ ಸಮುದಾಯಗಳನ್ನು ಸೈದ್ಧಾಂತಿಕ ಚೌಕಟ್ಟಿನ ಹಿನ್ನೆಲೆಯಲ್ಲಿ ನೋವು-ನಲಿವುಗಳ ಮೂಲಕ ಅಧ್ಯಯನದ ಹೊಸ ದಾರಿಗೆ ಅರ್ಪಿಸಿಕೊಂಡವರೆಂದರೆ ಲಕ್ಷ್ಮಣ್ ತೆಲಗಾವಿಯವರಾಗಿದ್ದಾರೆ ಹಾಗೂ ತಳಸಮುದಾಯಗಳ ಸ್ಥಿತಿಗತಿಗೆ ಕಾರಣಗಳು, ಅನಿವಾರ್ಯತೆಗಳು ಹಾಗೂ ಸಂಕೀರ್ಣ ವ್ಯವಸ್ಥೆಯನ್ನು ವಿಶ್ಲೇಷಿಸುವ ಪ್ರಯತ್ನ ಮಾಡಿದ್ದಾರೆ.

ಭಾರತೀಯ ಜನಸಮುದಾಯದಲ್ಲಿ ವಾಸಿಸುವ ಹಲವು ಅಧ್ಯಯನಕಾರರ, ರಾಜಕಾರಣಿಗಳ ಹಾಗೂ ಸರ್ಕಾರದ ಮುಂದಿರುವ ಎರಡು ಪರಿಕಲ್ಪನೆಗಳೆಂದರೆ "ಹಿಂದುಳಿದ ವರ್ಗ ಮತ್ತು ದಲಿತ" ಎಂಬ ಪಾರಿಭಾಷಿಕ ಶಬ್ದಗಳು. ಅದರ ಮೊದಲ ಪರಿಕಲ್ಪನೆ "ಹಿಂದುಳಿದ ವರ್ಗಗಳು". ಹಿಂದುಳಿದ ವರ್ಗಗಳು ಎಂದರೆ ಸಾಮಾನ್ಯವಾಗಿ ಕಡಿಮೆ ಸಾಕ್ಷರತೆ, ಬಡತನ, ಶೋಷಣೆ ಸೇವಾಕ್ಷೇತ್ರಗಳಲ್ಲಿ ಪ್ರತಿನಿಧಿತ್ವ ಇಲ್ಲದಿರುವಿಕೆ, ಅಸ್ಪೃಶ್ಯತೆ ಮುಂತಾದವುಗಳಿಗೆ ಬಲಿಯಾಗಿರುವ ಜಾತಿಗಳು ಅಥವಾ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಹಿಂದುಳಿದ ಜಾತಿಗಳು, ಬುಡಕಟ್ಟುಗಳು ಮತ್ತು ಸಮೂಹಗಳೆಲ್ಲವೂ ಹಿಂದುಳಿದ ವರ್ಗವೆಂತಲೂ ಕರೆಯಬಹುದು ಎಂಬುದನ್ನು ಬ್ರಿಟಿಷ್ ಸರ್ಕಾರದ ೧೮೭೮ರ ಪೂರ್ವ ಸೇಂಟ್ ಜಾರ್ಜ್ ಗೆಜೆಟ್‌ನಲ್ಲಿ

ಬಳಕೆಯಾಗಿದೆ. ಸಂವಿಧಾನದ ವಿಧಿಗಳಲ್ಲಿ ಬ್ಯಾಕ್‌ವರ್ಡ್ ಕ್ಲಾಸ್ ಎಂಬ ಪದ ಬಳಸಲಾಗಿದೆ. ದೇಶದ ರಾಷ್ಟ್ರ ಅಧ್ಯಕ್ಷರು ೩೪೦ನೇ ವಿಧಿ ಪ್ರಕಾರ ಆಯೋಗ ರಚಿಸಿ ಸ್ಪಷ್ಟಪಡಿಸಿ ಹಿಂದುಳಿದ ವರ್ಗದ ವಿಸ್ತೃತತೆಯನ್ನು ಪಡೆಯಬಹುದಾಗಿದೆ.

ಅಂಬೇಡ್ಕರ್‌ರವರ ಪ್ರಕಾರ ಹಿಂದುಳಿದ ವರ್ಗಗಳೆಂದರೆ ಬೇರೆ ಏನೂ ಅಲ್ಲ ಅದೊಂದು ಅನೇಕ ಜಾತಿಗಳ ಸಮೂಹವಾಗಿದೆ ಎಂದಿದ್ದಾರೆ.

೧೯೧೯ರ ಹಿಂದುಳಿದ ವರ್ಗಗಳ ಆಯೋಗದ ಮುಖ್ಯಸ್ಥರಾದ ಸರ್ ಲೆಸ್ಲಿ ಮಿಲ್ಲರ್‌ರವರು ಬ್ರಾಹ್ಮಣ ಮತ್ತು ಇತರರು ಎಂದು ವಿಭಾಗಿಸಿ ಬ್ರಾಹ್ಮಣರನ್ನು ಹೊರತುಪಡಿಸಿದಂತೆ, ಇತರರೆಲ್ಲರನ್ನು ಹಿಂದುಳಿದ ವರ್ಗಗಳೆಂದು ಗುರುತಿಸುತ್ತಾರೆ. (೧೯೫೩-೫೫) ಕಾಕಾಸಾಹೇಬ್ ಕಾಲೇಲ್ಕರ್ ಆಯೋಗವು ಜಾತಿಗಳ ಆಧಾರದ ಮೇಲೆ ಗುರುತಿಸಿ ಸಾಮಾಜಿಕವಾಗಿ ನಿಕೃಷ್ಟ ಸ್ಥಿತಿ ಅನುಭವಿಸುವ ಎಲ್ಲಾ ಜಾತಿಗಳು ಹಿಂದುಳಿದ ವರ್ಗವೆಂದು ಶಿಫಾರಸ್ಸು ಮಾಡಿತು. (೧೯೭೮-೮೦ರಲ್ಲಿ) ಬಿ.ಪಿ. ಮಂಡಲ್‌ರವರ ನೇತೃತ್ವದಲ್ಲಿ ರಚಿತವಾದ ಆಯೋಗವು ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಮಾನದಂಡಗಳ ಮೇಲೆ ಹಿಂದುಳಿದಿರುವಿಕೆ ಗುರುತಿಸಿತು. ಕರ್ನಾಟಕದಲ್ಲಿ (೧೯೬೦-೬೧) ರಚಿತವಾದ ಡಾ. ಪಿ. ನಾಗನಗೌಡ ಆಯೋಗವು ಜಾತಿ ಆಧಾರದ ಮೇಲೆಯೇ ಗುರುತಿಸಿ "ಹಿಂದುಳಿದ ವರ್ಗ"ವನ್ನು ಅತ್ಯಂತ ಹಿಂದುಳಿದ ವರ್ಗಗಳೆಂದು ವಿಂಗಡಿಸಿತು. ೧೯೭೨-೧೯೭೫ರಲ್ಲಿ ಎಲ್.ಜಿ. ಹಾವನೂರ ಆಯೋಗ ಮೂರು ಗುಂಪುಗಳನ್ನಾಗಿ ವಿಂಗಡಿಸಿ ಹಿಂದುಳಿದ ಸಮುದಾಯಗಳು, ಹಿಂದುಳಿದ ಜಾತಿಗಳು, ಹಿಂದುಳಿದ ಬುಡಕಟ್ಟುಗಳು ಎಂದು ವಿಂಗಡಿಸಿ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಕ್ಷೇತ್ರ ಹಾಗೂ ಪುರಾತನ ಕಾಲದಿಂದಲೂ ಬೆಳೆದುಬಂದ ಅಸಮಾನತೆಯೆ ಇಂತಹ ಸ್ಥಿತಿಗೆ ಕಾರಣವೆಂದು ಗುರುತಿಸುತ್ತಾರೆ. ೧೯೮೩-೮೬ರಲ್ಲಿ ಅಸ್ತಿತ್ವದಲ್ಲಿದ್ದ ಟಿ. ವೆಂಕಟಸ್ವಾಮಿ ಆಯೋಗವು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ನೆಲೆಯಲ್ಲಿಯೆ ಹಿಂದುಳಿದವರನ್ನು ಹಿಂದುಳಿದ ವರ್ಗವೆಂತಲೂ (೧೯೮೮-೯೦) ಓ. ಚಿನ್ನಪ್ಪ ರೆಡ್ಡಿ ಆಯೋಗವು ಸಾಮಾಜಿಕ, ಶೈಕ್ಷಣಿಕ, ರಾಜಕೀಯವಾಗಿ ಹಿಂದುಳಿದವರನ್ನೆ ಹಿಂದುಳಿದ ವರ್ಗವೆಂದು ಗುರುತಿಸಿದೆ.

೧೯೩೦ ಮತ್ತು ೧೯೭೧-೭೨ರ ಅವಧಿಯಲ್ಲಿ ಮುಂಬೈ ಸರ್ಕಾರ ನೇಮಿಸಿದ ಸಮಿತಿಗಳು, ೧೯೩೫ರ ಜಮ್ಮು-ಕಾಶ್ಮೀರದ ಸಮಿತಿ, ೧೯೬೫-೬೮ರ ಕೇರಳ ಸರ್ಕಾರದ ಸಮಿತಿ, ೧೯೭೦-೭೧ರ ಆಂಧ್ರ ಸರ್ಕಾರದ ಸಮಿತಿಗಳು, ಜಾತಿ ಆಧಾರದ ಮೇಲೆಯೆ ಅತ್ಯಂತ ಕೆಳಗಿನ ಸ್ಥಾನದಲ್ಲಿರುವ ಜಾತಿಯೆ ಸಾಮಾಜಿಕವಾಗಿ ಹಿಂದುಳಿದ ವರ್ಗವೆಂದು ಗುರುತಿಸಿದೆ.

ರಾಷ್ಟ್ರ ಮತ್ತು ರಾಜ್ಯದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಿಂದುಳಿದ ಆಯೋಗಗಳ ಪ್ರಕಾರ ಶಿಕ್ಷಣ ಮತ್ತು ಸಂಪತ್ತಿನ ಅಸಮಾನ ಹಂಚಿಕೆಯ ಪರಿಣಾಮವೇ ಹಿಂದುಳಿದ ವರ್ಗದ ಸೃಷ್ಟಿಗೆ ಕಾರಣವಾಗಿದೆ ಎನ್ನುತ್ತಾರೆ. ಕೆಲವು ಸಂಘಟನೆಗಳು ಹೇಳುವ ಹಾಗೆ ಜಾತಿ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಹಿಂದುಳಿದಿರುವಿಕೆಯ

ಕಾರಣಗಳಿಂದಾಗಿಯೆ ಸಾಮಾಜಿಕ ಸಂಬಂಧಗಳಲ್ಲಿ ಹಿಂದುಳಿದವರು ಉಗಮಗೊಳ್ಳಲಿಕ್ಕೆ ಕಾರಣವೆನ್ನುತ್ತಾರೆ. ಇವುಗಳಲ್ಲಿ ಇಂದಿಗೂ ವಿಷಮ ಪರಿಸ್ಥಿತಿ ಅನುಭವಿಸಿದ, ಅನುಭವಿಸುತ್ತಿರುವ ಜನಸಮುದಾಯಗಳೆಂದರೆ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಇತರೆ ಹಿಂದುಳಿದ ವರ್ಗಗಳೆಂದು ಪಟ್ಟಿ ಮಾಡಲಾಗಿದೆ. ಇಂತಹ ಪಟ್ಟಿಗಳು ಕೇವಲ ಸಾಂಕೇತಿಕವಾಗಿ ಅಲ್ಲದೆ ಹಲವು ವರ್ಷಗಳ ಹೋರಾಟ, ಅಧ್ಯಯನದ ಪರಿಣಾಮವಾಗಿ ಸ್ಪಷ್ಟ ಮತ್ತು ನಿಖರ ಹಾಗೂ ಅಂತಿಮವಾಗಿ ಹಿಂದುಳಿದ ವರ್ಗಗಳನ್ನು ಗುರುತಿಸಿದೆ. ಇವೆಲ್ಲವುಗಳ ಆಧಾರದ ಮೇಲೆ ಸಮಕಾಲೀನ ವಿದ್ವತ್ ಹಿನ್ನೆಲೆಯಲ್ಲಿ ಅರಿಯುವ ಅಪ್ಪಟ ಪ್ರಯತ್ನ ನಡೆದಿರುವುದು ಶ್ಲಾಘನೀಯ.[೧]

ದಲಿತ ಎಂಬ ಪದಕ್ಕೆ ಈ ಹಿಂದೆ ಅಸ್ಪೃಶ್ಯರೆಂದು ಕರೆಯಲಾಗುತಿತ್ತು. ಸೈಮನ್ ಆಯೋಗದ ಮೇರೆಗೆ ಅಸ್ಪೃಶ್ಯತೆ ಎಂಬ ಪದವು ನಿಷೇಧವಾಗಿ ಮತ್ತು ಸಂವಿಧಾನಾತ್ಮಕವಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳೆಂದು ಕರೆಯಲಾಗುತ್ತಿದೆ. ಅಸ್ಪೃಶ್ಯ ಎಂಬ ಪದವು ನಿಕೃಷ್ಟ ಪದವಾಗಿದ್ದರಿಂದ ಈ ಸಮುದಾಯ ಮುಜುಗರಕ್ಕೆ ಒಳಗಾಗಬಾರದು, ಅವಮಾನಿತನಾಗಬಾರದು ಎಂಬ ಕಾರಣದಿಂದಾಗಿ ಗುಜರಾತಿನ ನರಸಿಂಹ ಮೆಹತಾ ಮೊದಲ ಬಾರಿಗೆ "ಹರಿಜನ" ಎಂಬ ಪದ ಬಳಸಿದರು. ನಂತರ ಆ ಪದವನ್ನು ಗಾಂಧೀಜಿಯವರು ಜನಪ್ರಿಯಗೊಳಿಸಿದರು. ಅಸ್ಪೃಶ್ಯ ಪದ ಪ್ರಯೋಗವೆ ಸಂವಿಧಾನದ ೧೭ನೇ ಅನುಚ್ಛೇದದ ಪ್ರಕಾರ ಅಪರಾಧವೆಂದು ಹೇಳುತ್ತದೆ. ಪ್ರಸ್ತುತವಾಗಿ ದಮನಿತರೆಲ್ಲರಿಗೂ ಅನ್ವಯ ಆಗುವಂತಹ ಪರಿಕಲ್ಪನೆ "ದಲಿತ" ಎಂಬುದು ಕರ್ನಾಟಕದಲ್ಲಿ ಹೆಚ್ಚು ಚರ್ಚಿತಗೊಳ್ಳುವ ವಿಷಯವಾಗಿದೆ. ದಲಿತನೆಂದರೆ ಹಿಂಸೆಗೆ ಒಳಗಾದ, ದಮನಕ್ಕೆ ಒಳಗಾದ, ಶೋಷಣೆಗೆ ಒಳಗಾದವರು ಎಂದರ್ಥ. ಚಾರಿತ್ರಿಕ ನೆಲೆಯಲ್ಲಿ "ದಲ" ಎಂಬ ಸಂಸ್ಕೃತ ಶಬ್ದವು ಚೂರು ಅಥವಾ ತುಂಡು ಭಾಗ, ಸೈನ್ಯ, ಚೂರಾದ, ಛಿದ್ರವಾದ ಎಂಬರ್ಥ ಕೊಡುತ್ತದೆ. ಶೋಷಣೆ ಅನುಭವಿಸುವ ಅಸ್ಪೃಶ್ಯರು, ಕಾರ್ಮಿಕರು, ಶ್ರಮಜೀವಿಗಳು, ಭೂಹೀನರು, ಬಡರೈತರು, ಆದಿವಾಸಿಗಳು, ಬಡಮುಸ್ಲಿಂ, ಶೋಷಿತ ಮಹಿಳೆಯರು ದಲಿತರೆಂದು ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್‌ನ ವ್ಯಾಖ್ಯೆಯಾಗಿದೆ. ಸತ್ಯಶೋಧಕ ಸಮಾಜದ ಸಂಸ್ಥಾಪಕ ಜ್ಯೋತಿಬಾಪುಲೆಯವರು ಮಹಾರಾಷ್ಟ್ರದಲ್ಲಿ ಅಸ್ಪೃಶ್ಯರನ್ನು ಮತ್ತು ಜಾತಿಬಾಹಿರರನ್ನು ಹತ್ತಿಕ್ಕಲಾದವರು. ಭಿನ್ನ-ಭಿನ್ನಾರಾದವರು ಎಂದು ವಿವರಿಸಲಿಕ್ಕೆ ಈ ಪದ ಪ್ರಯೋಗಿಸಿದ್ದರು. ಆದರೆ "ದಲಿತ" ಎಂಬ ಸ್ಪಷ್ಟ ಪರಿಕಲ್ಪನೆಯು ಪರಿಶಿಷ್ಟ ಜಾತಿಯ ಸಮುದಾಯವನ್ನು ಜಾತಿ ನೆಲೆಯಲ್ಲಿ ಗುರುತಿಸುವಾಗ ಹುಟ್ಟು ಹಾಕಿದ ಪರಿಕಲ್ಪನೆ ಆಗಿದ್ದು, ಆ ನಂತರ ಜನಸಮುದಾಯದಲ್ಲಿ ಅಂಗೀಕಾರವಾಗಿ ಮತ್ತು ವ್ಯಾಪಕವಾಗಿ ಬಳಕೆಗೆ ಬಂದಿತು. ಅಂಬೇಡ್ಕರ್‌ರು ಮಹರ್ ಜನಾಂಗದ ಸಮುದಾಯಗಳಿಗೆ ಬಳಸಿದರು. ನಂತರ ಈ ಸಮುದಾಯದ ಸ್ಥಿತಿ ಅನುಭವಿಸುವ ಎಲ್ಲಾ ಜಾತಿ ಜನರಿಗೆ ಈ ಪದವನ್ನೆ ಬಳಸಿದರು. ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಸ್ಥಾಪಕರಲ್ಲೊಬ್ಬರಾದ ನಾಮದೇವಢಸಾಳರು ಕೆಲವು ಪರಿಶಿಷ್ಟ ಜಾತಿ, ಪಂಗಡ, ನವಬೌದ್ಧರು, ಭೂಹೀನ ಕೃಷಿ ಕಾರ್ಮಿಕರು, ಶೋಷಣೆಗೆ ಒಳಗಾದವರೆಲ್ಲರನ್ನು ಗುರುತಿಸಲು ವಿಸ್ತಾರ ವ್ಯಾಪ್ತಿ ಬಳಸಿದರು.

ನಂತರ ೧೯೭೦ರ ಮಹಾರಾಷ್ಟ್ರದಲ್ಲಿನ ಚಳುವಳಿಯಲ್ಲಿ ಬಳಕೆಯಾಗಿ ನೋವು-ಅಪಮಾನ, ದಾರಿದ್ರ್ಯ, ವಂಚನೆ, ಅಸ್ಪೃಶ್ಯತೆ, ಜಾತಿಯ ಅವಮಾನ, ಅನಕ್ಷರಸ್ಥ ಮುಂತಾದವುಗಳಿಗೆ ಒಳಗಾದವರೆ ದಲಿತರು ಎನ್ನುತ್ತಾನೆ. ಈ ಸೈದ್ಧಾಂತಿಕವಾಗಿ, ಆರ್ಥಿಕ, ಸಾಮಾಜಿಕ, ರಾಜಕೀಯ, ಶೈಕ್ಷಣಿಕವಾಗಿ ಶೋಷಣೆಗೆ ಒಳಗಾದವರು, ಬಹಿಷ್ಕೃತ ಅಥವಾ ಅಸ್ಪೃಶ್ಯರೆನಿಸಿಕೊಂಡವರು. ಅಸ್ಪೃಶ್ಯರಲ್ಲದಿದ್ದರೂ ಹತ್ತಾರು ವಿಷಯಗಳಲ್ಲಿ ಅಸ್ಪೃಶ್ಯರಂತೆಯೆ ಬದುಕುವ ಜನಸಮುದಾಯಗಳು ದಲಿತರಾಗಿದ್ದಾರೆ. ಅಂದಿನ ಸಂದರ್ಭದಲ್ಲಿ ಅಸ್ಪೃಶ್ಯಪದವು ನಿಕೃಷ್ಟವಾಗಿ ಕಾಣುವ ಕಾರಣಕ್ಕಾಗಿ ದುಂಡು ಮೇಜಿನ ಪರಿಷತ್ತಿಗೆ ಅಂಬೇಡ್ಕರ್, ಆರ್. ಶ್ರೀನಿವಾಸ ಕೊಟ್ಟ ವಿಶೇಷ ಜ್ಞಾಪನ ಪತ್ರದಲ್ಲಿ ತುಳಿತಕ್ಕೆ ಒಟ್ಟಪಟ್ಟವರಿಗೆ ಪರ್ಯಾಯ ಪದ "ದಲಿತ" ಎಂಬುದಾಗಿದ್ದು, ಇಂತದ್ದನ್ನೆ ದಲಿತರು ಅಪೇಕ್ಷಿಸುವುದರಿಂದ ಹೊಸ ರಾಜ್ಯಾಂಗ ರಚಿಸುವಾಗ ಹಾಲಿ ಹೆಸರನ್ನು ಬದಲಾವಣೆ ಮಾಡಬೇಕು, ಅವರನ್ನು ಹಿಂದುಯೇತರರು, ಬಂಡಾಯ ಹಿಂದೂಗಳು ಅಥವಾ ಇನ್ನಾವುದೇ ಬೇರೆ ಹೆಸರಿನಿಂದ ಕರೆಯುವುದು ಸೂಕ್ತವೆಂದು, ಆದರೆ ಅಸ್ಪೃಶ್ಯ, ಹರಿಜನ ಎಂಬ ಪದಕ್ಕಿಂತ "ದಲಿತ" ಎಂಬ ಪದವೆ ಸುಧಾರಿತ ಪದವಾಗಿದೆ ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ನಂತರ ಉತ್ತರ ಪ್ರದೇಶ, ಮಹಾರಾಷ್ಟ್ರ ಸರ್ಕಾರಗಳು ದಲಿತ ಪದವನ್ನೆ ಸೂಚಿಸಿದರು. ಪರಿಣಾಮ ದಲಿತ ಎಂಬ ಪದ ಎಲ್ಲರಿಗೂ ಇಷ್ಟವಾದ ಕಾರಣ ಬಳಕೆಯಾಗಿದೆ. ಪ್ರಸ್ತುತ ಅಧ್ಯಯನಕಾರರು ಪರಿಶಿಷ್ಟ ಜಾತಿಗಳಿಗೆ "ದಲಿತ" ಎಂಬ ಶಬ್ದವನ್ನೆ ಬಳಕೆ ಮಾಡಿದ್ದಾರೆ. ಹಾಗಂತ ಪರಿಶಿಷ್ಟ ಜಾತಿಯವರು ಮಾತ್ರ ದಲಿತರೆಂದು ಭಾವಿಸದೆ ದಲಿತ ಎಂಬ ಪದವು ಹಲವು ಆಯಾಮಗಳಲ್ಲಿ ವಿಸ್ತೃತವಾಗಿದ್ದು, ಹಿಂದುಳಿದ, ಸ್ಪೃಶ್ಯ-ಅಸ್ಪೃಶ್ಯ ಜಾತಿಗಳನ್ನು ಒಳಗೊಂಡಂತೆ ಈ ಪರಿಕಲ್ಪನೆ ಸೂಕ್ತವಾದುದು. ಈ ಪದದ ಅರ್ಥ ಏನೇ ಇದ್ದರೂ ಸಾಮಾಜಿಕ, ಶೈಕ್ಷಣಿಕ, ರಾಜಕೀಯ, ಆರ್ಥಿಕವಾಗಿ ಹಿಂದುಳಿದ ಎಲ್ಲಾ ಜಾತಿಗಳು ಈ ಪರಿಕಲ್ಪನೆ ಮೂಲಕ ಒಂದುಗೂಡಿ ದಲಿತರೆಂಬ ನಾಮಕರಣದಿಂದಲೆ "ದಲಿತ ಪ್ರಜ್ಞೆ" ಎಂಬ ಹೊಸ ಪರಿಕಲ್ಪನೊಂದಿಗೆ ಸೈದ್ಧಾಂತಿಕ ಮತ್ತು ಬಾಹ್ಯ ಚಳುವಳಿಗೆ ವೇದಿಕೆ ಕಲ್ಪಿಸಿ ಕೊಟ್ಟಂತಾಗಿದೆ.[೨] ದಲಿತ ಪರಿಕಲ್ಪನೆಯ ಬಳಕೆಯ ಸ್ಥಿತ್ಯಂತರವನ್ನು ಅಧ್ಯಯದ ಮೂಲಕ ಅನಾವರಣಗೊಳಿಸಿದ್ದು ಮಾತ್ರ ತೆಲಗಾವಿಯವರು.

ಶೋಷಣೆ ಅನುಭವಿಸಿದ ಶೋಷಿತರು, ಶೋಷಿತತ್ವದಿಂದ ಆಚೆ ಬಂದು ಬದುಕು ಕಟ್ಟಿಕೊಳ್ಳಲು ಸಮಾಜದ ಮುಖ್ಯವಾಹಿನಿಯಲ್ಲಿರುವವರೊಂದಿಗೆ ಪ್ರತಿರೋಧ ಮಾಡುತ್ತಲೆ ಬಂದಿದ್ದನ್ನು ಚಾರಿತ್ರಿಕ ಸಂದರ್ಭಗಳಲ್ಲಿ ಕಾಣಬಹುದಾಗಿದೆ. ಸಿಂಧೂ ಬಯಲಿನ ನಾಗರಿಕತೆಯಲ್ಲಿ ದಾಸರಂತಹ ಹಿಂದುಳಿದ ಬುಡಕಟ್ಟು ಜನಾಂಗಗಳು ಆರ್ಯರೊಂದಿಗೆ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಸಂಘರ್ಷಕ್ಕೆ ಇಳಿದಿದ್ದರು. ಸಿಂಧು ಬಯಲಿನಲ್ಲಿ ಮೂಲತಃವಾಗಿ ವಾಸಿಸುತ್ತಿದ್ದವರ ಮೇಲೆ ಆರ್ಯರು ಆಕ್ರಮಣದ ಮೂಲಕ ಗುಲಾಮಗಿರಿ ಮತ್ತು ಜೀತಪದ್ಧತಿ ತಂದು ದುಡಿಸಿಕೊಳ್ಳುತ್ತಿದ್ದು ನಂತರ ಹಲವು ವರ್ಷಗಳ ನಂತರ ಅದರಿಂದ ಆಚೆ ಬಂದಿದ್ದನ್ನು ಇತಿಹಾಸದ ಪುಟಗಳಲ್ಲಿ ಕಾಣುತ್ತೇವೆ. ಇಲ್ಲಿ ಹೋರಾಟಕ್ಕಿಳಿದವರು ಶೂದ್ರರು ಮತ್ತು ಮಹಿಳೆಯರು.

ಅಂದಿನಿಂದ-ಇಂದಿನವರೆಗೂ ಶೋಷಣೆ ಅನುಭವಿಸುತ್ತಿರುವವರು ಇವರೆ ಆಗಿದ್ದಾರೆ. ನಂತರ ಚತುರಾ ವರ್ಣವ್ಯವಸ್ಥೆ ಉಗಮವಾಗಿ ಮೊದಲ ಮೂರು ವರ್ಣ ದ್ವಿಜರಾಗಿ ಉಳಿದ ಒಂದು ವರ್ಣ ದ್ವಿಜೇತರರಾಗಿ, ಸಂಪತ್ತಿನ ಹಲವು ಮೂಲಗಳಿಂದ ವಿಜೃಂಭಿಸಿದವರು. ದ್ವಿಜರಾದರೆ, ಸಂಪತ್ತಿನ ಮೂಲದಿಂದ ದೂರ ಇದ್ದವರು ಶೂದ್ರರಂತಹ ದ್ವಿಜೇತರರು. ಇಂತಹ ವೈದಿಕ ಯುಗದಿಂದಲೇ ಅಸಮಾನತೆಯ ಬೇರು ಆಳವಾಗಿ ಬೇರೂರಲು ಸಾಧ್ಯವಾಯಿತು. ನಂತರ ಬುದ್ಧರ ಕಾಲದಲ್ಲಿ ಅಪಮಾನಿತರಿಗೆ ಅಸಹಾಯಕರಿಗೆ, ಶೋಷಿತರಿಗೆ, ಮಹಿಳೆಯರಿಗೆ, ಹೊಸ ತರಹದ ದೀಕ್ಷೆಯೊಂದಿಗೆ ಒಳಗೊಳ್ಳುವ ಅವಕಾಶವಿತ್ತರು. ಆದ್ದರಿಂದಲೆ ೬ನೇ ಶತಮಾನವು ಹೊಸ ಸಾಮಾಜಿಕ ವ್ಯವಸ್ಥೆಗೆ ಅಂದರೆ ಅಸಮಾನತೆ ಹೋಗಲಾಡಿಸಿ ಸಮಾನತೆ ಸಮಾಜ ಕಟ್ಟಲು ಗೌತಮಬುದ್ಧರು ಬದ್ಧರಾದರು. ೭ನೇ ಶತಮಾನದಿಂದೀಚೆಗೆ ಸ್ಪಷ್ಟವಾಗಿ ಜಾತಿ ಎಂಬ ಸಂಸ್ಥೆಯು ರಚನೆಯಾಗಿ ವಿಜಯನಗರ ಕಾಲದವರೆಗೂ ಜಾತಿಯ ಕಟ್ಟಡ ನಲುಗದೆ ಗಟ್ಟಿಯಾಗಿದ್ದನ್ನು ಕಾಣುತ್ತೇವೆ. ಪರಿಣಾಮ ಶೂದ್ರಾದಿ ಶೂದ್ರಗಳ ಅಥವಾ ಹಿಂದುಳಿದವರ ಸಂಖ್ಯೆಯು ಅಧಿಕಗೊಂಡು ಜಾತಿಗೆ ಸಂಘಟಿತ ರೂಪ ಬಂದಿದ್ದರಿಂದಾಗಿ ಮೇಲುಜಾತಿಯವರಿಗೆ ಪ್ರತಿರೋಧ ಕೊಡುವುದು ಅನಿವಾರ್ಯವಾಯಿತು. ಇಂಥವರ ರಕ್ಷಣೆಗೆ ತಂತ್ರಾರಾದನ ಧರ್ಮವು ಉಗಮಗೊಂಡು ಜಾತಿ ವಿರೋಧಿಸಿಯೂ ಸಮಾನತೆ ಪ್ರತಿಪಾದಿಸುವಂತಾಯಿತು. ನಂತರದ ಮಧ್ಯಕಾಲೀನ ಭಾರತದಲ್ಲಿ ಅರಬ್ ಮತ್ತು ಟರ್ಕರ ಪ್ರವೇಶವೂ ಒಂದೆಡೆಯಾದರೆ, ಜಾತಿ ವ್ಯವಸ್ಥೆ ಬಿಗಿಯಾಗಿ, ಆಯಾ ಜಾತಿಯ ಕೈಕಸಬುಗಳು, ಜಾತಿ ಕಸಬುಗಳಾಗಿ, ವೈವಾಹಿಕ ಸಂಬಂಧ, ವಾಸ್ತವ್ಯ ಇತ್ಯಾದಿಗಳು ಪ್ರತ್ಯೇಕವಾಗಿ ಮೂಡಿಬಂದವು. ಈ ಮೇಲಿನ ವಲಸಿಗ ಅಂದಾಗಲಿ ಅಥವಾ ಇದೆ ಸಂದರ್ಭದಲ್ಲಿ ಉದಯಿಸಿದ ಸೂಫಿ-ಭಕ್ತಿಪಂಥಗಳಾಗಲಿ ನಿರೀಕ್ಷಿಸಿದ ಮಟ್ಟಕ್ಕೆ ಜಾತಿ ವ್ಯವಸ್ಥೆಯನ್ನು ಬದಲಾಯಿಸಲಾಗಲಿಲ್ಲ. ಬ್ರಾಹ್ಮಣರ ಕುತಂತ್ರದ ಜಾಲದೊಳಗೆ ಸಿಲುಕಿದ ಮುಗ್ಧತೆಯ ತಳಸಮುದಾಯಗಳು ಬ್ರಿಟಿಷ್ ಯುಗದ ತನಕವು ಯಾತನೆಯನ್ನು ಒಂದಲ್ಲ ಒಂದು ಬಗೆಯಲ್ಲಿ ಅನುಭವಿಸುತ್ತಲೆ ಬಂದರು.

ಬ್ರಿಟಿಷ್‌ರ ಉದ್ದೇಶ ಬೇರೆ ಏನೇ ಇದ್ದರೂ ಭಾರತದಲ್ಲಿ ಬೇರು ಬಿಟ್ಟಿದ್ದ ಜಾತಿ ವ್ಯವಸ್ಥೆಯನ್ನು ಹೋಗಲಾಡಿಸಬೇಕೆಂಬ ಮಹತ್ವಾಕಾಂಕ್ಷೆ ಇವರದ್ದಾಗಿರಲಿಲ್ಲ. ಬ್ರಿಟಿಷರದ್ದು ವಸಾಹತುಶಾಹಿಯ ಮೂಲಕ ಹಣ ಗಳಿಸುವುದಷ್ಟೆ ಉದ್ದೇಶವಾಗಿತ್ತು. ಇಂತಹ ಸಂದರ್ಭದಲ್ಲಿಯೆ ಕತ್ತಲಲ್ಲಿ ಮಿಂಚುಹುಳುವಿನಂತೆ ಮಿಂಚಿನಬೆಳಕು ತಂದವರು. ವರ್ಗ, ಜಾತಿ-ಸ್ತ್ರೀ ದಾಸ್ಯತ್ವ ವಿಮೋಚನೆಗಾಗಿ ಪರಿಣಾಮಕಾರಿ ಕ್ರಿಯಾಶೀಲರಾಗಿದ್ದ ಮಹಾತ್ಮ ಜ್ಯೋತಿ ಬಾಪುಲೆ ಮತ್ತು ಡಾ. ಬಿ.ಆರ್. ಅಂಬೇಡ್ಕರ್. ಈ ಸೀತಾರರು ಮಹಾರಾಷ್ಟ್ರದಲ್ಲಿ ಬ್ರಾಹ್ಮಣೇತರರ ಚಳುವಳಿ ಹುಟ್ಟುಹಾಕಿದರು. ೧೮೭೩ರಲ್ಲಿ ಸಂಸ್ಥಾಪಿಸಿದ ಸತ್ಯಶೋಧಕ ಸಮಾಜದ ಮೂಲಕ ಜ್ಯೋತಿಬಾ ಪುಲೆಯವರು ೧೯ನೇ ಶತಮಾನದ ಈ ಸೀತಾರರು ೨ನೇ ದಶಕದಿಂದಲೆ ತಳಸಮುದಾಯದವರ ಚಳುವಳಿ ಮತ್ತು ಪ್ರತಿಭಟನೆಗಳಿಗೆ ಚಾಲನೆ ನೀಡಿದರು. ೧೮೫೭ರಿಂದ ೧೮೬೪ರ ಅವಧಿಯಲ್ಲಿ

ಜ್ಯೋತಿಬಾಫುಲೆಯವರು ಬಾಲಕಿಯರ ಶಾಲೆ ಅಸ್ಪೃಶ್ಯರಿಗಾಗಿ ಶಾಲೆ, ಬಾಲಹತ್ಯೆ ಪ್ರತಿಬಂಧಕ, ಗೃಹಹಿಂಸೆ ಇತ್ಯಾದಿಗಳನ್ನು ಸತ್ಯಶೋಧಕ ಸಮಾಜದ ನಿರ್ಮಾಣದೊಂದಿಗೆ ತಳಸಮುದಾಯದ ವಿಮೋಚನೆಗೆ ಕಾರ್ಯ ಪ್ರವೃತರಾದರು. ಈ ಕಾರಣಕ್ಕಾಗಿ ಫುಲೆಯವರು ದೇಶದ ಮೊದಲ ಸ್ತ್ರೀ ಶಿಕ್ಷಣ ಜನಕನೆಂಬ ಖ್ಯಾತಿಗೆ ಹೆಸರಾಗಿದ್ದಾರೆ. ದಶಕದ ಇತಿಹಾಸದಲ್ಲಿ ಸ್ತ್ರೀಯರಿಗಾಗಿಯೆ ಪ್ರತ್ಯೇಕ ಶಾಲೆ ತೆರೆದು ಅದರಲ್ಲೂ ಕೆಳಜಾತಿಯ ಸ್ತ್ರೀಯರಿಗೆ ಅಕ್ಷರ ಕಲಿಯಲಿಕ್ಕೆ ಅವಕಾಶ ಕಲ್ಪಿಸಿಕೊಟ್ಟು ಹೊಸ ಕ್ರಾಂತಿಯನ್ನ ಶುರುಮಾಡಿದರು. ಇವರ ಹಾದಿಯಲ್ಲಿ ಸಾಗಿದವರು ದಲಿತ ಸೂರ್ಯ, ಸಂವಿಧಾನ ಶಿಲ್ಪಿ ಅಂಬೇಡ್ಕರ್‌ರರು ಜಾತಿ ವ್ಯವಸ್ಥೆಗೆ ವೈಜ್ಞಾನಿಕ ರೂಪ ಕೊಟ್ಟು, ಬಲವಾದ ಕಾರಣಗಳನ್ನು ನೀಡಿ ಜಾತಿಯ ಕಪ್ಪುಮುಖವನ್ನು ಅನಾವರಣಗೊಳಿಸಿದರು. ಹಿಂದುಗಳು ರಚಿಸಿಕೊಂಡಿರುವ ಜಾತಿ ವ್ಯವಸ್ಥೆಯು ಅಸ್ಪೃಶ್ಯರನ್ನು ಶೋಷಿಸುವ ವಸಾಹತುಶಾಹಿ ಕ್ರಮವೆಂಬುದನ್ನು ನಿಷ್ಠುರವಾಗಿಯೆ ವಿರೋಧಿಸಿದರು. ಅಸ್ಪೃಶ್ಯತೆ ನಿವಾರಣೆಯೊಂದಿಗೆ ಎಲ್ಲಾ ದುರ್ಬಲ ವರ್ಗಗಳನ್ನು ಅಸಮಾನತೆಯ ಪರಿಕಲ್ಪನೆಯಿಂದ ವಿಮೋಚನೆ ಮಾಡುವ ಬಹುದೊಡ್ಡ ಹೊಣೆಗಾರಿಕೆ ಹೊತ್ತುಕೊಂಡವರಾಗಿದ್ದಾರೆ. ಏಕೆಂದರೆ ಅಂದಿನ ಸಮಾಜದ ಆಡಳಿತ ವ್ಯವಸ್ಥೆಯಲ್ಲಿ ಮೂಲಭೂತ ಸೌಲಭ್ಯಗಳು ನಿಮ್ನವರ್ಗ, ಮಹಮ್ಮದಿ, ಬ್ರಾಹ್ಮೇಣೇತರರಿಗೆ ಲಭ್ಯವಾಗಿರಲಿಲ್ಲ. ಆದ್ದರಿಂದಲೆ ಹಲವು ತರಹದ ಹೋರಾಟದ ಮೂಲಕ ಹೊಸಕ್ರಾಂತಿಯನ್ನು ಆಧುನಿಕಯುಗದಲ್ಲಿ ಮೂಡಿಸಿದವರು ಲಕ್ಷ್ಮಣ್ ತೆಲಗಾವಿ ಅವರು. ಇದರಿಂದ ಪ್ರೇರಿತರಾಗಿ ಉತ್ತರಪ್ರದೇಶ, ಬಿಹಾರ್, ತಮಿಳುನಾಡು, ಆಂಧ್ರ, ಕೇರಳ, ಒರಿಸ್ಸಾ, ರಾಜಸ್ಥಾನ, ಪಂಜಾಬ್ ರಾಜ್ಯಗಳಲ್ಲಿ ಯಾದವಕ್ಕೆ ಕುಮಿರ್, ಔಟ, ಕೋಯಿ, ಗುಜ್ಜರು ಮುಂತಾದ ಜನಾಂಗಗಳು ಅನ್ಯಾಯದ ವಿರುದ್ಧ ಹೋರಾಟ ಮಾಡಿದರು.

೧೯೧೭ರಲ್ಲಿ ಬ್ರಾಹ್ಮಣೇತರರ ಏಳಿಗೆಗಾಗಿ ಅಸ್ತಿತ್ವಕ್ಕೆ ಬಂದುದು ಜಸ್ಟೀಸ್ ಪಾರ್ಟಿ. ತ್ಯಾಗರಾಜ ಜೆಟ್ಟಿ ರಾಮಸ್ವಾಮಿ, ಲಕ್ಷ್ಮಣಸ್ವಾಮಿ ಮೊದಲಿಯರು ಸಹೋದರು ಸಂಸ್ಥಾಪಿಸಿ ಎಂ.ಸಿ. ರಾಜ ಜಸ್ಟೀಸ್ ಪಕ್ಷದ ನಾಯಕರಾಗಿ ನೇಮಕಗೊಂಡರು. ಇದು ಮದ್ರಾಸ್ ಪ್ರಾಂತ್ಯದ ಪ್ರಭಾವವಾದ ಇತ್ತ ಬೆಂಗಳೂರು, ಮೈಸೂರಿನಲ್ಲಿಯೂ ಸಂಪಾದಿಸಿ ಸಂಕಟಿತವಾದವು. ಈ.ವಿ. ರಾಮಸ್ವಾಮಿ ಆತ್ಮಗೌರವ ಚಳುವಳಿ ಆರಂಭಿಸಿ ಪ್ರತ್ಯೇಕ ದ್ರಾವಿಕ ಸ್ಥಾನದ ಬೇಡಿಕೆ ಹುಟ್ಟಿ ಮುಂದೆ ಜಸ್ಟೀಸ್ ಪಕ್ಷ ದ್ರಾವಿಡಕಳಗಂ ಆಗಿ ಪರಿವರ್ತನೆಯಾಯಿತು. ಅಂಬೇಡ್ಕರ್‌ರು ಆಂಧ್ರ ಮಹಾಸಭಾ ಮೂಲಕ ಮತ್ತು ೧೯೩೪ರಲ್ಲಿ ಎಲ್ಲೋರಾ ಪ್ರವಾಸದ ಮೂಲಕ ತಳಸಮುದಾಯದ ಹೋರಾಟಕ್ಕೆ ಬಂದುದು ೧೯೩೮ರಲ್ಲಿ ಔರಂಗಬಾದ್ ಜಿಲ್ಲಾ ದಲಿತ ಸಮ್ಮೇಳನದಲ್ಲಿ ಭಾಗವಹಿಸಿ ಹೈದ್ರಾಬಾದ್ ಸರ್ಕಾರದ ನೀತಿ ಟೀಕಿಸಿದರು. ಇವರ ಅನುಯಾಯಿಗಳಾದ ಬಿ.ಎಸ್. ವೆಂಕಟರಾವ್, ಎಸ್. ಸುಬ್ಬಯ್ಯ, ಭೀಮಸೇನದ ಸಂಸ್ಥಾಪಕರಾಗಿ ಹಲವು ಹೋರಾಟದ ಮೂಲಕ ಜಿಲ್ಲಾ, ತಾಲೂಕು, ಹೋಬಳಿ ಗ್ರಾಮಮಟ್ಟದಲ್ಲಿ ಈ ಭೀಮಸೇನೆಯ ಚಾಲತಿಗೆ ಜಾಗೃತಿಗೊಳಿಸಿದರು.

ಕರ್ನಾಟಕದಲ್ಲಿ ಅಂಬೇಡ್ಕರ್ ಪ್ರಭಾವ : ಅಂಬೇಡ್ಕರ್‌ರು ಉತ್ತರ ಕರ್ನಾಟಕ ಭಾಗಗಳಾದ ಬೆಳಗಾವಿ, ಧಾರವಾಡ, ಬಿಜಾಪುರ ಜಿಲ್ಲೆಗಳಲ್ಲಿ ಸಂಚರಿಸಿ ಹೋರಾಟಕ್ಕೆ ಪ್ರೋತ್ಸಾಹ ಮೂಡಿಸಿದರು.

ಇಂತಹ ಸಂಘಟಿತ ಹೋರಾಟಕ್ಕೆ ಕರ್ನಾಟಕದ ಅನುಯಾಯಿಗಳಾದ ಶಂಕರನಂದಾ ಶಾಸ್ತ್ರಿ ಹೊಂಗಲ ಎಸ್.ಎನ್. ಮಾನೆ ಚಿಕ್ಕೋಡಿಯವರು ಸಾಥ್ ಕೊಟ್ಟರು ಹಾಗೂ ೧೯೨೩ರಲ್ಲಿ ಧಾರವಾಡದಲ್ಲಿ ವಂಚಿಗಾರ ಮಹಾಸಂಘ ಉದ್ಘಾಟಿಸಿದರು. ೧೯೨೪ರಲ್ಲಿ ಬಹಿಷ್ಕೃತಹಿತಕಾರಿಣಿ ಸಭೆಗೆ ಬೆಳಗಾವಿಯಲ್ಲಿ ಚಾಲನೆ ನೀಡಿದರು. ೧೯೨೭ರಲ್ಲಿ ಹುಬ್ಬಳ್ಳಿಯ ಮಹಾರೇ ಮಂಡಳಿ, ೧೯೨೭ರಲ್ಲಿ ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಮತ್ತು ೧೯೨೫ರಲ್ಲಿ ಇಂಗಳೆಯವರು ೩ನೇ ಮಹಾಸಮ್ಮೇಳನದಲ್ಲಿ ಜಾತುವರ್ಣ ವ್ಯವಸ್ಥೆ, ದೇವರು, ಧರ್ಮ, ಅಂಧಶ್ರದ್ಧೆ ಬಿಡುವ ತನಕ ಮಾನಸಿಕ ಗುಲಾಮಗಿರಿಯಿಂದ ಮುಕ್ತವಾಗಲಾರಿರಿ ಎಂದು ದಲಿತರಿಗೆ ಕರೆಕೊಟ್ಟರು.

೧೯೨೭ರಲ್ಲಿ ೫ನೇ ಸಮ್ಮೇಳನದಲ್ಲಿ ಮುಸ್ಲಿಂರಿಗೆ ಇದ್ದಂತೆ ದಲಿತರಿಗೂ ಪ್ರತ್ಯೇಕ ಚುನಾವಣಾ ಸೌಲಭ್ಯ ನೀಡಬೇಕೆಂದು ಕೂಗು ಬೆಳಗಾವಿಯ ದಲಿತರಿಂದಲೇ ಆರಂಭವಾಯಿತು. ಮುಂದೆ ಸೈಮನ್ ಆಯೋಗ ದುಂಡುಮೇಜಿನ ಪರಿಷತ್‌ನಲ್ಲಿಯೂ ಇದೇ ಕೂಗು ಮೊಳಗಿತು. ೧೯೨೮ರಲ್ಲಿ ಅಸ್ಪೃಶ್ಯತಾ ಆಚರಣೆ ಅಪರಾಧದ ಕಾನೂನು ತರಲು ಆಗ್ರಹಿಸಿ, ಆರ್ಥಿಕಸ್ಥಿತಿ ಭೂಮಿ ಹಂಚಿಕೆ, ಉಪಹಾರ, ದೇವಸ್ಥಾನಗಳಿಗೆ ಮುಕ್ತ ಪ್ರವೇಶಕ್ಕಾಗಿ ಆಗ್ರಹ ಹೀಗೆ ಚಿಕ್ಕೋಡಿ, ಹುಕ್ಕೇರಿ, ಬಿಜಾಪುರ ಮುಂತಾದ ಕಡೆ ಈ ತರಹದ ಜಾಗೃತಿ ಮೂಡಿತು. ಬಳವಂತರಾವ್ ಎಚ್. ವರಾಳೆಯವರು ಕರ್ನಾಟಕದ ಸಿಂಹ ಎಂಬ ಹೆಗ್ಗಳಿಕೆಗೆ ಪಾತ್ರರಾಗಿ ದುಂಡುಮೇಜಿನ ಪರಿಷತ್ತಿನಲ್ಲಿ ಅಂಬೇಡ್ಕರರೆ ದಲಿತನಾಯಕವೆಂತಲೂ ಹಾಗೂ ಪೂನ ಒಪ್ಪಂದದ ರೂಪರೇಷೆ ತಿದ್ದಲು ಬ್ರಿಟಿಷರಿಗೆ ಮತ್ತು ಭಾರತದ ಜನನಾಯಕರಿಗೆ ಅಂಬೇಡ್ಕರ್ ವ್ಯಕ್ತಿತ್ವದ ಮಹತ್ವತೆ ಕುರಿತು ಒಕ್ಕೋಲಿರಿನಿಂದ ಸಾಬೀತಪಡಿಸಿದರು.

೬.೨. ಹಿಂದುಳಿದ ವರ್ಗದವರ ಚಿಂತನೆ

ಈ ಮೊದಲೆ ಹೇಳಿದಂತೆ ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಹಿಂದುಳಿದವರು. ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳಾಗಿದ್ದು, ಇವರುಗಳ ಬವಣೆ ಗುರುತಿಸಿ, ಬಸವೇಶ್ವರರ ಕಾಲದಿಂದಲೂ ಇಲ್ಲಿಯತನಕವೂ ಸಾಮಾಜಿಕ ನ್ಯಾಯಕ್ಕಾಗಿ ಹಲವು ತರಹದ ಹೋರಾಟ ಮಾಡಿ, ಸಂಪೂರ್ಣವಾಗಿ ಅಲ್ಲವಾದರೂ ಅಲ್ಪ ಸ್ವಲ್ಪವಾದರೂ ನ್ಯಾಯ ಸಿಕ್ಕಿದೆ ಮತ್ತು ಅದನ್ನು ವಿವಿಧ ಆಯೋಗಗಳ ಮೂಲಕ ನೋಡಲಾಗಿದೆ. ಹಿಂದುಳಿದ ಸಮುದಾಯದ ಬಗ್ಗೆ ಕಾಳಜಿ ಹೊಂದಿದವರು ಮಾತ್ರ ನ್ಯಾಯ ದೊರಕಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ.

೧೯೭೨ರಿಂದ ೧೯೮೦ರವರೆಗೆ ಕರ್ನಾಟಕದಲ್ಲಿ ದಲಿತ, ಹಿಂದುಳಿದ, ಅಲ್ಪಸಂಖ್ಯಾತ ಎಂಬ ದುರ್ಬಲ ವರ್ಗಗಳನ್ನು ಒಂದು ಚೌಕಟ್ಟಿಗೆ ತರುವ ಆ ಮೂಲಕ ೧೯೪೭ರಿಂದ ೧೯೭೨ರತನಕ ರಾಜ್ಯ ರಾಜಕಾರಣದಲ್ಲಿ ಲಿಂಗಾಯತ ಮತ್ತು ಒಕ್ಕಲಿಗರ ಪ್ರಭಾವವಿದ್ದದ್ದನ್ನು ಕಂಡಿದ್ದ ದೇವರಾಜ ಅರಸುರವರು ಪ್ರಧಾನಿ ಇಂದಿರಾಗಾಂಧಿಯವರ ಅನುಗ್ರಹದೊಂದಿಗೆ ಹಿಂದುಳಿದ ವರ್ಗಗಳಿಗೆ ಹೊಸ ಶಕ್ತಿ ಹುಟ್ಟು ಹಾಕಿ ಆ ಮೂಲಕ ಸರ್ಕಾರ ರಚಿಸಿ ಆ

ಸರ್ಕಾರದಲ್ಲಿ ದಲಿತರಿಗೆ, ಅಲ್ಪಸಂಖ್ಯಾತರಿಗೆ ಹಾಗೂ ಹಿಂದುಳಿದವರನ್ನೆ ಮಂತ್ರಿಯನ್ನಾಗಿ ಮಾಡಿ ಉನ್ನತ ಹುದ್ದೆ ಮತ್ತು ಅಧಿಕಾರ ಲಭಿಸುವಂತೆ ಕ್ರಮಕೈಗೊಂಡರು. ೧೯೭೨ರಲ್ಲಿ ವಂಚಿತ ಸಮುದಾಯಗಳಿಗೆ ಮೀಸಲಾತಿ ಒದಗಿಸುವ ದೃಷ್ಟಿಯಿಂದ ಎಲ್.ಜಿ. ಹಾವನೂರರ ನೇತೃತ್ವದಲ್ಲಿ ಹಿಂದುಳಿದ ವರ್ಗಗಳ ಆಯೋಗ ರಚಿಸಿ ಗರಿಷ್ಠ ಪ್ರಮಾಣದ ಮೀಸಲಾತಿ ಕೊಡ ಮಾಡಿದ ಧೀಮಂತನಾಯಕರಾಗಿದ್ದಾರೆ. ಅಷ್ಟೇ ಅಲ್ಲದೆ ಉಳುವವನೇ ಭೂಮಿಯ ಒಡೆಯ ಎಂಬ ಉಳುಮೆಯ ಹಕ್ಕು ನೀಡಿದರು. ಆಯಾ, ಜೀತ, ಮಲಪದ್ಧತಿಗೆ ನಿಷೇಧ ಮತ್ತು ಭೂಸುಧಾರಣೆ, ಜನಪರ ಕಲ್ಯಾಣಕ್ರಮಗಳ ಯಶಸ್ವಿಗೆ ಶ್ರಮವಹಿಸಿದ್ದರು.

ಹಿಂದುಳಿದ ವರ್ಗದ ಸಮಸ್ಯೆ ಗುರುತಿಸುವಿಕೆ

ಜಾತಿ-ಜಾತಿಗಳ ಮಧ್ಯೆ ಇರುವ ಸಂಕೀರ್ಣ ಸಮಸ್ಯೆ ಗುರುತಿಸಿ ಪರಿಹಾರ ನೀಡಲು ಪ್ರತಿ ರಾಜ್ಯದಲ್ಲಿ ಶಾಶ್ವತ ಹಿಂದುಳಿದ ಆಯೋಗದ ರಚನೆಗೆ ನ್ಯಾಯಾಂಗ ಮತ್ತು ಸರ್ಕಾರಗಳು ಮುಂದಾಗಿದ್ದ ಪ್ರಭಾವದಿಂದ ೧೯೯೫ರಲ್ಲಿ ಹಿಂದುಳಿದ ವರ್ಗದ ಶಾಶ್ವತ ಆಯೋಗ ಅಸ್ತಿತ್ವಕ್ಕೆ ಬಂದಿತು. ಈ ಆಯೋಗಗಳು ಮನೆ-ಮನೆ ಸಮೀಕ್ಷೆ, ಬೇಡಿಕೆ ಪರಿಶೀಲನೆ, ಸಲಹೆ ಸೂಚನೆ ನೀಡುವುದು. ಈ ವರ್ಗಗಳಿಗೆ ನೀಡಲಾದ ಹಲವು ಯೋಜನೆಗಳ ಮೇಲ್ವಿಚಾರಣೆ ಮತ್ತು ಹೊಸ ಜಾತಿಗಳನ್ನು ಸೇರಿಸಲು ಮತ್ತು ಸೇರಿರುವ ಪಟ್ಟಿಯಿಂದ ತೆಗೆದು ಹಾಕಲು ವರದಿ ನೀಡುವುದು ನೀಡಿದ ವರದಿ ಜಾರಿಗೊಳಿಸುವುದು ಇದರ ಕರ್ತವ್ಯವಾಗಿದ್ದು, ಅದರ ಪರಿಣಾಮ ಪ್ರಸ್ತುತ ೩೮೬ ಜಾತಿಗಳು ಹಿಂದುಳಿದ ವರ್ಗದ ಪಟ್ಟಿಯಲ್ಲಿದ್ದಾರೆ.

ವಂಚಿತ ಸಮುದಾಯಗಳಿಗೆ ಮೀಸಲಾತಿ ನೀಡಿದರೂ ಹಲವು ಕ್ಷುಲ್ಲಕ ಕಾರಣದಿಂದಾಗಿ ದಲಿತ ಜಾತಿಗಳು ತಮ್ಮ ತಮ್ಮಲ್ಲೇ ಒಡೆದು ಹೋಳಾಗುತ್ತಿರುವುದು ಆತಂಕದ ವಿಷಯವಾಗಿದೆ. ಏಕೆಂದರೆ ಇರುವ ಮೀಸಲಾತಿ ಪ್ರಮಾಣ ಕಡಿಮೆ ಸಮುದಾಯ ಹೆಚ್ಚಿರುವ ಕಾರಣದಿಂದಾಗಿನ ಅಲ್ಪ ಸ್ವಲ್ಪ ಮೀಸಲಾತಿ ಕೆಲವೆ ಜಾತಿಗಳಿಗೆ ದೊರೆಯುತ್ತಿದೆಂಬ ಕಾರಣಕ್ಕಾಗಿ ಒಳಮೀಸಲಾತಿಗಾಗಿ ವಾಲ್ಮೀಕಿ, ಮಾದಿಗ, ದಂಡೋರ ಮುಂತಾದವು ಪ್ರತ್ಯೇಕ ಹೋರಾಟಕ್ಕಿಳಿದು ಆಂಧ್ರದಲ್ಲಿರುವಂತೆ ಕರ್ನಾಟಕದಲ್ಲಿ ಒಳಮೀಸಲಾತಿಗಾಗಿ ಹೋರಾಟ ನಡೆಯುತ್ತಿದೆ. ಒಳಮೀಸಲಾತಿಯ ಸಾಧಕ-ಬಾಧಕಗಳನ್ನು ಕೆಲವು ಆಯೋಗಗಳು ಅಧ್ಯಯನಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿದರೂ ನ್ಯಾಯ ಸಿಕ್ಕಿಲ್ಲ. ಹೋರಾಟ ನಿಂತಿಲ್ಲ.

ಜಾತಿ ವ್ಯವಸ್ಥೆಯಿಂದ ಹಲವು ಅವಕಾಶದಿಂದ ವಂಚಿತರಾಗಿರುವುದು ಒಂದು ದುರಂತವಾದರೆ ಎರಡನೆಯ ದುರಂತ ಪ್ರತಿಭೆ, ಅನುಭವ, ಅಂಕಗಳಿಕೆ ಎನ್ನುವಂತಹವು ದಲಿತರನ್ನು ಮತ್ತಷ್ಟು ಕ್ಷೀಣಿಸಿವೆ. ಕಾರಣ ವ್ಯವಸ್ಥೆಯ ಇವೆಲ್ಲವುಕ್ಕೂ ಮೆರಿಟ್ ಅಂತಿಮ ಆದರೆ ಮೆರಿಟ್ ಹಿಡಿಯಲಿಕ್ಕೆ ಪೂರಕಶಕ್ತಿ ಬೇಕು. ಪೂರಕ ಶಕ್ತಿ ಇಲ್ಲದಿರುವಾಗ ಮೆರಿಟ್ ಬರುವುದಾದರೂ ಹೇಗೆ? ಇಂತದ್ದೆ ಒಂದು ಕಾರಣದಿಂದ ಈ ಹಿಂದೆ ಮೈಸೂರು ಸಂಸ್ಥಾನದಲ್ಲಿ ಪ್ರತಿಭೆ ಸಾಮರ್ಥ್ಯವೇ ಅಂತಿಮವೆಂದು

ಯಾವುದೆ ಕಾರಣಕ್ಕೂ ಮೀಸಲಾತಿ ಕೊಡಬಾರದೆಂದು ಸರ್.ಎಂ. ವಿಶ್ವೇಶ್ವರಯ್ಯನವರು ರಾಜಿನಾಮೆ ನೀಡಿದರು. ಆದರೂ ಮೈಸೂರು ಮಹಾರಾಜರ ಉದಾತ್ತ ನಿಲುವಿನಿಂದಾಗಿ ಮೀಸಲಾತಿ ಜಾರಿಯಾಯಿತು.

ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಇತರೆ ವೃತ್ತಿಪರ ಶಿಕ್ಷಣಗಳಲ್ಲಿ ನೀಡುವ ಮೀಸಲಾತಿಗೆ ಹಲವರ ವಿರೋಧವಿದೆ ಹಾಗೂ ಬಡ್ತಿ ಮೀಸಲಾತಿ ಸಂಬಂಧದಲ್ಲಿಯೂ ದಲಿತ ಮತ್ತು ಹಿಂದುಳಿದವರಿಗೆ ಅನ್ಯಾಯವಾಗಿರುವುದು ವಾಸ್ತವ, ಇಂತಹ ಅನ್ಯಾಯದ ವಿರುದ್ಧ ೧೯೭೮ರ ಮುಂಬಡ್ತಿಯ ಕಾರಣಕ್ಕಾಗಿ ಇತಿಹಾಸದಲ್ಲಿ ಮೊದಲ ಬಾರಿ ಹಿಂದುಳಿದ ಮತ್ತು ದಲಿತರೊಂದಿಗೆ ಒಗ್ಗಟ್ಟಿನಿಂದ ಸಾಮಾಜಿಕ ನ್ಯಾಯಪರವಿರುವ ಸಮುದಾಯಗಳು ಹೋರಾಡಿದ್ದನ್ನು ಕಾಣುತ್ತೇವೆ.

ಡಿ.ಎಸ್.ಎಸ್.ನ ಎರಡು ಬಣದವರು, ಹಿಂದುಳಿದ, ಅಲ್ಪಸಂಖ್ಯಾತ, ದಲಿತರ ಬೃಹತ್ ರ್‍ಯಾಲಿಯನ್ನು ಆಯೋಜಿಸಿ ಬಹುಜನರನ್ನು ಒಗ್ಗೂಡಿಸಿ ನ್ಯಾಯಕ್ಕಾಗಿ ಒತ್ತಡ ತರಲಾಯಿತು. ಇದೇ ಸಮಯದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರಾದ ಮುಸ್ಲಿಂ ಮತ್ತು ಕ್ರೈಸ್ತರಿಗೆ ಜನಸಂಖ್ಯೆಗೆ ಅನುಗುಣವಾಗಿ ಸಿಗಬೇಕಾದ ನ್ಯಾಯಕ್ಕಾಗಿ ಇದೇ ರ್‍ಯಾಲಿಯಲ್ಲಿಯೆ ಒತ್ತಡ ತರಲಾಯಿತು.

ಒಟ್ಟಾರೆ ದಲಿತರಿಗೆ ಶಿಕ್ಷಣ ದೊರೆತಾಗ ರಾಷ್ಟ್ರದಲ್ಲಿ ಸಮಾನತೆ ಬರುವುದು ಮತ್ತು ಆ ಸಮಾನತೆ ಬರುವವರೆಗೂ ಮೀಸಲಾತಿ ಮುಂದುವರಿಯುವುದು ಅವಶ್ಯ. ಹಾಗಾಗಿ ಕೆಲವು ಹೋರಾಟಗಾರರು ಮತ್ತೆ ಕೆಲವು ಹೋರಾಟಗಾರರ ಕಾಲೆಳೆಯುವುದನ್ನು ಬಿಟ್ಟು ಒಬ್ಬರಿಗೊಬ್ಬರು ಸಹಕಾರದಿಂದ ದಲಿತರ, ಹಿಂದುಳಿದವರ, ಅಲ್ಪಸಂಖ್ಯಾತರ ನೋವುಗಳಿಗೆ ಸ್ಪಂದಿಸಿ ತಾವುಗಳೂ ಪರಿವರ್ತನೆಯಾಗಿ ಇತರರನ್ನೂ ಪರಿವರ್ತನೆಯೆಡೆಗೆ ಸಾಗಿಸಿದರೆ ಮಾತ್ರ ಸಂಘರ್ಷಾತ್ಮಕ ಸಮಾಜವಿರಲು ಅಸಾಧ್ಯವೆಂಬುದನ್ನು ತೆಲಗಾವಿಯವರ ಆಶಯವಾಗಿದೆ.

ಮಹಿಳಾ ಅಧ್ಯಯನ

೧೯೮೬ರಲ್ಲಿ ದಲಿತ ಮಹಿಳೆಯರನ್ನು ಒಗ್ಗೂಡಿಸಿ ಸ್ವಾವಲಂಬಿ ಬದುಕಿಗಾಗಿ ಮಾಡಬಹುದಾದ ಕಾರ್ಯಗಳನ್ನು ತರಬೇತಿ ರೂಪದಲ್ಲಿ ನೀಡಲಾಗಿ ಈ ತರಬೇತಿಯಲ್ಲಿ ಹಲವು ಮಹಿಳೆಯರು ಸೇರಿದ್ದರು. ಈ ತರಬೇತಿಯಲ್ಲಿ ದಲಿತ ಮಹಿಳೆಯರು ಮಾತ್ರ ಭಾಗವಹಿಸದೆ ದಲಿತರನ್ನು ಹೊರತುಪಡಿಸಿಯೂ ಈ ತರದ ತರಬೇತಿಯನ್ನು ಮಹಿಳಾ ಸಮೂಹ ಮೆಚ್ಚಿಕೊಂಡವರಿದ್ದಾರೆ. ಹತ್ತು ಹಲವು ಕಾರ್ಯಗಳಿಗೆ ತಯಾರಿ ಮಾಡಲು ಮಹಿಳೆಯರ ರಾಜ್ಯ ಸಮಿತಿಯನ್ನು ರಚಿಸಲಾಯಿತು. ೧೯೮೯ರಲ್ಲಿ ನಡೆದ ೨ನೇ ಶಿಬಿರದಲ್ಲಿ ರಾಜ್ಯ ಸಂಚಾಲಕಿ ಓಬ್ಬವ್ವ, ಉಡಸಲಮ್ಮ, ಗಂಡೋಬವ್ವ ನಾಗತಿ, ಆರ್. ಭಾರತಿ ರಾಜಣ್ಣ ಮತ್ತು ಸಂಘಟನಾ ಸಂಚಾಲಕಿ ಕೆ. ಗಂಗಮ್ಮ ಕೆಂಪಯ್ಯರವರ ಅವಿರತ ಶ್ರಮದಿಂದಾಗಿ "ಸ್ತ್ರೀಯು ಖಾಸಗಿ ಆಸ್ತಿ ಅಲ್ಲ" ಎಂಬ ವಾತಾವರಣ ಸೃಷ್ಟಿಸಿದರು ಹಾಗೂ ಅಂತಹ ಸಾಮಾಜಿಕ ಮೌಢ್ಯ ಮತ್ತು ಜಾತಿಯಿಂದ ಹೊರಬರಬೇಕು ಎಂಬುದು ಮತ್ತು ಆಡಳಿತವು ಒಳಗೊಂಡಂತೆ ಎಲ್ಲಾ ಕ್ಷೇತ್ರಗಳಲ್ಲಿ ಭಾಗವಹಿಸಿ ಯಶಸ್ಸು ಸಾಧಿಸಬೇಕೆಂಬ ಕೂಗು ಮೊಳಗಿಸಿದರು.

ಹೆಂಡ ಮತ್ತು ಸರಾಯಿ ನಿಲ್ಲಿಸಿ ಅದರಿಂದಾಗುವ ಅನಾಹುತ ತಪ್ಪಿಸುವುದು ಮತ್ತು ಇವರ ಅಭಿವೃದ್ಧಿಗಾಗಿ ಹೋಬಳಿಗೊಂದು ವಸತಿಶಾಲೆ, ಗೃಹಕೈಗಾರಿಕೆ ಸ್ಥಾಪಿಸುವುದು. ದೇವದಾಸಿ ಪದ್ಧತಿ, ಬೆತ್ತಲಸೇವೆ, ಮಹಿಳೆಯ ಕೊಲೆ, ಅತ್ಯಾಚಾರ, ಬಹಿಷ್ಕಾರ, ದೌರ್ಜನ್ಯ ತಡೆಗಟ್ಟಲು ವಿಶೇಷ ಕೋರ್ಟ್ ಸ್ಥಾಪನೆಗೆ ಒತ್ತಾಯ ಹಾಗೂ ಪುರುಷರಿಗೆ ಸಮಾನವಾದ ವೇತನ ಮತ್ತು ಕೂಲಿಗಾಗಿ ಒತ್ತಾಯ ಮುಂತಾದವುಗಳನ್ನು ಮಹಿಳೆಯರು ವಿವಿಧ ಕಾರ್ಯಕ್ರಮಗಳ ಮೂಲಕ ನಡೆಸಿಕೊಂಡು ಬಂದಿದ್ದನ್ನು ತೆಲಗಾವಿಯವರು ಅಧ್ಯಯಿನಿಸಿ ನಮ್ಮೆದುರಿಟಿದ್ದಾರೆ.[೩]

ಬುಡಕಟ್ಟುಗಳು ಮತ್ತು ಪಾಳೆಯಪಟ್ಟುಗಳು ಅಧ್ಯಯನ

ಕರ್ನಾಟಕದ ಇತಿಹಾಸವನ್ನು ಭಿನ್ನವಾಗಿ ಶೋಧಿಸಬೇಕೆಂದು ಬಯಸುವವರಲ್ಲಿ ತೆಲಗಾವಿಯವರು ಪ್ರಮುಖರು. ಏಕೆಂದರೆ ಪ್ರಾಚೀನ ಯುಗದಲ್ಲಿ ಜೀವಿಸಿದ್ದ ಜನಸಮುದಾಯಗಳಲ್ಲಿ ಮರುಶೋಧದ ಪ್ರಯತ್ನ ಬೇಕೇ ಬೇಕು. ಕಾರಣ ಸಮಕಾಲೀನ ಮಾನವನಿವತ್ತು ಸ್ವಾರ್ಥಿಯಾಗಿದ್ದಾನೆ. ಎಲ್ಲವನ್ನು ವ್ಯವಹಾರದ ದೃಷ್ಟಿಯಿಂದಲೇ ನೋಡುತ್ತಿದ್ದಾನೆಯೆ ಹೊರತು ಮಾನವೀಯ ನೆಲೆಯಲ್ಲಿ ನೋಡುವಲ್ಲಿ ಏಕೆ ಹಿಂದೆ ಬಿದ್ದಿದ್ದಾನೆ. ಇದಕ್ಕೆ ಕಾರಣ ಏನಿರಬಹುದು ಎಂಬಂತಹ ಹತ್ತಾರು ಪ್ರಶ್ನೆಗಳನ್ನಿಟ್ಟುಕೊಂಡೆ ಮಾನವನ ವಿಕಾಸ ಪ್ರಕ್ರಿಯೆ ಅರಿಯಲು ಮುಂದಾಗಿದ್ದಾನೆ. ಹಾಗಾದರೆ ಪ್ರಾಚೀನ ಮಾನವ ಮಾತ್ರ ಈಗಿನ ಮಾನವನಂತಿರದೆ ಶ್ರಮಜೀವಿಯಾಗಿದ್ದ ಮತ್ತು ಸಮಾನತೆಯ ಪ್ರತಿಪಾದಕನಾಗಿದ್ದ ಎಂಬ ಕುತೂಹಲ ಹೆಚ್ಚುತ್ತಲೆಯಿದೆ.

ದಕ್ಷಿಣ ಭಾರತದಲ್ಲಿ ಮೌರ್ಯರ ಆಡಳಿತದಿಂದ ವಿಜಯನಗರ ಆಡಳಿತದ ಕಾಲಾವಧಿತನಕ ಇತಿಹಾಸ ಹೇಗೆ ನಡೆದು ಬಂದಿದೆ ಎಂಬುದನ್ನು ಇತಿಹಾಸಕಾರರು ಹಲವು ಗ್ರಂಥಗಳ ರೂಪದಲ್ಲಿ ಕೊಟ್ಟಿರುವರು. ಆದರೆ ಇವರು ಕೊಟ್ಟಂತ ಇತಿಹಾಸದಲ್ಲಿ ಕೇವಲ ರಾಜ, ಮಂತ್ರಿ, ಶ್ರೀಮಂತ, ಅಧಿಕಾರಿ ಇತ್ಯಾದಿ ಪ್ರತಿಷ್ಠಿತರ ಬಗೆಗೆ ತಿಳಿಸುವುದೆ ವಿನಹ ಇವರೆಲ್ಲರನ್ನು ಸಲಹುವವನಾದ್ದು ಬೆವರು ಸುರಿಸುವ ಅಲಕ್ಷಿತರು ಅಲಕ್ಷ್ಯವಾಗಿಯೆ ಇತಿಹಾಸದಲ್ಲಿ ಉಳಿದುಕೊಳ್ಳಲು ಕಾರಣ ನಿಗೂಢವಾಗಿದೆ. ಒಬ್ಬ ರಾಜರ ಬಗ್ಗೆ ಹಿನ್ನೆಲೆ-ಮುನ್ನಲೆ ಹೇಳುವ ಇತಿಹಾಸ ಅಲಕ್ಷಿತರಿಗೂ ಹಿನ್ನೆಲೆ-ಮುನ್ನಲೆ ಇರುವುದು ಸತ್ಯವಾದರು. ಅವಿತಿರುವ ಸತ್ಯ ಹೊರತರಲು ಇತಿಹಾಸದ ನಿಷ್ಠೆ ಹೊಂದಿರುವ ಚರಿತ್ರೆಯ ಸಂಶೋಧಕರು ಬೇಕು, ಕೆಲವರ ಪ್ರಕಾರ ರಾಜರ ಇತಿಹಾಸಕ್ಕೆ ದಾಖಲೆಯೆ ಸಾಕ್ಷಿಯಾಗುತ್ತವೆ ಎನ್ನುತ್ತಾರೆ. ಅಂತಹ ದಾಖಲೆಗಳು ಅವರಿಂದಲೆ ಸೃಷ್ಟಿಯಾದ ದಾಖಲೆ ಆಗಿರಬಹುದು. ಶಾಸನ ಆಗಿರಬಹುದು, ಗ್ರಂಥವಾಗಿರಬಹುದು. ಕೆಲವು ವಂಶಾವಳಿ ದಾಖಲೆಗಳು ಸತ್ಯ ಶೋಧಿತವಾಗುವುದು ವಿರಳ. ಆದರೆ ಅಲಕ್ಷಿತರ ಇತಿಹಾಸ ರಚನೆಗೆ ಬೇಕಾದ ಸಾಕ್ಷಿ, ಆಧಾರವಿಲ್ಲದ ಕಾರಣ ಅಲಕ್ಷಿತರ ಚರಿತ್ರೆಯನ್ನು ನಿರಾಕರಿಸುವ ಸಂಶೋಧಕರು ನಮ್ಮೊಂದಿಗಿದ್ದಾರೆ. ದಾಖಲೆಗಳಿಲ್ಲದ ಚರಿತ್ರೆ ಡೋಂಗಿ ಎಂತಲೂ ಅದೇ ಅಂತಿಮ ಸತ್ಯವೆಂದು ನಂಬಿಸಿದ್ದಾರೆ. ಆದರೆ ಇತಿಹಾಸವನ್ನು ಭಿನ್ನವಾಗಿ ಗುರುತಿಸುವುದೆಂದರೆ, ಇಂತಹ ಸಿದ್ಧಗೊಂಡ ಆಕರಗಳು ಮಾತ್ರ ಅನಿವಾರ್ಯವಲ್ಲದೆಯೂ. ಈಗಾಗಲೆ ಇರುವ ಮೌಖಿಕ ದಾಖಲೆಗಳಾದ ಜನಪದರು, ಕಂಡುಕೊಂಡ, ನೋಡಿದ, ಕೇಳಿದ, ಅಂದಿನ ಸಾಮ್ರಾಟರ ಅರಸರ ವೈಭವ,

ಕೀರ್ತಿ, ಹೋರಾಟ, ತ್ಯಾಗ ಇತ್ಯಾದಿಗಳ ಮೂಲಕ ದೊರೆಯುವ ಆಕಾರದೊಂದಿಗೆಯೆ ಚರಿತ್ರೆ ರಚಿಸಿದರೆ ಸಾಧ್ಯವಾದಷ್ಟು ಸತ್ಯತೆಯಿಂದ ಕೂಡಿರುತ್ತದೆ. ಅಂತಹ ಇತಿಹಾಸವು ವಸ್ತುನಿಷ್ಠೆ ಹಾಗೂ ವಿಶ್ವಾಸದಿಂದಲೂ ಕೂಡಿರಬಹುದಾಗಿದೆ. ಮೌಖಿಕವಾಗಿ ಅಭಿವ್ಯಕ್ತಪಡಿಸುವ ಅಭಿವ್ಯಕ್ತಿಯಿಂದಲೇ ಇತಿಹಾಸ ಬರಹಕ್ಕೆ ಬಳಸಿಕೊಳ್ಳುವ ಜಾಣ್ಮೆ ಬೇಕಾಗುವುದು. ಇಂತಹ ಇತಿಹಾಸ ಅಥವಾ ಚರಿತ್ರೆ ಅಧ್ಯಯನಿಸುವಾಗ ಸಾಧ್ಯವಾದಷ್ಟು ಜಾಗತಿಕ ಸಿದ್ಧಾಂತಕ್ಕಿಂತ ದೇಶೀತನದ ದೃಷ್ಟಿಕೋನ ಅಗತ್ಯವಿದೆ. ನಿರ್ದಿಷ್ಟ ವಿಷಯ ಶೋಧಿಸುವ ಹಾಗೂ ಪ್ರಚಲಿತ ಇತಿಹಾಸ ಶೋಧಿಸುವ ಸಲುವಾಗಿ, ಸ್ಥಳೀಯವಾಗಿ ದೊರೆಯುವ ಮೌಖಿಕ ಆಚರಣೆ, ನಂಬಿಕೆ, ಭಾಷೆ, ಕೆಲವರ ಬಗ್ಗೆ ಹೊಂದಿರುವ ಭಾವ ಸಂಬಂಧಿ ಕಥನಗಳು ಇತಿಹಾಸ ರಚನೆಗೆ ಬಹುಮುಖ್ಯವಾಗಿವೆ. ಅಂಥವುಗಳನ್ನು ಕೆಲವು ವಿಧಾನಗಳ ಮೂಲಕ ವಿಶ್ಲೇಷಿಸಿ ನಿಖರತೆ ಕಂಡುಕೊಳ್ಳಬೇಕಾಗುವುದು.

ಇತಿಹಾಸ ಸಂಶೋಧನಾ ಸಂದರ್ಭದಲ್ಲಿ ಪ್ರಾಚೀನ ಬುಡಕಟ್ಟುಗಳು, ಕಾಡುಮೇಡು, ಜನಾಂಗದತ್ತ ಸಂಶೋಧನಾ ಮನಸ್ಥಿತಿ ಬದಲಾಯಿಸಿಕೊಂಡಾಗ, ಅನ್ವೇಷಿಸಿದಾಗ ಅನೇಕ ಆಕರಗಳು ದೊರೆಯುವವು. ಏಕೆಂದರೆ ಸಂಶೋಧಕನಾದವನು ಒಪ್ಪಿತ ಸಿದ್ಧಾಂತದ ಆಚೆಯು ಅನ್ವೇಷಿಸುವ ದೂರ ದೃಷ್ಟಿ ಇಟ್ಟುಕೊಂಡು ಕೃಷಿ ಮಾಡಿದರೆ ಯಾವುದೆ ಒಂದು ವಿಷಯಕ್ಕೆ, ಯಾವುದೆ ಒಂದು ಸಂದರ್ಭಕ್ಕೆ ಸಂಬಂಧಪಟ್ಟಿರುವುದು. ಆ ಸಂಬಂಧದ ಒಂದು ಎಳೆ ದೊರೆತರೆ ಸಾಕು. ಮತ್ತೊಂದು ರೀತಿಯ ಸಂಶೋಧನಾ ಪಯಣ ಮುಂದುವರಿಯುವುದು ಇವೆಲ್ಲಕ್ಕೂ ಕಾರಣ. ಮೌಖಿಕ ಮತ್ತು ಸ್ಥಳೀಯ ಜಾನಪದೀಯ ಜನ ಸಂಬಂಧದಲ್ಲಿ ಅಡಗಿರುವ ಗುಪ್ತ ಆಕರಗಳು ಮುಖ್ಯವಾಗಿವೆ.

ಬುಡಕಟ್ಟು ಸಮುದಾಯಗಳ ಹಿನ್ನೆಲೆಯಿಂದ ಬಂದ ೧೨ನೇ ಶತಮಾನಕ್ಕೆ ಸೇರಿದ ಆಂಧ್ರದ ಕಾಕತೀಯ ನಾಯಂಕರ ಒಕ್ಕೂಟವೆಂಬ ಸ್ಥಳೀಯ ಆಡಳಿತ ವ್ಯವಸ್ಥೆ ಹುಟ್ಟು ಹಾಕಿದರು. ಇದು ದಕ್ಷಿಣ ಭಾರತದ ಮೊದಲ ಹಿಂದೂ ಸಾಮ್ರಾಜ್ಯವು ಆಡಳಿತ ವಿಭಾಗಕ್ಕೆ ಪರಿಚಯಿಸಿದ ಹೊಸ ವ್ಯವಸ್ಥೆ. ಈ ವ್ಯವಸ್ಥೆಯಲ್ಲಿದ್ದವರು, ಕಮ್ಮಾರ, ರೆಡ್ಡಿ, ಬೇಡ ಮುಂತಾದ ಬುಡಕಟ್ಟಿನ ಹಿನ್ನೆಲೆಯುಳ್ಳ ಸಮುದಾಯ, ಆಂಧ್ರದ ಕಾಕತೀಯರು ರಾಜಪ್ರಭುತ್ವದ ಆಡಳಿತದ ಒಂದೇ ದೃಷ್ಟಿ ಇರಿಸಿಕೊಳ್ಳದೆ ದಾನದತ್ತಿ ಮತ್ತು ಕೆಲವು ಜನಪ್ರಿಯ ಕಾರ್ಯಕ್ರಮಗಳ ಮೂಲಕ ವಿಶಿಷ್ಟರಾಗಿದ್ದಾರೆ. ವಿಜಯನಗರ ಸಾಮ್ರಾಜ್ಯವು ಅಷ್ಟೊಂದು ಸಂಪತ್ತು ಭರಿತ ಮತ್ತು ಶಿಸ್ತಿಗೆ ಒಳಪಡಲಿಕ್ಕೆ ಕಾರಣವೆ ನಾಯಂಕರ ಆಡಳಿತ ಒಕ್ಕೂಟ. ಆಂಧ್ರದ ಕಾಕತೀಯರು ನಾಯಂಕರ ಒಕ್ಕೂಟದ ಮೂಲಕವೆ ವಿಜಯನಗರ ಆಡಳಿತ ಪ್ರಕ್ರಿಯೆಯಲ್ಲಿ ಯೋಧರಾಗಿ, ಸಾಮಂತರಾಗಿ, ಕೌಶಲ್ಯಗಾರರಾಗಿ, ಸೈನಿಕರಾಗಿ, ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸಿದವರು. ವಿವಿಧ ಪ್ರಾಂತ್ಯಗಳಲ್ಲಿ ಸಾಮಂತ ಪಾಳೆಯಗಾರ, ದಂಡನಾಯಕ, ಮಂಡಳೇಶ್ವರರಾಜ, ಮಹಾರಾಜ, ಅರಸ, ಒಡೆಯರ್ ದೊರೆ ಇತ್ಯಾದಿಯಾಗಿ ಕರೆಯಿಸಿಕೊಳ್ಳುತ್ತಿದ್ದರು. ಇವರ ಪ್ರಾಬಲ್ಯಕ್ಕೆ ಉದಾಹರಣೆ ಎಂದರೆ ಹೈದರ್ ನಾಮ ಈ ದಾಖಲೆ ಪ್ರಕಾರ ಹೈದರ್ ಅಲಿಖಾನ್‌ನ ಆಡಳಿತ ಸಂದರ್ಭದಲ್ಲಿ

೩೦೦ಕ್ಕೂ ಅಧಿಕ ಪಾಳೆಯಗಾರರಿದ್ದರೆಂದರೆ ಸ್ಥಳೀಯ ಆಡಳಿತ ವೈಖರಿಯ ಮಹತ್ವ ತಿಳಿಯುತ್ತದೆ. ಇಂದಿಗೂ ವಿಜಯನಗರದ ಭಾಗಗಳಲ್ಲಿ ನಾಯಂಕರ ವ್ಯವಸ್ಥೆಯು ಜೀವಂತವಾಗಿರುವ ಸಂಸ್ಥಾನಗಳು ದೊರೆಯುತ್ತವೆ. ಇಂಥವರ ಕುರಿತಾಗಿ ಅಧ್ಯಯನ ಮಾಡಿದವರು ಬೆರಳೆಣಿಕೆಯ ಸಂಶೋಧಕರಿದ್ದಾರೆ. ಹಾಗಾಗಿ ನಾಯಂಕರ ವ್ಯವಸ್ಥೆಯ ಕಾರ್ಯಕಲಾಪಗಳನ್ನು ಭಿನ್ನ ನೆಲೆ ಕಂಡುಕೊಂಡು ಸಂಶೋಧಿಸಿದವರು ತೆಲಗಾವಿಯವರು. ತೆಲಗಾವಿಯವರು ಇತರರ ಹಾಗೆ ಸಾಮ್ರಾಜ್ಯ ಅಧಿಕಾರಶಾಹಿ ಧೋರಣೆ, ದರ್ಪ, ದೌರ್ಜನ್ಯ ಹೊರತುಪಡಿಸಿ ಬ್ರಿಟಿಷರ ವಸಾಹತುಶಾಹಿಯೊಡನೆ, ರಾಜಕೀಯ, ಆರ್ಥಿಕ, ಆಡಳಿತಶಾಹಿ, ಆಡಳಿತ ವ್ಯವಸ್ಥೆಯ ಜವಾಬ್ದಾರಿ ಹಾಗೂ ವಿಜಯನಗರ ಪತನನಂತರ ಸ್ಥಳೀಯ ಸ್ವಾಯತ್ತತೆ ಆಡಳಿತದ ವೈಶಿಷ್ಟ್ಯ ಮತ್ತು ಸಾಮರ್ಥ್ಯ ತಿಳಿಯಲು ಮತ್ತು ತಿಳಿಸಲು ಅಲಕ್ಷ್ಯತೆಗೆ ಒಳಗಾದ ಪಾಳೆಯಗಾರರ ಸಾಂಸ್ಕೃತಿಕ ಧಾರೆಗಳನ್ನು, ಸ್ಥಳೀಯ ಆಕಾರ ಮತ್ತು ಒಪ್ಪಿತ ಸಿದ್ಧಾಂತಗಳ ಮುಖಾಮುಖಿಯೊಂದಿಗೆ ಮೌಖಿಕ ಆಕರ ಬಳಸಿಕೊಂಡು ಬುಡಕಟ್ಟುಗಳ ಇತಿಹಾಸ ರಚಿಸಲಿಕ್ಕೆ ಶ್ರಮವಹಿಸಿದ ಸಂಶೋಧಕರಾಗಿದ್ದಾರೆ.[೪]

ಕರ್ನಾಟಕ ಬೇಡ ಸಮುದಾಯದ ಇತಿಹಾಸ ಮತ್ತು ಸಂಸ್ಕೃತಿ

೨೦ನೇ ಶತಮಾನದ ಚರಿತ್ರೆಯಲ್ಲಿ ಅಲಕ್ಷಿತ ಸಮುದಾಯಗಳ ಬದುಕನ್ನು ಐತಿಹಾಸಿಕವಾಗಿ ನೋಡುವಂತ ಪ್ರಯತ್ನ ನಡೆಯಿತು. ಹಾಗೆಯೆ ೨೧ನೆಯ ಶತಮಾನದಲ್ಲಿ ಆಧುನಿಕತೆ, ವಿಜ್ಞಾನ, ತಂತ್ರಜ್ಞಾನ ಅಳವಡಿಸಿಕೊಂಡಾಗಲೂ ಕೆಲವು ಸಂಶೋಧಕರು, ಬುಡಕಟ್ಟು ಮತ್ತು ಮಹಿಳೆಯರನ್ನು, ಅಲಕ್ಷಿತರನ್ನು ದಾಖಲಿಸುವ ಹಾಗೂ ನಿಖರವಾಗಿ ಗುರುತಿಸಲು, ಹೊಸ ಆಕರಗಳನ್ನು ಬಳಸಿಕೊಂಡರು. ಆ ಹೊಸ ಆಕರಗಳ ಅಧ್ಯಯನಕಾರರಲ್ಲಿ ತೆಲಗಾವಿಯವರು ಒಬ್ಬರಾಗಿದ್ದಾರೆ.

ಬುಡಕಟ್ಟಿನ ಮೂಲಶೋಧ

ಬುಡಕಟ್ಟಿನ ಒಂದು ಪಂಗಡದವರಾದ ಬೇಡ ಸಮುದಾಯದ ಮೂಲವನ್ನು ಶ್ರೀಯುತರು ಸಂಶೋಧನಾ ಹಿನ್ನೆಲೆಯಲ್ಲಿ ದಾಖಲಿಸುವಂತೆ, ಈ ಸಮುದಾಯವನ್ನು ನಾಯಕ, ನಾಯಕಮಕ್ಕಳು, ವಾಲ್ಮೀಕರು, ವಾಲ್ಮೀಕಿ ಮಕ್ಕಳು, ಬೇಡರು, ಪಾಳೆಯಗಾರರು, ಗುರಿಕಾರರು, ತಳವಾರರು, ರಾಜಪರಿವಾರದವರು, ಕನ್ನಯ್ಯನ ಕುಲದವರು, ದೊರೆಮಕ್ಕಳು ಎಂಬುದಾಗಿ ಕನ್ನಡದಲ್ಲಿ ಗುರುತಿಸುತ್ತಾರೆ. ಆಂಧ್ರದಲ್ಲಿ ಬಾಯಿವಾಳ್ಳು, ಸಂಚಲು, ರಾಜುಲು, ರಾಜಬಿಡ್ಡಲು, ಪಾಳೈಗಾಳು, ಕೊಂಡರಾಜಲು, ಬೋಯಿ ಎಂದು ಗುರುತಿಸುತ್ತಾರೆ. ತಮಿಳಿನಲ್ಲಿ ವ್ಯಾದನ್, ನಾಯ್ಡು, ನಾಯ್ಯರ್, ನಾಯಕನ್, ರಾಜು ಮುಂತಾದ ಹಲವು ನಾಮಗಳಿಂದ ಗುರುತಿಸುತ್ತಾರೆ.

ವಂಶಜರು

ಏಳು ಪಡೆಗಳ ಮೂಲಕ ಒಂದು ಕಿರಾತರ ಬಳಗ ರಚಿಸಿ ಹೊಟ್ಟೆಪಾಡಿಗಾಗಿ ದರೋಡೆ ಮಾಡುತ್ತಿದ್ದರು. ತದನಂತರ ಪರಿವರ್ತನೆ ಹೊಂದಿದರು. ಅದರ ಪರಿಣಾಮವೆ ಹಿಂದುಗಳ ವೀರಮಹಾಕಾವ್ಯವೆಂದೆ ಪ್ರಸಿದ್ಧಿ ಪಡೆದ "ರಾಮಾಯಣ" ಕೃತಿ ರಚಿಸಿ ವಾಲ್ಮೀಕಿ ಎಂದು

ಚಿರಪರಿಚಿತರಾದ ಮಹರ್ಷಿ ವಾಲ್ಮೀಕಿಯೆ ಈ ಕುಲದಲ್ಲಿ ಗುರುತಿಸಿಕೊಳ್ಳುವ ಮಹಾಪುರುಷ, ಬುಡಕಟ್ಟಿನ ಎರಡನೆ ಹಂತದ ಸಂತತಿ ಬೇಡರ ಕಣ್ಣಪ್ಪ, ಶಬರಿ, ಏಕಲವ್ಯ ಮುಂತಾದವರು ಈ ಕುಲದ ಹೆಮ್ಮೆಯ ಪ್ರತೀಕರಾಗಿದ್ದಾರೆ.

ಕುಲನಾಮಗಳು

ಈ ಸಮುದಾಯವನ್ನು ನಾಯಕ, ಊರು ನಾಯಕರು, ಮ್ಯಾಸನಾಯಕರು, ಮಾರಮ್ಮ, ನಾಯಕರು, ಮುತ್ತ್ಯಾಲ ನಾಯಕರು, ಹಾಲು ಬೇಡರು, ಸಂಚುಲು, ಬಿಲ್ಲರು, ರಾಜ ಪರಿವಾರದವರು, ಕೊಂಡರಾಜಲು, ಮುಂತಾದ ಹೆಸರುಗಳಿಂದ ಕರೆಯುವರು. ಆದರೆ ಇವರೆಲ್ಲರ ಮೂಲ ಒಂದೇ ಆಗಿದೆ.

ವೃತ್ತಿ

ಇದೊಂದು ಪ್ರಾಚೀನ ಬುಡಕಟ್ಟು ಸಮೂಹವಾಗಿದ್ದು ಕ್ರಿಶ. ಪೂರ್ವದಿಂದಲೂ ಕಾಡುಮೇಡು, ಬೆಟ್ಟ-ಗುಡ್ಡಗಳಲ್ಲಿ ಪ್ರತ್ಯೇಕವಾಗಿ ಬದುಕುತ್ತಿದ್ದವರು. ನಂತರ ಕಾಲವು ಬದಲಾದಂತೆ ವೃತ್ತಿ-ಪ್ರವೃತ್ತಿಗಳು ಬದಲಾಗಿದ್ದು, ವಿವಿಧ ಕಾಲಗಳಲ್ಲಿ, ವಿವಿಧ ರಾಜಶಾಹಿ ಮನೆತನಗಳಿಗೆ ಸೇವೆ ಸಲ್ಲಿಸಿ ಯೋಧರಾಗಿ ಪರಿವರ್ತನೆಯಾಗಿದ್ದಾರೆ. ಉದಾ:- ರಾಮಾಯಣ, ಮಹಾಭಾರತದಲ್ಲಿ ಸಹದೇವನು ಕೈಗೊಂಡ ದಿಗ್ವಿಜಯದಲ್ಲಿ ದಕ್ಷಿಣದ ಬೇಡ ಅರಸನಿಂದ ಕಾಣಿಕೆ ಪಡೆದು ಕೊಂಡಿದ್ದಾನಂತೆ. ಗಂಗಾ ತೀರದ ಸುತ್ತಮುತ್ತಲ ಪ್ರದೇಶಕ್ಕೆ ಬೇಡ ದೊರೆಯೊಬ್ಬನು ಅಧಿಪತಿಯಾಗಿರುವುದು. ಸೂರ್ಪರಕದಿಂದ ರತ್ನಗಿರಿಯವರೆಗೂ ಬೇಡರ ರಾಜ್ಯಯಿತ್ತೆಂದು ತಿಳಿದು ಬರುವುದು. ಚಾರಿತ್ರಿಕವಾಗಿ ದಕ್ಷಿಣದ ದೇವಗಿರಿ, ವಾರಂಗಲ್ಲು, ದ್ವಾರಸಮುದ್ರ, ಆನೆಗೊಂದಿ, ರಾಮೇಶ್ವರದವರೆಗೆ ಪ್ರಬಲರಾಗಿಯೂ, ಹಿಂದೂ ಯೋಧ ಪಡೆಯಾಗಿ ಸೇವೆಸಲ್ಲಿಸಿದ್ದಾರೆ. ಆನೆಗೊಂದಿಯಲ್ಲಿ ಕಂಪಿಲರಾಯ ಮತ್ತು ಕುಮಾರರಾಮರು ಆಳ್ವಿಕೆ ನಡೆಸಿದ್ದಿದ್ದನ್ನು ಜನರ ಮನಸ್ಸಿನಿಂದ ಅಳಿಸಲಾರದಂತಿದೆ. ಪ್ರಸ್ತುತ ಮೈಸೂರು ರಾಜರ ಬಳಿ ಇರುವ ಸಿಂಹಾಸನ ಈ ಹಿಂದೆ ಕಂಪಿಲರಾಯನದಾಗಿದ್ದಿತ್ತೆಂದು ನಂತರ ಮೊಗಲರ ದಾಳಿಯಿಂದ ಪೆನುಗೊಂಡದಲ್ಲಿದ್ದನ್ನು ವಿದ್ಯಾರಣ್ಯರ ಮೂಲಕ ತರಿಸಿದರು. ನಂತರ ವಿದ್ಯಾರಣ್ಯರು ಹರಿಹರ ರಾಯನನ್ನು ಸಿಂಹಾಸನದ ಮೇಲೆ ಕುಳ್ಳರಿಸಿ ಪಟ್ಟಕಟ್ಟಿದರೆಂದು ತಿಳಿಸುತ್ತದೆ. ಈ ಕಾರಣದಿಂದಾಗಿಯೆ ಆನೆಗೊಂದಿಯೆ ಬೇಡ ಸಮುದಾಯದ ಮೊದಲ ಪಾಳೆಪಟ್ಟು, ನಂತರ ೧೦ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಅಸ್ತಿತ್ವಕ್ಕೆ ಬಂದರು. ೧೨ನೇ ಶತಮಾನದಲ್ಲಿ 'ನಾಯಂಕರ' ವ್ಯವಸ್ಥೆಗೆ ಬುನಾದಿ ಹಾಕಿದ ಆಂಧ್ರದ ಕಾಕತೀಯ ರಾಜ, ರುದ್ರಾಂಬ, ಪ್ರತಾಪರುದ್ರರು, ಪ್ರೋಲಿಯನಾಯಕ, ಕಾಪನಾಯಕ, ಇಂಥವರೆಲ್ಲರೂ 'ನಾಯಂಕರ ಒಕ್ಕೂಟ" ಸ್ಥಾಪಿಸಿ ರಾಜ್ಯಭಾರ ನಡೆಸಿದವರು. ನಂತರ ವಿಜಯನಗರದ ಅರಸರು ಈ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋದರೆಂಬುದು ಹಲವು ದಾಖಲೆಗಳಿಂದ ತಿಳಿಯುತ್ತದೆ. ಹೀಗಾಗಿ ಬೇಡ ಬುಡಕಟ್ಟು ಸಮುದಾಯವು ಆಂಧ್ರ, ತಮಿಳುನಾಡು, ಕರ್ನಾಟಕದಾದ್ಯಂತ ಹರಡಿ ಅಲ್ಲಲ್ಲಿ ಸಾಮ್ರಾಜ್ಯ ಸ್ಥಾಪನೆಗೆ ಮುನ್ನುಡಿ ಬರೆದರು.

ಮಧ್ಯಕಾಲೀನ ಚರಿತ್ರೆಯಲ್ಲಿ ಪಾಳೆಯಗಾರರು ನಿರ್ವಹಿಸಿದ ಪಾತ್ರ ವಿಶಿಷ್ಟ. ಏಕೆಂದರೆ ಮರಾಠರಂತ ರಾಜಪ್ರಭುತ್ವಕ್ಕೆ ನಿಷ್ಠೆ ತೋರಿಸಿದರು ಹಾಗೂ ಅವರಿಗಾಗಿಯೆ ದುಡಿದಿದ್ದರಿಂದಲೇ ಮರಾಠರು ಸುಭದ್ರವಾಗಿ ಆಡಳಿತ ನಡೆಸಲು ಸಾಧ್ಯವಾಯಿತು. ಔರಂಗಜೇಬನಿಗೆ ನೇರ ರಾಜಕೀಯ ಸವಾಲು ಎಸೆದ ಶೂರರಿವರು, ನಂತರದ ಕಾಲಘಟ್ಟಗಳಲ್ಲಿ ಶ್ರೀರಂಗಪಟ್ಟಣದ ನವಾಬ ಹೈದರ್ ಅಲಿಖಾನ್ ಮತ್ತು ಟಿಪ್ಪುಸುಲ್ತಾನನಿಗೆ ಎದುರಾದರು. ಇದನ್ನು ಸಹಿಸದ ಹೈದರ್ ಮತ್ತು ಟಿಪ್ಪುಸುಲ್ತಾನರು ಸ್ಥಳೀಯರನ್ನು ಎತ್ತಿಕಟ್ಟಿ, ಸಂಚು ರೂಪಿಸಿ ಚಿತ್ರದುರ್ಗವನ್ನು ವಶಪಡಿಸಿಕೊಂಡರು. ಕೆಲವರನ್ನು ಸಮಯ ಸಂದರ್ಭಕ್ಕೆ ತಕ್ಕಂತೆ ಬಳಸಿ ಬಿಸಾಡಿದರು. ಮುಂದೆ ಕೋಟೆ ಮತ್ತು ಆಡಳಿತವು ಇಂಗ್ಲಿಷರ ವಶವಾದ ನಂತರ ನಿಧಾನವಾಗಿಯೆ ಕೋಟೆಯ ಆಡಳಿತ ವ್ಯವಸ್ಥೆಯನ್ನು ಹತೋಟಿಯಲ್ಲಿಡಲು ಸಮರ್ಥರನ್ನು ಹರಣ ಮಾಡಲಿಕ್ಕೆ ಶಸ್ತ್ರ ನಿಷೇಧ ಕಾಯ್ದೆ ಹೇರಿದರು. ಹೀಗಾದರೂ ಈ ಬುಡಕಟ್ಟಿನ ಯೋಧರು ನಾಶವಾಗಲಿಲ್ಲ. ಬ್ರಿಟಿಷರ ಆಡಳಿತ ವ್ಯವಸ್ಥೆಯ ವಿವಿಧ ಇಲಾಖೆ, ಆಡಳಿತ ವಿಭಾಗಗಳಲ್ಲಿ ನಿಯೋಜಿತರಾಗಿ ಸೇವೆ ನೀಡಿ ಹಲವು ಪ್ರಯೋಜನ ಪಡೆದುಕೊಂಡರು. ಕರ್ನಾಟಕದಾದ್ಯಂತ ಮತ್ತು ರಾಜ್ಯಗಳ ಇತರೆ ಭಾಗಗಳಲ್ಲಿ ಸಾಕಷ್ಟು ಸಂಖ್ಯೆಯಿದ್ದರು. ಇವರೆಲ್ಲರೂ ಒಗ್ಗೂಡಲಿಲ್ಲ. ಬ್ರಿಟಿಷರನ್ನು ಸದೆ ಬಡಿಯಲು ಆಗಲಿಲ್ಲ. ಮುಂದೆ ಬ್ರಿಟಿಷರು ಪಾಳೆಯಗಾರ ವ್ಯವಸ್ಥೆಯ ವೈಖರಿ ಇಷ್ಟವಾದ ಕಾರಣ ಹೀಗಿರುವ ರೀತಿಯಲ್ಲಿಯೆ ಜಮೀನ್ದಾರಿ ಪದ್ಧತಿ ತಂದಿದ್ದು ವಿಶೇಷ.[೫]

ಕೆಲವು ಇತಿಹಾಸಕಾರರು ಬೇಡರನ್ನು ಕ್ರೂರಿಗಳೆಂದು, ಸುಲಿಗೆಗಾರರೆಂದು, ನರಹಂತಕರೆಂದು ಮೂಢನಂಬಿಕೆಯವರೆಂದು ಬಿಂಬಿಸಿದ್ದಾರೆ. ಆದರೆ ಪಾಳೆಯಗಾರರು ತಮ್ಮ ಆಡಳಿತ ಅವಧಿಯಲ್ಲಿ ವೈಷ್ಣವ ಶೈವಪಂಥಗಳನ್ನು ಸಮನಾಗಿ ನೋಡಿ ಪ್ರೋತ್ಸಾಹ ನೀಡಿದ್ದಾರೆಂಬುದಕ್ಕೆ ಸಾಕಷ್ಟು ಸಾಕ್ಷಿಗಳ ಲಭ್ಯವಿದೆ. ಆದರೆ ಕೆಲವೆ ಕೆಲವರು ಮಾತ್ರ ಇವರುಗಳನ್ನು ಸಾಹಸಿಗರು ನಿಷ್ಠಾವಂತರು, ಅನುಯಾಯಿಗಳು ನಂಬಿಕೆಗೆ ಅರ್ಹರಾದವರೆಂದು ದಾಖಲಿಸುತ್ತಾರೆ. ದಾಖಲಿಸುವಂತ ಸಂದರ್ಭದಲ್ಲಿ ಅಂದಿನ ಸಂದರ್ಭದಲ್ಲಿ ೨೦೦ಕ್ಕೂ ಅಧಿಕ ಪಾಳೆಯಪಟ್ಟುಗಳಿದ್ದವೆಂದು ತಿಳಿಸುತ್ತಾರೆ. ಇದಕ್ಕೆ ಕಾರಣಗಳು ಇವರುಗಳ ಬಗ್ಗೆ ಇರುವ ಅಪವಾದಗಳಿಗೆ ಕಾರಣ ಸಮಗ್ರ ಅಧ್ಯಯನದ ಕೊರತೆ ನಿರ್ದಿಷ್ಟ ತಿಳುವಳಿಕೆಯ ಅಭಾವ ಮತ್ತು ಅಂದಿನ ಕೆಲವು ಇತಿಹಾಸಕಾರರು ಇಂಗ್ಲಿಷರ ಪರವಾಗಿದ್ದರಿಂದಲೇ ಫ್ಯೂಡಲ್ ವ್ಯವಸ್ಥೆಯ ಹರಿಕಾರರೆಂದು ಕರೆಸಿಕೊಂಡಿದ್ದರಿಂದ ಚರಿತ್ರೆಯು ಬೇರೊಂದು ದಿಕ್ಕು ಹಿಡಿದಿದೆ. ಅಪವಾದದ ಚರಿತ್ರೆ ಆಗಬಾರದೆಂಬ ಕಾರಣದಿಂದ ಬೇಡರ ಚರಿತ್ರೆಯನ್ನು ಹಲವು ಆಕರಗಳ ಮೂಲಕ ಗುರುತಿಸಿ ಅಪವಾದ ತಪ್ಪಲಿಕ್ಕೆ ಕಾರಣರಾದವರೆಂದರೆ ಆರ್. ಸತ್ಯನಾಥ ಅಯ್ಯಾರಂ, ಟಿ.ವಿ. ಮಹಾಲಿಂಗಂ, ಕೆ. ರಾಜಯ್ಯನ್, ಸಿ.ಎಸ್. ಶ್ರೀನಿವಾಸಚಾರಿ, ಪಿ.ಬಿ. ರಾಮಚಂದ್ರ, ಬಿ. ಕೇಶವನಾರಾಯಣ, ಕೆ. ವಿಶ್ವನಾಥರಂತಹ ಶೋಧಕರು ಫ್ಯೂಡಲ್ ದೃಷ್ಟಿಕೋನ ಬದಲಾಗಲಿಕ್ಕೆ ಕೆಲವು ಧೋರಣೆಗಳ ಮೂಲಕ ಸಂಶೋಧಿಸಿ ಸತ್ಯ ನಿರೂಪಿಸಿದ್ದಾರೆ.

ಕರ್ನಾಟಕದ ಮಟ್ಟಿಗೆ ಎಂ.ಎಸ್. ಪುಟ್ಟಣ್ಣ, ಹುಲ್ಲೂರು ಶ್ರೀನಿವಾಸ ಜೋಯಿಸ್, ಎಚ್.ವಿ. ವೀರನಾಯಕ ಹರತಿ, ಎಂ.ವಿ. ಚಿತ್ರಲಿಂಗಯ್ಯ, ರೇವಣ್ಣಶಾಸ್ತ್ರಿ, ಕೃಷ್ಣಮೂರ್ತಿ ಹನೂರು,

ಕರಿಶೆಟ್ಟಿರುದ್ರಪ್ಪ, ಮೀರಾಸಾಬಿಹಳ್ಳಿ ಶಿವಣ್ಣ, ವಿರೂಪಾಕ್ಷಿ ಪೂಜಾರಹಳ್ಳಿ, ಆರ್. ರಾಜಣ್ಣ ರಂಗರಾಜವನದುರ್ಗ, ದಳವಾಯಿ ಪರಶುರಾಮ ನಾಯಕ, ಎಚ್.ಜೆ. ದೇಶಪಾಂಡೆ, ಎಚ್.ಎಂ. ಶಂಭುಲಿಂಗಮೂರ್ತಿ, ಅವರೇಶ ಯತಗಲ್, ಎಂ.ಕೆ. ದುರುಗಪ್ಪ, ಎಸ್. ತಿಪ್ಪೇಸ್ವಾಮಿ, ಆರ್. ಶಿವಪ್ಪ, ಟಿ. ಮಂಜುನಾಥ, ಎಂ.ವಿ. ಶ್ರೀನಿವಾಸ, ಎ.ಡಿ. ಕೃಷ್ಣಯ್ಯ, ಆರ್. ಬಾಗೂರೆ ನಾಗರಾಜಪ್ಪ, ಟಿ.ಎನ್. ಗಂಡುಗಲಿ ಮುಂತಾದವರು ಇತಿಹಾಸದ ಗರ್ಭದಲ್ಲಿ ಹಡಗಿರುವ ಸತ್ಯ ಶೋಧಿಸುವಲ್ಲಿ ಪ್ರಯತ್ನ ನಡೆಸುತ್ತಲಿರುವರು.[೬]

ಕರ್ನಾಟಕದಲ್ಲಿ ಸಾಕಷ್ಟು ಬೇಡ ಸಂಸ್ಥಾನಗಳಿದ್ದರೂ ಪ್ರಾದೇಶಿಕತೆಯ ನೆಲೆಯಲ್ಲಿ ಹಲವು ಅಧ್ಯಯನದ ಮಾಹಿತಿಗಳ ಕೊರತೆಗಳಿವೆ. ಕೆಲವರು ಸಾಂಸ್ಕೃತಿಕವಾಗಿ ಚರಿತ್ರೆಯ ಭಾಗವಾಗಿ ದಾಖಲಿಸಿದ್ದಾರಾದರೂ ಅಸ್ಪಷ್ಟವಾಗಿದೆ. ಆದರೆ ರಾಜಕೀಯ, ಶೈಕ್ಷಣಿಕ, ಆರ್ಥಿಕ ನೆಲೆಗಳಿಂದಲೂ ಈ ಬುಡಕಟ್ಟು ಜನಸಮುದಾಯಗಳನ್ನು ಪ್ರಮುಖರೆಂದು ತಿಳಿದು ಹೊಸ ತರದ ಆಲೋಚನೆ ಯೊಂದಿಗೆ ಸ್ಥಳೀಯ ಆಕರಗಳನ್ನು, ಅಳವಡಿಸಿಕೊಂಡು ಶೋಧಿಸುತ್ತಾ ಹತ್ತಾರು ಹೊಸ ಪರಿಕಲ್ಪನೆ ಕಟ್ಟಿ ಕೊಟ್ಟುವರೆಂದರೆ ತೆಲಗಾವಿಯವರು. ಬುಡಕಟ್ಟಿನ ಒಂದು ಸಮುದಾಯ ಶೋಧಿಸಲಾಗಿ ಶೋಧನೆಯ ಮೂಲಕವೆ ನೂರಾರು ತರಹದ ಮಾಹಿತಿ ಒದಗಿಸಿದವರಾಗಿದ್ದಾರೆ.

೬.೩. ಏಕೀಕರಣೋತ್ತರ ಹಿಂದುಳಿದ ವರ್ಗಗಳ ಆಯೋಗಗಳ ರಚನೆ

*** ಕೇಂದ್ರ ಸರ್ಕಾರದ ಕಾಕಾಸಾಹೇಬ್(ಕೇಂದ್ರದಲ್ಲಿ) ಕಾಲೇಲ್ಕರ್‌ರ ಹಿಂದುಳಿದ ವರ್ಗಗಳ ಆಯೋಗ- ೧೯೫೩-೧೯೫೫**

ಕಾಕಾಸಾಹೇಬ್ ಕಾಲೇಲ್ಕರ್ ಅಧ್ಯಕ್ಷರಾಗಿ, ಎನ್.ಎಸ್. ಕಾಜ್ರೋಲ್ಕರ್, ಭೀಕಾಬಾಯಿ, ಶಿವದಯಾಲಸಿಂಗ್, ಡರಾಸಿಯಾ, ರಾಜೇಶ್ವರ್‌ಪಟೇಲ್, ಅಬ್ದುಲ್‌ಬಯ್ಯಾ ಅನ್ಸಾರಿ, ಟಿ. ಮರಿಯಪ್ಪ, ಲಾಲ ಜಗನ್ನಾಥ್, ಆತ್ಮಸಿಂಗ್ ನಾಮದಾರಿ, ಎನ್.ಆರ್.ಎಂ. ಸ್ವಾಮಿ ಹಾಗೂ ಅರುಣಾಂಗ್‌ಶೂ ಸದಸ್ಯರಾಗಿ, ದೇಶಾದ್ಯಂತ ಅಧ್ಯಯಿನಿಸಿ ೨೩೯೯ ಜಾತಿಗಳನ್ನು ಗುರುತಿಸಿದರು. ಆನಂತರ ಮಾರ್ಪಾಡುಗೊಳಿಸಿ ಆ ಸಂಖ್ಯೆಯನ್ನು ೯೩೦ ಸಂಖ್ಯೆಗೆ ಸೀಮಿತಗೊಳಿಸಿ ಜಾತಿಗೆ ಆಧಾರದ ಮೇಲೆ ಗುರುತಿಸಿ ಜಾತಿ ಮೀಸಲಾತಿಗೆ ಶಿಫಾರಸ್ಸು ಮಾಡಿತು. ನಂತರ ರಾಜ್ಯಗಳ ಪುನರ್‌ವಿಂಗಡಣೆಯಿಂದಾಗಿ ಕೆಲವು ರಾಜ್ಯದಲ್ಲಿ ಗುರುತಿಸಿಕೊಂಡ ಜಾತಿ ಮತ್ತೊಂದು ರಾಜ್ಯದಲ್ಲಿ ಬೇರೆಯಾಗಿ ಗುರುತಿಸಿಕೊಂಡಿದ್ದರಿಂದ ಜನಸಾಮಾನ್ಯರು ವಿರೋಧಿಸಿದರು. ಈ ವರದಿ ಜಾರಿಗೆ ಬರಲಿಲ್ಲ.

ಕೇಂದ್ರದ ಎರಡನೆ ಹಿಂದುಳಿದ ವರ್ಗಗಳ ಆಯೋಗವು ಬಿ.ಪಿ. ಮಂಡಲ್ ಅವರ ಅಧ್ಯಕ್ಷತೆಯಲ್ಲಿ ೧೯೭೮ರಲ್ಲಿ ಜಾರಿಗೆ ಬಂದು ೧೯೮೦ರಲ್ಲಿ ಮಂಡಣೆಯಾಯಿತು. ಆಯೋಗದಲ್ಲಿ ಆರ್.ಆರ್. ಭೋಳೆ, ದೇವನ್‌ಮೋಹನಲಾಲ್, ಎಲ್.ಆರ್. ನಾಯಕ್, ಕೆ. ಸುಬ್ರಮಣ್ಯಂ, ಎಸ್.ಎಸ್. ಗಿಲ್‌ರು ಸದಸ್ಯರಾಗಿದ್ದರು. ಈ ಯೋಗದ ಶಿಫಾರಸ್ಸನ್ನು ೧೯೯೦ರಲ್ಲಿ ತಾತ್ವಿಕವಾಗಿ ಒಪ್ಪಿ ಜಾರಿಗೆ ತರಲಾಯಿತು. ೧೯೯೨ರಲ್ಲಿ ಪಿ.ವಿ. ನರಸಿಂಹರಾವ್ ಸರ್ಕಾರ ಹಿಂದುಳಿದ

ವರ್ಗಗಳಿಗೆ ಶೇ. ೨೭ರಷ್ಟು ಮೀಸಲಾತಿ ಕೊಡಲು ಒಪ್ಪಿಗೆ ಸೂಚಿಸಿತು. ಶೇ. ೨೭ರಷ್ಟು ಮೀಸಲಾತಿಯು ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಮಾನದಂಡಗಳ ಮೂಲಕ ಗುರುತಿಸಿಯೆ ಆ ಮೀಸಲಾತಿಯು ೩೭೪೩ಕ್ಕೂ ಹೆಚ್ಚು ಜಾತಿಗೆ ದೊರೆಯಿತು. ಆದರೂ ಜಾತಿಯನ್ನು ಧಾರ್ಮಿಕ, ಆರ್ಥಿಕ ಮಾನದಂಡದಿಂದ ಗುರುತಿಸಿದರೂ ಸಂಪೂರ್ಣವಾದ ನ್ಯಾಯ ದೊರೆತಿಲ್ಲ. ಹೋರಾಟ ನಿಂತಲ್ಲಿ ತೆಲಗಾವಿಯವರಂತಹ ಸಂಶೋಧಕರ ನ್ಯಾಯಪರದ ಅಧ್ಯಯನ ನಿಂತಿಲ್ಲ.

೧೯೭೩ರ ಮೈಸೂರಿನ ಸಭೆಯೊಂದರಲ್ಲಿ ಮಾತನಾಡಿದ ಸಚಿವರು ಆಗಿದ್ದ ಬಸವಲಿಂಗಪ್ಪನವರು ಹಿಂದೂ ಧರ್ಮ ಅದರಲ್ಲಿ ಬರುವ ಕೆಲವು ಪ್ರಸಂಗಗಳು ಹಾಗೂ ಅದ್ವೈತ ಇತ್ಯಾದಿಗಳೆಲ್ಲವೂ ಬೂಸಾಸಾಹಿತ್ಯವೆಂದು ಗುಡುಗಿದರು. ಇದನ್ನು ಬಸವಲಿಂಗಪ್ಪನವರ ಭೂಸಾಪ್ರಕರಣವೆಂದೆ ಕರೆಯುವುದುಂಟು. ಇಂತಹ ವೈಚಾರಿಕ ವೇದಿಕೆಯ ಮೂಲಕ ಬೇರೆಡೆ ಹರಿಡಿದ್ದ ಯುವ ಹಾಗೂ ದಲಿತ ಬರಹಗಾರರು ಗಟ್ಟಿಯಾಗಿ ವೈಚಾರಿಕ ಬರಹದ ನೆಲೆ ಕಂಡುಕೊಳ್ಳಲು ಕಾರಣವಾಯಿತು. ಪರಿಣಾಮ ಬಸವಲಿಂಗಪ್ಪನವರ ವಿರುದ್ಧ ಹೋರಾಟಗಳು ನಡೆದು ತಮ್ಮ ಮಂತ್ರಿಸ್ಥಾನ ಕೈ ತಪ್ಪಿ ಹೋಯಿತು. ಆದರೆ ಇದೆ ದಲಿತ ಚಳವಳಿಯು ರಾಜಕೀಯವಾಗಿ, ಸಾಮಾಜಿಕವಾಗಿ ಸೈದ್ಧಾಂತಿಕ ನೆಲೆಯ ರೂಪ ಪಡೆಯಿತು. ಹೀಗಾಗಿ ವಿದ್ಯಾರ್ಥಿಗಳು, ಬುದ್ಧಿಜೀವಿಗಳು, ಲೇಖಕರು ಸಂಘಟಿತಗೊಂಡು ೧೯೭೭ರಲ್ಲಿ ಕರ್ನಾಟಕ ದಲಿತ ಕ್ರಿಯಾ ಸಮಿತಿಯನ್ನು ಅಸ್ತಿತ್ವಕ್ಕೆ ತಂದರು. ಇದು ೧೯೭೪ರಲ್ಲಿ ದಲಿತ ಸಂಘರ್ಷ ಸಮಿತಿಯ ಉಗಮಕ್ಕೆ ನಾಂದಿಯಾಯಿತು.[೭]

ದಲಿತರ ಮೇಲಿನ ದೌರ್ಜನ್ಯ ತಡೆಯಲಿಕ್ಕೆ ಡಿ.ಎಂ. ತಿಮ್ಮರಾಯಪ್ಪ, ಟಿ.ವಿ. ರಾಜಶೇಖರ್, ಓ. ಶ್ರೀಧರ್, ಓ. ರಾಜಣ್ಣ, ಶಿವಣ್ಣ ದಾಸಪ್ಪ, ಎ. ನಾರಾಯಣಸ್ವಾಮಿ, ಗೋಪಾಲಯ್ಯ, ಕೆ. ಚಂದ್ರಶೇಖರ್, ಚಿದಾನಂದ, ಮುನಿವೆಂಕಟಪ್ಪ, ಎಂ. ಚಂದ್ರಶೇಖರ್, ಮುತ್ಯಾಲಪ್ಪ, ರಾಮಕೃಷ್ಣ, ಶಾಮಣ್ಣ, ಎಂ.ಡಿ.ಕೆ. ಕೆಂಪರಾಜು, ಎ.ಎಸ್. ರಾಜನ್, ಚಂಚಲ್ಕರ್ ಶ್ರೇಯಸ್ಕರ್ ಮುಂತಾದವರೆಲ್ಲರೂ ಒಟ್ಟುಗೂಡಿ ೧೯೭೮ರಲ್ಲಿ ಬಂಡಾಯ ಸಾಹಿತ್ಯ ಸಮ್ಮೇಳನದ ಹೊಸ ಜಾಗೃತಿ ಮೂಡಿಸಿದರು.

೧೯೬೦ರಲ್ಲಿ ನಿಜಲಿಂಗಪ್ಪ ಸರ್ಕಾರವು ಡಾ. ಆರ್. ನಾಗನಗೌಡರವರ ಅಧ್ಯಕ್ಷತೆಯಲ್ಲಿ ಮೈಸೂರು ಹಿಂದುಳಿದ ವರ್ಗಗಳ ಸಮಿತಿ ಎಂಬ ಹೆಸರಿನೊಂದಿಗೆ ೧೯೬೧ರಲ್ಲಿ ತನ್ನ ವರದಿ ನೀಡಿತು. ಈ ಸಮಿತಿಯು ಕೆಲವು ಜಾತಿಯನ್ನು ಹಿಂದುಳಿದ ವರ್ಗವೆಂದು ಮತ್ತು ಕೆಲವನ್ನು ಅತ್ಯಂತ ಹಿಂದುಳಿದವೆಂದು ಒಟ್ಟು ಶೇ. ೬೮ರಷ್ಟು ಮೀಸಲಾತಿಗೆ, ಶಿಫಾರಸ್ಸು ಮಾಡಿತು. ಆದರೆ ಜಾತಿ, ವೃತ್ತಿ, ಆರ್ಥಿಕ ಸ್ಥಿತಿಯನ್ನೇ ನಿಜಲಿಂಗಪ್ಪ ಸರ್ಕಾರ ನೀಡಿದ್ದು, ಎಸ್.ಸಿ. ಶೇಕಡ ೧೫ರಷ್ಟು, ಎಸ್.ಟಿ. ಶೇ. ೩ರಷ್ಟು, ಓ.ಬಿ.ಸಿ. ಶೇ. ೩೦ರಷ್ಟು ಒಟ್ಟು ಶೇ. ೪೮ರಷ್ಟು ಮಿಸಲಾತಿಗೆ ಶಿಫಾರಸ್ಸು ಮಾಡಿ ಜಾರಿಗೆ ತಂದಿತು. ಆದರೂ ರದ್ದಾಯಿತು. ಮುಖ್ಯ

ಮಾನದಂಡವಾಗಬಾರದೆಂಬ ಕಾರಣಕ್ಕಾಗಿ ಮತ್ತು ಯಾವುದೆ ಜಾತಿಯ ಜನಸಂಖ್ಯೆ ನಿಖರವಾಗಿರಲಿಲ್ಲದ್ದರಿಂದ ಈ ಆಯೋಗದ ಶಿಫಾರಸ್ಸು ರದ್ದಾಯಿತು.

೧೯೭೨ರಲ್ಲಿ ದೇವರಾಜು ಅರಸು ಸರ್ಕಾರವು ಎಲ್.ಜಿ. ಹಾವನೂರರ ನೇತೃತ್ವದಲ್ಲಿ ಜಿ. ರಾಮಚಂದ್ರ, ಕೆ.ಆರ್. ಶ್ರೀನಿವಾಸಲು ನಾಯ್ಡು, ಕೆ.ಎಂ. ನಾಗಣ್ಣ, ಎ. ಮಸಣಶೆಟ್ಟಿ, ಧರಂಸಿಂಗ್, ಪಿ.ಟಿ. ಹಬೀಬ್ ಮುಂತಾದವರು ಸದಸ್ಯರಾಗಿ ೨೦೦ ಜಾತಿಗಳ ವಿವರ ನೀಡಿದರು. ಹಿಂದುಳಿದ ಸಮುದಾಯಗಳು, ಹಿಂದುಳಿದ ಜಾತಿ, ಹಿಂದುಳಿದ ಬುಡಕಟ್ಟುಗಳು ಎಂದು ವಿಂಗಡಿಸಿ ಶೇ. ೭೫ರಷ್ಟು ಜನರು ಹಿಂದುಳಿದವರಿದ್ದಾರೆ. ಶೇ. ೭೫ರಷ್ಟು ಮೀಸಲಾತಿ ಬೇಕು. ಆದರೆ ನ್ಯಾಯಾಲಯ ಶೇ. ೫೦ರಷ್ಟು ಮೀಸಲಾತಿ ಮೀರುವ ಆಗಿರುವಂತಿಲ್ಲ ಎಂದಾಗ ಶೇ. ೫೦ರಷ್ಟು ಕೊಡಲಿಕ್ಕೆ ಶಿಫಾರಸ್ಸು ಮಾಡಿದರು. ಈ ಮೀಸಲಾತಿ ವಿರುದ್ಧ ಹೋರಾಟ ಮಾಡಿದರು. ನ್ಯಾಯಾಲಯದ ತೀರ್ಪಿನ ಮೇರೆಗೆ ಈಗಿರುವ ಮೀಸಲಾತಿಯು ಶೇ. ೫೦ರಷ್ಟು ಮೀರದ ಕಾರಣ ಶೇ. ೫೦ರಷ್ಟು ಮೀಸಲಾತಿ ಕೊಡಬಹುದೆಂದು ಹೇಳಿತು. ಆದರೆ ಅರಸುರವರು ಶೇ. ೫೮ರಷ್ಟು ಮೀಸಲಾತಿ ಕೊಟ್ಟರು. ಪರಿಣಾಮ ನ್ಯಾಯಾಲಯದ ಮೊರೆ ಹೊಕ್ಕ ಕಾರಣವಾಗಿ ೧೯೮೩ರಲ್ಲಿ ವೆಂಕಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ಡಾ. ಎಸ್. ಭೀಮಪ್ಪ, ಡಾ. ಕೆ.ಎಂ. ಚೆಲುವರಾಜ, ಎಂ.ವಿ. ಸೂರಾಚಾರಿ, ವಿದ್ಯಾದರ ಗುರೂಜಿ, ಪ್ರೊ. ಜಾನ್ ಬಿ. ಕುಟಿನೊ, ಎಂ. ಬಷೀರುದ್ದೀನ್, ಅಮ್ಮೆಂಬಳ ಬಾಲಪ್ಪ, ಆರ್.ಎಸ್. ನಾಯ್ಕ, ಪ್ರೊ. ಎ.ಎಂ. ಧರ್ಮಲಿಂಗಂ, ವಿ.ಡಿ. ವೀರಕ್ಯಾತಯ್ಯ ಸದಸ್ಯರನ್ನು ಒಳಗೊಂಡು ೧೯೮೬ರಲ್ಲಿ ವರದಿ ಸಲ್ಲಿಸಿತು. ಈ ಸಮಿತಿ ೬೮ ಜಾತಿಗಳನ್ನು ಗುರುತಿಸಿತಾದರೂ ವೈಶ್ಯ, ಒಕ್ಕಲಿಗ, ಮತ್ತು ಲಿಂಗಾಯತ ಸಮುದಾಯಗಳನ್ನು ಮೀಸಲಾತಿ ಪಟ್ಟಿಯಿಂದ ಹೊರಗಿಟ್ಟ ಕಾರಣ ಶೇ. ೪೫ರಷ್ಟು ಮೀಸಲಾತಿಗೆ ಶಿಫಾರಸ್ಸು ಮಾಡಿದ್ದು, ರಾಜ್ಯಾದ್ಯಂತ ಹುಟ್ಟಿಕೊಂಡ ಹೋರಾಟದ ಪ್ರಯುಕ್ತ ರದ್ದಾಯಿತು.[೮]

೧೯೮೮ರಲ್ಲಿ ಓ. ಚಿನ್ನಪ್ಪರೆಡ್ಡಿಯವರ ನೇತೃತ್ವದ ಏಕಸದಸ್ಯ ಆಯೋಗವಾಗಿದ್ದು, ೧೯೯೦ರಲ್ಲಿ ವರದಿ ನೀಡಿತು. ರೆಡ್ಡಿ ಆಯೋಗವು ಹಿಂದುಳಿದವರನ್ನು ಮೂರು ಪ್ರವರ್ಗಗಳಾಗಿ ವಿಂಗಡಿಸಿತು. ೧ನೇ ವರ್ಗಕ್ಕೆ ೫ ಜಾತಿ, ೨ನೇ ವರ್ಗಕ್ಕೆ ೧೪ ಜಾತಿಗಳು, ೩ನೇ ವರ್ಗದಲ್ಲಿ ಹೆಚ್ಚು ಆದಾಯವಿಲ್ಲದ ಗುಂಪು ೧ಕ್ಕೆ ಶೇ. ೫ರಷ್ಟು, ೨ಕ್ಕೆ ಶೇ. ೨೮ರಷ್ಟು, ೩ಕ್ಕೆ ಶೇ. ೫ರಷ್ಟು ಮೀಸಲಾತಿ ನೀಡಿತು. ಆದರೆ ೧೯೯೪ರಲ್ಲಿ ಶೇ. ೫೭ರಷ್ಟು, ಶೇ. ೭೩ರಷ್ಟು ನೀಡಿತಾದರೂ ಶೇ. ೫೦ರಷ್ಟು ಮೀಸಲಾತಿ ಮೀರಬಾರದೆಂಬ ಕಾರಣಕ್ಕಾಗಿ ಪ್ರಸ್ತುತ SC-15-ST-3, I-4%, II-A-15%, II-B-4%, III-A4%, III-B-5% ಒಟ್ಟು ಶೇ. ೫೦ರಷ್ಟು ಮೀಸಲಾತಿಯಿದೆ.

ಇಲ್ಲಿಯತನಕ ಶೇ. ೨೧ರಷ್ಟು ದಲಿತರು, ಶೇ. ೫೦ರಷ್ಟು ಹಿಂದುಳಿದ ಅಲ್ಪಸಂಖ್ಯಾತ ವರ್ಗದವರು ತಮಗಾದ ಅನ್ಯಾಯವನ್ನು ಸಹನೆಯಿಂದಲೆ ಅನುಭವಿಸುತ್ತಿದ್ದಾರೆ, ದೊರೆಯಬೇಕಾದ ಸ್ಥಾನಮಾನ ದೊರೆತಿಲ್ಲ.

೬.೪. ಸಾಮಾಜಿಕ ಚಿಂತನೆಗಳು

ಸಮೂಹ ಜೀವಿಗಳ ಒಡನಾಟದಿಂದ ಉಂಟಾದ ಅಥವಾ ಸಹಪಾಠಿಗಳ ಸಾಮೂಹಿಕ ಚಿಂತನೆಯ ಉಗಮವೇ ಸಾಮಾಜಿಕ ಚಿಂತನೆಯಾಗಬಹುದಾಗಿದೆ.

ಸಾಮಾಜಿಕ ಚಿಂತನೆಯು ಕೆಲವು ಸಲ ಆಗಾಗ್ಗೆ ನಡೆಯುವ ಅನೌಪಚಾರಿಕ ಚರ್ಚೆ, ಪ್ರತಿ ಚರ್ಚೆ, ವಿಚಾರ ವಿನಿಮಯ ಮತ್ತು ತೀರ್ಮಾನಗಳ ಪ್ರತಿಫಲವಾಗಿ ಮೂಡಿಬರಬಹುದಾಗಿದೆ. ವಿರಾಮದ ವೇಳೆಯ ಲೋಕಭಿರಾಮವಾಗಿ ಮಾತನಾಡುವಲ್ಲಿಯೂ, ಗ್ರಾಮದ ಚಾವಡಿಯಿಂದಲೂ, ಮುಕ್ತ ಮನಸ್ಸಿನ ಅಂತರಾಳದಿಂದಲೂ ಉಗಮಗೊಳ್ಳಬಹುದಾಗಿದೆ. ಇಂತಹ ಸಮಯದಲ್ಲಿ ರಾಜಕೀಯ ನಾಯಕತ್ವ, ಜಾತೀಯತೆ, ಪ್ರಾಂತೀಯತೆ, ವರದಕ್ಷಿಣೆ, ಧಾರ್ಮಿಕತೆ, ಸಾಮಾಜಿಕ ಪರಿವರ್ತನೆ ಮೊದಲಾದ ವಿಷಯಗಳನ್ನು ಜನಸಾಮಾನ್ಯರು ಚರ್ಚಿಸುವ ಚರ್ಚೆಗಳು ಮತ್ತು ಪ್ರತಿ ಚರ್ಚೆಗಳು ಸೀಮಿತವಾಗಿರಬಹುದಾದರೂ ಗೊತ್ತಿದ್ದ ವಿಷಯವನ್ನು ರೋಚಕ, ರಂಜನೀಯ ಹಾಗೂ ಕೌತುಕವಾಗಿ ತಮ್ಮದೇ ಆದ ಸೀಮಿತ ಜ್ಞಾನದ ಹಿನ್ನೆಲೆಯಲ್ಲಿ ವಿವೇಚಿಸುತ್ತಾರೆ. ಇಂತಹ ಯೋಗ್ಯ ವಿಚಾರಗಳು ಇತರ ಯೋಗ್ಯರ ಮೇಲೆ ಪ್ರಭಾವ ಬೀರಬಹುದು. ಅಂಥವರು ವಿಷಯದಲ್ಲಿ ಇರಬಹುದಾದ ಗೊಂದಲ ನಿವಾರಿಸಿ ಮಾರ್ಪಾಡಿಸಿಕೊಂಡು ಅನುಸರಿಸುತ್ತರಾದರೂ ಇದು ಕೇವಲ ಸೀಮಿತಗೊಳ್ಳುವಂತಹದ್ದಾಗಿದೆ. ಇಂಥದ್ದರಲ್ಲಿ ಉನ್ನತ ಮಟ್ಟದ ಸಾಮಾಜಿಕ ಚಿಂತನೆ ಮೂಡಿಬರುವುದು ಕಷ್ಟವಾದರು, ಇಂಥವರ ಅನುಭವಗಳಿಂದ ಕೆಲವು ಸುಶಿಕ್ಷಿತರೂ, ಸಾಮಾಜಿಕ ಕಾಳಜಿವುಳ್ಳವರು, ಅಧ್ಯಯನಶೀಲರೂ, ಸಾಮಾಜಶಾಸ್ತ್ರದ ಪರಿಕಲ್ಪನೆ ಅಧ್ಯಯನಿಸಿದವರು ವಿಚಾರಸಂಕಿರಣ, ಚರ್ಚಾಗೋಷ್ಠಿ ವೇದಿಕೆ, ಸೈದ್ಧಾಂತಿಕ ಅಧ್ಯಯನ, ವೈಜ್ಞಾನಿಕ ಮನೋಭಾವ, ಪ್ರಜಾಪ್ರಭುತ್ವದ ಮೌಲ್ಯ ಅಳವಡಿಸಿಕೊಂಡಿರುವವರು ಎಲ್ಲಾ ಸಮುದಾಯಗಳ ಕಾಳಜಿವುಳ್ಳವರು ಮಾತ್ರ ಸಾಮಾಜಿಕ ನ್ಯಾಯವೆನಿಸಬಹುದಾದ ಸಾಮಾಜಿಕ ಚಿಂತನೆಯ ಕುರಿತು ಚಿಂತಿಸಲು ಸಾಧ್ಯವಾಗಬಹುದಾಗಿದೆ ಎಂಬುದು ಸಾಮಾನ್ಯವಾದ ಸಂಗತಿ.

ಇದನ್ನು ಗಮನಿಸಿಯೇ ಆಲ್ವಿನ್‌ಬಾಸ್‌ಕಾಫ್ ಹೇಳುವಂತೆ "ಮಾನವನು ಪ್ರಾಚೀನ ಕಾಲದಿಂದಲೂ ತನ್ನ ಸುತ್ತಮುತ್ತ ಸಾಮೂಹಿಕವಾಗಿ ಜೀವಿಸುವ ಹಾಗೂ ಶ್ರಮಿಸುವ ಜನರ ಬಗ್ಗೆ ಚಿಂತನೆ ಮಾಡುವುದೇ ಸಾಮಾಜಿಕ ಚಿಂತನೆ ಎಂದಾದರೆ", ಸಾಮಾಜಿಕ ಚಿಂತನೆಯು ಮಾನವರು ನಮ್ಮೊಡನೆ ಸಹಜೀವನ ನಡೆಸುವ ಜನರ ಬಗ್ಗೆ ಚಿಂತನೆ ಮಾಡುವುದಾಗಿದೆ. ಇಂಥದ್ದರಲ್ಲಿ ಜನಸಮುದಾಯಗಳ ಸಾಮಾಜಿಕ ಸಂಬಂಧ, ಕರ್ತವ್ಯ, ಹೊಣೆಗಾರಿಕೆ, ಜೀವನದ ಮೌಲ್ಯ ಅಂತಸ್ತು ಸ್ಥಾನಮಾನ ಮುಂತಾದ ಹತ್ತು ಹಲವು ಆಯಾಮಗಳ ಚಿಂತನೆಯ ಜೊತೆಗೆ ವಿಸ್ತೃತವಾಗಿ ಸಾಮಾಜಿಕ ಸಂಬಂಧ ಮತ್ತು ಸಾಮಾಜಿಕ ಪ್ರಕ್ರಿಯೆ, ಸಹಜೀವನ ಮತ್ತು ಸಾಮಾಜಿಕ ಕ್ರಿಯೆ. ಅಂತಕ್ರಿಯೆ ಮತ್ತು ಪ್ರಕ್ರಿಯೆಗಳ ಸ್ವರೂಪ ರೂಢಿಸಿಕೊಂಡಿರುತ್ತಾರೆ. ಇಂತಹ ಕೆಲವು ಪ್ರತಿಭಾನ್ವಿತ ಚಿಂತಕರ ವಿಮರ್ಶಾತ್ಮಕ ಆಲೋಚನೆಗಳ ಫಲವಾಗಿ ಸಾಮಾಜಿಕ ಚಿಂತನೆ ಸೃಷ್ಟಿಯಾಗಬಹುದಾಗಿದೆ ಅಥವಾ ಮಾನವನ ಸುದೀರ್ಘ ಅನುಭವ ಸರಣಿಯ

ಫಲವಾಗಿ ಸೃಷ್ಟಿಯಾಗುವ ಸಾಮಾಜಿಕ ಚಿಂತನೆ ಹೊರಹೊಮ್ಮಿ ಕಾಲ ದೇಶ ಹಾಗೂ ಸನ್ನಿವೇಶಗಳಿಂದಲೂ ಪ್ರಭಾವಿತವಾಗಬಹುದು.[೯]

ಕಾಲ ಚಕ್ರದಲ್ಲಿ ಬಂಧಿತವಾದ ಮಾನವ ಸಮೂಹಗಳು ಸಮೂಹಗಳಿಗೆ ಬರಬಹುದಾದ ಸಮಸ್ಯೆ ಮತ್ತು ಪರಿಹಾರದ ಸ್ವಾರ್ಥ ಸಾಧನೆಗಾಗಿ ಕೆಲವು ಪ್ರತಿಷ್ಠಿತರು ಉಗಮಗೊಳಿಸಿ ಚಾಲ್ತಿಗೆ ತರಬಲ್ಲ ಸಮಾಜ ವಿರೋಧಿ ಚಿಂತನೆ ಹೊರಹೊಮ್ಮುವುದು ಆಗಿದ್ದಿದೆ. ಸಾಮಾಜಿಕ ಚಿಂತನೆ ಅಮೂರ್ತ ಸಾಮಾಜಿಕ ಸಂಗತಿಗಳಿಗೆ ಸಂಬಂಧಿಸಿದ ಪ್ರಾಯೋಗಿಕ ಚಿಂತನೆಗೆ ಪೂರಕವಾದುದಾಗಿರುವುದು. ಬಾಂಧವ್ಯವನ್ನು ಆಂತರಿಕವಾಗಿ ಬೆಸೆದು ಸಮತೋಲನಗೊಳಿಸಲು ಇಂತಹ ಚಿಂತನೆಯಿಂದ ಸಾಧ್ಯವಾದರೂ ಇಂತಹ ಚಿಂತನೆ ಮಾಡುವ ಚಿಂತಕರ ಅಭಾವವಿದೆ. ಅಂತಹ ಅಭಾವದ ಅಪೂರ್ವ ಸಾಮಾಜಿಕ ಚಿಂತನೆಗೈದವರೆಂದರೆ ತೆಲಗಾವಿಯವರು. ಸಾಮಾಜಿಕ ಚಿಂತನೆಗೆ ಕಾರಣವೆಂದರೆ ಕೆಲವು ಚಿಂತನೆಗಳ ಪರಿಕಲ್ಪನೆಯೆ ಹೇಳುವ ಹಾಗೆ, ಸಾಮಾಜಿಕ ಚಿಂತಕನಾದವನು ಸರ್ವವನ್ನು ಅರಿತವನಾಗಿ, ಬದುಕಿನ ಜಂಜಾಟದ ಪರಿಕಲ್ಪನೆಯಿದ್ದರೂ ಅದರಿಂದ ಹೊರಬಂದು ಹಣದ ದಾಹದಿಂದ ವಿಮುಖನಾಗಿ, ಜೀವನವಿಡಿ ಕಾಡುವ ಕೆಲವು ಸೆಳೆತಗಳ ಸಂಸ್ಥೆಗೆ ಸಿಲುಕದೆ, ಪ್ರಜ್ಞಾವಂತರ ಸಂಪರ್ಕ ಹಾಗೂ ಸಹವಾಸವುಳ್ಳವರಾಗಿ, ಈ ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ಲಯಗಳಿಗೆ ಸಂಬಂಧಿಸಿದಂತೆ ವಿವೇಚನೆ ಮಾಡುವುದು ಅತ್ಯಗತ್ಯವಾಗಿದೆ. ಸಾಮಾಜಿಕ ಆಗು-ಹೋಗುಗಳ ಬಗೆಗಿನ ಚರಿತ್ರೆಯನ್ನು ಕೇಂದ್ರೀಕರಿಸಿಯೂ ತಮ್ಮ ಯೋಜನಾ ಲಹರಿ ಹರಿಬಿಟ್ಟು ಚಿಂತನೆ ನಡೆಸಬೇಕಾಗಿರುವುದರಿಂದ ಇಂತಹ ಅಪರೂಪದ ಸಾಮಾಜಿಕ ಚಿಂತನೆ ಸ್ವರೂಪಿಗಳೆಂದರೆ ತೆಲಗಾವಿಯವರು. ಏಕೆಂದರೆ ಸತ್ಯಾನ್ವೇಷಣೆಗಾಗಿಯೇ ತಾರತಮ್ಯರಹಿತವಾದ ಸ್ತ್ರೀ ಪುರುಷರನ್ನು ಸ್ವಾತಂತ್ರ್ಯರನ್ನಾಗಿ ಮಾಡುವ ಸತ್ಯಸತ್ಯಾತೆ ಕಂಡುಕೊಳ್ಳುವ, ಮಾನವನ ಜೀವನದ ಸಾಫಲ್ಯತೆ, ಪರಿವರ್ತನಾಶೀಲತೆ, ಸಂಕೀರ್ಣ ವ್ಯವಸ್ಥೆಯಲ್ಲಿನ ರಚನಾತ್ಮಕ ವ್ಯಕ್ತಿತ್ವಗಳನ್ನು ಅಭಿವೃದ್ಧಿಪಡಿಸಲೋಸುಗ ಸ್ವಾತಂತ್ರವಾಗಿರಲು ಮುಂದಾಗಿದ್ದಾರೆ. ಈ ಹಿಂದಿನ ತಲೆಮಾರುಗಳ ಪ್ರತಿಭಾನ್ವಿತ ಚಿಂತಕರ ಚಿಂತನೆಯನ್ನು ಪರಿಭಾವಿಸಿ ಅವರ ಚಿಂತನಾ ಲಹರಿಯೊಳಗೆ ಪ್ರವೇಶ ಮಾಡಿಯೂ, ತಮ್ಮ ಸಮಕಾಲೀನ ವೈಚಾರಿಕ ಪ್ರಜ್ಞಾವಂತ ಚಿಂತಕರ ಜೊತೆಗೂಡಿ ಮಾನವನ ಚಿಂತನೆಯ ಕ್ಷೇತ್ರವನ್ನು ಅಪಾರವಾಗಿ ಬೆಳೆಸಲು ಸಾಮಾಜಿಕ ನ್ಯಾಯ ಒದಗಿಸಲು ಶ್ರಮಿಸಿದ್ದಾರೆ. ಆ ಕಾರಣಕ್ಕಾಗಿಯೆ ತಮ್ಮದೇ ಆದ ಸೃಜನಾತ್ಮಕ ನಿರ್ಣಯಗಳನ್ನು ಸಮಾಜಮುಖಿ ಯಾಗಿಯೆ ತಮ್ಮ ಶೋಧನೆಯ ಮೂಲಕ, ಕೃತಿಗಳ ಮೂಲಕ, ಕೈಗೊಳ್ಳುವ ಕೆಲಸಗಳ ಮೂಲಕ ಎಲ್ಲೆಲ್ಲಿಯೂ ಸಾಮಾಜಿಕ ಚಿಂತನೆ ಸಮರಸಗೊಳ್ಳುವಂತ ವಾತಾವರಣ ನಿರ್ಮಿಸುತ್ತಾರೆ. ಸಾಮಾಜಿಕ ಚಿಂತಕರಾಗಿ ತೆಲಗಾವಿಯವರು ತಮ್ಮ ಸ್ವರೂಪವನ್ನು ತಮಗೆ ಗೊತ್ತಿಲ್ಲದಂತೆಯೇ ಅಳವಡಿಸಿಕೊಂಡು ಚಿಂತಿಸುತ್ತಾರೆ. ಏಕೆಂದರೆ ಇಂತಹ ಒಂದು ಚಿಂತನೆಯು ಹೊರಹೊಮ್ಮಲು ಆ ಮನಸ್ಥಿತಿಯ ಚಿಂತಕನಿಗೆ ಸಮಾಜಮುಖಿ ಮತ್ತು ಸಾಮಾಜಿಕ ನ್ಯಾಯದ ಅಡಿಯಲ್ಲಿನ ಧ್ಯೇಯ, ತತ್ವ, ಜ್ಞಾನ, ತಂತ್ರಜ್ಞಾನ ಹಾಗೂ ವಿಜ್ಞಾನದ ಮೂಲಕ ಅರಿತುಕೊಂಡಿದ್ದಾರೆ.

ಜಾನಪದ ಹಂತದಿಂದ ತತ್ವಜ್ಞಾನ ಮತ್ತು ಸಾಮಾಜಿಕ ಸಿದ್ಧಾಂತದ ಮೂಲಕ ತಿಳಿಯಲೆತ್ನಿಸಿದ್ದಾರೆ. ಈ ಕಾರಣದಿಂದಾಗಿಯೆ ಸಮಾಜ ಸಂಬಂಧಿಯಾದ ಚಿಂತನೆಯೆ ಸಾಮಾಜಿಕ ಚಿಂತನೆ ಎಂದು ಬೋಗಾರ್ಡಸ್ ಹೇಳುತ್ತಾರೆ. ಅಂದರೆ ಯಾವುದೆ ಕಾಲದಲ್ಲಿ ಇಲ್ಲವೆ ಯಾವುದೇ ದೇಶದಲ್ಲಿ ಮಾನವ ಮಾನವರ ಬಗ್ಗೆ ಮಾಡಬಹುದಾದ ಆಲೋಚನೆ ಎಂದಾದರೂ, ಅಬ್ರಾಹಂ ಮತ್ತು ಜಾನ್‌ಮಾರ್ಗನ್‌ರ ಪ್ರಕಾರ ಮಾನವ ಸಮಾಜದಲ್ಲಿ ಅಂತಃಕ್ರಿಯೆಯಲ್ಲಿ ತೊಡಗಿದಾಗ ರೇಚಿಯವರಿಂದ ಬರುವಂತಹ ಪ್ರಕ್ರಿಯೆ ಎಂಥದ್ದು, ಅದೇಕೆ ಆ ತರಹದ ಪ್ರತಿಕ್ರಿಯೆ ಬರುವಂತಾಯಿತು ಎಂದು. ಆದಿಕಾಲದಿಂದ ಆಲೋಚಿಸುತ್ತಲೇ ಬಂದಿದ್ದು ಆ ಮೂಲಕವೆ ಸಾಮಾಜಿಕ ಸಂಬಂಧ ಬೆಳೆಸಿಕೊಂಡಿದ್ದಾನೆ. ಹೀಗೆ ಯೋಚಿಸುತ್ತಲೇ ಬಂದಿರುವುದು ಅವನ ಆಸಕ್ತಿ ಮತ್ತು ಆತಂಕ ಎರಡು ಹೌದು ಎನ್ನುತ್ತಾರೆ. ಮಾನವ ಕೇವಲ ಸಮುದಾಯದ ಬಗ್ಗೆ ಮಾತ್ರ ಆಲೋಚಿಸದೆ ಸಾಮುದಾಯಿಕ ಇಲ್ಲಿಯತನಕವೂ ಗಮನಿಸಿದಂತೆ ಚಿಂತಕರೆನಿಸಿಕೊಂಡವರ ಖಾಸಗಿ ಜೀವನ ಸಾಧ್ಯವಾಗಲಿಕ್ಕೆ ನೆರವಾಗುವ ಸಂಬಂಧಗಳ ಬಗ್ಗೆಯೂ ಯೋಚಿಸುತ್ತಾರೆನ್ನುತ್ತಾರೆ. ಆದರೆ ಸಮಾಜದಲ್ಲಿರುವವರೆಲ್ಲರೂ ಚಿಂತಿಸುತ್ತರಾದರೂ ಎಲ್ಲಾ ಚಿಂತಕರು ಸಾಮಾಜಿಕ ಚಿಂತಕರಾಗಲಾರರು. ಸಾಮಾಜಿಕ ಚಿಂತಕರೆನಿಸಿಕೊಳ್ಳಲಾರರು. ಬದುಕು ಒಂದು ರೀತಿಯಾಗಿ ಸುಖಿಯಾಗಿರದೆ, ದುಃಖಿಯಾಗಿರುತ್ತದೆ ಮತ್ತು ಕೆಲವು ಸಲ ಜಂಜಾಟ ಸಂದಿಗ್ಧತೆ ಎರಡು ಇರುತ್ತವೆ. ಚಿಂತನೆಗೆ ಬಹು ಬೇಡಿಕೆ ಬಂದಾಗ ಚಿಂತಿಸುವವರು ಒಂದು ನಿರ್ದಿಷ್ಟ ಜನಾಂಗ, ನಿರ್ದಿಷ್ಟ ಸಮುದಾಯ, ನಿರ್ದಿಷ್ಟ ಜಾತಿಯವರು ಆಗಿರುತ್ತಾರೆಂಬುದು ಅಂಥವರದ್ದು ಮಾತ್ರ ಚಿಂತನೆ ಎಂದುಕೊಳ್ಳುವವರು ಸಮಾಜದಲ್ಲಿದ್ದಾರೆ. ಕೆಲವು ಚಿಂತಕರು ಚಿಂತನೆಯ ಹೆಸರಿನಲ್ಲಿ ಸ್ವಾರ್ಥ ಮತ್ತು ಸ್ವಜನ ಪಕ್ಷಪಾತಿಯಾಗಿ ತನ್ನವರಿಗೆ ಮಾತ್ರ ಅನುಕೂಲವಾಗುವ ತಮ್ಮವರ ಶ್ರೇಷ್ಠತೆ ಮಾತ್ರ ಬಿಂಬಿಸುವಂತ ಚಿಂತನೆಗೈಯುತ್ತಾರೆ. ಕೆಲವರು ಇರಬಹುದಾದ ಸಮಸ್ಯೆಗೆ ಪರಿಹಾರವಾಗಿ ಹಾಗೂ ವೈಜ್ಞಾನಿಕವಾಗಿ ಚಿಂತಿಸುವ ಚಿಂತಕರು ವಿರಳ. ಆದರೆ ಕೆಲವೇ ಕೆಲವರು ಮಾತ್ರ ಇಡೀ ಸಮುದಾಯದ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಚಿಂತಿಸುವರು. ಅಂಥವರ ಸಾಲಿನಲ್ಲಿ ಬರುವ ಚಿಂತಕರೆಂದರೆ ತೆಲಗಾವಿಯವರು. ಬದುಕಿನ ಜಂಜಾಟ, ಬಡತನ, ಸ್ವಾರ್ಥತೆಗೆ ವಿಮುಖರಾಗಿ ಬಡತನ ಮತ್ತು ಜಾತೀಯತೆ ಬೇಗೆಯಲ್ಲಿ ಬೆಂದು ನೋವು ನುಂಗಿಕೊಂಡು ದೀನದುರ್ಬಲ, ದಲಿತರ, ಶೋಷಿತರ ಪರ ಚಿಂತಿಸಿ ಹಲವು ಸಮಸ್ಯೆಗೆ ಪರಿಹಾರಕ್ಕಾಗಿಯೂ, ಜ್ಞಾನದ ಭಂಡಾರಕ್ಕಾಗಿಯೂ, ಪ್ರಜಾಪ್ರಭುತ್ವದ ಯಶಸ್ವಿಗಾಗಿಯೂ, ಸಮಾಜಮುಖಿ ಚಿಂತನೆಯಾಗಿ ಚಿಂತಿಸಿ ಚಿಂತನಾಲೋಕವನ್ನು ವಿಸ್ತರಿಸಿದ್ದಾರೆ.[೧೦]

ಸಾಮಾಜಿಕ ಚಿಂತಕರೆನಿಸಿಕೊಂಡವರು ಸಮಾಜದ ವೈದ್ಯರಾಗಿ ರೋಗಿಗಳನ್ನು ಗಮನವಿಟ್ಟು ನೋಡಿಕೊಳ್ಳುವಂತೆ ದೋಷಗಳನ್ನು ಪತ್ತೆಹಚ್ಚಿ ಚಿಕಿತ್ಸೆ ನೀಡುವಂತೆ ಚಿಕಿತ್ಸೆ ನೀಡಬೇಕಾದ ಆದ್ಯತೆಯಾಗಿದೆ. ಸಮಾಜದ ಚಿಂತನೆಗಳು ಸರಿಯಾದ ಮಾರ್ಗದಲ್ಲಿ ಕೊಂಡೊಯ್ಯುವಲ್ಲಿ ಓರೆ-ಕೋರೆಗಳನ್ನು ಪರೋಕ್ಷವಾಗಿ ಅಥವಾ ಪ್ರತ್ಯಕ್ಷವಾಗಿ ತಿದ್ದುವಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸುತ್ತಾರೆ.

ಅದೇ ರೀತಿಯಾಗಿ ಚಿಂತಕರೆನಿಸಿಕೊಂಡವರು. ಸಮಾಜದ ಬೇರೆ ಬೇರೆ ಆಯಾಮಗಳ ಮೂಲಕ ಚಿಂತಿಸಿ, ಸಮಾಜದಲ್ಲಿ ಒಳ್ಳೆಯ ಸಂಸ್ಕೃತಿಯನ್ನು ಬಿತ್ತುವಲ್ಲಿ ಸಾಮಾಜಿಕ ಒತ್ತಡವನ್ನು ಕಡಿಮೆ ಮಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ. ಅಂತಹ ತಾತ್ವಿಕತೆ ರಚಿಸುವಾಗ ಕೆಲವು ಅತಿರಿಕ್ತಗಳು ಜರುಗುವುದು ವಾಸ್ತವವಾದರೂ ವಿಮರ್ಶೆಗೆ ಗುರಿಯಾಗಬಹುದು. ಸಾಮಾಜಿಕ ವಿಮರ್ಶೆಗೆ ಒಳಗಾದ ಚಿಂತಕರು ವಿಮರ್ಶೆಯ ಎರಡು ಬಗೆಯಲ್ಲಿ ವಿಮರ್ಶಿಸಲ್ಪಡುವರು. ಒಂದು ವ್ಯಕ್ತಿ ನಿಷ್ಠೆ ಮತ್ತೊಂದು ವಸ್ತುನಿಷ್ಠೆ. ಯಾರು ವ್ಯಕ್ತಿನಿಷ್ಠರಾಗಿ ತಾತ್ವಿಕತೆ ಅಥವಾ ಒಂದು ವಸ್ತುವನ್ನು ನೋಡುತ್ತಾರೋ ಅಂಥವರ ವಿಮರ್ಶೆಗಳು ಅವರ ಮನೋಭಾವದ ಮೇಲೆ ಅವಲಂಬಿಸಿರುತ್ತದೆ ಆದರೆ ಇಂತಹ ಚಿಂತಕರು. ವಸ್ತುನಿಷ್ಠೆಯಿಂದ ನೋಡುವ ಸಂದರ್ಭದಲ್ಲಿ ಚಿಂತನೆಯು ಬೇರಡೆ ಹೊರಳಿದರೆ ನಕರಾತ್ಮಕವಾಗಿ ಯೋಚಿಸುವ ಗುಣಗಳಿದ್ದಲ್ಲಿ ಅಲ್ಲಿರುವ ನ್ಯೂನತೆಗಳಲ್ಲಿ ಧನಾತ್ಮಕ ದೃಷ್ಟಿಕೋನ ಅರ್ಥೈಸುವ ಮನೋಭಾವ ಉಂಟಾಗುತ್ತದೆ. ಆದ್ದರಿಂದ ಸಮಾಜಕ್ಕೆ ಒಳಿತಾಗುತ್ತದೆ. ಆ ಒಳಿತಿನ ಅವಲಂಬನೆಯು ಆತನ ಮನೋಭಾವವನ್ನು ಒಳಗೊಂಡಿದ್ದು ಸಕರಾತ್ಮಕವಾಗಿದ್ದರೆ ಆತನ ಮತ್ತು ಸಮಾಜದ ವ್ಯಕ್ತಿಗಳ ವ್ಯಕ್ತಿತ್ವ ನಿರ್ಮಾಣದ ವ್ಯಕ್ತಿತ್ವದಲ್ಲಿ ಸಾತ್ವಿಕ ಗುಣಗಳನ್ನು ಅಳವಡಿಸಿಕೊಳ್ಳುತ್ತಾರೆ. ಇದರಿಂದಾಗಿ ಜೀವನಶೈಲಿ ರೂಪಿಸಿಕೊಳ್ಳುವಲ್ಲಿ ಸವಾಲುಗಳನ್ನು ಧೈರ್ಯದಿಂದ ಎದುರಿಸಲು, ಆಪ್ತಸಲಹೆಯೆ ಮತ್ತು ನಂಬಿಕೆಯ ಮೂಲಕವೇ ಮನಸ್ಸನ್ನು ಸಿದ್ಧಪಡಿಸಿಕೊಂಡು ಸಂಕಷ್ಟದಲ್ಲಿರುವವರನ್ನು ಪ್ರೋತ್ಸಾಹಿಸಿ, ಹೇಗೆ ಸಕರಾತ್ಮಕ ಭಾವನೆಗಳತ್ತ ಮನಸ್ಸನ್ನು ಹೊರಳಿಸಲು ಸಾಧ್ಯವಾಗಬಹುದು ಎಂಬುದನ್ನು, ದೂರದೃಷ್ಟಿಯ ಮೂಲಕವೆ ಸಮಾಜದಹಿತ ಕಾಪಾಡಬಹುದೆಂದು ಆಲೋಚಿಸಿ ಸಮಾಜದ ಹಿತಕಾಪಾಡಲು ಮುಂದೆ ಬರುತ್ತಾರೆ. ಇಂಥವರಿಂದ ಪ್ರೇರಿತರಾದವರು ನಕರಾತ್ಮಕ ಧೋರಣೆಗಳನ್ನು ಬಿಟ್ಟು ಸಕರಾತ್ಮಕವಾಗಿ ಸಮಾಜಕ್ಕೆ ಒಳ್ಳೆಯ ದಿಕ್ಕಿನತ್ತಕೊಂಡೊಯ್ಯುವ ಕೆಲಸದಲ್ಲಿ ತೊಡಗಿಸಿಕೊಳ್ಳುವರು. ಆಗ ಸಮಾಜದಲ್ಲಿ ಪರಸ್ಪರ ಸ್ನೇಹ ಸಂಬಂಧಗಳು ವೃದ್ಧಿಸುತ್ತವೆ. ಇಲ್ಲವೆಂದರೆ ನಕರಾತ್ಮ ದೃಷ್ಟಿಕೋನವು ಟೀಕೆ-ಟಿಪ್ಪಣಿಗಳನ್ನು ಪರಸ್ಪರ ದ್ವೇಷ-ಅಸೂಯೆಗಳನ್ನು ಹುಟ್ಟು ಹಾಕಿ ಸಮಾಜದ ಅಧೋಗತಿಗೆ ಮೂಲವಾಗಬಹುದು.

ಉದಾಹರಣೆಗೆ, ಮೂಢನಂಬಿಕೆಗಳನ್ನು ಹೋಗಲಾಡಿಸುವಂತ ಕಾರ್ಯಗಳು ಕೇವಲ ಕಾನೂನು ರಚನೆಯಿಂದ ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಸಮಾಜದಲ್ಲಿ ವೈಜ್ಞಾನಿಕ ದೃಷ್ಟಿ ಹುಟ್ಟಿಹಾಕಲು ಚಿಂತಕರಿಂದ ವಸ್ತುನಿಷ್ಠೆಯ ವಿಮರ್ಶೆ ನಡೆದು, ಧನಾತ್ಮಕ ಸಂದೇಶಗಳು ಸಮಾಜಕ್ಕೆ ದೊರೆತರೆ ಮಾತ್ರ ಸಮಾಜದ ನೈತಿಕ ಏಳಿಗೆಯಾಗಲು ಸಾಧ್ಯವಾಗುತ್ತದೆ.

ಪ್ರಸ್ತುತ ಸಾಮಾಜಿಕ ಸಮಸ್ಯೆಗಳ ಬೇರುಗಳು ಗತಕಾಲದಲ್ಲಿ ಆಳವಾಗಿ ಬೇರೂರಿರುವುದರಿಂದ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ಸಾಮಾಜಿಕ ಚಿಂತನೆಯ ಜ್ಞಾನವನ್ನು ಅಗತ್ಯ ಪ್ರಮಾಣದಲ್ಲಿ ಅನ್ವಯ ಮಾಡಿಕೊಳ್ಳುವುದು ಅತ್ಯವಶ್ಯಕವಾದುದಾಗಿದೆ. ಅಂತಹ ಅಗತ್ಯತೆ, ಅನಿವಾರ್ಯತೆ ಸಮಾಜದ ಕೆಲವೇ ಕೆಲವು ಜನರಿಗೆ ಮಾತ್ರ ಬರಲು

ಸಾಧ್ಯವಿದೆ. ಅಂಥವರು ಸಮಾಜದಲ್ಲಿನ ವಿವಿಧ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡು ಹಿಡಿಯಲು ಪ್ರಯತ್ನಿಸುವಾಗ ಬಹಳಮಟ್ಟಿಗೆ ತಮ್ಮ ವೈಯಕ್ತಿಕ ಬದುಕಿನ ಬವಣೆಗಳು, ಅನುಭವ, ಜಾಣ್ಮೆ ಇತ್ಯಾದಿಗಳ ಆಧಾರದ ಮೇಲೆಯು ಸೃಜಿತಗೊಂಡಿರುತ್ತವೆ. ಅಂತಹ ಸೃಜಿತತ್ವದಿಂದಲೇ ಸಮಾಜದ ಪರಾಕ್ರಮಕ್ಕೆ ಅನ್ವಯಿಸುವರು. ಆದರೆ ಕೆಲವು ಚಿಂತಕರು ಬೇರೊಂದು ಕಾರಣದಿಂದಲೆ ಅಧಿಕಾರಕ್ಕಾಗಿಯೋ, ಅಂತಸ್ಥಿಗಾಗಿಯೋ, ಪ್ರತಿಷ್ಠೆಗಾಗಿಯೋ ಸಾಮಾಜಿಕ ಚಿಂತನೆಯ ಸ್ವರೂಪ ತಿಳಿಯದವರಾಗಿದ್ದಾರೆ. ಸಾಮಾಜಿಕ ಚಿಂತಕರು ಪ್ರಬುದ್ಧರು ಹಾಗೂ ಮೇಧಾವಿಗಳೆನಿಸಿಕೊಂಡು, ಸಮಾಜದ ಸರ್ವಸಮಸ್ಯೆಗೂ ಪರಿಹಾರ ಕೊಡಬಲ್ಲೇನು ಎಂದು ಹೇಳುತ್ತಾ ಯಾವುದೇ ಒಂದು ಸಣ್ಣ ಎಳೆಯನ್ನು ಜನರೆದರು ಅನಾವರಣ ಮಾಡಿ ಸಂಘರ್ಷ ಉಂಟುಮಾಡಿರುತ್ತಾರೆ. ಆ ಮೂಲಕ ಢಾಂಬಿಕತನದ ಹೋರಾಟದ ನೆಪದ ಮೂಲಕ ಪ್ರಾಮಾಣಿಕವಾಗಿ ಶ್ರಮಿಸುತ್ತಿರುವವರನ್ನು ಮೂಲೆಗುಂಪು ಮಾಡುವ ಅಸಲಿ ಸಾಮಾಜಿಕ ಚಿಂತಕರ ಪಡೆಯೂ ಇದೆ. ಇಂಥವರು ಪ್ರಾಚೀನ, ಮಧ್ಯಕಾಲೀನ ಹಾಗೂ ಆಧುನಿಕ ಸಮಾಜದ ಉಗಮ ಪರಿವರ್ತನೆಯನ್ನು ಆಳವಾಗಿ ಅಧ್ಯಯನ ಮಾಡದಿರುವುದು ಒಂದೆಡೆಯಾದರೆ, ಸಂಕುಚಿತ ಮತ್ತು ಅವೈಜ್ಞಾನಿಕ ವೈಚಾರಿಕತೆಯಿಂದಾಗಿ ನೇರವಾಗಿ ಪರಿಹಾರ ಸೂಚಿಸಲು ಮುಂದಾಗಿ ಕೊನೆಗೆ ವಿಫಲರಾಗುತ್ತಾರೆ. ಇಲ್ಲವೇ ಸಮಸ್ಯೆಗಳನ್ನು ಕಂಡು ದಿಗ್ಭ್ರಾಂತರಾಗುತ್ತಾರೆ. ಭವಿಷ್ಯ ಇಂಥವರನ್ನು ಕಂಡೆ ಸುಪ್ರಸಿದ್ಧ ಸಮಾಜಶಾಸ್ತ್ರಜ್ಞರಾದ ಇ.ಎಸ್. ಬೋಗಾರ್ಡ್ ಅಭಿಪ್ರಾಯಪಡುವುದೇನೆಂದರೆ ಅಪ್ರಬುದ್ಧ ಚಿಂತಕರಿಂದಾಗಿಯೆ ನೈಜ ನಾಗರಿಕತೆಗಳು ಕುಸಿದಿದೆ. ಸಾಮಾಜಿಕ ಸಮಸ್ಯೆಗಳು ಪರ್ವತದಂತೆ ಎತ್ತರವಾಗಿ ಬೆಳೆದಿವೆ ಎನ್ನುತ್ತಾರೆ. ಆದ್ದರಿಂದ ಇಂಥವರು ಮೊದಲು ಪ್ರಚಲಿತ ಸರ್ವಸಮಸ್ಯೆಗಳ ಆಳ-ಅಗಲಗಳನ್ನು ಮಾನವೀಯ ನೆಲಗಟ್ಟಿನ ಮೇಲೆ ವೈಜ್ಞಾನಿಕ ಮತ್ತು ವಾಸ್ತವಿಕ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕೆನ್ನುತ್ತಾರೆ. ಇಂಥವರ ವಾಸ್ತವಿಕ ನೆಲೆಗಟ್ಟು ಅರ್ಥವಾಗುವುದು. ಇಂತಹ ವೈಜ್ಞಾನಿಕ ಪ್ರಜ್ಞೆಯು ಸಾಮಾಜಿಕ ಚಿಂತನೆಯ ಅಧ್ಯಯನದಿಂದ ಮಾತ್ರ ಸಾಧ್ಯವಾಗಿದ್ದು, ಆ ಮೂಲಕ ಪ್ರಚಲಿತ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಮೊದಲಾದ ಸಾಮಾಜಿಕ ಸಮಸ್ಯೆಗಳಿಗೆ ಕಾರಣ, ಸಂಬಂಧ ಹಾಗೂ ಪರಿಹಾರ ಸೂಚಿಸಿ ಸಂಪೂರ್ಣವಾಗಿ ಅಲ್ಲವಾದರೂ ಗರಿಷ್ಠ ಪ್ರಮಾಣದಲ್ಲಿ ಸಮಸ್ಯೆ ಪರಿಹರಿಸಲು ಸಾಧ್ಯವಾಗುವುದು. ಆದುದರಿಂದ ಚಿಂತಕರ ಚಿಂತನೆಯು ಸಮಾಜಮುಖಿಯಾಗಿ, ಸಾಮಾಜಿಕ ಸನ್ನಿವೇಶಗಳನ್ನು ಸಮಾಜಶಾಸ್ತ್ರೀಯವಾಗಿ ಅಧ್ಯಯನ ಕೈಗೊಳ್ಳಲು ಆಸಕ್ತರಿದ್ದ ಚಿಂತಕರು ಸಾಮಾಜಿಕ ಚಿಂತನೆಯನ್ನು ಉತ್ಪ್ರೇಕ್ಷಿಸುವಂತಿಲ್ಲ. ಸಾಮಾಜಿಕ ಚಿಂತನೆ ಎಂಬುದು ಹಳೆಯಕಾಲದ ಒಂದು ಪರಿಕಲ್ಪನೆ ಎಂಬ ಕಾರಣಕ್ಕಾಗಿಯೂ ಕಡೆಗಣಿಸುವಂತಿಲ್ಲ. ಏಕೆಂದರೆ ಭೌತವಿಜ್ಞಾನಗಳಲ್ಲಿ ಬಹಳವಾಗಿ ಇರುವಂತಹ ಸಾಮಾಜಿಕ ವಿಜ್ಞಾನಗಳನ್ನು,ಹೊಸ ಜ್ಞಾನವು ಹಳೆಯ ಜ್ಞಾನವನ್ನು ಅಳಿಸಿ ಹಾಕಬಹುದಾದ ಸಂಭವ ವಿರಳ. ಏಕೆಂದರೆ ಸಾಮಾಜಿಕ ಸಂಬಂಧದ ಹಲವು ಸನ್ನಿವೇಶಗಳೆ ಆಯಾಕಾಲದ ಚರಿತ್ರೆ ಉಗಮಗೊಳ್ಳಲಿಕ್ಕೆ ಕಾರಣವಾಗುವುದು. ಆದ್ದರಿಂದ ಚರಿತ್ರೆ ಎಂದರೇನೆ ಗತಕಾಲದ್ದನ್ನು ಪತ್ತೆ ಹಚ್ಚಿ ಪ್ರಸ್ತುತ ಕಾಲಕ್ಕೆ ತಕ್ಕಂತೆ ಸತ್ಯಾನ್ವೇಷಣೆ ಮಾಡಿ ಅನಾವರಣಗೊಳಿಸಬೇಕಾಗಿರುವುದರಿಂದ

ಮತ್ತು ಸಾಮಾಜಿಕ ಚಿಂತನೆಯು ಮೂಲಭೂತ ಜ್ಞಾನಕ್ಕೆ ಸಂಬಂಧಿಸಿದ್ದರಿಂದಲೂ ಅತ್ಯುಪಯುಕ್ತವಾಗಿದೆ. ಸುದೀರ್ಘಕಾಲಗತಿಯಲ್ಲಿ ರೂಪಿತವಾಗಿರುವ ಸಾಮಾಜಿಕ ಚಿಂತನೆಯ ಶಾಸ್ತ್ರೀಯ ಅಧ್ಯಯನವು ಅಗತ್ಯವಾದುದಾಗಿರುತ್ತದೆ.[೧೧]

ಸಾಮಾಜಿಕ ಚಿಂತನೆಯು ಹೇರಳವಾಗಿಯೂ ಮೂಲಾಂಶದಂತೆಯು ಕಂಡು ಬರುವುದನ್ನು ಗುರುತಿಸಲಾಗಿದೆ. ಇದನ್ನೇ ಖ್ಯಾತ ಚಿಂತಕ ಆಸ್ಕರ್ ವೈವಡಿಯವರು ಅಭಿಪ್ರಾಯಿಸಿದಂತೆ ವರ್ತಮಾನ ಕಾಲವೊಂದೆ ಸತ್ಯ ಅದನ್ನು ಬಲ್ಲೆ ಎಂಬುವವನಿಗೆ ವರ್ತಮಾನದ ಬಗ್ಗೆ ನಿಜವಾಗಿಯೂ ಏನೇನು ತಿಳಿದಿರುವುದಿಲ್ಲ. ಆದ್ದರಿಂದ ಭೂತಕಾಲದ ತಿಳುವಳಿಕೆಯೂ ಅವಶ್ಯವಾಗಿ ಬೇಕು. ಹೀಗಾಗಿ ಪ್ರಸ್ತುತ ಸಾಮಾಜಿಕ ಪರಿಸ್ಥಿತಿಗಳನ್ನು ಚಿಂತನೆಯ ಮೂಲಕ ಅರಿತುಕೊಳ್ಳ ಬೇಕಾದುದು ಅತ್ಯಗತ್ಯ ಏಕೆಂದರೆ ಪ್ರಸ್ತುತ ಸಾಮಾಜಿಕ ಪರಿಸ್ಥಿತಿಗಳು ಬಹಳಮಟ್ಟಿಗೆ ಪ್ರಾಚೀನ ಸಾಮಾಜಿಕ ಚಿಂತನೆಯಿಂದಲೇ ಪ್ರಭಾವಿತವಾಗಿರುತ್ತವೆ. ಆ ನಿಟ್ಟಿನಿಂದಲೇ ಅಸ್ತಿತ್ವ ಪಡೆದಿರುತ್ತವೆ. ಆದರೆ ಈ ಬಗೆಯ ಪ್ರಭಾವವನ್ನು ಅನೇಕರು ಭಾವಿಸಲಾರರು. ಅವರು ಅಂದುಕೊಳ್ಳುವುದೇನೆಂದರೆ ತಾವಾಗಿಯೇ ಸ್ವತಃ ಆಲೋಚಿಸುತ್ತಿದ್ದೇವೆ, ಭಾವಿಸುತ್ತಿದ್ದೇವೆ ಹಾಗೂ ಇಚ್ಛಿಸುತ್ತಿದ್ದೇವೆ ಎಂಬುದಾಗಿ ಚಿಂತಿಸುತ್ತಾರೆ. ಆದರೆ ವಾಸ್ತವಾಂಶವೆಂದರೆ ಈ ಬಗೆಯ ಚಿಂತನೆಯು ಪ್ರಾಚೀನ ಸಾಮಾಜಿಕ ಚಿಂತನೆಯಿಂದಲೇ ಪ್ರಭಾವಿತಗೊಂಡಿದ್ದು, ಆ ಪ್ರಾಚೀನದ ಬದುಕು ಅಧ್ಯಯನ ಮಾಡಿಕೊಂಡವರಿಗೆ, ಮಾಡುವವರಿಗೆ ಚರಿತ್ರೆಯು ಎಲ್ಲವನ್ನು ಪರಿಚಯಿಸುವ ಅಧ್ಯಯನವಾಗಿ ಸಾಮಾಜಿಕ ಚಿಂತನೆಗೆ ಪ್ರೋತ್ಸಾಹಿಸುವುದು. ಪ್ರಸ್ತುತ ನಾವು ವಾಸಿಸುತ್ತಿರುವ ಸಮಾಜವು, ಏರುತ್ತಿರುವ ಜನಸಂಖ್ಯೆ, ಔದ್ಯೋಗಿಕ ಕ್ರಾಂತಿ, ವಿಜ್ಞಾನ-ತಂತ್ರಜ್ಞಾನದ ಅಭಿವೃದ್ಧಿ, ಅಪಾರ ಪ್ರಮಾಣದ ಉತ್ಪಾದನೆ ಮುಂತಾದ ಹಲವು ಸಮಸ್ಯೆಗಳಿಂದ ಸಂಕೀರ್ಣವಾಗುತ್ತ ನಡೆದಿವೆ. ಅನೇಕ ತರಹದ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಸಮಸ್ಯೆಗಳು ಹುಟ್ಟಿಕೊಂಡಿವೆ. ಇಂತಹ ಹಲವು ಸಮಸ್ಯೆಗಳ ಮೂಲಹಂದರ ಪ್ರಾಚೀನ ಸಮಾಜದಿಂದಲೇ ಉಗಮಗೊಂಡಿದ್ದು, ಇಂದಿನ ವಿವಿಧ ಸಮಸ್ಯೆಗಳ ಬೇರುಗಳು ಪ್ರಾಚೀನ ಕಾಲದಲ್ಲಿ ಆಳವಾಗಿ ಉಳಿದಿವೆ. ಒಂದು ದೃಷ್ಟಿಯಲ್ಲಿ ಇಂದಿನ ಸಮಸ್ಯೆಗಳು ಅಂದಿನ ಕಾಲದಲ್ಲಿ ಮಾನವರು ಬಿತ್ತಿದ್ದ ಬೀಜಗಳ ಫಲವಾಗಿವೆ. ಆದ್ದರಿಂದಲೇ ವಿವಿಧ ಪ್ರಚಲಿತ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಮಾಜಿಕ ಚಿಂತನೆಯ ಅಧ್ಯಯನ ಅತ್ಯವಶ್ಯಕವೆನ್ನುತ್ತಾರೆ ಲಕ್ಷ್ಮಣ್ ತೆಲಗಾವಿಯವರು.

ಪ್ರಾಚೀನ ಸಮಾಜದಿಂದ ಇಂದಿನ ಆಧುನಿಕ ಸಮಾಜದವರೆಗೂ ಒಂದಲ್ಲ ಒಂದು ಬಗೆಯ ಸಮಸ್ಯೆ ಅನುಭವಿಸುವ ಸಮಾಜವನ್ನು ಕಾಣುತ್ತೇವೆ. ಅಂದರೆ ಸಮಸ್ಯೆಗಳಿಲ್ಲದ ಸಮಾಜ ಅಬಾದಿತ.

ಉದಾ:- ಒಂದು ಸಮಾಜ ವಿಘಟನೆಗೊಂಡಿದೆಯೆಂದರೆ, ಅದರರ್ಥ ಅಷ್ಟೊಂದು ಮಾನವ ಸಮಾಜ ನಿರ್ಮಾಣವಾದಾಗಿನಿಂದಲೂ ಹಲವು ಬಗೆಯ ಸಾಮಾಜಿಕ ಸಮಸ್ಯೆಗಳನ್ನು ಎದುರಿಸುತ್ತಾ ಬಂದಿದ್ದಾನೆ. ಪರಿಣಾಮ ಚಿಂತನೆಗೀಡಾಗಿದ್ದಾನೆ. ಅಂತಹ ಚಿಂತನೆಯು ಕೆಲವು

ವೇಳೆ ಗೊಂದಲದಲ್ಲಿ ಪರ್ಯಾವಸಾನವಾಗಿರುತ್ತದೆ. ಜಗತ್ತಿನ ಯಾವುದೇ ಭಾಗದಲ್ಲಿ ವಾಸಿಸುತ್ತಿರುವ ಜನಸಾಮಾನ್ಯರು ವಿವಿಧ ಬಗೆಯ ಸಾಮಾಜಿಕ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿರುವುದನ್ನು ಗುರುತಿಸುತ್ತೇವೆ. ಇಂತಹ ಸಮಸ್ಯೆಗಳನ್ನು ಆ ಸಮಸ್ಯೆಗಳ ಒಳನೋಟವನ್ನು ಭಾವಿಸಿ, ವಿಶ್ಲೇಷಿಸಿ ತಮ್ಮದೇ ಆದ ರೀತಿಯಲ್ಲಿ ಅರ್ಥೈಸುವ ಪ್ರಯತ್ನದಲ್ಲಿ ಸಮಾಜದ ಸದಸ್ಯರಾದ ಸ್ತ್ರೀ ಮತ್ತು ಪುರುಷರಿಬ್ಬರೂ ತೊಡಗಿರುತ್ತಾರೆ. ಇಂತಹ ಪ್ರಯತ್ನದ ಯಶಸ್ಸಿನ ಮೇಲೆಯೇ ಸಾಮಾಜಿಕ ಚಿಂತನೆಯ ಬೆಳವಣಿಗೆಯೂ ನಿಂತಿರುವುದನ್ನು ಗಮನಿಸಬಹುದು. ಇಂತಹ ಚಿಂತನೆಯು ಪ್ರಜಾಸತ್ತಾತ್ಮಕ ಹೊಂದಾಣಿಕೆಯ ಬದುಕಿನಲ್ಲಿ ಪ್ರಜಾತಾಂತ್ರಿಕವಾಗಿಯೆ ಆಲೋಚಿಸುವಂತ ಸಂದರ್ಭ ನಿರ್ಮಾಣವಾಗುತ್ತಿದೆ. ಅಂದರೆ ಸಮಸ್ಯೆಗಳು ಎಲ್ಲರಿಗೂ ಬಹಿರಂಗವಾಗಿರುವುದರಿಂದ ಅವುಗಳನ್ನು ಎಲ್ಲ ಜನ ಸಮುದಾಯ ಅನುಭವಿಸಿದ್ದರೆಂತಲೇ ಅರ್ಥ. ಹೀಗಾಗಿ ಕೆಲವೇ ಕೆಲವರು ಮಾತ್ರ ಸಾಮಾಜಿಕ ಚಿಂತನೆಯ ರಾಯಭಾರಿಯಾಗದೆ ಸಾರ್ವತ್ರಿಕರು, ಸಾರ್ವತ್ರಿಕವಾಗಿರಬಹುದಾದ, ಸಾರ್ವತ್ರಿಕ ಸಾಮಾಜಿಕ ಸಮಸ್ಯೆಗಳ ಬಗ್ಗೆ ಜನಸಾಮಾನ್ಯರು ಸಾಮೂಹಿಕವಾಗಿ ಯೋಚಿಸಲು ಪ್ರಾರಂಭಿಸಬೇಕು. ಅವುಗಳ ಕುರಿತಂತೆ ಅದರ ಸ್ವರೂಪ, ಕಾರಣ, ಸಂಬಂಧ, ತೀವ್ರತೆ ಹಾಗೂ ಪರಿಹಾರಗಳನ್ನು ಒಳಗೊಂಡಂತೆ ಆಲೋಚಿಸಬೇಕು. ಸಮಸ್ಯೆ ಅನುಭವಿಸುವವರಂತು ತಮ್ಮ ಅಭಿಪ್ರಾಯಗಳನ್ನು ಪ್ರಾಮಾಣಿಕವಾಗಿ ಅಭಿವ್ಯಕ್ತಪಡಿಸಬೇಕು. ಯಾವುದೇ ಒಂದು ನಿರ್ದಿಷ್ಟ ಸಾಮಾಜಿಕ ಸಮಸ್ಯೆಯ ಕಾರಣಗಳು, ಪರಿಣಾಮಗಳು, ಪರಿಹಾರೋಪಾಯಗಳನ್ನು ಕಂಡುಕೊಳ್ಳುವಲ್ಲಿ ತಮ್ಮನ್ನು ತಾವು ಗಣನೀಯವಾಗಿ ತೊಡಗಿಸಿಕೊಳ್ಳಬೇಕು. ಹಾಗೆಯೆ, ಇದನ್ನು ಆಳುವ ಜನ ನಾಯಕರು ಸಮಾಜ ಜೀವನದ ಬಗ್ಗೆ ಆಸ್ಥೆವುಳ್ಳವರಾಗದಿದ್ದರೆ ಸಾಮಾನ್ಯ ಜನತೆಯ ಸಾಮಾಜಿಕ ವಿಚಾರ ಮಟ್ಟವನ್ನು ಮೀರಿ ಬಹಳ ದೂರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮತ್ತು ಅನುಷ್ಠಾನಗೊಳಿಸುವಲ್ಲಿ ಸಾಫಲ್ಯ ಕಾಣಲಾರರು. ಏಕೆಂದರೆ ಈ ನಿಟ್ಟಿನಲ್ಲಿ ಸಾಮಾನ್ಯ ಜನತೆಯ ಸಾಮಾಜಿಕ ವಿಚಾರಮಟ್ಟವು ಗಣನೀಯ ಪ್ರಮಾಣದ ಪಾತ್ರವಹಿಸುತ್ತದೆ. ಒಬ್ಬ ಸಂಶೋಧಕನು ಈ ಮೊದಲು ಸಮಾಜದ ಜೀವಿಯಾಗಿ ಆ ನಂತರ ಸಂಶೋಧಕನ ಸ್ಥಾನದಲ್ಲಿದ್ದುಕೊಂಡು ಚಿಂತಿಸಬೇಕಾಗುವುದು. ಇಲ್ಲವೆಂದಲ್ಲಿ ಪಾರಂಪರಿಕವಾಗಿ ಬಂದ ಅಸೈದ್ಧಾಂತಿಕ ಕ್ರಮದ ನೆಲೆಯಲ್ಲಿ ಚಿಂತಿಸಿದರೆ ಏಕಮುಖ ಚಿಂತನೆಯಾಗುವುದು. ಹೀಗೆ ಚಿಂತಿಸುವುದರಿಂದ ಸಾಮಾಜಿಕ ಸಂಬಂಧದ ಬಾಂಧವ್ಯದ ಭಿನ್ನತೆಯ ಒಳಹುಗಳು ಕೆಲವರಿಗೆ ಸೀಮಿತವಾಗಿತ್ತು.

ಆದ್ದರಿಂದಲೇ ಇಲ್ಲಿಯ ತನಕವು ಚಿಂತನೆಯ ಪರಿಕಲ್ಪನೆ ಸಾಮಾನ್ಯೀಕರಣಗೊಂಡಿಲ್ಲ. ಅಂದರೆ ಜನಸಾಮಾನ್ಯರ ಬಳಿ ಸುಳಿಯುವಲ್ಲಿ ಅವಕಾಶವಾಗಿರಲಿಲ್ಲ. ಆದರೆ ಇಂದು ಕಾಲ ಮತ್ತು ಪರಿಸ್ಥಿತಿಗಳು ಬದಲಾಗಿವೆ. ಆ ಬಗೆಗಿನ ತಿಳುವಳಿಕೆ ಎಲ್ಲಾ ಜನರನ್ನು ತಲುಪಲು ಅವಕಾಶವಾಗಿರುವುದರಿಂದ ಸಾಮಾಜಿಕ ಚಿಂತನೆ ಎಂಬುದು ವಿಲಾಸಿಯೋ ಅಥವಾ ಕಾಟಚಾರದ ವಿಚಾರವಾಗದೆ, ನೈಜವಾಗಿಯೂ ಸಮೂಹ ಚಿಂತನೆಯಾಗಬೇಕು. ಇಡೀ ಜನಸಮೂಹ ಅಥವಾ ಆ ಜನ ಸಮುದಾಯದ ಬಹುಭಾಗವಾದರೂ ಸಾಮಾಜಿಕ ಚಿಂತನೆಯ ಸ್ವರೂಪ

ಅರ್ಥಮಾಡಿಕೊಳ್ಳಬೇಕು ಹಾಗೂ ಅದರ ಲಾಭ ಎಲ್ಲರನ್ನು ತಲುಪಬೇಕು ಎಂಬುದು ತೆಲಗಾವಿಯವರ ಚಿಂತನೆಯಾಗಿದೆ. ಏಕೆಂದರೆ ಇದುವರೆಗೆ ಹಾಗೆ ಆಗಿಲ್ಲದಿರಲಾಗಿ ಜನಸಾಮಾನ್ಯರಿಗೆ ಸಾಮಾಜಿಕ ಚಿಂತನೆಯ ಬಗ್ಗೆ ಒಂದು ಬಗೆಯ ತಾತ್ಸರಭಾವನೆಯಿದೆ. ಅದು ತಪ್ಪಬೇಕು ಸದೃಢ ಸಾಮಾಜಿಕ ಚಿಂತನೆ ಪ್ರಜಾಪ್ರಭುತ್ವೀಕರಣಗೊಳ್ಳಬೇಕೋ ಹೊರತು, ಬದಲಾಗಿ ಚಿಂತಕನೆ ಸಂಕುಚಿತವುಳ್ಳವನಾದರೆ ಬೇರೊಂದು ತರಹದ ಸಮಸ್ಯೆ ಎದುರಾಗುವುದು. ಆದ್ದರಿಂದ ಸಾಮಾಜಿಕ ಸಮಸ್ಯೆಗಳನ್ನು ಕಂಡುಕೊಂಡ ಮೇಧಾವಿಗಳು ಆ ಬಗ್ಗೆ ಚಿಂತನೆ ಮತ್ತು ಪ್ರಾಯೋಗಿಕ ಇಲ್ಲವೆ ಕಾರ್ಯನಿರತ ವ್ಯಕ್ತಿ ಎಂದು ಕರೆಸಿಕೊಳ್ಳುವವರು. ತಮ್ಮದೇ ಮಾರ್ಗದರ್ಶನದಲ್ಲಿ ಸಾಗುವರು. ಅಂಥವರು ವ್ಯಕ್ತಿಗತ ಅನುಭವವುಳ್ಳರಾಗಿದ್ದು ಆ ಅನುಭವದ ಧೋರಣೆಯ ಅಜೆಂಡವಾಗಿರಲೂಬಹುದು. ಈ ಚಿಂತಕರು ತಮಗೆ ಅನ್ಯಾಯವೆಂದು ಯಾವುದು ಅನಿಸಿರುತ್ತದೆಯೊ ಅದರಿಂದಲೇ ಪ್ರಚೋದಿತನಾಗಿ ತನಗೆ ಸರಿ ಕಂಡ ರೀತಿಯಲ್ಲಿ ನಡೆದುಕೊಂಡು ತನ್ನ ಸುತ್ತಮುತ್ತಲಿನವರನ್ನು ಆ ಅಜೆಂಡಾದ ಪರಿಕಲ್ಪನೆಗೆ ಹೊಂದಿಕೊಳ್ಳುವಂತೆಯೂ ಪ್ರಯತ್ನಿಸುವುದು, ಮತ್ತೊಂದೆಡೆ ಕೆಲವು ಸನ್ನಿವೇಶಗಳಿಂದ ವಿಚಲಿತನಾಗಿ, ಭಾವಪರವಶನಾಗಿ ಸಮಂಜಸವಲ್ಲದ ತೀರ್ಮಾನಕ್ಕೆ ಬರುವನು. ತತ್ಫಲವಾಗಿ ಆತನು ಮೊದಲೇ ಸಿದ್ಧವಾದ ಪರಿಹಾರೋಪಾಯಗಳನ್ನು ಇಲ್ಲವೆ ಕಾರ್ಯಕ್ರಮಗಳನ್ನು ಅನುಸರಿಸಲು ಒಪ್ಪಿಗೆ ಸೂಚಿಸುವರು. ಇಂಥ ಚಿಂತಕರ ಬಳಿ ಸರಿಯೆನಿಸಿದ ಪರಿಹಾರೋಪಾಯವಿಟ್ಟು ಕೊಂಡು ಅದನ್ನೇ ಸಮಸ್ಯೆ ಪರಿಹಾರಕ್ಕೆ ಸೂಚಿಸುವರು. ಅಂತಹ ಸಂದರ್ಭಗಳಲ್ಲಿ ಸಾಮಾನ್ಯವಾಗಿ ಆ ವ್ಯಕ್ತಿಯ ವೀಕ್ಷಣೆ, ಪರಿಶೋಧನೆ ಮತ್ತು ತೀರ್ಮಾನಗಳು ಆತನ ವೈಯಕ್ತಿಕ ಬುದ್ಧಿಶಕ್ತಿಗೆ ಸೀಮಿತವಾಗಿರುತ್ತವೆ. ಕೆಲವು ಚಿಂತಕರಿಗೆ ಕೆಲವು ಸಂದರ್ಭದಲ್ಲಿ ಕಾರಣಗಳು ಅನುಭವದ ಕೊರತೆ ಅಥವಾ ತರಬೇತಿ ಇಲ್ಲದಿರುವುದು ಅಧ್ಯಯನ ಗೈಯದಿರುವುದರಿಂದ ಸಮಾಜಮುಖಿ ಚಿಂತನೆ ಬರಲಾರದು. ಆದ್ದರಿಂದ ಆತನ ವಿಚಾರ ಧಾರೆಗಳು ತರ್ಕಹೀನವಾಗಿರಬಹುದಾದ ಸಂಭವವಿರುತ್ತದೆ. ಅಂಥವರು ತಲುಪಿದ ನಿರ್ಣಯಗಳು ಸಂಕುಚಿತವಾಗಿರಬಹುದಾದ ಸಾಧ್ಯತೆಯಿರುತ್ತದೆ. ಆ ಸಂಬಂಧ ಸಾಮಾಜಿಕ ಚಿಂತನೆ ಹೊಂದಿದಂತಹ ಕಾರ್ಯನಿರತ ವ್ಯಕ್ತಿಗಳು ಅನೇಕ ಸಂದರ್ಭಗಳಲ್ಲಿ ಕನಿಷ್ಠ ಮಟ್ಟದ ಮೀಮಾಂಸಕರಾಗಿರುತ್ತಾರೆ. ಅಪಾಯಕಾರಿ ತಾತ್ವಿಕ ಪ್ರತಿಪಾದಕರಾಗಿಯೂ ಈ ಚಿಂತಕರು ಸದೃಢ ಸಾಮಾಜಿಕ ಚಿಂತನೆಯನ್ನು ಉದ್ದೇಶಪೂರ್ವಕವಾಗಿ ಉಪೇಕ್ಷಿಸಿ ತಮ್ಮದೇ ಅಶಾಸ್ತ್ರೀಯ ತಾತ್ವಿಕತೆಯನ್ನು ಮಂಡಿಸಲು ಹಿಂಜರಿಯುತ್ತಾರೆ. ಈ ಚಿಂತಕರು ಸದೃಢ ಸಾಮಾಜಿಕ ಚಿಂತನೆಯ ತಾತ್ವಿಕ ಹಿನ್ನೆಲೆಯನ್ನು ಒಪ್ಪುವ ಮುಕ್ತ ಮನಸ್ಸಿನವರಾಗಿರುವುದಿಲ್ಲ. ಎರಡು ಬಿಡಿ ಸಂಬಂಧಗಳ ನಡುವೆ ಇರಬೇಕಾದ ಅಗತ್ಯ ಬೆಸುಗೆಯ ಸಂಯೋಜನೆಯ ಅವಶ್ಯಕತೆ ಹಾಗೂ ಅಂತಹ ವಾತಾವರಣ ನಿರ್ಮಿಸಲು ಅಗತ್ಯವಾದ ವೈಜ್ಞಾನಿಕ, ತಾಂತ್ರಿಕ ಜ್ಞಾನವನ್ನು ಭಾವಿಸಿದಷ್ಟು ಅಂಧರೋಪಾದಿಯಲ್ಲಿ ಕಂಡು ಬರುತ್ತಾರೆ. ಇಂತಹ ಮನೋಸ್ಥಿತಿಯವರು ಸಾಮಾಜಿಕ ಜೀವನದ

ವೈಜ್ಞಾನಿಕ ವಸ್ತುನಿಷ್ಠ ವಿಶ್ಲೇಷಣೆಯನ್ನು ಬದಿಗೊತ್ತಿ, ತಮ್ಮ ಬೌದ್ಧಿಕ ಜ್ಞಾನಕ್ಕೆ ಮೀಸಲಾದ ವಿಧಾನಗಳನ್ನು ಅನುಸರಿಸಲು ಮುಂದಾಗಿದ್ದರಿಂದಲೆ, ಇಂದಿಗೂ ಅನೇಕ ಸಮಸ್ಯೆಗಳು ಪರಿಹಾರ ಕಾಣದೇ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಹೋಗುತ್ತವೆ.

ಈಗಿರುವ ಸಾಮಾಜಿಕ ಸಮಸ್ಯೆಗಳ ಜೊತೆಗೆ ಹೊಸ ಸಾಮಾಜಿಕ ಸಮಸ್ಯೆಗಳು ಬೃಹತ್ ಪ್ರಮಾಣದವುಗಳಾಗಿ ಬೆಳೆಯುತ್ತಿವೆ. ಇಂಥವರು ಚಿಂತಿಸುವುದಕ್ಕಿಂತ ಸುಮ್ಮನ್ನಿರುವುದೇ ಲೇಸೆನ್ನುತ್ತಾರೆ ತೆಲಗಾವಿಯವರು. ಹಾಗೆಯೇ ಮುಂದುವರಿದ ಅಭಿಪ್ರಾಯವೇನೆಂದರೆ ಸದೃಢ ಸಾಮಾಜಿಕ ಚಿಂತನೆಯ ಹಾದಿಯಲ್ಲಿ ಕಂಡುಬರುವ ಮತ್ತೊಂದು ಅಡೆತಡೆ ಎಂದರೆ, ಸೂಕ್ತ ಬೌದ್ಧಿಕ ಪ್ರತಿಭೆಯ ಹಿನ್ನೆಲೆ ಇಲ್ಲದಿರುವುದು. ಜನಸಮಾನ್ಯರ ಸಾಮಾಜಿಕ ಪ್ರಶ್ನೆಗಳಿಗೆ ಪರಿಹಾರ ಸೂಚಿಸಲು ಉತ್ಸುಕರಾಗಿರುವುದಾಗಿ ಕಂಡುಬರುತ್ತಾರಾದರೂ ಸಾಮಾಜಿಕ ಪ್ರಕ್ರಿಯೆಗಳು ಹಾಗೂ ಕಾನೂನುಗಳ ಜ್ಞಾನವನ್ನು ಒಳಗೊಂಡಂತೆ ಅಗತ್ಯ ತಿಳುವಳಿಕೆಯಿಂದ ಸಜ್ಜುಗೊಂಡಿರುವುದಿಲ್ಲ ಮತ್ತು ಇಂತಹ ಅವಶ್ಯಕ ತಿಳುವಳಿಕೆಯನ್ನು ಪಡೆದುಕೊಳ್ಳಲು ಆಸಕ್ತಿಯನ್ನು ವಹಿಸುವುದಿಲ್ಲ. ಆಕಸ್ಮಿಕವಾಗಿ ಕೆಲವು ಸಾಮಾಜಿಕ ಸಮಸ್ಯೆಗಳ ಕಾರಣ. ಪರಿಣಾಮ ಹಾಗೂ ಪರಿಹಾರಗಳು ಜನಸಾಮಾನ್ಯರಿಗೆ ಕೆಲವು ಪರಿಹಾರ ಹೊಳೆಯಬಹುದಾದರೂ, ಇಂತಹ ಹೊಳೆಯುವಿಕೆಗೆ ಐತಿಹಾಸಿಕ ಹಿನ್ನೆಲೆ ಹೊಂದಿದ್ದರೆ ಮಾತ್ರ ಸಾಧ್ಯವೆಂಬುದಾಗಿದೆ. ವರ್ತಮಾನ ಕಾಲದಲ್ಲಿ ಕಂಡುಬರುವ ಎಲ್ಲಾ ಸಾಮಾಜಿಕ ಪ್ರಶ್ನೆಗಳಿಗೆ ಮಾನವ ಇತಿಹಾಸದ ಸುದೀರ್ಘ ಹಿನ್ನೆಲೆ ಇರಬಹುದಾಗಿ, ಪ್ರಚಲಿತ ಸಂದರ್ಭದಲ್ಲಿ ಕಂಡುಬರುವ ಅಸಮಾನತೆಯೂ ಹಿಂದಿನ ಸುದೀರ್ಘವಧಿಯ ಪೂರ್ವ ಚರಿತ್ರೆಯ ಅಂಶಗಳ ಸೂಚಿಯಾಗಿರುವುದು ಇಂದಿನ ದಿನಮಾನಗಳ ಅನಿಷ್ಟ ಮೌಢ್ಯಗಳ ಬಗೆಗಿನ ಸದೃಢ ಚಿಂತನೆಗೆ ಸಾಮಾಜಿಕ ಪ್ರಕ್ರಿಯೆಗಳ ಜ್ಞಾನವು ಅವಶ್ಯಕವಾಗಿದೆ. ಈ ನಿಟ್ಟಿನಲ್ಲಿ, ಸದೃಢ ಸಾಮಾಜಿಕ ಚಿಂತನೆಯ ಇತಿಹಾಸವು ಹೆಚ್ಚು ಪ್ರಯೋಜನಕಾರಿಯಾಗಿ ಕ್ರಿಯಾಶೀಲವಾಗಿರುತ್ತದೆ. ಸಾಮಾಜಿಕ ಕ್ರಿಯೆಯು ಅಷ್ಟೇ ಅಪಾಯಕಾರಿಯಾದದ್ದು ಅಪನಂಬಿಕೆ. ಅಂಧಅಪೇಕ್ಷೆಗಳಿಂದ ಮೂಡಿಬಂದ ಸಾಮಾಜಿಕ ಕ್ರಿಯೆ ಒಳ್ಳೆಯದನ್ನು ಮಾಡುವುದಕ್ಕಿಂತಲೂ ಕೆಟ್ಟದ್ದನ್ನು ಮಾಡುವುದು. ಆದ್ದರಿಂದಲೆ ಸಾಮಾಜಿಕ ಅನುಭವಗಳ ಇತಿಹಾಸ ಮತ್ತು ಸಾಮಾಜಿಕ ಅನುಭವಗಳಿಂದ ಬೆಳೆದುಬಂದ ಸಾಮಾಜಿಕ ಚಿಂತನೆಯ ಜ್ಞಾನವು ವಿವೇಕಯುತ ಸಾಮಾಜಿಕ ಕ್ರಿಯೆಯ ಮೂಲವಾಗಿರುವುದು.[೨]

ಹೀಗೆ ಲಕ್ಷ್ಮಣ್ ತೆಲಗಾವಿಯವರು ಸಾಮಾಜಿಕ ಚಿಂತನೆ, ಅದರ ಸ್ವರೂಪ, ಕಾರ್ಯ ಅವುಗಳ ಮಹತ್ವ ಅಳವಡಿಸಿಕೊಳ್ಳುವ ವಿಧಾನ, ಅನಿವಾರ್ಯರತೆಯ ಬಗ್ಗೆ ಆಳವಾಗಿ ಅಧ್ಯಯನ ಮಾಡಿದ್ದರ ಫಲವಾಗಿ ಸಾಮಾಜಿಕ ವಿಜ್ಞಾನಕ್ಕೆ, ಸಾಮಾಜಿಕ ಚಿಂತನೆಯ ಲೋಕಕ್ಕೆ ಮತ್ತಷ್ಟು ಶಕ್ತಿ ಬರುವಲ್ಲಿ ಶ್ರಮಿಸಿದ್ದಾರೆ.

೬.೫. ಅಲಕ್ಷಿತರಪರ ಚಿಂತನೆಗಳು

ವಿಸ್ಮೃತ ಅಸಾಮಾನ್ಯ ಚಿಂತಕರಾದ ತೆಲಗಾವಿಯವರು ಸಮಾಜದಲ್ಲಿನ ಅಲಕ್ಷಿತರ ಒಡನಾಡಿಯಾಗಿ ಅವರುಗಳ ಬದುಕನ್ನು ಸೂಕ್ಷ್ಮ ಮತ್ತು ಸಮಗ್ರವಾಗಿ ಅಧ್ಯಯನ ಮಾಡಿ

ತಮ್ಮದೆ ದೃಷ್ಟಿಕೋನದ ಹಿನ್ನೆಲೆಯಲ್ಲಿ ಅಲಕ್ಷಿತರನ್ನು ಈ ಮುಂದಿನಂತೆ, ಕಂಡುಕೊಂಡ ಸತ್ಯಗಳನ್ನು ನಿರೂಪಿಸುತ್ತಾರೆ.

ಬಹುಸಂಖ್ಯಾತ ಅಲಕ್ಷಿತರು ಅಸ್ಪೃಶ್ಯರಾಗಿ, ಶೋಷಿತವರ್ಗದವರಾಗಿ, ಭೂರಹಿತರಾಗಿ, ಕೃಷಿ ಕಾರ್ಮಿಕರಾಗಿ, ಸಂಪ್ರದಾಯಿಕ ಕರಕುಶಲ ಕರ್ಮಿಗಳಾಗಿ, ಗ್ರಾಮ ಸಂಬಂಧಿ ಹಿನ್ನೆಲೆಯ ಪ್ರಬಲ ಕೋಮಿನವರಿಂದ ಅನೇಕ ರೀತಿಯ ದೌರ್ಜನ್ಯಕ್ಕೊಳಗಾಗಿ, ಗುಲಾಮರಂತೆ, ಪ್ರಾಣಿಗಳಂತೆ ಜೀತದಾಳಾಗಿ ಗ್ರಾಮ ಮತ್ತು ನಗರ ಎರಡು ಕಡೆಯು ಸಂಕಷ್ಟದ ಜೀವನ ಸಾಗಿಸುತ್ತಿದ್ದಾರೆ. ಅಲಕ್ಷಿತರ ಶಾಶ್ವತ ಬಳುವಳಿಯಂತೆ ಕಂಡುಬರುವ ಗುಲಾಮಗಿರಿ, ಬಡತನ, ಹಸಿವು, ಅಸ್ಪೃಶ್ಯತೆ, ಅನಕ್ಷರತೆ, ದಾರಿದ್ರ್ಯ, ಸಾಮಾಜಿಕ, ಆರ್ಥಿಕ ಅನರ್ಹತೆ, ಮೌಢ್ಯತೆ, ಅಲೆಮಾರಿತನ ಆದಿವಾಸಿತನದ ಸ್ವರೂಪಗಳು ಇಂದಿಗೂ ಜೀವಂತವಾಗಿದ್ದಿರ ನಿಮಿತ್ತವಾಗಿಯೆ, ಇವರ ಸಾಮಾಜಿಕ, ಆರ್ಥಿಕ, ಅಂತಸ್ತಿನಲ್ಲಿ ಹೇಳಿಕೊಳ್ಳುವಂತಹ ಬದಲಾವಣೆಯಾಗಿಲ್ಲ. ಒಂದೆಡೆ ಊಳಿಗಮಾನ್ಯ ಪದ್ಧತಿ, ಜೀತಪದ್ಧತಿಯಂತಹ ವಿಷವರ್ತುಲ ಗ್ರಾಮದಲ್ಲಿ ಚಾಲನೆಯಿದ್ದರೆ, ಮತ್ತೊಂದೆಡೆ ನಗರದಲ್ಲಿಯೂ ಕೈಗಾರಿಕಾದಂತಹ ವಲಯಗಳಿಂದಲೂ ಅಸಮಾನತೆ, ದೌರ್ಜನ್ಯ, ತಾರತಮ್ಯತೆ, ಅನುಚಿತತೆ ಎಂಬುದು ಜಾರಿಯಲ್ಲಿದೆ. ಇವರುಗಳ ಜೀವನಾಡಿಯಂತಿರುವ ಹೀನಾಯ ಆಚರಣೆಗಳು ಕೇವಲ ಧಾರ್ಮಿಕ, ಸಾಮಾಜಿಕ ಆಚರಣೆಯಾಗಿರದೆ, ಆರ್ಥಿಕ ಶೋಷಣೆಯ ಸಾಧನವಾಗಿ ಮಾಲಿಕ ಮತ್ತು ಸೇವಕನೆಂಬ ವರ್ಗ ಸೃಷ್ಟಿಸಿ, ಹೀನ, ನಿಕೃಷ್ಟ, ಅಗೌರವ ದೈಹಿಕ ಸಂಕಷ್ಟಗಳ ಸರಮಾಲೆಯಲ್ಲಿ ಸಿಲುಕಿಸಿದ್ದಾರೆ. ಇಂಥವರ ಮನಸ್ಥಿತಿ ಅರಿತ ಪಟ್ಟಭದ್ರರು ಸಂಘರ್ಷದವ್ಯೂಹ ರಚಿಸಿ ಒಂದೊಂದು ಸಮೂಹವನ್ನು ಪ್ರತ್ಯೇಕವಾಗಿ ವಿಭಾಗಿಸಿ ಒಂದು ಭಾಗ ಮತ್ತೊಂದು ಭಾಗದೊಂದಿಗೆ ಯಾವುದೇ ಕಾರಣಕ್ಕೂ ಸಂಗಮಿಸದಂತ ಸಂಕೋಲೆ ತೊಡಿಸಲಾಗಿದೆ.

ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ೧/೩ರಷ್ಟು ಜನಸಮುದಾಯ ಒಂದಲ್ಲ ಒಂದು ರೀತಿಯ ಅಲಕ್ಷಿತನಕ್ಕೆ ಒಳಗಾಗಿದ್ದಾರೆ, ಒಳಗಾಗುತ್ತಲೆ ಇದ್ದಾರೆ. ಹಾಗಾಗಿ ಅಲಕ್ಷಿತ ಎಂಬ ಪರಿಕಲ್ಪನೆಯು ಭಾರತದಂತಹ ಜನಸಮುದಾಯಕ್ಕೆ ಸಂಬಂಧಿಸಿದ್ದಾಗಿದ್ದು, ಒಂದು ದೇಶದ ಜನರೊಳಗೆ ಕಂಡುಬರುವ ಪ್ರಕ್ರಿಯೆಯಾಗಿದೆ. ಇದೊಂದು ಗಂಭೀರ ಮತ್ತು ಸಂಕೀರ್ಣ ಸಾಮಾಜಿಕ ವಿದ್ಯಮಾನವಾಗಿ ನಿರ್ದಿಷ್ಟ ಜನಸಮುದಾಯವನ್ನು ಪರಿಣಾಮಕಾರಿಯಾಗಿ ಅಂಚಿಗೆ ತಳ್ಳುವ ಸಾಮರ್ಥ್ಯ ಒಳಗೊಂಡಿದೆ. ಹಾಗಂತ ಅಲಕ್ಷಿತ ಎಂಬ ಪರಿಕಲ್ಪನೆ ಜೈವಿಕ ಕ್ರಿಯೆಯಿಂದಾಗಿ ಉಗಮವಾಗದೆ ಸಾಮಾಜಿಕ ಮತ್ತು ಮಾನಸಿಕ ಪ್ರಕ್ರಿಯೆಯ ಪರಿಕಲ್ಪನೆಯಾಗಿದೆ.

ಹಲವು ಕಾರಣಗಳಿಂದಾಗಿ ಸಮಾಜದ ಒಂದು ಗುಂಪು ಮತ್ತೊಂದು ಗುಂಪನ್ನು ಸಮಾಜದ ಅಂಚಿಗೆ ತಳ್ಳಲ್ಪಟ್ಟರೆ ಅದುವೇ ಅಲಕ್ಷಿತನ, ಇದು ಸಾಮಾಜಿಕ ವಿದ್ಯಮಾನವಾಗಿದ್ದರೂ ಐತಿಹಾಸಿಕ ತಪ್ಪಿನಿಂದಾದ ಪ್ರಕ್ರಿಯೆ. ಈ ಪ್ರಕ್ರಿಯೆ ಶಾಶ್ವತವಾಗಿ ಮುಂದುವರಿಯುವ ಪ್ರತಿಹಂತದಲ್ಲೂ ಅಸಮಾನತೆ ಸೃಷ್ಟಿಸಿರುವ, ಅಧಿಕಾರ ಸೃಷ್ಟಿಸಿ, ಸಮರ್ಥಿಸಿರುವ ಅಸಮಾನತೆ ಮತ್ತು ಅಧಿಕಾರದ ಸೃಷ್ಟಿಗೆ ಪುಷ್ಠಿಯಾಗಿ, ದೈವ ಮತ್ತು ಸಂಪ್ರದಾಯದ ಲೇಪನದ ಬುನಾದಿ ಹಾಕಿ, ಬಹಳ

ಎಚ್ಚರಿಕೆಯಿಂದಲೆ ಪರಸ್ಪರ ಅವಲಂಬಿತ ಸಂಬಂಧಿಗಳ ಮಧ್ಯ ಗೆರೆ ಎಳೆದು, ಆ ಗೆರೆ ಎಂದಿಗೂ ಅಳಿಯದಂತೆ, ನಾಶ ಹೊಂದದಂತೆ ಸದಕಾಲವೂ ಹೊಸ ರೂಪದೊಂದಿಗೆ ಜೀವಂತವಾಗಿರಿಸಿ, ಶಾಶ್ವತ ಸ್ವರೂಪ ಕಾಪಾಡಿಕೊಂಡು ಬರಲು, ಒಂದು ಗುಂಪು ಸದಾ ಪ್ರಜ್ಞಾ ಸ್ಥಿತಿಯಲ್ಲಿಯೆ, ಪ್ರಾಮಾಣಿಕವಾಗಿ ಪ್ರಯತ್ನಿಸುತ್ತದೆ. ಅಲಕ್ಷಿತ ಸಮೂಹಗಳನ್ನು ವಿಸ್ತೃತ ಸಮುದಾಯದೊಂದಿಗೆ ಪೂರ್ಣವಾಗಿ ಸಮಾವೇಶಗೊಳ್ಳಲಾರದೆ ವ್ಯಕ್ತಿಗಳನ್ನು ಅಥವಾ ಸಮೂಹಗಳನ್ನು ಪ್ರತ್ಯೇಕಿಸುವ ವಿಧಾನಗಳಿಂದ ಸಾಮಾಜಿಕವಾಗಿ ಹೊರಗಿರಿಸಿ ಅಲಕ್ಷಿಸುವುದಾಗಿದೆ. ಅಲಕ್ಷಿಕರಣ ಎಂಬುದು ಸಮಾಜದ ವೈವಿಧ್ಯತೆಯ ಸಂಕೇತವೆಂದು ಸಹಜವಾದುದುದೆಂದು ಸಮಾಜ ಸ್ವರೂಪದ ಒಂದು ಅವಿಭಾಜ್ಯ ಭಾಗವೆಂದು, ಅದೇ ಆದರ್ಶ ಸಮಾಜದ ಆದರ್ಶ ಗುಣವೆಂದು ಮುಗ್ಧ ಜನರೆದುರು ನಯವಂಚನೆಯಿಂದ ನಿರೂಪಿಸಿ ನರ್ತಿಸುತ್ತಿದೆ. ಅಲಕ್ಷಿತರು ಸಮಾಜದ ಜೀವನಾಡಿ. ಹಾಗಾಗಿ ಅಲಕ್ಷಿತನ ಎಂಬುದು ಜೀವಸೆಲೆ, ಅಲಕ್ಷಿತರೂ ಇರದಿದ್ದರೆ ಸಮಾಜವೇ ಉಳಿಯಲಾರದು ಎಂದು ಕೆಲವು ಸಮೂಹಗಳು ಎಲ್ಲ ಕಾಲಮಾನಗಳಲ್ಲಿ ಸಮರ್ಥಿಸಿಕೊಂಡು ಬಂದಿದ್ದಾರೆ. ಆದ್ದರಿಂದಲೇ ಅಲಕ್ಷಿತರೂ ಶಾಶ್ವತವಾಗಿರಲು, ಮುಂದೆಂದೂ ಒಂದು ಗೂಡದಂತಹ ಕಂದಕ ನಿರ್ಮಿಸಿದ್ದರ ಪರಿಣಾಮ, ಶಕ್ತ ಮತ್ತು ಅಶಕ್ತರೆಂಬ ಸಮೂಹಗಳಾಗಿ ರೂಪ ತಳೆದುದ್ದಾಗಿದೆ. ಹಾಗಾದರೆ ಅಲಕ್ಷಿತರನ್ನು ಸೃಷ್ಟಿಸಿದರೆ ಮತ್ತೊಂದು ಗುಂಪಿಗೆ ಆಗುವ ಲಾಭವೇನೆಂದು ಮೇಲ್ನೋಟದ ಪ್ರಶ್ನೆಯಾಗಿದೆ. ಆ ಪ್ರಶ್ನೆಗೆ ಉತ್ತರ ಯಾವುದೇ ಒಂದು ಅಧೀನ ಗುಂಪು ಇಲ್ಲದೆ ಹೋದರೆ ನಾವು ಬದುಕಲಾರವೆಂಬ ಸತ್ಯವು ಇನ್ನೊಂದು ಗುಂಪಿಗೆ ಮನವರಿಕೆಯಾಗಿದ್ದರ ನಿಮಿತ್ತ ತಮ್ಮ ಉಳಿವು ಎಂದರೆ ಅಲಕ್ಷಿತ ಗುಂಪಿನ ಸೃಷ್ಟಿ ಮತ್ತು ಪೋಷಣೆ ಎಂಬಂತಾದ್ದರಿಂದಾಗಿ ಸೂಕ್ಷ್ಮತೆಯ ತಂತ್ರಗಾರಿಕೆಯ ಮೂಲಕ ಅಲಕ್ಷಿತರನ್ನು ಸೃಷ್ಟಿಸಿ ಒತ್ತಾಯಪೂರ್ವಕವಾಗಿ ಕೆಲವು ಶ್ರಮಸಂಸ್ಕೃತಿಯನ್ನು ಹೇರಿ, ಬಲಿತ ಮತ್ತು ದಮನಿತ ಎಂಬ ಗುಂಪುಗಳ ಮಧ್ಯೆ ಹಿಂಬೀಳಿಕೆಯ ಬೀಜ ಬಿತ್ತಲಾಗಿದೆ.

ಈ ಹಿಂದೆ ನಿರೂಪಿಸಿದಂತೆ ಅಲಕ್ಷಿಕರಣ ಎಂಬುದು ಸಾಮಾಜಿಕ ವಿದ್ಯಮಾನವಾಗಿದ್ದು ವೈವಿಧ್ಯತೆಯ ಸ್ತರ ವ್ಯವಸ್ಥೆ, ವಂಚಿತತೆ, ಹಿಂದುಳಿದಿರುವಿಕೆಯ, ಬಡತನದ ಸಂಬಂಧಿಯಾಗಿ ಪ್ರತ್ಯೇಕತೆಯಿಂದಲೆ ಬಳಲುತ್ತಾ ಹೋಗಿ ಸಾಮಾಜಿಕ ಸನ್ನಿವೇಶದ ಮಜಲುಗಳಲ್ಲಿ ಇದರ ಪ್ರಮಾಣ ವಿಸ್ತಾರಗೊಳ್ಳುತ್ತದೆ. ಅಲಕ್ಷಿಕರಣದ ವ್ಯಾಪ್ತಿಯು ವಿಸ್ತರಿಸಿಕೊಂಡು ಬೃಹತ್ ಆಕಾರದಲ್ಲಿ ಬೆಳೆದು ಕೊನೆಗೆ ಸಮಾಜವೆ ಅದರಲ್ಲಿ ಸ್ವಾಂಗೀರಣಕ್ಕೊಳಪಟ್ಟು ಮತ್ತೊಂದು ಸಮಾಜದ ನಿರ್ಮಾಣವಾಗುವ ಸಾಧ್ಯತೆ ಹೆಚ್ಚುತ್ತದೆ. ಈ ಕಾರಣದಿಂದಾಗಿ ಅಲಕ್ಷಿತರು ಇಂದಿಗೂ ಕೀಳರಿಮೆ, ಅಭದ್ರತೆ, ಸಂದಿಗ್ಧ ಸ್ಥಿತಿ, ಸಾಮಾಜಿಕ ಅನೈಕ್ಯತೆ, ಸಮಗ್ರತೆಯ ಕೊರತೆ, ಮಾನವ ಹಕ್ಕಿನ ಉಲ್ಲಂಘನೆ, ಯಾತನೆ, ಹಸಿವು, ಬಡತನ, ಅಸಮಾನತೆ, ಅಶಕ್ತತೆ, ಅಧೀನತೆ, ಅನಕ್ಷರತೆ, ಜಾತಿ ವರ್ಗದಂತಹ ಕಂದಕ ನಿರ್ಮಾಣಗೊಂಡಿದ್ದರ ಪರಿಣಾಮ, ಅಲಕ್ಷಿತರು ಎಂಬ ಗುಂಪು ಸಮಾಜದಿಂದ ನಿರ್ಗಮಿಸಲು ಅಸಾಧ್ಯವೇನೋ? ಎಂಬ ಪ್ರಶ್ನೆ ಸಾಮಾಜಿಕ ವಿಜ್ಞಾನಿಗಳಿಗೆ

ಸವಾಲಾಗಿದೆ. ಈ ಸವಾಲು ಸ್ವೀಕರಿಸಿ ಸಮಾನತೆ ಸಮಾಜದ ಕನಸು ಕಾಣುತ್ತಿರುವ ಸಮಾಜ ವಿಜ್ಞಾನಿಗೆ ಸಮಾಜದ ಆಂತರಿಕ ಬದುಕು ವಿಚಿತ್ರವೆನಿಸಿದೆ. ಏಕೆಂದರೆ ಅಲಕ್ಷಿತರು ಎಂಬ ಪರಿಕಲ್ಪನೆ ಸಮಾಜದ ರೋಗಗ್ರಸ್ಥ ಸ್ವರೂಪವೆಂದು ಅಧ್ಯಯನ ಹಿನ್ನೆಲೆಯಲ್ಲಿ ಹೇಳಿದರಾದರೂ ಅಲಕ್ಷಿತರು ಎಂಬ ಪರಿಕಲ್ಪನೆ ಕೆಲವು ಸಮುದಾಯಗಳಿಗೆ ವರವಾಗಿದೆ. ಮತ್ತೆ ಕೆಲವು ಸಮುದಾಯಗಳಿಗೆ ಶಾಪವಾಗಿದೆ. ಈ ಎರಡು ಗುಂಪುಗಳು ತಾವು ಸರಿ ಎಂದುಕೊಂಡಿದ್ದನ್ನು ಸಮರ್ಥಿಸುವುದನ್ನು ನೋಡಿದ ಸಮಾಜ ವಿಜ್ಞಾನಿಗಳು ಚಿಂತನೆಗೀಡಾಗಿದ್ದಾರೆ. ಇಂಥದೊಂದು ಭಯಂಕರ ಸಂಚಲನದ ಚಾರ್ಮುಖ ಅಲಕ್ಷಿತ ಎಂಬ ಪರಿಕಲ್ಪನೆಗೆ ಒಲಿದಿದೆ.

ಅಲಕ್ಷಿತ ಎಂಬ ಪರಿಕಲ್ಪನೆಯ ಉಗಮ ಮೂಲವನ್ನು ಮೂಲಭೂತ ಬೇಡಿಕೆಯ ಹಿನ್ನೆಲೆಯಿಂದ ನೋಡುತ್ತೇವೆ. ಮೂಲಭೂತ ಬೇಡಿಕೆ ಅಥವಾ ಬಯಕೆ ಎಂದರೆ ಒಂದು ಸಮೂಹ ಬದುಕುಳಿಯಲು ಆದಾಯದ ಮೂಲ ಬೇಕೆ, ಬೇಕು. ಯಾರು ಆದಾಯದ ಮೂಲದಿಂದ ವಂಚಿತರಾಗುತ್ತಾರೆಯೊ ಅಂಥವರು ತಮ್ಮದೆ ಒಂದು ಗುಂಪು ಮಾಡಿಕೊಂಡು ಕನಿಷ್ಟ ಮಟ್ಟದ ಬೇಡಿಕೆ ಈಡೇರಿಕೆಗೆ ಶ್ರಮಿಸುತ್ತಾರೆ. ಆದರೆ ಕೆಲವರು ಮಾತ್ರ ಬೇಕಾದ ಎಲ್ಲಾ ಬಯಕೆಗಳಿಂದಲೂ ತೃಪ್ತರಾಗುತ್ತಾರೆ. ಕೆಲವೆ ದಿನಮಾನಗಳಲ್ಲಿ ಇವರ ಮಧ್ಯೆ ಸಹಜವಾಗಿಯೆ ಎಂಬಂತೆ ಪ್ರತ್ಯೇಕತೆ ಸೃಷ್ಟಿಯಾಗಿ ಒಂದು ಗುಂಪು ಮತ್ತೊಂದು ಗುಂಪಿನಿಂದ ಆಚೆ ಬಂದು ಬದುಕು ನಡೆಸಲು ಮುಂದಾಗುವುದು. ಯಾವಾಗ ಮೂಲಭೂತ ಬೇಡಿಕೆ ಇಲ್ಲದಂತಾಗುವುದೊ ಆಗ ಆದಾಯದ ಮೂಲವಿಲ್ಲದಂತ ಸ್ಥಿತಿ ಉದ್ಭವಿಸುವುದು. ಈ ಉದ್ಭವವನ್ನು ಸರಳವಾಗಿ ಧ್ವಂಸ ಮಾಡಲು ಸಾಧ್ಯವಿಲ್ಲ. ಏಕೆಂದರೆ ಆದಾಯದ ಮೂಲವಿರುವವರೆಲ್ಲರು ಜಾಗೃತರಾಗಿ ಸಮಾಜದ ಮೇಲೆ ಧಾರ್ಮಿಕ ಶಕ್ತಿಯ ಮೇಲೆ ಹಿಡಿತ ಸಾಧಿಸುವುದರಿಂದಾಗಿ ಇವರೆದುರು ಸ್ಪರ್ಧಿಸದೇ ಹಿಂದೆ ಸರಿಯುತ್ತಾರೆ. ಹಾಗಾಗಿಯೇ ಪ್ರತ್ಯೇಕ ಗುಂಪಾಗಿ ಮುಂದೊಂದು ದಿವಸ ಅಲಕ್ಷಿತರಾಗಿ ಪ್ರತ್ಯೇಕವಾಗಿಯೆ ಹಲವು ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿ ಜೀವನ ನಡೆಸುವಂತಹ ಸ್ಥಿತಿಗೆ ಬಂದು ಬಿಡುತ್ತಾರೆ.[೧]

ಬಲಿಷ್ಠ ಗುಂಪಿನ ಸುಳಿಗೆ ಸಿಲುಕಿದ ಅಲಕ್ಷಿತರು ಹಲವು ಸಮಸ್ಯೆ-ಸವಾಲು ಎದುರಿಸಬೇಕಾಗಿ ಬಂತು ಮತ್ತು ಬರುತ್ತಲಿದೆಯೂ ಕೂಡ. ಹಾಗಾಗಿಯೆ ನಮ್ಮ ಸಾಮಾಜಿಕ ರಚನಾ ಸ್ವರೂಪವು ಅಸಮಾನ ಸ್ವರೂಪದ್ದಾಗಿದೆ. ಯಾವಾಗ ಬಲಿಷ್ಠ ಮತ್ತು ಅಧೀನರೆಂಬ ವರ್ಗ ಸೃಷ್ಟಿಯಾಯಿತೋ ಆಗ ಎರಡೂ ಪ್ರತ್ಯೇಕ ಸಂಸ್ಕೃತಿಗಳೇ ಸೃಷ್ಟಿಯಾಗಿ, ಆಯಾ ಸಂಸ್ಕೃತಿಯ ಜನಸಮುದಾಯ ತಮ್ಮದೆ ಚೌಕಟ್ಟು ನಿರ್ಮಿಸಿಕೊಂಡು ಅದರ ಅಡಿಯಲ್ಲಿ ಅಂಚಿನ ಸಮೂಹಗಳಾಗಿ ಹಲವು ನ್ಯೂನತೆಯಿಂದಲೆ ಬಳಲುತ್ತಿವೆ. ಆರ್ಥಿಕ, ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಮುಂತಾದ ಕ್ಷೇತ್ರಗಳಲ್ಲಿ ಬಹು ಹಿಂದೆ ಸರಿದು ಸಾಂಪ್ರದಾಯಿಕವಾಗಿಯೆ ಮುಂದುವರಿದುಕೊಂಡು, ಸಮಾಜದ ಮುಖ್ಯವಾಹಿನಿಯಿಂದ ದೂರವಾಗಿ ಸಾಮಾಜಿಕ ಚಲನೆ ಹೊಂದಲಾರದಂತಹ ಸ್ಥಿತಿ ನಿರ್ಮಾಣವಾಗಿದೆ. ಪ್ರಸ್ತುತ ಸಂದರ್ಭದ ಪ್ರಭುತ್ವ ಮತ್ತು ಪೋಲಿಸ್ ವ್ಯವಸ್ಥೆಗೆ ನಲುಗಿದವರಾದರೆ,

ಇಂತಹ ಅಲಕ್ಷಿತರ ಸಮುದಾಯಗಳನ್ನು ರಂಜನೆ ಮತ್ತು ವ್ಯಾಪಾರದ ಕಾರಣಕ್ಕಾಗಿ ರಂಜನೀಯ ಮತ್ತು ವ್ಯಾಪಾರದ ಮಧ್ಯಮವನ್ನಾಗಿ ಬಳಸಿಕೊಳ್ಳುತ್ತಿವೆ. ಅಲಕ್ಷಿತರ ನೈಜ ಬದುಕನ್ನು ಇವತ್ತಿನ ನಾಡಿ ಮಿಡಿತವೆನಿಸಿಕೊಂಡಿರುವ ಭಾಗವಾಗಿರುವ ಕೆಲವು ಮಾಧ್ಯಮಗಳು ಅಲಕ್ಷಿಸಿವೆ. ಹಾಗಾಗಿಯೆ ಎಲ್ಲಾ ಕ್ಷೇತ್ರಗಳಿಂದಲೂ ಅನ್ಯಾಯ, ಅಸಮಾನತೆ, ತುಳಿತ, ಶೋಷಣೆ, ಅಪನಂಬಿಕೆ, ದ್ವೇಷ ಮುಂತಾದ ಸವಾಲುಗಳನ್ನು ಎದುರಿಸಲು ಇಂತಹ ಅಲಕ್ಷಿತರಿಗೆ ಶಕ್ತಿಯಿದೆಯೇ? ಏಕೆಂದರೆ ಆದಿವಾಸಿ, ಅಲೆಮಾರಿ, ಅರೆಅಲೆಮಾರಿಗಳಂತಹ ಸಮೂಹಗಳು, ಭೌಗೋಳಿಕವಾಗಿ ಸಮಾಜದಿಂದಲೆ ದೂರ ಉಳಿದರೆ, ಇನ್ನುಳಿದ ಅಲಕ್ಷಿತ ಗುಂಪುಗಳು ಹಲವು ಕ್ಷೇತ್ರಗಳಿಂದಲೆ ದೂರವಿದ್ದುದ್ದರಿಂದಾಗಿ ಸಮಾಜದ ಮೇಲೆ ನೇತ್ಯಾತ್ಮಕ ಪರಿಣಾಮವನ್ನುಂಟುಮಾಡಿ ಸಮಾಜದ ಅಂಚಿಗೆ ತಳ್ಳಲ್ಪಟ್ಟಿವೆ.

ಅಲಕ್ಷಿತರು ಐತಿಹಾಸಿಕ ತಪ್ಪಿನಿಂದಾಗಿ ಬಡತನವೂ ಸೇರಿದಂತೆ ಹತ್ತು ಹಲವು ಬವಣೆ ಅನುಭವಿಸುತ್ತಿದ್ದಾರೆ. ಹೊಟ್ಟೆಪಾಡಿಗಾಗಿ ರೂಢಿಸಿಕೊಂಡ ಗೃಹ, ಕರಕುಶಲ, ಗುಡಿ ಮತ್ತು ಗ್ರಾಮೀಣ ಕೈಗಾರಿಕೆಯಂತಹ ಸಣ್ಣ ಪುಟ್ಟ, ವೃತ್ತಿ-ಪ್ರವೃತ್ತಿಯ ಕುಲಕಸಬಿನಿಂದ ಅಲ್ಪ-ಸ್ವಲ್ಪವಾದರೂ-ಅನ್ನ ದೊರೆಯುತ್ತಿತ್ತು. ಆದರೆ ವಿಜ್ಞಾನ ತಂತ್ರಜ್ಞಾನಗಳು ಹೊಸ ರೂಪ ಪಡೆದುಕೊಂಡ ಮೇಲೆ ಅನ್ನದ ಮಾರ್ಗವಾಗಿದ್ದವುಗಳೆಲ್ಲವೂ ನಾಶ ಹೊಂದಿದವು. ಇವುಗಳನ್ನೆ ನಂಬಿಕೊಂಡಿದ್ದ ಅಲಕ್ಷಿತ ಸಮೂಹಗಳು ಬೀದಿಗೆ ಬಿದ್ದವು. ಏಕೆಂದರೆ ಹೊಸ ವೃತ್ತಿಗಳಿಗೆ ಹೊಸ ತಂತ್ರಜ್ಞಾನ ವೃತ್ತಿಪರತೆ ಅವಶ್ಯವಾದ್ದರಿಂದ ಏನೂ ಗೊತ್ತಿಲ್ಲದ ಈ ಸಮುದಾಯಗಳಿಗೆ ತಂತ್ರಜ್ಞಾನ ಮತ್ತು ತರಬೇತಿಯಿಲ್ಲವಾದ್ದರಿಂದ ವೃತ್ತಿಗಳು ಬಿಸಿಲು ಕುದುರೆಯಾಯಿತು. ಇವರಿಗಾಗಿಯೆ ಕೆಲವು ಸರ್ಕಾರಗಳು ಹೊರತಂದ ಅಭಿವೃದ್ಧಿ ಯೋಜನೆಗಳು ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿಸಿ ನಿರುದ್ಯೋಗದ ಪರ್ವವೇ ಸೃಷ್ಟಿಯಾಯಿತು. ಪರಿಣಾಮ ಉದ್ಯೋಗ ಆಯ್ಕೆಯು ಕಠಿಣವಾಯಿತು. ಬೃಹತ್ ಕೈಗಾರಿಕಾ ವಲಯ ಸೃಜಿಸಿದ ಉದ್ಯೋಗಗಳು ಕೆಲವೆ ಕೆಲವು ಜನರ ಪಾಲಾಯಿತು. ಏಕೆಂದರೆ ಈಗಾಗಲೆ ನಮ್ಮ ಸಮಾಜವನ್ನು ಅರ್ಥಮಾಡಿಕೊಂಡಿದ್ದರ ಹಿನ್ನೆಲೆಯಿಂದ ನೋಡಿದರೆ ನಮ್ಮಲ್ಲಿನ ವ್ಯವಸ್ಥೆಯು ಆರ್ಥಿಕ ಮತ್ತು ರಾಜಕೀಯ ಅಧಿಕಾರವೂ ಕೆಲವೇ ಕೆಲವರಿಗೆ ಮಾತ್ರ ದಕ್ಕಿರುವುದರಿಂದ, ಅವೆಲ್ಲವೂ ಆ ಸಮೂಹಗಳ ಸುತ್ತಮುತ್ತಲೇ ಕೇಂದ್ರಕೃತವಾದವು. ಈ ಮೊದಲಿನಿಂದಲೂ ಉದ್ಯೋಗ ಆಯ್ಕೆಯು ಕೆಲವೇ ಕೆಲವು ಜನರಿಗೆ ಸೀಮಿತವಾಗಿದ್ದರಿಂದ ಆ ಉದ್ಯೋಗಕ್ಕೆ ಬೇಕಾದ ಪೂರ್ವ ಸಿದ್ಧತೆಯು ಆ ಸಮುದಾಯಕ್ಕೆ ಇರುವುದರಿಂದ ಉದ್ಯೋಗ ದಕ್ಕುವುದು ಕಠಿಣವಲ್ಲ. ಆದರೆ ಅಲಕ್ಷಿತರಿಗೆ ಸುಲಭದ ಕೆಲಸವಲ್ಲ. ಇವೆಲ್ಲವೂ ಗೊತ್ತಿರುವ, ಸುಸಂಸ್ಕೃತರೆನಿಸಿಕೊಂಡ ದಾರ್ಶನಿಕರು, ಆರ್ಥಿಕ ತಜ್ಞರು, ಸಮಾಜ ಸೇವಕರು, ಅಧಿಕಾರಿ ವರ್ಗದವರು, ರಾಜಕೀಯ ಧುರೀಣರಿಗೂ, ಮಂತ್ರಿಮಹಾಷಯರಿಗೂ, ಈ ಸಮುದಾಯಗಳ ದುಸ್ಥಿತಿ ಗೊತ್ತಿದ್ದರೂ ಉದ್ಯೋಗ ಸೃಷ್ಟಿಸುವ, ನೆಲೆನಿಲ್ಲಿಸುವ, ಯೋಜನೆ ರೂಪಿಸುವ, ರೂಪಿಸಿದ ಯೋಜನೆ ಸಂಪೂರ್ಣವಾಗಿ ನ್ಯಾಯಯುತವಾಗಿ ಜಾರಿಯಾಗುವ ಕಾಳಜಿ ಇಲ್ಲದಿರುವುದರಿಂದ ಅಂತರವು ಸಾಮಾನ್ಯವಾಗಿ ದ್ವಿಗುಣಗೊಂಡು ಅಲಕ್ಷಿತರ ಬದುಕು ಬದುಕಲ್ಲದ ರೀತಿಯಲ್ಲಿ

ಚಿಂದಿಯಾಗಿದೆ. ಇಂತಹ ಹಲವು ಸಂಗತಿ ಗಮನಿಸಿದ ಕೆಲವು ಅಲಕ್ಷಿತರು ಗ್ರಾಮಕ್ಕೆ ವಿದಾಯ ಹೇಳಿ ನಗರದತ್ತ ಮುಖ ಮಾಡಿದರು ಹೇಳಿಕೊಳ್ಳುವಷ್ಟು ಪರಿಸ್ಥಿತಿ ಬದಲಾಗಿಲ್ಲ.

ಅಂಬೇಡ್ಕರ್ ಹೇಳುವಂತೆ ಪ್ರಸ್ತುತ ದಿನಮಾನಗಳಲ್ಲಿ ಒಂದು ಸಮೂಹದ ಹಲವು ಸಮಸ್ಯೆಗೆ ರಾಮಬಾಣವೆಂದರೆ ರಾಜಕೀಯ ಅಧಿಕಾರ ಎನ್ನುತ್ತಾರೆ ಏಕೆಂದರೆ ರಾಜಕೀಯ ಅಧಿಕಾರವೆಂಬುದು ಮುಚ್ಚಿದ ಎಲ್ಲಾ ಬಾಗಿಲನ್ನು ತೆರೆಯುವ ಮಾಸ್ಟರ್‌ಕೀಯಾಗಿದೆ ಎಂದು ನಿರೂಪಿಸುತ್ತಾರೆ. ಆದ್ದರಿಂದ ಅಲಕ್ಷಿತರ ಸಮಸ್ಯೆ, ಸವಾಲುಗಳಿಗೆ ಉತ್ತರವೆಂದರೆ ರಾಜಕೀಯ ಅಧಿಕಾರವಾಗಿದೆ. ಅಲಕ್ಷಿತರಲ್ಲಿ ಕೆಲವರು ರಾಜಕೀಯ ಅಧಿಕಾರ ಹಿಡಿದಿದ್ದಾರೆ. ಇವರು ತಮ್ಮ ಸಮೂಹಗಳ ಅಲಕ್ಷಿತನ ಹೋಗಲಾಡಿಸಲಿಕ್ಕೆ ಶ್ರಮಿಸಬೇಕಾಗಿದ್ದು ಅಸಮಾನತೆಯ ಸಂಕೋಲೆಯಿಂದ ಬಿಡುಗಡೆಗೊಳಿಸಬೇಕಿತ್ತು. ಇರಬಹುದಾದ ದೌರ್ಜನ್ಯ, ಶೋಷಣೆಯಿಂದ ಮುಕ್ತರನ್ನಾಗಿಸಿ, ಹೊಸದೊಂದು ಸಮಾಜದ ನಿರ್ಮಾಣಕ್ಕೆ ನಾಂದಿಯಾಗಬಹುದಿತ್ತು. ಆದರೆ ಈ ಎಲ್ಲಾ ಅಲಕ್ಷಿತ ನಾಯಕರು, ಸಂಪ್ರದಾಯಿಕ ಶಕ್ತಿಯ ರಾಜಕೀಯ ಗುಲಾಮರಾಗಿ, ಪ್ರತಿಷ್ಠಿತ ಪಕ್ಷ ಮತ್ತು ನಾಯಕರ ಸುತ್ತಲೂ ಮೌನವಾಗಿಯೆ ಸ್ವಾರ್ಥಿಯಾಗಿದ್ದಾರೆ. ಎಷ್ಟರಮಟ್ಟಿಗೆ ಗುಲಾಮರೆಂದರೆ ತಮ್ಮದೆ ಸಮೂಹದ ತಮ್ಮದೆ ಜನರುಗಳ ಮೇಲೆ ನಡೆದ ದೌರ್ಜನ್ಯ ಖಂಡಿಸುವಂತ ವ್ಯವಧಾನ ಇಲ್ಲವಾಗಿ, ಹಲ್ಲುಕಿತ್ತ ಹಾವಿನಂತೆ, ಪುಂಗಿಯ ನಾದಕ್ಕೆ ಹಾವು ತಲೆದೂಗಿದಂತೆ ಪ್ರತಿಷ್ಠಿತರು ಹೇಳಿದ ಹಾಗೆ ಕೇಳುವ ನಾಯಕರಾಗಿದ್ದಾರೆ. ಇವರುಗಳ ನಿಷ್ಕ್ರಿಯ ರಾಜಕಾರಣದಿಂದಾಗಿ ಅಲಕ್ಷಿತರರಿಗೆ ಕೊಳಚೆ ಪ್ರದೇಶವೆ ಅರಮನೆಯಾಗಿ, ಹಳಸಿದ ಅಪೌಷ್ಠಿಕ ಕೊಳೆತ ಆಹಾರವೆ ಬೃಷ್ಟಾನ್ನ ಭೋಜನವಾಗಿ, ಅರಕಲು ಬಟ್ಟೆಯೆ ಮಾನದ ಕವಚವಾಗಿ ನೀಡಲಾಗಿದೆ. ಇಂತಹ ಅಸಹಾಯಕ ಸ್ಥಿತಿಯನ್ನು ಗಮನಿಸಿದ ರಾಜಕೀಯ ನೇತಾರರು, ಅಧಿಕಾರಿಗಳು, ಕಾರ್ಪೋರೇಟ್‌ಗಳು, ಪೋಲಿಸ್ ವ್ಯವಸ್ಥೆಗಳು, ಆದಾಯ ಬರುವ ಮೂಲವನ್ನಾಗಿ ಉತ್ಪಾದಿಸಲು ಇಂತವರನ್ನೆ ಕೇಂದ್ರಬಿಂದುವಾಗಿಟ್ಟುಕೊಂಡು ದಂಗೆಗೆ ಪೂರಕ ಶಕ್ತಿಯಾದ ಮದ್ಯಪಾನ, ಜೂಜಾಟ, ಹೊಡೆದಾಟ-ಬಡಿದಾಟ, ವೇಶ್ಯೆ ವಾಡಿಕೆಯಂತಹ ನೀಚತನದಿಂದ ದುಡಿಯುವವರಿದ್ದಾರೆ. ಮತ್ತೊಂದೆಡೆ ಇಂಥವರನ್ನೇ ತಮ್ಮ ಪಕ್ಷದ ಓಟಿನ ಅಜೆಂಡಾಗಳನ್ನಾಗಿ ಪರಿವರ್ತಿಸಿ ತಮ್ಮ ಬೇಳೆ ಬೇಯಿಸಿಕೊಂಡಿದ್ದನ್ನು ಕಾಣಬಹುದಾಗಿದೆ. ಅನೇಕ ಆಯೋಗಗಳು, ಯೋಜನೆಗಳು, ಸಲಹೆಗಳು ಬಂದಿವೆಯಾದರು ಅವರ ಬದುಕು ಮಾತ್ರ ಸುಧಾರಿತಗೊಂಡಿಲ್ಲ.

ಅಲಕ್ಷಿತ ಸಮುದಾಯಗಳಾದ ಪರಿಶಿಷ್ಟ ಜಾತಿ ಪಂಗಡ, ಹಿಂದುಳಿದ ವರ್ಗ ಹಾಗೂ ಮಹಿಳೆಯರನ್ನು ಶೋಷಣೆ ಮುಕ್ತರನ್ನಾಗಿಸಿ ಸಮಾಜದ ಮುಖ್ಯವಾಹಿನಿಯಲ್ಲಿ ತರುವುದಕ್ಕಾಗಿ ಅನೇಕ ರೀತಿಯ ಸೌಲಭ್ಯಗಳನ್ನು ಸಂವಿಧಾನಾತ್ಮಕವಾಗಿ ಸವಲತ್ತುಗಳನ್ನು ಒದಗಿಸಲಾಗಿದೆ. ಈ ಸವಲತ್ತುಗಳನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ಸರ್ಕಾರವು ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ. ಇವು ರಕ್ಷಣಾತ್ಮಕ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳೆರಡನ್ನು ಒಳಗೊಂಡಿದೆ. ಈ ಕಾರ್ಯಕ್ರಮಗಳು ಜಾರಿಯಾಗಿ ೬೭ ವರ್ಷಗಳಾದರೂ ನಿರೀಕ್ಷಿಸಿದ ಮಟ್ಟದಲ್ಲಿ ಅಲಕ್ಷಿತ

ಸಮುದಾಯಗಳು ಅಭಿವೃದ್ಧಿಯನ್ನು ಹೊಂದಿಲ್ಲ ಹಾಗೂ ಇವರ ಮೇಲೆ ನಡೆಯುವ ಸಾಮಾಜಿಕ, ಆರ್ಥಿಕ ಶೋಷಣೆ ದೌರ್ಜನ್ಯಗಳು ಕಡಿಮೆಯಾಗಿಲ್ಲ. ಕಾರಣ ಸರ್ಕಾರದ ಮಟ್ಟದಲ್ಲಿ ಈ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ಜಾರಿಯಾಗಿಲ್ಲ. ಇವರ ಸುತ್ತಲೂ ಇರುವ ಅಡಚಣೆಗಳೇನು? ಶೈಕ್ಷಣಿಕ ಉದ್ಯೋಗ, ರಾಜಕೀಯ, ರಕ್ಷಣಾತ್ಮಕ ಅಭಿವೃದ್ಧಿ ಕಾರ್ಯಗಳಲ್ಲಿನ ಅಡಚಣೆಗೆ ಕಾರಣಗಳೇನೆಂದು ಶೋಧಿಸುವ ಮನಸ್ಥಿತಿ ಇಲ್ಲದ್ದರಿಂದಲೂ ಈ ಅಸಕ್ತ ಸಮೂಹಗಳು ಸಮಾನತೆಯ ಅಭಿವೃದ್ಧಿಯ ತತ್ವದಲ್ಲಿ ಹಿನ್ನೆಡೆಯಾಗಿದ್ದಾರೆ.

ಸಮಾಜದ ೧/೩ರಷ್ಟು ಜನ ಅಲಕ್ಷಿತರೆ ಆಗಿದ್ದಾರೆ. ಅಲಕ್ಷಿತ ಎಂಬ ಪರಿಕಲ್ಪನೆಯು ಒಂದು ಜನ ಸಮುದಾಯಕ್ಕೆ ಸಂಬಂಧಿಸಿದ್ದಾಗಿದ್ದು ಒಂದು ದೇಶದ ಜನರೊಳಗೆ ಕಂಡುಬರುವ ಪ್ರಕ್ರಿಯೆಯಾಗಿಯೂ, ಇದೊಂದು ಗಂಭೀರ ಮತ್ತು ಸಂಕೀರ್ಣ ಸಾಮಾಜಿಕ ವಿದ್ಯಾಮಾನವಾಗಿ ಅಂತಹ ಜನ ಸಮುದಾಯಗಳನ್ನು ಪರಿಣಾಮಕಾರಿಯಾಗಿ ಅಂಚಿಗೆ ತಳ್ಳುವ ಸಾಮರ್ಥ್ಯ ಒಳಗೊಂಡಿದೆ. ಹಾಗಂತ ಅಲಕ್ಷಿತ ಎಂಬುದು ಒಂದು ಜೈವಿಕ ಕ್ರಿಯೆಯಾಗಿರದೆ ಸಾಮಾಜಿಕ ಪ್ರಕ್ರಿಯೆಯಾಗಿದೆ.

ಹಲವು ಕಾರಣಗಳಿಂದಾಗಿ ಸಮಾಜದ ಒಂದು ಗುಂಪನ್ನು ಸಮಾಜದ ಅಂಚಿಗೆ ತಳ್ಳಲ್ಪಟ್ಟರೆ ಅದುವೇ ಅಲಕ್ಷಿತನು, ಇದು ಸಾಮಾಜಿಕ ವಿದ್ಯಮಾನವಾಗಿದ್ದರೂ ಐತಿಹಾಸಿಕ ತಪ್ಪಿನಿಂದಾದ ಪ್ರಕ್ರಿಯೆ ಎಲ್ಲಾ ಹಂತದ ಅಸಮಾನತೆಯಿಂದ ಕೂಡಿಯೂ, ಎಲ್ಲಾ ತರಹದ ಅಧಿಕಾರ ಸಮರ್ಥಿಸುವ, ಸಂಪ್ರದಾಯಿಕ ಸಮರ್ಥನೆಯು ಸಮಾಜದಲ್ಲಿ ಎರಡು ಸಮೂಹದ ಮಧ್ಯೆ ಗೆರೆ ಎಳೆದು, ಆಗಲೇ ಜೀವಂತವಾಗಿಯೂ, ಶಾಶ್ವತವಾಗಿಯೂ ಮುಂದುವರಿಯುವಂತೆ ಮಾಡಲು ಸದಾ ಪ್ರಜ್ಞಾನ ಸ್ಥಿತಿಯಲ್ಲಿಯೇ ಇದೆ. ಕೆಲವರ ಪ್ರಕಾರ ಅಲಕ್ಷಿತರು ಎಂಬುದು ಸಹಜವಾದುದುದೆಂದು ಅದೇ ಮತ್ತೊಂದು ಗುಂಪು ಪ್ರಯತ್ನಿಸಿರುತ್ತದೆ. ಸಮಾಜ ಸ್ವರೂಪದ ಆದರ್ಶ ಗುಣವೆಂದು ನಿರ್ಧಸುತ್ತಿದೆ. ಅಲಕ್ಷಿತರೂ ಇರದಿದ್ದರೆ ಸಮಾಜದ ಸ್ವರೂಪವೆ ಇರಲಾರದೆಂದು ಕೆಲವು ಸಮೂಹಗಳು ಸಮರ್ಥಿಸುತ್ತಿವೆ. ಈ ಕಾರಣವಾಗಿ ಅಲಕ್ಷಿತನ ಶಾಶ್ವತವಾಗಿರಲು ಬಿರುಕು ಸೃಷ್ಟಿಸಿ, ಆ ಮೂಲಕ ಪ್ರತಿಪಾದಿಸಿಯೂ ಒಳಮರ್ಮದ ಕಾರ್ಯ ತಂತ್ರವೆಂದು ಮಧ್ಯೆ ಬಿರುಕಾಗಿದೆ. ಸಂಘರ್ಷವೇರ್ಪಟ್ಟಿದೆ, ಅಶಾಂತಿಯೂ ನೆಲೆಸಿದೆ ಎನ್ನಬಹುದಾಗಿದೆ.[೪]

ತಾರಮತ್ಯತೆ ಮತ್ತು ಅಲಕ್ಷಿತರು

ತಾರತಮ್ಯತೆ ಎಂದರೆ ನಿರ್ದಿಷ್ಟ ಸಾಮಾಜಿಕ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗೆ ಭಿನ್ನ ರೀತಿಯ ಸಾಮಾಜಿಕ ಉಪಚಾರವಾಗಿದೆ. ತಾರತಮ್ಯತೆಯು ಹಲವು ಆಧಾರಗಳನ್ನೊಳಗೊಂಡಿದ್ದು ಸಮಾಜ ಮತ್ತು ಸಂದರ್ಭವನ್ನು ಅವಲಂಬಿಸಿ ಹಲವು ನಮೂನೆಗಳಾದ ಜಾತಿ, ಲಿಂಗ, ವರ್ಗ, ಜನಾಂಗೀಯ, ಧಾರ್ಮಿಕ, ಪ್ರಾಂತೀಯ, ಭಾಷಾ ಮುಂತಾದವುಗಳಿಂದ ಸಮೂಹಗಳು

ಒಂದಲ್ಲ ಒಂದು ರೀತಿಯಲ್ಲಿ ತಾರತಮ್ಯಕ್ಕೆ ಒಳಗಾಗುತ್ತಾರೆ. ಇಂದಿನ ಅಸಮಾನತೆಯ ಮೂಲವೆ ತಾರತಮ್ಯತೆಗೆ ಕಾರಣವಾಗಿದ್ದು ಈ ತಾರಮತ್ಯತೆಯು ಸಮಾಜದಲ್ಲಿ, ಸಮಾಜದಿಂದ, ಸಾಮಾಜಿಕವಾಗಿ ಅನುಮೋದನೆಗೊಂಡು ಚಾಲ್ತಿಯಲ್ಲಿವೆ. ತಮ್ಮ ಬರಹದಲ್ಲಿ ಲಕ್ಷ್ಮಣ್ ತೆಲಗಾವಿಯವರು ತಾರತಮ್ಯತೆ ಮತ್ತು ಅಲಕ್ಷಿತರ ಬಗ್ಗೆ ಗುರುತಿಸುತ್ತಾರೆ.

ಅಸಮಾನತೆ ಮತ್ತು ಅಲಕ್ಷಿತರು

ಸಾಮಾಜಿಕ ಬದಲಾವಣೆಗಳಾದರೂ, ಅಲಕ್ಷಿತ ಗುಂಪುಗಳಾದ ದಲಿತರು, ಆದಿವಾಸಿಗಳು, ಮಹಿಳೆಯರು, ಹಿಂದುಳಿದ ವರ್ಗಗಳು ತಾರಮತ್ಯತೆಗೆ ಒಳಪಟ್ಟು ಹಿಂದುಳಿದ ಗುಂಪುಗಳಾಗಿಯೆ ಅಲಕ್ಷಿತರು ಕಂಡು ಬಂದಿದ್ದು ಇದೊಂದು ಸಾಮಾಜಿಕ ಸೂಚಕವಾಗಿದೆ. ಅಂದರೆ ಸಮಾಜದ ಸಂಪತ್ತು, ಸೌಲಭ್ಯಗಳು, ಕೆಲವೇ ಕೆಲವು ವ್ಯಕ್ತಿಗಳಲ್ಲಿ ಹಂಚಿಕೆಯಾಗಿದ್ದು ಬಹು ಸಂಖ್ಯಾತರಲ್ಲಿ ಸಂಪತ್ತು ಸಮರ್ಪಕವಾಗಿದೆ. ಇದು ಸಾಮಾಜಿಕ ಮತ್ತು ಐತಿಹಾಸಿಕ ತಪ್ಪುಗಳಿಂದುಂಟಾದ ಪ್ರಕ್ರಿಯೆಯಾಗಿದ್ದು ಆಳವಾಗಿ ಬೇರೂರಿದೆ. ಇಂಥ ಸಂಗತಿಯನ್ನು ಅಪಮಾನ, ನೊಂದವರಿಗೆ ಸಹಾಯ, ಸಮಾಧಾನ ಹೇಳುವ ಲಕ್ಷ್ಮಣ್ ತೆಲಗಾವಿಯವರು ತಮ್ಮ ಬರಹದಲ್ಲಿ ತೋರಿಸಿದ್ದಾರೆ.

ಎಲ್ಲಾ ಸೌಲಭ್ಯ ನೀಡದಿರುವ ಕಾರಣವಾಗಿ ಮಾನವ ಹಕ್ಕುಗಳ ನಿರಾಕರಣೆಯಾಗಿ, ಮಾನವತ ಮೌಲ್ಯದ ಅಪಮೌಲ್ಯವೂ ಆಗಿದೆ. ಏಕೆಂದರೆ ನಮ್ಮ ಸಂವಿಧಾನವು ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ಪ್ರತಿಪಾದಿಸಿದೆ. ವ್ಯಕ್ತಿಗಳಿಗೆ ಹಕ್ಕುಗಳನ್ನು ನೀಡಿದೆ. ಕರ್ತವ್ಯಗಳನ್ನು ಹೇಳಿದೆ. ಮೂಲಭೂತ ಹಕ್ಕು ಮತ್ತು ಕರ್ತವ್ಯಗಳು ವ್ಯಕ್ತಿಯ ಹಕ್ಕು, ಜವಾಬ್ದಾರಿಗಳಾಗಿ ಸಂವಿಧಾನದ ಮೂಲಕವೇ ಕೊಟ್ಟರೂ, ಸಮಾಜ ಸೃಷ್ಟಿಸಿದ ಆರ್ಥಿಕ ಅಸಮಾನತೆಯಿಂದಾಗಿ ಬಡತನವನ್ನು ಅನುಭವಿಸಿದ್ದಿದೆ. ಮಾನವ ಹಕ್ಕಿನ ನಿರಾಕರಣೆಯ ಭಾಗವಾಗಿ ದೌರ್ಜನ್ಯ ಹಿಂಸೆ, ಮಾನಸಿಕ ದೈಹಿಕ ಶೋಷಣೆ ತಾರಮತ್ಯತೆ ವಂಚಿತತೆ ಮುಂತಾದುವುಗಳಿಂದ ರೋಸಿ ಹೋಗಿದ್ದಾರೆ.

ಜಾತೀಯತೆ ಮತ್ತು ಅಲಕ್ಷಿತರು

ಭಾರತವು ವರ್ಣ, ಜಾತಿ, ಕಸಬಾಧಾರಿತ ಏಣಿ-ಶ್ರೇಣಿ ವ್ಯವಸ್ಥೆಯ ಸಮಾಜವಾಗಿ ರೂಪಗೊಂಡು, ತಳಸಮುದಾಯಗಳೆಂದು ಗುರುತಿಸಿಕೊಂಡವುಗಳನ್ನು ಕಾಲಾಂತರದಲ್ಲಿ ಇವುಗಳಿಂದ ಒಡೆದು ಹೋಗಿರುವ ಗುಂಪುಗಳನ್ನು ಗಮನದಲ್ಲಿಟ್ಟುಕೊಂಡು ಬಲಿಷ್ಠ ಪಂಗಡಗಳು ಹಲವು ಕಂದಕವನ್ನು ನಿರ್ಮಿಸಿದ್ದರ ಪರಿಣಾಮ ಸಹಜವಾಗಿಯೆ ಜೀವಿಸುವ ಮೂಲ ಸಮುದಾಯಗಳು, ಆದಿವಾಸಿಗಳಾಗಿ ಮತ್ತು ವರ್ಣವ್ಯವಸ್ಥೆಗೆ ತುತ್ತಾದ ತಳಸಮುದಾಯಗಳು ದನಿ ಇಲ್ಲದ ದಲಿತರಾಗಿ, ಅಸ್ಪೃಶ್ಯರಾಗಿ, ಶೋಷಿತರಾಗಿ ಮುಂದುವರಿದರೆ ಅಸಂಘಟಿತ ವಲಯದ ಕಂದಕದಿಂದ ಹೇಳಲಾರದಷ್ಟು ನಿಸ್ಸಾಯಕನಾಗಿರುವರು. ಇಂಥವರು ಜೀವಿಸುವ ಸಮಾಜ ಜಾತಿ ವ್ಯವಸ್ಥೆ ಹೊಂದಿರುವ ಸಮಾಜವಾಗಿದ್ದರಿಂದ, ವ್ಯಕ್ತಿಯ ಹುಟ್ಟಿನ ಆಧಾರದ ಮೇಲೆ ಆತನ, ಸ್ಥಾನಮಾನವನ್ನು

ನಿರ್ಧರಿಸಲಾಗುತ್ತದೆ. ಪ್ರಬಲ ಜಾತಿಗಳು, ಶೈಕ್ಷಣಿಕ ಹಿನ್ನೆಲೆ, ಭೂಮಿಯ ಒಡೆತನ, ಹುಟ್ಟಿನಿಂದ ಬಂದ ಸ್ಥಾನಮಾನ, ಆಡಳಿತದಲ್ಲಿ ಪ್ರತಿನಿಧೀಕರಣ ಹಾಗೂ ಸಾಕಷ್ಟು ರಾಜಕೀಯ ಪ್ರಾತಿನಿಧ್ಯದಿಂದಾಗಿ ಹಿಂದುಳಿದ ಜಾತಿಗಳಿಗಿಂತ ಮೇಲ್ಮುಖ ಸಾಮಾಜಿಕ ಚಲನೆ ಸಹಜವಾಗಿಯೆ ಹೊಂದಿದೆ. ಇದರಿಂದಾಗಿ ಹಿಂದುಳಿದ ಜಾತಿಗಳು ವಂಚನೆ ಅನುಭವಿಸುತ್ತಾ ಸಾಮಾಜಿಕ ನ್ಯಾಯ ಪಡೆಯುವಲ್ಲಿ ವಿಫಲವಾಗಿವೆ. ಇದರಿಂದಾಗಿ ಸಂವಿಧಾನದ ಪ್ರಜಾಸತ್ತಾತ್ಮಕ ಆಶಯಕ್ಕೆ ಧಕ್ಕೆ ಉಂಟಾಗುತ್ತ ಅಲ್ಪಸಂಖ್ಯಾತರು ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಹಿಂದುಳಿದಿದ್ದರೆ ಸಂವಿಧಾನ ಪ್ರಸ್ತಾವನೆಯಲ್ಲಿ ಸರ್ವರಿಗೂ ಸಮಾನ ಅವಕಾಶವುಳ್ಳ ಸಮಾಜವಾದಿ ಗಣರಾಜ್ಯವನ್ನಾಗಿ ರೂಪಿಸಬೇಕೆಂದು ತಿಳಿಸಿದರು. ಈ ಆಶಯ ಈಡೇರಲು ಯಾವುದೇ ಪ್ರಜಾಸತ್ತಾತ್ಮಕ ಸರ್ಕಾರವು ಅನೇಕಾನೇಕ ಕ್ರಮಕೈಗೊಳ್ಳಬೇಕಾಗುವುದು.

ಆದಿವಾಸಿಗಳು, ಬುಡಕಟ್ಟು ಗಿರಿಜನರು, ವನವಾಸಿಗಳು, ಅನಾಗರಿಕರು, ಅಶಿಕ್ಷಿತರು ಎಂದು ಕರೆಯಿಸಿಕೊಂಡು ಅಲಕ್ಷಿತರ ಪಟ್ಟಿಯಲ್ಲಿ ಬರುವ ಮುಗ್ಧ ಜೀವಿಗಳಾದ ಈ ಸಮೂಹ ದಟ್ಟ ಅರಣ್ಯಗಳಲ್ಲಿದ್ದಾರೆ. ನಾಗರಿಕರಿಂದ ಬಹುದೂರವಾಗಿ, ಭೌಗೋಳಿಕವಾಗಿ, ಪ್ರತ್ಯೇಕವಾಗಿ ನಾಗರಿಕ ಸಮಾಜದಿಂದ ವಂಚಿತರಾಗಿ ಸಮಾಜದ ಮುಖ್ಯವಾಹಿನಿಯಲ್ಲಿ ಬೆರೆಯಲಾಗಿಲ್ಲ. ಸಂವಿಧಾನಾತ್ಮಕ ಸೌಲಭ್ಯಗಳ ಅರಿವಿಲ್ಲದಿವರಿಗೆ ಅಶಿಕ್ಷಿತರು. ಅಜ್ಞಾನಿಗಳು, ಅವಿವೇಕಿಗಳೆಂಬ ಹಣೆಪಟ್ಟಿ ಕಟ್ಟಿಕೊಂಡು ಎಲ್ಲ ಸಮುದಾಯಗಳಿಗಿಂತಲೂ ಹಿಂದುಳಿದಿದ್ದಾರೆ. ಈ ಸಮೂಹಗಳಿಗೆ ಸಮಾಜದ ಅವಕೃಪೆ ಒಂದೆಡೆಯಾದರೆ ಈ ಸಮೂಹಗಳ ಒಳಗಡೆಯೆ ಇವರ ವಿರೋಧಿಯಂತಿರುವ ಆಂತರಿಕ ಭಿನ್ನತೆ. ಉಪಜಾತಿ. ಉಪಟಳ ವೈವಿಧ್ಯತೆ, ಪಾವಿತ್ರ್ಯತೆ, ವೈಷಮ್ಯಕ್ಕೆ ತಿರುಗಿ ಸಂಘರ್ಷಕ್ಕೆ ಕಾರಣವಾಗಿ ಅಭಿವೃದ್ಧಿಗೆ ಮಾರಕವಾಗಿದೆ. ಈ ಕಡೆ ನಾಗಲೋಟದಿಂದ ಬರುತ್ತಿರುವ ಹೊಸ ಜೀವನಶೈಲಿಯ ವಿಧಾನಕ್ಕೆ ಹೊಂದಿಕೊಳ್ಳಲಾರದೆ ಮೂಲ ಸಂಸ್ಕೃತಿ ಬಿಡಲಾರದೆ ಅತಂತ್ರ ಸ್ಥಿತಿಯಲ್ಲಿಯೇ ತೋಳಲಾಡುತ್ತಿದ್ದಾರೆ.

ಇಂದು ಜಗತ್ತು ಅನುಭವಿಸುವ ನಾಗರಿಕ ಸೌಲಭ್ಯಗಳು, ಶಿಕ್ಷಣ, ಉದ್ಯೋಗ, ವಸತಿ ಮುಂತಾದ ಸೌಕರ್ಯಗಳ ಕೊರತೆಯಿಂದಾಗಿ ಬುಡಕಟ್ಟು ಸಮೂಹಗಳು ಅಭಿವೃದ್ಧಿಯ ಹಿನ್ನಡೆಯಲ್ಲಿದ್ದಾರೆ. ಅರಣ್ಯವಾಸಿಗಳಾದ ಇವರಿಗೆ ಅರಣ್ಯಾಧಿಕಾರಿಗಳಿಂದಲೂ, ಕಾಡಿನಿಂದ ಹೊರಗೆ ಹಾಕುವ ಹುನ್ನಾರಗಳು ನಡೆದಿದ್ದು, ಇವರ ಬದುಕಿನ ಅವಿಭಾಜ್ಯ ಅಂಗದಂತಿರುವ ಅಥವಾ ಇವರುಗಳ ಉಸಿರೇ ಆಗಿರುವ ಅರಣ್ಯ ಹಕ್ಕನ್ನು ನಿರಾಕರಿಸಲಾಗುತ್ತಿದೆ. ಮತ್ತೊಂದೆಡೆ ಮಾನವ ಹಕ್ಕಿನ ಉಲ್ಲಂಘನೆಯಿಂದಾಗಿಯೂ, ಅಪೌಷ್ಟಿಕ ಆಹಾರ, ಸ್ವಚ್ಛತೆಯ ಅರಿವು ಇಲ್ಲದಿರುವುದರಿಂದ ನಾನಾ ರೀತಿಯ ರೋಗ-ರುಜಿನಿಗಳಿಗೆ ಬಲಿಯಾಗಿ ಜೀವಿಸುವ ಹಕ್ಕನ್ನೇ ಕಳೆದುಕೊಂಡಿದ್ದಾರೆ.

ಬಹುಚಿಂತಕರ ಬಹುದೊಡ್ಡ ಕನಸು, ಸಮಾನತೆಯ ಸಮಾಜದ ನಿರ್ಮಾಣ, ಆದರೆ ಸಮಾನತೆ ಎಂಬುದು ಜಗತ್ತಿನ ಹೆಚ್ಚು ಜನರು ಬಹು ಪುರಾತನ ಕಾಲದಿಂದಲೂ ಬಹಳ

ಆಸಕ್ತಿಯಿಂದ ಸಂಪೋಷಿಸಿಕೊಡು ಬಂದಿರುವ ಮೌಲ್ಯಗಳಲ್ಲೊಂದು "ಸಾಮಾನ್ಯವಾಗಿ ಹುಟ್ಟುವಾಗ ಎಲ್ಲರೂ ಸಮಾನರು ಎಂಬುದನ್ನು ಕೆಲವು ಧಾರ್ಮಿಕ ತತ್ವಗಳು ಒತ್ತು ಕೊಟ್ಟು ತಿಳಿಸಿದ್ದರು ಮಾನವನ ಚರಿತ್ರೆಯ ಯಾವುದೇ ಕಾಲಘಟ್ಟದಲ್ಲೂ ಎಲ್ಲರೂ ಎಲ್ಲಾ ಬಗೆಯಿಂದಲೂ ಸರಿಸಮಾನರಾಗಿದ್ದ ನಿದರ್ಶನಗಳಲ್ಲಿ ಕಾಣುತ್ತಾರೆ. ರೂಸೋ ಹೇಳುವಂತೆ "ಮಾನವರು ಹುಟ್ಟುವಾಗ ಸ್ವತಂತ್ರರು ಹಾಗೂ ಸಮಾನರಾಗಿದ್ದರೂ ಸಮಾಜದ ಎಲ್ಲೆಡೆಯಲ್ಲಿಯೂ ಸಂಕೋಲೆಗಳಿಂದ ಬಂಧಿತರಾಗಿರುವುದನ್ನು ಗುರುತಿಸುತ್ತಾರೆ". ಈ ಮೂಲಕ ಸ್ವತಂತ್ರತೆಯ ಮಹತ್ವದ ಸಾಮಾಜಿಕ ಸತ್ಯವನ್ನು ಜಗತ್ತಿಗೆ ಸಾರಿದ್ದುಂಟು. ಆದಾಗ್ಯೂ ಸಮಾನತೆಯ ಸ್ಥಾಪನೆಯ ಕಡೆಗಿನ ತುಡಿತ ಅಸಮಾನತೆ ಹಾಗೂ ಅನ್ಯಾಯಗಳ ವಿರುದ್ಧ ಹೋರಾಟಗಳು ಇಂದಿಗೂ ಕಡಿಮೆ ಆಗಿಲ್ಲ. ಒಂದಲ್ಲ ಒಂದು ಕಾಲದಲ್ಲಿ ಮುಂದುವರಿದುಕೊಂಡು ಬರುತ್ತಿದೆ.

ಇಂತಹ ಹೋರಾಟದ ಉದ್ದೇಶವೆಂದರೆ ಸಮಾಜದಲ್ಲಿನ ಸರ್ವ ಸಮುದಾಯಕ್ಕೂ ಅಧಿಕಾರ, ಸಂಪತ್ತು ಅಥವಾ ಪ್ರತಿಷ್ಠೆ ಇವುಗಳನ್ನು ಇತರರಿಗೆ ಸಮಾನರಾಗಿ ಪಡೆಯಲು ಅಥವಾ ಇತರರೊಂದಿಗೆ ಸಮಾನವಾಗಿ ಹಂಚಿಕೊಳ್ಳುವ ಸ್ಥಿತಿ ನಿರ್ಮಾಣಗೊಂಡಾಗ, ಎಲ್ಲ ಸಮುದಾಯಗಳು ಸಮಾನವಾಗಿ ಬದುಕಲು ಸಾಧ್ಯ ಎಂಬುದು ಅಪೇಕ್ಷಣೀಯ. ಆದರೆ ಅಂದಿನ ಪುರಾತನ ಸಮಾಜದ ವ್ಯವಸ್ಥೆಯು ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿಯೂ ಅಧಿಕಾರ, ಸಂಪತ್ತು, ಪ್ರತಿಷ್ಠೆ, ಸ್ಥಾನಮಾನಗಳು ಅಸಮಾನವಾಗಿದ್ದು ಮತ್ತಷ್ಟು ಅಸಮಾನ ಹಂಚಿಕೆಗೆ ಅವಕಾಶ ಮಾಡಿಕೊಟ್ಟಿವೆ. ಇದರಿಂದಾಗಿ ಮಾನವ ಚರಿತ್ರೆಯುದ್ದಕ್ಕೂ ಸಂಘರ್ಷ, ಹೋರಾಟ, ಬಿಗುವು, ಹಿಂಸಾಚಾರ, ಅನ್ಯಾಯ, ಶೋಷಣೆ ಮತ್ತು ಬವಣೆಗಳ ಮೂಲವಾಗಿ, ಸಾಮಾಜಿಕ ಸಂರಚನೆಯ ಅಂತರ್ನಿರ್ವಿತ ಭಾಗವೆಂಬಂತೆ ರಚಿತವಾಗಿದ್ದ ಸ್ಥಿತಿ, ಪೀಳಿಗೆಗಳಿಂದ ಪೀಳಿಗೆಗೆ ವರ್ಗಾವಣೆ ಗೊಳ್ಳುತ್ತಿದೆ. ಆದರೆ ಸಮಾಜದ ಕೆಲವೊಂದು ವರ್ಗಗಳ ಜನರಿಗೆ ಹುಟ್ಟಿದಾಗಿನಿಂದ ಸಮಾಜದ ಸಂಪತ್ತಿನ ನ್ಯಾಯೋಚಿತವಾದ ಪಾಲನ್ನು ನಿರಾಕರಿಸಲಾಗಿದೆ. ಯಾವುದೆ ಒಂದು ಜನಸಮುದಾಯದ ಜೀವನಾಡಿ ಎಂದರೆ ಆರ್ಥಿಕ ಬಂಡವಾಳ. ಆರ್ಥಿಕ ಬಂಡವಾಳವು ಭೌತಿಕ ಸ್ವರೂಪದ ಆಸ್ತಿ, ಸಂಪತ್ತು ಮತ್ತು ಆದಾಯ, ಆದಾಯದ ಮೂಲ ಒಳಗೊಂಡರೆ, ಸಾಂಸ್ಕೃತಿಕ ಬಂಡವಾಳವಾದ ಶಿಕ್ಷಣ ಮತ್ತು ಆಯಾ ಕಾಲಘಟ್ಟದ ಹುದ್ದೆಗಳಿಗೆ ಬೇಕಾದಂತಹ ತರಬೇತಿ ಹಾಗೂ ಅರ್ಹತೆಯು ಬಹುಮುಖ್ಯ ಪಾತ್ರವಹಿಸುತ್ತದೆ. ಹಾಗೆಯೆ ಸಾಮಾಜಿಕ ಬಂಡವಾಳವಾದ ಸಾಮಾಜಿಕ ಸಂಪರ್ಕ, ಸಾಮಾಜಿಕ ಸಂಘ ಸಂಸ್ಥೆಗಳೊಂದಿಗೆ ಹೊಂದಿರುವ ವಿವಿಧ ಸಂಪರ್ಕ ಸಂಬಂಧಗಳ ಜಾಲವನ್ನು ಒಳಗೊಂಡಿದೆ. ಈ ಮೇಲಿನ ಮೂರು ಬಗೆಯ ಸಾಮಾಜಿಕ ಸಂಪನ್ಮೂಲಗಳು ಸಮಾನವಾಗಿ ವಿತರಣೆಯಾಗದಿರುವ ಸಂದರ್ಭದಲ್ಲಿ ಅಸಮಾನತೆಯ ಆಹಕಾರ ಉಂಟಾಗುವುದು. ಏಕೆಂದರೆ ಜಗತ್ತಿನ ಯಾವುದೆ ಸಮಾಜದಲ್ಲಿ ಎಲ್ಲಾ ಜನರಿಗೂ ಸಮಾನ ಸಾಮಾಜಿಕ ಮಾನ್ಯತೆ ನೀಡಿಲ್ಲ. ಸಾಮಾಜಿಕ ಸ್ಥಿತಿಗತಿಗಳಲ್ಲಿ ಸ್ತ್ರೀಯರಿಗಿಂತ ಪುರುಷರನ್ನು, ಬಡವರಿಗಿಂತ ಸಿರಿವಂತರನ್ನು, ಮುಸ್ಲಿಂರಿಗಿಂತ ಕ್ರೈಸ್ತರನ್ನು, ದಲಿತರಗಿಂತ ಬ್ರಾಹ್ಮಣರನ್ನು, ಕರಿಯ ಜನಾಂಗದವರಿಗಿಂತ ಬಿಳಿಯ

ಜನಾಂಗದವರನ್ನು, ಮೇಲ್‌ಸ್ತರ, ಕೆಳಸ್ತರಕ್ಕೆ ಏರಿಸಿದ್ದನ್ನು ಕಾಣುತ್ತೇವೆ. ಹಾಗಾಗಿಯೆ ಸಮಾನತೆಯಿಂದ ಕೂಡಿದ ಸಮಾಜವನ್ನು ಜಗತ್ತಿನ ಯಾವುದೇ ದೇಶದಲ್ಲಿ ಕಾಣಲು ಸಾಧ್ಯವಿಲ್ಲ. ಏಕೆಂದರೆ ಸಮಾಜದ ಸದಸ್ಯರೆಲ್ಲರೂ ಸಮಾನರಂತೆ ಕಾಣುವುದಿಲ್ಲ. ಅವರುಗಳ ನಡುವೆ ಭೇದವಿದ್ದು, ಸ್ತ್ರೀ ಪುರುಷರೆಂಬ, ಹಿರಿಯ-ಕಿರಿಯರೆಂಬ ಕರಿ, ಬಿಳಿ, ಕೆಂಪುಗಳೆಂಬ, ದೈಹಿಕ, ಬೌದ್ಧಿಕ ಶೈಕ್ಷಣಿಕ ಆಸಕ್ತಿ ಅಭಿರುಚಿಗಳೆಲ್ಲವೂ ವಿಭಿನ್ನವಾಗಿವೆ. ಇಂತ ವಿಭಿನ್ನತೆಯೆ ಸಮಾಜದ ಸ್ವರೂಪವಾಗಿದೆ.

ಕೆಲವು ತಂಡವಾದದ ಬುದ್ಧಿಜೀವಿಗಳು ಅಸಮಾನತೆಗಳು ಜೈವಿಕ ನೆಲೆಯಲ್ಲಿಯೆ ಹುಟ್ಟಿಕೊಂಡಿವೆ. ಆದ್ದರಿಂದಲೆ ಸ್ತರವ್ಯವಸ್ಥೆ ನಿರ್ಮಾಣವಾಗಿವೆ ಎಂಬ ಪೂರ್ವಪರ ವಿಚಾರಣೆ ಅಥವಾ ಸಾಕ್ಷ್ಯಗಳಿಲ್ಲದ ಅನರ್ಥತೆ ಮತ್ತು ಅಸಂಬದ್ಧತೆಯಿಂದ ಒಂದು ಪರಿಕಲ್ಪನೆಯ ಬಗ್ಗೆ ವಿಚಾರಣೆ ಮಾಡದೇ ತಮ್ಮ ಅಭಿಪ್ರಾಯ ಮನೋಭಾವನೆಗಳನ್ನು, ಪೂರ್ವಗ್ರಹದಿಂದಲೆ ಉತ್ತರಿಸುವವರಿದ್ದಾರೆ. ಇಂತಹ ಚಿಂತಕರ ಪೂರ್ವಗ್ರಹ ಪೀಡಿತರಿಂದಲೆ ಸಾಮಾಜಿಕ ಸ್ತರವ್ಯವಸ್ಥೆ ಬಲಾಢ್ಯವಾಗಿ ಬೆಳೆಯಲಿಕ್ಕೆ ಆಸ್ಪದವಾಗಿದೆ. ಆದರೆ ಇವತ್ತು ಸಾಮಾಜಿಕ ಸಮಸ್ಯೆ ಎನಿಸಿಕೊಂಡಿರುವ ಅಸಂಖ್ಯಾತ ಅಸಮಾನತೆಗಳು ಜೈವಿಕವಾಗಿರದೆ ಸಾಮಾಜಿಕವಾಗಿ ಸೃಷ್ಟಿಸಲ್ಪಟ್ಟವಾಗಿವೆ. ಪರಿಣಾಮವೇ ಅದೇ ಅಂತಸ್ತು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ವರ್ಗಾವಾಗುತ್ತಾ ಅಲಕ್ಷಿತರ ಗುಂಪು ಉಗಮವಾಗಿದೆ. ಪರಿಣಾಮ ಸಮಾಜದೊಂದಿಗಿನ ಸಂಬಂಧದಂತಹ ಸಾಮಾಜಿಕ ಕೊಂಡಿಗಳಿಂದ ಅಥವಾ ಆದಾಯದಂತಹ ಸಂಪನ್ಮೂಲಗಳಿಂದ ವಂಚಿತರಾಗಿಯೂ, ಬಹುಸಂಖ್ಯಾತ ಜನರಿಗೆ ಯಾವ ಅವಕಾಶಗಳನ್ನು ಮುಕ್ತವಾಗಿರಿಸಲಾಗಿತ್ತೋ, ಅಂತಹ ಅವಕಾಶಗಳನ್ನು ಪಡೆದುಕೊಳ್ಳಲಾರದಂತೆ ಕೆಲವು ವ್ಯಕ್ತಿಗಳನ್ನು ಹಾಗೂ ಸಮೂಹಗಳನ್ನು ಪ್ರತಿಬಿಂಬಿಸಿರುವುದಿದೆ. ಸಾಮಾಜಿಕ ಬದುಕಿಗೆ ತೀರ ಅವಶ್ಯಕವಾಗಿ ಬೇಕಾಗಿರುವ ಶಿಕ್ಷಣ ಆರೋಗ್ಯ, ಸಂಪರ್ಕ ಸಾರಿಗೆ, ಜೀವವಿಮೆ, ಸಾಮಾಜಿಕ ಭದ್ರತೆ, ಬ್ಯಾಂಕಿನ ಸೇವೆ, ಪೊಲೀಸ್ ಮತ್ತು ಕಾನೂನಿನ ರಕ್ಷಣೆಯ ಭರವಸೆಯಂತಹ ಸಾಮಾನ್ಯ ಸೇವೆಗಳು ಹಾಗೂ ಕೆಲವೊಂದು ವಸ್ತುಗಳನ್ನು ಪಡೆಯಲು ಕೆಲವು ಮಂದಿಗೆ ಅವಕಾಶಗಳನ್ನು ನಿರಾಕರಿಸಲಾಗಿದ್ದನ್ನು ಕಾಣುತ್ತೇವೆ. ಇಂತಹ ಸ್ಥಿತಿ ಕೇವಲ ಆಕಸ್ಮಿಕವಾಗಿ ಉಂಟಾದುದಲ್ಲ. ಉದ್ದೇಶಪೂರ್ವಕವಾಗಿಯೆ ಕೆಲವೊಂದು ಸೇವೆಯಿಂದ ಅನರ್ಹಗೊಳಿಸಿ, ಕೆಲವರಿಗೆ ಅರ್ಹತೆ ನೀಡಿದ್ದಿದೆ. ಹಾಗಾಂತ ಇದು ಸ್ವ-ಇಚ್ಛೆಗೆ ಒಳಪಟ್ಟ ಅಥವಾ ಈಗಾಗಲೇ ಹೊರಗಿರಿಸಲ್ಪಟ್ಟವರ ಇಚ್ಛೆಗೆ ಅನುಸಾರವಾಗಿ ಆದುದಲ್ಲ. ಇವರ ಇಚ್ಛೆಗೆ ಸಂಪೂರ್ಣವಾಗಿ ಹೊರತಾದುದು ಇವರ ಇಚ್ಛೆಗೆ ವಿರುದ್ಧವಾಗಿಯೆ ಹಲವು ಬಗೆಯ ಅನರ್ಹತೆಯನ್ನು ಇಂಥವರ ಮೇಲೆ ಹೇರಿ ಅವರನ್ನು ಹೊರಗಿರಿಸಲಾಗಿದೆ. ಸಾಮಾನ್ಯವಾಗಿ ಎಲ್ಲರಿಗೂ ಅಪೇಕ್ಷಣೀಯವಾದುದೆಂದು ಪರಿಗಣಿಸುವ ವಿಷಯಗಳಾದ ಉತ್ತಮ ಶಿಕ್ಷಣ ಪಡೆಯುವ ಅಧಿಕಾರ ಹಾಗೂ ಧಾರ್ಮಿಕ ಮಂದಿರಗಳಿಗೆ ಎಲ್ಲರಂತೆ ಪ್ರವೇಶಿಸುವ ಅಧಿಕಾರಿಗಳಿಂದ ಹಲವು ಜನಸಮುದಾಯಗಳನ್ನು ವಂಚಿತರನ್ನಾಗಿಸಿ ಹೊರಗಿರಿಸಲಾಗಿದೆ. ತಾರತಮ್ಯತೆ ಹಾಗೂ

ಅಪಮಾನಗಳಿಂದ ಬಹುದೀರ್ಘಾವದಿಯಿಂದಲೂ ಪೀಡಿತವಾಗಿದ್ದು ಹೊರಗಿರಿಸಲ್ಪಟ್ಟ ಸಮೂಹವೊಂದು ಅಂತಹ ಅನುಭವದ ಪರಿಣಾಮವೊ ಎಂಬಂತೆ ಒಳಗೊಳ್ಳುವಿಕೆಗೆ ವಿರುದ್ಧವಾದ ಪ್ರತಿಕ್ರಿಯೆಯೊಂದನ್ನು ಬೆಳೆಸಿಕೊಳ್ಳುವ ಸಾಧ್ಯತೆಯಿದೆ. ಪರಿಣಾಮ ಒಳಗೊಳ್ಳುವಿಕೆಯ ಸಂಬಂಧವಾದ ಪ್ರಯತ್ನವನ್ನೇ ನಿಲ್ಲಿಸಬಹುದಾಗಿದೆ. ಉದಾ:- ಕೆಲವು ಜನಸಮುದಾಯಗಳನ್ನು ದೇವ ಮಂದಿರಗಳಿಗೆ ಪ್ರವೇಶ ನಿಷೇಧಿಸಿದ್ದರಿಂದ, ಅಂಥವರು ತಮ್ಮದೇ ಸಮುದಾಯದ ದೇವಾಲಯ ಕಟ್ಟಿಕೊಂಡು ಪೂಜಿಸುವ ಜೊತೆಗೆ ತಮ್ಮ ಧರ್ಮವನ್ನು ಬಿಟ್ಟು ಬೇರೊಂದು ಧರ್ಮದತ್ತ ಹೊರಳಿದ್ದಾರೆ. ಉದಾ:- ಆದಿವಾಸಿ, ಅಲೆಮಾರಿ ಸಮುದಾಯಗಳು ಹಿಂದುಳಿದವರು, ದಲಿತರು, ಮುಸ್ಲಿಂ, ಕ್ರೈಸ್ತ, ಬೌದ್ಧ ಧರ್ಮದತ್ತ ಮತಾಂತರಗೊಂಡಿದ್ದನ್ನು ಕಾಣಬಹುದಾಗಿದೆ.

ಜಾತಿ ಮಾತ್ರವಲ್ಲದೆ, ಮತಧರ್ಮ, ಕುಲಸಂಬಂಧಗಳಂತಹ ಅಂಶಗಳು ಸಾಮಾಜಿಕ ಹೊರಗಿಡುವಿಕೆಗೆ ಹಾಗೂ ವಂಚಿತತೆಗೆ ಕಾರಣವಾಗಿದ್ದಿದೆ. ಬೇರೆ ಬೇರೆ ಸಮೂಹಗಳು. ಬೇರೆ ಬೇರೆ ಕಾಲಘಟ್ಟಗಳಲ್ಲಿ ಬೇರೆ ಬೇರೆ ಕಾರಣಗಳಿಂದ ಬೇರೆ ಬೇರೆ ರೀತಿಗಳಲ್ಲಿ ಹೊರಗಿಡುವಿಕೆ ಹಾಗೂ ತಾರತಮ್ಯತೆಯ ಅನುಭವಗಳನ್ನು ಎದುರಿಸಿದ ಉದಾಹರಣೆಗಳಿವೆ. ಅಸಮಾನತೆ ಹಾಗೂ ಹೊರಗಿಡುವಿಕೆಯ ಅನಪೇಕ್ಷಿತ ಅನುಭವಕ್ಕೆ ಸಿಲುಕಿ ನೋವು, ಸಂಕಷ್ಟಗಳಿಗೆ ಒಳಗಾದ ಸಮೂಹಗಳೆಂದರೆ ದಲಿತರು ಅಥವಾ ಅಸ್ಪೃಶ್ಯರು, ಪರಿಶಿಷ್ಟ ಜಾತಿಗಳು, ಆದಿವಾಸಿಗಳ ಅಥವಾ ಪರಿಶಿಷ್ಟ ಪಂಗಡಗಳು, ಬುಡಕಟ್ಟುಗಳು ಸ್ತ್ರೀಯರು ಹಾಗೂ ಅಲೆಮಾರಿಗಳು ಇವರುಗಳ ಮಧ್ಯೆ ಸೃಷ್ಟಿಯಾದ ಅಂತರವು ಭಯಂಕರ ಕ್ರೂರವಾಗಿದೆ.

ಉದಾಹರಣೆ:- ಸ್ತ್ರೀಪುರುಷರೆಂಬ ತಾರತಮ್ಯತೆ ಸ್ತ್ರೀ ಪುರುಷರ ನಡುವೆ ಉದ್ದೇಶಪೂರ್ವಕವಾಗಿ ಎಂಬಂತೆ ತಾರತಮ್ಯತೆ ವರ್ಣಿಸುವ ಪರಿಪಾಠ ಇಂದು ನಿನ್ನೆಯದಲ್ಲ. ಬಹಳ ಹಳೆಯದು ಜಗತ್ತಿನ ಬಹುತೇಕ ಧರ್ಮಗಳಲ್ಲೂ ಕೂಡ ಕೆಲವೊಂದು ಹಕ್ಕುಗಳನ್ನು ಸ್ತ್ರೀಯರಿಗೆ ನಿರಾಕರಿಸ ಲಾಗಿದೆ. ಲಿಂಗಾಧಾರಿತವಾದ ಪ್ರತಿಭೆ ಹಾಗೂ ಸಾಮಾರ್ಥ್ಯಗಳಲ್ಲಿ ಬಹಳಷ್ಟು ವ್ಯತ್ಯಾಸ ಗಳಿರುವುದರಿಂದ ಸ್ತ್ರೀ ಪುರುಷರ ನಡುವಿನ ಭಿನ್ನತೆ ಅಥವಾ ಅಂತರ ಅನಿವಾರ್ಯ ಎಂಬುದು ಒಂದು ವಾದ. ಇದು ಒಂದು ಬಗೆಯ ಸಾಮಾಜಿಕ ನಂಬಿಕೆ ಕೂಡ. ಪ್ರಾಯಶಃ ಇದೇ ಕಾರಣಕ್ಕಾಗಿ ಇತಿಹಾಸದುದ್ದಕ್ಕೂ ಕೆಲವೆ ಕೆಲವು ಅಪವಾದಗಳ ಹೊರತಾಗಿ ಸ್ತ್ರೀಯರಿಗೆ ಸಾಪೇಕ್ಷವಾಗಿ ಕೀಳು ದರ್ಜೆಯ ಸ್ಥಾನ ನೀಡುತ್ತಾ ಬಂದಿದ್ದನ್ನು ಗುರುತಿಸಬಹುದು. ಈ ಬಗೆಯ ಅಂತರ ಅಥವಾ ವ್ಯತ್ಯಾಸದ ಅಂಶವನ್ನು ಅರ್ಥಾತ್ ನಂಬಿಕೆಯನ್ನು ಅಥವಾ ಸುಳ್ಳನ್ನು ಸತ್ಯವೆಂದು ನಂಬಿಸಿದ್ದರಿಂದ ನಿಸರ್ಗದತ್ತವಾಗಿಯೆ ಬಂದಿದೆ ಎಂಬಂತೆ, ಸ್ತ್ರೀಪುರುಷರು ತಾವು ಹಂಚಿಕೊಂಡಿರುವ ಸಂಸ್ಕೃತಿಯ ಒಂದು ಅವಿಚ್ಛಿನ್ನ ಭಾಗವೆಂಬಂತೆ ಒಪ್ಪಿಕೊಂಡಿದ್ದಾರೆ. ಅಸಮಾನತೆ ಹಾಗೂ ಲಿಂಗಭೇದವೆಂಬುದು ಒಂದು ಸಾರ್ವತ್ರಿಕ ವಿದ್ಯಮಾನವಾಗಿದೆ. ಇದನ್ನೆ ಇವರ ದೌರ್ಬಲ್ಯ ಕಂಡುಕೊಂಡು ಸ್ತ್ರೀ-ಪುರುಷರ ನಡುವಿನ ಭೇದವನ್ನು ಮುಂದುವರಿಸಿ ಅವರ ನಡುವೆ ಅಸಮಾನತೆಯನ್ನು ಸೃಷ್ಟಿಸಿ ಅವರನ್ನು ಬೇರೆ ಬೇರೆಯಾಗಿ ಕಾಣುವ

ಪರಿಪಾಠ ಎಲ್ಲಾ ಸಮಾಜಗಳಲ್ಲಿ ಮತ್ತು ಎಲ್ಲಾ ಕಡೆಗಳಲ್ಲೂ ಇದೆ. ಎಲ್ಲಾ ಸಮಾಜಗಳಲ್ಲಿನ ಬಹುತೇಕ ಪುರುಷರು ಸ್ತ್ರೀಯರೊಂದಿಗೆ ಹಾಗೂ ಬಹುತೇಕ ಸ್ತ್ರೀಯರು ಪುರುಷರೊಂದಿಗೆ ವಾಸಿಸುತ್ತಾ ಬಂದಿರುವ ಐತಿಹಾಸಿಕ ಸಾಮಾಜಿಕ ಸತ್ಯದ ಅನುಭವಿದ್ದರು. ಲಿಂಗಭೇದದ ಪ್ರಾಮುಖ್ಯತೆಯನ್ನು ಕಡಿಮೆಗೊಳಿಸಿಲ್ಲ. ಸ್ತ್ರೀ ಪುರುಷರಿಗೆ ಸಮಾನವಾದ ಸಾಮಾಜಿಕ ಅಂತಸ್ತನ್ನು ನೀಡಿ ಸಮಾನವಾದ ಹೊಣೆಗಾರಿಕೆ ಹಾಗೂ ಕರ್ತವ್ಯಗಳನ್ನು ವಹಿಸಿ, ಸಮಾನವಾದ ಗೌರವಾದರಗಳನ್ನು ನೀಡಿ ಸಮಾನತೆ ಮೆರೆದಂತಹ ಸಮಾಜ ಈವರೆಗೆ ಅಸ್ತಿತ್ವದಲ್ಲಿದ್ದುದ್ದಿಲ್ಲ. ಸ್ತ್ರೀ ಪುರುಷರನ್ನು ಹತ್ತು ಹಲವು ರೀತಿಗಳಲ್ಲಿ ಬೇರ್ಪಡಿಸಿ, ಅವರುಗಳಿಗೆ ಪ್ರತ್ಯೇಕವಾದ ಅಂತಸ್ತುಗಳನ್ನು ಹಾಗೂ ಪಾತ್ರಗಳನ್ನು ನೀಡಿದ ಪರಂಪರೆಯನ್ನು ನಾವು ಎಲ್ಲಾ ಕಡೆಗಳಲ್ಲೂ ಕಾಣುತ್ತಾ ಬಂದಿರುವೆವು. ಲಿಂಗಭೇದವೆಂಬುದು ಲೈಂಗಿಕ ತಾರತಮ್ಯತೆಗೆ ಕಾರಣವಾಗಿರುವುದಲ್ಲದೆ, ಅದು ಮಾನವನ ಸಾಮಾಜಿಕ ವ್ಯವಸ್ಥೆಯ ಅವಿಚ್ಛಿನ್ನ ಭಾಗವಾಗಿದೆ ಎಂದರೂ ತಪ್ಪಾಗಲಾರದು. ಇಂತಹ ಮಾನದಂಡದಿಂದಲೆ, ಸ್ತ್ರೀ ಪುರುಷ ಎಂಬ ಲಿಂಗಾಧಾರದ ನೆಲೆಯಲ್ಲಿ ಹಣ, ಸಂಪತ್ತು, ಅಧಿಕಾರ, ಪ್ರತಿಷ್ಠೆ, ಸ್ಥಾನಮಾನ, ಅಂತಸ್ತುಗಳಂತಹ ಸಾಮಾಜಿಕ ಪ್ರತಿಫಲಗಳನ್ನು ಸ್ತ್ರೀ ಪುರುಷರಿಗೆ ಅಸಮಾನವಾಗಿ ಹಂಚಿಕೆ ಮಾಡಲಾಗಿದೆ. ಇದು ಜೈವಿಕ ಪ್ರಕ್ರಿಯೆಯ ಅನಿವಾರ್ಯತೆ ಎಂದು ಹೇಳುವವರು ಇಂದಿನ ದಿನಮಾನಗಳಲ್ಲಿ ಹೇರಳವಾಗಿದ್ದಾರೆ. ಲಿಂಗದ ಆಧಾರದ ಮೇಲೆ ಹೇರಿರುವ ಎಲ್ಲಾ ಸೌಲಭ್ಯಗಳು ಜೈವಿಕವಾಗಿರದೆ ಸಾಮಾಜಿಕ, ಸಾಂಸ್ಕೃತಿಕ ನೆಲೆಯುಳ್ಳದ್ದು. ಅಂತೆಯೆ ಸಾಂಸ್ಕೃತಿಕ ಹಾಗೂ ಐತಿಹಾಸಿಕವಾಗಿ, ಅದು ಸಾಪೇಕ್ಷವಾದುದು ಎಂಬ ಸತ್ಯ ಇಂಥವರಿಗೆ ತಿಳಿಸುವುದಾದರೂ ಹೇಗೆ ಎಂಬುದು ತೆಲಗಾವಿಯವರ ಆತಂಕ, ಏಕೆಂದರೆ ಸತ್ಯ ಕಣ್ಣ್ಮುಂದೆಯಿದ್ದರೂ, ಒಪ್ಪಿಕೊಳ್ಳಲಾರದಂತ ಸ್ಥಿತಿಯಲ್ಲಿರುವುದನ್ನು ಕಂಡು ವಿಷಾದಿಸುತ್ತಲೆ ತಮ್ಮ ಅಕ್ಕಪಕ್ಕದ ಅಥವಾ ಸಾಮೀಪ್ಯವಿದ್ದವರಿಂದ ಮನಪರಿವರ್ತಿಸುವಂತ ಕ್ರಿಯೆಗಳನ್ನು ನಿರಂತರವಾಗಿ ಮಾಡುತ್ತಲೇ ಇದ್ದಾರೆ.

ಒಳಗೊಳ್ಳುವಿಕೆಯ ತಂತ್ರಗಳು ಮತ್ತು ಸೌಲಭ್ಯ ನೀಡುವುದು

ಜಾತಿಗಳ ರೂಪದಲ್ಲಿ ಸಾಂಸ್ಥಿಕ ಸ್ವರೂಪ ಪಡೆದುಕೊಂಡ ಅಸಮಾನತೆಯು, ಸಾಮಾಜಿಕ ಅನುಭವಕ್ಕೆ ಸಿಲುಕಿ ನಲುಗಿದ ಅಸ್ಪೃಶ್ಯ ಜಾತಿಗಳು ನೂರಾರಿವೆ. ಅಸಮಾನತೆ ಎಂಬುದು ಅಸ್ಪೃಶ್ಯ ಜಾತಿಗಳೆಂದು ಕರೆಯಲಾಗುವ ಹಾಗೂ ಸಂಪೂರ್ಣವಾಗಿ ಪ್ರತ್ಯೇಕಿಸಲ್ಪಟ್ಟ ಜಾತಿಗಳ ಬೆಳವಣಿಗೆಯ ರೂಪದಲ್ಲಿ ಬಹಳ ಪ್ರಕಟವಾಗಿ ಕಾಣಬರುವುದು. ಅಸ್ಪೃಶ್ಯ ಜಾತಿಗಳೆಂದು ಕರೆಯಲ್ಪಡುವ ಸಂಖ್ಯೆಯು ಬಹುದೊಡ್ಡ ಸಂಖ್ಯೆಯಲ್ಲಿದ್ದು ಪರಿಶಿಷ್ಟ ಜಾತಿಗಳು ಬಹುಸಂಖ್ಯಾತ ರಾಗಿದ್ದು, ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ೧೦೧ಕ್ಕೂ ಅಧಿಕ ಜಾತಿ ಉಪಜಾತಿಗಳು ಶತಮಾನಗಳಿಂದಲೂ ಸಾಮಾಜಿಕ ವ್ಯವಸ್ಥೆಯಡಿ ಹೊರಗಿಡಲಾಗಿದೆ. ಮತ್ತೊಂದೆಡೆ ಭಾರತೀಯ ಜನಸಮುದಾಯಕ್ಕೆ ಸೇರಿದ ಮತ್ತು ಬಹುಕಾಲದಿಂದಲೂ ದೇಶದ ವಿಸ್ತೃತ ಸಾಮಾಜಿಕ ಸಾಂಸ್ಕೃತಿಕ ಪ್ರಭಾವಗಳಿಂದ ಪ್ರತ್ಯೇಕವಾಗಿರಿಸಲ್ಪಟ್ಟ ಆದಿವಾಸಿ ಸಮುದಾಯ ಅಥವಾ ಪರಿಶಿಷ್ಟ ಪಂಗಡಗಳು ಎಂದು ಕರೆಯಲ್ಪಡುತ್ತಿರುವ ಇನ್ನೊಂದು ವರ್ಗದ ಜನರು ಕೂಡ ಸಾಮಾಜಿಕವಾಗಿ

ಹೊರಗಿಟ್ಟ ಪರಿಣಾಮ ಪ್ರಕ್ರಿಯೆಗೆ ಸಿಲುಕಿ ಬೇಗುದಿಗೆ ಒಳಗಾಗಿದ್ದಾರೆ. ಸಾಮಾಜಿಕ ಅಸಮಾನತೆ ಮತ್ತು ಅದರ ಪರಿಣಾಮವಾದ ಹೊರಗಿಡುವಿಕೆಯಿಂದಾಗಿ ಆದಿವಾಸಿ ಸಮುದಾಯಗಳು ಹಲವು ಶತಮಾನಗಳವರೆಗೂ ಶೋಷಣೆ ಮತ್ತು ದೌರ್ಜನ್ಯಗಳಿಗೆ ಒಳಗಾದವು. ಆದರೆ ಸ್ವಾತಂತ್ರ್ಯೋತ್ತರದಲ್ಲಿ ದೇಶದ ಸಾಮಾಜಿಕ ಚಿತ್ರಣ ಬದಲಾಗತೊಡಗಿತು. ಸ್ವತಂತ್ರ ಭಾರತದ ಪ್ರಜಾಸತ್ತಾತ್ಮಕ ಗಣರಾಜ್ಯವು ಒಂದು ಐತಿಹಾಸಿಕ ನಿಲುವನ್ನು ತಳೆದು, ಜಾತಿ ವ್ಯವಸ್ಥೆಯಿಂದ ನಿರ್ಮಾಣವಾದ ಎಲ್ಲ ಬಗೆಯ ಸಾಮಾಜಿಕ ಹೊರಗಿಡುವಿಕೆಗೂ ಅಂತ್ಯವನ್ನು ಹೇಳಿ ದೇಶದ ಸಮಸ್ತ ಜನವರ್ಗವನ್ನು ರಾಷ್ಟ್ರೀಯ ಜೀವನದ ಪ್ರಮುಖಧಾರೆಗೆ ತರುವಂತೆ ಹೊಸ ವ್ಯವಸ್ಥೆ ರೂಪಿಸಲಾಯಿತು. ಹೊರಗಿಡಿಸಿದ ಅಲಕ್ಷಿತ ಸಮುದಾಯಗಳನ್ನು ಒಳಗೊಂಡಂತೆ ಸಾಮಾಜಿಕ ನ್ಯಾಯ, ಸ್ವಾತಂತ್ರ್ಯ ಸಮಾನತೆ ಹಾಗೂ ಭ್ರಾತೃತ್ವಗಳಂತಹ ಮೌಲ್ಯಗಳನ್ನು ಸಂಪೋಷಿಸುವ, ದೇಶದ ಏಕತೆ ಮತ್ತು ಅಖಂಡತೆಯನ್ನು ಉತ್ತೇಜಿಸುವ ಅಂಶಗಳನ್ನೊಳಗೊಂಡ ಸಂವಿಧಾನವನ್ನು ನಾವು ಒಪ್ಪಿದವರು. ಸಾಮಾಜಿಕ ಹೊರಗಿಡುವಿಕೆಯ ನೋವಿಗೆ ಒಳಗಾದವರನ್ನು ಸಂತೈಸುವುದ ರೊಂದಿಗೆ ಅವರನ್ನು ಹೊರಗಿರಿಸುವ ಅಂಶಗಳನ್ನು ನಿವಾರಣೆ ಮಾಡುವುದರ ಮೂಲಕ ಸಮಾಜದ ಮುಖ್ಯವಾಹಿನಿಗೆ ಅವರನ್ನು ತರುವ ಪ್ರಯತ್ನ ಸಾಗಿದೆ. ಎಲ್ಲಾ ಬಗೆಯ ತಾರತಮ್ಯತೆಗಳಿಗೆ ವಿದಾಯ ಹೇಳಿ ದೀನ-ದುರ್ಬಲ ವರ್ಗಗಳ ಜೀವನ ಪರಿಸ್ಥಿತಿಯನ್ನು ಸುಧಾರಿಸಲು ಮತ್ತು ಅವರನ್ನು ಸಾಮಾಜಿಕ ಜೀವನಧಾರೆಯೊಂದಿಗೆ ಒಳಗೊಳ್ಳುವಂತ ಸಹಾಯಕ ವಾದ ಹಲವಾರು ಬಗೆಯ ಕಾರ್ಯಕ್ರಮಗಳು ಹಾಗೂ ಯೋಜನೆಗಳು ಕೂಡ ಸರ್ಕಾರದ ವತಿಯಿಂದ ಕೈಗೊಳ್ಳಲ್ಪಟ್ಟಿದೆ. ಇವೆಲ್ಲವುಗಳ ಹಿಂದಿನ-ಈಗಿನ ಸರ್ಕಾರದ ಉದ್ದೇಶವೇನೆಂದರೆ ಸಮಾಜದ ಅವಗಣನೆಗೆ ಅಥವಾ ಘೋರ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಪರಿಶಿಷ್ಟ ಜಾತಿಗಳು, ಪಂಗಡಗಳು ಹಾಗೂ ಸ್ತ್ರೀ ಸಮುದಾಯವು ದೇಶದ ಮುಖ್ಯವಾಹಿನಿ ಯೊಂದಿಗೆ ಒಳಸೇರ್ಪಡೆ ಗೊಳ್ಳಬೇಕೆಂಬುದೇ ಆಗಿದೆ. ಏಕೆಂದರೆ ಇಂತಹ ಸಮುದಾಯ ಕೇವಲ ಕೆಲವೇ ಕೆಲವು ಪ್ರದೇಶದಲ್ಲಿ ಕೆಲವೇ ಜನರಿಗೆ ಸೀಮಿತಿವಾಗಿಲ್ಲ. ದೇಶದ ಉದ್ದಗಲಕ್ಕೂ ಹಲವಾರು ಬಗೆಯ ಸಮಸ್ಯೆ ಸವಾಲುಗಳನ್ನು ಎದುರಿಸಬೇಕಾದ ಪರಿಸ್ಥಿತಿಯಿದೆ. ಸರ್ಕಾರವು ಈ ಸಮಸ್ಯೆ ಗುರುತಿಸಿರುವುದಲ್ಲದೆ ಸಮಸ್ಯೆಗಳಿಗೊಳಗಾದ ಜನಸಮುದಾಯದ ರಕ್ಷಣೆಗೆಂದು ಮತ್ತು ಕಲ್ಯಾಣಭಿವೃದ್ಧಿಗೆಂದು ಹಲವಾರು ಬಗೆಯ ಕ್ರಮಗಳನ್ನು ಕೈಗೊಂಡಿದೆ. ಅಲ್ಲದೆ ಎಲ್ಲಾ ಬಗೆಯ ತಾರಮತ್ಯತೆಗಳಿಂದಲೂ ಈ ಜನಸಮುದಾಯವನ್ನು ರಕ್ಷಿಸುವ ಪ್ರಯತ್ನವನ್ನು ಮಾಡುತ್ತಲಿದೆ. ಸರ್ಕಾರವು ತನ್ನ ಈ ಪ್ರಯತ್ನದಲ್ಲಿ ಹಲವಾರು ಬಗೆಯ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಶಾಸನಾತ್ಮಕ, ರಾಜಕೀಯ, ವೈದ್ಯಕೀಯ ಮತ್ತಿತರ ಬಗೆಯ ಕಾರ್ಯ ಚಟುವಟಿಕೆಗಳನ್ನು ಸಕರಾತ್ಮಕ ಕಾರ್ಯಕ್ರಮಗಳು ಅಥವಾ ರಕ್ಷಣಾತ್ಮಕ ಕಾರ್ಯಕ್ರಮಗಳೆಂದು ಹೆಸರಿಸಬಹುದು. ಹೆಸರೇ ಸೂಚಿಸುವ ಹಾಗೆ ರಕ್ಷಣಾತ್ಮಕ ಅಥವಾ ಸಕರಾತ್ಮಕ ಕಾರ್ಯಕ್ರಮ ಎಂದರೆ ಉದ್ಯೋಗ, ಶಿಕ್ಷಣ ಹಾಗೂ ವ್ಯಾಪಾರೋದ್ಯಮಗಳಂತಹ ಕ್ಷೇತ್ರಗಳಲ್ಲಿ ಅತ್ಯಂತ ಕಡಿಮೆ ಪ್ರಾತಿನಿಧಿತ್ವವನ್ನು ಹೊಂದಿರುವ ಜಾತಿ, ಮತಧರ್ಮ, ಪಂಥ ಅಥವಾ ಲಿಂಗಾಧಾರಿತ ಸಮೂಹಗಳಿಗೆ ಅನುಕೂಲವಾಗುವಂತಹ ರೀತಿಯಲ್ಲಿ ಕೈಗೊಂಡಿರುವ ನೀತಿ ಅಥವಾ ಧೋರಣೆಯಾಗಿದೆ.

ಇದಕ್ಕೆ ಆಂಗ್ಲ ಭಾಷೆಯಲ್ಲಿ ಆಫಿರ್‌ಮೇಟಿವ್ ಆ್ಯಕ್ಷನ್ ಎಂದು ಕರೆಯಲಾಗುವದು. ಈ ಪರಿಕಲ್ಪನೆಯ ಉಗಮವು ಅಮೇರಿಕದ ಅಧ್ಯಕ್ಷರಾಗಿದ್ದ ಜಾನ್ ಕೆನಡಿಯವರು ೧೯೬೧ರ ಮಾರ್ಚ್ ೬ ರಂದು ಸಹಿ ಮಾಡಿದ ಕಾರ್ಯ ನಿರ್ವಾಹಕ ಆದೇಶದಲ್ಲಿ ಕಾಣುತ್ತೇವೆ. ಭಾರತದಲ್ಲಿ ಜ್ಯೋತಿಬಾ ಫುಲೆ-ಅಂಬೇಡ್ಕರ್‌ರಿಂದಾಗಿ ಸಂವಿಧಾನಾತ್ಮಕ ವಾಗಿಯೇ ಸಂರಕ್ಷಣಾ ಕಾರ್ಯಕ್ರಮ ಜಾರಿಗೆ ತಂದಿದ್ದನ್ನು ಕಾಣುತ್ತೇವೆ.

ಸಂರಕ್ಷಣಾತ್ಮಕ ಕಾರ್ಯದ ಒಂದು ತಂತ್ರವೆಂದರೆ ತಾರತಮ್ಯತೆ ಮತ್ತು ಮೀಸಲಾತಿ ನೀತಿ. ತಾರತಮ್ಯತೆಯ ಕಾರ್ಯಕ್ರಮಗಳಿಗೆ ಸಂಬಂಧಿಸಿದ ನೀತಿ ಅಥವಾ ಧೋರಣೆಗಳು ಪ್ರದೇಶದಿಂದ ಪ್ರದೇಶಕ್ಕೆ ಬೇರೆಯಾಗುತ್ತವೆ. ಭಾರತದಲ್ಲಿ ಸಕರಾತ್ಮಕ ಧೋರಣೆಯಲ್ಲಿ ಮೀಸಲಾತಿ ಎಂಬ ಪರಿಕಲ್ಪನೆ ಅನ್ವಯಿಸುವುದು. ಅಲಕ್ಷಿತರಿಗೆ, ಯಾವುದೆ ವ್ಯಕ್ತಿಗೆ ಅಥವಾ ಸಮೂಹಕ್ಕೆ ಅಥವಾ ಪಂಗಡಕ್ಕೆ ಯಾವುದೇ ರೂಪದ ಅವಕಾಶಗಳನ್ನು ಮೀಸಲಿರಿಸುವುದಕ್ಕೆ ಅಥವಾ ಕಾಯ್ದಿರಿಸುವುದಕ್ಕೆ ಅನ್ವಯವಾಗುವ ಪರಿಕಲ್ಪನೆಯಾಗಿದೆ. ಈ ನೀತಿಯಂತೆ ಉದ್ಯೋಗಗಳು ಅಥವಾ ಕೆಲವು ಸ್ಥಾನಮಾನ ಕಾಯ್ದಿರಿಸುವುದಕ್ಕೆ ಮೀಸಲಾತಿ ಎಂದೆನ್ನಬಹುದು. ಈ ನೀತಿಯಂತೆ ಉದ್ಯೋಗಗಳು ಅಥವಾ ಶೈಕ್ಷಣಿಕ ಅಥವಾ ಇನ್ನಿತರ ಬಗೆಯ ಅವಕಾಶಗಳಲ್ಲಿ ನಿರ್ದಿಷ್ಟಪಡಿಸಿದ ಶೇಕಡವಾರು ಅವಕಾಶಗಳನ್ನು ಗುರುತಿಸಲಾದ ಕೆಲವು ಜಾತಿ, ಜನಾಂಗ, ಆದಿವಾಸಿ ಪಂಗಡ, ಧಾರ್ಮಿಕ ಸಮೂಹ ಅಥವಾ ಇನ್ನಿತರ ಬಗೆಯ ಸಂರಕ್ಷಿತ ಸಮೂಹದ ಸದಸ್ಯರಿಗಾಗಿ ಮೀಸಲಿರಿಸಲಾಗಿರುತ್ತದೆ.

ಸಕರಾತ್ಮಕ ಕಾರ್ಯಕ್ರಮದ ಪ್ರತಿಪಾದಕರು ತಮ್ಮ ನಿಲುವನ್ನು ಅಥವಾ ಧೋರಣೆಯನ್ನು ಬಲವಾಗಿ ಸಮರ್ಥಿಸಿಕೊಂಡಿದ್ದಾರೆ. ಸಮೂಹವೊಂದಕ್ಕೆ ಈ ಹಿಂದೆ ಆಳುವ ವರ್ಗ ಅಥವಾ ಸಾಂಸ್ಕೃತಿಕ ಸಮೂಹದ ವತಿಯಿಂದ ಮಾಡಲಾದ ಅನ್ಯಾಯಕ್ಕೆ ಅಥವಾ ಶೋಷಣೆಗೆ ಅಥವಾ ಅದಕ್ಕೆ ನೀಡಿದ ಉಪಟಳಕ್ಕೆ ಅಥವಾ ಅದರ ವಿರುದ್ಧ ಮಾಡಲಾದ ತಾರತಮ್ಯಕ್ಕೆ ಪರಿಹಾರಾರ್ಥ ವಾಗಿ ಸಕರಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಅನಿವಾರ್ಯ ಸಮರ್ಥನೀಯವಾಗಿದೆ. ಆದ್ದರಿಂದ ಇಂತಹ ಬಗೆಯ ಶೋಷಣೆಗೆ ಒಳಗಾಗಿರುವ ಸಮೂಹಕ್ಕೆ ಪ್ರಸಕ್ತ ತಾರತಮ್ಯತೆಗಳನ್ನು ಎದುರಿಸಲು ಸಹಾಯಕವಾಗಿರುತ್ತದೆ. ಭಾರತದಲ್ಲಂತೂ ಎಲ್ಲರಿಗೂ ತಿಳಿದಿರುವಂತೆ ಇಂತಹ ಸಕರಾತ್ಮಕ ಕಾರ್ಯಕ್ರಮವನ್ನು ಹಿಂದುಳಿದ ಹಾಗೂ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಕಡಿಮೆ ಪ್ರಾತಿನಿಧ್ಯ ಹೊಂದಿರುವ, ಸಮುದಾಯಗಳ ಕಲ್ಯಾಣಭಿವೃದ್ಧಿಯನ್ನು ಸಾಧಿಸುವ ಉದ್ದೇಶದಿಂದಲೇ ಯೋಜನೆ ರೂಪಿಸಿ, ಸರ್ಕಾರದ ಕಡೆಯಿಂದಲೇ ಘೋಷಿತವಾಗಿ ಚಾಲನೆ ಯಲ್ಲಿರುವ ಸಕರಾತ್ಮಕ ಕಾರ್ಯಕ್ರಮಗಳು ಎದ್ದು ಕಾಣುವಂತಿವೆ. ಇಂತಹ ನಿರ್ದಿಷ್ಟ ಜನವರ್ಗಗಳಿಗೆ ವಿಶೇಷ ಸೌಲಭ್ಯಗಳನ್ನು ನೀಡುವುದು. ಸಾಂವಿಧಾನಿಕ ಮುನ್ನೇರ್ಪಾಡುಗಳ ಮೂಲಕ ಸಾಂಸ್ಕೃತಿಕ ವಾಗಿದೆ. ಎಷ್ಟೇ ಅಭಿವೃದ್ಧಿ ಹೊಂದಿರುವ ಮತ್ತು ಹೊಂದುತ್ತಿರುವ ದೇಶಗಳಲ್ಲಿ ತಾರತಮ್ಯತೆ ಹೊರಗಿಡುವಿಕೆ ಮತ್ತು ಶೋಷಣೆಗೆ ಒಳಗಾದ ಜನಾಂಗೀಯ ಕುಲಸಂಬಂಧಿ ಸಮೂಹ

ಹಾಗೂ ಲಿಂಗ ಸಮುದಾಯಗಳಿಗೆ ಹಾಗೂ ಪ್ರಾದೇಶಿಕವಾಗಿ ಅಲಕ್ಷಿತವಾದ ಜನವರ್ಗಗಳಿಗೆ ಹಲವಾರು ಯೋಜನೆಗಳ ಮೂಲಕ ಸರ್ಕಾರದ ವತಿಯಿಂದ ಸಹಾಯವೊದಗಿಸುವ ಸ್ಪಷ್ಟವಾದ ಭರವಸೆ ನೀಡಿರುವುದನ್ನು ಗಮನಿಸಬಹುದು. ಜಗತ್ತಿನ ಎಷ್ಟೋ ದೇಶಗಳಲ್ಲಿ ಸ್ತ್ರೀಯರು ತಾರತಮ್ಯತೆಯ ಬಲಿಪಶುಗಳಾಗಿದ್ದಾರೆ. ಭಾರತದ ಸಂದರ್ಭದಲ್ಲಿ ಸ್ತ್ರೀಯರು ಮಾತ್ರವಲ್ಲದೆ ಜಾತಿಯ ಸ್ತರದಲ್ಲಿ ತೀರ ಕೆಳಜಾತಿಗಳೆಂದು ಪರಿಗಣಿತವಾದ ಪರಿಶಿಷ್ಟ ಜಾತಿಗಳು ಹಾಗೂ ಅಲಕ್ಷಿತ ಜನವರ್ಗವಾದ ಆದಿವಾಸಿ ಪಂಗಡಗಳು ಹಲವಾರು ಬಗೆಯ ತಾರತಮ್ಯಗಳಿಗೆ ಒಳಗಾಗಿದ್ದಾರೆ. ಸಂರಕ್ಷಣಾತ್ಮಕ ತಾರತಮ್ಯತೆಯ ನಿಲುವಿನ ಹಿನ್ನೆಲೆಯ ಮುಖ್ಯ ಉದ್ದೇಶವೆಂದರೆ ಹಲವಾರು ಬಗೆಯ ಸೌಲಭ್ಯಗಳಿಂದ ವಂಚಿತವಾಗಿ ಹಿಂದುಳಿದಿರುವ ಜನವರ್ಗಗಳನ್ನು, ನಮ್ಮ ರಾಷ್ಟ್ರೀಯ ಹಾಗೂ ಸಮಾಜದ ಜೀವನದ ಮುಖ್ಯವಾಹಿನಿಗೆ ತರುವುದೇ ಆಗಿದೆ. ಸಂರಕ್ಷಣಾತ್ಮಕ ತಾರತಮ್ಯತೆಯ ಪರಿಕಲ್ಪನೆ ನಮ್ಮಲ್ಲಿ ಹುಟ್ಟಿಕೊಂಡಿದ್ದೇ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಹಾಗೂ ಶೋಷಿತ ವರ್ಗಕ್ಕೆ ಸೇರಿದ ಸ್ತ್ರೀಯರ ಹಿತಾಸಕ್ತಿಗಳನ್ನು ಸಂರಕ್ಷಿಸುವುದಕ್ಕಾಗಿ ಎನ್ನಬಹುದು. ಈ ಮೂರು ವರ್ಗಗಳು ಬೇರೆ ಬೇರೆಯ ಕಾರಣಕ್ಕಾಗಿ ಶತಶತಮಾನಗಳಿಂದಲೂ ತಾರತಮ್ಯತೆಯ ಬಲಿಪಶುಗಳಾಗಿದ್ದಾರೆ.

ಪ್ರಸ್ತುತ ಸಂದರ್ಭದಲ್ಲಿನ ಶಿಕ್ಷಣ ಮತ್ತು ಉದ್ಯೋಗಗಳು, ಪರಿಶಿಷ್ಟ ಜಾತಿ, ಬುಡಕಟ್ಟುಗಳು, ಹಿಂದುಳಿದ ವರ್ಗಗಳು, ಮಹಿಳೆಯರು, ಅಲೆಮಾರಿಗಳು, ಸಾಮಾಜಿಕ ಚಲನೆಗೆ ಪ್ರಮುಖ ಸಾಧನಗಳಾಗಿವೆ. ಸಾಮಾಜಿಕ ಚಲನೆಯಿಂದಾಗಿ ಸ್ವಲ್ಪಮಟ್ಟಿನ ಸಾಮಾಜಿಕ ಅಂತಸ್ತಿನ ಅಂತರ, ಸಂವಾದದ ಪ್ರಕ್ರಿಯೆ, ಆಕಾಂಕ್ಷೆ ಮತ್ತು ನಿರೀಕ್ಷೆಗಳ ಮಟ್ಟ ಕೌಟುಂಬಿಕ ವ್ಯವಸ್ಥೆ ಮಹಿಳಾ ಶಿಕ್ಷಣ ಮತ್ತು ಸಬಲೀಕರಣಗಳಲ್ಲಿ ಬದಲಾವಣೆಗಳಾಗಿ ಶಿಕ್ಷಣ ಮತ್ತು ಉದ್ಯೋಗಗಳ ಮೇಲ್ಮುಖ ಸಾಮಾಜಿಕ ಚಲನೆಗೆ ಸಹಕಾರಿಯಾಗಿದೆ. ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳಿಂದ ಆಕರ್ಷಕ ಸಂಬಳ ದೊರೆಯುವ ಉದ್ಯೋಗಗಳು, ಅಧಿಕಾರ ಮತ್ತು ಉನ್ನತ ಸ್ಥಾನಮಾನಗಳನ್ನು ದೊರೆಕಿಸಲು ಸಹಾಯಕವಾಗಿವೆ. ಸಾಮಾಜಿಕ ಚಲನೆ ಮತ್ತು ಬದಲಾವಣೆಗಳಿಂದಾಗಿಯೇ ಇಂದು ಸಮುದಾಯದ ಜನರು ಕೆಳಅಂತಸ್ತಿನಿಂದ ಮಧ್ಯಮ ಅಂತಸ್ತನ್ನಾದರೂ ಪಡೆಯಲು ಸಾಧ್ಯವಿದೆ.

ತಾರತಮ್ಯತೆ ಹೋಗಲಾಡಿಸುವ ದೃಷ್ಟಿಯಿಂದ ಮೀಸಲಾತಿಯಂತಹ ಸೌಲಭ್ಯವನ್ನು ಸಂವಿಧಾನಾತ್ಮಕವಾಗಿ ಜಾರಿಗೊಳಿಸಲಾಗಿದೆಯಾದರೂ, ಈ ಸೌಲಭ್ಯ ಕೆಲಜನರಿಗೆ ಮಾತ್ರ ತಲುಪಿವೆ. ಕಾರಣ ಸಮೂಹ ದೊಡ್ಡದು. ಅಪೇಕ್ಷಿತರ ಸಂಖ್ಯೆಯಿಂದ ಅಪಾರವಾಗಿದೆ. ಮೀಸಲಾತಿ ಪ್ರಮಾಣ ಮಾತ್ರ ಕಡಿಮೆ, ಇರುವ ಪ್ರಮಾಣದಲ್ಲಾದರು. ಪೂರ್ಣ ಪ್ರಮಾಣದಲ್ಲಿ ಉದ್ಯೋಗಗಳು ಭರ್ತಿಯಾಗಿಲ್ಲ. ಏಕೆಂದರೆ ಮೀಸಲಾತಿ ನಿಯಮ ಜಾರಿಗೊಳಿಸುತ್ತಿರುವವರು ಮೇಲ್ಜಾತಿಯವರೆ, ಸರ್ಕಾರದ ಎಲ್ಲಾ ಕ್ಷೇತ್ರಗಳಲ್ಲಿಯೂ, ಎಲ್ಲಾ ವಿಭಾಗಗಳಲ್ಲೂ, ಎಲ್ಲಾ ಹಂತಗಳಲ್ಲೂ ಮೀಸಲಾತಿ ಯಂತಹ ಸೌಲಭ್ಯ ಸರಿಯಾಗಿ ಜಾರಿಗೊಳಿಸಿಲ್ಲದ್ದಾಗಿದೆ. ಸರ್ಕಾರದ ಮಟ್ಟದಲ್ಲಿ ಅಲಕ್ಷಿತ

ಸಮುದಾಯದ ಪ್ರತಿನಿಧಿತ್ವವು ಬಹಳ ಕಡಿಮೆಯಿದೆ ಹಾಗೂ ವರ್ಷದಿಂದ ವರ್ಷಕ್ಕೆ ಹಿಂಬಾಕಿ ಹುದ್ದೆಗಳ ಸಂಖ್ಯೆ ಹೆಚ್ಚಾಗುತ್ತಿದೆ. ಭರ್ತಿ ಮಾಡುವುದಕ್ಕೆ ಮೇಲ್ಜಾತಿಯ ಅಧಿಕಾರಿಗಳು ಆಸಕ್ತಿ ವಹಿಸುತ್ತಿಲ್ಲ. ಹೀಗಾಗಿಯೇ ಉದ್ಯೋಗದ ಅಭಾವ ಒಂದೆಡೆಯಾದರೆ, ಖಾಸಗೀಕರಣ ನೀತಿಯನ್ನು ಜಾರಿಗೊಳಿಸುವುದರ ಮೂಲಕ ಮೀಸಲಾತಿಯಂತಹ ಸೌಲಭ್ಯವನ್ನು ಪರೋಕ್ಷವಾಗಿ ಹಿಂಪಡೆಯುವ ಹುನ್ನಾರವೂ ನಡೆಯುತ್ತಿದೆ. ಈ ಸೌಲಭ್ಯದಡಿಯಲ್ಲಿ ಆಯ್ಕೆಯಾದ ಉದ್ಯೋಗಿಗಳು ಅಸಮರ್ಥರೆಂಬ ಮೇಲುಜಾತಿಯವರ ಕುಟಿಲ ತಂತ್ರಗಳಿಗೂ ಲೆಕ್ಕವಿಲ್ಲ. ಶೋಷಣೆಗೆ ಒಳಗಾದವರಿಲ್ಲ, ಇಂಥವರಿಗೆ ಅಲಕ್ಷಿತ ಸಮುದಾಯದವು ಆಕಸ್ಮಿಕ ಮತ್ತು ಅನಿರೀಕ್ಷಿತವೆಂಬಂತೆಯೂ ಆಯ್ಕೆಯಾದ ಉದ್ಯೋಗಿಗಳು, ಅಧಿಕಾರಿಗಳಾಗಿ, ಸಮರ್ಥವಾಗಿ, ದಕ್ಷರಾಗಿ, ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿರುವ ನಿದರ್ಶನಗಳಿದ್ದರೂ ಬದಲಾವಣೆಯ ವಿರೋಧಿಗಳು ಅಥವಾ ಸಾಮಾಜಿಕ ನ್ಯಾಯದ ಪರಿಕಲ್ಪನೆ ಒಪ್ಪಿಕೊಳ್ಳದ ಇಂತವರ ಕಣ್ಣಿಗೆ ಏಕೆ ಕಾಣಿಸುವುದಿಲ್ಲ.

ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನಗಳಿಂದ ಹಸಿವು, ಬಡತನ, ಅನಕ್ಷರತೆ, ಅಜ್ಞಾನ, ಮೂಢನಂಬಿಕೆ, ಸೌಲಭ್ಯ ವಂಚನೆ, ನಿರುದ್ಯೋಗ ಮುಂತಾದ ಸಮಸ್ಯೆ ಹೋಗಲಾಡಿಸಬಹುದೆಂದು ಹಲವು ವಿದ್ವಾಂಸರು, ದಾರ್ಶನಿಕರು, ಸುಧಾರಕರು, ಯೋಜನಾಕಾರರೂ, ತಿಳಿಸಿದರಾದರೂ ಮೂಲತಃ ಇವುಗಳಿಗೆ ಬೇಕಾದ ಶಿಕ್ಷಣವೆ ಇವರಿಗೆ ದೊರೆತಿಲ್ಲ, ಸೌಲಭ್ಯ ಸಿಕ್ಕಿಲ್ಲ. ಅನೇಕರಿಗೆ ಮೂಲಭೂತ ಹಕ್ಕಿನ ಬಗ್ಗೆ ಅರಿವಿಲ್ಲ. ಹಲವು ಯೋಜನೆಯ ಮೂಲಕ ಅಭಿವೃದ್ಧಿ ಹೊಂದಿದ್ದಾರೆಂದು ಸರ್ಕಾರವು ಅಂಕೆ-ಸಂಖ್ಯೆ ಕೊಡುತ್ತಿದೆಯಾದರೂ ಫಲಾನುಭವಿಗಳಿಗೆ ತಲುಪಿಲ್ಲ, ತಲುಪಿದರೂ ಅಗತ್ಯವಿದ್ದಷ್ಟು ತಲುಪಿಸಿಲ್ಲ. 'ಅಪರೂಪವೆಂಬಂತೆ' ಕೆಲವರಿಂದಲಾದರೂ ಜಾಗೃತಿ ಮಾಡಿಸುವ ಕೆಲಸ ನಡೆಯುತ್ತಿದೆಯಾದರೂ, ತಮ್ಮ ವಿರುದ್ಧ ನಡೆಯುವ ಶೋಷಣೆಯನ್ನು ಪ್ರತಿಭಟಿಸಿ ನ್ಯಾಯಪರವಾಗಿ ಹೋರಾಟ ನಡೆಸಲು, ಒಗ್ಗಟ್ಟಿನಿಂದ, ಸಂಘಟಿತರಾಗಿ ಹೋರಾಟ ಮಾಡಲಾಗುತ್ತಿಲ್ಲ. ಇದೇ ಸಮುದಾಯದ ಮತ್ತೊಂದು ತಮ್ಮದೇ ಸಮಸ್ಯೆಯೆಂದರೆ ಜಾತಿಯಲ್ಲಿಯೆ ಅನೇಕ ಉಪಜಾತಿಗಳು ಪ್ರತ್ಯೇಕ ಸಂಘಟನೆ ರಚಿಸಿಕೊಂಡು ಪ್ರತ್ಯೇಕವಾಗಿವೆ. ಪ್ರತ್ಯೇಕತೆಗೆ ರಾಜಕಾರಣವು ಬಹುದೊಡ್ಡ ಕಾರಣವಾಗಿ, ಇಂಥವರ ಮಧ್ಯೆ ಸಂಘರ್ಷಕ್ಕೆ ದಾರಿ ಮಾಡಿಕೊಡುತ್ತಿದ್ದಾರೆ. ಹೀಗಾಗಿ ಉತ್ತಮ ಸಾಮಾಜಿಕ, ಆರ್ಥಿಕ ಅವಕಾಶಗಳು ಕಂಡುಕೊಳ್ಳುವುದು ಪ್ರಸ್ತುತದ ಅನಿವಾರ್ಯತೆಯಾಗಿದೆ ಎಂಬುದು ಲಕ್ಷ್ಮಣ್ ತೆಲಗಾವಿ ಅವರ ಅಲಕ್ಷಿತಪರ ಚಿಂತನೆಯಾಗಿದೆ.

೭.೬. ಪ್ರಾದೇಶಿಕ ಚರಿತ್ರೆಯ ಚಿಂತನೆಗಳು

ಪ್ರಾದೇಶಿಕ ಅಥವಾ ಪ್ರಾಂತೀಯ ಎಂಬುದು ಅಲ್ಲಿನ ಜನರು ತಮ್ಮ ಪ್ರದೇಶದೊಂದಿಗೆ ತಮ್ಮನ್ನು ತಾವು ಗಾಢವಾಗಿ ಗುರುತಿಸಿಕೊಂಡ ಪರಿಕಲ್ಪನೆಯಾಗಿದೆ. ಇದೊಂದು ಮಾನಸಿಕ ಮತ್ತು ನಿರ್ದಿಷ್ಟ ಪ್ರದೇಶದೊಂದಿಗೆ ಹೊಂದಿರಬಹುದಾದ ಸಾಮುದಾಯಿಕ ಪ್ರಜ್ಞೆಯು ಆಗಿದ್ದು, ಕೇವಲ ಅದು ಪ್ರದೇಶ ಮಾತ್ರವಾಗಿರದೆ ಅಲ್ಲಿಯೇ ಗತಕಾಲದಿಂದಲೆ ನೆಲೆಸಿರುವ ನೆರೆಹೊರೆ ಅಥವಾ ಪ್ರಾಂತ್ಯದಲ್ಲಿರುವ ಜನರೊಂದಿಗೂ ಅತಿಯಾದ ನಿಷ್ಠೆ, ವಿಶ್ವಾಸ ಬೆಳೆಸಿಕೊಂಡಿರುತ್ತಾರೆ.

ಅಂದರೆ ತಾವಿರುವ ಪ್ರದೇಶದ ಬಗ್ಗೆ ಅತಿಯಾದ ನಿಷ್ಠೆ ಹೊಂದಿ ಬೇರೊಂದು ಪ್ರದೇಶದ ಬಗ್ಗೆ ನಿಷ್ಠೆ ಇರಲಾರದಂತಹ ಸ್ವರೂಪದವರಾಗಿರುತ್ತಾರೆ. ಇಂತಹ ಸ್ವರೂಪದವರು ತಮ್ಮ ಪ್ರದೇಶ ಮತ್ತು ತಮ್ಮ ಪ್ರದೇಶದಲ್ಲಿ ವಾಸಿಸುವ ಸಮುದಾಯ ಬಿಟ್ಟು ಇತರ ಪ್ರದೇಶ ಮತ್ತು ಸಮುದಾಯದ ಅಭಿವೃದ್ಧಿ ಅನಾಹತುಗಳ ಬಗ್ಗೆ ತಲೆಕೆಡಿಸಿಕೊಳ್ಳಲಾರರು. ಈ ಸಂಬಂಧವಾಗಿ ತಮ್ಮವರ ಸುಸ್ಥಿತಿಗಾಗಿ ಇತರೆ ಪ್ರದೇಶಗಳ ಜನರ ಹಿತಾಸಕ್ತಿಗಳನ್ನು ಬಲಿಕೊಟ್ಟಾದರೂ ತಮ್ಮ ಪ್ರದೇಶದ ಉದ್ದೇಶ ಸಾಧಿಸಿಕೊಳ್ಳುತ್ತಾರೆ. ಇಂಥಲ್ಲಿ ವಾಸಿಸುವ ಜನಸಮುದಾಯ ಬಹಳಷ್ಟು ಕಾಲದಿಂದಲೂ ಒಬ್ಬರಿಗೊಬ್ಬರು ನಂಟು ಹೊಂದಿರುವುದರಿಂದ ಅಲ್ಲಿನ ಪ್ರತಿ ಸ್ಥಳ, ಪ್ರತಿ ಕುಟುಂಬದ ಬಗ್ಗೆಯೂ ಸಂಪೂರ್ಣ ಪರಿಚಯವಿರುವುದರಿಂದಲೂ, ಅಲ್ಲಿನ ಅಥವಾ ಆಯಾ ಪ್ರದೇಶದ ಚರಿತ್ರೆ ಸಾಮಾನ್ಯವಾಗಿ ಎಲ್ಲರಿಗೂ ಮೌಖಿಕವಾಗಿಯೆ ಗೊತ್ತಿರುವುದು ಮತ್ತು ಅಲ್ಲಿನ ಕೆಲವು ಚರಿತ್ರೆಕಾರರು ಕೂಡ ಇರುವುದರಿಂದ ಅಲ್ಲಿನ ಚರಿತ್ರೆ ಸಂಪೂರ್ಣ ವಿಶ್ವಾಸದಿಂದ ಕೂಡಿರುವ ಸಾಧ್ಯತೆಗಳಿದ್ದರೂ, ಆ ಪ್ರದೇಶದ ಅಭಿಮಾನ ನಿಷ್ಠೆ ಕೆಲವು ಸಲ ತಪ್ಪು ಮಾಹಿತಿಗೂ ಅವಕಾಶವಿರಬಹುದಾದರೂ ದೂರದೃಷ್ಟಿಯಿದ್ದರೆ ಅಂತಹ ಲೋಪ ಸರಿಪಡಿಸಬಹುದಾಗಿದೆ.

ಪ್ರಾದೇಶಿಕತೆ ಎಂಬುದು ಜನಾಂಗೀಯ ಜಾತೀಯ ಜನಾಂಗಿಯ ಭಾಷಿಕ ಸಮುದಾಯಗಳನ್ನು ಸೂಚಿಸುತ್ತದೆಯೆ ವಿನಹ ರಾಷ್ಟ್ರೀಯ ಆಸಕ್ತಿ ಮೌಲ್ಯಗಳನ್ನಲ್ಲ. ಏಕೆಂದರೆ ಪ್ರಾದೇಶಿಕತೆಯು ಬುಡಕಟ್ಟು, ಕುಲ, ಧಾರ್ಮಿಕ ರಾಜಭಕ್ತಿ ಮೂಲಕ ಸಂಕುಚಿತಗೊಳಿಸುತ್ತದೆ. ಹಾಗೆಯೆ ಪ್ರಾದೇಶಿಕತೆ ಎಂಬುದು ಪ್ರತ್ಯೇಕವಾದಿಗಳಿಗೆ ಅವಕಾಶ ಮಾಡಿಕೊಟ್ಟಿದ್ದನ್ನು ಅಸ್ಸಾಮ್‌ನಂತಹ ರಾಜ್ಯಗಳ ಮೂಲಕ ಗಂಡಾಂತರ ಗುರುತಿಸಬಹುದಾಗಿದೆ. ಆದರೂ ಬುಡಕಟ್ಟುಗಳ, ಆದಿವಾಸಿಗಳ, ಅಲೆಮಾರಿಗಳ ಅಥವಾ ಕೆಲವು ವಿಶಿಷ್ಟ ಜನವರ್ಗಗಳ ಚಹರೆ ಮತ್ತು ಸಂಸ್ಕೃತಿಗಳ ಸಂಕ್ಷಣೆಯ ದೃಷ್ಟಿಯಿಂದ ಪ್ರಾದೇಶಿಕತೆ ಅನಿವಾರ್ಯವೆನಿಸಬಹುದಾಗಿದೆ.

ಈ ಮೇಲಿನ ಎಲ್ಲಾ ಸಂಗತಿ ತಿಳಿದಿದ್ದರೂ ಅದೇ ಶಾಶ್ವತವಾಗಿರಲೂ ಅಸಾಧ್ಯ. ಏಕೆಂದರೆ ಜಾತ್ಯಾತೀತತೆ, ರಾಷ್ಟ್ರಭಕ್ತಿಯನ್ನು ರಾಷ್ಟ್ರೀಯ ಪ್ರಜ್ಞೆಯ ಮೂಲಕ ಗುರುತಿಸಿ, ಜಾತ್ಯಾತೀತತೆಯ ಸತ್ವವನ್ನು ವಿವಿಧತೆಯಲ್ಲಿ ಏಕತೆ ಗುರುತಿಸುತ್ತೇವೆ. ಕೆಲವು ಸಲ ಪ್ರಾದೇಶಿಕ ಮತ್ತು ರಾಷ್ಟ್ರತ್ವ ಎಂಬುದು ವಿರೋಧ ಸಂಗತಿಗಳಾಗಿದ್ದರೂ ಅನೇಕ ಬಾರಿ ಪೂರಕವಾಗಿಯೂ ಇರುವುದು, ಪ್ರಾದೇಶಿಕ ಮನೋಭಾವನೆ ಮುಂದೊಂದು ದಿವಸ ರಾಷ್ಟ್ರದ ಸಮಗ್ರತೆಗೆ ಕೊಡುಗೆ ನೀಡಬಹುದಾಗಿದೆ. ಆದರೂ ಇರ್ಫಾನ್ ಹಬೀಬ್‌ರವರು ಪ್ರಾದೇಶಿಕ ಚರಿತ್ರೆ ವಿಶಿಷ್ಟ ಮತ್ತು ತೊಡಕಿನದೆಂದು ಹೇಳುತ್ತಾರೆ ತೊಡಕಿನದಾದರು ಅನೇಕ ಪ್ರಯೋಜನಗಳನ್ನು ತೆಲಗಾವಿಯವರು ಗುರುತಿಸುತ್ತಾರೆ.

೬.೭. ಸ್ಥಳೀಯ ಚರಿತ್ರೆಯ ಚಿಂತನೆಗಳು

ಸ್ಥಳೀಯ ಚರಿತ್ರೆಗೆ ಸಂಬಂಧಿಸಿದಂತೆ ತೆಲಗಾವಿಯವರು ತಮ್ಮದೇ ಹೊಸ ದೃಷ್ಟಿಕೋನದ ಮೂಲಕ ಸ್ಥಳೀಯ ಚರಿತ್ರೆಯ ಗುಣಧರ್ಮ ಮತ್ತು ಅನಿವಾರ್ಯತೆ, ಹೊಸತನಗಳನ್ನು ಈ ಮುಂದಿನಂತೆ ಕಂಡುಕೊಂಡಿದ್ದಾರೆ.

ಮಾನವನು ಸಮಾಜಶಾಸ್ತ್ರೀಯ ಅಧ್ಯಯನಗಳ ಕೇಂದ್ರಬಿಂದು ಆಗಿರುವುದರಿಂದ ಆತನ ಸರ್ವತೋಮುಖ ವಿಕಾಸದ ಆಯಾಮಗಳನ್ನು ಅರಿಯುವುದು ಕೂಡ ಮಾನವನೇ. ಮಾನವನ ವಿಕಾಸದ ಅನಂತ ಪಯಣದಲ್ಲಿ, ಏಳು-ಬೀಳು, ಗೋಜು-ಗೊಂದಲಗಳು, ಸಂಕಷ್ಟವೂ, ಆಶ್ಚರ್ಯವೂ, ಕೌತುಕವೂ, ರೋಮಾಂಚನವು ಕಂಡು ಬರುವುದು. ಇವೆಲ್ಲವು ಆತನ ಅಧ್ಯಯನದ ಫಲಿತಗಳಾಗಿವೆ. ಆದರೂ ಜ್ಞಾನದಾಹದ ಬೇಗೆಯಲ್ಲಿ, ಬೇಯುತ್ತಲೇ, ಚಿಂತನಾಶೀಲನಾಗಿಯೂ, ಸೃಷ್ಟಿಶೀಲ ನಾಗಿಯೂ, ಸಂಸ್ಥಾಪನಶೀಲನಾಗಿಯೂ, ದೈವಶಾಸ್ತ್ರೀಯ, ತತ್ವಶಾಸ್ತ್ರೀಯ, ವೈಧಾನಿಕ ಶಾಸ್ತ್ರೀಯ ವಾಗಿಯೂ ಚಿಂತಿಸುತ್ತಲೇ, ಚಿಂತನಾ ಸ್ವರೂಪಯಾಗಿ, ತಾತ್ವಿಕತೆ ಒದಗಿಸಿಯೂ, ಸಿದ್ಧಾಂತದ ಚೌಕಟ್ಟು ನಿರ್ಮಿಸಿ, ಆ ಚೌಕಟ್ಟಿನಲ್ಲಿಯೆ ಮಾನವನನ್ನು ಅಧ್ಯಯನಿಸುವ ಕ್ರಮವೂ ವಿಕಾಸದ ಆರಂಭದಿಂದಲೂ ಇಂದಿನ ವಿಜ್ಞಾನ ತಂತ್ರಜ್ಞಾನದ ಯುಗದ ತನಕ ಹರಿದು ಬಂದಿದ್ದನ್ನು ಕಾಣುತ್ತೇವೆ. ಆಗಸ್ಟ್‌ಕಾಮ್ಟೆಯ ನುಡಿಯಂತೆ ಮಾನವನ ವಿಕಾಸವನ್ನು ಚರಿತ್ರೆಯ ಮೂಲಕವೆ ಕಂಡುಕೊಳ್ಳಲು ಸಾಧ್ಯವಾಗಿದೆ. ಆದರೆ ಇಂತಲ್ಲಿ ಚರಿತ್ರೆಕಾರನು ಚರಿತ್ರೆ ರಚಿಸುವ ಭರಾಟೆಯಲ್ಲಿ ತನ್ನ ಮನಸ್ಸಿಗೆ ಗೋಚರವಾದದ್ದು, ಯಾರೋ ಹೇಳಿದ್ದು, ಉತ್ಪ್ರೇಕ್ಷಿಸಿದ್ದು, ಉಲ್ಲೇಖಿಸಿದ್ದು, ಊಹೆಗೊಂಡಿದ್ದನ್ನು ಹಾಗೂ ತನಗೆ ತೋಚಿದಂತೆ ದಾಖಲಿಸಿದರು. ಹೀಗೆ ದಾಖಲಿಸಿದ ದಾಖಲೆಯೆ ಅಂತಿಮ ಎಂದು ನಂಬಿಸಿದ್ದನ್ನು ಕಾಣುತ್ತೇವೆ. ನಂಬಿದವರು ಇತರರನ್ನು ನಂಬಿಸಲು ಈ ಹಿಂದಿನ ಅಧ್ಯಯನಕಾರರ ಅಧ್ಯಯನಗಳೆ ಅಂತಿಮ ಎಂದು ಅಧ್ಯಯನದ ಅಧ್ಯಯನಕಾರ ಅಂದುಕೊಳ್ಳಬಹುದು. ಆದರೆ ಅಧ್ಯಯನದ ವ್ಯಾಪ್ತಿ ಎಂದಿಗೂ ಅಂತಿಮವಲ್ಲ ಆರಂಭ. ಹಾಗೆಯೇ ಆ ಅಧ್ಯಯನಕಾರನ ಅಧ್ಯಯನವೆ ಅನಿವಾರ್ಯವೂ ಅಲ್ಲಾ, ಪರಿಣಾಮ. ಅಂತಹ ಅಧ್ಯಯನಗಳಿಗೆ ಪ್ರತಿ ಅಧ್ಯಯನವನ್ನು ನಡೆದು, ನಡೆದ ಅಧ್ಯಯನಗಳಲ್ಲಿನ ಅನಾಹುತಗಳನ್ನು ಅಧ್ಯಯನದ ಮೂಲಕವೇ ಅನಾವರಣಗೊಳಿಸಿ, ಹೊಸ ಅಧ್ಯಯನವನ್ನು ಸಮಾಜದೆದರೂ, ಸಮಾಜನಿಷ್ಠ, ವಸ್ತುನಿಷ್ಠ ಅಧ್ಯಯನ, ಅಧ್ಯಯನ ಸ್ವರೂಪ ಅರ್ಥೈಸಿ, ಅರ್ಪಿಸುವುದು ಕೂಡ ಅಧ್ಯಯನಕಾರನ ಅಧ್ಯಯನದ ಆದ್ಯ ಕರ್ತವ್ಯವಾಗಿದೆ.

ಆದರೆ ಕೆಲವು ಅಧ್ಯಯನಕಾರರು ಈಗಾಗಲೆ ಅಧ್ಯಯನಗಳಲ್ಲಿ, ಸಂಸ್ಥಾಪನೆಯಾಗಿರುವ ಅಧ್ಯಯನದ ಮಾದರಿಗಳ ಮಾದರಿಯಲ್ಲಿಯೆ ಅಧ್ಯಯನೆನಿಸಿದರೆ ಮಾತ್ರ ಅಂತಹ ಅಧ್ಯಯನ ಇನ್ನುಳಿದ ಅಧ್ಯಯನಕಾರರರಿಗೆ ಅರ್ಥವಾಗುವುದು. ಅಂತವರನ್ನು ಬಹಳಷ್ಟು ಕಾಲವೂ ಅಧ್ಯಯನದ ಪಿತಾಮಹನಂತೆ ಅಧ್ಯಯನಗಳಲ್ಲಿ ಅಧ್ಯಯನಿಸಿ, ಆರಾಧಿಸಿ ಅರ್ಥೈಸಿದ್ದನ್ನು, ಅಧ್ಯಯನದ ವಿವಿಧ ಸಂದರ್ಭಗಳಲ್ಲಿ ಅಧ್ಯಯನಿಸುತ್ತೇವೆ. ಹಲವು ಅಪರೂಪದ ಅಧ್ಯಯನಕಾರರು ಆ ಹಿಂದಿನ ಅಧ್ಯಯನದಲ್ಲಿರುವ ಅಧ್ಯಯನದ ಸ್ವರೂಪ ಅಧ್ಯಯನಿಸಿ ಅದರಲ್ಲಿರುವ ಲೋಪವನ್ನು ಸರಿಪಡಿಸಿ ಬೇರೊಂದು ಅಧ್ಯಯನದ ಮಾರ್ಗವನ್ನು ಕಂಡುಕೊಂಡಿದ್ದನ್ನು ಕಾಣುತ್ತವೆ. ಆದರೆ ಕೆಲವು ಅಧ್ಯಯನದ ಪರಿಕಲ್ಪನೆಗಳು, ಅಧ್ಯಯನಕಾರನ ವ್ಯಾಪ್ತಿ ಮೀರುವುದರಿಂದ, ಆಕರಗಳ ಅಲಭ್ಯತೆಯಿಂದ ಪರಿಪೂರ್ಣ ಹೊಂದಲಾರದು. ಹಾಗಂತ ಅಧ್ಯಯನಕ್ಕೆ ಅಂತ್ಯ ಹೇಳಲೂ

ಬಾರದು. ಆದ್ದರಿಂದ ಹೊಸ ಅಧ್ಯಯನದ ಸಂಸ್ಕೃತಿಗಳನ್ನು ಸವಾಲುಗಳ ಮೂಲಕವೆ ಸಂಶೋಧಿಸಿ ಅಧ್ಯಯನಿಸಿದ್ದನ್ನು ಚರಿತ್ರೆಯ ಪುಟಗಳಲ್ಲಿ ಕಾಣುತ್ತೇವೆ. ಇಂತಹ ಅಧ್ಯಯನಕಾರರ ಪ್ರಾಯೋಗಿಕತೆ ಮುಂಚೂಣಿಗೆ ಬರಲು ಅಸಾಧ್ಯವಾಗಬಹುದು. ಏಕೆಂದರೆ ಆಯಾ ದೇಶ, ಕಾಲಘಟ್ಟ, ಅಧ್ಯಯನದ ವಸ್ತು, ಇತ್ಯಾದಿಗಳಿಂದಾಗಿ ಪ್ರಾಮುಖ್ಯತೆ ಪಡೆದಿರಬಹುದು. ಹಾಗಂತ ಅಧ್ಯಯನದ ಸಹವಾಸವೇ ಬೇಡವೆಂದರೆ, ಜ್ಞಾನವಲಯ ಸೀಮಿತಗೊಳ್ಳಬಹುದು. ಆದ್ದರಿಂದ ಅಧ್ಯಯನದ ಅದಮ್ಯತೆ, ಅಗೆದು-ತೆಗೆದು ಪ್ರತ್ಯೇಕ ಅಧ್ಯಯನದ ಪ್ರವೃತ್ತಿ ರೂಢಿಸಿಕೊಂಡ ಅಧ್ಯಯನದ ಅನ್ವೇಷಕರೂ ದೊರೆಯುತ್ತಾರೆ. ಅಂತವರಲ್ಲಿ ಆ ಸಿದ್ಧ ಮಾದರಿಯ ಮೂಲಕ ಅಧ್ಯಯನ ವಿಧಾನಗಳನ್ನು ದೂರ ಸರಿಸಿ ಹೊಸ ತರದ ಅಧ್ಯಯನ ಆರಂಭಿಸಿದರೆ ಅಂತಹ ಅಧ್ಯಯನಕ್ಕೆ ತಾತ್ವಿಕತೆಯ ವಸ್ತುನಿಷ್ಠತೆಯ ಲೋಪವಿದೆ ಎಂದು ದೂರೀಕರಿಸಿ ದೂರವಿಟ್ಟದ್ದಿದೆ.

ಈ ಮೊದಲು ಯುರೋಪ್, ಗ್ರೀಸ್, ರೋಮ್, ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್, ಇಟಲಿ ಮುಂತಾದ ಕೆಲವು ರಾಷ್ಟ್ರಗಳಲ್ಲಿನ ಚರಿತ್ರೆಯು ದೇವಕೇಂದ್ರಿತ ಚರಿತ್ರೆಯಾಗಿತ್ತು. ಕಾರಣ ದೇವರ ಹೆಸರಿನಲ್ಲಿ ರಾಜ ಆಳುತ್ತಾನೆ. ಆ ರಾಜನ ಚರಿತ್ರೆಯು ದೇವಚರಿತ್ರೆ ಎಂಬುದಾಗಿಯೂ ಅದರಂತೆ ಇಡೀ ರಾಷ್ಟ್ರದ ಪ್ರಜೆಗಳು ದೈವ ಮನಸ್ಸಿನಿಂದ ರಾಜರ ಚರಿತ್ರೆ ದಾಖಲುಕೊಂಡಿದ್ದನ್ನೆಲ್ಲ ನಂಬುವ ಸ್ಥಿತಿಗೆ ಬಂದು ನಂಬಿದ್ದರು. ನಂತರದ ಕೆಲವು ಶತಮಾನಗಳಲ್ಲಿ ಗ್ರೀಸ್ ದೇಶದ ಚರಿತ್ರೆಕಾರರಾದ ಹೆರೋಡೋಟಸ್ ಮತ್ತು ಥೂಸಿಡೈಡಸರು ವೈಜ್ಞಾನಿಕವಾಗಿ ಸಮಾಜನ್ನು ನೋಡುವ ಧೋರಣೆ ಹೊಂದಿದ್ದರಿಂದ ಚರಿತ್ರೆಯು ದೇವಕೇಂದ್ರಿತದಿಂದ ಬದಲಾಗಿ ಮಾನವ ಕೇಂದ್ರಿತ ಎಂಬುದಾಗಿ ನಿರೂಪಿಸಿದರು. ಹಾಗೆಯೇ ಮಧ್ಯಕಾಲೀನ ಸಂದರ್ಭದಲ್ಲಿಯೂ ಮತ್ತಷ್ಟು ಸೂಕ್ಷ್ಮತೆ ಕಂಡುಕೊಂಡ ಚರಿತ್ರೆಕಾರರಾದ ಮೆಕೈವಲ್ಲಿ, ಜಿಯಾನ್‌ಬೋದಿನ್, ಬೇಕನ್ ಮುಂತಾದ ಚರಿತ್ರೆಕಾರರು ಮಾನವ ಕೇಂದ್ರಿತವಾದಂತಹ ಕಥನಗಳನ್ನೆ ಚರಿತ್ರೆ ಎಂದು ನಿರೂಪಿಸಿದರು ಹಾಗೂ ಹೆಗಲ್ ರಾಜಕೀಯ ಕೇಂದ್ರಿತ ಚರಿತ್ರೆಗೆ ಒತ್ತುಕೊಟ್ಟರೆ, ಮಾರ್ಕ್ಸ್‌ನು ಭೌತಿಕ ವಸ್ತುಗಳೇ ಮುಖ್ಯವೆಂದು, ಆರ್ಥಿಕತೆಯ ಮೂಲಕವೆ ಚರಿತ್ರೆಯನ್ನು ಕಟ್ಟಿ, ಸಂಘರ್ಷಾತ್ಮಕ ಚರಿತ್ರೆ ಸೃಷ್ಟಿಸಿದರು. ರೂಸೊ, ಕಾಂಟ್, ಸ್ಕಿಲ್ಲರ್ ಮುಂತಾದ ಚರಿತ್ರೆಕಾರರು ಮೌಲ್ಯಗಳ ಆಧಾರದ ಮೇಲೆ ಚರಿತ್ರೆ ರಚಿಸಿ ಪುರಾತನ ಸಮಾಜದ ಚರಿತ್ರೆಯೆ ಅಧಿಕೃತವೆಂದು ಸಾರಿದರೆ, ನೈತಿಕತೆ ಮತ್ತು ಧಾರ್ಮಿಕ ಅಂಶಗಳ ಹಿನ್ನೆಲೆಯಲ್ಲಿ ವಿಸ್ತೃತ ಅಧ್ಯಯನವನ್ನು ಟಾಯ್ನಾಬಿ ಸೃಜಿಸಿದರು. ಮತ್ತೊಬ್ಬ ಖ್ಯಾತ ಚರಿತ್ರೆಕಾರ ಸ್ಪೆಂಗ್ಲರ್‌ರವರು ಪಾಶ್ಚಿಮಾತ್ಯರು ತಿಳುವಳಿಕೆಯ ಹಿನ್ನೆಲೆಯಲ್ಲಿ ಬೃಹತ್‌ಗೀತೆ ರಚಿಸಿದರು. ಹೀಗೆ ಹಲವು ಚರಿತ್ರೆಕಾರರ ಹೊಸ ಅಧ್ಯಯನಗಳ ಮೂಲಕವಾಗಿಯೆ ರಾಷ್ಟ್ರೀಯವಾದ, ಮಾರ್ಕ್ಸ್‌ವಾದ, ವಸಾಹತು ಮತ್ತು ಸಾಮ್ರಾಜ್ಯಶಾಹಿ ದೃಷ್ಟಿಕೋನ ಸಬಾಲ್ಟನ್ ಅಧ್ಯಯನಗಳು ಮೂಡಿಬಂದವು. ಇಂತಹ ಅಧ್ಯಯನಗಳು ಆಯಾ ಕಾಲಘಟ್ಟ, ಸಂದರ್ಭ, ಸನ್ನಿವೇಶಕ್ಕೆ ಅನುಗುಣವಾಗಿ ರಚಿತವಾಗಿಯೆ, ರಚಿತಗೊಂಡ ಮೇಲೆ ಪ್ರತಿರೋಧ ವ್ಯಕ್ತಪಡಿಸಿದರೂ ಅಮೂಲಾಗ್ರವಾಗಿ ರಚಿತಗೊಳ್ಳದೇ ನೇರ ಮತ್ತು ಸುಲಭವಾಗಿ ದೊರೆತ ಆಕರಗಳ ಮೂಲಕವೇ ರಚಿತವಾದವು. ಇಂತಲ್ಲಿ ಕೆಲವು ಜನಸಮುದಾಯಗಳು

ಇವರ ಅಧ್ಯಯನ ವ್ಯಾಪ್ತಿಗೆ ಬರಲಿಲ್ಲ ಮತ್ತು ಈ ಅಧ್ಯಯನಕಾರರ ಮಾದರಿಗಳೆ ಜಗತ್ತಿನಾದ್ಯಂತ ಪ್ರಜ್ವಲಿಸಿ ಚರಿತ್ರೆಯ ರಚನೆಗೆ ದಿಕ್ಸೂಚಿಯಾದವು. ಇದು ಕೇವಲ ಕೆಲವೆ ರಾಷ್ಟ್ರಕ್ಕೆ ಸೀಮಿತವಾದರೂ ಇಂಡಿಯಾದಂತಹ ಹಲವು ಜನವರ್ಗಗಳಿದ್ದ ದೇಶದಲ್ಲಿಯೆ ಮುಂದುವರಿದವು. ಇದಕ್ಕೆ ಕಾರಣ ಇತಿಹಾಸ ರಚಿಸಿದ ಆರಂಭದ ಇತಿಹಾಸಕಾರರು ಸಹಜವಾಗಿ ವೈದಿಕ ಮೂಲದವರೆ ಆಗಿದ್ದರಿಂದ ಚರಿತ್ರೆಕಟ್ಟುವ ಪರಿಕಲ್ಪನೆಗಳು ವೈದಿಕಯುಗದವೆ ಮತ್ತು ಅದೇ ಮನಸ್ಥಿತಿಯವೆ ಆದ್ದರಿಂದ ಅವುಗಳ ಆಚೆಗಿನ ಕಥನಗಳು ಚರಿತ್ರೆಯ ಸಂಗತಿಗಳಾಗಿ ಕಾಣಲಿಲ್ಲ. ತಮ್ಮ ನೆಲೆಗೆ ಎಟಕುವ ಸಾಕ್ಷ್ಯವೆ ಪರಮಸಾಕ್ಷ್ಯವೆನಿಸಿದವು ಈ ಸಾಕ್ಷಿಗಳು. ಧಾರ್ಮಿಕ ಅಂಗೀಕಾರದಿಂದಾಗಿದ್ದರಿಂದ ಮತ್ತು ಅವತ್ತಿನ ಪಶ್ಚಿಮದವರ ಮುಂದೆ ತಮಗೂ ಪರಂಪರೆಯಿದೆ ಎಂಬುದನ್ನು ಸಾಬೀತುಪಡಿಸುವ ಜರೂರತೆಯಿರುವುದರಿಂದ ಭವ್ಯ, ದಿವ್ಯ ಹಾಗೂ ಸಮೃದ್ಧ ಭಾರತದ ನಿರ್ಮಾಣದ ನಿರೂಪಣೆ ಬೇಕಾಗಿದ್ದರಿಂದ, ರಾಷ್ಟ್ರೀಯವಾದದ ಪ್ರಜ್ಞೆ ಮೂಡಿಬಂದು ಮೇಲ್ಪಂಕ್ತಿ, ಉತ್ಕೃಷ್ಟ ಪರಿಕಲ್ಪನೆಗೆ ಚರಿತ್ರೆಯನ್ನು ಸೀಮಿತಗೊಳಿಸಿದರು. ಆದರೆ ಚರಿತ್ರೆ ಕಟ್ಟುವ ಅರಿಯುವ ವಿಧಾನ ಬದಲಾಗಿದ್ದರಿಂದ ಗತಕಾಲದ ನಿರ್ಣಯ ದೂರವಿರುವ ಅವಕಾಶವಿರುವುದರಿಂದ ಚರಿತ್ರೆಯ ಹೊಡೆತಕ್ಕೆ ಈಡಾದವರ ಸ್ಥಳೀಯ ಚರಿತ್ರೆ ಕಟ್ಟುವುದಕ್ಕೆ ಅವಕಾಶವಿದೆ.[೧೫]

ಸ್ಥಳೀಯ ಚರಿತ್ರೆಯು ೧೯೩೦ರ ದಶಕಗಳಲ್ಲಿ ಯುರೋಪ್ ಮತ್ತು ಅಮೇರಿಕ ಖಂಡಗಳಲ್ಲಿ ಆರಂಭವಾಗಿ, ನಿಧಾನವಾಗಿ ಬೆಳೆಯಲಾರಂಭಿಸಿತು. ಈ ಮೊದಲೇ ಸಂಸ್ಥಾಪಿಸಿಲಾಗಿದ್ದ ವಿಧಾನಗಳ ಎದುರು ಏಟಿಗೆ ಎದುರೇಟು ಕೊಡಲಾಗದೆ ಸೊರಗಿದವು ಮತ್ತು ಅಂತಹ ಪ್ರಯತ್ನ ನಡೆದವು. ಬೋಲಾಂಡಿಸ್ಟ್ ಮತ್ತು ಮೌರಿಸ್ ಬಣಕ್ಕೆ ಸೇರಿದ ಕ್ರೈಸ್ತ ಪಾದ್ರಿಗಳು ಮಠಗಳಲ್ಲಿದ್ದ ಪತ್ರಗಳನ್ನು ಉಪಯೋಗಿಸಿ ಊಹೆ, ಉತ್ಪ್ರೇಕ್ಷೆಗಳನ್ನು ನಯವಾಗಿ ಮೂಲೆಗೆ ಸರಿಸಿ ರೋಮ್ ಸಾಮ್ರಾಜ್ಯ ಮತ್ತು ಕ್ರೈಸ್ತ ಚರಿತ್ರೆ ರಚಿಸಿದರು. ಇಲ್ಲಿ ಈ ಮೊದಲೆ ರೂಢಿಯಾಗಿದ್ದ ಅಲೌಕಿಕತೆಯ ಬದಲಾಗಿ, ಮಾನವೀಯ ನೆಲೆಯಲ್ಲಿ ಚರಿತ್ರೆ ಬರೆದರು. ಇದನ್ನೆ ಕುರಿತು ಖ್ಯಾತ ಚರಿತ್ರೆಕಾರ "ಇ.ಎಚ್. ಕಾರ್" ಸರ್ವಮಾನವರಿಗೂ ಚರಿತ್ರೆಯ ರಚನೆಯಿದೆ ಎಂದಿದ್ದಾನೆ. ರಿಚರ್ಡ್‌ಡಾರ್ಸನ್ ಎಂಬ ಜನಪದ ತಜ್ಞ ಕೇವಲ ರಾಜಮಹಾರಾಜರು, ಸಾಮ್ರಾಜ್ಯಗಳ ಅಧಿಕಾರಿಗಳು, ಯುದ್ಧಗಳು ಇವುಗಳ ಕೇಂದ್ರವೆ ಚರಿತ್ರೆಯಾಗಿರದೆ ಜನಸಾಮಾನ್ಯರ ದೃಷ್ಟಿಕೋನದಿಂದ ದೊರಕುವ ಸಾಮಗ್ರಿಯನ್ನು ಬಳಸಿ ರಾಷ್ಟ್ರೀಯ ಇತಿಹಾಸ ಹೊಂದಿಸಿಕೊಂಡು, ಸ್ಥಳೀಯ ಇತಿಹಾಸದಂತೆಯೆ ರಚಿಸಬಹುದೆನ್ನುತ್ತಾನೆ. ಬಾಡ್ಲಿಬ್ಯೂರಿ ಓಕ್‌ಶೂಟ್, ಟಾಯ್ನಾಬಿ, ವಿಂಡೆಲ್‌ಬಾಂಡ್, ರಿಚರ್ಡ್, ಸಿಮ್ಮೇಲ್, ಡಿಲ್ಫ್‌ಸ್ಪೆಂಗ್ಲರ್ ಲಾಚೆಲ್ಯರ್ ಬರ್ಗ್‌ಸನ್, ಕಾಮಿಲಿ ಜ್ಯೂಯಿನ್ ಕ್ರೋಚೆ ಮುಂತಾದವರು ಹೇಗೆ ಹೊಸ ತರದ ಅಧ್ಯಯನ ಮನಗಂಡರೊ ಅದೇ ತೆರೆನಾದ ಪ್ರಯೋಗತೆ ಕಂಡುಕೊಳ್ಳುವುದು ತೆಲಗಾವಿಯವರ ಅಧ್ಯಯನದ ಶಿಸ್ತಾಗಿದೆ.

ಸ್ಥಳೀಯ ಚರಿತ್ರೆ ಮೇಲಿರುವ ಆರೋಪ

ಸ್ಥಳೀಯ ಚರಿತ್ರೆಗೆ ಸಂಬಂಧಿಸಿದ ಕೆಲವು ಆರೋಪ ಮತ್ತು ಅಪವಾದಗಳೆಂದರೆ, ಹಲವು ವೃತ್ತಿಪರರು, ಕೆಲವು ಪರಿಣಿತರು, ಹವ್ಯಾಸಿಗರು, ಅಪರಿಣಿತ ಬರಹಗಾರರು, ಸೀಮಿತದೃಷ್ಟಿ ಅಥವಾ ತನ್ನದೇ ದೃಷ್ಟಿಕೋನಕ್ಕೆ ಸಂಬಂಧಿಸಿದವರು. ಯಾರೋ ಹೇಳಿದ-ಕೇಳಿದ, ಸಾಕ್ಷಿಗಳಿಲ್ಲದ

ಊಹೆ-ಉತ್ಪ್ರೇಕ್ಷೆಯಿಂದ ಕೂಡಿದ, ಸಂಶಯದಿಂದ ಕೂಡಿದ ಚರಿತ್ರೆ ರಚನಾ ವಿಧಾನಗಳಿಲ್ಲದ, ಸ್ವರೂಪ ಅಳವಡಿಸಿಕೊಳ್ಳದ, ಸೀಮಿತದೃಷ್ಟಿಯ, ಅರ್ಥರಹಿತವಾದ, ನಿರ್ಧಾರ ಕೊರತೆಯ ಅಭಾವವಿರುವ, ಹಲವು ಮಿತಿಗೆ ಒಳಪಟ್ಟ ಹಾಗೂ ತರಬೇತಿಯಿಲ್ಲದವರು, ಸ್ಥಳೀಯ ಚರಿತ್ರೆ ರಚಿಸುವವರಾಗಿದ್ದಾರೆ. ಇಂತವರ ಚರಿತ್ರೆಯು ಸೈದ್ಧಾಂತಿಕವಿಲ್ಲದ ಚರಿತ್ರೆ ಎಂದು ಮೂಗುಮುರಿಯುವವರಿದ್ದಾರೆ. ಇಂತಹ ಸ್ಥಳೀಯ ಚರಿತ್ರೆಯಿಂದ ರಾಷ್ಟ್ರೀಯ ಭಾವನೆಗೆ ಧಕ್ಕೆ ಬರುವುದೆಂಬ ಹಾಗೂ ಸೀಮಿತ ದೃಷ್ಟಿಕೋನ ಹೊಂದಿದ್ದದಾದ, ಅತಿರೇಖದ ಪ್ರಾಂತೀಯ ಅಭಿಮಾನ ಸ್ಥಳೀಯ ಚರಿತ್ರೆಗಿದೆ. ಭಾಷಿಕ ಸಂಕುಚಿತತೆಯಿಂದ ಕೂಡಿರುವುದರಿಂದ ಅಪವಿತ್ರವಾದುದೆಂದು, ಕಾಲ್ಪನಿಕ, ಮಾನಸಿಕ ದಂತಕಥೆಯಿಂದ ಕೂಡಿದ್ದಾದ ಇತಿಹಾಸವಾಗಿರುವುದರಿಂದ ವಿರುದ್ಧ ಅಕ್ಷರವಿಲ್ಲದ ಚರಿತ್ರೆ ಹೀನರೆಂಬ ಅಪವಾದಗಳಿವೆ. ವೈಜ್ಞಾನಿಕ ದೃಷ್ಟಿಕೋನ ರಹಿತವಾದುದುದೆಂಬುದು ಸ್ಥಳೀಯಕ್ಕೆ. ಮಾನ್ಯತೆ ಕೊಡುವುದಾದರೆ ಭಾಷಾವಾರು, ಪ್ರಾಂತ್ಯ, ಪ್ರಾದೇಶಿಕ ಮನೋಭಾವ ಉಂಟಾಗಿ ರಾಷ್ಟ್ರೀಯ ಭಾವೈಕ್ಯತೆಗೆ ಧಕ್ಕೆ ಬರುವುದೆಂಬುದು ಕೆಲವು ಅಪರಿಪಕ್ವದ ಸಂಶೋಧಕರ ವಾದವಾಗಿದೆ. ಇಂತಹ ಮನೋಭಾವವೂ ಕೆಲವು ಸಿದ್ಧಾಂತಗಳಾಗಿ, ಅದರಿಂದ ಸಮಸ್ಯೆಯಾಗಿ, ಸಂಘರ್ಷವಾಗಿ ಸಮಾಜದ ಸ್ವಾಸ್ಥ್ಯ ಹದಗೆಡುವುದೆಂಬುದು ಒಂದೆಡೆಯಾದರೆ, ಮತ್ತೊಂದೆಡೆ ಬೇರೆಯವರನ್ನು ನಂಬದೆ ಸ್ಥಳೀಯರು ಸ್ಥಳೀಯರನ್ನು ಮಾತ್ರ ಹತ್ತಿರ ಸೇರಿಸಿ, ಇತರರನ್ನು ಅನ್ಯರೆಂದು ಭಾವಿಸಿ ಜನಾಂಗೀಯ, ಭಾಷಿಕ, ಪ್ರಾದೇಶಿಕ ಸಂಘರ್ಷವಾಗುವುದೆಂಬುದು ಆರೋಪವಿದೆ.

ಸ್ಥಳೀಯ ಚರಿತ್ರೆಯ ಉದ್ದೇಶ

ಮಾನವನ ಮೂಲಸ್ಥಿತಿ, ಸ್ವರೂಪ, ಸ್ವಭಾವ, ವಿಚಾರ, ಆಸೆ-ಆಕಾಂಕ್ಷೆ, ಇತಿಮಿತಿ ಎಲ್ಲಾ ಆಯಾಮಗಳ ಅಸ್ತಿತ್ವದ ಸೂಕ್ಷ್ಮತೆಗಳನ್ನು ಸೃಷ್ಟಿಯ ಸೃಜನವನ್ನು ಸೂಕ್ಷ್ಮವಾಗಿ ಸ್ಥಳೀಯ ಚರಿತ್ರೆಯ ಮೂಲಕ ಕಟ್ಟಿಕೊಡುವುದು.

ಸಮುದಾಯ ನೆಲೆಗೊಂಡಿರುವ, ತನ್ನ ಸುತ್ತಮುತ್ತಲಿನ ಪರಿಸರ ಮತ್ತು ನೆರೆಹೊರೆಯವರನ್ನು ಸಾಮಾಜಿಕ ಸಂಬಂಧಗಳಂತ ಪರಿಕಲ್ಪನೆಗಳನ್ನು, ಸ್ಥಳೀಯ ಸಂಶೋಧನಾ ವಿಧಾನದ ವ್ಯಾಪ್ತಿಗೆ ಅಳವಡಿಸಿಕೊಂಡು ಸಂಶೋಧನೆಯ ಮೂಲಕ ಸ್ಥಳೀಯವಾಗಿ ಸಂಶೋಧನೆಯ ವಿಧಾನಗಳನ್ನು ಕಂಡುಕೊಳ್ಳುವುದು.

ಸ್ಥಳೀಯವು, ಸ್ಥಳೀಯವಾಗಿ ಹೊಂದಿರುವ ಅಂತರ್‌ಸಂಬಂಧ, ಸ್ಥಳೀಯ ಆಡಳಿತ ವ್ಯವಸ್ಥೆಯ ನಾಯಕತ್ವ, ಅಧಿಕಾರ, ಕರ್ತವ್ಯ, ಹಕ್ಕು, ಸಾಮಾಜಿಕ, ನ್ಯಾಯ, ಸಂರಕ್ಷಣೆ, ಅಂತಸ್ತು, ಪ್ರತಿಷ್ಠೆ, ತ್ಯಾಗ, ಹೋರಾಟಗಳನ್ನು ಸ್ಥಳೀಯದೊಂದಿಗೆ ಕಟ್ಟಿಕೊಡುವುದು ಮತ್ತು ಅನಾವರಣಗೊಳಿಸುವುದು.

ಮರೆಯಾದ ಬದುಕಿನ ವಿವಿಧ ಮುಖದ ಪರಿಚಯದೊಂದಿಗೆ ಸಮಕಾಲೀನ ಬದುಕನ್ನು ಮುಖಾಮುಖಿಯಾಗಿಸುವುದು, ಸಾಮ್ರಾಜ್ಯಶಾಹಿ ಬದುಕಿಗಿಂತ ಜನಸಾಮಾನ್ಯರ ಬದುಕು ಹೇಗೆ ಭಿನ್ನವೆಂದು ಅರಿಯುವುದು.

* ಪ್ರತ್ಯೇಕ ಸಂಶೋಧನಾ ಶಿಸ್ತನ್ನಾಗಿ ಬೆಳೆಸುವುದು.
* ಜಾಗತಿಕ ಮತ್ತು ರಾಷ್ಟ್ರೀಯ ಅಧ್ಯಯನ ವಿಧಾನಗಳಂತೆಯೆ ಜಾಗತಿಕ ಸ್ಥಾನಮಾನ ಕಲ್ಪಿಸಿ ತಳಸಂಸ್ಕೃತಿಯ ತಾತ್ವಿಕತೆ ಸಾರುವುದು.
* ಸ್ಥಳೀಯವು ಯಾವ ರೀತಿಯಾಗಿ ರಾಷ್ಟ್ರೀಯ ಸಂಬಂಧ ಹೊಂದಬಹುದಾಗಿದೆಂಬುದನ್ನು ಸಂಶೋಧಕರಿಗೆ ಉಣ ಬಡಿಸುವುದು.
* ದೀನ ದುರ್ಬಲರ ಅಲಕ್ಷಿತರ ಬುಡಕಟ್ಟುಗಳ ಲಿಂಗತಾರತಮ್ಯಕ್ಕೆ ಒಳಗಾದವರ ನೈಜತೆಯ ಅನ್ವೇಷಣೆ.
* ಪ್ರಭುತ್ವದ ವಿರುದ್ಧ ಸಿಡಿದೆದ್ದ ಕಿಚ್ಚು ತಾಪ. ಆಯಾ ಸಂದರ್ಭ ಸನ್ನಿವೇಶಗಳನ್ನು ಅದೇ ಜನರಿಂದ ಬೆಳಕಿಗೆ ತರುವುದು.
* ಸ್ಥಳೀಯತೆಗೆ ಸಂಬಂಧಿಸಿದ ವಿಧಾನಗಳನ್ನು ಪರಾಮರ್ಶಿಸಿ ಬೇರೊಂದು ವಿಧಾನ ಕಂಡುಕೊಳ್ಳುವುದು.
* ನೆರೆರಾಷ್ಟ್ರಗಳಾದ ಇಂಗ್ಲೆಂಡ್-ಅಮೇರಿಕಗಳಲ್ಲಿ ನೂರಾರು ಸ್ಥಳೀಯ ಸಂಘಸಂಸ್ಥೆಗಳು ಸ್ಥಳೀಯ ಚರಿತ್ರೆ ರಚಿಸಿ ಸ್ಥಳೀಯವನ್ನು ರಕ್ಷಿಸುವ ಹಾಗೆಯೆ, ಭಾರತದಲ್ಲಿ ಹೆಜ್ಜೆ, ಹೆಜ್ಜೆಗೂ ಸ್ಮಾರಕಗಳಿರುವುದರಿಂದ ಅಂತದೊಂದು ಸಾಧ್ಯತೆಯನ್ನು ನಾಡಿನಲ್ಲಿ ಕಟ್ಟುವುದಾಗಿದೆ.

ಸ್ಥಳೀಯ ಚರಿತ್ರೆಯ ರಚನೆಗೆ ಇದರ ಮೇಲಿರುವ ಆರೋಪವನ್ನೇ ಬಳಸಿಕೊಂಡು ಚರಿತ್ರೆ ರಚಿಸುವುದು. ಅಂದರೆ ಸ್ಥಳೀಯರು ಸಂರಕ್ಷಿಸಿಕೊಂಡು ಬಂದ ಕಾರಣದಿಂದಾಗಿಯೆ ವಿಪುಲ ಸ್ಥಳೀಯ ಆಕರಗಳು ಇಂದು ಕಾಣಲಿಕ್ಕೆ ಸಾಧ್ಯವಿದೆ. ಇದರ ಪ್ರಯೋಜನಾ ಚರಿತ್ರೆಗೆ ಹೇಗೆ ಸಾಧ್ಯವಾಗಿದೆಂಬುದನ್ನು ತೋರಿಸುವುದಾಗಿದೆ.

ಸ್ಥಳೀಯರ ಹತ್ತಿರಕ್ಕಿರಬಹುದಾದ ಅಮೂಲ್ಯ ಆಕರಗಳನ್ನು ಕಾಲಕ್ಕೆ ತಕ್ಕಂತೆ ಬಳಸಿಕೊಂಡು, ಆ ಮೂಲಕ ಅಂತವರಿಗೆ ವಿಶೇಷ ಸ್ಥಾನಮಾನ ಕಲ್ಪಿಸುವುದು.

ಸ್ಥಳೀಯ ಚರಿತ್ರೆ ರಚನೆಯಿಂದ ಸ್ಥಳೀಯರಿಗೆ ನ್ಯಾಯ ಒದಗಿಸುವುದಷ್ಟೆ ಅಲ್ಲದೆ, ಜನಮನಗಳಲ್ಲಿ ಸ್ಥಳೀಯ ಸ್ಮಾರಕ ಮತ್ತು ಕಟ್ಟಡಗಳ ಬಗ್ಗೆ ಜ್ಞಾನ, ಔಚಿತ್ಯ, ಅಭಿಮಾನ, ಪ್ರಚಾರ ಮತ್ತು ಸಂರಕ್ಷಣೆಯನ್ನು ಸಾಧ್ಯವಾಗಿಸುವುದು.

ಸ್ಥಳೀಯ ಚರಿತ್ರೆ ಆಕರಗಳು

ಚರಿತ್ರೆ ರಚನೆಯಲ್ಲಿ ಆಕರಗಳು ಬಹುಮುಖ್ಯ ಪಾತ್ರವಹಿಸುತ್ತಿದ್ದು ಆ ಆಕರಗಳು ಅಕ್ಷರಲೋಕದ ಅಭಿವ್ಯಕ್ತಿಯಾಗಿವೆ. ಆದರೆ ಸ್ಥಳೀಯ ಚರಿತ್ರೆಗೆ ಸಂಬಂಧಿಸಿದ್ದುದು ಮೌಖಿಕ ಆಗಲಾರವು. ಇವುಗಳನ್ನು ಬಹಳಷ್ಟು ಅಧ್ಯಯನಕಾರರು ಒಪ್ಪಲಾರರು. ಆದರೆ ಜಾನ್‌ಲ್ಯಾನತಿನೇ ಎಂಬುವನು ಆಫ್ರಿಕಾಖಂಡದ ಚರಿತ್ರೆ ರಚಿಸುವಲ್ಲಿ ಮೇಲಿನವರ ಕೀಳರಿಮೆ ವಿರೋಧಿಸುತ್ತ ಮೌಖಿಕ ಆಧಾರವೂ

ಬಹುಮುಖ್ಯ ಆಕರವೆನ್ನುತ್ತಾರೆ. ಏಕೆಂದರೆ ಮೌಖಿಕ ಆಕರಗಳು ಬದುಕಿರುವ ಮಾನವರಿಂದ ಸಂಗ್ರಹಿಸಿದ ಆಧಾರ. ಆದ್ದರಿಂದ ಇದನ್ನೇಕೆ ನಿರ್ಜೀವ ಆಕರವೆಂದು ಕರೆಯಬೇಕೆಂಬ ಪ್ರಶ್ನೆ ಮುಂದಿಡುತ್ತಾರೆ. ಇಷ್ಟಕ್ಕೂ ಮೌಖಿಕ ಆಕರವು ಬೆಳಕಿಗೆ ಬಾರದಿರಲು ಕಾರಣವೆಂದರೆ ಈ ಹಿಂದೆ ಬರವಣಿಗೆಯು ಆಳುವ ವರ್ಗದ ಮಾಧ್ಯಮವಾಗಿದ್ದರಿಂದ, ಅಂತವರ ಚರಿತ್ರೆ ಮಾತ್ರ ದಾಖಲಾಗಿದೆ. ಜನಸಾಮಾನ್ಯರಿಗೆ ಅಕ್ಷರ ಜ್ಞಾನವಿಲ್ಲದ ಕಾರಣದಿಂದ ಇವರುಗಳ ಚರಿತ್ರೆ ಸ್ಥಳೀಯ ಆಕರಗಳೆಂದರೆ ದಾಖಲಾಗಿರಲಿಕ್ಕಿಲ್ಲ. ಆದರೆ ಇದನ್ನು ಕಾಲ ಮತ್ತು ಸಮಯ ಬದಲಾಗಿದ್ದರಿಂದ, ಸ್ಥಳೀಯವನ್ನು ದಾಖಲಿಸುವ ಜರೂರತೆ ಇವತ್ತಿದೆ ಹಾಗೂ ಈ ವಿಷಯಕ್ಕೆ ಸಂಬಂಧಿಸಿದಂತೆ ತೆಲಗಾವಿಯವರ ಅಧ್ಯಯನದುದ್ದಕ್ಕೂ ಮನಗಾಣಬಹುದಾಗಿದೆ.

ಪುರಾತತ್ವ ಸಾಹಿತ್ಯದ ಪ್ರಾಥಮಿಕ, ಮೌಖಿಕ, ಅನುಷಂಗಿಕ ಆಕರಗಳನ್ನು ಬಳಸಿಕೊಳ್ಳುವುದು. ಅವುಗಳು ಸ್ಥಳೀಯ ಭೌಗೋಳಿಕ ವಿವರ, ಸ್ಥಳನಾಮ ಹಿನ್ನೆಲೆಯ ಆಯಾಮಗಳು ಕೋಟೆ-ಕೊತ್ತಲಗಳು ಶಾಸನ, ವೀರಗಲ್ಲು ದೇವಾಲಯಗಳು ಹಸ್ತಪ್ರತಿ-ಕಂಚಿನಪತ್ರ, ತಾಳೆಗರಿ, ನಾಣ್ಯ, ಜಾತ್ರೆ, ಉತ್ಸವ, ರಥ, ಹಬ್ಬಗಳ ಹಿನ್ನೆಲೆ, ಕೆರೆ-ಕಾಲುವೆ, ಬಾವಿ, ಯಾತ್ರಾ ಸ್ಥಳಗಳು, ಐತಿಹಾಸಿಕ ಕಟ್ಟಡ, ಶಿಲ್ಪ, ನಿವೇಶನ ಸ್ಮಾರಕಗಳು, ಆಯುಧಗಳು, ವಾಸ್ತುಶಿಲ್ಪಗಳು, ಭಾಷೆ, ಉಪಭಾಷೆ, ಆಡುಭಾಷೆ, ರೂಪಾಂತರಗೊಂಡ ಭಾಷೆ, ಜಾತಿ-ವರ್ಗ-ಜನಾಂಗ, ನಂಬಿಕೆ ಸಂಸ್ಕೃತಿಯ ಅರಿವು, ಗ್ರಾಮದ ಗೌಡ, ಪಟೇಲ, ಶ್ಯಾನಭೋಗ, ಕಲಾವಿದರು, ನಾಯಕ, ಬೇಟೆಗಾರ, ವೀರ, ಜಾನಪದಗೀತೆ, ಕಥೆ, ಕವನ, ಲಾವಣಿ, ಸೋಬಾನೆ, ನೀತಿ, ಕಾದಂಬರಿ, ಗಾದೆ, ನಾಣ್ಣುಡಿ, ವಿದೇಶಿಗರ ಪ್ರವಾಸ ಕಥನ, ವರದಿ, ಲೇಖನ-ಕೃತಿ, ಪ್ರತೀತಿ, ನಂಬಿಕೆ, ಪುರಾಣ, ದಂತಕಥೆ, ಐತಿಹ್ಯ, ಜನ್ಮ ಕುಂಡಲಿ, ಕೈಫಿಯತ್ತು, ಬಖೈರು, ನಾಮೆ, ದಸ್ತಾವೇಜು ಸನ್ನದು, ವಂಶಾವಳಿ, ಶಕಾವಳಿ ಮುಂತಾದವುಗಳಿಂದ ಸ್ಥಳೀಯ ಚರಿತ್ರೆ ರಚನೆಗೆ ಮಾಹಿತಿಯು ಲಭ್ಯವಿದೆ.[೧೬]

ಸ್ಥಳೀಯ ಚರಿತ್ರೆಯ ಸ್ವರೂಪ

* ಸ್ಥಳೀಯರ ಅಸ್ತಿತ್ವ ಸಂರಕ್ಷಿಸಿಕೊಂಡು ಸಾಕ್ಷಿ ಪ್ರಜ್ಞೆ ನಿರೂಪಿಸಿ ಮಾನವೀಯಕರಣ ಗೊಳಿಸುವುದು.
* ಸಿದ್ಧ ಮಾದರಿಯಂತೆಯೆ ಸಾಧ್ಯವಾದರೆ ಅದಕ್ಕೆ ಹೆಚ್ಚಿನ ವ್ಯಾಪ್ತಿಯೊಂದಿಗೆ ಅವಕಾಶ ಸ್ಥಾಪಿಸಿಕೊಳ್ಳುವುದು.
* ವಿಭಿನ್ನ ಸಮೂಹಗಳ ಸಾಂಸ್ಕೃತಿಕ ಚರಿತ್ರೆ ದಾಖಲಿಸುವುದು.
* ಚರಿತ್ರೆಯ ಆಚೆಗೆ ಮಾನವ ಸಂಬಂಧಗಳನ್ನು ಸ್ಥಾಪಿಸುವುದು.
* ಮರಗಿಡಕ್ಕೆ ಹೇಗೆ ಬೇರು ಆಧಾರವೋ ಅದರಂತೆಯೆ ರಾಷ್ಟ್ರೀಯ ಚರಿತ್ರೆಗೆ ಸ್ಥಳೀಯ ಚರಿತ್ರೆಯೂ ಬೇರಾಗಬಲ್ಲದೆಂದು ನಿರೂಪಿಸುವಿಕೆ.
* ಜಾತ್ಯಾತೀತ ಸಮಾಜದ ನಿರ್ಮಾಣ ಮತ್ತು ಜನಸಮುದಾಯದಲ್ಲಿ ನಂಬಿಕೆ ನಿರ್ಮಿಸುವುದು.

* ಇಲ್ಲಿಯತನಕ ನಿರೂಪಿತಗೊಂಡ ಏಕಮುಖವಾದಕ್ಕೆ ಬಹುಮುಖವನ್ನು ಅನಾವರಣ ಗೊಳಿಸುವಿಕೆ.

* ಜಾಗತಿಕ ಚರಿತ್ರೆಯೊಂದಿಗೆ ಅನುಸಂಧಾನಗೊಳಿಸಿ ರಾಷ್ಟ್ರೀಯ ಮತ್ತು ಸ್ಥಳೀಯ ಚರಿತ್ರೆಯೊಂದಿಗೆ ಅನುಸಂಧಾನಗೊಳಿಸಿ ರಾಷ್ಟ್ರೀಯ ಮತ್ತು ಸ್ಥಳೀಯ ಚರಿತ್ರೆ ಆಕರಗಳ ವಿನಿಮಯದ ಸಾಧ್ಯತೆ ಪತ್ತೆ ಹಚ್ಚುವುದು.

* ತಿರಸ್ಕರಿಸಲ್ಪಟ್ಟ ಅನುಷಂಗಿಕ ಎಂದೆನಿಸಿಕೊಂಡಿದ್ದ ಮೌಖಿಕ ಆಕರಗಳು ಅಂಚಿಗೆ ತಳ್ಳಲ್ಪಟ್ಟ ಸಂಗತಿಗಳನ್ನು ಬೆಳಕಿಗೆ ತರುವುದು.

* ಸುದೀರ್ಘ ಕಾಯಕ ಕ್ಷೇತ್ರದಿಂದಾಗಿ ಸತ್ಯಕ್ಕೆ ಹತ್ತಿರವಾಗುವಂತದ್ದಾಗಿದೆ. ಸ್ಥಳೀಯವಾಗಿರುವವರು ಮಾಹಿತಿ ನೀಡುವುದರಿಂದ ನಂಬಲರ್ಹವಾದುದು.

ಸ್ಥಳೀಯ ಚರಿತ್ರೆಯ ರಚನಾ ಸಾಧ್ಯತೆಗಳು

ಸ್ಥಳೀಯ ಚರಿತ್ರೆ ಎಂದರೇನೆ ತಲಮಟ್ಟದ್ದು. ಸ್ಥಳೀಯವಾದ್ದರಿಂದ, ಸ್ಥಳೀಯವಾಗಿರುವುದೆಲ್ಲವೂ ಚಿರಪರಿಚಿತರಾಗಿರುವುದರಿಂದ, ಪ್ರತ್ಯಕ್ಷ ಪ್ರಾಮಾಣಿಭೂತವಾದುದ್ದಾಗಿದ್ದು, ಸ್ಥಳೀಯ ಆಕರದಿಂದಲೆ ಸ್ಥಳೀಯ ದೃಷ್ಟಿಕೋನದಿಂದಲೆ, ಸ್ಥಳೀಯ ಭಾಷೆಯ ಮೂಲಕವೆ ಸಮಗ್ರವಾಗಿ ಇಡೀ ಜನಸಮುದಾಯದ ನೈಜ ಸಂಸ್ಕೃತಿಯನ್ನು ಅನ್ವೇಷಿಸುವುದು.

ಸಂಸ್ಕೃತೀಕರಣ, ಪಾಶ್ಚಾತೀಕರಣ, ಆಧುನೀಕರಣ, ಜಾಗತೀಕರಣ ಮುಂತಾದ ಸಾಂಸ್ಕೃತಿಕ ಪರಿಕರಣಗಳು ಸಮಿಶ್ರಗೊಂಡರು. ಆಧುನಿಕ ಮಾಧ್ಯಮಗಳು ಔದ್ಯೋಗಿಕ, ವಿಜ್ಞಾನ, ತಂತ್ರಜ್ಞಾನದೊಂದಿಗೆ ಬದುಕಿದ ಜನಸಮುದಾಯಗಳು ಹಲವು ಸಂದರ್ಭ ವಸಾಹತು ಆಧುನಿಕ, ಆಧುನಿಕೋತ್ತರವೂ ಬಂದೊದಗಿದರು. ಸ್ಥಳೀಯವು ಅಲ್ಪ-ಸ್ವಲ್ಪ ಕರಗಿ ರೂಪಾಂತರಗೊಳ್ಳಬಹುದೇ ವಿನಃ ಸಂಪೂರ್ಣವಾಗಿ ಬದಲಾಗಿಲ್ಲ. ಅವರು ಬದಲಾದರೂ ಸಂಸ್ಕೃತಿಯ ಹಲವು ಸ್ವರೂಪಗಳು ಮೌಖಿಕವಾಗಿಯೆ ಆಚರಣೆಯಾಗಿಯೂ ಜೀವಂತವಾಗಿವೆ.

* ಗ್ರಾಮವೇ ಭಾರತದ ಜೀವಾಳವಾಗಿರುವುದರಿಂದ, ಪ್ರತಿ ಗ್ರಾಮಕ್ಕೆ ಒಂದು ಪೌರಾಣಿಕ ಹಿನ್ನೆಲೆಯಿದ್ದು, ಅದಕ್ಕೆ ಪೂರಕವಾಗಿರುವ ಪ್ರಾಚ್ಯವಸ್ತುಗಳು, ಸ್ಥಳೀಯ ದಾರ್ಶನಿಕರು, ಕವಿಗಳು, ಹಿರಿಯರು ಮುಂತಾದವರಿಂದ ಮಾಹಿತಿ ಪಡೆದು ಪರಿಷ್ಕರಿಸುವುದು.

* ಲಭ್ಯವಿರುವ ಆಕರಗಳ ಮೂಲಕವೇ ಕಾಲಾವಧಿ, ಸಮಯ, ಸಂದರ್ಭ ಮನೆತನಗಳನ್ನು ಕಂಡುಕೊಂಡು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೊಂದಿರುವ ಸಂಬಂಧ ಮತ್ತು ಈ ಎರಡು ಸಂಬಂಧದಲ್ಲಿ ವ್ಯತ್ಯಾಸ ಗುರುತಿಸಿ ಸತ್ಯತೆ ಕಂಡುಕೊಂಡು ಸಂಶೋಧನೆಗೆ ಬಳಸುವುದು.

* ಸ್ಥಳೀಯ ಚರಿತ್ರೆ ರಚಿಸುವ ಸಂದರ್ಭದಲ್ಲಿ ಸ್ಥಳೀಯ ದಾಖಲೆಗಳ ಅಲಭ್ಯದಿಂದಾಗಿ ಸ್ಥಳನಾಮ, ಹಸ್ತಪ್ರತಿಯಂತ ಕೆಲವು ದಾಖಲೆಗಳು, ಕೆಲವು ಸಲ ಅನಿವಾರ್ಯ, ಆಕಸ್ಮಿಕ,

ಉದ್ದೇಶಪೂರ್ವಕ, ವಿಸ್ತೃತ, ತಿದ್ದುಪಡಿ, ಸ್ಥಾನಪಲ್ಲಟ, ಲೋಪ, ಪ್ರಕ್ಷೇಪ, ಅಕ್ಷರ ಭ್ರಾಂತಿ, ವಾಸ್ತವ ತಿರುಚುವುದು, ಅಕ್ಷರ ತುಂಡಾದಾಗ ಬೇರೆ ಶಬ್ದ ಸೇರಿಸುವುದರಿಂದ ಕೆಲವು ಸಮಸ್ಯೆ ಎದುರಾದಾಗ ತಾತ್ವಿಕವಾಗಿ ಚರ್ಚಿಸಿ, ವಿದ್ವಾಂಸರೊಡನೆ ನಿರ್ಣಯಕ್ಕೆ ಬಂದು ವಾಸ್ತವ ಕಂಡುಕೊಂಡು ಸ್ಥಳೀಯ ಚರಿತ್ರೆ ರಚಿಸಬಹುದು. ಜನರಿಂದ ನಿರೂಪಿತಗೊಂಡ ಮಾಹಿತಿಯನ್ನು ಚರಿತ್ರೆಕಾರನು ವಾಸ್ತವದ ವಿಶ್ಲೇಷತೆಗೆ ಒಳಪಡಿಸುವುದು.

* ಸಿದ್ಧ ಮಾದರಿಗಳನ್ನು ದೂರೀಕರಿಸುವ, ಪರ್ಯಾಯ ವಿಧಾನ ಕಟ್ಟುವ, ಪ್ರೇರಕ, ಪೂರಕ ಎಂದು ಮೂದಲಿಸದೆ, ಎಲ್ಲಾ ಅಧ್ಯಯನದ ಮಾದರಿಗಳನ್ನು ತಿಳಿದುಕೊಂಡು ಅವುಗಳ ನೆಲೆಯಲ್ಲಿಯೂ ಸ್ಥಳೀಯ ಚರಿತ್ರೆ ರಚಿಸಬಹುದಾಗಿದೆ.

* ಅಗತ್ಯವಿದ್ದಾಗ ಸರ್ವೇಕ್ಷಣೆ ಮಾಡಿ ಉತ್ಖನನ ನಡೆಸಿ, ಸರಿಯಾದ ಮಾಹಿತಿ ಸಂಗ್ರಹಿಸಿ ಅದಕ್ಕೆ ಸಂಬಂಧಿಸಿದ ಇತರೆ ಮಾಹಿತಿಯನ್ನು ಗ್ರಂಥಾಲಯ, ವಸ್ತುಸಂಗ್ರಹಾಲಯದಲ್ಲಿನ ವಸ್ತುಗಳ ಶೋಧನೆ, ಸ್ಥಳೀಯ ಸಂಘ-ಸಂಸ್ಥೆಗಳ ಸಹಾಯದಿಂದಲೆ ಪೂರಕ ಮಾಹಿತಿ ಪಡೆಯುವುದು.

* ಚರಿತ್ರೆಯ ಅಧ್ಯಯನದ ಮಾದರಿಯಂತೆಯೆ ಮಾಹಿತಿ ಸಂಗ್ರಹ, ವರ್ಗೀಕರಣ, ವಿಶ್ಲೇಷಣೆ, ನಿರೂಪಣೆ, ಸಹೋದರ ಶಿಸ್ತಿನ ಸಹಾಯ, ಸಾಮಾಜಿಕ ಮತ್ತು ಭೌತ ವಿಜ್ಞಾನಗಳ ಸಂಗತಿ ಬಳಸಿಕೊಂಡು, ನಿಖರತೆ ಸ್ಪಷ್ಟಪಡಿಸಿಕೊಂಡು, ಸ್ಥಳೀಯ ಚರಿತ್ರೆ ರಚಿಸುವುದು.

* ಸ್ಥಳೀಯ ಚರಿತ್ರೆಗೆ ಬಹುಮುಖ್ಯ ವಿಧಾನವೆಂದರೆ ಕ್ಷೇತ್ರಕಾರ್ಯ ಇದು ನೈಜತೆಗೆ ಹೆಚ್ಚು ಹತ್ತಿರವಿರುವ ವಿಧಾನವಾಗಿದ್ದು ಈ ಶೋಧನೆಗೆ ಬಹುಮುಖ್ಯ ಆಕರವಾಗಿ ಪರಿಗಣಿಸಿ, ಪೂರ್ವಗ್ರಹದಿಂದ ಮುಕ್ತರಾಗಿ ಮಾಹಿತಿ ಸಂಗ್ರಹಿಸುವುದು.

* ಜನಸಾಮಾನ್ಯರ ಅನುಭವಗಳನ್ನು ಅಧ್ಯಯನಗಳಿಗೆ ಬಳಸಿಕೊಳ್ಳುವುದು.

* ಇತ್ತೀಚಿನ ಕ್ಯಾಮಾರಾ, ಟೇಪ್‌ರೆಕಾರ್ಡ್‌ರ್ ವೀಡಿಯೋ, ಸ್ಲೈಡ್ಸ್, ಪ್ರೊಜೆಕ್ಟರ್, ಕಂಪ್ಯೂಟರ್ ಬಳಕೆ ಮಾಡಿಕೊಂಡು ವಸ್ತುನಿಷ್ಠವಾಗಿ ರಚಿಸುವುದು. ಇತಿಹಾಸಕಾರನ ಮುಖ್ಯಗುರಿ ಸತ್ಯದ ಅನಾವರಣಗೊಳಿಸುವುದರಿಂದಾಗಿ ಸತ್ಯ ಕಂಡುಕೊಳ್ಳಲು ಕೇವಲ ಸಿದ್ಧಗೊಂಡ ಚರಿತ್ರೆಯಿಂದಷ್ಟಲ್ಲದೆ ಸ್ಥಳೀಯ ಚರಿತ್ರೆಯಿಂದಲೂ ಸಾಧ್ಯವಿದೆ.

ಕಾರ್ ಹೇಳುವಂತೆ "ಸರ್ವಮಾನವರಿಗೂ ಚರಿತ್ರೆ ರಚನೆಯಿದೆ ಎಂದಾದರೆ" ಕಾಲಿಂಗ್‌ವುಡ್ ಹೇಳುವಂತೆ ಘಟನೆಗಳನ್ನು ದಾಖಲಿಸುವುದು. ಘಟನೆ ಅರಿಯುವುದು. ಘಟನೆಗಳಲ್ಲಿರುವ ಆಲೋಚನೆ ಪತ್ತೇ ಹಚ್ಚುವುದು, ಹಾಗೆಯೆ ಘಟನೆಗಳ ಮರು ಆಲೋಚನೆಯ ಮೂಲಕವೆ ಹಾಗೂ ಚರಿತ್ರೆಯ ಅಧ್ಯಯನ ಮತ್ತು ಮಾನವನ ಕ್ರಿಯೆಗಳಾಗಿರುವುರಿಂದ ಹೊರ ಮತ್ತು ಒಳ ಆಲೋಚನೆಗಳ ಮೂಲಕವೂ, ಹಿಂದಿನ ಚಿಂತನೆಗಳ ಸಹಾಯದಿಂದಲೇ ವೈಜ್ಞಾನಿಕವಾಗಿಯೂ, ಮಾನವಕೇಂದ್ರಿತವಾಗಿಯೂ, ಸಾಕ್ಷ್ಯಾಧಾರಗಳ ಮೂಲಕವೂ ಚರಿತ್ರೆ ಕಟ್ಟಬಹುದಾಗಿದೆನ್ನುತ್ತಾನೆ. ಇಂತಹ ಸ್ಥಳೀಯ ಚರಿತ್ರೆಯನ್ನು ಅಮೂಲಾಗ್ರ ಚಿಂತನೆಗಳ ಮೂಲಕ ರಚಿಸಬಹುದಾಗಿದೆ.

ಸಾಧ್ಯವಾಗಿ-ಸಾಧಿಸಿದ್ದು

ಕಿಂಗ್‌ಸ್ಟನ್ ಹೇಳುವಂತೆ "ಯಾವೊಬ್ಬ ಚರಿತ್ರೆಕಾರನು ಯಾವುದೇ ಚರಿತ್ರೆ ದೃಷ್ಟಿಕೋನದ ಸ್ವಾಮ್ಯ ಹೊಂದಿಲ್ಲ". ಈ ಹಿನ್ನೆಲೆಯಲ್ಲಿಯೆ ಚರಿತ್ರೆಯು ಸಮಗ್ರವಾಗಿರಬೇಕಾಗಿರುವುದರಿಂದ ಸಮಗ್ರತೆಗೆ ಸ್ಥಳೀಯ ಚರಿತ್ರೆಯು, ಅನಿವಾರ್ಯವಾದುದೆಂಬುದನ್ನು ಅಧ್ಯಯನಕಾರರಾದ ತೆಲಗಾವಿ ಯವರು ಕರ್ನಾಟಕಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗದಲ್ಲಿ ಸಂಶೋಧನಾ ತಂಡ ಕಟ್ಟಿ ಅದರ ಮೂಲಕ ಸ್ಥಳೀಯ ಆಕರಗಳನ್ನು ಸಂಶೋಧನಾ ಮೆಟ್ಟಿಲುಗಳನ್ನಾಗಿ ಮಾಡಿಕೊಂಡು ದುರ್ಗದ ಚರಿತ್ರೆ ಕಟ್ಟಿಕೊಡುವ ಜೊತೆಗೆ ಜನಸಾಮಾನ್ಯರಾದ, ಒನಕೆ ಓಬವ್ವ, ಪಾಳೆಯಗಾರರು, ಸ್ಮಾರಕಗಳ ದರ್ಶನ ಎಲ್ಲವನ್ನು ಸ್ಥಳೀಯ ಆಕರಗಳಿಂದಲೇ ಸಂಶೋಧನೆ ಕೈಗೊಂಡು, ಸ್ಥಳೀಯ ಚರಿತ್ರೆ ರಚಿಸಿ ಸಾಧಿಸಿ ತೋರಿಸಿದ್ದು, ಇವರ ಪ್ರೇರಣೆಯಿಂದಲೇ ಹಲವು ಸ್ಥಳೀಯ ಅಧ್ಯಯನಗಳು ನಡೆದಿದ್ದು ಸಂಶೋಧನಾ ಲೋಕದಲ್ಲಿ ಹೊಸ ಪೀಳಿಗೆಯನ್ನು ಸೃಜಿಸುತ್ತಿದ್ದಾರೆ.

ಭಾರತದಲ್ಲಿ ಹಲವು ಭಾಷೆ, ಹಲವು ಧರ್ಮ, ಜನಾಂಗ, ಸಂಸ್ಕೃತಿ, ವೈವಿಧ್ಯ ಭೂಪ್ರದೇಶ ಜಾತಿ, ವರ್ಗ, ವರ್ಣ, ಮುಂತಾದ ಸಾಮಾಜಿಕ ಸ್ತರಗಳಿದ್ದು ಆ ಸ್ಥರಗಳಿಗೆ ತಕ್ಕಂತೆ ನಂಬಿಕೆ, ನಡವಳಿಕೆ. ಆಚಾರ-ವಿಚಾರ-ವಿವಾಹ-ವೇಷಭೂಷಣ, ಭಾಷೆ, ಆರಾಧನಕ್ರಮ, ಉದ್ಯೋಗ-ವ್ಯವಹಾರ, ಸಂಗೀತ-ನೃತ್ಯ, ಕಲೆ, ಮೂರ್ತಿಶಿಲ್ಪ-ವಾಸ್ತುಶಿಲ್ಪ, ಕ್ರೀಡೆ, ಅಭ್ಯಾಸ-ಹವ್ಯಾಸ ಎಲ್ಲದರಲ್ಲಿಯೂ ವೈವಿಧ್ಯತೆಯಿದೆ. ಇಂತಹ ವೈವಿಧ್ಯತೆಯೆ ಸ್ಥಳೀಯ ಚರಿತ್ರೆ ರಚನೆಗೆ ಆಕರವಾಗಿ ದೊರೆಯುವುದು ಮತ್ತು ಪ್ರತಿಯೊಂದಕ್ಕೂ ಚರಿತ್ರೆ ರಚಿಸುವುದು ಅಗತ್ಯವಿದೆ ಎಂಬುದನ್ನು ಇಂತವರಿಂದಲೇ ತಿಳಿಯಬಹುದು. ಮೇಲ್ನೋಟಕ್ಕೆ ವೈವಿಧ್ಯತೆ ಹೊರತಾಗಿಯೂ ರಾಷ್ಟ್ರೀಯ ಏಕತೆ ಮೈಗೂಡಿಸಿ ಕೊಂಡಿದ್ದರಿಂದ, ಒಂದೇ ರಾಷ್ಟ್ರದಡಿಯಲ್ಲಿ ಒಂದು ಗೂಡುವುದರಿಂದ ಸಮಗ್ರ ರಾಷ್ಟ್ರೀಯತೆಗೆ ಸ್ಥಳೀಯದಿಂದಲೂ ಅಪಾರ ಕೊಡುಗೆ ನೀಡುವುದು ಬಹುಮುಖ್ಯವಾಗಿದ್ದು, ಅದನ್ನು ಸಾಧಿಸಿ ತೋರಿಸಿದವರು ಲಕ್ಷ್ಮಣ್ ತೆಲಗಾವಿಯವರಾಗಿದ್ದಾರೆ.

೭.೮. ಮೌಖಿಕ ಚರಿತ್ರೆಯ ಚಿಂತನೆಗಳು

ಮೌಖಿಕ ಚರಿತ್ರೆ ಎಂದರೇನೆ ವಿಶಿಷ್ಟ, ಏಕೆಂದರೆ ಸ್ಮರಣಾಂತರ್ಗತ ಘಟನೆಗಳ, ಸಂಗತಿಗಳ ವಿಭಿನ್ನ ನಿರೂಪಣಾ ವಿಧಾನವಾಗಿದೆ. ಅನೇಕ ಲಿಖಿತ ಇತಿಹಾಸದ ವಿವರಗಳಲ್ಲಿ ಹಿನ್ನೆಲೆಯಾಗಿ ಆಗೋಚರ ರೂಪದಲ್ಲಿ ಹುದುಗಿರುತ್ತದೆ. ಜನ ಸಮುದಾಯಗಳ ಅಭಿವ್ಯಕ್ತಿಯು ಸಂಕೀರ್ಣ ರೂಪದಲ್ಲಿ, ಸಾಂಕೇತಿಕ ರೂಪದಲ್ಲಿ, ಹೊಸದೊಂದು ಸೆಳೆತ ನೀಡುವಂತಹದ್ದಾಗಿದೆ. ಲಿಖಿತತೆ ಮೌನವಹಿಸುವ ಹಂತದಲ್ಲಿ ಮೌಖಿಕತೆ ಸಂವಾದ ಆರಂಭಿಸುವುದು. ಹಾಗೆಯೇ ಚರಿತ್ರೆಯ ಧಾರೆಯು ನಿರಂತರತೆಯನ್ನು ಕಾಯ್ದುಕೊಳ್ಳಲು ಇಂತಹ ಮಾಹಿತಿ ಪ್ರಯೋಜನಕಾರಿಯಾಗಿದೆ. ಮೌಖಿಕ ಮಾಹಿತಿಯನ್ನು ಮರುವ್ಯಾಖ್ಯಾನಕ್ಕೊಳಪಡಿಸಿ, ಸಂಸ್ಕರಿಸಿದ ಮಾಹಿತಿಯನ್ನೊಳಗೊಂಡ ಮೌಖಿಕ ಇತಿಹಾಸವೂ ದಾಖಲೆಯಾಧಾರಿತ ಇತಿಹಾಸದಷ್ಟೇ ಮೌಲಿಕವಾದುದು. ಪಾರಂಪಾರಿಕ ಲಿಖಿತ ಇತಿಹಾಸಕ್ಕೆ ಸಂವಾದಿಯಾಗಿ ಮೌಖಿಕ ಇತಿಹಾಸ ಇಂದು ತನ್ನ ನೆಲೆಯನ್ನು

ಕಂಡುಕೊಳ್ಳುತ್ತದೆ. ಆದರೆ ದೀರ್ಘಾನುಭವ ಮತ್ತು ಆಳ ಅಧ್ಯಯನಗಳ ನೆರವಿನಿಂದ ಮಾಹಿತಿ ಕ್ರೋಢೀಕರಿಸಿ ವಿಶ್ಲೇಷಿಸಬೇಕಾಗುತ್ತದೆ.

ಮೌಖಿಕ ಚರಿತ್ರೆಯು ಜಡತೆಯ ಸ್ಥಿತಿಯಲ್ಲಿದ್ದು, ಅದು ಚಲನಶೀಲತೆಯನ್ನು ಹೇಳಲಾರದು. ಬದಲಾವಣೆಯನ್ನು ಒಪ್ಪಿಕೊಳ್ಳಲಾರದು ಎನ್ನುವ ಕೆಲವರ ಉದಾಸೀನತೆಯಿಂದಾಗಿ ತಿರಸ್ಕಾರಕ್ಕೆ ಒಳಪಟ್ಟ ಆದರೆ ಅದೆಷ್ಟೋ ಬಾರಿ ಸತ್ಯವನ್ನು ಒಳಗೊಂಡಂತಹ ಜೀವಂತತೆಯನ್ನು ಕಾಣಬಹುದಾಗಿದೆ. ಹಾಗಾಗಿಯೆ ಆಫ್ರಿಕಾಖಂಡದ ಚರಿತ್ರೆ ರಚನಾಕಾರ ಜಾನ್‌ವ್ಯಾನಸಿನ್‌ನ ಅನುಭವವೆಂದರೆ ಬದುಕಿರುವ ಮಾನವರಿಂದ ಸಂಗ್ರಹಿಸಿರುವ ಆಧಾರ, ಇವೇ ಮೌಖಿಕ ಸಾಕ್ಷ್ಯ ಏಕೆಂದರೆ ಇವು ಪೀಳಿಗೆಯಿಂದ ಪೀಳಿಗೆಗೆ ವರ್ಗವಣೆಗೊಂಡು ವ್ಯಕ್ತಿಯ ಸ್ಮೃತಿಕೋಶದಿಂದ ಬದುಕಿನ ಸಾಂದರ್ಭಿಕ ಸಂಬಂಧದ ಅನುಭವದ ತಿರುಳು ಎನ್ನುತ್ತಾರೆ ಮತ್ತು ಅದರ ಮೂಲಕವೇ ಇತಿಹಾಸ ರಚಿಸಿ ಸಾಧಿಸಿ ತೋರಿಸಿದ್ದಾರೆ.

ಕೆಲವು ಸಂಶೋಧಕರ ಪ್ರಕಾರ ಅನುಷಂಗಿಕ ಆಕರ ಜಡವಾದುದು, ಚಲನಶೀಲರಹಿತ ವಾದುದು. ಪರಿವರ್ತನಾರಹಿತವಾದುದುದೆಂದು ತಿರಸ್ಕರಿಸಿದರೂ, ಮೌಖಿಕ ಎನ್ನುವುದು ಕೇವಲ ಭಾಷೆಯಲ್ಲ, ಅದೊಂದು ಸಂಸ್ಕೃತಿ ಮತ್ತು ಜೀವನ ಕ್ರಮವಾಗಿದೆ. ಅಕ್ಷರ ಪೂರ್ವದ ಪಾರಂಪರಿಕ ಜಗತ್ತಿನ ಅನಾವರಣವೂ ಆಗುತ್ತದೆ. ಏಕೆಂದರೆ ಮೌಖಿಕ ಸಾಹಿತ್ಯದಲ್ಲಿ ಆಯಾ ಪ್ರಾಂತದಲ್ಲಿ ಪ್ರಸಿದ್ಧಿ ಪಡೆದ ಮತ್ತು ಹಾಳಾದ ದೇವಸ್ಥಾನ, ಗ್ರಾಮದೇವತೆ, ನಾಯಕ, ಪವಾಡ ಪುರುಷರ, ಊರು-ಪರ್ವತ, ನದಿ-ಕೆರೆ ಇತ್ಯಾದಿಗಳು ಕೂಡ ಹೇಗೆ ಸೃಷ್ಠಿಯಾದವು ಎಂಬುದನ್ನು ಮೌಖಿಕ ಚರಿತ್ರೆಯು ತಿಳಿಸಿಕೊಡುತ್ತವೆ. ಕೆಲವು ಸಲ ಇಲ್ಲಿನ ಸಾಹಿತ್ಯ ಕಾಲದಿಂದ ಕಾಲಕ್ಕೆ ವ್ಯಕ್ತಿಯಿಂದ ವ್ಯಕ್ತಿಗೆ, ಪ್ರದೇಶದಿಂದ ಪ್ರದೇಶಕ್ಕೆ ಜಗಳವಾಗುವಾಗ, ಆಧುನಿಕತೆಯ ಭರಾಟೆಯಿಂದ ಹೊಸ ರೂಪ ಪಡೆದುಕೊಳ್ಳುತ್ತಾದರೂ ಸತ್ಯದ ಹುಡುಕಾಟ ಪ್ರಯಾಸವಾದರೂ, ಸತ್ಯವನ್ನು ದರ್ಶಿಸಬಹುದಾಗಿದೆ.

ಜನಪದದ ಮೂಲಕ ಸಾಹಿತ್ಯವೂ ಹಲವು ರೀತಿಯಲ್ಲಿದ್ದು ಅವುಗಳ ಮೂಲಕ ಚರಿತ್ರೆಯನ್ನು ಮೌಖಿಕವಾಗಿಯೇ ರಚಿಸಬಹುದಾಗಿದೆ.

೬.೯. ಸಮಕಾಲೀನ ಚರಿತ್ರೆ ಕುರಿತ ಚಿಂತನೆಗಳು

ಸಮಕಾಲೀನ ಚರಿತ್ರೆಯ ಪರಿಕಲ್ಪನೆ ಇಂದಿನ ಯುಗದ ಅನಿವಾರ್ಯತೆಯಾಗಿದೆ. ಪ್ರತಿಯೊಂದು ವಿಷಯವನ್ನು ಪರಿಕಲ್ಪನೆಯೆಂದೆ ಭಾವಿಸಬೇಕಾಗಿದೆ. ಪರಿಕಲ್ಪನೆ ಎಂದರೆ, ಯಾವುದಾದರೊಂದು ವ್ಯವಸ್ಥೆಯನ್ನು, ಪ್ರಕ್ರಿಯೆಯನ್ನು ಅಥವಾ ವಿಧಾನವನ್ನು ಅಭಿವ್ಯಕ್ತಿಸುವ ಒಂದು ಪದ ಅಥವಾ ಸಮುಚ್ಚಯವಾಗಿದೆ. ಯಾವುದೇ ಒಂದು ಸಂಗತಿಯನ್ನು ಅಥವಾ ಒಂದು ವಿಷಯವನ್ನು ಕ್ರಮಬದ್ಧವಾಗಿ ಅಧ್ಯಯನ ಮಾಡಲು ಕೆಲವು ಮೂಲಭೂತ ಪರಿಕಲ್ಪನೆಗಳನ್ನು ಹೊಂದಿರುತ್ತವೆ. ಆ ಕಲ್ಪನೆಗಳ ಮೂಲಕವೆ ಒಂದು ಸಂಗತಿಯ ವೈಜ್ಞಾನಿಕ ಅಧ್ಯಯನಕ್ಕೆ ನೆರವಾಗುತ್ತದೆ.

ಮೂಲಭೂತ ಪರಿಕಲ್ಪನೆಗಳ ಬಗ್ಗೆ ಸಾಮಾನ್ಯವಾಗಿ ಚಿಂತಕರಲ್ಲಿ ಒಮ್ಮತದ ಅಭಿಪ್ರಾಯವಿರುತ್ತದೆ. ಅಲ್ಪ-ಸ್ವಲ್ಪ ಭಿನ್ನಾಭಿಪ್ರಾಯಗಳಿದ್ದರೂ ಅದು ನಗಣ್ಯ. ಒಂದು ಅಧ್ಯಯನದ ಶಿಸ್ತು ಬೆಳೆಯುತ್ತಾ ಹೋದಂತೆ ಅಲ್ಲಿರುವ ಪರಿಕಲ್ಪನೆಗಳು ಕೂಡ ತಮ್ಮ ಅರ್ಥವ್ಯಾಪ್ತಿಯಲ್ಲಿ ವಿಸ್ತಾರವನ್ನು ಕಂಡುಕೊಳ್ಳುತ್ತವೆ. ಅದೇ ವೇಳೆಗೆ ಯಾವುದೆ ಒಂದು ಶಾಸ್ತ್ರದಲ್ಲಿಯ ಮೂಲ ಪರಿಕಲ್ಪನೆಗಳನ್ನು ಸರಿಯಾಗಿ ಗ್ರಹಿಸದಿದ್ದರೆ ಆ ಶಾಸ್ತ್ರವನ್ನು ಅರ್ಥೈಸಿಕೊಳ್ಳುವುದು ತುಂಬಾ ಕಷ್ಟವಾಗುತ್ತದೆ.

ಅಧ್ಯಯನಿಸಲರ್ಹವಾದ ಪ್ರತಿ ಸಂಗತಿಗೂ ಪರಿಕಲ್ಪನೆಗಳಿದ್ದು, ಸಮಾಜವಿಜ್ಞಾನವು ಕೆಲವು ಮೂಲಭೂತ ಕಲ್ಪನೆಗಳನ್ನು ಹೊಂದಿದೆ. ಉದಾಹರಣೆಗೆ ಅರ್ಥಶಾಸ್ತ್ರದಲ್ಲಿ ಬೇಡಿಕೆ, ಉತ್ಪಾದನೆ, ಉಪಯೋಗ, ವಿತರಣೆ ಮುಂತಾದವು ಮೂಲ ಕಲ್ಪನೆಗಳಾಗಿ ಗುರುತಿಸಿಕೊಂಡರೆ, ಸಮಾಜಶಾಸ್ತ್ರದಲ್ಲಿ ಸಮಾಜ, ಸಮುದಾಯ, ಸಂಘ ಸಂಸ್ಥೆ, ಸಂಸ್ಕೃತಿ ಮುಂತಾದವು ಮೂಲ ಪರಿಕಲ್ಪನೆಗಳಾಗಿವೆ. ಹಾಗೆಯೆ ಚರಿತ್ರೆಯ ಸಂದರ್ಭದಲ್ಲಿಯೂ ಹಲವು ತರದ ಮೂಲಭೂತ ಪರಿಕಲ್ಪನೆಗಳನ್ನು ಹೊಂದಿರುತ್ತದೆ. ಆದರೆ ನಾವು ಈಗ ನಿರೂಪಿಸುವ ಚರಿತ್ರೆಯು ಸಮಕಾಲೀನ ಚರಿತ್ರೆಯ ಪರಿಕಲ್ಪನೆಯಾಗಿದ್ದು, ಸಮಕಾಲೀನವು ಯಾವ ಪರಿಕಲ್ಪನೆ ಒಳಗೊಳ್ಳುವುದು, ಒಳಗೊಂಡ ಪರಿಕಲ್ಪನೆಯು ಚಾರಿತ್ರಿಕ ಲೋಕಕ್ಕೆ ಯಾವ ರೀತಿಯ ಕೊಡುಗೆ ನೀಡಬಲ್ಲದು ಎಂಬುದನ್ನು ವಿಶ್ಲೇಷಿಸಲಾಗಿದೆ.

ಸಮಕಾಲೀನತೆ

ಸಮಕಾಲೀನ ಸಂದರ್ಭವನ್ನು ಗ್ರಹಿಸುವುದಾದರೆ, ಸರ್ವ ಕ್ಷೇತ್ರಗಳಲ್ಲೂ ಜಾಗತಿಕ ವಿದ್ಯಾಮಾನಗಳು ಬದಲಾಗುತ್ತಿರುವುದರಿಂದ ಅದರ ಒತ್ತಡಕ್ಕೂ ಅಥವಾ ಅದರ ಮೇಲಿನ ಮೋಹಕ್ಕೂ ಅಥವಾ ಬದುಕನ್ನು ಕಟ್ಟಿಕೊಳ್ಳಲಿಕ್ಕೂ ಒಟ್ಟಾರೆಯಾಗಿ, ಅದರೊಂದಿಗೆ ಮಾನವನು ಬದಲಾಗುತ್ತಿದ್ದಾನೆ. ಮಾನವ ಬದಲಾಗುತ್ತಿರುವುದರಿಂದ, ಆತನ ಸುತ್ತಮುತ್ತಲಿನ ಪರಿಸರವೂ ಬದಲಾಗುತ್ತಿರುವುದರಿಂದ ಸಮಾಜವು ಅನಿವಾರ್ಯವಾಗಿ ಬದಲಾಗುವ ಸಂದರ್ಭಕ್ಕೆ ಬಂದಿದೆ. ಬದಲಾವಣೆಯ ಆ ಪೂರಕ ಶಕ್ತಿಗಳೆಂದರೆ ಹತ್ತು ಹಲವು, ಹಾಗಾಗಿಯೆ ಅಧ್ಯಯನ ಶಾಖೆಗಳು ಅಪರಿಮಿತ ಉಗಮವಾಗುತ್ತಲಿವೆ. ಆದ್ದರಿಂದ ಎಲ್ಲವನ್ನು ವಿಜ್ಞಾನ ಮತ್ತು ತಂತ್ರಜ್ಞಾನದ ತಂತ್ರಗಳ ಮೂಲಕ ಬದುಕಿನ ಪ್ರತಿ ಆಯಾಮವು ಅನ್ವೇಷಣೆಯಾಗುತ್ತಿದೆ. ಇವೆಲ್ಲವುಗಳನ್ನು ಅರಗಿಸಿಕೊಂಡು ಸಮಕಾಲೀನ ಸಂದರ್ಭದಲ್ಲಿ ಸಮಕಾಲೀನತೆಗೆ ತಕ್ಕಂತೆ ಚರಿತ್ರೆಯನ್ನು ರಚಿಸಬೇಕಾಗಿದೆ. ಆದರೆ ಸಮಕಾಲೀನ ಸಂದರ್ಭದಲ್ಲಿ ಚರಿತ್ರೆ ರಚಿಸುವುದೆಂದರೆ ತಮಾಷೆಯ ಮಾತಲ್ಲ ಅಥವಾ ಒಂದು ಸಂಗತಿಯನ್ನು ಹಿಗ್ಗಿಸುವುದು. ಆ ಹಿಗ್ಗಿಸಿದ ಚರಿತ್ರೆಯನ್ನು ಆಧುನಿಕ ಸಲಕರಣೆ ಬಳಸಿಕೊಂಡು ಹೇಳುವುದಷ್ಟೆ ಆಗಿರದೆ ಚರಿತ್ರೆ ರೂಪಿಸಿದ ಮೇಲೆ ಇವತ್ತಿನ ವಿದ್ಯಮಾನಕ್ಕೆ ತಕ್ಕ ಉತ್ತರ ಕೊಡಬೇಕಾಗಿದೆ.

ಇತ್ತೀಚಿನ ಕೆಲವು ಸಂಶೋಧಕರೆನಿಸಿಕೊಂಡವರು, ಕೆಲವು ಅಪ್ರಸ್ತುತ ಸಂಶೋಧಕರು ಸರಿಯಾದ ಸಾಕ್ಷಿಗಳಿಲ್ಲದ ಚರಿತ್ರೆ ರಚಿಸಿ ಯಾವುದೆ, ಒಂದು ಡ್ಯಾಮೇಜ್ ಸ್ಟೇಟ್‌ಮೆಂಟ್ ಕೊಟ್ಟು ಹೆಸರನ್ನು ಗಳಿಸಿಕೊಳ್ಳುವವರನ್ನು ಕಾಣುತ್ತೇವೆ. ಕೆಲವು ಸಲ ಒಂದು ಕೋಮು

ಮತ್ತೊಂದು ಕೋಮಿನೊಂದಿಗೆ ಸಂಘರ್ಷಿಸುವಂತ ಸ್ಥಿತಿಯು ಇಂಥವರಿಂದ ಸಾಧ್ಯವಾಗಿದೆ. ಆದ್ದರಿಂದ ಸಮಕಾಲೀನ ಚರಿತ್ರೆಯ ಹೆಸರಿನಲ್ಲಿ ಸಂಘರ್ಷ ಉಂಟುಮಾಡದೆ ವರ್ತಮಾನವನ್ನು ಗಟ್ಟಿಗೊಳಿಸುವಂತ ಚರಿತ್ರೆಯು ಸಮಕಾಲೀನ ಸಂದರ್ಭದ ಜರೂರಾಗಿದೆ.

ಸಮಕಾಲೀನ ಚರಿತ್ರೆಯ ವಿಶಿಷ್ಟವೆಂದರೆ ಈ ಹಿಂದಿನಂತೆ ರಾಜಕೀಯ ಅಥವಾ ಪ್ರಭುತ್ವವನ್ನೆ ಮುಖ್ಯ ಕೇಂದ್ರಬಿಂದುವನ್ನಾಗಿ ಮಾಡಿಕೊಂಡು ಸೃಜಿಸದೆ ಮಾನವೀಯ ಸಂಬಂಧದ ನೆಲೆಯಲ್ಲಿ ಹಲವು ಆಯಾಮ, ಹಲವು ಪರಿಕಲ್ಪನೆಯ ಶೋಧನೆ, ವಿಶ್ಲೇಷಣೆಗಳು ನಡೆಯುತ್ತಿವೆ. ಈಗಾಗಲೆ ಶೋಷಿತಗೊಂಡ ಪರಿಕಲ್ಪನೆಗಳು, ವ್ಯಕ್ತಿಗಳ ಪುನರ್ ಶೋಧನವು, ಚರಿತ್ರೆ ಅಧ್ಯಯನದ ಆಯಾಮಗಳು, ಪರಿಕಲ್ಪನೆಗಳು, ವಿಧಾನಗಳು, ಸಿದ್ಧಾಂತಗಳು, ದೃಷ್ಟಿಕೋನಗಳು ಸೃಷ್ಟಿಯಾಗುತ್ತಲೆ ಸೃಷ್ಟಿಯಾದ ದೃಷ್ಟಿಕೋನಗಳು ಅಧ್ಯಯನಕ್ಕೆ ಒಳಪಡುತ್ತಿದೆ. ಹಾಗಂತ ಸಂಪ್ರದಾಯಿಕ ವಿಧಾನಗಳು, ಚರಿತ್ರೆ ಮಾದರಿಯ ಅಧ್ಯಯನ ಕ್ರಮಗಳನ್ನು ದೂರ ತಳ್ಳಬೇಕಾಗಿಲ್ಲ. ಹಿಂದಿನ ಚರಿತ್ರೆಗಿಂತ ಸಮಕಾಲೀನ ಚರಿತ್ರೆ ಮಾನವ ಮಿಡಿತವಾಗಿ ಹೇಗೆ ಸ್ಪಂದಿಸಬಹುದಾಗಿದೆಂಬುದನ್ನು ಶೋಧಿಸುತ್ತಲೆ ಸಂಶೋಧನಾ ಲೋಕಕ್ಕೆ ಮತ್ತಷ್ಟು ಜ್ಞಾನ ಕೊಡುವ, ಮರೆತ ಸಂಗತಿಗಳನ್ನು ಅನಾವರಣಗೊಳಿಸಿ ನ್ಯಾಯ ಕೊಡಿಸುವ ಹೊಣೆಗಾರಿಕೆಯು ಇಂತಹ ಸಂಶೋಧಕರ ಮೇಲಿದೆ.

ಸಮಕಾಲೀನ ಚರಿತ್ರೆಯ ನಿರೂಪಣೆಯಲ್ಲಿ ಕಂಡುಬರುವ ಸ್ವರೂಪವೆಂದರೆ ವಿವಾದ. ವಿವಾದಗಳ ಕುರಿತು ಹಲವು ಅಧ್ಯಯನಕಾರರು ತಮ್ಮ ಅಧ್ಯಯನ ದಾರಿಗಳನ್ನು ಹೇಳುತ್ತಲೆ ಆ ಶೋಧನೆ ವಿಷಯಕ್ಕೆ ಹೊಸ ಕೊಡುಗೆ ನೀಡಬಲ್ಲವರಾಗಿದ್ದಾರೆ. ವಿವಾದಗಳಿಗೆ ತರ್ಕವೂ, ಆ ತರ್ಕಕ್ಕೆ ಅಧ್ಯಯನ, ಚಿಂತನೆಗಳು, ಚಿಂತನೆಗಳ ಮೂಲಕವೇ ಹೊಸ ಆದಿ ಹುಡುಕುವ ಅನ್ವೇಷಿಕ ಪ್ರವೃತ್ತಿ ತಾನಾಗಿಯೆ ಅಧ್ಯಯನಗಳಿಗೆ ಹಚ್ಚುವುದು. ಇದರಿಂದಾಗಿ ಒಂದು ಜ್ಞಾನಶಾಖೆಯು ಸಂಸ್ಕೃತಿಯ ಕೇಂದ್ರವಾಗಿ, ಸಮಾಜಮುಖಿಯಾಗಿಯೂ ಬಹುಮುಖಿ ನೆಲೆಗಳಲ್ಲಿ ಜ್ಞಾನಶಾಖೆ ವಿಸ್ತರಿಸಿಕೊಳ್ಳುತ್ತಾ ಹೊಸ ಸವಾಲುಗಳೊಂದಿಗೆ ಮುನ್ನಡೆಯುವಂತೆ ಮಾಡಿ ಅವಿತಿರುವ ಅಲಕ್ಷಿತವಾದ, ಅಸಂಖ್ಯಾತ ಒಳನೋಟಗಳು ಸಮಕಾಲೀನ ಸಂದರ್ಭದಲ್ಲಿ ಹೊರಹೊಮ್ಮುತ್ತಿವೆ.

ಪ್ರಸ್ತುತ ಚರಿತ್ರೆಯ ರಚನೆ ಅನ್ವೇಷಣದ ಸಂದರ್ಭದಲ್ಲಿ ದುರ್ಬಲರ, ಮಹಿಳೆಯರ, ನಿರ್ಗತಿಕರ ಅಲಕ್ಷಿತರ ಅನೇಕ ವಸ್ತುವಿಷಯಗಳು ಇಂದು ಹೆಚ್ಚೆಚ್ಚು ಪ್ರಧಾನಧಾರೆಗೆ ಬರುತ್ತಲೆ ಚರ್ಚೆಗೆ ಒಳಪಡುತ್ತಿದೆ. ಈ ಹಿಂದೆ ಅಂದುಕೊಂಡಂತೆ ಸಮಕಾಲೀನ ಸಂದರ್ಭದಲ್ಲಿ ಚರಿತ್ರೆಯು ವಾಸ್ತವದೊಂದಿಗೆ, ಅನುಸಂಧಾನದೊಂದಿಗೆ ಹೊಸ ಸೈದ್ಧಾಂತಿಕ ನೆಲೆಗಳ ಅಧ್ಯಯನವು, ಸಂಶೋಧನೆ ರೂಪಿಸುವಂತ ಪ್ರಯತ್ನ ಭರಾಟೆಯಿಂದಲೇ ಸಾಗುತ್ತಿರುವುದರಿಂದಾಗಿಯೆ. ಸಮಕಾಲೀನ ಸಂದರ್ಭದಲ್ಲಿ ಜಗತ್ತಿನಾದ್ಯಂತ ಚರಿತ್ರೆಯ ಜ್ಞಾನಶಾಖೆಗಳು ಅಪ್ರಸ್ತುತತೆಗಿಂತ ಹೆಚ್ಚು ಪ್ರಸ್ತುತಗೊಳ್ಳುತ್ತಿದೆ. ಚರಿತ್ರೆ ಕಟ್ಟುವ ಸಂದರ್ಭದಲ್ಲಿ, ಚರಿತ್ರೆಯಲ್ಲಿ ಯಾವ ವಸ್ತುಗಳನ್ನು ಕುರಿತಾಗಿ ಚರ್ಚೆಯಾಗಬೇಕೆಂಬುದಕ್ಕೆ ಸಂಬಂಧಿಸಿದಂತೆ ವಸ್ತುವಿಷಯಗಳು, ಸಂಗತಿಗಳು,

ಪರಿಕಲ್ಪನೆಗಳು ಮೇಲಿಂದ ಮೇಲೆ ಚರ್ಚಿಸಿ ಒಳಪಡಿಸುವುದೆ ಇಂದಿನ ಚರಿತ್ರೆಯ ನಿರೂಪಣೆಯ ಜಾಯಮಾನವಾಗಿದೆ.

ಇಂದಿನ ಜನಸಮುದಾಯದ ಸಮಸ್ಯೆಗಳಿಗೂ ಚರಿತ್ರೆಯ ಮೂಲಕವೆ ಕಾರಣ ಹುಡುಕಿಕೊಂಡು ಪರಿಹಾರಗಳನ್ನು ಕಂಡುಕೊಂಡು ಹುಡುಕುವ, ಉತ್ತರಿಸುವ ಹೊಸ ತರಹದ ಚೌಕಟ್ಟು ನಿರ್ಮಾಣಗೊಳ್ಳುವಂತಾಗಬೇಕಿದೆ. ಇಂತಲ್ಲಿ ಶಾಸ್ತ್ರೀಯವಾಗಿ ಅಧ್ಯಯನಶಿಸ್ತುಗಳನ್ನು ಧಿಕ್ಕರಿಸಿ ನಾನೇ ಬಹುದೊಡ್ಡ ಮೇಧಾವಿ ಅಂತ ಹೇಳದೆ, ಪ್ರತಿಯೊಂದು ಪರಿಕಲ್ಪನೆಗಳು ಅಧ್ಯಯನಶಿಸ್ತಿಗೆ ಒಳಪಡಿಸುವ ಹಾಗೂ ಅಧ್ಯಯನದ ವಿಧಾನಗಳನ್ನು ಅಳವಡಿಸಿಕೊಂಡು ಅಂತಿಮ ತೀರ್ಮಾನಕ್ಕೆ ಬರಬಹುದು. ಈ ಮೊದಲೆ ಹೇಳಿದಂತೆ ಯಾವೊಂದು ಪರಿಕಲ್ಪನೆಯು ಅಂತಿಮವಲ್ಲ. ಬದಲಾಗಿ ಜ್ಞಾನದ ವಿಸ್ತಾರಕ್ಕೆ, ವಿಸ್ತಾರದ ಅಧ್ಯಯನ ನೀಡಿದರೆ ಮಾತ್ರ ನಿರೂಪಣೆ, ವಿಶ್ಲೇಷಣೆ, ವ್ಯಾಖ್ಯಾನಗಳನ್ನು ವಸ್ತುನಿಷ್ಠವಾಗಿ ನೀಡಬಹುದಾಗಿದೆ. ಇಂಥಲ್ಲಿ ಅಧ್ಯಯನಕಾರನು ವಿಸ್ಕೃತ ಅಧ್ಯಯನ, ಅಭ್ಯಾಸ, ಅನುಭವ ವಿಶ್ಲೇಷಣಾ ಕೌಶಲ್ಯ, ತಾಳ್ಮೆ ನೋಡುವ ಪರಿ. ಹೇಳುವ ಪರಿಯು ಬೇಕಾಗುವುದರಿಂದಾಗಿಯೆ ಇ.ಬಿ. ಕಾರ್ಕ್ಸ್ ಎಂಬ ಇತಿಹಾಸಕಾರನ ಅಭಿಪ್ರಾಯ ಇತಿಹಾಸವು ಇತಿಹಾಸಕಾರ ಹಾಗೂ ಆತನಿಗೆ ಲಭ್ಯವಿರುವ ಮಾಹಿತಿಗಳೊಳಗೆ ಪರ್ಯಾಯವಾಗಿ ವರ್ತಮಾನ ಹಾಗೂ ಗತಕಾಲಗಳೊಳಗೆ ಏರ್ಪಡುವ ನಿರಂತರ ಸಂವಾದ ಎಂದು ವಿಶ್ವಾಸದಿಂದ ನುಡಿಯುತ್ತಾರೆ. ಹೀಗಾಗಿಯೆ ಸಮಕಾಲೀನದಲ್ಲಿ ಚರಿತ್ರೆಯ ವಸ್ತು ಬದಲಾದಂತೆ ಅದನ್ನು ನಿರ್ವಹಿಸುವ ಅಥವಾ ಕಟ್ಟಿಕೊಡುವ ವಿಧಾನಗಳು ಬದಲಾಗಬೇಕು. ಹೊಸ ಆಕಾರಗಳೊಂದಿಗೆ ವಿಶ್ಲೇಷಿಸುವ, ಉಪಯೋಗಿಸುವ ಹೊಸ ವಿಧಾನಗಳ ಬೆಳವಣಿಗೆಗೆ ತಾಂತ್ರಿಕ ಸ್ತರಗಳಲ್ಲಿ ನಡೆಯಬಹುದಾಗಿದೆ. ಸೈದ್ಧಾಂತಿಕ ದೃಷ್ಟಿಯಿಂದ ಇತಿಹಾಸದ ನಿರ್ವಚನೆಯು ಸಡಿಲಗೊಂಡು ಒಂದು ಬಗೆಯ ಮುಕ್ತ ಸ್ವಾತಂತ್ರ್ಯ ನೀಡಿದೆ ಮತ್ತು ಸಂಶೋಧನಾ ಕ್ಷೇತ್ರವೂ ವಿಸ್ತರಿಸಿದೆ. ಆದರೆ ಮುಕ್ತತೆಯ ಮೂಲಕ ಆ ಕ್ಷೇತ್ರವನ್ನು ಹೇಗೆ ನಿರ್ವಹಿಸಬೇಕೆಂಬುದು ಒಂದು ಸವಾಲಾಗಿಯೆಯಿದ್ದರೂ ಚರಿತ್ರೆ ಕಟ್ಟುವಾತನು ಮಾತ್ರ ಈ ಮೊದಲಿನ ಮತ್ತು ಪ್ರಸ್ತುತದ ಸಂಗತಿ ಎರಡು ಸರಿದೂಗಿಸಿಯೆ ಸಮಕಾಲೀನ ಇತಿಹಾಸ ಕೊಡುವುದು ಒಂದು ರೀತಿಯ ಆಶಾಭಾವದ ಪ್ರತೀಕವಾಗಿದೆ. ಏಕೆಂದರೆ ಸಮಕಾಲೀನ ಚರಿತ್ರೆಯಲ್ಲಿ ಸಣ್ಣಪುಟ್ಟ ಪರಿಕಲ್ಪನೆಗಳಾದ ವಿವಾಹ, ಕುಟುಂಬ, ಜಾತಿ, ಸಮುದಾಯ, ಜನಾಂಗ, ಸಮಾಜ, ಸ್ಥಳೀಯ, ಪ್ರಾದೇಶಿಕ ಮೌಖಿಕ ನೆಲೆಗಳಲ್ಲಿಯೂ ಶೋಧಿತಗೊಳ್ಳುವಂತಾಗಿದೆ. ಹಾಗಾಗಿ ಅಖಂಡತ್ವದ ಪೂರಕ ಪ್ರಕ್ರಿಯೆಗಳ ಘಟನೆಗಳು, ಅಧ್ಯಯನ ಮತ್ತು ರಚನಾ ಸಾಧ್ಯತಾ ವಲಯಗಳಾಗಿವೆ.

ಜನಪದರ ಬದುಕಿನ ವಿವಿಧ ಆಯಾಮ

ಜನಪದರ ಬದುಕಿನ ವಿವಿಧ ಆಯಾಮಗಳನ್ನು ಅರ್ಥೈಸಿಕೊಳ್ಳಲು ಯಾವ ಅಧ್ಯಯನ ವಿಧಾನವನ್ನು ಅನುಸರಿಸಬೇಕೆನ್ನುವುದು ಚರಿತ್ರೆ ಸಂಶೋಧನೆಯಲ್ಲಿ ಎದುರಾಗುವ ಬಹುದೊಡ್ಡ ಸವಾಲು. ಏಕೆಂದರೆ ಮಾನವನ ಬದುಕನ್ನು ಭೌಗೋಳಿಕ ಪರಿಸರ ಹಾಗೂ ಮಾನವ

ಪರಿಸರದಿಂದ ಬೇರ್ಪಡಿಸಿ ಅಧ್ಯಯನ ನಡೆಸಲು ಸಾಧ್ಯವಿಲ್ಲ. ಶ್ರೇಣೀಕೃತ ಸಾಮಾಜಿಕ ರಚನೆಯನ್ನು ಅರ್ಥೈಸಿಕೊಳ್ಳಬೇಕಾದರೆ ಜಾತಿಯಾಧಾರಿತ ಸಾಮಾಜಿಕ ರಚನೆಯ ವಿವಿಧ ಸ್ತರಗಳಲ್ಲಿನ ಪರಸ್ಪರ ಸಂಘರ್ಷ ಹಾಗೂ ಹೋರಾಟಗಳ ಅಧ್ಯಯನ ಅನಿವಾರ್ಯವೆನಿಸುತ್ತದೆ. ಶೋಷಣೆಗೆ ಒಳಪಡಿಸುವ ಹಾಗೂ ಶೋಷಣೆಗೆ ಒಳಗಾಗುವ ಜಾತಿ/ವರ್ಗಗಳೆಲ್ಲವೂ ಪ್ರಭುತ್ವ ಹಾಗೂ ಧರ್ಮ ಎನ್ನುವ ನಿರ್ಧಾರಕ ಶಕ್ತಿಗಳ ನಿಯಂತ್ರಣದ ಸಾಮಾಜಿಕ ವ್ಯವಸ್ಥೆಯ ಭಾಗಗಳೇ ಆಗಿರುತ್ತವೆ. ಗುಲಾಮಗಿರಿಯ ಕುರಿತು ಅಧ್ಯಯನ ನಡೆಸುವಾಗ ಗುಲಾಮಗಿರಿಗೆ ಕಾರಣವಾದ ಆರ್ಥಿಕ, ಭೂಮಾಲೀಕ ವರ್ಗಗಳು, ಭೂಮಿ ಹಾಗೂ ಬಂಡವಾಳದ ಪ್ರಾಧಾನ್ಯತೆ ಮುಂತಾದ ವಿಚಾರಗಳು ಜೊತೆ ಜೊತೆಗೆ ಬರುತ್ತವೆ. ಗುಲಾಮಗಿರಿಯ ಕುರಿತು ಪ್ರತ್ಯೇಕ ಅಧ್ಯಯನ ನಡೆಸುವುದೆಂದರೆ ಅದು ಗ್ರಹಿಕೆ ಅಥವಾ ದೃಷ್ಟಿಕೋನಕ್ಕೆ ಸಂಬಂಧಪಟ್ಟ ವಿಷಯವಾಗಿದೆ.

ಅಧ್ಯಯನ ಸಂದರ್ಭದಲ್ಲಿ ಗುಲಾಮಗಿರಿ ಒಂದು ಪ್ರತ್ಯೇಕ ಪರಿಕಲ್ಪನೆಯಾದಾಗ ಅದಕ್ಕೆ ಅದರದ್ದೇ ಆದ ವೈಧಾನಿಕತೆ ಹಾಗೂ ಸೈದ್ಧಾಂತಿಕತೆಗಳು ರೂಪುಗೊಳ್ಳುತ್ತವೆ. ಹಾಗಾಗಿ ಪರ್ಯಾಯ ಅಧ್ಯಯನ ವಿಧಾನವನ್ನು ಹುಟ್ಟು ಹಾಕುವುದೆಂದರೆ ಅಸ್ತಿತ್ವದಲ್ಲಿರುವ ವ್ಯವಸ್ಥೆಯನ್ನು ವಿಮರ್ಶಾತ್ಮಕವಾಗಿ ನೋಡಿ, ವ್ಯವಸ್ಥೆಯೊಳಗಿನ ಬಿರುಕುಗಳನ್ನು ಗುರುತಿಸಿ, ಅಲ್ಲಿನ ಜಾತಿ/ಸಮುದಾಯಗಳ ಬದುಕನ್ನು ಬಿಡಿಬಿಡಿಯಾಗಿ ಅಧ್ಯಯನಕ್ಕೆ ಒಳಪಡಿಸುವುದು ಎಂದರ್ಥ. ಯಾವುದೇ ವ್ಯವಸ್ಥೆಯನ್ನು ಸಮಗ್ರವಾಗಿ ನೋಡಿದಾಗ ಸಮಾಜದ ಮೇಲ್‌ಸ್ತರದ ವಿಚಾರಗಳಷ್ಟೇ ಅರ್ಥವಾಗಲು ಸಾಧ್ಯ. ಬಿಡಿಬಿಡಿಯಾಗಿ ನೋಡುವುರ ಮೂಲಕ ಅಧಿಕಾರದ ನೆಲೆಗಳು ಅಲಕ್ಷಿತ ವರ್ಗಗಳನ್ನು ಆವರಿಸಿದ ಬಗೆಯನ್ನು ತಿಳಿದುಕೊಳ್ಳಲು ಸಾಧ್ಯ. ವಿಶ್ವಾತ್ಮಕ ಮಾದರಿಗಳು ಸಿದ್ಧಮಾದರಿಗಳಾಗಿರುತ್ತವೆ ಹಾಗೂ ಅವು ಸ್ಥಳೀಯತೆಯನ್ನು ನಿಯಂತ್ರಿಸುವಷ್ಟು ಸಾಮರ್ಥ್ಯ ಹೊಂದಿರುವುದರಿಂದ ಪರ್ಯಾಯ ಅಧ್ಯಯನ ವಿಧಾನವನ್ನು ಸೃಜಿಸುವುದು ಅದು ಎಷ್ಟರಮಟ್ಟಿಗೆ ಪರ್ಯಾಯವಾಗಿರುತ್ತದೆ ಎನ್ನುವ ಪ್ರಶ್ನೆ ಅತ್ಯಂತ ಮುಖ್ಯವಾಗುತ್ತದೆ.[೧೭]

ಈಗಾಗಲೇ ತಿಳಿದಿರುವಂತೆ ಸಬಾಲ್ಟರ್ನ್ ಅಧ್ಯಯನ ಎನ್ನುವುದೇ ಚರಿತ್ರೆಯಲ್ಲಿ ಒಂದು ಪರ್ಯಾಯ ಅಧ್ಯಯನ ವಿಧಾನ. ಏಕೆಂದರೆ ಸಬಾಲ್ಟರ್ನ್ ಅಧ್ಯಯನವು ಪ್ರಭುತ್ವಕೇಂದ್ರಿತ ಅಧ್ಯಯನ ಮಾದರಿಗಳನ್ನು ಪ್ರಶ್ನಿಸುತ್ತಾ, ಬದಲಿ ಅಧ್ಯಯನ ಮಾದರಿಗಳನ್ನು ಕಟ್ಟಿಕೊಡುವ ಪ್ರಯತ್ನವನ್ನು ಮಾಡಿತು. ಇದರಿಂದಾಗಿ ಚರಿತ್ರೆಯ ಮೌಖಿಕ ನೆಲೆ, ಪ್ರಾದೇಶಿಕ ವಿದ್ಯಮಾನಗಳು ಹಾಗೂ ಅಧಿಕಾರ ಮತ್ತು ಸವಲತ್ತುಗಳಿಂದ ವಂಚಿತವಾದ ಜನಸಮುದಾಯಗಳು ಅಧ್ಯಯನಕ್ಕೆ ಒಳಪಡುವಂತಾಯಿತು. ಚರಿತ್ರೆಯನ್ನು ಜನಕೇಂದ್ರಿತ ನೆಲೆಯಲ್ಲಿ ಅಧ್ಯಯನ ನಡೆಸಬೇಕಾದರೆ ಈ ಬಗೆಯ ಪರ್ಯಾಯ ಅಧ್ಯಯನ ಮಾದರಿಗಳು ಅನಿವಾರ್ಯ. ಆದರೆ ಬಹುತೇಕ ಸಂದರ್ಭಗಳಲ್ಲಿ ಅಧ್ಯಯನಗಳು ಶೀರ್ಷಿಕೆಯಲ್ಲಿ ಪರ್ಯಾಯವಾಗಿ ಕಂಡುಬಂದರೂ, ಅಧ್ಯಯನ ವಿಧಾನದಲ್ಲಿ ಹಳೆಯ ಅಥವಾ ಸಾಂಪ್ರದಾಯಿಕ ಮಾದರಿಗಳನ್ನೇ ಅನುಸರಿಸುತ್ತಿರುತ್ತವೆ. ಇದಕ್ಕೆ

ಸಬಾಲ್ಟರ್ನ್ ಅಧ್ಯಯನವೂ ಹೊರತಾಗಿಲ್ಲ. ಆ್ಯಂಟನಿಯೋ ಗ್ರಾಂಶಿ, ರಣಜಿತ್ ಗುಹಾ, ಪಾರ್ಥ ಚಟರ್ಜಿ, ಡೇವಿಡ್ ಲಡ್ಡೆನ್ ಮುಂತಾದವರು ಪ್ರತಿಪಾದಿಸಿದ ಸಬಾಲ್ಟರ್ನ್ ಚಿಂತನೆಗಳು ಚರಿತ್ರೆ ಅಧ್ಯಯನಕ್ಕೆ ಹೊಸ ವೈಧಾನಿಕತೆ ಹಾಗೂ ಸೈದ್ಧಾಂತಿಕತೆಯನ್ನು ನೀಡಿರುವುದಂತೂ ನಿಜ. ಆದರೆ ನಂತರದ ಅವಧಿಗಳಲ್ಲಿ ಸಬಾಲ್ಟರ್ನ್ ಅಧ್ಯಯನ ಎನ್ನುವುದು ಒಂದು ಸೀಮಿತಾರ್ಥ ದಲ್ಲಿ ನಿರ್ವಚನೆಗೊಳ್ಳಲಾರಂಭಿಸಿತು. ಅಲಕ್ಷಿತ ನೆಲೆಗಳನ್ನು ಅಥವಾ ಸಬಾಲ್ಟರ್ನ್ ಧ್ವನಿಗಳನ್ನು ಗುರುತಿಸುವಲ್ಲಿ ಅಧ್ಯಯನಗಳು ವಿಫಲವಾದವು. ದಲಿತ, ಮಹಿಳೆ, ಬುಡಕಟ್ಟು, ಆದಿವಾಸಿ, ರೈತ ಮುಂತಾದ ಚರಿತ್ರೆಯ ತಳಹದಿ ಎಂಬುದಾಗಿಯೇ ಕರೆಯಲ್ಪಡುವ ವಿಚಾರಗಳು ಇಂದು ಅಧ್ಯಯನಕಾರರ ಆಸಕ್ತಿಯ ಕ್ಷೇತ್ರಗಳಾಗಿವೆ. ಈ ವಿಷಯಗಳ ಕುರಿತು ನಡೆದಿರುವ ಬಹುತೇಕ ಅಧ್ಯಯನಗಳು ವಾದ-ಪ್ರತಿವಾದಕ್ಕಷ್ಟೇ ಜೋತುಬಿದ್ದು ಪರ್ಯಾಯ ಅಧ್ಯಯನ ಮಾದರಿಗಳನ್ನು ಹುಟ್ಟು ಹಾಕಬೇಕಾದ ತಮ್ಮ ಮೂಲ ಉದ್ದೇಶವನ್ನೇ ಮರೆತುಬಿಟ್ಟಿವೆ. ಪ್ರಭುತ್ವ ಕೇಂದ್ರಿತ ಚರಿತ್ರೆಗೆ ಪರ್ಯಾಯವಾಗಿ ಜನಕೇಂದ್ರಿತ ಚರಿತ್ರೆಯನ್ನು ರಚಿಸುವುದೆಂದರೆ ಅದು ಪ್ರಭುತ್ವ ಕೇಂದ್ರಿತ ಚರಿತ್ರೆಯ ವಿಮರ್ಶೆ ಮಾತ್ರವಾಗಿರದೆ, ಜನರ ಚರಿತ್ರೆ ಎನ್ನುವ ಪರಿಕಲ್ಪನೆಯ ವ್ಯಾಖ್ಯಾನವೂ ಆಗಬೇಕಾಗುತ್ತದೆ. ಇಲ್ಲವಾದಲ್ಲಿ ಅದು ಕೇವಲ ಪ್ರಭುತ್ವವನ್ನು ವಿಮರ್ಶಿಸುವುದಕ್ಕೆ ಸಮಾಜದ ಕೆಳಸಮುದಾಯಗಳ ಚರಿತ್ರೆಯನ್ನು ಬಳಸಿಕೊಂಡಂತಾಗುತ್ತದೆ. ಈ ಅಧ್ಯಯನ ವಿಧಾನವನ್ನು ಪರ್ಯಾಯ ವಿಧಾನ ಎಂಬುದಾಗಿ ಕರೆಯಲು ಸಾಧ್ಯವಾಗುವುದಿಲ್ಲ. ಅದು ಪರ್ಯಾಯ ವಿಧಾನ ಎಂದೆನಿಸಿಕೊಳ್ಳಬೇಕಾದರೆ ಜನರ ಚರಿತ್ರೆಗೆ ಸಂಬಂಧಪಟ್ಟ ಸ್ಪಷ್ಟವಾದ ವೈಧಾನಿಕತೆ ಹಾಗೂ ಸೈದ್ಧಾಂತಿಕತೆಗಳು ರೂಪು ಪಡೆಯಬೇಕಾಗುತ್ತದೆ(ವಿಜಯ್‌ಪೂಣಚ್ಚ ತಂಬಂಡ: ಕೆಳವರ್ಗದ ಪ್ರತಿಭಟನೆ ಸಬಾಲ್ಟರ್ನ್ ಚರಿತ್ರೆ-ಬರವಣಿಗೆಕ್ರಮ ಮತ್ತು ವಿಮರ್ಶೆ-೨೦೦೯).

ಪರ್ಯಾಯ ಚರಿತ್ರೆ ರಚನೆ ಎಂದ ಕೂಡಲೆ ಈಗಾಗಲೆ ಬಳಕೆಯಲ್ಲಿದ್ದ ಆಕರಗಳನ್ನು ಬಿಟ್ಟು ಹೊಸ ಆಕರಗಳ ಹುಡುಕಾಟದಲ್ಲಿ ಪರ್ಯಾಯ ಎನ್ನುವುದು ಒಂದು ದೃಷ್ಟಿಕೋನ ಚರಿತ್ರೆಯು ಪ್ರಾಚೀನ ಕಾಲದಲ್ಲಿ ಪ್ರಭುತ್ವ ಪರವಾಗಿದ್ದರಿಂದ ಜನಸಾಮಾನ್ಯರ ಸಂಗತಿಗಳು ದಾಖಲಾಗಿಲ್ಲ. ಆದರೆ ಇಂದಿನಯುಗ ಪ್ರಜಾಪ್ರಭುತ್ವವಾದ್ದರಿಂದ ಎಲ್ಲಾ ಸಂಗತಿಗಳು ದಾಖಲೀಕರಣಕ್ಕೆ ಸಿದ್ಧ ಮಾದರಿಯನ್ನು ಪ್ರಶ್ನಿಸಿದರೆ ಮಾತ್ರ, ಸ್ಥಳೀಯ, ಪೌರಾಣಿಕ, ಮೌಖಿಕ ಚರಿತ್ರೆಯು ವಿಸ್ತಾರಗೊಳ್ಳುವುದಕ್ಕೆ ಅವಕಾಶವಿದೆ.

ಕಳೆದ ೬೦ ವರ್ಷಗಳಲ್ಲಿ ನಮ್ಮ ನಾಡಿನಲ್ಲಾದ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಸಂಶೋಧನಾತ್ಮಕ ವೈಜ್ಞಾನಿಕ, ಸಾಂಸ್ಕೃತಿಕ, ಸಾಹಿತ್ಯಿಕ ಇತ್ಯಾದಿ ಕ್ಷೇತ್ರಗಳಲ್ಲಿ ಆದ ಮುನ್ನಡೆಯನ್ನು ವಿಶ್ಲೇಷಿಸುವ ಹೊಣೆಗಾರಿಕೆ ಇತಿಹಾಸಕಾರರದ್ದು. ಕರ್ನಾಟಕದ ಬಾಹ್ಯ ಮತ್ತು ಆಂತರಿಕ ಸಮಸ್ಯೆ ಸವಾಲುಗಳನ್ನು ಗುರುತಿಸುವುದು ಅಷ್ಟೇ ಅಗತ್ಯ. ನೆಲೆ, ಜನ, ಭಾಷೆ, ಜನಾಂಗ, ಅನ್ನ, ಉದ್ಯೋಗ, ಮೀಸಲಾತಿ, ಅರ್ಹತೆ, ಆತ್ಮಹತ್ಯೆ, ಲಿಂಗತಾರತಮ್ಯ, ಭಾಷಾ ತಾರತಮ್ಯ, ಭ್ರೂಣಹತ್ಯೆ, ಭಯೋತ್ಪಾದನೆ ಮುಂತಾದವುಗಳಿಗೆ ಪರಿಹಾರ ಸೂಚಿಸುವ ಪ್ರಯತ್ನವೂ ಸಮಕಾಲೀನ ಚರಿತ್ರೆಯಿಂದ ಆಗಲೇಬೇಕು.

ಸಮಕಾಲೀನ ಚರಿತ್ರೆಯ ರಚನೆಯು ಒಂದು ಶಿಸ್ತುಬದ್ಧ ಪ್ರಬುದ್ಧ ವಿದ್ವಾಂಸ ಪಡೆಯಿಂದಲೇ ನೆರವೇರಿದೆ. ನೆರವೇರುತ್ತಲೇಯಿದೆ. ರಾಜಕೀಯದಾಚೆ ವಿವಿಧ ಮಗ್ಗಲುಗಳ ಹುಡುಕಾಟ ವಿಶ್ಲೇಷಣೆಗಳು ನಡೆಯುತ್ತಲಿವೆ. ವ್ಯಕ್ತಿ-ವಸ್ತುಗಳ ಮರುಶೋಧದ ಪ್ರಯತ್ನಗಳು ಕಂಡುಬರುತ್ತವೆ. ಚರಿತ್ರೆಯ ದೃಷ್ಟಿ-ಧೋರಣೆಗಳ ಮರುಚಿಂತನೆಯೂ ಸ್ವಲ್ಪಮಟ್ಟಿಗೆ ನಡೆದಿದೆ. ಉದಾಹರಣೆಗೆ, ಸಮಕಾಲೀನ ಚರಿತ್ರೆಗೆ ಸಂಬಂಧಿಸಿದಂತೆ ಪ್ರಾಚೀನ ಮಧ್ಯಕಾಲೀನ ಹಾಗೂ ಇವತ್ತಿನ ತನಕವೂ ಆಯಾ ಸಾಹಿತ್ಯದಲ್ಲಿ ಮೂಡಿರುವ ಕನ್ನಡನಾಡು-ಸಂಸ್ಕೃತಿಗಳ ಬೇರುಗಳನ್ನು ಹುಡುಕುವ, ಗುರುತಿಸುವ ಉತ್ಸಾಹವಿನ್ನೂ ಮುಂದುವರಿದಿದೆ.

ಆಧುನಿಕತೆ ಅಥವಾ ಬದಲಾವಣೆ ಎನ್ನುವುದು ಕೇವಲ ಮಾರುಕಟ್ಟೆ ಕೇಂದ್ರಿತವಾಗಿ ಕಾಣಿಸಿಕೊಂಡರೆ ಅದೊಂದು ಮೋಜಿನ ಪರಿಕಲ್ಪನೆಯಾಗಬಹುದೆ ಹೊರತು ಆಧುನಿಕ ಮನಸ್ಸು ರೂಪುಗೊಳ್ಳಲು ಸಾಧ್ಯವಿಲ್ಲ. ಇಲ್ಲಿ ಆಧುನಿಕ ಮನಸ್ಸು ಎಂದಾಗ ಮಡಿಮೈಲಿಗೆ ಗಡಿದಾಟಿದ, ಜಾತಿ ಧರ್ಮದ, ಚೌಕಟ್ಟನ್ನು ಮೀರಿದ ಹಾಗೂ ಮಾನವ ಧರ್ಮದಲ್ಲಿ ವಿಶ್ವಾಸವಿಟ್ಟಿರುವ ಮನೋಸ್ಥಿತಿ. ಇದು ಚರಿತ್ರೆಯ ಯಾವ ಅವಧಿಗಾದರೂ ಅನ್ವಯಿಸುವ ಮಾತೆ ಆಗಿದೆ. ಆ ಮನಸ್ಥಿತಿಯನ್ನು ಸಮಕಾಲೀನ ಸಂದರ್ಭದ ಅಧ್ಯಯನಕಾರರು ಅಳವಡಿಸಿಕೊಂಡ ನಿಮಿತ್ತ ಸಮಕಾಲೀನ ಚರಿತ್ರೆಗೆ ಹೊಸದೊಂದು ಪರಿಕಲ್ಪನೆ ನೀಡಿಯೆ ಮುಂದಾಗಿರುವುದರಿಂದ ಪ್ರತಿ ಅಧ್ಯಯನಕಾರ ವಿಶ್ವಾಸ ನಿರೀಕ್ಷೆಯಿಂದಲೆ ಸ್ವಾಗತಿಸಬೇಕಿದೆ.[೧೮]

ಸಮಕಾಲೀನ-ಆಧುನಿಕೋತ್ತರ ಚರಿತ್ರೆ ರಚನೆಯು ಒಂದು ಶಿಸ್ತುಬದ್ಧ, ಪ್ರಬುದ್ಧ ವಿದ್ವಾಂಸ ಪಡೆಯಿಂದಲೇ ನೆರವೇರಿದೆ, ನೆರವೇರತೊಡಗಿದೆ. ರಾಜಕೀಯದಾಚೆಯ ವಿವಿಧ ಮಗ್ಗಲುಗಳ ಹುಡುಕಾಟ ವಿಶ್ಲೇಷಣೆಗಳು ನಡೆಯುತ್ತಲಿವೆ. ವ್ಯಕ್ತಿ-ವಸ್ತುಗಳ ಮರುಶೋಧದ ಪ್ರಯತ್ನಗಳು ಕಂಡು ಬರುತ್ತಿದ್ದರು ಚರಿತ್ರೆಯ ದೃಷ್ಟಿ-ಧೋರಣೆಗಳ ಮರುಚಿಂತನೆಯು ನಡೆದಿದೆ. ಈ ಹಿಂದಿನ ಸಾಂಪ್ರದಾಯಿಕ ಚಿಂತನೆ-ನಿರೂಪಣೆಗಳನ್ನು ಪ್ರಶ್ನಿಸುವ ಸಾಮ್ರಾಜ್ಯಶಾಹಿ ದೃಷ್ಟಿಕೋನವನ್ನು ನಿರಾಕರಿಸುವ ರಾಷ್ಟ್ರೀಯವಾದಿ ಧೋರಣೆಯ ಮಿತಿಯನ್ನು ಗುರುತಿಸುವ, ದೇಶಿ ನೆಲೆಯನ್ನು ಪುನರ್‌ವಿಮರ್ಶಿಸುವ ಪ್ರಯತ್ನ ಇತ್ತೀಚಿನ ಬರವಣಿಗೆಗಳಲ್ಲಿ ಗುರುತಿಸಬಹುದಾಗಿದೆ. ಸಿದ್ಧ ಮಾದರಿಗಳನ್ನು ಮುರಿಯುತ್ತಲೇ ಅನ್ಯಮಾದರಿಗಳನ್ನು ಅನುಸರಿಸುವ, ಹೊಸ ಅರ್ಥಗಳನ್ನು ಸೃಷ್ಟಿಸುವ, ಬಹುಮುಖಿ ಅಧ್ಯಯನದ ಸಾಧ್ಯತೆಯನ್ನು ಹೆಕ್ಕಿ ತೆಗೆಯುವ ಪ್ರಕ್ರಿಯೆಯಲ್ಲಿ ಇಂಥ ವಿದ್ವಾಂಸರು ಸಕ್ರಿಯರಾಗಿರುವುದೊಂದು ಸ್ವಾಗತಾರ್ಹ ಬೆಳವಣಿಗೆ. ಆದರೆ ಪ್ರಚಲಿತವಿರುವ ಪಾಶ್ಚಾತ್ಯ ಮತ್ತು ಪೌರಸ್ತ್ಯ ಇತಿಹಾಸದ ಮಾದರಿಗಳು ಮತ್ತು ವ್ಯಾಖ್ಯಾನಗಳು ನಮ್ಮ ನೆಲಕ್ಕೆ ಸೇರಿದ ವ್ಯಕ್ತಿಗಳನ್ನು, ಸಮುದಾಯಗಳನ್ನು, ಪ್ರವೃತ್ತಿಗಳನ್ನು ಯಥಾವತ್ತಾಗಿ ನಿರೂಪಿಸುವಲ್ಲಿ ಸಹಕಾರಿಯೆ? ಎಂಬುದನ್ನು ಗಮನಹರಿಸಬೇಕಾಗಿದೆ. ಏಕೆಂದರೆ ಜಾನಪದೀಯ ಕರ್ನಾಟಕವನ್ನು ನಾನಾ ನೆಲೆಗಳಲ್ಲಿ ಅನ್ವೇಷಿಸುವಲ್ಲಿ ಬಳಕೆಗೊಳ್ಳಬೇಕಾದ ಭೌತಿಕ ಹಾಗೂ ಬೌದ್ಧಿಕ ಪರಿಕರಗಳ ಸ್ವರೂಪವೇ ಬೇರೆ. ಇದನ್ನು ನಮ್ಮದೇ ಇತಿಹಾಸ ಮೀಮಾಂಸೆಯೊಡನೆ ನಿಭಾಯಿಸುವುದು

ಹೆಚ್ಚು ಉಪಯುಕ್ತ. ಕನಿಷ್ಠ ಪಕ್ಷ ಪ್ರಮೇಯವನ್ನು ಪ್ರಚೋದಿಸಲಾದರೂ ಇಂಥದ್ದನ್ನು ಅನ್ವಯಿಸಿಕೊಳ್ಳಬಹುದು. ನಾವು ಸ್ವೀಕರಿಸಿರುವ ಯೂರೋಪಿನ ಅಧ್ಯಯನ ಮಾದರಿಗಳಿಂದ ನಮ್ಮದೇ ತಾಜಾ ವಿಚಾರಗಳು, ಪರಿಕಲ್ಪನೆಗಳು, ಅಧ್ಯಯನ ವಿಧಾನಗಳು ಇನ್ನಷ್ಟು ಪ್ರಫುಲ್ಲಗೊಳ್ಳುವುದಾದರೆ ಹೆಚ್ಚು ಪ್ರಯೋಜನವಾದೀತು. ನಮ್ಮ ಸಾಮುದಾಯಿಕ ಜ್ಞಾನ, ಆಶಯ, ಸಂವೇದನೆ, ಚೈತನ್ಯ, ಸಿದ್ಧಾಂತಗಳನ್ನು ನಿರ್ಲಕ್ಷಿಸದೆ ಹೊಸ ಅಧ್ಯಯನಾಯಾಮಗಳನ್ನು ನಮ್ಮಲ್ಲಿಯೇ ಕಂಡುಕೊಳ್ಳಲೆತ್ನಿಸುವುದು ಉಚಿತ.[೧೮]

ಪರ್ಯಾಯವಾಗಿ ಚರಿತ್ರೆಯನ್ನು ರಚಿಸಲು ಮುಂದಾದ ಹಲವು ಸಂಶೋಧಕರು ಅವಸರದಲ್ಲಿ ಸ್ಥಳೀಯ ಚರಿತ್ರೆ ರಚಿಸುವಲ್ಲಿ ಸಿದ್ಧ ಮಾದರಿಗಳನ್ನು ನಂಬಿಕೊಂಡ, ಪರಿಣಾಮ ಮೇಲುನೋಟಕ್ಕೆ ಪರ್ಯಾವೆಂಬಂತೆ ಕಂಡುಬಂದರು. ಸ್ಥಳೀಯ ರಚನೆಗೆ ಬೇಕಾದ ವಿಧಾನವನ್ನಾಗಲಿ ಅಥವಾ ನಿರೂಪಣೆ, ಬರವಣಿಗೆಯ ಕ್ರಮವನ್ನಾಗಲಿ ಕಂಡುಕೊಳ್ಳಲಾಗಲಿಲ್ಲ. ಆದ್ದರಿಂದ ಸ್ಥಳೀಯತೆಯನ್ನು ವಿಶ್ವಸಾತ್ಮಕ ಮಾದರಿಗಳೆ ನಿರ್ಧರಿಸಲಾರಂಭಿಸಿದವು. ಹಾಗಾಗಿಯೆ ಸ್ಥಳೀಯ ಚರಿತ್ರೆ, ಹೊಸ ಗ್ರಹಿಕೆ ಅಥವಾ ಅಧ್ಯಯನ ಕ್ರಮಗಳು ಸ್ಪಷ್ಟವಾಗಿ ನಿಖರವಾಗಿ ಹೊರಹೊಮ್ಮಲು ಸಾಧ್ಯವಾಗಲಿಲ್ಲ. ಇದೇ ಮಾತನ್ನು ಪ್ರಾದೇಶಿಕ, ಮೌಖಿಕ ಚರಿತ್ರೆಗೆ ಸಂಬಂಧಪಟ್ಟಂತೆಯೂ ಹೇಳಬಹುದಾಗಿದೆ.

ಪ್ರಾದೇಶಿಕ, ಮೌಖಿಕ, ಸ್ಥಳೀಯ ಚರಿತ್ರೆ - ಈ ಮೂರು ಒಂದಕ್ಕೊಂದು ಪೂರಕವಾದವು ಹಾಗೂ ಒಂದು ಮತ್ತೊಂದನ್ನು ಸಮರ್ಥಿಸಿಕೊಳ್ಳುವ ಹಾಗೂ ಪರಸ್ಪರ ಮಾಹಿತಿ ವಿನಿಮಯ ಮಾಡಿಕೊಳ್ಳುವ ಮುಖೇನ ತಮ್ಮ ಅಸ್ತಿತ್ವ ಕಂಡುಕೊಳ್ಳುವಂತಾಗಲೂ ನೆರವಾಗುತ್ತವೆ. ಸ್ಥಳೀಯ ಭಾಷೆ, ಸಾಹಿತ್ಯ, ಸಂಸ್ಕೃತಿಗಳು ಸ್ಥಳೀಯವಾಗಿಯೆ ಆಯಾ ಪ್ರದೇಶಗಳಲ್ಲಿ ಅವುಗಳಿಗೆ ಹೆಚ್ಚಿನ ಮಹತ್ವವಿರುವುದರಿಂದ ಹಾಗೂ ಅವು ಸ್ಥಳೀಯವಾಗಿಯೆ ಮುಖ್ಯ ಭೂಮಿಕೆಯಲ್ಲಿ ಕಾಣಿಸುತ್ತವೆ. ಹಾಗೆಯೆ ಕೆಲವು ಸಲ ತಮ್ಮ ವ್ಯಾಪ್ತಿಯಾಚೆಗೆ ಸ್ಪಷ್ಟ, ನಿಖರತೆಯಿಂದ ಕಾಣಿಸಲಾರದು. ಹಾಗಾಗಿಯೆ ಅವುಗಳ ಮಹತ್ವವನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಅಲ್ಲಿಯೇ ಜೀವಂತವಾಗಿರುವ ಪುರಾಣ, ಐತಿಹ್ಯ, ಸ್ಥಳನಾಮ, ಲಾವಣಿ, ಜನಪದ ಮಹಾಕಾವ್ಯಗಳು ಇನ್ನೂ ಮುಂತಾದ ಮೌಖಿಕ ರಚನೆಗಳು ಸ್ಥಳೀಯ ವೈಶಿಷ್ಟ್ಯತೆಗಳನ್ನು ಅರ್ಥೈಸಿಕೊಳ್ಳುವುದಕ್ಕೆ ಬಹುಮುಖ್ಯ ಆಕರವಾಗಿ ಕಂಡು ಬರುವವು.

ರಾಜಶಾಹಿ ಮಾದರಿಯ ಅಧ್ಯಯನಗಳಲ್ಲಿ ಸ್ಥಳೀಯ ಅಥವಾ ಮೌಖಿಕ, ಪ್ರಾದೇಶಿಕ ಅಧ್ಯಯನ ಸಾಧ್ಯವಾಗಲಾರದು. ಹಾಗಾಗಿ ಪ್ರಾದೇಶಿಕ, ಮೌಖಿಕ, ಸ್ಥಳೀಯ ಎನ್ನುವ ಪರಿಕಲ್ಪನೆಗಳು ಚರಿತ್ರೆ ಅಧ್ಯಯನದಲ್ಲಿ ಕಾಣುವಂತಾಯಿತು. ಆದರೂ ಕೂಡ ಕೆಲವು ಸತ್ಯ ಮತ್ತು ಸತ್ಯ ಭರಿತಧಾರೆಯಿಂದ ಹೊರಹೊಮ್ಮಿ ಹಂತ ಹಂತವಾಗಿ ವೈಭವೀಕರಣದತ್ತ ಹಾಗೂ ಶ್ರೇಷ್ಠತೆಯ ಪ್ರತಿಪಾದನೆಯಲ್ಲಿ ತೊಡಗಿದವು. ಹಾಗಂತ ಸ್ಥಳೀಯ ಅಧ್ಯಯನ ಎಂದ ಕೂಡಲೇ ಸ್ಥಳೀಯ ವಿಚಾರಗಳನ್ನು ಸೀಮಿತಗೊಳಿಸುವುದು ಎಂದರ್ಥವಲ್ಲ. ಬದಲಾಗಿ ಚರಿತ್ರೆಯನ್ನು ವಿವಿಧ ಭಾಗವನ್ನಾಗಿ ಮಾಡಿ ಪ್ರತಿಯೊಂದು ಭಾಗವೂ ಒಂದು ಮತ್ತೊಂದಕ್ಕಿಂತ ಯಾವು? ಎಂತಹ?

ಸಂಗತಿ ಒಳಗೊಂಡಿದೆ ಎಂಬುದನ್ನು ಅಧ್ಯಯನದ ಮೂಲಕವೆ ಶೋಧಿಸಬೇಕು. ಆದರೆ ಇದು ಚರಿತ್ರೆಯನ್ನು ಒಡೆಯುವ ಪ್ರಯತ್ನವೆಂದು ತಿಳಿಯಬಾರದು. ಬದಲಾಗಿ ಚರಿತ್ರೆಯನ್ನು ಸಮಗ್ರವಾಗಿ, ಬಹುವಿಧವಾಗಿ ಅರ್ಥೈಸಿಕೊಳ್ಳುವ ಪ್ರಯತ್ನ ಅಥವಾ ವಿಧಾನ ಎಂಬುದಾಗಿ ಪರಿಭಾವಿಸಬೇಕು. ಉದಾ:- ನಾವು ಈಗಾಗಲೇ ಅಧ್ಯಯನಿಸಿದಂತೆ ಸಬಾಲ್ಟರ್ನ್ ಅಧ್ಯಯನಗಳು ಸಮಾಜದ ಅಲಕ್ಷಿತ ಜನಸಮುದಾಯಗಳ ಅಧ್ಯಯನ ಕೈಗೊಂಡಿದ್ದರ ಪರಿಣಾಮವಾಗಿಯೆ ಚರಿತ್ರೆಯ ವ್ಯಾಪ್ತಿ ಮತ್ತಷ್ಟು ವಿಸ್ತರಿಸುತ್ತಾ ಕಣ್ಮರೆಯಾಗಿದ್ದ ಅಥವಾ ಉದ್ದೇಶಪೂರ್ವಕವಾಗಿ ಗೌಣವಾಗಿಸಿದ್ದ ಹೊಸ ವಿಚಾರಗಳು ಸತ್ಯಾಸತ್ಯಗಳು ಅನಾವರಣಗೊಂಡು ಸಮಗ್ರತೆಯೆಡೆಗೆ ಪಯಣಿಸುವಂತಾಯಿತು. ಆ ನೆಲೆಯಲ್ಲಿಯೆ ಅಧ್ಯಯನ ಸ್ವರೂಪ ಯಾವಾಗಲೂ ಸಮಗ್ರತೆಯೆಡೆಗೆ ಸಾಗುವ ಪ್ರಯತ್ನ ಮಾಡುತ್ತಿರುವುದು, ಮಾಡುತ್ತಿರಬೇಕೂ ಆದರೂ ಚರಿತ್ರೆಯಲ್ಲಿನ ಸಮಗ್ರತೆ ಪ್ರಯಾಸವಾದುದು. ಏಕೆಂದರೆ ಅದು ಯಾವಾಗಲೂ ಬಿಡಿ ಬಿಡಿಯಾಗಿಯೆ ಇರುವುದರಿಂದ ಸಮಗ್ರತೆ ಎನ್ನುವಂತಹದ್ದು ಆಗಲೇಬೇಕೆಂಬುದು, ಅನೇಕ ಬಾರಿ ಅಸಾಧ್ಯವಾಗಬಹುದು ಹಾಗೂ ಒಂದು ದೇಶದ ಚರಿತ್ರೆಯನ್ನು ಅಧ್ಯಯನಿಸಬೇಕಾದರೆ, ಸಿದ್ಧ ಮಾದರಿ ಬಿಟ್ಟು ಹಲವು ಬಗೆಯ ಹಲವು ತರದ ನಿಗೂಢವಾದ ಪರಿಕಲ್ಪನೆಗಳನ್ನು ಅಧ್ಯಯನ ಮಾಡಿದಾಗ ಸಮಗ್ರತೆಗೆ ಬಿಡಿಯಾದ ಪರಿಕಲ್ಪನೆಯು ಹೇಗೆ ಕೊಡುಗೆ ನೀಡಬಲ್ಲದು ಎಂಬುದನ್ನು ಕಾಣಬಹುದಾಗಿದೆ. ಈ ಸಂಗತಿ ಪ್ರಪಂಚದ ಎಲ್ಲಾ ರಾಷ್ಟ್ರದ ಚರಿತ್ರೆಗೂ ಅನ್ವಯಿಸುವುದು. ಅಲ್ಲದೆ ಇಲ್ಲಿಯತನಕ ಚರಿತ್ರೆಗೆ ಸೇರ್ಪಡೆಗೊಳ್ಳದೇ ಇರುವ ಅದೆಷ್ಟೋ ವಿಚಾರಗಳು ಮುಖ್ಯವಾಹಿನಿಗೆ ಬರಲು ಸಾಧ್ಯವಿದೆ.

ಚರಿತ್ರೆಗೆ ಹೊಸ ವಿಚಾರಗಳು ಸೇರ್ಪಡೆಯಾದಂತೆಲ್ಲಾ ಆ ಚರಿತ್ರೆ ಜೀವಂತಿಕೆಯಿಂದ ಕೂಡಿರಲು ಸಾಧ್ಯವಾಗುತ್ತದೆ ಹಾಗೂ ವರ್ತಮಾನದ ಸಂಗತಿಯಾಗಿ ಸದಾಕಾಲವೂ ಜನರ ಮನಸ್ಸಿನಲ್ಲಿರುತ್ತದೆ. ಉದಾ:- ಬಹುತ್ವದ ತಳಹದಿಯ ಮೇಲೆ ರಚಿತಗೊಂಡಿರುವ ಇಂಡಿಯಾವನ್ನು ಅರ್ಥೈಸಿಕೊಳ್ಳುವುದು ಚರಿತ್ರೆಕಾರರಿಗೆ ಅಥವಾ ಇನ್ನಿತರ ಯಾವುದೆ ಶಿಸ್ತಿನ ಅಧ್ಯಯನಕಾರರಿಗೆ ಅತ್ಯಂತ ಕಠಿಣವೂ ಮತ್ತು ಶ್ರಮದಾಯಕವೂ ಆಗುತ್ತದೆ. ಆದರೂ ಭಾರತದ ಚರಿತ್ರೆಗೆ ಸಂಬಂಧಿಸಿದಂತೆ ಹಲವು ಕೃತಿಗಳು ರಚನೆಗೊಂಡರೂ ಅವೆಲ್ಲವು ಭಾರತ ಚರಿತ್ರೆಯ ಶೇಕಡಾ ಅಲ್ಪ ಪ್ರಮಾಣದ ಮಾಹಿತಿಗಳನ್ನು ಒಳಗೊಂಡಿಲ್ಲ. ಕಾರಣ ಭಾರತವೇ ಅಂತಹದ್ದು ಬಹುಭಾಷೆ, ಬಹುಧರ್ಮ, ಬಹುಸಂಸ್ಕೃತಿ ಹಾಗೂ ವೈವಿಧ್ಯತೆಯಿಂದ ಕೂಡಿದ ಭೌಗೋಳಿಕತೆ ವಲಯ ಹೊಂದಿದೆ. ಕೆಲವೇ ಕೆಲವರು ವಿದ್ವತ್ ಸಂಪಾದಿಸಿಕೊಂಡು ಭಾಷೆಗಳಿಂದ ವೈದಿಕ ಸಾಹಿತ್ಯ, ಸಂಸ್ಕೃತ, ಹಿಂದಿಯ ಮೂಲಕ ಸಮಗ್ರವಾಗಿ ಅರ್ಥೈಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಒಂದು ದೇಶದ ಸಂಗತಿಗಳನ್ನು ಆಯಾ ಪ್ರದೇಶದ ಭಾಷೆ, ಸಾಹಿತ್ಯ ಹಾಗೂ ಚರಿತ್ರೆ ಇತ್ಯಾದಿಗಳನ್ನು ಆಯಾ ಪ್ರಾದೇಶಿಕ ಹಿನ್ನೆಲೆಯಿಂದಲೆ ಗ್ರಹಿಸಿ ಅರಗಿಸಿಕೊಳ್ಳಬೇಕಾಗುತ್ತದೆ. ಆ ರೀತಿ ವೈವಿಧ್ಯತೆಯಿಂದ ಕಂಡುಕೊಂಡಾಗ ಮಾತ್ರ ಆಯಾ ಪ್ರದೇಶದ ಸಂಸ್ಕೃತಿ ಹಾಗೂ ಆ ಸಂಸ್ಕೃತಿಯನ್ನು ಪ್ರಭಾವಿಸಿದ ಇನ್ನಿತರ ಸಂಸ್ಕೃತಿಗಳ ಪರಿಚಯವಾಗಲು ಸಾಧ್ಯ. ಪ್ರಸ್ತುತ ಅಧ್ಯಯನ ನಡೆಸುತ್ತಿರುವ ಭಾರತ

ಮತ್ತು ಕರ್ನಾಟಕ ಚರಿತ್ರೆ ಒಳಗೊಂಡ ಕೆಲವೇ ಆಯ್ದ ವಿಷಯಗಳನ್ನು ಮಾತ್ರ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯಗಳ ಹಿಂದೆ ಕೆಲವು ಸಲ ರಾಜಕಾರಣ ಇಲ್ಲವೆ ಒತ್ತಡ, ಸ್ವಾರ್ಥ, ಬೇಜವಾಬ್ದಾರಿತನ, ಆತುರತೆ, ಪ್ರತಿಷ್ಠೆಗಾಗಿಯೂ ಆಗಬಹುದಾಗಿದೆ.[೨೦]

ಇನ್ನೂ ಈಗಾಗಲೇ ಬೆಳಕಿಗೆ ಬಂದಿರುವ ಸಂಶೋಧನಾ ಕೃತಿಗಳಂತೂ ಆಯಾ ಸಂಶೋಧಕರ ಚಾರಿತ್ರಿಕ ಗ್ರಹಿಕೆ ಅಥವಾ ದೃಷ್ಟಿಕೋನದ ಹಿನ್ನೆಲೆಯಲ್ಲಿ ರಚನೆಗೊಳ್ಳುತ್ತಿರುತ್ತವೆ. ಈ ಕೃತಿಗಳಲ್ಲಿ ರಾಷ್ಟ್ರೀಯವಾದಿ, ಸಾಮ್ರಾಜ್ಯಶಾಹಿ, ಮಾರ್ಕ್ಸ್‌ವಾದಿ, ಸಬಾಲ್ಟರ್ನ್, ಆಧುನಿಕೋತ್ತರ ಮುಂತಾದ ಚಿಂತನಾಕ್ರಮಗಳು ಸಂಶೋಧನಾ ಕೃತಿಗಳಲ್ಲಿ ಪ್ರಧಾನವಾಗಿ ಕಂಡು ಬರುತ್ತವೆ. ಇಂಥದ್ದರ ನಡುವೆ ಕೆಲವೇ ಕೆಲವು ಪಂಥಗಳು ಚರಿತ್ರೆಯನ್ನು ಬಿಡಿ ಬಿಡಿಯಾಗಿ ವ್ಯಾಖ್ಯಾನಿಸುವ ಪ್ರಯತ್ನ ಮಾಡಿದವು. ಒಟ್ಟಾರೆ ಚರಿತ್ರೆಯನ್ನು ಅಖಂಡವಾಗಿ ಗ್ರಹಿಸಿ ನಿರೂಪಿಸಿದರೆ, ಕೆಲವು ಪಂಥಗಳು ಚರಿತ್ರೆಯನ್ನು, ಚರಿತ್ರೆ ಬರವಣಿಗೆಯನ್ನು ಮತ್ತಷ್ಟು ಸಂಕೀರ್ಣಗೊಳಿಸಿದವು. ವಾದ-ಪ್ರತಿವಾದ, ವೈಭವ, ಶ್ರೇಷ್ಠತೆ ಜನಪರ ಕಾಳಜಿ ಮುಂತಾದ ಹಿನ್ನೆಲೆಗಳಿಂದ ಕೂಡಿರುವ ಚರಿತ್ರೆ ಕೃತಿಗಳು ತಮ್ಮದೇ ಆದ ವಿಧಾನ ಮತ್ತು ಸಿದ್ಧಾಂತಗಳನ್ನು ಹೊಂದಿರುತ್ತದೆ. ವಾದ-ಪ್ರತಿವಾದಕ್ಕಷ್ಟೇ ಸೀಮಿತವಾದ ಬರವಣಿಗೆಗಳು ಹಾಗೂ ವೈಭವ ಮತ್ತು ಶ್ರೇಷ್ಠತೆಯನ್ನು ಸಾರುವ ಕೃತಿಗಳು ತಮ್ಮ ಧೋರಣೆ ಪೂರೈಸಿಕೊಳ್ಳಬಹುದಷ್ಟೆ ಹೊರತು ಜನಮುಖಿ ನಿರೂಪಣೆಗಳಾಗಿ ಪ್ರಕಟಗೊಳ್ಳಲು ಸಾಧ್ಯವಿಲ್ಲ. ಇವು ಏಕಮಾದರಿಯ ಮೂಲಕ ಚರಿತ್ರೆಯನ್ನು ಸಮಗ್ರವಾಗಿ ನೋಡುವ ಪ್ರಯತ್ನ ಮಾಡುತ್ತಿರುತ್ತವೆ. ಸಬಾಲ್ಟರ್ನ್ ಆಧುನಿಕೋತ್ತರವಾದ, ನವಚಾರಿತ್ರಿಕವಾದ ಮುಂತಾಗಿ ಚರಿತ್ರೆಯನ್ನು ಪರಿಭಾವಿಸಿ ಅಧ್ಯಯನ ನಡೆಸುವ ಚರಿತ್ರೆಯ ಹೊಸ ದೃಷ್ಟಿಕೋನಗಳು ಮೇಲ್ನೋಟಕ್ಕೆ ಸೈದ್ಧಾಂತಿಕ ಕಸರತ್ತಾಗಿ ಕಂಡು ಬಂದರೂ ಚರಿತ್ರೆ ಬರವಣಿಗೆಯನ್ನು ಪ್ರಭುತ್ವ ಕೇಂದ್ರತ್ವದಿಂದ ಪ್ರಜಾಕೇಂದ್ರಿತವಾಗಿ ಪರಿವರ್ತನೆಗೊಳಿಸುವ ಹಾಗೂ ಚರಿತ್ರೆಕಾರರ ಸ್ವಾತಂತ್ರ್ಯದ ಕುರಿತು ಗಂಭೀರವಾಗಿ ಚಿಂತನೆ ನಡೆಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಿರುವುದನ್ನು ಕಾಣುತ್ತೇವೆ.[೨೧]

ಚರಿತ್ರೆಯನ್ನು ವಿವಿಧ ಭಾಗವಾಗಿ ಮಾಡಿ ಅಧ್ಯಯನ ಮಾಡಿದ್ದರ ಪರಿಣಾಮ ಚರಿತ್ರೆಯ ಅಖಂಡ ನಿರೂಪಣೆಯೊಳಗಿನ ಧ್ಯೇಯಗಳು ಅನಾವರಣಗೊಳ್ಳುತ್ತಾ ಹೋಗುತ್ತವೆ. ಇಂತಹ ಅಧ್ಯಯನ ವಿಧಾನದಲ್ಲಿಯೆ ಸಮಾಜದ ಕೆಳಸ್ತರದ ಜನತೆ ಪ್ರಧಾನವಾಗಿ ಗುರುತಿಸಿಕೊಳ್ಳುತ್ತದೆ. ಪ್ರಭುತ್ವದ ಅಧಿಕಾರಶಾಹಿಗೆ ಬಳಕೆಯಾದ ಬಗೆಗಳು ಒಂದೊಂದಾಗಿ ತೆರೆದುಕೊಳ್ಳುತ್ತವೆ. ಆದರೆ ಅಲಕ್ಷಿತ ವರ್ಗಗಳು ಚರಿತ್ರೆಯ ಪ್ರತಿಯೊಂದು ಅವಧಿಯಲ್ಲೂ ಇದ್ದವು ಹಾಗೂ ಅವು ಇರಲೇಬೇಕು ಎನ್ನುವುದು ಶ್ರೇಣೀಕೃತ ಸಾಮಾಜಿಕ ರಚನೆಯ ನಿಯಮವಾಗಿತ್ತು. ಏಕೆಂದರೆ ಪ್ರಭುತ್ವ ತನ್ನ ವಿಸ್ತರಣೆ ಹಾಗೂ ಅಸ್ತಿತ್ವಕ್ಕಾಗಿ ಅವಲಂಬಿಸಿದ್ದೇ ಈ ಅಲಕ್ಷಿತ ವರ್ಗಗಳನ್ನು, ಕೃಷಿ-ಕೈಗಾರಿಕೆ ಬಂಡವಾಳ ಹಾಗೂ ಜ್ಞಾನಕೇಂದ್ರಿತ ಅರ್ಥ ವ್ಯವಸ್ಥೆಗಳೆಲ್ಲದರಲ್ಲೂ ಅಲಕ್ಷಿತ ಸಮಾಜ, ಸಂದಿಗ್ಧ ಸ್ಥಿತಿಯಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬರಬೇಕಾಯಿತು. ರೈತರು, ಕುಶಲಕರ್ಮಿಗಳು, ಮಹಿಳೆಯರು, ಸೈನಿಕರು ಮುಂತಾದ ಸಮುದಾಯಗಳು ರಾಜಶಾಹಿಗಾಗಿಯೆ

ದುಡಿದರು. ರಾಜಶಾಹಿ ಮಾತ್ರ ಚರಿತ್ರೆಯಲ್ಲಿ ದಾಖಲಾಗುವಂತೆ ಮಾಡಿದವು. ವಿಪರ್ಯಾಸವೆಂದರೆ ತಮ್ಮ ಶ್ರಮದ ಬದುಕು ಎಲ್ಲೂ ದಾಖಲಾಗದೇ ಸ್ಮೃತಿಗಳ ಮೂಲಕ ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿಯೆ ವರ್ಗವಣೆಗೊಂಡು ಜೀವಂತಿಕೆಯನ್ನು ಉಳಿಸಿಕೊಂಡವು. ಮೌಖಿಕ ಸ್ಮೃತಿಗಳೆ ಸಂದೇಶಗಳಾಗಿ ರವಾನೆಗೊಂಡು ಜನಮನದಲ್ಲಿ ಜೀವಂತವಾಗಿ ಸ್ಮೃತಿಪಟದಲ್ಲಿ ಅಜ್ಞಾತವಾಗಿಯೆ ಕುಳಿತಿವೆ. ಆದರೆ ಚರಿತ್ರೆಯ ರಾಜಶಾಹಿ ನೆಲೆಗೆ ಈ ನೆನಪುಗಳು ಬೇಕಾಗಿರಲಿಲ್ಲ. ಅದಕ್ಕೆ ಬೇಕಾಗಿದ್ದು ಸಂಪತ್ತು ಮಾತ್ರ. ರಾಜ್ಯದ ಬೊಕ್ಕಸಕ್ಕೆ ಹಣ ಸಂದಾಯ ಮಾಡಲು ರೈತರು ಮತ್ತು ವ್ಯಾಪಾರಸ್ಥರು, ರಾಜಶಾಹಿಯ ಹೆಗ್ಗಳಿಕೆ ಸಾರುವ ಅಥವಾ ಬಿಂಬಿಸುವ ಸ್ಮಾರಕಗಳ ನಿರ್ಮಾಣಕ್ಕೆ ಕುಶಲಕರ್ಮಿಗಳು, ರಾಜ್ಯದ ರಕ್ಷಣೆಗೆ ಸೈನಿಕರು ಹಾಗೂ ರಾಜಶಾಹಿಯ ಇಷ್ಟಗಳನ್ನು ಪೂರೈಸುವುದಕ್ಕೆ ಹಾಗೂ ಅದರ ಲಾಸ್ಯ ಮತ್ತು ವಿಲಾಸಿ ಜೀವನಕ್ಕೆ ಮಹಿಳಾ ವರ್ಗ, ಹೀಗೆ ರಾಜಶಾಹಿಗಾಗಿ ದುಡಿದು ಶ್ರಮವಹಿಸಿದವರ ಪಟ್ಟ ಬೆಳೆಯುತ್ತಾ ಹೋಗುತ್ತದೆ. ಸಮಾಜ ಹಾಗೂ ಸಮಾಜದೊಳಗಿನ ರಾಜಕಾರಣ ಹೇಗಿದೆಯೊ ಹಾಗೆ ಚರಿತ್ರೆ ರಚನೆ ಆಗಿದ್ದರಿಂದ ಚರಿತ್ರೆ ರಚನೆಯಲ್ಲಿ ಅಲಕ್ಷಿತ ವರ್ಗಗಳ ಚರಿತ್ರೆ ಅಥವಾ ಅನುಭವಗಳು ದಾಖಲಾಗಲಿಲ್ಲ.

ಅಲಕ್ಷಿತ ವರ್ಗಗಳ ಜೀವನ ಅನುಭವಗಳು ಚರಿತ್ರೆಯಲ್ಲಿ ಏಕೆ ದಾಖಲಾಗಲಿಲ್ಲವೆಂದರೆ ಚರಿತ್ರೆಕಾರರು ಅವುಗಳನ್ನು ಚರಿತ್ರೆಯ ಭಾಗ ಎಂಬುದಾಗಿ ಪರಿಗಣಿಸಿಲ್ಲ ಎಂಬುದು ಸಾರ್ವತ್ರಿಕ ಸತ್ಯವಾಗಿದೆ. ಅಲಕ್ಷಿತ ಸಮುದಾಯಗಳಿಗೆ ಅಧಿಕಾರ ಹಾಗೂ ಸವಲತ್ತುಗಳಿಂದ ಉದ್ದೇಶಪೂರ್ವಕವಾಗಿ ವಂಚಿತರನ್ನಾಗಿಸಿರುವುದರಿಂದ ಅವರಿಗೆ ಬದುಕೆಯಿಲ್ಲವೆಂದಲ್ಲ, ಬದಲಾಗಿ ಅವರಿಗೆ ಅವರದ್ದೇ ಆದ ಜೀವನಕ್ರಮ, ಲೋಕದೃಷ್ಟಿ ದೈವಗಳು, ತಾಂತ್ರಿಕತೆ ಹಾಗೂ ನಂಬಿಕೆಗಳು ಇದ್ದವು. ಒಬ್ಬ ಚರಿತ್ರೆಕಾರನ ಅಶಿಸ್ತಿನ ಪರಿಣಾಮವಾಗಿ ಯಾವುದೋ ಸಂದರ್ಭದ ಒತ್ತಡಕ್ಕೆ ಒಳಗಾಗಿದ್ದಾಗ, ಪೂರ್ವಗ್ರಹ ಪೀಡಿತನಾಗಿದ್ದಾಗ ಅಥವಾ ಸ್ಪಷ್ಟ ದೃಷ್ಟಿಕೋನ ಹೊಂದಿರದಿದ್ದರೆ ಇಂತಹ ಸೂಕ್ಷ್ಮ ವಿಚಾರಗಳು ಅರ್ಥವಾಗಲು ಅಥವಾ ಆದ್ಯತೆಯ ವಿಚಾರ ವಾಗಲು ಸಾಧ್ಯವಾಗುವುದಿಲ್ಲ. ಅಲಕ್ಷಿತ ವರ್ಗಗಳ ಅಧ್ಯಯನಕ್ಕೆ ನ್ಯಾಯ ಕೊಡಬೇಕಾದರೆ ಚರಿತ್ರೆಕಾರ ಇಲ್ಲಿಯವರೆಗೆ ಮರೆಮಾಚಿದ್ದ ಆಕರಗಳಿಗೆ ಮುಖಾಮುಖಿಯಾಗಿ ನಿಲ್ಲಬೇಕಾಗುತ್ತದೆ. ಏಕೆಂದರೆ ನಾವು ರಚಿಸಿರುವ ಚರಿತ್ರೆಯಲ್ಲಿನ ಆಕರಗಳೆಂದರೆ ಅಂತಃಪುರದ ಆಸ್ಥಾನದ ಪಂಡಿತರ ಬರಹ, ಸಂಸ್ಕೃತ ಗ್ರಂಥಗಳ ಅಲೌಕಿಕ ಚಿಂತನೆಗಳು ಪ್ರವಾಸಿಗರ ಕಥನಗಳು ಹಾಗೂ ರಾಷ್ಟ್ರೀಯವಾದಿ - ಸಾಮ್ರಾಜ್ಯಶಾಹಿ ಪರ ವಿರೋಧದ ನೆಲೆಯ ಬರಹಗಳು, ಕಟ್ಟಿಕೊಡುವ ಇಂಡಿಯಾದ ಶ್ರೀಮಂತಿಕೆಯ ರಮ್ಯ ಕಥನಾದಾಚೆಗೆ ಇಣುಕಿ ನೋಡುವುದು ಸಾಧ್ಯವಾದರೆ, ಅಲಕ್ಷಿತ ವರ್ಗಗಳ ಬದುಕನ್ನು ಕಟ್ಟುವ ಅಧ್ಯಯನ ವಿಧಾನವು ಸಾಧ್ಯವಾಗಬಲ್ಲದು.[೨೨]

ಉದಾ:- ಯುರೋಪಿನಲ್ಲಿ ಆ್ಯಂಟನಿಯೊಗ್ರಾಂಶಿ. ಇಂಡಿಯಾದಲ್ಲಿ ಚಟರ್ಜಿ, ರಣಜಿತ್‌ಗುಹಾ ಮುಂತಾದವರು ಹೊಸ ಬಗೆಯ ಅಧ್ಯಯನ ವಿಧಾನವನ್ನು ಹುಟ್ಟು ಹಾಕಿ ಚರಿತ್ರೆಯ

ವ್ಯಾಪ್ತಿಯನ್ನು ವಿಸ್ತರಿಸಿದ್ದೇ ಅಲ್ಲದೆ ಚರಿತ್ರೆಯನ್ನು ಅರ್ಥೈಸುವ ಹಾಗೂ ವಿಶ್ಲೇಷಿಸುವ ಹೊಸ ಗ್ರಹಿಕೆಯೊಂದನ್ನು ಸಂಶೋಧಕರ ಮುಂದಿಟ್ಟಿದ್ದಾರೆ.

ಅಲಕ್ಷಿತ ಸಮುದಾಯಗಳ ಚರಿತ್ರೆಯು ಯಾವುದೋ ಒಂದು ಕಾಲಘಟ್ಟದಲ್ಲಿ ರಚಿತವಾಗಿರುವಂತಹದಲ್ಲ. ಅವು ಚರಿತ್ರೆಯುದ್ದಕ್ಕೂ ಜೀವಂತಿಕೆಯಿಂದ ಹಾಗೂ ಅತ್ಯಂತ ಕ್ರಿಯಾಶೀಲವಾಗಿ ಇದ್ದಂತವು. ಅವುಗಳು ಸಮಾಜದಿಂದ ಅಂಚಿಗೆ ತಳ್ಳಲ್ಪಟ್ಟವು ಅಥವಾ ಅಧ್ಯಯನಕಾರರು ತಮ್ಮ ಅಧ್ಯಯನ ವ್ಯಾಪ್ತಿಯಿಂದ ಕೈಬಿಟ್ಟರು ಎನ್ನುವ ಕಾರಣಕ್ಕೆ ಮತ್ತೊಮ್ಮೆ ಅಲಕ್ಷಿತನ ಸಲ್ಲದು. ಹಾಗೆಯೇ ಅಲಕ್ಷಿತ ಸಮುದಾಯಗಳು ತಮಗೆ ತಾವೇ ಅಲಕ್ಷಿತವು ಅಲ್ಲ. ಇಲ್ಲಿ ಅಲಕ್ಷಿತ ಎನ್ನುವುದು ಅಧಿಕಾರ ಹಾಗೂ ಸವಲತ್ತುಗಳ ಪ್ರಶ್ನೆಯಾಗುತ್ತದೆ. ಈ ಪ್ರಶ್ನೆಯನ್ನು ತಾತ್ವಿಕವಾಗಿ ನೋಡಬೇಕಾಗುತ್ತದೆ. ಅಂಚಿಗೆ ತಳ್ಳಲ್ಪಟ್ಟ ಸಮುದಾಯಗಳು ಕೇಂದ್ರಕ್ಕೆ ಅತ್ಯಂತ ಅನಿವಾರ್ಯವಾಗಿದ್ದವು. ಇಲ್ಲಿ ಅನಿವಾರ್ಯತೆ ಎಂದರೆ ಅದು ದುಡಿಮೆಗೆ ಸಂಬಂಧಪಟ್ಟ ವಿಚಾರ. ಈ ಸಮುದಾಯಗಳ ನೆರವಿಲ್ಲದೇ ಯಾವ ರಾಜ್ಯವು ಅಸ್ತಿತ್ವಕ್ಕೆ ಬರಲು ಸಾಧ್ಯವಿರಲಿಲ್ಲ. ಅದೇ ರೀತಿ ಯಾವ ರಾಜನು ಚಕ್ರವರ್ತಿಯಾಗಿ ಮೆರೆಯಲು ಸಾಧ್ಯವಿರಲಿಲ್ಲ. ಕೆಳಸಮುದಾಯಗಳು ಶೋಷಣೆ, ದೌರ್ಜನ್ಯ ಬಡತನ ಮುಂತಾದವುಗಳಿಂದ ಜರ್ಜರಿತವಾಗಿದ್ದರೂ ಆತ್ಮವಿಶ್ವಾಸವನ್ನು ಕಳೆದುಕೊಳ್ಳಲಿಲ್ಲ. ತಮ್ಮದೇ ಆದ ವಿನೋದ, ಮನರಂಜನೆ, ಕ್ರೀಡೆ, ಸಂಪ್ರದಾಯ, ಆಚರಣೆ ಹಾಗೂ ಹಾಡುಗಳ ಮೂಲಕ ಬದುಕನ್ನು ಜೀವಂತವಾಗಿರಿಸಿಕೊಂಡವು. ಶತ ಶತಮಾನಗಳಿಂದಲೂ ಅವು ಶೋಷಣೆಯ ಜೊತೆಗೆಯೆ ಜೀವಂತಿಕೆಯನ್ನು ಉಳಿಸಿಕೊಂಡು ಬಂದಿವೆ ಎನ್ನುವುದೇ ಅವುಗಳ ಶಕ್ತಿ - ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ. ಪ್ರಸ್ತುತ ಸಮಸ್ಯೆ ಎಂದರೆ ಅವುಗಳನ್ನು ಅನ್ವೇಷಿಸುವುದು, ಎಲ್ಲಿ ಎನ್ನುವುದು ಅಂಚಿಗೆ ತಳ್ಳಲ್ಪಟ್ಟ ಸಮುದಾಯಗಳು ಆಯಾ ಸಂದರ್ಭದ ಪ್ರಭಾವಿ ಸಿದ್ಧಾಂತಗಳ ಪ್ರಭಾವಕ್ಕೆ ಒಳಗಾಗಿರುತ್ತವೆ. ಅವು ತಾವಾಗಿಯೆ ಸ್ವೀಕರಿಸದಿದ್ದರೂ, ಸ್ವೀಕರಿಸುವ ಒತ್ತಡಕ್ಕೆ ಒಳಗಾಗಿರುತ್ತವೆ. ಅಧಿಕಾರ ಚಲಾಯಿಸುವಿಕೆ ಎನ್ನುವುದು ಕೆಳಸಮುದಾಯಗಳನ್ನು ಒಪ್ಪಿಸುವುದರ ಮೂಲಕವೆ ನಿರ್ಮಾಣಗೊಂಡಿರುತ್ತದೆ. ಹೀಗಿರುವಾಗ ಈ ಸಮುದಾಯಗಳನ್ನು ಚೌಕಟ್ಟಿನೊಳಗೂ ಹಾಗೂ ಹೊರಗೂ ಹುಡುಕುವ ಪ್ರಯತ್ನ ಅನಿವಾರ್ಯವಾಗಿದೆ.

೬.೧೦. ಅಧ್ಯಯನದ ಮಿತಿಗಳು

ರಚನೆ, ಮರುರಚನೆ, ಶೋಧನೆ-ಮರುಶೋಧನೆ ಎಂಬುದೇ ಸಂಶೋಧನೆಯಾಗಿದೆ. ಸಂಶೋಧನೆ ಎನ್ನುವಂತದ್ದೇ ಜ್ಞಾನದಾಹ ಒಳಗೊಂಡಂತಹ, ನಿರ್ದಿಷ್ಟ ವೈಜ್ಞಾನಿಕ ವಿಧಾನಗಳ ಅನುಕರಣೆ ಮತ್ತು ಹೊಸ ವಿಧಾನಗಳ ಮೂಲಕ ಪ್ರಸ್ತುತ ಜ್ಞಾನವನ್ನು ಹೆಚ್ಚಿಸುವ ಪರಿಶೋಧನೆ ಯಾಗಿದೆ.

ಜ್ಞಾನ ಕ್ಷೇತ್ರದಲ್ಲಿ ಅನ್ವೇಷಣೆ, ಅವಿಷ್ಕಾರ ಹೊಸತನ ಕಂಡುಕೊಳ್ಳುವಿಕೆಯ ಜೊತೆಗೆ ಈಗಾಗಲೇ ಇರುವಂತಹ ಸಿದ್ಧಾಂತಗಳ ನ್ಯೂನತೆ ಅಥವಾ ಲೋಪವನ್ನು ಸರಿಪಡಿಸಿ, ಹೊಸತೊಂದು ದೃಷ್ಟಿಯ ಮೂಲಕ ನೂತನ ತತ್ವಸಿದ್ಧಾಂತವನ್ನು ಪ್ರತಿಪಾದಿಸುವುದಾಗಿದೆ.

ಜ್ಞಾನವನ್ನು ಸೃಷ್ಟಿಸುವ ಕಾರಣಕ್ಕಾಗಿ, ಜಗತ್ತಿನಾದ್ಯಂತ ವಿವಿಧ ರೀತಿಯ ಪರಿಕಲ್ಪನೆಗಳು, ವಿಧಾನಗಳನ್ನು ಹುಟ್ಟು ಹಾಕಿದ ಅನೇಕ ಸಂಶೋಧಕರು ತಮ್ಮದೇ ಹೊಸ ನೋಟದ ಮೂಲಕ, ಹಲವಾರು ಸಂಗತಿಗಳನ್ನು ಶೋಧಿಸಿ ಸಮಾಜಕ್ಕೆ ಅರ್ಪಿಸಿದವರಿದ್ದಾರೆ. ಶೋಧನೆಯ ಭರಾಟೆಯಲ್ಲಿ ಕೆಲವು ಸಲ ಅವಸರದ, ಸ್ವಾರ್ಥದ, ಲಾಭದ, ಅಸಂಬದ್ಧದ ಅಪೂರ್ಣದ ದೀರ್ಘ ಸಮಯದ, ಅಪರಿಪಕ್ವತೆಯ ಸಂಶೋಧನೆಗಳು ಸಾಕಷ್ಟು ನಡೆದಿವೆ. ಆದರೆ ಕೆಲವರು ಮಾಡಿ, ಬಹುತ್ವ ತಳಹದಿಯ ಮೇಲೆ, ಸದಾಕಾಲವೂ ಜನಮುಖಿಯರಾಗಿಯೆ ಸಂಶೋಧನಾ ಕ್ಷೇತ್ರದಲ್ಲಿ ಹೊಸ ಪರ್ವವನ್ನೇ ಸೃಷ್ಟಿ ಮಾಡಿ, ಜಗದ್ವಿಖ್ಯಾತಿಯಾಗಿದ್ದಾರೆ.

ಇಂತಹ ಪ್ರಯತ್ನದಲ್ಲಿ ಕರ್ನಾಟಕದ ಮಟ್ಟಿಗೆ ಚಿತ್ರದುರ್ಗವನ್ನು ಒಂದು ಸಂಶೋಧನ ಕ್ಷೇತ್ರವನ್ನಾಗಿ ಮಾಡಿಕೊಂಡು, ಸಂಶೋಧನೆ ಮಾಡುತ್ತಿರುವವರು ತೆಲಗಾವಿಯವರು ಪ್ರಮುಖ ರಾಗಿದ್ದಾರೆ. ಆದರೆ ಸಮಕಾಲೀನ ಸಮಸ್ಯೆಗಳನ್ನು ಆಯ್ಕೆ ಮಾಡಿಕೊಳ್ಳದ ಸಮಕಾಲೀನ ಸಮಾಜವನ್ನು ಪರಿವರ್ತಿಸುವಂತಹ ಸಂಶೋಧನೆ ಕೈಗೊಳ್ಳದ, ಸೀಮಿತ ವ್ಯಾಪ್ತಿಯ ನಿಧಾನಗತಿಯ, ಸಂಶೋಧಕರಾಗಿದ್ದಾರೆಂದು ಕೆಲವು ಅಧ್ಯಯನಕಾರರ ಅಭಿಪ್ರಾಯವಾಗಿದೆ. ಸಂಶೋಧನಾ ಅಖಂಡತ್ವ ಅಥವಾ ಸಮಷ್ಠಿ ಪ್ರಜ್ಞೆಗೆ ಇವರುಗಳ ಸಂಶೋಧನೆಗಳು ಸ್ಪಂದಿಸುತ್ತಿಲ್ಲ ಎನ್ನುವುದು ಕೆಲವು ಸಂಶೋಧಕರ ಅಂಬೋಣ. ಅನೇಕ ಬಾರಿ ಅನೇಕರಿಗೆ ಈ ಅಭಿಪ್ರಾಯ ನಿಜವಾಗಿದೆ ಎನಿಸುವುದು. ಏಕೆಂದರೆ ಇವರ ಸಂಶೋಧನೆ ಆಸಕ್ತಿಯ ಮೊದಲ ಪರಿಕಲ್ಪನೆ ಪ್ರಾದೇಶಿಕ ಚರಿತ್ರೆಯಾಗಿದೆ. ಇಂದು ಜಗತ್ತಿನಾದ್ಯಂತ ಅಖಂಡತ್ವ, ಜಾಗತಿಕ ಪ್ರಜ್ಞೆ, ಜಾಗತಿಕ ಕುಟುಂಬ, ವಿಶ್ವಚರಿತ್ರೆ ಎಂಬುದು ಸರ್ವವ್ಯಾಪಿಯಾಗಿ ಹರಡಿಕೊಳ್ಳುತ್ತಿರುವ ಕಾಲದಲ್ಲಿ, ಪ್ರಾದೇಶಿಕತೆ ಎಂಬ ಸೀಮಿತ ಪರಿಕಲ್ಪನೆಯ ಆಯ್ಕೆ ಮತ್ತು ಶೋಧನೆ ಮಾಡುವುದರಿಂದ ಜನಸಾಮಾನ್ಯರ ಮನಸ್ಸಿನಾಳದಲ್ಲಿ, ಪ್ರಾಂತೀಯತೆಯ ಮನೋಭಾವ ಮೂಡಿಸುವ ಸಂಶೋಧನೆ ಹೊರ ಹೊಮ್ಮುತ್ತಿರುವುದು ದುರದೃಷ್ಟಕರ. ಪರಿಣಾಮ ಇಂತಹ ಪರಿಕಲ್ಪನೆಗಳಿಂದ ಜನರ ಮನಸ್ಸಿನಲ್ಲಿ ಭಾವನೆಗಳು ಕೆರಳಿ, ತಮ್ಮ ಪ್ರಾಂತದ ಅಥವಾ ಪ್ರದೇಶದ ಬಗ್ಗೆ ನಿಷ್ಠೆಯನ್ನು ಹೊಂದಿ ಮತ್ತೊಂದು ಪ್ರದೇಶದ ಬಗ್ಗೆ ಅಗೌರವ ದ್ವೇಷ ಹುಟ್ಟಿಸುವ ಅಪಾಯವಿದೆ. ಈ ತರಹದ ಸೀಮಿತ ವ್ಯಾಪ್ತಿಯ ಸಂಶೋಧನೆಗಳಿಂದ ಎಷ್ಟೇ ಮತ್ತು ಎಂಥದ್ದೇ ಮಾಹಿತಿ ಲಭ್ಯವಾದರೂ ಸೀಮಿತ ಪ್ರದೇಶಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಹೀಗಾಗಿಯೇ ಸೀಮಿತ ವ್ಯಾಪ್ತಿಯ ಸಂಶೋಧನೆಗಳಿಂದ ಸಮಷ್ಠಿ ಸಂಶೋಧನೆಗೆ ಧಕ್ಕೆಯಾಗಿ, ಸಂಶೋಧನೆಗಳಿಂದಲೇ ದ್ವೇಷ, ಅಸೂಯೆ, ದಳ್ಳುರಿ, ಕಲಹ ಸಂಘರ್ಷ ಉಂಟಾಗುವ ಅಪಾಯ ಬರಬಹುದೆಂಬುದನ್ನು ತಳ್ಳಿ ಹಾಕುವಂತಿಲ್ಲ. ಈ ಸಂಶೋಧನೆಗಳಿಂದ ಸಂಶೋಧನಾ ಲೋಕಕ್ಕೆ ಜ್ಞಾನ ದೊರೆತರು. ಆ ಜ್ಞಾನವು ಯಾವಾಗ ಬೇಕಾದರೂ ಆವಾಗ ಸಾಮಾಜಿಕ ಸಂಘರ್ಷವನ್ನುಂಟುಮಾಡುವ ಆತಂಕವಂತು ಇದ್ದೇ ಇರುತ್ತದೆ.

ಎರಡನೇ ಪರಿಕಲ್ಪನೆ ಮತ್ತು ಬಹುಮುಖ್ಯ ಆಕರವೆಂದರೆ ಮೌಖಿಕ ಕ್ಷೇತ್ರವಾಗಿದೆ. ಸಾಮಾನ್ಯವಾಗಿ ಎಲ್ಲರೂ ತಿಳಿದಿರುವಂತೆ ಮೌಖಿಕತೆ ಎಂದರೆ ಒಬ್ಬರಿಂದ ಮತ್ತೊಬ್ಬರಿಗೆ,

ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ, ವರ್ಗಾವಣೆಗೊಂಡ ಹಾಡು, ಕುಣಿತ, ಕಥೆ, ಲಾವಣಿ, ಒಗಟು, ಕವನ, ಪದ್ಯ, ಗಾದೆ ಇರಬಹುದಾಗಿದೆ. ಆದರೆ ಇವತ್ತಿಗೂ ಅನೇಕ ಸಂಶೋಧಕರಿಗೆ ಮೌಖಿಕತೆಯ ಬಗ್ಗೆ ಸಾಕಷ್ಟು ಅನುಮಾನಗಳಿವೆ. ಏಕೆಂದರೆ ಇವುಗಳಲ್ಲಿನ ವಿಷಯಗಳಲ್ಲಿ ಬಹಳಷ್ಟು ಸಂದರ್ಭಗಳಲ್ಲಿ ಆಡಂಬರ, ಉತ್ಪ್ರೇಕ್ಷೆ, ಊಹೆ ಅನಿಷ್ಟತೆ, ಅಸ್ಪಷ್ಟತೆ, ಅಸಂಬದ್ಧತೆಯಿಂದಾಗಿ ಅಧಿಕೃತ ದಾಖಲೆಗಳಿಲ್ಲದ ಕಾರಣ ವಾಸ್ತವತೆಯಿಂದ ದೂರವಿರುವ ಸಾಧ್ಯತೆಗಳಿವೆ. ಕಾರ್ಯಕಾರಣ, ಪರಿಣಾಮ-ವಾಸ್ತವ-ವಸ್ತುನಿಷ್ಠತೆಯ, ಮೂರ್ತತೆಯ ಸತ್ಯತೆಯಿಂದ ಕೂಡಿದ ಗುಣಧರ್ಮ ಸಂಶೋಧನೆಯ ನೈಜ ಪರಿಕಲ್ಪನೆಯಾಗಿದೆ. ಈ ಮೇಲಿನ ಸ್ವರೂಪಗಳು ಮೌಖಿಕ ಪರಿಕಲ್ಪನೆಗಳಲ್ಲಿ ವಿರಳವಾಗಿರುವುದರಿಂದ ಮೌಖಿಕ ಪರಿಕಲ್ಪನೆಗೆ ಅಥವಾ ಇಂತಹ ಆಕರಗಳಿಂದಾಗಿ, ಸಂಶೋಧಕನಿಗೆ ಸಾಕಷ್ಟು ಗೊಂದಲಗಳು, ಸವಾಲುಗಳು, ಅನುಮಾನಗಳು ಸೃಷ್ಟಿಯಾಗುತ್ತವೆ. ಇಂಥವೆಲ್ಲವನ್ನು ಮೀರಿಯು ಸಂಶೋಧನೆ ಕೈಗೊಂಡಾಗಲೂ, ಸಮಕಾಲೀನತೆಯ ಸಂದರ್ಭಕ್ಕೆ ತಕ್ಕಂತೆ ಇವುಗಳಿಗೆ ಮಾನ್ಯತೆ ದೊರೆಯುತ್ತಿಲ್ಲ ಮತ್ತು ತೆಲಗಾವಿಯಂತಹ ಸಂಶೋಧಕರು ತಾವು ಕಂಡುಕೊಂಡ ಸಂಶೋಧನಾ ಸತ್ಯಗಳನ್ನೂ, ತಮ್ಮ ಸಂಶೋಧನ ಫಲಿತವನ್ನು ತಮ್ಮದೇ ದಾಟಿಯಲ್ಲಾದರೂ ಪಟ್ಟು ಹಿಡಿದು ದಾಖಲಿಸುವ ಪ್ರಯತ್ನ ಮಾಡಿಲ್ಲ. ಕೆಲವುಗಳನ್ನು ಮಾಡಿದ್ದರು. ಪ್ರಚಾರಕ್ಕೆ ಬಂದಿಲ್ಲ, ಮಾನ್ಯತೆ ದೊರೆತಿಲ್ಲ. ದೊರೆತರು ಸಾರ್ವತ್ರಿಕವಾಗಿ ಅನ್ವಯಗೊಂಡಿಲ್ಲ. ಸಮಾಜಕ್ಕೆ ಉಪಯುಕ್ತತೆ ಆಗಿಲ್ಲ. 'ಸ್ಥಳೀಯ" ಅಥವಾ "ಸ್ಥಳೀಯತೆ" ಎಂಬುದು ತೆಲಗಾವಿಯವರ ಅಪರೂಪದ ಮತ್ತು ತುಂಬಾ ಅಭಿಮಾನದಿಂದ ಕಂಡುಕೊಂಡ ಸಂಶೋಧನಾ ಪರಿಕಲ್ಪನೆಯಾಗಿದೆ. ಏಕೆಂದರೆ ಸ್ಥಳೀಯದಿಂದಲೇ ಒಂದು ರಾಷ್ಟ್ರ ಪರಿಕಲ್ಪನೆ ಮೂಡಿಸುವ ಬುನಾದಿಯಾಗಿದೆ. ಸ್ಥಳೀಯವೇ ಸಮಾಜದ ಕೇಂದ್ರಬಿಂದುವಾಗಿದ್ದು, ಸ್ಥಳೀಯ ಚರಿತ್ರೆಯ ಪರಿಕಲ್ಪನೆಗೆ ಸ್ಥಳೀಯರ ಮೂಲಕವೇ ಹಾಗೂ ಈಗಾಗಲೇ ಸ್ಥಳೀಯರ ಬಳಿಯಿರುವ ಮೌಖಿಕ ಆಕರ, ದಾಖಲೆಗಳು, ಬಖೈರು ವಂಶಾವಳಿ, ನಾಮೆಗಳು, ಅಪರೂಪದ ವಸ್ತುಗಳು, ಆಯಾಕಾಲದ ನೈಜ ಘಟನೆ ಕಂಡಂತಹ ವ್ಯಕ್ತಿಗಳು ಮತ್ತು ಕೇಳಿದ ವ್ಯಕ್ತಿಗಳಿಂದ, ಕೆಲವು ಉತ್ಖನನದ, ಭೂ ಶೋಧನೆಯ ಮೂಲಕ ಸಂಶೋಧನೆಯನ್ನು ಕೈಗೊಂಡಿದ್ದರು. ಸ್ಥಳೀಯ ಚರಿತ್ರೆಯು ಅನೇಕ ಗೊಂದಲಗಳು, ಅನುಮಾನಗಳು, ಅಪಾರ ಹಣ, ಸಮಯ ಬೇಕಾಗಿಯೂ, ಅನೇಕ ಬಾರಿ ಅಪೂರ್ಣವಾದ ಮಾಹಿತಿಯ ಚರಿತ್ರೆಯಾಗಬಲ್ಲದಾಗಿದೆ.

ಜನಸಾಮಾನ್ಯರ ನೈಜ ಬದುಕು ಆವರಿಸಿರುವ ಸ್ಥಳೀಯ ಸಂಶೋಧನೆಗೆ ತಮ್ಮನ್ನೇ ತಾವು ಅರ್ಪಿಸಿಕೊಂಡರಿವರು. ಸ್ಥಳೀಯ ಚರಿತ್ರೆಯ ಅಧ್ಯಯನಕ್ಕಾಗಿಯೇ, ಸ್ಥಳೀಯ ಸಂಶೋಧನೆ ಗಾಗಿಯೆ, ಒಂದು ನಿರ್ದಿಷ್ಟ ಮತ್ತು ಪ್ರತ್ಯೇಕ ವಿಧಾನವನ್ನು ಸೃಷ್ಟಿ ಮಾಡಲಾಗಿಲ್ಲ. ಬದಲಾಗಿ ಎಲ್ಲಾ ತರದ ಅಧ್ಯಯನ ವಿಧಾನಗಳನ್ನು ಅಳವಡಿಸಿಕೊಂಡೆ ಸಂಶೋಧನೆ ಮಾಡುತ್ತಿದ್ದಾರೆಯೆ ವಿನಹ, ಸಮಾಜ ವಿಜ್ಞಾನದ ಪರಿಕಲ್ಪನೆ ಶೋಧಿಸಲು ಸಮಾಜವಿಜ್ಞಾನಿಗಳು ಕಂಡುಕೊಂಡಂತಹ ವೈಜ್ಞಾನಿಕ ವಿಧಾನಗಳನ್ನು ಕಂಡುಕೊಂಡು, ಅಧ್ಯಯನಗಳಲ್ಲಿ ಪ್ರಯೋಗಿಸಿ ಅದರಲ್ಲಿ

ಯಶಸ್ವಿಯಾಗಿದ್ದಾರೆ. ಅಂತಹ ವಿಧಾನಗಳನ್ನು ಅಥವಾ ಪ್ರತ್ಯೇಕ ವಿಧಾನಗಳನ್ನು ಸ್ಥಳೀಯ ಸಂಶೋಧನೆಗಾಗಿಯೆ ಈ ತನಕವೂ ತೆಲಗಾವಿಯವರಿಂದ ಸೃಷ್ಟಿಸಿಲ್ಲವಾಗಿದೆ.

ಸ್ಥಳೀಯ ಸಂಶೋಧನೆ ಎನ್ನುವಂತಹದ್ದೇ ಮಾಹಿತಿಯ ಮಹಾಪೂರವೇ ಅದರಲ್ಲಿ ಅಡಗಿದ್ದರೂ, ಆಯ್ಕೆಯ ಅಥವಾ ಶೋಧನೆಯ ವೈಶಿಷ್ಟ್ಯತೆಯ ಜಾಣ್ಮೆ ಬಹುಮುಖ್ಯವಾಗುವುದು. ಇಂಥಲ್ಲಿಯೂ ಇವರ ನಡೆ ತುಂಬಾ ನಿಧಾನಗತಿಯದ್ದಾಗಿದೆ. ಪರಿಣಾಮ ಇವರ ಸಂಶೋಧನೆಯ ಆಯ್ಕೆಯ ಪರಿಕಲ್ಪನೆಗಳ ವಿಸ್ತಾರವು ಬಹುತ್ವತೆ ಒಳಗೊಂಡಿರುವುದರಿಂದ, ಬೇಗನೆ ಫಲ ದೊರೆಯದಿರುವ ಕಾರಣ, ಇವರನ್ನು ಇವರ ಒಡನಾಡಿಗಳು ಅಥವಾ ಸಂಶೋಧನಾಸಕ್ತರು ನಿಧಾನಗತಿಯ ಸಂಶೋಧಕರೆಂದು ಕರೆಯುತ್ತಾರೆ.

ಸ್ಥಳೀಯ ಚರಿತ್ರೆಯ ಸಂಶೋಧನೆಯ ಗರಿಷ್ಟ ಮಟ್ಟದ ಕ್ಷೇತ್ರಕಾರ್ಯವನ್ನೇ ಅವಲಂಬಿಸಿ ರುವುದರಿಂದ, ತಮಗೆ ಹೇಗೇ ಬೇಕೋ ಹಾಗೇ ಕ್ಷೇತ್ರ ಕಾರ್ಯ ಕೈಗೊಳ್ಳುತ್ತಾರೆಯೆ ವಿನಹ, ನಿರ್ದಿಷ್ಟ ಮಾನದಂಡಗಳ ಮೂಲಕವಾಗಲಿ, ನಿರ್ದಿಷ್ಟ ವಿಧಾನಗಳ ಮೂಲಕವಾಗಲಿ, ಕೈಗೊಳ್ಳುವುದಿಲ್ಲ. ಇಂತಹ ಶೋಧನೆಯ ಸಂದರ್ಭದಲ್ಲಿ ಸಂಶೋಧನೆಯು ಬೇರೊಂದು ಕಡೆ ಹೊರಳುವುದು ಸಾಮಾನ್ಯವಾಗಿದೆ. ಈ ಸಂಶೋಧನೆಗೆ ಸಾಕಷ್ಟು ಹಣ, ಸಾಕಷ್ಟು ಸಮಯ ಬೇಕಾಗುವುದು. ಮತ್ತೊಂದೆಡೆ ದಿಢೀರನೆ, ಅಗತ್ಯಕ್ಕೆ ತಕ್ಕಂತೆ, ಸಮಯಕ್ಕೆ ಸರಿಯಾಗಿ, ನಿರ್ದಿಷ್ಟ ಕಾಲಮಿತಿಯೊಳಗೆ ಸಂಶೋಧನೆಯ ಫಲಿತ ದೊರೆಯಲಾರದು. ಪರಿಣಾಮ ಇವರ ಸಂಶೋಧನೆಯ ಬಗ್ಗೆ ಕುತೂಹಲ ಇಟ್ಟುಕೊಂಡಿದ್ದ ಅನೇಕ ಸಂಶೋಧಕರಿಗೆ, ಅಧ್ಯಯನಕಾರರಿಗೆ ನಿರಾಶೆ ಆಗಿದ್ದಿದೆ.

ಕಠಿಣ ಪರಿಶ್ರಮ, ಹಣ, ಸಮಯ, ವಿನಿಯೋಗಿಸಿಯೂ, ಅಷ್ಟೇ ಏಕೆ, ಇಡೀ ಖಾಸಗೀ ಬದುಕನ್ನು ಲೆಕ್ಕಿಸದೇ ಸದಾಕಾಲವೂ ಸಂಶೋಧನೆಗೆ ಮೀಸಲಿಟ್ಟರು, ಕೈಗೊಂಡ ಸಂಶೋಧನೆಗಳು ನಿರೀಕ್ಷಿಸಿದ ಫಲಿತಗಳು ಇವರಿಂದ ಹೊರಬರುತ್ತಿಲ್ಲ. ಸಮಾಜಕ್ಕೆ ಅಥವಾ ಅಗತ್ಯವಿದ್ದವರಿಗೆ ಸರಿಯಾದ ಸಮಯಕ್ಕೆ ಮುಟ್ಟಿಸುವಲ್ಲಿ ವಿಫಲರಾಗುತ್ತಿದ್ದಾರೆ.

ಇವರುಗಳ ಸಂಶೋಧನೆಗಳಲ್ಲಿ ಅನೇಕ ತರದ ಮಹತ್ವದ ಅಂಶಗಳು, ಸತ್ಯಗಳು ಇವೆಯಾದರು, ಸಂಶೋಧನೆಗಳ ಬಗ್ಗೆ ಇವರು ಅಳವಡಿಸಿಕೊಂಡ ವಿಧಾನಗಳ ಬಗ್ಗೆ ಚರ್ಚೆಗಳಾಗಲೀ, ಸಂವಾದಗಳಾಗಲೀ ನಿರಂತರವಾಗಿ ನಡೆಯುತ್ತಿಲ್ಲ. ಸಮಕಾಲೀನತೆಯ ಮಾಧ್ಯಮಗಳನ್ನು ಬಳಸಿಕೊಂಡು ತಾವು ಕಂಡುಕೊಂಡ ಫಲಿತಗಳನ್ನು ವ್ಯಾಪ್ತಿ ಮೀರಿ ಅಥವಾ ಅಗತ್ಯವಿದ್ದವರಿಗೆ ಅಥವಾ ಸಮಾಜಮುಖಿಯಾಗಿ ಮುಟ್ಟಿಸುವಲ್ಲಿ ಮುಜುಗರ ಪಡುತ್ತಿರುವುದು ಇವರ ನ್ಯೂನತೆಯಾಗಿದೆ. ಬಡವ, ದಲಿತ, ದಮನಿತ, ಅಂಗವಿಕಲ, ಮಹಿಳೆ, ಅಸ್ಪೃಶ್ಯ, ಅನಕ್ಷರಸ್ಥ, ಭಿಕ್ಷಾಟನೆ, ವೃದ್ಯಾಪ, ಅಪರಾಧ, ನಿರುದ್ಯೋಗ ಹೀಗೆ ಹತ್ತಾರು ಪರಿಕಲ್ಪನೆಗಳ ಬಗ್ಗೆ ನೋವು ಅನುಭವಿಸಿಯೂ ಮಿಡಿಯುತ್ತಾರೆ. ಇವು ಸಮಾಜಕ್ಕೆ ಅಂಟಿಕೊಂಡ ಶಾಪಗಳು

ಅಥವಾ ಸಮಸ್ಯೆಗಳಾಗಿವೆ ಎಂದು ಮರುಗುತ್ತಾರೆ. ಆದರೆ ಅಂತಹ ಸಮಸ್ಯೆ ಹೋಗಲಾಡಿಸುವಂತಹ ಸಂಶೋಧನೆಗಳು ಇವರಿಂದ ಏಕೆ? ಶೋಧಿತವಾಗುವುದಿಲ್ಲ? ಎಂಬ ಪ್ರಶ್ನೆಗೆ ಉತ್ತರವಿಲ್ಲವಾಗಿದೆ. ಇವರು ಶೋಧಿಸಿದ ಸಂಶೋಧನೆಗಳ ಸಂಖ್ಯೆಗಳು ಸಾಕಷ್ಟಿದ್ದರೂ, ಸಾಮಾಜಿಕ ಸಮಸ್ಯೆಯ ಪರಿಹಾರಕ್ಕೆ ಅನ್ವಯ ಆಗುತ್ತಿಲ್ಲ. ಕೆಲವರು ಮಾತ್ರ ಓದಿ ಸುಮ್ಮನಾಗುತ್ತಾರೆಯೆ ಹೊರತು ಇವರಲ್ಲಿರುವ ಅಧ್ಯಯನದ ಗೀಳು, ಸ್ವರೂಪ, ವಿಧಾನ, ಆಸಕ್ತಿಗಳನ್ನು ಅಳವಡಿಸಿಕೊಳ್ಳಲಾಗುತ್ತಿಲ್ಲ. ಬಳಸಿಕೊಳ್ಳಲೂ ಆಗುತ್ತಿಲ್ಲ. ಹಾಗಾಗಿ ಇವರ ಶ್ರಮ ಎಲ್ಲಿಯೋ ಪೋಲಾಗುತ್ತಿದೆ ಎನಿಸುವುದು.

ಜ್ಞಾನವಲಯಕ್ಕೆ ಇವರ ಸಂಶೋಧನೆಯಿಂದ ಮಾಹಿತಿ ಸೇರುತ್ತದೆಯಾದರೂ ಜ್ಞಾನ ಕ್ಷೇತ್ರದಲ್ಲಿ ಒಂದು ಸಂಚಲನವನ್ನುಂಟುಮಾಡುವಂತಹ ಹೊಸ ಪರ್ವ ಸೃಷ್ಟಿಯಾಗುತ್ತಿಲ್ಲ. ಅಂತಹ ವಾತಾವರಣವೂ ನಿರ್ಮಾಣವಾಗುತ್ತಿಲ್ಲ. ಮತ್ತೊಂದು ಪರಿಕಲ್ಪನೆಯ ಅಂತರಸಂಬಂಧವನ್ನು ಅನುಸಂಧಾನಗೊಳಿಸಿದಾಗ ಆ ಸಂಶೋಧನೆಯ ವೇಗವು ಹೆಚ್ಚಾಗುತ್ತದೆ. ಆದರೆ ಇವರ ಸಂಶೋಧನೆಗಳಲ್ಲಿ ಈ ಪ್ರಯತ್ನ ಕಂಡು ಬರುವುದಾದರೂ ಹಾಗಾಗ ಅಲ್ಲಲ್ಲಿ ಸಾಕಷ್ಟು ಗೊಂದಲಗಳು ಮೂಡುತ್ತವೆ.

ತೆಲಗಾವಿಯವರು "ಚಿತ್ರದುರ್ಗ" ಎನ್ನುವಂತಹ ಒಂದು ಸೀಮಿತ ವ್ಯಾಪ್ತಿಯ ಕ್ಷೇತ್ರಕ್ಕಾಗಿ ಇಡೀ ಜೀವಮಾನವವೇ ಮೀಸಲಿರಿಸಿದ್ದರಾದರೂ, ಅನೇಕ ಹೊಸ ಸತ್ಯಗಳನ್ನು ಶೋಧಿಸಿದ್ದರೂ ಸೀಮಿತ ವ್ಯಾಪ್ತಿಯ ಸಂಶೋಧಕರೆನಿಸಿಕೊಂಡಿದ್ದಾರೆ. ಇಂತಹ ಆಸಕ್ತಿಯನ್ನು ಮತ್ತು ಅಧ್ಯಯನ ವಿಧಾನಗಳನ್ನು ಇತರೆ ಸಂಸ್ಥಾನಗಳ, ಪಾಳೆಯಪಟ್ಟುಗಳ ಅಧ್ಯಯನಗಳಲ್ಲಿ ತೊಡಗಿಸಿಕೊಳ್ಳಲಿಲ್ಲ. ಚಿತ್ರದುರ್ಗದಲ್ಲುಂಟುಮಾಡಿದ ಒಂದು ರೀತಿಯ ಸಂಚಲನವನ್ನು ಇತರೆ ಸಂಶೋಧನಾ ಕ್ಷೇತ್ರದಲ್ಲಿ ನಿರ್ಮಾಣ ಮಾಡಲಾಗಲಿಲ್ಲ. ಏಕೆಂದರೆ ಚಿತ್ರದುರ್ಗವೇ ಇವರ ಎಲ್ಲವೂ ಆಗಿದ್ದರಿಂದ ಇತರೆ ಕ್ಷೇತ್ರಗಳಿಗೆ ಅನ್ಯಾಯವಾಗಿದ್ದಿದೆ. ಚಿತ್ರದುರ್ಗಕ್ಕಿಂತಲೂ ವೈವಿಧ್ಯತೆಯ ಮಾಹಿತಿ, ಬೇರೊಂದು ಕ್ಷೇತ್ರದಲ್ಲಿ ದೊರೆಯುವ ಸಾಧ್ಯತೆಯಿದ್ದರೂ, ಅಂಥವುಗಳ ಬಗ್ಗೆ ಆಸಕ್ತಿ ತೋರಿಸಲಿಲ್ಲ. ಚಿತ್ರದುರ್ಗದ ಚರಿತ್ರೆ ಶೋಧಿಸಲು ಸಂಶೋಧನಾ ತಂಡ ಕಟ್ಟಿದರು. ಆದರೆ ಅಂತಹ ಸಂಶೋಧನಾ ತಂಡವನ್ನು ಇತರೆ ಅಧ್ಯಯನದ ಮಾದರಿಗಳಲ್ಲಿ ಇತರೆಡೆಗಳಲ್ಲಿ ಸಂಶೋಧನಾ ತಂಡ ಕಟ್ಟಲಿಲ್ಲ ಎಂಬುದು ಇವರ ಮೇಲಿರುವ ಅಪವಾದವಾಗಿದೆ.

ಸಂಶೋಧನಾ ತಂಡದ ಸಂಸ್ಥಾಪಕ ಮತ್ತು ಮುಖ್ಯಸ್ಥರು ಇವರೇ ಆಗಿರುವುದರಿಂದ ಕ್ಷೇತ್ರಕಾರ್ಯಗಳಲ್ಲಿ ಕೆಲವು ಪರಿಕಲ್ಪನೆಗಳಲ್ಲಿ, ಅಂತಿಮ ನಿರ್ಧಾರ ಇವರದ್ದಾಗಿರುವುದರಿಂದ ಇವರದ್ದೇ ಆದ ಪೂರ್ವಗ್ರಹ ಪೀಡಿತದ ಪ್ರಭಾವವೂ ಬೀರಬಹುದು. ಇಂಥಲ್ಲಿ ತಂಡದ ಸದಸ್ಯರ ತೀರ್ಮಾನಗಳಿಗೆ ಮಾನ್ಯತೆ ದೊರೆಯದೇ ಇರಬಹುದು. ಸದಸ್ಯರ ದುಡಿಮೆಗೆ ಪ್ರತಿಫಲ ಎಲ್ಲವೂ ಲಕ್ಷ್ಮಣ್ ತೆಲಗಾವಿ ಅವರ ಪಾಲಾಗುತ್ತದೆ. ಸದಸ್ಯರು ನೆಪಮಾತ್ರ ಎಲ್ಲವೂ ಲಕ್ಷ್ಮಣ್ ತೆಲಗಾವಿಯವರ ತೀರ್ಮಾನಗಳಾಗಿದ್ದವೆಂಬ ಸಂಗತಿ ತಿಳಿಯುತ್ತದೆ.

ಇಡೀ ಬದುಕು ಚಿತ್ರದುರ್ಗದ ಚರಿತ್ರೆಗೆ ಸಮರ್ಪಿಸಿದರು. ಚಿತ್ರದುರ್ಗಕ್ಕೆ ಸಂಬಂಧಿಸಿದಂತೆ ಅಂತಿಮ ಹೊಸ ವ್ಯಾಖ್ಯೆ ಬರೆಯಲಾಗುತ್ತಿಲ್ಲ. ಏಕೆಂದರೆ ಇವರ ಅಧ್ಯಯನದ ಉದ್ದಕ್ಕೂ

ಅಲ್ಲಲ್ಲಿ ಅಪೂರ್ಣ, ಗೊಂದಲ, ಅಸ್ಪಷ್ಟತೆ ಕಂಡು ಬರುತ್ತದೆ. ರಾಜಪ್ರಭುತ್ವದ ನಾಯಕರ ಚರಿತ್ರೆಯ ಬಗ್ಗೆ ಸಂಶೋಧನೆ ಮಾಡಿದರೂ ಅಲಕ್ಷಿತ ನಾಯಕ ಬುಡಕಟ್ಟಿನ ಬಗ್ಗೆ ಎಲ್ಲೂ ಚಕಾರ ಎತ್ತುವುದಿಲ್ಲ.

ಅತಿಯಾದ ಶಿಸ್ತು, ಸ್ವಾಭಿಮಾನ, ಏಕಾಂತತೆಯಿಂದಾಗಿ ಅಧ್ಯಯನಕಾರರು, ಸಂಶೋಧಕರು ಕೆಲವು ಸಂದರ್ಭದಲ್ಲಿ ಇವರ ಭಯದಿಂದ, ಗೌರವ ಅಭಿಮಾನದಿಂದಾಗಿ ಸಂಶೋಧನಾ ವಸ್ತು ವಿಷಯ ಕುರಿತು ಚರ್ಚಿಸಲು ಮುಂದೆ ಬರುತ್ತಿಲ್ಲ. ಪರಿಣಾಮ ಸಂಶೋಧನೆಗೆ ನಷ್ಟವಾಗುತ್ತಿದೆ. ಕೆಲವು ಪ್ರಕಾಶಕರು, ಮುದ್ರಣಕಾರರು, ಹಿತೈಷಿಗಳಿಂದ ಚರಿತ್ರೆ ರಚನೆಯಲ್ಲಿ ಪೂರ್ವಗ್ರಹ ಮತ್ತು ಸ್ವಹಿತಾಸಕ್ತಿಯ ಸಾಧನೆಗಳು ಕೈ ಮೂಲೆಯಾಗಿವೆ.

ಸಂಶೋಧನೆಗಾಗಿ ಆಯ್ದುಕೊಳ್ಳುವ ಪರಿಕಲ್ಪನೆಯ ವಿಷಯದ ಆಳತೆಯಿಂದಾಗಿಯೂ, ನಿಖರತೆ, ಸ್ಪಷ್ಟತೆ, ನಿರ್ದಿಷ್ಟತೆಯ ಅಭಾವದಿಂದಾಗಿ ಕೃತಿಗಳು ಅಗತ್ಯಕ್ಕೆ ತಕ್ಕಂತೆ, ಬೇಗನೆ ಹೊರ ಬಂದು ಅಧ್ಯಯನಕಾರರ ಕೈಗೆ ದೊರೆಯುತ್ತಿಲ್ಲ. ಕೆಲವು ಸಂಕೀರ್ಣತೆ ಸ್ವರೂಪದಂತಹ ವಿಷಯದ ಬಗ್ಗೆ ಏನನ್ನೂ ಹೇಳದೇ ನಿಗೂಢವಾಗಿಯೇ ಮೌನವಹಿಸುವರು.

ಯಾವುದೇ ಒಬ್ಬ ಸಂಶೋಧಕ ಅಥವಾ ಅಧ್ಯಯನಕಾರ ಸಂಶೋಧನೆ ಕೈಗೊಳ್ಳುವ ಮುನ್ನ ಎಲ್ಲಾ ಸಮುದಾಯಗಳ ಹಿನ್ನೆಲೆಯನ್ನು ಅರ್ಥ ಮಾಡಿಕೊಳ್ಳಬೇಕೆನ್ನುತ್ತಾರೆ. ಇದು ಸಾಧ್ಯವೇ ಹಾಗಾದರೆ ಎಷ್ಟು ಅಧ್ಯಯನಕಾರರಿಗೆ ಸಾಧ್ಯ? ಇಂತಹ ಮಾಹಿತಿ ಲಭ್ಯವಿದೆಯೆ? ಎಂಬುದು ಹಲವು ಅನುಮಾನದ ಪ್ರಶ್ನೆಗಳಾಗಿವೆ. ಇವರು ಶೋಧಿಸಿದ ಎಷ್ಟೋ ಚರಿತ್ರೆಯು ಸ್ವಾತಿಕೆಯ ನೆಲೆಯಲ್ಲಿಯೆ ರಚಿತವಾಗಿದೆ. ಪರಿಣಾಮ ಏಕಮುಖಿ ಚರಿತ್ರೆಗೆ ಇವರದ್ದು ಕೊಡುಗೆಯಿದೆ ಎಂದೆನಿಸುವುದು. ಹೀಗೆ ಅವರದ್ದೇ ಆದ ಮನೋಧರ್ಮದ, ನಿಧಾನಗತಿಯ ಅಥವಾ ಸೀಮಿತ ವ್ಯಾಪ್ತಿಯ ಅಸ್ಪಷ್ಟ ಮಾಹಿತಿಯ, ನ್ಯೂನತೆಯ ಸಂಶೋಧಕರೆನಿಸಿದ್ದಾರೆ.

ತೆಲಗಾವಿಯವರು ಅಭಿನಂದನಾ ಗ್ರಂಥಗಳ ಮೂಲಕ ಒಬ್ಬ ದಿಟ್ಟ ಸಂಶೋಧಕ, ಉತ್ತಮ ಸಂಪಾದಕ ಎನಿಸಿಕೊಂಡರೂ ಸ್ವತಂತ್ರ ಕೃತಿಗಳಲ್ಲಿ ಅಡ್ಡಗೋಡೆ ಮೇಲೆ ದೀಪ ಇಟ್ಟ ಹಾಗೆ ತೀರ್ಮಾನಗಳಿರುತ್ತಿದ್ದವು. ಯಾರಿಗೂ ನಿಷ್ಠುರ ಆಗಬಾರದು. ಎಲ್ಲರಿಗೂ ಒಳ್ಳೆಯವರಾಗಿರಬೇಕೆಂಬ ಅಚಲ ನಿರ್ಧಾರ ಅವರಿಗಿತ್ತು. ವಾದ-ವಿವಾದಗಳಿಂದ ದೂರವಿದ್ದರೂ ದಲಿತ, ಶೋಷಿತ ನೆಲೆಯಿಂದ ಬಂದವರು. ಆ ಸಂಘಟನೆ, ಕ್ಷೇತ್ರಕ್ಕೆ ನ್ಯಾಯ ಕೊಡುವಲ್ಲಿ ಲಕ್ಷ್ಮಣ್ ತೆಲಗಾವಿಯವರು ವಿಫಲರಾಗಿದ್ದಾರೆ. ವಿಪಾರ್ಯಸವೆಂದರೆ ಲಕ್ಷ್ಮಣ್ ತೆಲಗಾವಿಯವರ ಸ್ನೇಹಿತರಲ್ಲಿ ಮೇಲ್ವರ್ಗದ ಬ್ರಾಹ್ಮಣ, ಲಿಂಗಾಯತ, ರೆಡ್ಡಿ, ನಾಯಕರಿಗೆ ಸೇರಿದವರು. ಲಕ್ಷ್ಮಣ್ ತೆಲಗಾವಿಯವರ ಆಲೋಚನೆ ಶೂದ್ರಾದೀಶೂದ್ರರ ಬಗ್ಗೆ ರೂಪುಗೊಳ್ಳಲು ಬಯಸುತ್ತಿದ್ದವು. ಇವರ ಸಮಕಾಲೀನ ಸಾಹಿತಿಗಳಿಗೆ ಪ್ರಶಸ್ತಿ, ಗೌರವಗಳು ಬಂದರೂ ಲಕ್ಷ್ಮಣ್ ತೆಲಗಾವಿಯವರ ಸೃಜನಶೀಲತೆ ಕಡಿಮೆಯಾಗಲಿಲ್ಲ. ಸಂಶೋಧನೆಯ ಮೂಲಕವೇ ಗೌರವ, ಸನ್ಮಾನಗಳನ್ನು ಪಡೆದರು. ಏನೇ ಆದರೂ ಪ್ರಾದೇಶಿಕ ಚರಿತ್ರೆ ಅಧ್ಯಯನದಲ್ಲಿ ಲಕ್ಷ್ಮಣ್ ತೆಲಗಾವಿಯವರು ಪ್ರಮುಖರಾಗಿ ಕಂಡು ಬರುತ್ತಾರೆ.

ಟಿಪ್ಪಣಿಗಳು

೧. ಚಿನ್ನಸ್ವಾಮಿ ಸೋಸಲೆ ಎನ್., ಭಾರತೀಯ ಸಾಮಾಜಿಕ ಮತ್ತು ದಲಿತರು, ೨೦೦೮, ಪು. ೭೯-೮೧.

೨. ಲಕ್ಷ್ಮಣ್ ತೆಲಗಾವಿ, ಕರ್ನಾಟಕದ ಹಿಂದುಳಿದ ವರ್ಗಗಳು ಮತ್ತು ದಲಿತ ಚಳವಳಿಗಳು, ೧೯೯೯, ಪು. ೫೭.

೩. ಲಕ್ಷ್ಮಣ್ ತೆಲಗಾವಿ, ಚಿತ್ರದುರ್ಗದ ಒನಕೆ ಓಬವ್ವ: ಚಾರಿತ್ರಿಕ ವಿವೇಚನೆ, ೨೦೧೦, ಪು. ೩೩.

೪. ವಿರೂಪಾಕ್ಷಿ ಪೂಜಾರಹಳ್ಳಿ, ಚಿತ್ರದುರ್ಗ ಜಿಲ್ಲಾ ಬುಡಕಟ್ಟು ವೀರರು, ೨೦೦೨, ಪು. ೭೧.

೫. ಅದೇ, ಪು. ೬೩.

೬. ಅದೇ, ಪು. ೭೭.

೭. ಸಿ.ಆರ್. ಗೋವಿಂದರಾಜು, ನವಚಾರಿತ್ರಿಕವಾದ, ೨೦೦೯, ಪು. ೨೨-೨೪.

೮. ಅದೇ, ಪು. ೪೯-೫೧.

೯. ಬೆಟಗೇರಿ ಕೃಷ್ಣಶರ್ಮ, ನಮ್ಮ ಸಂಸ್ಕೃತಿ ಪರಂಪರೆ, ೧೯೬೬, ಪು. ೫೧-೫೪.

೧೦. ಅದೇ, ಪು. ೭೩.

೧೧. ಜವರಯ್ಯ ಮ.ನ., ಪರಂಪರೆ ಹಾಗೂ ಬಂಡಾಯ ಸಾಹಿತ್ಯ : ಸಮಗ್ರ ಅಧ್ಯಯನ, ೧೯೯೪, ಪು. ೧೧-೧೩.

೧೨. ಅದೇ, ಪು. ೨೩.

೧೩. ಚಿನ್ನಸ್ವಾಮಿ ಸೋಸಲೆ ಎನ್., ಭಾರತೀಯ ಸಮಾಜ ಮತ್ತು ದಲಿತರು, ೨೦೦೮, ಪು. ೯೭.

೧೪. ಅದೇ, ಪು. ೯೯.

೧೫. ಲಕ್ಷ್ಮಣ್ ತೆಲಗಾವಿ, ಸ್ಥಳೀಯ ಚರಿತ್ರೆ : ಅಧ್ಯಯನದ ಸ್ವರೂಪ ಮತ್ತು ತಾತ್ವಿಕತೆ, ೨೦೦೩, ಪು. ೭೮.

೧೬. ಅದೇ, ಪು. ೭೯-೮೦.

೧೭. ವಿಜಯ್ ಪೂಣಚ್ಚ ತಂಬಂಡ, ಕೆಳವರ್ಗದ ಪ್ರತಿಭಟನೆ ಸಬಾಲ್ಟರ್ನ್ ಚರಿತ್ರೆ-ಬರವಣಿಗೆ ಕ್ರಮ ಮತ್ತು ವಿಮರ್ಶೆ, ೨೦೦೯, ಪು. ೩೭.

೧೮. ಅದೇ, ಪು. ೩೮-೩೯.

೧೯. ಮೋಹನ್‌ಕೃಷ್ಣ ರೈ ಕೆ., ತುಳುನಾಡು ಸಿರಿ ಬದುಕು–ಹೋರಾಟದ ಕಥನ, ಪು. ೩೩-೩೫, ೨೦೧೦.

೨೦. ಅದೇ, ಪು. ೪೧-೪೩.

೨೧. ಗೋವಿಂದರಾಜು ಸಿ.ಆರ್., ನವಚಾರಿತ್ರಿಕವಾದ, ಪು. ೧೭, ೨೦೦೯.

೨೨. ಅದೇ, ಪು. ೧೯.

ಅಧ್ಯಾಯ : ಏಳು

ಸಮಾರೋಪ

*ಅಧ್ಯಯನದ ಫಲಿತಗಳು

ಅಧ್ಯಾಯ : ಏಳು

ಸಮಾರೋಪ

ಕರ್ನಾಟಕ ಎಂಬ ಹೆಸರೆ ಮೂಲತಃ ಚೈತನ್ಯದ ಶಕ್ತಿ. ಇಲ್ಲಿನ ಚೇತನದ ಕಲಿಗಳು ಇತಿಹಾಸ ಪ್ರಸಿದ್ಧ ಸಾಧನೆಗಳಿಂದ, ವಿಜೃಂಭಿಸಿ ಅಮರರಾಗಿದ್ದಾರೆ. ಇಲ್ಲಿನ, ಇವರುಗಳ, ಈ ಸಾಧನೆಗೆ ಈ ನಾಡಿನ ವೈವಿಧ್ಯತೆಗಳು ಸಾಥ್ ನೀಡಿ ಸಾಧನೆಗೆ ಸಾಕ್ಷಿಯಾಗಿವೆ. ಈ ನಾಡು ಧರ್ಮ, ಸಾಹಿತ್ಯ, ಸಂಸ್ಕೃತಿಯ ವಿಭಿನ್ನ ಭಾಷೆಯ ತವರೂರಾಗಿದೆ. ಸಸ್ಯ ಸಂಪತ್ತು ಆವರಿಸಿಕೊಂಡ ಬೆಟ್ಟ-ಗುಡ್ಡಗಳಿಂದ ಕೂಡಿದ ನೆಲ ಸಂಪತ್ತು, ಹಿತಕರಹವೆ, ಸಂಭ್ರಮ ಸಡಗರದ ಕಡಲತೀರ, ಪ್ರಜ್ಞಾವಂತ ಜನಾಂಗ ಇಲ್ಲಿನ ವೈಶಿಷ್ಟ್ಯವಾಗಿದೆ. ಕರ್ನಾಟಕದ ಚರಿತ್ರೆಯಲ್ಲಿ ಹೊಸತು ಬರಹಗಾರರನ್ನು ಹೊರತುಪಡಿಸಿದರೆ ದೇಶಿಯರಲ್ಲಿ ಪಿ.ಬಿ. ದೇಸಾಯಿ, ಆರ್.ಎಸ್. ಪಂಚಮುಖಿ, ಜಿ.ಎಸ್. ದೀಕ್ಷಿತ್, ಎಸ್. ಶೆಟ್ಟರ್, ಸೂರ್ಯನಾಥ ಕಾಮತ್, ಬಿ. ಷೇಕ್‌ಅಲಿ ಮೊದಲಾದವರನ್ನು ಹೆಸರಿಸಬಹುದು. ಆನಂತರ ತಲೆಮಾರಿನ ಇತಿಹಾಸಕಾರರಲ್ಲಿ ಸುರೇಂದ್ರರಾವ್ ಬಿ., ಎಸ್.ಎ. ಬಾರಿ, ಎಸ್. ಚಂದ್ರಶೇಖರ, ಷಟಪಣದಿ, ಎಸ್. ರಾಜಶೇಖರ, ಕೆ.ಆರ್. ಬಸವರಾಜ, ಲಕ್ಷ್ಮಣ್ ತೆಲಗಾವಿ ಮೊದಲಾದವರು ಕಂಡು ಬರುತ್ತಾರೆ.

ಸಾಧನೆಯ ದೃಷ್ಟಿಯಿಂದ ನಾಯಕರು ಬಾಳಿ ಬೆಳಗಿದ ನಾಡು. ಇಂತಹ ನಾಡಿಗೆ ಭವ್ಯವಾದ ಪರಂಪರೆಯಿದ್ದು ಉಜ್ವಲವಾದ ಇತಿಹಾಸವಿದೆ. ಸಂಸ್ಕೃತಿ ಮತ್ತು ಸಾಹಿತ್ಯವು ಈ ನಾಡಿನ ಇತಿಹಾಸದುದ್ದಕ್ಕೂ ವಿಕಾಲಶೀಲವಾಗಿ ನಡೆದುಬಂದಿವೆ. ಈ ಹಿಂದೆಯೇ ಹೇಳಿದಂತೆ ಸಮಾಜದ ವಿವಿಧ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ಸಂಶೋಧನೆಗಳು ಭರಾಟೆಯಿಂದಲೆ ನಡೆಯುತ್ತಿವೆ. ಇಂತಹ ಸಂಶೋಧನಾ ಚರಿತ್ರೆಗೆ ಮತ್ತಷ್ಟು ಮಹತ್ವ ನೀಡಿ, ಸಂಶೋಧನಾ ವಲಯಕ್ಕೆ ಹೊಸ ವಿಧಾನ ಮತ್ತು ಸ್ಥಳೀಯ ಚರಿತ್ರೆಯನ್ನು ಸಮಷ್ಠಿ ಚರಿತ್ರೆಗೆ ಭಂಗವಾದ ರೀತಿಯಲ್ಲಿ ಸ್ಥಳೀಯ ಚರಿತ್ರೆ ಕಟ್ಟಿಕೊಟ್ಟು, ತಮ್ಮದೇ ಹೊಸ ಆಲೋಚನೆಯ ದೃಷ್ಟಿಕೋನಕ್ಕೆ ಕೊಡುಗೆ ನೀಡಿದವರು ನಮ್ಮ ನಾಡಿನಲ್ಲಿ ಕಡಿಮೆಯೆ ಅಂಥವರಲ್ಲಿ ಸಂಶೋಧನೆಯನ್ನೆ ಕಾಯಕ ಮಾಡಿಕೊಂಡಿರುವ ಕಾಯಕ ಯೋಗಿ ತೆಲಗಾವಿಯವರು ನಮ್ಮ ಕಣ್ಮುಂದಿದ್ದಾರೆ.

ಸಂಶೋಧಕ ತೆಲಗಾವಿಯವರ ಮೇಲೆ ಪ್ರಭಾವಿಸಿದವರು ಎಂ.ಎಸ್. ಪುಟ್ಟಣ್ಣ, ಹುಲ್ಲೂರು ಶ್ರೀನಿವಾಸ ಜೋಯಿಸ ಮತ್ತು ಹರತಿ ವೀರನಾಯಕರು. ಚಿತ್ರದುರ್ಗ ಪಾಳೆಯಗಾರರು,

ಜರಿಮಲೆ ಮೊದಲಾದ ಪಾಳೆಯಗಾರರ ಬಗ್ಗೆ ಅಧಿಕೃತವಾಗಿ ಅಧ್ಯಯನ ಮಾಡಿದವರು ಲಕ್ಷ್ಮಣ್ ತೆಲಗಾವಿಯವರು. ಅವರಿಗೆ ಅರಿವಿಲ್ಲದಂತೆಯೆ ಬೇರೆ ಬೇರೆ ಸಂಗತಿಗಳ ಬಗ್ಗೆ ಶೋಧನೆಯಲ್ಲಿ ತೊಡಗಿದ್ದಾರೆ. ಆ ಮೂಲಕ ದೀನ-ದುರ್ಬಲರ ಹಿಂದುಳಿದವರ ತಳಸಮುದಾಯ ದವರ ವಿಮೋಚನೆಯ ಆಲೋಚನೆಯಿಂದ ಸಂಶೋಧನಾ ಅಭಿರುಚಿಯಿಂದ ವಯಸ್ಸಾದರೂ ವಿರಮಿಸಿಲ್ಲ.

ಈ ಮೇಲಿನ ಸಾಧನೆಗೆ ಇವರ ಮೇಲೆ ವಿವಿಧ ರೀತಿಯ ದಾರ್ಶನಿಕರು, ಚಿಂತಕರು, ಸುಧಾರಕರು, ಸಂಶೋಧಕರು, ತತ್ವಜ್ಞಾನಿಗಳು ಪ್ರಭಾವ ಬೀರಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಅವರುಗಳ ಗುಣಗಳ ಪ್ರಭಾವ ಲಕ್ಷ್ಮಣ್ ತೆಲಗಾವಿಯವರ ಮೇಲೆ ಆಗಿರುವ ಸಾಧ್ಯತೆಗಳು ಬಹುತೇಕ, ಅಂಥವರಲ್ಲಿ ಅವರ ಅಚ್ಚುಮೆಚ್ಚಿನ ಸಂಶೋಧಕರಾದ ಅಂಬೇಡ್ಕರ್‌ರವರು ವ್ಯಕ್ತಪಡಿಸಿದಂತೆ "ಒಬ್ಬ ಚರಿತ್ರೆಕಾರ ನಿಖರ ವಿಷಯ ಗ್ರಾಹಿಯಾಗಿರಬೇಕು. ವಿಶ್ವಾಸಕ್ಕೆ ಅರ್ಹ ನಿಷ್ಪಕ್ಷಪಾತಿಯಾಗಿ, ಆವೇಶರಹಿತ, ಏಕಾಭಿಮುಖಿಯಲ್ಲದ, ವಾತ್ಸಲ್ಯ ಮತ್ತು ಮತ್ಸರಕ್ಕೊಳಗಾಗದ ರೀತಿ ಸತ್ಯಕ್ಕೆ ನಿಷ್ಠವಾಗಿ, ನಿರ್ಭಿತವಾಗಿ ಮತ್ತು ತನ್ನ ವಿಷಯ ಪ್ರತಿಪಾದನೆಯಲ್ಲಿ ನಿರಪೇಕ್ಷನಾಗಿರುವ ಚರಿತ್ರೆಕಾರ ಭವಿಷ್ಯದ ಮುನ್ಸೂಚಕನಾಗಿ, ಮರೆಗುಳಿತನದ ಶತ್ರುವಾಗಿ, ಭೂತಕ್ಕೆ ಸಾಕ್ಷಿಯಾಗಿ, ಘಟನೆಗಳ ನಿಜರಕ್ಷಕನಾಗಿರುತ್ತಾನೆ. ಅವನು ಮುಕ್ತ (ತೆರೆದ) ಮನಸ್ಸುವುಳ್ಳವನಾಗಿರಬೇಕು ಮತ್ತು ಆಧಾರ ಸಹಿತ ಎಲ್ಲಾ ಸಾಕ್ಷಿಗಳನ್ನು ಸಂಗ್ರಹಿಸಿ ಅವುಗಳ ಅಸಲಿ ನಕಲಿಗಳನ್ನು ಪರೀಕ್ಷಿಸಿ ಪ್ರಚುರಪಡಿಸುವವನಾಗಿರಬೇಕು" ಎಂದು ಅಂಬೇಡ್ಕರ್‌ರವರು ಒಬ್ಬ ಚರಿತ್ರೆಕಾರನ ಗುಣದ ಮಹತ್ವವನ್ನು ತಿಳಿಸುತ್ತಾರೆ. ತಿಳಿಸುವುದಷ್ಟೇ ಅಲ್ಲದೇ ಅದೇ ದಾರಿಯಲ್ಲಿ ಸಾಗಿದ್ದರಿಂದ ಅನೇಕ ಪರಿಕಲ್ಪನೆಗಳಿಗೆ ವೈಜ್ಞಾನಿಕ ನೆಲೆ ಕಂಡುಕೊಂಡು ಮಾನವತೆಯ ನೆಲೆಯಲ್ಲಿ ವಸ್ತುನಿಷ್ಠವಾಗಿ ಸಂಶೋಧಿಸಿ, ಸತ್ಯವನ್ನು ಸಮಾಜಕ್ಕೆ ನೀಡಿದವರಾಗಿದ್ದಾರೆ. ಇಂಥದ್ದೇ ಸಂಶೋಧನಾ ಹಾದಿಯಲ್ಲಿ ಪಯಣ ಬೆಳೆಸಿದ ತೆಲಗಾವಿಯವರು ತಲುಪಬೇಕಾದ ಸ್ಥಳಕ್ಕೆ ಕ್ರಮಸುತ್ತಿದ್ದಾರೆ. ಆದರೆ ಕ್ರಮಸಿದಂತೆಯೇ ಆ ಸಂಶೋಧನಾ ಪರಿಕಲ್ಪನೆ ಮತ್ತಷ್ಟು ತೆರೆದುಕೊಳ್ಳುತ್ತಾ ಸಾಗುತ್ತಿದೆ. ಹೀಗಾಗಿ ಸಂಶೋಧನಾ ನಿಲ್ದಾಣ ದೊರೆತಿಲ್ಲ, ಪಯಣ ನಿಂತಿಲ್ಲ, ಅಂತಿಮ ಹಂತವನ್ನು ಮುಟ್ಟಲಾಗಿಲ್ಲ. ಕಾರಣ ಸಂಶೋಧನೆ ಸ್ವರೂಪವೇ ಅಂತದ್ದು, ಒಳಹೊಕ್ಕಂತೆ ವಿಭಿನ್ನ ದಾರಿಗಳು ತೆರೆದುಕೊಂಡು ಸಂಶೋಧನಾ ಪಯಣ ಬಹುಮುಖಿ ನೆಲೆಯಲ್ಲಿ ನಡೆಯುತ್ತಿರುತ್ತದೆ.

ಇಂತಹ ಸಂಶೋಧನಾ ಪಯಣದಲ್ಲಿ ಪ್ರಯಾಣಿಕನಾಗಿರುವ ತೆಲಗಾವಿಯವರಿಗೆ ಯಾವುದೇ ಒಬ್ಬ ಸಂಶೋಧಕನ ದೃಷ್ಟಿಕೋನ ಅಥವಾ ಆಲೋಚನೆ ಅಥವಾ ಅಂತಹ ಒಬ್ಬ ಸಂಶೋಧಕರ ಅನುಯಾಯಿಯಾಗಿಲ್ಲ ಮತ್ತು ಯಾವುದೇ ಒಬ್ಬ ಸಂಶೋಧಕರ ಸಿದ್ಧಾಂತಗಳಿಂದ ಪ್ರೇರಿತರಾಗಿಲ್ಲ. ಬದಲಾಗಿ ಸಮಾಜವಿಜ್ಞಾನಗಳಲ್ಲಿ ಈ ತನಕ ಬಂದಿರುವ ಹಳಬರ ಮತ್ತು ಹೊಸಬರ ವೈಜ್ಞಾನಿಕ ವಿಧಾನಗಳನ್ನು ಪರಾಮರ್ಶಿಸಿ ಸಮರಸಗೊಳಿಸಿ, ಸಮಯ, ಸಂದರ್ಭ ಸನ್ನಿವೇಶಕ್ಕೆ ತಕ್ಕ ಹಾಗೆಯೂ, ಆಯಾ ಪರಿಕಲ್ಪನೆಗೆ ತಕ್ಕ ಹಾಗೆ ಮಾರ್ಪಾಡಿಸಿಕೊಂಡು ಸಂಶೋಧನೆಗೆ ಮುಂದಾಗಿದ್ದಾರೆ. ಏಕೆಂದರೆ ಇಲ್ಲಿಯ ತನಕವೂ ಸಮಾಜ ವಿಜ್ಞಾನಗಳಲ್ಲಿ ಕಂಡು ಬರುವ ಸಂಶೋಧನೆಗಳು ಹಾಗೂ ಸಂಶೋಧನಾ ವಿಧಾನಗಳಿಗೆ ಅಂತಿಮ ಅಥವಾ ನಿರ್ದಿಷ್ಟ ಅಥವಾ

ಸ್ಪಷ್ಟವಾದ ಸಂಶೋಧನಾ ವಿಧಾನಗಳಿಲ್ಲ. ಕಾರಣ ಆಯಾಕಾಲ, ಸನ್ನಿವೇಶ, ಆಕರ, ದೃಷ್ಟಿಕೋನಕ್ಕೆ ತಕ್ಕ ಹಾಗೆ ವಿಭಿನ್ನವಾಗಿ ಶೋಧಿತಗೊಂಡವುಗಳಾಗಿವೆ. ಹೀಗಾಗಿ ಲಕ್ಷ್ಮಣ್ ತೆಲಗಾವಿಯವರು ಯಾವುದೇ ಒಂದು ಸಿದ್ಧಾಂತಕ್ಕೆ ಜೋತು ಬಿದ್ದವರಲ್ಲ.

ಈ ಎಲ್ಲಾ ಕಾರಣಗಳಿಂದಾಗಿ ಲಕ್ಷ್ಮಣ್ ತೆಲಗಾವಿಯವರು ಕೈಗೊಂಡ ಸಂಶೋಧನೆ ವಿಮರ್ಶೆಗಳ ಮಹಾಪೂರವೇ ಹರಿದುಬಂದಿದೆ. ಇದರರ್ಥ ಇವರ ಸಂಶೋಧನೆಗೆ ಒಂದೇ ಮಾದರಿಯ ಸೈದ್ಧಾಂತಿಕ ಚೌಕಟ್ಟಿಲ್ಲ. ಬದಲಾಗಿ ಇವರ ಸಂಶೋಧನೆ ಬಗ್ಗೆ ಸಂಶೋಧನಾ ಪರಿಕಲ್ಪನೆಗಳ ಬಗ್ಗೆ ಕುತೂಹಲ ಹೊಸ ವ್ಯಾಖ್ಯಾನ, ಹೊಸ ಪರಿಕಲ್ಪನೆಗಳಿಗೆ ದಾರಿಯಾಗಿದೆ. ಇವರು ತಮ್ಮ ಸಂಶೋಧನೆಗೆ ಬಂದಂತಹ ವಿಮರ್ಶೆಗಳನ್ನು ಉಡಾಫೆ ಮಾಡದೆ, ತಳ್ಳಿ ಹಾಕದೆ ಅಂಥವುಗಳನ್ನೇ ಸಂಶೋಧನೆಗೆ ಪರಿಕಲ್ಪನೆಯನ್ನಾಗಿ ಮಾಡಿಕೊಂಡು, ಸಂಶೋಧನಾ ಮೆಟ್ಟಿಲುಗಳನ್ನಾಗಿ ಪರಿವರ್ತಿಸಿಕೊಂಡು, ವಸ್ತುನಿಷ್ಠವಾಗಿ, ವಾಸ್ತವತೆಯ ಸಂಶೋಧನೆ ಸ್ಥಾಪಿಸಲು ಮುಂದಾದವರಾಗಿದ್ದಾರೆ.

ತೆಲಗಾವಿಯವರೆ ಹೇಳುವಂತೆ "ಯಾವುದೇ ಒಬ್ಬ ಸಂಶೋಧಕನ ಸಂಶೋಧನೆಗಳು ಇತರ ಸಂಶೋಧಕರ, ಸಂಶೋಧನೆಯ ಪರಿಕಲ್ಪನೆಯಲ್ಲಿ ಆಕರವಾಗಿಯೂ, ಟಿಪ್ಪಣಿಯಾಗಿಯೂ, ಸಂಧರ್ೋಚಿತವಾಗಿ ಹೇಗೆ ಬಳಸಿಕೊಳ್ಳಲಾಗಿದೆ ಎಂಬುದು ಮುಖ್ಯವಾಗುವುದು. ಆ ಮಟ್ಟಿನ ಸಂಶೋಧನೆಯು ವಸ್ತುನಿಷ್ಠವಾಗಿ, ದೃಢೀಕರಣಗೊಂಡು ಬೇರೆಯವರ ಸಂಶೋಧನೆಗೆ ಆ ಸಂಶೋಧನೆಯ ಸಂಶೋಧಕನಿಗೆ ಸ್ಥಾಮಾನವೂ ನಿಗದಿಯಾಗಬಲ್ಲದು.

ವಸ್ತುನಿಷ್ಠ ಸಂಶೋಧನಾ ವಿಚಾರ ಬಂದಾಗ ತೆಲಗಾವಿಯವರದ್ದು, ದೈತ್ಯಶಕ್ತಿ, ಈ ವಿಷಯದಲ್ಲಿ ಎಂಥವರಿಗೂ ಮಣಿಯದ ಗುಂಡಿಗೆ, ಸ್ಥಳೀಯತೆಯನ್ನು ಒಂದು ಪರಿಕಲ್ಪನೆಯನ್ನಾಗಿ ಮಾಡಿಕೊಂಡು, ಸಮಕಾಲೀನತೆಗೆ, ಸಮಕಾಲೀನ ಆಧುನಿಕ ಜನತೆಯ ಮನಸ್ಸಿನೊಳಗೆ ಬೀಳುವಂತೆ, ಸಮಕಾಲೀನ ಸ್ಥಿತಿಯನ್ನು ಅನುಸಂಧಾನಗೊಳಿಸಿ, ಸಂಶೋಧನೆಗೆ ಹೊಸದಿಕ್ಕು ನೀಡಿದರು. ಹೊಸದಿಕ್ಕಿನ ಮೂಲಕವೇ ಸ್ಥಳೀಯ ಸಂಶೋಧನೆಯನ್ನು ಜನಮುಖಿಯಾಗಿಸಲು ಸಮಕಾಲೀನ ಸಂಶೋಧಕರಲ್ಲಿ ಹೊಸ ನೋಟದ ಸಂಶೋಧನಾ ಕಿಚ್ಚನ್ನು ಮೂಡಿಸಿದವರಾಗಿದ್ದಾರೆ. ಸಂಶೋಧನೆಯ ಮೂಲಕವೇ ಸಮಾಜ ವಿಜ್ಞಾನಕ್ಕೆ ಜ್ಞಾನವನ್ನು ನೀಡಬಲ್ಲ, ಜ್ಞಾನವನ್ನು ಶೋಧಿಸಿ ಅದರ ಫಲವು ಸಮಾಜಕ್ಕೆ ಉಪಯೋಗವಾಗುವಂತೆ ಜನಮುಖಿಯಾಗಿಸಿದ್ದಾರೆ.

ಇವರ ಸಂಶೋಧನಾ ಗರಡಿಯಲ್ಲಿ ಪಳಗಿದ ಸಂಶೋಧಕರು, ಪ್ರಖರಚಿಂತನೆಯ ಜ್ವಾಲಾಮುಖಿಗಳಂತೆ, ನಾಡಿನಾದ್ಯಂತ ಹೊಸ ಪರಿಕಲ್ಪನೆಯ ಮೂಲಕ ಮತ್ತಷ್ಟು ಪ್ರಕಾಶಮಾನ ವಾಗುವಂತಹ ವಾತಾವರಣ ಸೃಷ್ಟಿಸಿದ್ದಾರೆ. ಮಾರ್ಗದರ್ಶನ ನೀಡಿ ಸಂಶೋಧನಾ ಅಖಾಡಕ್ಕೆ ತಾವು ಇಳಿಯುವ ಜೊತೆಗೆ ತಮ್ಮ ಜೊತೆಯಲ್ಲಿದ್ದವರನ್ನು ಇಳಿಸಿದ್ದಾರೆ.

ಈ ಮೇಲಿನ ಗುಣವು ಕೇವಲ ಒಬ್ಬ ಸಂಶೋಧಕನದ್ದು ಮಾತ್ರವಾಗಬಾರದು, ಸಮಾಜದಲ್ಲಿರುವ ಎಲ್ಲಾ ಸಂಶೋಧಕರ ಹಂಬಲವೂ ಆಗಿರಬೇಕೆಂದು ಬಯಸುತ್ತಾರೆ.

ಸಂಶೋಧಕನು ಮಾನವನಾಗಿರುವುದರಿಂದಾಗಿ ಅಲೌಕಿಕತೆ ಪ್ರಭಾವವು ಕೆಲವು ಸಲ ಲೌಕಿಕತೆಯ ಅಂಶಗಳು ಪ್ರಭಾವ ಬೀರುತ್ತವೆಯಾದರು. ಅವೆಲ್ಲವನ್ನು ಸಹಿಸಿಕೊಳ್ಳುವುದೇ ಸಂಶೋಧಕರ ನೈಜತೆಯಾಗಿದೆ. ತಮ್ಮ ವೈಯಕ್ತಿಕ ಖಾಸಗೀ ಬದುಕಿನಲ್ಲಿ, ಸ್ವಾರ್ಥಕ್ಕಾಗಿ ಸುಳ್ಳು ಹೇಳಿದವರಲ್ಲ, ಮೋಸ ಮಾಡಿದವರಲ್ಲ. ತಡವಾದರೂ ಸರಿಯೆ ವಾಸ್ತವ ಮತ್ತು ವೈಜ್ಞಾನಿಕ ತಳಹದಿಯ ಮೂಲಕ ಸಾಮಾಜಿಕ ಸಂಗತಿಗಳಿಗೆ ನ್ಯಾಯ ನೀಡಿದವರಾಗಿದ್ದಾರೆ. ಈ ತರಹದ ಸಂಶೋಧನಾ ಗುಣವು ಇವರಲ್ಲಿ ಬರುವುದಕ್ಕೆ ಮುಖ್ಯ ಕಾರಣ. ಜನಸಾಮಾನ್ಯರ ಬದುಕು, ಬವಣೆಯೆ ಇವರ ಸಂಶೋಧನಾ ಪ್ರವೃತ್ತಿಯ ವಿಕಾಸಕ್ಕೆ ವೇಗ ದೊರೆತಿದೆ.

ವರ್ತಮಾನ ಜಗತ್ತಿನಲ್ಲಿ, ಪ್ರತಿಕ್ಷೇತ್ರದಲ್ಲಿಯು ಆರ್ಥಿಕತೆಯ ಬೆನ್ನೇರಿದ ಮಾನವನೀಗ, ಚರಿತ್ರೆಗೆ ಸಂಬಂಧಿಸಿದಂತೆ ಆತನ ಅಪೇಕ್ಷೆ ಕಡಿಮೆಯೇ. ಏಕೆಂದರೆ ಸುಖ-ಸಂಪತ್ತು ತಂದುಕೊಡದ ಸಿದ್ಧಾಂತ ಅಥವಾ ಚರಿತ್ರೆ ಓದುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಕೇವಲ ಕೆಲವೇ ಬೆರಳೆಣಿಕೆಯ ಸಂಶೋಧನಾ ಆಸಕ್ತರು ಅಥವಾ ಬುದ್ಧಿಜೀವಿಗಳು ಎನಿಸಿಕೊಂಡವರು ಮಾತ್ರ, ಲೌಕಿಕ ಸುಖ ಪಕ್ಕಕ್ಕಿಟ್ಟು ಅಧ್ಯಯನಿಸುವರು. ಹೀಗಾಗಿಯೆ ಸಂಶೋಧನೆಯಿಂದ ಅದರಲ್ಲೂ ಸ್ಥಳೀಯದಂತ ಚರಿತ್ರೆಯ ಸಂಶೋಧನೆಗಳಿಂದ ಏನೂ ಬದಲಾಗದು. ಯಾವುದು ಬದಲಾಗಿಲ್ಲವೆಂದು ಹೇಳುವವರು ಹಲವರಿದ್ದಾರೆ.

ಇಂತಹ ಅಪವಾದದ ವಾದಿಗಳಿಗೆ ತೆಲಗಾವಿಯವರ ಉತ್ತರ ಬೇರೇನೆಯಾಗಿದೆ. ಈ ಮೇಲಿನ ಅಪವಾದಗಳು ಅಥವಾ ಅನಿಸಿಕೆಗಳು ಮನೋಭಾವನೆಗಳು ಒಂದು ಚರಿತ್ರೆ ಸಂಶೋಧನೆಗೆ ಸಂಬಂಧಿಸಿದಂತೆ ಸಹಜವಾಗಿವೆ. ಆದರೆ ಇಂಥವರು ಅಂದುಕೊಂಡಂತೆ ಪೂರ್ಣ ನಿಜವಲ್ಲ, ಬದಲಾಗಿ ಬಹಳಷ್ಟು ಬದಲಾವಣೆಗಳಾಗಿವೆ. ಆದರೆ ಪವಾಡ ಎಂಬಂತೆ ಬದಲಾಗಿಲ್ಲ. ಹೀಗಾಗಿ ಜನಸಾಮಾನ್ಯರೆದುರು ಅರ್ಥಮಾಡಿಕೊಳ್ಳುವ, ಲಾಭ ತರುವ ಪ್ರಸಂಗಗಳು ಕಾಣುತ್ತಿಲ್ಲ, ಅತ್ಯದ್ಭುತವೆನಿಸುವ ಪ್ರಸಂಗಗಳು ಅವರ ಎದುರಿಗಿಲ್ಲವಾದ್ದರಿಂದ, ತಮ್ಮ ಬದುಕಿನಲ್ಲಿ ವ್ಯತ್ಯಾಸ ತರುವಂಥದ್ದು ಏನೂ ಆಗಿಲ್ಲವಾದ್ದರಿಂದ ಈ ತರದ ಗ್ರಹಿಕೆ ಸಾಮಾನ್ಯ.

ಅನೇಕ ಬಾರಿ ಕೆಲವು ಸಂಶೋಧನೆಗಳು ಶೀತಲವಾಗಿದ್ದರೆ, ಮನೋಭಾವನೆಗಳು ತೀವ್ರ ವೇಗದಲ್ಲಿ, ತಮ್ಮ ನೇರ ನೋಟದ ತೀರ್ಪನ್ನು ದಾಖಲಿಸಿ ಬಿಡುತ್ತಾರೆ. ಗಟ್ಟಿತನವನ್ನು ಸಂಶೋಧನೆಗಳಲ್ಲಿ ಕಾಣಬೇಕಾದರೆ ಕೆಲವು ಸಲ ಬಹು ಸಮಯ ತೆಗೆದುಕೊಳ್ಳುವುದು. ಇಂಥದಲ್ಲಿ ದಿಢೀರನೆ ಫಲ ನಿರೀಕ್ಷಿಸಲಾಗದು, ಕೆಲವು ಸಂಶೋಧನೆಗಳಲ್ಲಿ, ಸಂಶೋಧನೆಗಳು ಆಮೆ ನಡಿಗೆ ಹಾಕುತ್ತಿದ್ದರೆ ಮಾನವನ ಮನೋಭಾವನೆಗಳು ಮತ್ತು ನಿರ್ಧಾರಗಳು ಕುದುರೆ ಓಟದಲ್ಲಿ ಓಡುತ್ತಿರುತ್ತದೆ. ಆ ಕಾರಣಕ್ಕಾಗಿಯೆ ನಿರೀಕ್ಷೆ ಮತ್ತು ಕಾರ್ಯ ಸಾಧನೆಗಳು ಸಂಧಿಸಲಾಗದಷ್ಟು, ಅಂತರ ಸಂಶೋಧನಾ ಕ್ಷೇತ್ರದಲ್ಲಿ ಇದ್ದೇ ಇರುತ್ತದೆ. ಸಂಶೋಧನೆಗಳು ತೀವ್ರ ವೇಗದಲ್ಲಿ ಓಡಬೇಕೆಂಬ ಕಾರಣಕ್ಕೆ ವಾಸ್ತವತೆ, ವಸ್ತುನಿಷ್ಠತೆ, ದೃಢೀಕರಣ ಬಲಿ ಕೊಡಬೇಕಾಗಿಲ್ಲ. ಒಂದು ಸಂಶೋಧನೆ ಕೈಗೊಳ್ಳುವ ಸಂಶೋಧಕನಿಗೆ ಇಂತಹ ಕೆಲವು ಅಪವಾದವನ್ನು ಸಂಶೋಧಕನಾದವನು ಸ್ವೀಕರಿಸಲೇಬೇಕು. ಕೆಲವು ಸಮಯದ ನಂತರ

ಸಂಶೋಧನೆಗೆ, ನಿಖರ ಫಲಿತಾಂಶ ದೊರೆತಾಗ, ಏತಕ್ಕಾಗಿ ಫಲಿತಾಂಶಗಳು ನಿಧಾನವಾಗುತ್ತಿವೆ ಎಂಬುದು ಗೊತ್ತಾಗುತ್ತದೆ. ಇಲ್ಲವೆಂದರಲ್ಲಿ ದುಡುಕಿನಿಂದ, ಅವಸರದಿಂದ ಸಂಶೋಧನೆ ಕೈಗೊಂಡರೆ, ಓದುಗ ಲೋಕವನ್ನು, ಸಂಶೋಧನಾ ಸಮಾಜವನ್ನು ಮೋಸದ ಜಾಲದಲ್ಲಿಡಬೇಕಾದ ಸಂದರ್ಭ ಬರುತ್ತದೆ. ಈ ತರದ ಅವಸರದ ಸಂಶೋಧನೆಯಿಂದ ಪರಿಕಲ್ಪನೆಗೆ ಅನ್ಯಾಯ ಅಧ್ಯಯನಕಾರರಿಗೆ ಎಷ್ಟೋ ಸಾರಿ ಮೋಸ ಮಾಡಿದ್ದಾರೆ. ಅದುವೇ ಅಂತಿಮ ಸತ್ಯವೆಂದು ನಂಬಿಸಿದ್ದಿದೆ. ಅಂತಹ ಅಪವಾದಗಳಿಂದ ಆಚೆ ಬರಬೇಕಾದರೆ ವಾಸ್ತವ, ವಸ್ತುನಿಷ್ಠತೆಯ ಸಂಶೋಧನೆಗಳು ಅನಿವಾರ್ಯ ವಾಗಿದೆ. ಹಾಗೆಯೇ ನಿಧಾನವು ಅನಿವಾರ್ಯವಾಗಿದೆ.

ಆದರೆ ಸಂಶೋಧನೆಗೆ ಸಂಬಂಧಿಸಿದಂತೆ ಸಮಾಧಾನಕರ ಸಂಗತಿ ಎಂದರೆ ಆಗಿರುವ ಮೋಸವನ್ನು ಸರಿಪಡಿಸಿ ನಿಧಾನವಾಗಿಯಾದರೂ, ಹೊಸ ಸತ್ಯಗಳು ಶೋಧನೆಗೊಂಡಿದ್ದರಿಂದ ಜನರ ಅಭಿಪ್ರಾಯಗಳು ಮತ್ತು ಸಂಶೋಧಕರ ಅಭಿಪ್ರಾಯಗಳು ಬದಲಾಗುತ್ತಿವೆ.

ಬದಲಾವಣೆಯು ಒಂದು ಸಂಶೋಧನೆಯ ಗುಣವು ಆಗಿರುವುದರಿಂದ ಅಂತಹ ಬದಲಾವಣೆಗೆ ತಮ್ಮದೇ ಕೊಡುಗೆ ನೀಡಿದವರು ತೆಲಗಾವಿಯವರು ಅಗ್ರಗಣ್ಯರಾಗಿದ್ದಾರೆ. ತಮ್ಮ ಪ್ರತಿ ಸಂಶೋಧನೆಯಲ್ಲಿ ಪ್ರಾಮಾಣಿಕನೋಟ, ಪ್ರಖರ ನುಡಿ, ಅರ್ಥಗರ್ಭಿತ, ವೈಚಾರಿಕ ವಿಶ್ಲೇಷಣೆಯ ನೆಲೆಗಳನ್ನು ಮೆಚ್ಚುವ, ಹೊರತರುವುದರ ಜೊತೆಗೆ, ಚಾರಿತ್ರಿಕ ಸಂದರ್ಭಗಳನ್ನು ಅನಿವಾರ್ಯತೆಗಳನ್ನು ಅರಿತಿದ್ದಾರೆ. ಇರುವ ಮಿತಿಯಲ್ಲಿಯೆ ಸಂಶೋಧನ ತಂಡದೊಂದಿಗಿನ ಸಹಕಾರದಿಂದ, ಪ್ರಾಮಾಣಿಕ ಸಂಶೋಧನೆ ಕೈಗೊಂಡಿರುವುದನ್ನು ಎಲ್ಲರೂ ಒಪ್ಪಲೇಬೇಕಾದ ಸಂಗತಿಯಾಗಿದೆ.

ಒಟ್ಟಿನಲ್ಲಿ ಅಧ್ಯಯನಶೀಲವಾದ ಸಂಶೋಧನೆಯು ಹಲವು ಮಾಹಿತಿಯ ಮೂಲಕ, ಚಾರಿತ್ರಿಕ ವಿಶ್ಲೇಷಣೆಯ ಹಿನ್ನಲೆಯಿಂದಲೇ, ಹಿನ್ನೆಲೆ ಒದಗಿಸುತ್ತಾ, ಸಮಕಾಲೀನತೆಯೊಂದಿಗೆ ಚಿಂತನೆಯನ್ನು ನಿಷ್ಠೆಯಿಂದ ನಡೆಸಿದ್ದಾರೆ. ಪ್ರತಿ ಸಂಶೋಧನಾ ಪರಿಕಲ್ಪನೆಗಳನ್ನು ಪ್ರಶ್ನೆ ಮತ್ತು ಉತ್ತರವನ್ನು ಒಟ್ಟಿಗೆ ಎದುರಿಸುತ್ತಲೆ, ವಿವರಿಸಿ, ಉತ್ತರ ದೊರಕಿಸಿಕೊಡುತ್ತಾರೆ. ಹಾಗಾಗಿ ತೆಲಗಾವಿಯವರು ಬಹಳಷ್ಟು ಸಂಶೋಧಕರಿಂದ, ಅಷ್ಟೇ ಏಕೆ ವಿಮರ್ಶಕರಿಂದಲೂ ಮೆಚ್ಚುಗೆ ಪಡೆದುಕೊಂಡ, ಕರುನಾಡ ಕಂಡ ಅಪ್ರತಿಮ ಸಂಶೋಧಕ, ಕನ್ನಡಪರ ಹೋರಾಟಗಾರ, ಸಂಶೋಧನಶಾಸ್ತ್ರಜ್ಞನಾಗಿದ್ದಾರೆ. ಚಿಂತನೆ, ಸಂಶೋಧನೆ, ಅಭಿನಯ, ನಿರೂಪಣೆ, ವಿಶ್ಲೇಷಣೆ, ನಿರ್ದೇಶನ, ಗ್ರಂಥಸಂಪಾದನೆ, ಸ್ಮರಣ ಮತ್ತು ಅಭಿನಂದನ ರೂವಾರಿಯಾಗಿಯೂ, ಲೇಖನಗಳ ಲೇಖಾಗ್ರಿಯಾಗಿಯೂ ಹಲವು ಮಜಲಿನ ಸಾಹಿತ್ಯ-ವೈಚಾರಿಕ ಸಂಗತಿ ಮೈಗೂಡಿಸಿಕೊಂಡ ಮೇರು ಸಂಶೋಧಕರೆನಿಸಿಕೊಂಡವರಿವರಾಗಿದ್ದಾರೆ. ನಾಡಿಗೆ ಅಥವಾ ಸಂಶೋಧನಾ ಲೋಕಕ್ಕೆ ಒಳ್ಳೆಯ ವಿದ್ವತ್‌ರೂಪದ ಸಂಶೋಧನೆಯ ಮೂಲಕ ಓದಿಸುವ, ಚರ್ಚಿಸುವ, ವಿಚಾರವನ್ನು ಬಳಸುವ ಮೂಲಕ ಓದುಗ ಲೋಕವನ್ನು ಸದಾಕಾಲವೂ ಚಲಿಸುವಂತೆ ಮಾಡಿದ್ದಾರೆ.

ಅಧ್ಯಯನದ ಫಲಿತಗಳು

ಲಕ್ಷ್ಮಣ್ ತೆಲಗಾವಿಯವರು ಸರ್ವತೋಮುಖಿ ಚಿಂತಕರು. ಉತ್ತಮ ಬರಹಗಾರರು. ಹಾಗೆಯೇ ಪಾಂಡಿತ್ಯಪೂರ್ಣ ವಾಗ್ಮೀಗಳು ಆಗಿರುವರು.

* ಏಕಮುಖಿ ಸಂಶೋಧನೆಯ ಮೂಲಕ ಸಮಾಜದಲ್ಲಾಗುತ್ತಿರುವ ಅಪಾಯಕಾರಿ ಪಲ್ಲಟವನ್ನು ಗುರುತಿಸಿ, ಬಹುಸಂಸ್ಕೃತಿಯ ಕಥನಗಳನ್ನು ತಳಸಮುದಾಯದಲ್ಲಿರುವ ಸಮುದಾಯಕ್ಕೆ ತಲುಪಿಸುವುದು ಲಕ್ಷ್ಮಣ್ ತೆಲಗಾವಿಯವರ ಸಂಶೋಧನೆಯಾಗಿದೆ.

* ಅಲಕ್ಷಿತ ಕ್ಷೇತ್ರವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳುತ್ತಿದ್ದರು. ಆ ಮೂಲಕ ದೊರೆತ ಆಕರಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದ್ದು, ಅದು ಸಮಾಜಕ್ಕೆ ಕೊಟ್ಟ ಹೊಸ ಕೊಡುಗೆ ಆಗಿರುತಿತ್ತು.

* ಲಕ್ಷ್ಮಣ್ ತೆಲಗಾವಿಯವರು ಮೊದಲು ಸಂಪ್ರದಾಯವಾದಿ ಹಿನ್ನೆಲೆಯ ಬರಹಗಾರರಾಗಿದ್ದು, ಕನ್ನಡ ವಿಶ್ವವಿದ್ಯಾಲಯ ಪ್ರವೇಶಿಸಿದ ಮೇಲೆ ಅವರ ಅಧ್ಯಯನಶಿಸ್ತು, ಸಿದ್ಧಾಂತ, ವಿಚಾರಗಳು ಬದಲಾದವು. ಹಾಗಾಗಿಯೇ ಎಡಪಂಥೀಯ ಸಿದ್ಧಾಂತಗಳ ಮೂಲಕ ಚರಿತ್ರೆಯನ್ನು ಕಟ್ಟಿಕೊಡುವ ಪ್ರಯತ್ನ ಮಾಡುತ್ತಿದ್ದರು.

* ಹಲವು ಸಂಕಥನಗಳ ಮೂಲಕ ಸಮಾಜದ ಬಹುತ್ವದ ಆಶಯಗಳನ್ನು ಕಟ್ಟಿಕೊಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಇಲ್ಲಿನ ಸಂಶೋಧನೆಯಿಂದ ಸಾಧ್ಯವಾಗಿದೆ.

* ಹೊಸತನ, ಹೊಸ ವಿಚಾರ ಅಥವಾ ಹೊಸ ಪರಿಕಲ್ಪನೆಗಳಿಗೆ ಆದ್ಯತೆ ನೀಡಿ ಈಗಿರುವ ಮಾದರಿಗಳಿಗಿಂತ ಇನ್ನಷ್ಟು ಸೃಜನಶೀಲವಾಗಿ, ಆಪ್ತವಾಗಿ, ಭಿನ್ನರಾಗಿ, ಸಂಕಥನವನ್ನು ಚರಿತ್ರಾ ಸಂಶೋಧನದ ಮೂಲಕ ಶ್ರಮಜೀವಿಗಳ ಬದುಕನ್ನು ಸಂಶೋಧಿಸಿದ ಪ್ರಸಕ್ತ ಸಂಶೋಧನೆಯಾಗಿದೆ.

* ಔಪಚಾರಿಕ ಮತ್ತು ಅಕಾಡೆಮಿಕ್ ವಾಸ್ತವಿಕ ನೆಲೆಯಲ್ಲಿ ಅರಿಯುವ ಉತ್ಸಾಹ ತೋರಿ ಆ ಮೂಲಕ ಯಶಸ್ವಿಯ ಪ್ರಯತ್ನವು ಫಲ ಕೊಟ್ಟಿದೆ ಎಂಬುದು ಈ ಸಂಶೋಧನೆಯು ಒಳಗೊಂಡಿದೆ.

* ಪ್ರಸ್ತುತದ ಸಂದರ್ಭದಲ್ಲಿ ಒಂದು ಧರ್ಮ, ಒಂದು ಭಾಷೆ, ಒಂದು ಜನಾಂಗ, ಒಂದು ಸಮುದಾಯ ಹಾಗೂ ಒಂದು ಪ್ರಾಂತ್ಯವೆಂಬ ಅಪಾಯಕಾರಿ ಮಾದರಿಗಳು ಹೊರಹೊಮ್ಮಿ ಅನೇಕರು ಇದನ್ನೇ ಬೆನ್ನು ಹತ್ತುತ್ತಿದ್ದಾರೆ. ಇಂಥಲ್ಲಿ ಬಹುತ್ವವು ಮರೆಯಾಗುವ ಅಪಾಯದಲ್ಲಿದೆ. ವಿಚಿತ್ರವೆಂದರೆ ಇಂತಹ ಸಮುದಾಯದಿಂದ ಬಂದವರಿಗೂ ಇದರ ಅರಿವಿಲ್ಲವಾಗಿದೆ. ಈ ತರದ ಅಪಾಯಕಾರಿ ಸಂಗತಿಗಳಿಂದ ಆಚೆ ಬಂದು ಬಹುತ್ವತೆ ತಿಳಿಸುವುದು ಮತ್ತು ಅಪಾಯಕಾರಿ ಸಂಗತಿಗೆ ನಿಲುಕಿದ ಸಮುದಾಯಗಳನ್ನು ಈ ಸಂಶೋಧನೆಯಿಂದಲೆ ಎಚ್ಚರಿಸುವ ಸಂಶೋಧನ ಪ್ರಯತ್ನ ಮಾಡಲಾಗಿದೆ.

* ಚಿತ್ರದುರ್ಗದ ಇತಿಹಾಸ ಕುರಿತಂತೆ ದೊರೆತ ಹಲವು ಬಿಡಿ ಬಿಡಿಯಾದ ಲೇಖನ, ಹಸ್ತಪ್ರತಿ, ಶಾಸನ, ಕೃತಿಗಳ ಮೂಲಕ ಇಡಿಯಾಗಿ ದುರ್ಗದ ಇತಿಹಾಸ ಕಟ್ಟಿಕೊಟ್ಟಿದ್ದಾರೆ.

* ಇವರ ಸಮಗ್ರ ಅಧ್ಯಯನದ ಮೂಲಕ ದಲಿತರಿಗೆ, ಶೋಷಿತರಿಗೆ ಹಾಗೂ ಮಹಿಳೆಯರಿಗೆ ನ್ಯಾಯ ಒದಗಿಸುವ ಕಾರ್ಯವಾಗಿದೆ.

* ಪ್ರಾದೇಶಿಕ ಅಧ್ಯಯನದ ಮೂಲಕ ಸಮಗ್ರ ಇತಿಹಾಸದ ಅಧ್ಯಯನಕ್ಕೆ ಯುವಸಂಶೋಧಕರಿಗೆ ನಾಂದಿ ಹಾಡಿದ್ದಾರೆ.

* ಮಂದಗತಿಯಲ್ಲಿ ಅಧ್ಯಯನಗಳು ನಡೆದರೂ ತಾತ್ವಿಕವಾಗಿ, ತಾರ್ಕಿಕವಾಗಿ ಮತ್ತು ನೈಜವಾಗಿ, ಆಳವಾಗಿ, ತಲಸ್ಪರ್ಶಿಯಾಗಿ ಅಧ್ಯಯಿನಿಸುವ ಪ್ರಯತ್ನ ಮಾಡಿದ್ದಾರೆ.

* ವ್ಯಕ್ತಿಯ ಮೂಲಕ ಚಿತ್ರದುರ್ಗದ ಇತಿಹಾಸವನ್ನು ಹಾಗೂ ಚಿತ್ರದುರ್ಗದ ಮೂಲಕ ವ್ಯಕ್ತಿಯನ್ನು ಕುರಿತು ಅಧ್ಯಯಿನಿಸುವುದನ್ನು ಕಾಣಬಹುದಾಗಿದೆ. ಲಕ್ಷ್ಮಣ್ ತೆಲಗಾವಿಯವರು ನುಡಿದಂತೆ ನಡೆಯುವ ಸ್ವಭಾವದವರು. ತಮಗೆ ಎಷ್ಟೇ ಕಷ್ಟ ಬಂದರೂ ಸ್ವಾಭಿಮಾನವನ್ನು ಬಿಟ್ಟು ಕೊಡುತ್ತಿರಲಿಲ್ಲ.

* ಬೇರೆ ಬೇರೆ ಮತ್ತು ಸ್ವತಃ ಸಂಘ-ಸಂಸ್ಥೆಗಳನ್ನು ಕಟ್ಟಿ ಅವುಗಳನ್ನು ಪೋಷಿಸುತ್ತಾ ಸಂಶೋಧನಾ ಕ್ಷೇತ್ರಕ್ಕಾಗಿ ಅವುಗಳನ್ನು ಅರ್ಪಿಸಿಕೊಂಡಿದ್ದು ಲಕ್ಷ್ಮಣ್ ತೆಲಗಾವಿಯವರ ಸಾಧನೆ. ಇತಿಹಾಸ ಅಕಾಡೆಮಿಯನ್ನು ಕಟ್ಟಿ ಬೆಳೆಸಿದ ಕೀರ್ತಿ ತೆಲಗಾವಿಯವರಿಗೆ ಸಲ್ಲಬೇಕು.

* ಕರ್ನಾಟಕ ಹಿಸ್ಟರಿ ಕಾಂಗ್ರೆಸ್‌ನ ಶಾಶ್ವತ ಸದಸ್ಯರಾಗಿ, ವಿವಿಧ ಸಮ್ಮೇಳನಗಳಲ್ಲಿ ಗೋಷ್ಠಿಗಳ ಅಧ್ಯಕ್ಷತೆ, ಕಾರ್ಯಕ್ರಮದ ಉದ್ಘಾಟನೆ ಮಾಡಿದ್ದಾರೆ.

* ವೈದಿಕ ಸಂಸ್ಕೃತಿಯ ಪ್ರಭಾವದಿಂದಾಗಿ ಅವೈದಿಕವಾದ ಸಂಸ್ಕೃತಿಯನ್ನು ನಾಗರಿಕವಲ್ಲವೆಂದೇ ಭಾವಿಸಿದ್ದರಿಂದ ಅವೈದಿಕ ಸಂಸ್ಕೃತಿಗಳು ನೇಪಥ್ಯಕ್ಕೆ ಸರಿದಿರುವುದರಿಂದ ಅಂತಹ ನೇಪಥ್ಯಕ್ಕೆ ಸರಿದಿದ್ದ ಸಂಸ್ಕೃತಿಯನ್ನು ಮುಖ್ಯವಾಹಿನಿಗೆ ತರುವ ಪ್ರಯತ್ನ ಈ ಸಂಶೋಧನೆಯಿಂದ ಸಾಧ್ಯವಾಗಿದೆ.

* ಪ್ರಸ್ತುತ ಅಧ್ಯಯನದ ಕೇಂದ್ರಬಿಂದು ಲಕ್ಷ್ಮಣ್ ತೆಲಗಾವಿಯ ಅವರು ಚಿತ್ರದುರ್ಗ ಇತಿಹಾಸ ಸಂಶೋಧನೆಯ ವಾರಸುದಾರರು ಎಂದರೆ ತಪ್ಪಲ್ಲ. ಆ ಮೂಲಕ ಭಾರತದ ಚರಿತ್ರೆಯಲ್ಲಿ ಚಿತ್ರದುರ್ಗ ಪಾಳೆಯಗಾರರು ಮತ್ತು ಒನಕೆ ಓಬವ್ವಳನ್ನು ಸಂಶೋಧನೆ ಮಾಡಿರುವುದು ಇದಕ್ಕೆ ಸಾಕ್ಷಿ.

* ಚಿತ್ರದುರ್ಗದ ಪ್ರಾಚೀನ ಚರಿತ್ರೆ ಮತ್ತು ಮಧ್ಯಕಾಲೀನ ಚರಿತ್ರೆ ಮರೆಯಾಗಿತ್ತು. ಇಂಥ ಮಹತ್ವದ ಅಧ್ಯಯನವನ್ನು ಬೆಳಕಿಗೆ ತಂದವರು ಲಕ್ಷ್ಮಣ್ ತೆಲಗಾವಿಯವರು. ಹಾಗೆಯೇ ಕರ್ನಾಟಕದ ಪ್ರಾಚೀನ ಚರಿತ್ರೆ, ಮಧ್ಯಕಾಲೀನ ಮತ್ತು ಆಧುನಿಕ ಚರಿತ್ರೆಯ ಅಲಕ್ಷಿತ ಕ್ಷೇತ್ರಗಳಿಗೆ ಆದ್ಯತೆ ಕೊಟ್ಟು ಅಧ್ಯಯನ ಮಾಡಿದ್ದು ಸ್ಪಷ್ಟ.

ಒಟ್ಟಾರೆ ಹೇಳುವುದಾದರೆ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟುವಲ್ಲಿ ತೆಲಗಾವಿಯವರ ಪಾತ್ರ ದೊಡ್ಡದು. ಆ ಮೂಲಕ ಜನ ಸಮುದಾಯಗಳ ಚರಿತ್ರೆಯನ್ನು ಸಂಶೋಧಿಸಲು ಪ್ರೇರೇಪಿಸಿದರು. ಬೇಡ, ಹೊಲೆಯ, ಮಾದಿಗ ಮೊದಲಾದವರ ಬಗ್ಗೆ ಸಂಶೋಧನೆ ಮಾಡಿರುವುದು ಗಮನಾರ್ಹ. ತಾವು ಬೆಳೆದು ಸಂಘ - ಸಂಸ್ಥೆಗಳನ್ನು ಮತ್ತು ಯುವ ಸಂಶೋಧಕರನ್ನು ಬೆಳೆಸಿದ್ದು ಸ್ಮರಣೀಯ. ಯುವ ಸಂಶೋಧಕರಿಗೆ, ಮುಂದಿನ ತಲೆಮಾರಿಗೆ ಲಕ್ಷ್ಮಣ್ ತೆಲಗಾವಿಯವರ ಬರಹ, ಸಂಶೋಧನೆಗಳು ಮಾರ್ಗದರ್ಶನ ಮಾಡುತ್ತವೆಂಬುವುದರಲ್ಲಿ ಎರಡು ಮಾತಿಲ್ಲ.

◆◆

ಅನುಬಂಧಗಳು

೧. ಪರಾಮರ್ಶನ ಗ್ರಂಥಗಳು
೨. ವಕ್ತೃ ವಿವರ
೩. ಲಕ್ಷ್ಮಣ್ ತೆಲಗಾವಿ ಅವರ ಜೀವನದ ಪ್ರಮುಖ ಘಟನೆಗಳು
೪. ಛಾಯಾಚಿತ್ರಗಳು

೧. ಪರಾಮರ್ಶನ ಗ್ರಂಥಗಳು

೧. ಅಮರೇಶ ನುಗಡೋಣಿ, **ಹೈದರಾಬಾದ್ ಕರ್ನಾಟಕ ಹಾಡು-ಪಾಡು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.

೨. ಅರವಿಂದ ಮಾಲಗತ್ತಿ, **ದಲಿತ ಸಾಹಿತ್ಯ ಚಳುವಳಿಯ ತಾತ್ವಿಕ ಚಿಂತನೆ**, ಹೊಸದಿಕ್ಕು ಪ್ರಕಾಶನ, ಬೆಂಗಳೂರು, ೧೯೮೯.

೩. ಅರವಿಂದ ಮಾಲಗತ್ತಿ, **ಗೌರ್ಮೆಂಟ್ ಬ್ರಾಹ್ಮಣ (ಆತ್ಮಕಥನ)**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು, ೨೦೧೧.

೪. ಆರಾಧ್ಯ ಬಿ.ಎಂ.ಎಂ., **ಪರಿಶಿಷ್ಟ ಜನಾಂಗದವರಿಗೆ ಸಂವಿಧಾನದ ಕೊಡುಗೆ**, ಅಪ್ಪು ಪ್ರಕಾಶನ, ಬೆಂಗಳೂರು, ೧೯೮೫.

೫. ಆರ್ಕೆ ಮಣಿಪಾಲ, **ಸಾಮಾಜಿಕ ಚಳವಳಿಗಳು**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೭.

೬. ಈಶ್ವರಪ್ಪ ಎಂ.ಜಿ., **ಮ್ಯಾಸಬೇಡರು**, ಐಬಿಎಚ್. ಪ್ರಕಾಶನ, ಬೆಂಗಳೂರು, ೧೯೮೨.

೭. ಉಷಾ ಎಂ., **ಮಹಿಳಾ ಚಳವಳಿ ಮತ್ತು ಮಹಿಳಾ ವಿಷಯಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೮. ಕಮಲೇಶ್ ಕೆ.ಆರ್., ಜಗನ್ನಾಥ್ ಎನ್.ಎ.(ಸಂ), **ಭಗೀರಥ ಸಂಕಲ್ಪ (ಭಗೀರಥ ಜಯಂತಿ ನೆನಪಿನ ಸಂಪುಟ)**, ಕುಷ್ಟಗಿ, ೧೯೯೯.

೯. ಕೊಂಡಜ್ಜಿ ವೆಂಕಟೇಶ ಕೆ.(ಸಂ), **ಭೈರಪ್ಪಭಿನಂದನ**, ಕೊಂಡಜ್ಜಿ ಮುದ್ರಣ ಮತ್ತು ಪ್ರಕಾಶನ, ರಾಜಾಜಿನಗರ, ಬೆಂಗಳೂರು.

೧೦. ಕರಿಶೆಟ್ಟಿ ರುದ್ರಪ್ಪ, **ಮ್ಯಾಸನಾಯಕರು : ಒಂದು ಜನಾಂಗಿಕ ಅಧ್ಯಯನ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೫.

೧೧. ಕೃಷ್ಣಮೂರ್ತಿ ಎ., ಪ್ರಭಾಕರ್ ಎಂ.ಎನ್., 'ಹರ್ತಿ ಬಯಲಿನ ಖಂಡಕಾವ್ಯಗಳು', **ಸಾಹಿತ್ಯಜೀವಿ (ಪ್ರೊಫೆಸರ್ ಜಿ. ವೆಂಕಟಸುಬ್ಬಯ್ಯನವರಿಗೆ ಅರ್ಪಿಸುವ ಸಂಭಾವನಾ ಗ್ರಂಥ)**, ೧೯೭೬, ಬೆಂಗಳೂರು.

೧೨. ಕೃಷ್ಣ ಅಯ್ಯರ್ ವಿ.ಆರ್.(ಅನು: ಸಂಶ ಐತಾಳ), **ದುರ್ಬಲ ವರ್ಗಗಳವರಿಗೆ ನುಡಿಯಲ್ಲಿ ನ್ಯಾಯ, ನಡೆಯಲ್ಲಿ ಅನ್ಯಾಯ**, ಅಕ್ಷರ ಪ್ರಕಾಶನ, ಸಾಗರ, ೧೯೮೪.

೧೩. ಕೃಷ್ಣಮೂರ್ತಿ ಹನೂರು, **ಮ್ಯಾಸಬೇಡರ ಸಂಸ್ಕೃತಿ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೧೪. ಕೃಷ್ಣಮೂರ್ತಿ ಹನೂರು, **ಮ್ಯಾಸಬೇಡರು**, ಸಂವಹನ, ಬೆಂಗಳೂರು, ೨೦೦೬.

೧೫. ಕೃಷ್ಣಪ್ಪ ಬಿ., **ಚಿಂತನೆಗಳು ಮತ್ತು ಬರಹಗಳು**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೯.

೧೬. ಕೃಷ್ಣಸ್ವಾಮಿ ಕೆ.ಆರ್., **ರಾಜರ್ಷಿ ರಾಜೇಂದ್ರ ಪ್ರಸಾದ್**, ಜನಪದ ಅಕಾಡೆಮಿ, ರಾಜಾಜಿನಗರ, ಬೆಂಗಳೂರು, ೧೯೯೫.

೧೭. ಕೃಷ್ಣಕೊಲ್ಹಾರ ಕುಲಕರ್ಣಿ, **ಸಂಶೋಧಕ ನಾ. ಶ್ರೀರಾಜಪುರೋಹಿತ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.

೧೮. ಕೃಷ್ಣಕೊಲ್ಹಾರ ಕುಲಕರ್ಣಿ, **ಇತಿಹಾಸ ದರ್ಶನ, ಸಂಪುಟ ೧೫**, 'ವಿಜಯನಗರ ನಿರ್ಣಾಯಕ ಯುದ್ಧದಲ್ಲಿ ರಾಮರಾಯನನ್ನು ಕೊಂದವರು ಯಾರು?, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೨೦೦೦.

೧೯. ಕಾರ್ಲ್‌ಮಾರ್ಕ್ಸ್, ಎನ್.ಪಿ. **ಶಂಕರನಾರಾಯಣರಾವ್**, ಸಪ್ನಬುಕ್‌ಹೌಸ್, ೩ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು, ೨೦೦೦.

೨೦. ಕಾಳೇಗೌಡ ನಾಗವಾರ, ನಟರಾಜ್ ಹುಳಿಯಾರ್ (ಸಂ), **ಸ್ವಾತಂತ್ರ್ಯದ ಅಂತರ್ಜಲ (ಡಾ. ರಾಮಮನೋಹರ ಲೋಹಿಯಾ ಅವರ ಪ್ರಾತಿನಿಧಿಕ ಲೇಖನಗಳು)**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೬.

೨೧. ಕೀರ್ತಿನಾಥ, ಭೋಜರಾಜ, ಶಿವಕುಮಾರ್, **ಭಾರತೀಯ ದಾರ್ಶನಿಕರು: ಸಂಕ್ಷಿಪ್ತ ಜೀವನ ಚರಿತ್ರೆಗಳು**, ವಿಜೇತ ಪ್ರಕಾಶನ, ಸ್ಟೇಷನ್ ರೋಡ್, ಮೊದಲನೇ ಅಡ್ಡರಸ್ತೆ, ಗದಗ, ೨೦೦೬.

೨೨. ಕೆಳದಿ ಗುಂಡಾಜೋಯಿಸ್ (ಅನು.), **ಲಿಂಗಣ್ಣ ಕವಿಯ ಕೆಳದಿನೃಪವಿಜಯಂ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೬.

೨೩. ಕೇಶವಶರ್ಮ ಕೆ., **ಲೆನಿನ್**, ಕರ್ನಾಟಕ ಸಾಹಿತ್ಯ ಅಕಾಡೆಮಿ, ರಶ್ಮಿ ಮುದ್ರಣ, ಸುಧಾಮನಗರ, ಬೆಂಗಳೂರು, ೧೯೯೪.

೨೪. ಕೋಡದ ಎಸ್.ಬಿ., **ವಿಜಯನಗರ ನಿರ್ಣಾಯಕ ಯುದ್ಧ**, ಕರ್ನಾಟಕ ವಿಶ್ವವಿದ್ಯಾಲಯ, ೧೯೬೮.

೨೫. ಕೋಣಂದೂರು ವೆಂಕಪ್ಪಗೌಡ (ಸಂ), **ಪರಿವರ್ತನೆಯ ಹರಿಕಾರ (ಡಿ. ದೇವರಾಜ ಅರಸು ಸ್ಮಾರಕ ಗ್ರಂಥ)**, ಯಶಸ್ವಿ ಪ್ರಕಾಶನ, ಬೆಂಗಳೂರು, ೧೯೮೫.

೨೬. ಕೋಲಕಾರ ಎಸ್.ಎಚ್., **ವಾಲ್ಮೀಕಿ ಸಂದೇಶ**, 'ಮಹಾನ್ ವ್ಯಕ್ತಿ ದಿವಂಗತ ಎಚ್.ವಿ. ವೀರನಾಯಕರು', ಮಾರ್ಚ್ ೧೯೮೪.

೨೭. ಗಂಗಾರಾಂ ಚಾಂಡಾಳ, **ಕರ್ನಾಟಕ ದಲಿತ ಚಳವಳಿ ಮತ್ತು ಡಾ. ಬಿ.ಆರ್. ಅಂಬೇಡ್ಕರ್**, ಚೈತ್ರ ಪ್ರಕಾಶನ, ಚಿಕ್ಕ ತಿರುಪತಿ (ಕೋಲಾರ ಜಿಲ್ಲೆ), ೧೯೯೨.

೨೮. ಗಣೇಶನ್ ಎಸ್., **ದಲಿತ ಸಾಹಿತ್ಯ ಚಳುವಳಿ**, ಪಂಚಮ ಪ್ರಕಾಶನ, ಬೆಂಗಳೂರು, ೧೯೮೨.

೨೯. ಗುರುನಾಥ ಎಸ್.ಆರ್. ಮತ್ತು ರವಿಶಂಕರ ಕ.ಮ., **ಪ್ರೊ. ಲಕ್ಷ್ಮಣ್ ತೆಲಗಾವಿ ಜೀವನ ಸಾಧನೆ**, ಚಿತ್ರದುರ್ಗ ಜಿಲ್ಲಾ ಸಂಶೋಧನ ತಂಡ, ಚಿತ್ರದುರ್ಗ, ೧೯೯೯.

೩೦. ಗುರುನಾಥ ಎಸ್.ಆರ್., **ದುರ್ಗಾಭಿಜಾತ**, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೨೦೧೨.

೩೧. ಗುರುನಾಥ ಎಸ್.ಆರ್., **ತೆಲಗಾವಿಜನ್**, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೨೦೧೨.

೩೨. ಗೋಪಾಲರಾವ್ ಹೇಜೀಬ್, **ಹೈದರಾಬಾದ್ ಮುಕ್ತಿ ಸಂಘರ್ಷ**, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು, ೨೦೦೧.

೩೩. ಗೋಪಾಲರಾಯ ಎಚ್.ಎಸ್., **ಹರತಿಯ ಸಿರಿ ವೀರನಾಯಕರು**, ಸಂಯುಕ್ತ ಕರ್ನಾಟಕ, ೨ ಆಗಸ್ಟ್ ೧೯೮೭.

೩೪. ಗೋಪಿನಾಥ ಎಂ., **ಸಾಮಾಜಿಕ ನ್ಯಾಯ V/s ಸಾಮಾಜಿಕ ದಕ್ಷತೆ**, ದಲಿತ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೫.

೩೫. ಗೋವಿಂದರಾಜು ಸಿ.ಆರ್., **ಕನ್ನಡ-ಕರ್ನಾಟಕತ್ವ**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೫.

೩೬. ಗೋವಿಂದರಾಜು ಸಿ.ಆರ್., **ನವಚಾರಿತ್ರಿಕವಾದ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೩೭. ಚಂದ್ರಶೇಖರ ಪಾಟೀಲ (ಸಂ), **ಕಾರ್ಮಿಕ ಸ್ನೇಹಜೀವಿ: ಮಾರ್ಕ್ಸ್-ಏಂಗೆಲ್ಸ್**, ಸಂಕ್ರಮಣ ಪ್ರಕಾಶನ, ಬೆಂಗಳೂರು, ೨೦೦೬.

೩೮. ಚಂದ್ರಶೇಖರ್ ಎಸ್., **ಸಾಮಾಜಿಕ ಚಳುವಳಿ**, ಪಂಚಮ ಪ್ರಕಾಶನ, ಬೆಂಗಳೂರು, ೧೯೮೩.

೩೯. ಚಂದ್ರಶೇಖರ ಪಾಟೀಲ, **ಕಾರ್ಮಿಕರ ಸ್ನೇಹಜೀವಿ : ಮಾರ್ಕ್ಸ್-ಏಂಗೆಲ್ಸ್**, ಸಂಕ್ರಮಣ ಪ್ರಕಾಶನ, ಬೆಂಗಳೂರು, ಏಪ್ರಿಲ್ ೨೦೦೬.

೪೦. ಚಂದ್ರಶೇಖರ ಪಾಟೀಲ (ಸಂ), **ಚಾರ್ವಾಕ ಪರಂಪರೆಯ ಪ್ರೊ. ರಾಮದಾಸ್ ಮತ್ತು ಗೀತಾನಾಗಭೂಷಣ ಅವರ ಬದುಕು-ಸಂಕ್ರಮಣ**, ಸಂಕ್ರಮಣ ಪ್ರಕಾಶನ, ಬೆಂಗಳೂರು, ಆಗಸ್ಟ್ ೨೦೦೭.

೪೧. ಚಂದ್ರಶೇಖರ ಪಾಟೀಲ (ಸಂ), **ಬುದ್ಧ ಮತ್ತು ಮಾರ್ಕ್ಸ್ ಹಾಗೂ ಬಿ.ವಿ. ನಾಯಕರು ಬರೆಯುತ್ತಾರೆ**, ಸಂಕ್ರಮಣ ಪ್ರಕಾಶನ, ಬೆಂಗಳೂರು, ಜೂನ್ ೨೦೧೦.

೪೨. ಚಂದ್ರಶೇಖರ ಕುಕ್ಕಿಕಟ್ಟೆ, **ಬದನವಾಳು ಉಮ್ಮತ್ತೂರಿನಲ್ಲಿ ನಡೆದಿದ್ದೇನು? (ವಸ್ತುನಿಷ್ಠ ಸಮೀಕ್ಷಾ ಲೇಖನಗಳು)**, ಸಂಕ್ರಾಂತಿ ಪ್ರಕಾಶನ, ಮೈಸೂರು, ೧೯೯೩.

೪೩. ಚಂದ್ರಶೇಖರ ಟಿ.ಆರ್., **ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ ಮತ್ತು ಉನ್ನತಾಧಿಕಾರಿ ಸಮಿತಿ ವರದಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೪೪. ಚಿತ್ರಲಿಂಗಯ್ಯ ಎಂ.ವಿ., **ನಾಯಕವಂಶ ಭಾಸ್ಕರ**, ವಾಲ್ಮೀಕಿ ಸಂದೇಶ, ಮಾರ್ಚ್ ೧೯೮೪.

೪೫. ಚಿತ್ರಲಿಂಗಯ್ಯ **'ಹರತಿ ಪಾಳೆಯಗಾರರ ಮೂಲ ವಂಶಾವಳಿ; ಒಂದು ವ್ಯಾಸಂಗ'**, ಹರತಿಸಿರಿ, ೧೯೮೭.

೪೬. ಚಿದಾನಂದಮೂರ್ತಿ ಎಂ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೬೬.

೪೭. ಚಿದಾನಂದಮೂರ್ತಿ ಎಂ., **ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೫.

೪೮. ಚಿನ್ನಸ್ವಾಮಿ ಸೋಸಲೆ ಎನ್., **ನಮ್ಮ ಗ್ರಾಮಗಳು: ಅಂದು-ಇಂದು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೪೯. ಚಿನ್ನಸ್ವಾಮಿ ಸೋಸಲೆ ಎನ್., **ಸಾಮ್ರಾಜ್ಯ ಮತ್ತು ಸಂಸ್ಥಾನ (ಕರ್ನಾಟಕ ಸಂಸ್ಕೃತಿ ಚರಿತ್ರೆ ಮಾಲಿಕೆ-೪)**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೫೦. ಚಿನ್ನಸ್ವಾಮಿ ಸೋಸಲೆ ಎನ್., **ನಾಲ್ವಡಿ ಕೃಷ್ಣನ ಮೈಸೂರು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೫೧. ಚಿನ್ನಸ್ವಾಮಿ ಸೋಸಲೆ ಎನ್., **ಗಡಿ ಚಳವಳಿಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೫೨. ಚಿನ್ನಸ್ವಾಮಿ ಸೋಸಲೆ ಎನ್., **ಭಾರತೀಯ ಸಮಾಜ ಮತ್ತು ದಲಿತರು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೫೩. ಚೆನ್ನಬಸವಪ್ಪ ಬೆಟ್ಟದೂರು, ನನ್ನ ಜೀವನಾನುಭವಗಳು, ಬಸವತತ್ವ ಪ್ರಸಾರ ಸಂಸ್ಥೆ, ಧಾರವಾಡ, ೨೦೦೮.

೫೪. ಜನಾರ್ಧನಭಟ್ ಬಿ., ನರಸಿಂಹಸ್ವಾಮಿ ಜೀವನ ಸಾಧನೆ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಎಂ.ಜಿ.ಎಂ. ಕಾಲೇಜ್, ಉಡುಪಿ, ೧೯೯೮.

೫೫. ಜಯಪ್ಪಗೌಡ ಡಿ.ಎಸ್., ದಿವಾನ್ ವಿಶ್ವೇಶ್ವರಯ್ಯನವರ ಕಾರ್ಯ ಸಾಧನೆಗಳು, ಶುಭೋದಯ ಪ್ರಕಾಶನ, ಮೈಸೂರು, ೧೯೯೪.

೫೬. ಜವರಯ್ಯ ಮ.ನ., ಪರಂಪರೆ ಹಾಗೂ ದಲಿತ ಬಂಡಾಯ ಸಾಹಿತ್ಯ : ಸಮಗ್ರ ಅಧ್ಯಯನ, ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು, ೧೯೯೪.

೫೭. ಜೀವೂಬಾಯಿ ಲಕ್ಷ್ಮಣ್‌ರಾವ್ (ಅನು), ಚಾರ್ಲ್ಸ್ ಡಾರ್ವಿನ್ ಆತ್ಮಕಥೆ, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ. ಲಿಮಿಟೆಡ್, ಬೆಂಗಳೂರು, ೧೯೬೧-೨೦೦೧.

೫೮. ತಿಪ್ಪಣ್ಣ ಮರಿಕುಂಟೆ, ಭೀಷ್ಮಾಚಾರ್ಯರಂತಿದ್ದ ವೀರನಾಯಕರು, ವಾಲ್ಮೀಕಿ ಸಂದೇಶ, ಮಾರ್ಚ್, ೧೯೮೪.

೫೯. ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ. ಮೂರ್ತಿ, ಮೈಸೂರು, ೧೯೬೪.

೬೦. ತಿಪ್ಪೇರುದ್ರಸ್ವಾಮಿ ಎಚ್., ಕರ್ನಾಟಕ ಸಂಸ್ಕೃತಿ ಚರಿತ್ರೆ, ಮೈಸೂರು, ೧೯೮೫.

೬೧. ತೇಜಸ್ವಿ ಕಟ್ಟೀಮನಿ, ಮಂಡಲ ವರದಿ-ಒಂದು ಅಧ್ಯಯನ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೧೯೯೦.

೬೨. ದಯಾನಂದ ಹೆಚ್., ಶ್ರೀ ವೀರನಾಯಕ: ದಲಿತಪ್ರಜ್ಞೆಯ ಪಾಳೆಯಗಾರ, ವಾಲ್ಮೀಕಿ ಸಂದೇಶ, ಮಾರ್ಚ್ ೧೯೮೪.

೬೩. ದೇವೇಂದ್ರ ದೇಸಾಯಿ (ಸಂ), ಹಾವನೂರು ವರದಿ-ಸಮಗ್ರ ಅಧ್ಯಯನ, ಚೈತ್ರಶಿಲ್ಪ ಪ್ರಕಾಶನ, ಮೈಸೂರು, ೧೯೭೯.

೬೪. ದೇ.ಜ.ಗೌ., ಅಮೆರಿಕಾ ಗಾಂಧಿ : ಮಾರ್ಟಿನ್ ಲೂಥರ್‌ಕಿಂಗ್, ಪ್ರಗತಿ ಪ್ರಕಟಣ ಮಂದಿರ, ಬಸವೇಶ್ವರ ರಸ್ತೆ, ೪ನೇ ಕ್ರಾಸ್, ಮೈಸೂರು, ೧೯೮೨.

೬೫. ದೇವಯ್ಯ ಹರವೆ, ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೧.

೬೬. ನಂಜಯ್ಯ ಎಂ., ಹೆಂಗನೂರು, ಸ್ಥಳನಾಮಗಳು, ಪ್ರಚಾರ ಪುಸ್ತಕ ಮಾಲೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೬೭. ನಂಜರಾಜ ಅರಸು ಪಿ.ವಿ., ಚಂದ್ರರಾಜ ಎನ್.ಆರ್. (ಸಂ), **ನಾಲ್ವಡಿ ಕೃಷ್ಣರಾಜ ಒಡೆಯರ್ : ಒಂದು ದರ್ಶನ,** ಅಖಿಲ ಕರ್ನಾಟಕ ಅರಸು ಪರಿಷತ್ತು, ಮೈಸೂರು.

೬೮. ನಾಗರಾಜ ಟಿ., **ಸಾಮಾಜಿಕ ಚಳವಳಿಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಧಾರವಾಡ, ೧೯೯೯.

೬೯. ನಾಗರಾಜು ಎಂ.ಎಚ್., ಹಂಪಣ್ಣ ಎ.ಕೆ., **ಅನ್ವೇಷಕ, ಪ್ರೊ. ಕೆ.ಎನ್. ಅಭಿನಂದನಗ್ರಂಥ,** ಅನಿಕೇತನ ಸಾಹಿತ್ಯ ಸಾಂಸ್ಕೃತಿಕ ಸಂಶೋಧನ ಕೇಂದ್ರ, ತುಮಕೂರು, ೧೯೯೮.

೭೦. ನಾಗಭೂಷಣ ಡಿ.ಎಸ್. (ಸಂ), **ಲೋಹಿಯಾ : ವ್ಯಕ್ತಿ, ವಿಚಾರ, ವಿಮರ್ಶೆ,** ಲೋಹಿಯಾ ಪ್ರಕಾಶನ, ಕ್ಷಿತಿಜ, ಕಪ್ಪುಗಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ, ೨೦೧೦.

೭೧. ನಾಗೇಶ್ ಹೆಚ್.ವಿ., **ಸಾಮಾಜಿಕ ಚಳವಳಿಗಳು,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೯.

೭೨. ನಾಯಕ ಹಾ.ಮಾ., **ಡಾ. ಪ್ರಧಾನಗುರುದತ್ತ,** ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ.ಲಿ., ಬೆಂಗಳೂರು, ೨೦೦೫.

೭೩. ನರಸಿಂಹಮೂರ್ತಿ ಎಂ.ಎಲ್., **ಸಾಧಕರು : ನೂರರ ನೆನಪು,** ಗುಪ್ತ ಆಫ್‌ಸೆಟ್ ಪ್ರಿಂಟರ್ಸ್, ವಿದ್ಯಾರಣ್ಯಪುರಂ, ಮೈಸೂರು, ೨೦೦೬.

೭೪. ನಾರಾಯಣ ಕೆ.ವಿ. (ಸಂ), **ಸ್ಥಳನಾಮಗಳು,** ಪರಿವರ್ತನೆ ಮತ್ತು ಪ್ರಭಾವ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೫. ನಾರಾಯಣ (ಸಂ), **ಸ್ವಾತಂತ್ರ್ಯಾಂದೋಲನ,** ರಾಯಚೂರು ಜಿಲ್ಲಾ ಕರ್ನಾಟಕ, ರಾಯಚೂರು, ೧೯೭೧.

೭೬. ಪಂಡಿತ ರೇವಣ್ಣಶಾಸ್ತ್ರಿ, **ವಾಲ್ಮೀಕರ ಪುರಾಣವು,** ದ್ಯಾಮವ್ವನಹಳ್ಳಿ, ದಾವಣಗೆರೆ, ೧೯೫೯.

೭೭. ಪದ್ಮಾಪ್ರಸಾದ್ ಎಸ್.ಪಿ., **ಕಮಲಾ ಹಂಪನಾ : ಒಂದು ಅಧ್ಯಯನ,** ಸುಂದರ ಪ್ರಕಾಶನ, ಧಾರವಾಡ, ೧೯೯೫.

೭೮. ಪಾಟೀಲ್ ಎಂ.ಬಿ. (ಮು.ಸಂ.), **ಕರ್ನಾಟಕ ರಾಜ್ಯ ಗ್ಯಾಸೆಟಿಯರ್ (ದಶವಾರ್ಷಿಕ ಪುರವಣಿ: ೧೯೮೩-೧೯೯೩),** ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು, ೧೯೯೬.

೭೯. ಪಾಟೀಲ್ ಹೆಚ್.ಎಸ್., ಅಲ್ಲಮಪ್ರಭು ಬೆಟ್ಟದೂರು (ಸಂ), **ತಿರುಳ್ಗನ್ನಡ,** ೬೨ನೇ ಕನ್ನಡ ಸಾಹಿತ್ಯ ಸಮ್ಮೇಳನ, ಕೊಪ್ಪಳ, ೧೯೯೩.

೮೦. ಪುಟ್ಟಣ್ಣ ಎಂ.ಎಸ್., **ಚಿತ್ರದುರ್ಗದ ಪಾಳೆಯಗಾರರು,** ಬೆಂಗಳೂರು, ೧೯೨೪.

೮೧. ಪುರುಷೋತ್ತಮ ಬಿಳಿಮಲೆ (ಸಂ), **ವಿಚಾರ ಸಾಹಿತ್ಯ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೮೨. ಪ್ರಭಾಕರ್ ಎಂ.ಎನ್., **ಚಿನ್ಮಯ (ಶ್ರೀ ಬೆಳಗೆರೆ ಕೃಷ್ಣಶಾಸ್ತ್ರಿಗಳವರಿಗೆ ಅರ್ಪಿಸಿದ ಸಂಭಾವನಾ ಗ್ರಂಥ),** 'ಹರ್ತಿ ಬಯಲಿನ ರಾಜಕೀಯ ಚರಿತ್ರೆ', ಚಿತ್ರದುರ್ಗ, ೧೯೭೬.

೮೩. ಬರಗೂರು ರಾಮಚಂದ್ರಪ್ಪ (ಪ್ರ.ಸಂ.), **ಕೋಮು ಸಮಸ್ಯೆ ಮತ್ತು ಆಧುನಿಕ ಕನ್ನಡ ಸಾಹಿತ್ಯ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೨.

೮೪. ಬರಗೂರು ರಾಮಚಂದ್ರಪ್ಪ (ಪ್ರ.ಸಂ.), **ಕನ್ನಡ ಸಾಹಿತ್ಯದಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೮೫. ಬರಗೂರು ರಾಮಚಂದ್ರಪ್ಪ (ಪ್ರ.ಸಂ.), **ಕನ್ನಡ ಸಾಹಿತ್ಯದಲ್ಲಿ ನೋವಿನ ನೆಲೆಗಳು,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೮೬. ಬಸವರಾಜ ಮಲಶೆಟ್ಟಿ, **ಡಾ. ಚಂದ್ರಶೇಖರ ಕಂಬಾರ,** ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ.ಲಿ., ಬೆಂಗಳೂರು, ೨೦೦೧.

೮೭. ಬುದ್ಧಣ್ಣ ಹಿಂಗಮಿರೆ (ಸಂ), **ಸಾಹಿತ್ಯ ವಿಮರ್ಶೆ-೧೯೮೨,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೮೮.

೮೮. ಬೆಟಗೇರಿ ಕೃಷ್ಣಶರ್ಮ, **ಕರ್ನಾಟಕ ಜನಜೀವನ,** ಸಮಾಜ ಪುಸ್ತಕಾಲಯ, ಧಾರವಾಡ, ೧೯೫೫.

೮೯. ಬೆಟಗೇರಿ ಕೃಷ್ಣಶರ್ಮ, **ನಮ್ಮ ಸಂಸ್ಕೃತಿ ಪರಂಪರೆ,** ಸಮಾಜ ಪುಸ್ತಕಾಲಯ, ಧಾರವಾಡ, ೧೯೬೯.

೯೦. ಮರಿಯಪ್ಪಭಟ್ಟ ಎಂ., **ಕನ್ನಡ ಸಂಸ್ಕೃತಿ,** ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು, ೧೯೬೭.

೯೧. ಮಲ್ಲೇಪುರಂ ಜಿ. ವೆಂಕಟೇಶ (ಸಂ), **ಶಂಬಾ ಸಂಪುಟ-೧, ಕಣ್ಮರೆಯಾದ ಕನ್ನಡ; ಸಂಪುಟ-೨,** ಕನ್ನಡದ ನೆಲೆ, ಎಡೆಗಳು ಹೇಳುವ ಕಂನಾಡ ಕಥೆ, ಕಂನ್ನುಡಿಯ ಹುಟ್ಟು, ಕನ್ನಡ ನುಡಿಯ ಜೀವಾಳ; ಸಂಪುಟ-೩, ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ, ೧೯೯೯.

೯೨. ಮಹಾಬಲೇಶ್ವರಪ್ಪ ಬಿ.ಸಿ., **ಹೈದರಾಬಾದ್ ಕರ್ನಾಟಕದಲ್ಲಿ ರಾಜಕೀಯ ಚಳವಳಿಗಳು,** ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೮.

೯೩. ಮಹೇಶ್ ಸಿ.ಕೆ., **ಬಹುಜನ ಸಮಾಜ V/s ಬ್ರಾಹ್ಮಣ,** ವಿಮೋಚನಾ ಪ್ರಕಾಶನ, ಚಿತ್ರದುರ್ಗ, ೧೯೯೪.

೯೪. ಮಹೇಶ್ ಸಿ.ಕೆ., **ಕಾನ್ಸಿರಾಮ್ : ಚಮಚಾಯುಗ,** ವಿಮೋಚನಾ ಪ್ರಕಾಶನ, ಚಿತ್ರದುರ್ಗ, ೧೯೯೭.

೯೫. ಮುನಿವೆಂಕಟಪ್ಪ, **ದಲಿತ ಚಳವಳಿ : ಒಂದು ಅವಲೋಕನ**, ವಿಚಾರವಾದಿ ಪ್ರಕಾಶನ, ಮೈಸೂರು, ೧೯೯೮.

೯೬. ಮೋಹನ್‌ಕೃಷ್ಣ ರೈ, **ವಸಾಹತುಶಾಹಿ ಮತ್ತು ನಗರೀಕರಣ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೯೭. ಮೋಹನ್‌ಕೃಷ್ಣ ರೈ, **ತುಳುನಾಡ ಸಿರಿ ಬದುಕು-ಹೋರಾಟದ ಕಥನ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೯೮. ಯಲ್ಲಪ್ಪ ಭೂತಯ್ಯ ಟಿ., **ಆದಿಕರ್ನಾಟಕರು(ಆದಿಜಾಂಬವರು) ಮತ್ತು ಮೀಸಲಾತಿ**, ಆದಿಭಾರತ ಸಾಹಿತ್ಯ ಪ್ರಕಾಶನ, ಮೈಸೂರು, ೧೯೯೪.

೯೯. ರತ್ನಮ್ಮ ಕೆ.ಎಸ್., **ಡಾ. ಎಸ್. ರಾಧಾಕೃಷ್ಣನ್ : ಜೀವನ ಸಾಧನೆ**, ತಾರಾ ಪ್ರಿಂಟಿಂಗ್ ಅಂಡ್ ಪಬ್ಲಿಕೇಷಿಂಗ್ ಹೌಸ್, ಮೈಸೂರು, ೨೦೦೪.

೧೦೦. ರಘುಪತಿ ಭಟ್, ಕೆಮ್ತೂರು, **ಹೆಸರಲ್ಲೇನಿದೆ**, ನ್ಯೂಸ್ಟಾರ್ ಪಬ್ಲಿಕೇಶನ್ಸ್, ಬೆಂಗಳೂರು, ೧೯೮೯.

೧೦೧. ರಾವ್ ಎಂ.ಎಸ್.ಎ. (ಸಂ), **ಸೋಷಿಯಲ್ ಮೂವ್‌ಮೆಂಟ್ಸ್ ಇನ್ ಇಂಡಿಯಾ**, ಮನೋಹರ್, ನ್ಯೂಡೆಲ್ಲಿ, ೧೯೮೪.

೧೦೨. ರಾಮಮನೋಹರ ಲೋಹಿಯಾ, (ಅನು: ಹಸದ್ ಸಯೀಂಸುರಕೋಡ), **ಜಾತಿ ಪದ್ಧತಿ**, ಪತ್ರಿಕೆ ಪ್ರಕಾಶನ, ಬೆಂಗಳೂರು, ೧೯೮೬.

೧೦೩. ರಾಘವೇಂದ್ರರಾವ್ ಯು., **ಶ್ರೀ ಕುಂಟೋಜಿ ದಾಸರು**, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೯೧.

೧೦೪. ರಾಬರ್ಟ್ ಸಿವೆಲ್ (ಮೂಲ), (ಕನ್ನಡ ಅನುವಾದ: ಸದಾನಂದ ಕನವಳ್ಳಿ, **ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೨.

೧೦೫. ಲಕ್ಷ್ಮಣ್ ತೆಲಗಾವಿ, **ಚಿತ್ರಕಲ್ಲು**, ಜಿಲ್ಲಾ ಇತಿಹಾಸ ಪ್ರದರ್ಶನ ಸ್ಮರಣ ಸಂಚಿಕೆ, ಚಿತ್ರದುರ್ಗ, ೧೯೭೪.

೧೦೬. ಲಕ್ಷ್ಮಣ್ ತೆಲಗಾವಿ (ಸಂ), **ಚಿನ್ಮೂಲಾದ್ರಿ**, ಮದಕರಿ ಬಳಗದ ವಾರ್ಷಿಕ ಸಂಚಿಕೆ, ಮೈಸೂರು, ೧೯೭೮.

೧೦೭. ಲಕ್ಷ್ಮಣ್ ತೆಲಗಾವಿ (ಸಂ), **ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು**, ಹುಲ್ಲೂರು ಶ್ರೀನಿವಾಸ ಜೋಯಿಸರ ಗ್ರಂಥ ಪ್ರಕಟಣ ಸಮಿತಿ, ಚಿತ್ರದುರ್ಗ, ೧೯೭೬.

೧೦೮. ಲಕ್ಷ್ಮಣ್ ತೆಲಗಾವಿ (ಸಂ), **ಚಂದ್ರವಳ್ಳಿ**, ಜಿಲ್ಲಾ ಇತಿಹಾಸ ಸಂಶೋಧನ ಮಂಡಳಿ, ಚಿತ್ರದುರ್ಗ, ೧೯೭೯.

೧೦೯. ಲಕ್ಷ್ಮಣ್ ತೆಲಗಾವಿ (ಸಂ), **ಐತಿಹಾಸಿಕ ಚಿತ್ರದುರ್ಗ**, ಜಿಲ್ಲಾ ಇತಿಹಾಸ ಸಂಶೋಧನ ಮಂಡಲಿ, ಚಿತ್ರದುರ್ಗ, ೧೯೭೯.

೧೧೦. ಲಕ್ಷ್ಮಣ್ ತೆಲಗಾವಿ, **ಚಿತ್ರದುರ್ಗದರ್ಶಿನಿ**, ಪ್ರಸಾರಾಂಗ, ಜಿಲ್ಲಾ ಇತಿಹಾಸ ಸಂಶೋಧನ ಮಂಡಲಿ, ಚಿತ್ರದುರ್ಗ, ೧೯೮೦.

೧೧೧. ಲಕ್ಷ್ಮಣ್ ತೆಲಗಾವಿ (ಸಂ), **ಶ್ರೀ ಲಿಪಿ**, ಅಖಿಲ ಕರ್ನಾಟಕ ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ದ್ವಿತೀಯ ಸಮ್ಮೇಳನ ಸ್ಮರಣ ಸಂಚಿಕೆ, ಬೆಂಗಳೂರು, ೧೯೮೨.

೧೧೨. ಲಕ್ಷ್ಮಣ್ ತೆಲಗಾವಿ (ಸಂ), **ಹರತಿಸಿರಿ–ಎಚ್.ವಿ. ವೀರನಾಯಕ ಹರತಿ ನೆನಪಿನ ಸಂಪುಟ**, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೧೯೮೭.

೧೧೩. ಲಕ್ಷ್ಮಣ್ ತೆಲಗಾವಿ (ಸಂ), **ಮಿರ್ಜಿ ಅಣ್ಣಾರಾಯರು: ಜೀವನ ಕೃತಿಗಳು-ಪಕ್ಷಿನೋಟ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೭.

೧೧೪. ಲಕ್ಷ್ಮಣ್ ತೆಲಗಾವಿ (ಸಂ), **ಇತಿಹಾಸ ದರ್ಶನ**, ಕರ್ನಾಟಕ ಇತಿಹಾಸ ಅಕಾಡೆಮಿಯ ವಾರ್ಷಿಕ ಸಂಚಿಕೆ, ಬೆಂಗಳೂರು, ೧೯೯೦.

೧೧೫. ಲಕ್ಷ್ಮಣ್ ತೆಲಗಾವಿ (ಸಂ), **ಸಂಶೋಧನ ಎಂ. ಚಿದಾನಂದಮೂರ್ತಿ ಗೌರವ ಸಂಪುಟ**, ಡಾ. ಎಂ. ಚಿದಾನಂದಮೂರ್ತಿ ಅಭಿನಂದನ ಸಮಿತಿ, ಬೆಂಗಳೂರು, ೧೯೯೧.

೧೧೬. ಲಕ್ಷ್ಮಣ್ ತೆಲಗಾವಿ (ಸಂ), **ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನ ಲೇಖನಗಳು**, ಹುಲ್ಲೂರು ಶ್ರೀನಿವಾಸ ಜೋಯಿಸರ ಗ್ರಂಥ ಪ್ರಕಟಣ ಸಮಿತಿ, ಚಿತ್ರದುರ್ಗ, ೧೯೯೫.

೧೧೭. ಲಕ್ಷ್ಮಣ್ ತೆಲಗಾವಿ, **ಇದು ಚಿತ್ರದುರ್ಗ**, ಪ್ರಸಾರಾಂಗ, ಸ್ವಾತಿ ಪ್ರಕಾಶನ, ಬೆಂಗಳೂರು, ೧೯೯೭.

೧೧೮. ಲಕ್ಷ್ಮಣ್ ತೆಲಗಾವಿ, **ಕರ್ನಾಟಕದ ಹಿಂದುಳಿದ ವರ್ಗಗಳು ಮತ್ತು ದಲಿತ ಚಳುವಳಿಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೧೧೯. ಲಕ್ಷ್ಮಣ್ ತೆಲಗಾವಿ, **ಬುರುಗು**, ಪ್ರಸಾರಾಂಗ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೧೯೯೯.

೧೨೦. ಲಕ್ಷ್ಮಣ್ ತೆಲಗಾವಿ (ಸಂ), **ಸ್ಥಳೀಯ ಚರಿತ್ರೆ : ಅಧ್ಯಯನದ ಸ್ವರೂಪ ಮತ್ತು ತಾತ್ವಿಕತೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.

೧೨೧. ಲಕ್ಷ್ಮಣ್ ತೆಲಗಾವಿ, **ಮೌರ್ಯ ಮತ್ತು ಶಾತವಾಹನಯುಗ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೧೨೨. ಲಕ್ಷ್ಮಣ್ ತೆಲಗಾವಿ, **ಇತಿಹಾಸಕಾರ ಎಚ್.ವಿ. ವೀರನಾಯಕ, 'ಹರತಿ'**, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೨೦೦೪.

೧೨೩. ಲಕ್ಷ್ಮಣ್ ತೆಲಗಾವಿ, **ಚಿತ್ರದುರ್ಗ ಜಿಲ್ಲಾ ಇತಿಹಾಸ ಅಧ್ಯಯನದ ವ್ಯಾಪಕತೆ ಮತ್ತು ಸಾಧ್ಯತೆ ಒಂದು ಶತಮಾನ**, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೨೦೦೪.

೧೨೪. ಲಕ್ಷ್ಮಣ್ ತೆಲಗಾವಿ (ಸಂ), **ಡಾ. ಎಚ್.ಆರ್. ರಘುನಾಥಭಟ್ಟ : ಸ್ಮರಣೆ**, ಚಿತ್ರಕಲ್ಲು ಪ್ರಕಾಶನ, ಚಿತ್ರದುರ್ಗ, ೨೦೦೪.

೧೨೫. ಲಕ್ಷ್ಮಣ್ ತೆಲಗಾವಿ (ಸಂ), **ಚರಿತ್ರೆ ಅಧ್ಯಯನ, ಸಂಪುಟ-೧, ಸಂಚಿಕೆ-೨**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.

೧೨೬. ಲಕ್ಷ್ಮಣ್ ತೆಲಗಾವಿ (ಸಂ), **ಕೆ. ರಾಮಸ್ವಾಮಯ್ಯಂಗರ್ ಅವರ ಜೀರ್ಣವಿಜಯ ನಗರಾದರ್ಶಂ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೧೨೭. ಲಕ್ಷ್ಮಣ್ ತೆಲಗಾವಿ (ಸಂ), **ರಾಮಾಜಿ ತಿರುಮಲ ಹರಿಕಾರೆಯ ರಾಮರಾಜನ ಬಖೈರು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೧೨೮. ಲಕ್ಷ್ಮಣ್ ತೆಲಗಾವಿ (ಸಂ), **ಕರ್ನಾಟಕ ಪಾಳೆಯಗಾರರ ನ್ಯಾಯಾಡಳಿತ**, ಜಿ.ಎಚ್. ಪ್ರಸಾದ್ ಅಭಿನಂದನ ಸಂಪುಟ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೨೦೦೮.

೧೨೯. ಲಕ್ಷ್ಮಣ್ ತೆಲಗಾವಿ, **ಚಿತ್ರದುರ್ಗ ನಾಯಕ ಅರಸರು : ರಾಜಕೀಯ ಚಿತ್ರ**, ಜಿ.ಎಚ್. ಪ್ರಸಾದ್ ಅಭಿನಂದನ ಸಂಪುಟ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೨೦೦೯.

೧೩೦. ಲಕ್ಷ್ಮಣ್ ತೆಲಗಾವಿ, **ವಿಜಯನಗರ ಕಾಲದ ರಾಮಾನುಜ ಕೂಟಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೧೩೧. ಲಕ್ಷ್ಮಣ್ ತೆಲಗಾವಿ (ಸಂ), **Raghu Smriti: Recent Researches in Archaeology (In Honour of late Dr. H.R. Raghunath Bhatt)**, ಭಾರತೀಯರ ಕಲಾ ಪ್ರಕಾಶನ, ದೆಹಲಿ, ೨೦೦೯.

೧೩೨. ಲಕ್ಷ್ಮಣ್ ತೆಲಗಾವಿ, **ಎಪ್ಪತ್ತೇಳು ಪಾಳೆಯಗಾರರು: ಸಾಹಿತ್ಯ ಆಶಯ ನೆಲೆಯ ಚಾರಿತ್ರಿಕ ವಿವೇಚನೆ**, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೨೦೧೦.

೧೩೩. ಲಕ್ಷ್ಮಣ್ ತೆಲಗಾವಿ, **ದೊಡ್ಡೇರಿ ಕದನ (ಚರಿತ್ರೆ ಮತ್ತು ಜಾನಪದಗಳ ನೆಲೆಯಲ್ಲಿ)**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೧೩೪. ಲಕ್ಷ್ಮಣ್ ತೆಲಗಾವಿ, **ಚಿತ್ರದುರ್ಗ ಒನಕೆ ಓಬವ್ವ : ಚಾರಿತ್ರಿಕ ವಿವೇಚನೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೧೩೫. ಲಕ್ಷ್ಮಣ್ ತೆಲಗಾವಿ (ಸಂ), **ಯಂ. ವೀರಮುದ್ದಣ್ಣ ವಿರಚಿತ, ಚಿತ್ರದುರ್ಗದ ಲಡಾಯಿ ಲಾವಣಿ**, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೨೦೧೦.

೧೩೬. ಲೆನಿನ್, **ಡಾ. ಕೆ. ಕೇಶವಶರ್ಮ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ರಶ್ಮಿ ಮುದ್ರಣ, ಸುಧಾಮನಗರ, ಬೆಂಗಳೂರು, ೧೯೯೪.

೧೩೭. ವಾಸುದೇವನ್ ನಾಯಕ ಎಂ.ಟಿ., ಪಾರ್ವತಿ ಜಿ. ಐತಾಳ್, **ಬದುಕು ಬರಹ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು, ೨೦೦೬.

೧೩೮. ವಾಸುದೇವ ಅಗ್ನಿಹೋತ್ರಿ (ಸಂ), **ಅಭ್ಯುದಯ**, ಹೈದ್ರಾಬಾದ್ ಕರ್ನಾಟಕ ಜಾಗೃತಿ ಜಾತ್ರೆ, ಸೇಡಂ, ೨೦೦೭.

೧೩೯. ವಿಜಯ್ ಪೂಣಚ್ಚ ತಂಬಂಡ, **ಕೆಳವರ್ಗದ ಪ್ರತಿಭಟನೆ ಸಬಾಲ್ಟರ್ನ್ ಚರಿತ್ರೆ-ಬರವಣಿಗೆ ಕ್ರಮ ಮತ್ತು ವಿಮರ್ಶೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೧೪೦. ವಿಜಯ್ ಪೂಣಚ್ಚ ತಂಬಂಡ (ಸಂ), **ಚರಿತ್ರೆ ಸಂಪುಟಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೧೪೧. ವಿದ್ಯಾಶಂಕರ ಎಸ್., **ಅ.ನ.ಕೃ.: ಬದುಕು-ಬರಹ**, ಸ್ನೇಹಾ ಪ್ರಿಂಟರ್ಸ್, ಬಿ.ಸಿ.ಸಿ. ಬಡಾವಣೆ, ಅತ್ತಿಗುಪ್ಪೆ, ವಿಜಯನಗರ, ೨ನೇ ಹಂತ, ಬೆಂಗಳೂರು, ೨೦೧೦.

೧೪೨. ವೀರಭದ್ರಪ್ಪ ಬಿ.ವಿ., ಜಾಹ್ನವಿ ಬಿ.ಟಿ. (ಸಂ), **ಮುಟ್ಟಿಸಿಕೊಂಡವರು (ದಲಿತ ಸಂಸ್ಕೃತಿ ಕೆಲನೋಟಗಳು, ಡಾ. ಬಿ.ಎ. ತಿಪ್ಪೇಸ್ವಾಮಿ ನೆನಪು)**, ಬುಟ್ಟಿ ಪ್ರಕಾಶನ, ದಾವಣಗೆರೆ, ೧೯೯೮.

೧೪೩. ವೀರನಾಯಕ ಹೆಚ್.ವಿ., **ಹರತಿ**, 'ಕ್ಷಾತ್ರಾಂಶ ಪ್ರಬೋಧ', ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೧೯೮೭.

೧೪೪. ವೀರನಾಯಕ ಹೆಚ್.ವಿ., **ರಾಷ್ಟ್ರ ಸೇವೆಯಲ್ಲಿ ನಾಯಕ ಜನಾಂಗ**, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೧೯೮೭.

೧೪೫. ವಿರೂಪಾಕ್ಷಿ ಪೂಜಾರಹಳ್ಳಿ, **ಗಾದರಿಪಾಲನಾಯಕ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೧೪೬. ವಿರೂಪಾಕ್ಷಿ ಪೂಜಾರಹಳ್ಳಿ, **ವಾಲ್ಮೀಕಿ ಸಿರಿ**, ಚಿನ್ನಹಗರಿ ಪ್ರಕಾಶನ, ೨೦೦೬.

೧೪೭. ವಿರೂಪಾಕ್ಷಿ ಪೂಜಾರಹಳ್ಳಿ, **ಬೇಟೆ ಮತ್ತು ಬೇಡರು**, ಚಿನ್ನಹಗರಿ ಪ್ರಕಾಶನ, ೨೦೦೭.

೧೪೮. ವಿರೂಪಾಕ್ಷಿ ಪೂಜಾರಹಳ್ಳಿ, **ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

೧೪೯. ವೆಂಕಟರತ್ನಂ, ಎ.ವಿ., **ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ**, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೪.

೧೫೦. ವೆಂಕಟಾಚಲಶಾಸ್ತ್ರೀ ಟಿ.ವಿ., **ಮಾರ್ಗದರ್ಶಕ ಮಹನೀಯರು**, ಸಪ್ನಬುಕ್‌ಹೌಸ್, ತುಂಗಾ ಕಾಂಪ್ಲೆಕ್ಸ್, ಗಾಂಧಿನಗರ, ಬೆಂಗಳೂರು, ೨೦೦೨.

೧೫೧. ವೆಂಕಟೇಶ್, ಬಿ. ಸರೋಜಾ (ಸಂ), **ಹೈದ್ರಾಬಾದ್ ಕರ್ನಾಟಕದ ವರ್ತಮಾನದ ತಲ್ಲಣಗಳು**, ಪಲ್ಲವ ಪ್ರಕಾಶನ, ಬಳ್ಳಾರಿ, ೨೦೦೬.

೧೫೨. ವೆಂಕಟೇಶಮೂರ್ತಿ ಹೆಚ್.ಟಿ., **ಸಾಮಾಜಿಕ ಪರಿವರ್ತನಾ ಚಳವಳಿ ಮತ್ತು ಕರ್ನಾಟಕದ ದಲಿತ ಚಳವಳಿ**, ಈಶ್ವರಿ ಪ್ರಕಾಶನ, ಮೈಸೂರು, ೨೦೦೬.

೧೫೩. ವೈಕುಂಠರಾಜು ಬಿ.ವಿ., **ಸಂಪಾದಕ ಡೈರಿ–೧೯೮೫**, ಸನತ್ ಪ್ರಕಾಶನ, ಬೆಂಗಳೂರು, ೧೯೮೭.

೧೫೪. ಶಂಕರನಾರಾಯಣರಾವ್ ಎನ್.ಜಿ., **ಕಾರ್ಲ್‌ಮಾರ್ಕ್ಸ್**, ಸಪ್ನಬುಕ್‌ಹೌಸ್, ೩ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು, ೨೦೦೦.

೧೫೫. ಶರ್ಮ ತಿ.ತಾ. (ಸಂ), **ಚಾರಿತ್ರಿಕ ದಾಖಲೆಗಳು**, ಕನ್ನಡ ಸಾಹಿತ್ಯ ಪರಿಷತ್ತು, ೧೯೭೧.

೧೫೬. ಶಂಬಾ ಜೋಶಿ, **ಎಡೆಗಳು ಹೇಳುವ ಕಂನಾಡ ಕತೆ**, ಮಾಧವ ಬಲ್ಲಾಳ ಬಂಧುಗಳು, ಧಾರವಾಡ, ೧೮೪೭.

೧೫೭. ಶಾರದ ಪಾಟೀಲ್ (ಅನು: ಗಂಗಾಧರಮೂರ್ತಿ), **ಭಾರತದ ಜಾತಿ ಹೋರಾಟಗಳು, ಭಾಗ-೧**, ವಸಾಹತುಪೂರ್ವ ಕಾಲ ಕರ್ನಾಟಕ ದಲಿತ ಸಂಘರ್ಷ ಸಮಿತಿ, ಕೋಲಾರ ಜಿಲ್ಲೆ, ೧೯೯೪.

೧೫೮. ಶಿವಾನಂದ ಶೆಟ್ಟರ್, **ಗಾಂಧೀಜಿ ಮತ್ತು ಅಂಬೇಡ್ಕರ್**, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೪.

೧೫೯. ಶಿವಾರೆಡ್ಡಿ ಕೆ.ಸಿ., **ಯುಗದ ಕವಿ: ಕುವೆಂಪು ಜೀವನ ಮತ್ತು ಸಾಹಿತ್ಯ ಸಾಧನೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

೧೬೦. ಶ್ರೀಧರನ್, **ಡಾ. ಅಂಬೇಡ್ಕರ್ ಚಿಂತನೆಯ ಬೆಳಕಿನಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಮತ್ತು ಬಹುಜನ ಸಮಾಜ ಪಕ್ಷ**, ಕರ್ನಾಟಕ ದಲಿತ ಸಂಘರ್ಷ ಸಮಿತಿ (ರಾಜ್ಯ ಸಮಿತಿ), ಬೆಂಗಳೂರು, ೧೯೯೭.

೧೬೧. ಶ್ರೀನಿವಾಸ್ ಎಂ.ವಿ., ಲಕ್ಷ್ಮಣ್ ತೆಲಗಾವಿ (ಸಂ), **ಚಂದ್ರವಳ್ಳಿ**, ಜಿಲ್ಲಾ ಇತಿಹಾಸ ಸಂಶೋಧನ ಮಂಡಲಿ, ಚಿತ್ರದುರ್ಗ, ೧೯೭೬.

೧೬೨. ಶ್ರೀನಿವಾಸನಾಯಕ ಬಿ.ಎಸ್., **ಚಿತ್ರದುರ್ಗದ ಕಾಮಗೇತಿ ಅರಸರು**, ಅರೇಹಳ್ಳಿಹಟ್ಟಿ, ಚಿತ್ರದುರ್ಗ ಜಿಲ್ಲೆ, ೧೯೮೮೪.

೧೬೩. ಸರಜೂ ಕಾಟ್ಕರ್, **ಕನ್ನಡ–ಮರಾಠಿ ದಲಿತ ಸಾಹಿತ್ಯ**, ವಿಮೋಚನಾ ಪ್ರಕಾಶನ, ಅಥಣಿ, ೧೯೯೬.

೧೬೪. ಸಿದ್ಧಲಿಂಗಯ್ಯ, **ಹೊಲೆ ಮಾದಿಗರ ಹಾಡು,** ಮೈತ್ರಿ ಪ್ರಕಾಶನ, ಬೆಂಗಳೂರು, ೧೯೮೫.

೧೬೫. ಸೂರ್ಯನಾಥ ಯು. ಕಾಮತ್ (ಮು.ಸಂ.), **ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ-೩,** ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು, ೧೯೮೬.

೧೬೬. ಸೂರ್ಯನಾಥ ಯು. ಕಾಮತ್, ದೇವರಕೊಂಡಾರೆಡ್ಡಿ (ಸಂ), **ಇತಿಹಾಸ ದರ್ಶನ, ಸಂಪುಟ-೯,** ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೯೪.

೧೬೭. ಹಣಮಂತ್ರಾಯ ದೊಡ್ಡಮನಿ, **ದೇವರಾಜ ಅರಸು ಮತ್ತು ಕರ್ನಾಟಕದ ರಾಜಕಾರಣ,** ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ, ೨೦೧೧.

೧೬೮. ಹರ್ತಿಕೋಟೆ ವೀರೇಂದ್ರಸಿಂಹ, 'ಹರತಿಕೋಟೆ', **ಜನಪ್ರಕಾಶ,** ೨೩ ಮೇ ೧೯೮೨.

೧೬೯. ಹನುಮಂತಯ್ಯ ಎಲ್., **ದಲಿತಲೋಕದ ಒಳಗೆ,** ಕರ್ನಾಟಕ ದಲಿತ ಪ್ರಕಾಶನ, ಬೆಂಗಳೂರು, ೧೯೯೨.

೧೭೦. ಹಂಪ ನಾಗರಾಜಯ್ಯ (ಪ್ರ.ಸಂ.), **ಧರ್ಮಸ್ಥಳ ಸಾಹಿತ್ಯ ಸಮ್ಮೇಳನ-೧೯೭೯,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೯.

೧೭೧. ಹಂಪ ನಾಗರಾಜಯ್ಯ (ಪ್ರ.ಸಂ.) **ಶಿರಸಿ ಸಾಹಿತ್ಯ ಸಮ್ಮೇಳನ-೧೯೮೩,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೪.

೧೭೨. ಹಳ್ಳಿಕೇರಿ ಎಫ್.ಟಿ., **ಡಿ.ಎಲ್. ನರಸಿಂಹಚಾರ್ ಶತಮಾನ ಸ್ಮರಣೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೧೭೩. ಹೆಗಡೆ ಜಿ.ಎಂ., ಬಾಳಣ್ಣ ಸೀಗಿಹಳ್ಳಿ (ಸಂ), **ಕಲಬುರ್ಗಿ-೬೦,** ಶಿವಚಂದ್ರ ಪ್ರಕಾಶನ, ಹುಬ್ಬಳ್ಳಿ, ೧೯೯೮.

English Books

1. Asghar Ali Engineer (Ed.), **Mandal Commission Controvery,** Ajanta Publications, Delhi, 1991.

2. Arjun Dangel (Ed.), **Poisoned Bread (Translations from Modern Marathi Dalit Literature),** New Delhi, 1992.

3. Andre Beteille, **The Backward Classes in Contemporary India,** Oxford University Press, New Delhi, 1992.

4. Anand Teltumbde, **'Ambedkar' in and for the Post-Ambedkar Dalit Movement,** Sugawa Prakashana, Pune, 1997.

5. Barry Lewis, **Chitradurga in the Early 1800s: Archaeological Interpretations of Colonial Drawings,** Indian Council of Historical Research, Bangalore, 2006.

6. Geo. W. Briggs, **The Chamars,** Low Price Publications, Delhi, 1990.

7. Gail Omvedt, **Dalits and the Democratic Revdution: Dr. Ambedkar and the Dalit Movement in Colonial India, Sage Publications,** New Delhi, 1994.

8. Gail Omvedt, **Dalit Visions,** Orient Longman Limited, New Delhi, 1995.

9. Kuppuswamy B., **Backward, Class Movement in Karnataka,** Bangalore University, Bangalore, 1978.

10. Lata Murugkar, **Dalit Panther Movement in Maharashtra-A Sociological Appraisal**, Sangam Books, Bombay, 1991.

11. Mulkraj Anand & Eleanor Zelliot (Eds.), **An Anthology of Dalit Literature (Poems),** New Delhi, 1992.

12. Padhy K.S. & Jayashree Mahapatra, **Reservations Policy in India,** Ashish Publishing House, New Delhi, 1988.

13. **Report of the Second Backward Classes Commission, Vols- 1, 2, & 3,** Government of Karnataka, Bangalore, 1986.

14. Rajashekar V.T., **Merit, My Foot (A Replay to Anti-Reservation Racists),** Dalit Sahitya Academy, Bangaore, 1987.

15. Sharma K.L., Caste, **Class and Social Movement's,** Rawat Publications, Jaipur, 1985.

16. Yeshwant Khillare (Ed.), **Present Status of Backward Classes in India,** Dr. Babasaheb Ambedkar Marathwade University, Aurangabad, 1997.

◆◆

೨. ವಕ್ತೃಗಳ ವಿವರ

೧. ಡಾ. ಅಜಯ್ ಸಿ., ಉಪನ್ಯಾಸಕರು, ಆನಗೋಡು, ದಾವಣಗೆರೆ.

೨. ಡಾ. ಅಮರೇಶ ಯತಗಲ್, ಸಹಾಯಕ ಪ್ರಾಧ್ಯಾಪಕರು, ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ, ವಿಜಯಪುರ.

೩. ಶ್ರೀ ಆನಂದ ತೆಲಗಾವಿ ಪಿ., ಗ್ಯಾಸ್ ಏಜೆಂಟ್, ಅಣ್ಣಿಗೇರಿ, ನವಲಗುಂದ ತಾಲೂಕು, ಧಾರವಾಡ.

೪. ಡಾ. ಬಿ.ಪಿ. ಕುಮಾರ್, ಎ.ವಿ.ಕೆ. ಉಪನ್ಯಾಸಕರು, ಪ್ರಥಮ ದರ್ಜೆ ಕಾಲೇಜು, ದಾವಣಗೆರೆ.

೫. ಶ್ರೀ ಎಸ್.ಆರ್. ಗುರುನಾಥ, ನಿವೃತ್ತ ಉಪನ್ಯಾಸಕರು, ಸರ್ಕಾರಿ ಪದವಿಪೂರ್ವ ಕಾಲೇಜು, ಚಿತ್ರದುರ್ಗ.

೬. ಡಾ. ಎಂ.ಕೆ. ದುರುಗಪ್ಪ, ಉಪನ್ಯಾಸಕರು, ಸರ್ಕಾರಿ ಪದವಿಪೂರ್ವ ಕಾಲೇಜು, ಕನಕಗಿರಿ, ಗಂಗಾವತಿ ತಾಲೂಕು, ಕೊಪ್ಪಳ ಜಿಲ್ಲೆ.

೭. ಶ್ರೀ ಲ. ನಾಗರಾಜ ಹೊಯ್ಸಳ, ಸಂಶೋಧಕರು ಮತ್ತು ಜೋಯಿಸರು, ಚಿತ್ರದುರ್ಗ.

೮. ಡಾ. ರಾಜಶೇಖರ ಜಮದಂಡಿ, ಉಪನ್ಯಾಸಕರು, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಬೀದರ್.

೯. ಡಾ. ಕೆ.ಆರ್.ಜೆ. ರಾಜಕುಮಾರ್, ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮದರ್ಜೆ ಕಾಲೇಜು, ಸಂತೆಬೆನ್ನೂರು, ದಾವಣಗೆರೆ.

೧೦. ಶ್ರೀ ಕೆ.ಎಲ್. ರಾಜಶೇಖರ್, ಪ್ರಕಟಣ ಸಹಾಯಕರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧. ಡಾ. ಲೋಕರಾಜ್ ದೊಡ್ಡಮನಿ, ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮದರ್ಜೆ ಕಾಲೇಜು, ಜಗಳೂರು.

೧೨. ಶ್ರೀ ಬಿ.ಎಲ್. ವೇಣು, ಹಿರಿಯ ಸಾಹಿತಿ, ಚಿತ್ರದುರ್ಗ.

♦♦

೩. ಲಕ್ಷ್ಮಣ್ ತೆಲಗಾವಿ ಅವರ ಜೀವನದ ಪ್ರಮುಖ ಘಟನೆಗಳು

೧೯೪೭ ಜನವರಿ ೧ರಂದು ಚಿತ್ರದುರ್ಗದಲ್ಲಿ ಜನನ. ತಂದೆ ಡಿ. ಪರಸಪ್ಪ, ತಾಯಿ ಚಂದ್ರಮ್ಮ

೧೯೭೦ ಸರ್ಕಾರಿ ಪ್ರಥಮದರ್ಜೆ ಕಾಲೇಜ್, ಚಿತ್ರದುರ್ಗದಲ್ಲಿ ಬಿ.ಎ. ಪದವಿ ಪಡೆದರು.

೧೯೭೧ ಚಿತ್ರದುರ್ಗ ಸಂಶೋಧನ ತಂಡದ ಸಂಸ್ಥಾಪಕ, ನಿರ್ದೇಶಕರಾಗಿ ಸೇವೆ.

೧೯೭೧ ಚಿತ್ರದುರ್ಗ, ಬಳ್ಳಾರಿ, ಕೊಪ್ಪಳ, ರಾಯಚೂರು, ದಾವಣಗೆರೆ, ಧಾರವಾಡ ಮೊದಲಾದ ಜಿಲ್ಲೆಗಳಲ್ಲಿ ಕೈಗೊಂಡ ಕ್ಷೇತ್ರಕಾರ್ಯ ಹಾಗೂ ಅಧ್ಯಯನ ಪ್ರವಾಸದಲ್ಲಿ, ಬಯಲು ಬಂಡೆ ರೇಖಾಕೃತಿಗಳು, ತಾಮ್ರ ಮತ್ತು ಕಬ್ಬಿಣ ತಯಾರಿಕಾ ಘಟಕಗಳು, ಪ್ರಾಚೀನ ಸಂಸ್ಕೃತಿಗಳ ನಿವೇಶನಗಳು, ಶಾಸನ–ಶಿಲ್ಪ–ನಾಣ್ಯ–ಹಸ್ತಪ್ರತಿಗಳು, ಬೂದಿದಿನ್ನೆಗಳು ಬೇಚಾರಾಕ್ ಗ್ರಾಮಗಳು ಇತ್ಯಾದಿಗಳ ಸಮಗ್ರ ಪರಿಶೀಲನೆ ಹಾಗೂ ಅವುಗಳನ್ನು ಕುರಿತ ಬರಹಗಳ ಪ್ರಕಟಣೆಗೊಳಿಸಲಾಯಿತು.

೧೯೭೨ ಮೈಸೂರು ವಿಶ್ವವಿದ್ಯಾನಿಲಯ ಚರಿತ್ರೆ ವಿಷಯದಲ್ಲಿ ಎಂ.ಎ. ಪದವಿ ಪಡೆದರು.

೧೯೭೨–೭೫ ಮೈಸೂರು ವಿಶ್ವವಿದ್ಯಾನಿಲಯದ ಚರಿತ್ರೆ ವಿಭಾಗದಲ್ಲಿ ಪ್ರೊ. ಬಿ. ಷೇಕ್‌ಅಲಿ ಅವರ ಮಾರ್ಗದರ್ಶನದಲ್ಲಿ 'ಚಿತ್ರದುರ್ಗ ನಾಯಕ ಅರಸರು' ವಿಷಯ ಕುರಿತು ಸಂಶೋಧನೆ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧನ ವಿದ್ಯಾರ್ಥಿವೇತನ ಪಡೆದರು.

೧೯೭೨ ಇತಿಹಾಸವೆಂಬ ವಾರ್ಷಿಕ ಸಂಚಿಕೆ ತಯಾರಿಸಿದರು(ಮೈಸೂರು).

೧೯೭೪ ಚಿತ್ರದುರ್ಗ ಜಿಲ್ಲಾ ಇತಿಹಾಸ ದರ್ಶನ ಎಂಬ ಸ್ಮರಣ ಸಂಚಿಕೆಯಲ್ಲಿ 'ಚಿತ್ರಕಲ್ಲು' ಎಂಬ ಸಂಚಿಕೆಯ ಬಿಡುಗಡೆ.

೧೯೭೫–೭೯ ಚರಿತ್ರೆ ವಿಭಾಗ, ಮಹಾರಾಜ ಕಾಲೇಜು, ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಎಂ.ಎ. ವಿದ್ಯಾರ್ಥಿಗಳಿಗೆ ಬೋಧನೆ ಪ್ರಾರಂಭ.

೧೯೭೫	ಜಗದ್ಗುರು ಜಯದೇವ ಶತಮಾನೋತ್ಸವದಲ್ಲಿ ಸನ್ಮಾನ ಚಿತ್ರದುರ್ಗ.
೧೯೭೬	'ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು' ಎಂಬ ಸಂಪಾದನ ಕೃತಿ ಪ್ರಕಟಣೆ.
೧೯೭೮	'ಚಿನ್ಮೂಲಾದ್ರಿ' ಎಂಬ ವಾರ್ಷಿಕ ಸಂಚಿಕೆ ಮೈಸೂರಿನಲ್ಲಿ ಬಿಡುಗಡೆ.
೧೯೭೮	ಅಧ್ಯಾಪಕ ಕಾರ್ಯದರ್ಶಿಯಾಗಿ ಸೇವೆ, ಮಹಾರಾಜ ಕಾಲೇಜ್ ವಿದ್ಯಾರ್ಥಿ ಸಂಘ, ಮೈಸೂರು.
೧೯೭೯	'ಚಂದ್ರವಳ್ಳಿ' ಎಂಬ ಸಂಪಾದನ ಕೃತಿ ತಯಾರಿಸಿದರು.
೧೯೭೯–೧೯೮೯	ಚಿತ್ರದುರ್ಗ ಜಿಲ್ಲಾ ಇತಿಹಾಸ ಸಂಶೋಧನ ಮಂಡಳಿಯ ಉಪಾಧ್ಯಕ್ಷರಾಗಿ ಸೇವೆ.
೧೯೭೯	'ಐತಿಹಾಸಿಕ ಚಿತ್ರದುರ್ಗ' ಎಂಬ ಸಂಪಾದನ ಕೃತಿಯನ್ನು ಪ್ರಕಟಿಸಿದರು.
೧೯೭೯	ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿ ಬೆಂಗಳೂರಿನಲ್ಲಿ ಸೇವೆ.
೧೯೮೧–೧೯೮೫	ಕನ್ನಡ ಸಾಹಿತ್ಯ ಪರಿಷತ್ತಿನ ಅರ್ಧವಾರ್ಷಿಕ ಸಂಚಿಕೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯನ್ನು ಅನಾವರಣಗೊಳಿಸಿದರು.
೧೯೮೦	NCERT ವತಿಯಿಂದ ವಯಸ್ಕರ ಶಿಕ್ಷಣ ಅಧಿಕಾರಿ ತರಬೇತಿ ದೆಹಲಿಯಲ್ಲಿ ಪಡೆದರು.
೧೯೮೦	'ಚಿತ್ರದುರ್ಗದರ್ಶಿನಿ' ಎಂಬ ಕೃತಿಯ ರಚನೆ
೧೯೮೦	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರಿನಲ್ಲಿ ಅಧ್ಯಾಪಕರಾಗಿ ಶಾಸನಶಾಸ್ತ್ರ ತರಗತಿಯ ಬೋಧನೆ.
೧೯೮೨	ಅಖಿಲ ಕರ್ನಾಟಕ ಶೀಘ್ರ ಲಿಪಿಗಾರ ಮತ್ತು ಬೆರಳಚ್ಚುಗಾರರ ದ್ವಿತೀಯ ಸಮ್ಮೇಳನದ ಸ್ಮರಣ ಸಂಚಿಕೆಯಲ್ಲಿ 'ಶ್ರೀಲಿಪಿ' ಎಂಬ ಸಂಚಿಕೆಯನ್ನು ಬೆಂಗಳೂರಿನಲ್ಲಿ ಬಿಡುಗಡೆಗೊಳಿಸಲಾಯಿತು.
೧೯೮೫–೧೯೯೩	ಬೆಂಗಳೂರಿನಲ್ಲಿ ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯ ಸಂಪಾದಕರಾಗಿ ಕಾರ್ಯನಿರ್ವಹಣೆ.
೧೯೮೫	ಕರ್ನಾಟಕ ಇತಿಹಾಸ ಅಕಾಡೆಮಿಯ ವಾರ್ಷಿಕ ಸಂಚಿಕೆಯಲ್ಲಿ 'ಇತಿಹಾಸ ದರ್ಶನ' ಎಂಬ ಸಂಚಿಕೆಯನ್ನು ಬೆಂಗಳೂರಿನಲ್ಲಿ ಬಿಡುಗಡೆಗೊಳಿಸಲಾಯಿತು.

೧೯೮೬–೧೯೮೮ ಕರ್ನಾಟಕ ಇತಿಹಾಸ ಅಕಾಡೆಮಿಯ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ.

೧೯೮೭ ಮಿರ್ಜಿ ಅಣ್ಣಾರಾಯರು ಜೀವನ ಕೃತಿಗಳು, ಪಕ್ಷಿನೋಟ ಎಂಬ ಸಂಪಾದನ ಕೃತಿಯ ಬಿಡುಗಡೆ.

೧೯೮೭ ಕರ್ನಾಟಕ ಗ್ಯಾಸೆಟಿಯರ್‌ನಲ್ಲಿ ಕೆಲವು ಜಿಲ್ಲೆಗಳ ಸಾಹಿತ್ಯ ಮತ್ತು ಸಂಸ್ಕೃತಿ ಅಧ್ಯಾಯಗಳನ್ನು ರಚಿಸಿದ್ದಾರೆ.

೧೯೮೭ 'ಹರತಿಸಿರಿ' ಎಂಬ ಸಂಪಾದನ ಕೃತಿಯ ಬಿಡುಗಡೆ ಹಾಗೂ ವಾಲ್ಮೀಕಿ ಸಾಹಿತ್ಯ ಸಂಪದದಿಂದ ಹರ್ತಿಕೋಟೆಯಲ್ಲಿ ಇವರನ್ನು ಸನ್ಮಾನಿಸಲಾಯಿತು.

೧೯೮೮ ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯ ಸಾಹಿತ್ಯ ಮತ್ತು ಸಂಸ್ಕೃತಿ, ಅಧ್ಯಯನಗಳ ರಚನೆಯನ್ನು ಮೈಸೂರು ಜಿಲ್ಲೆಯಲ್ಲಿ ಮಾಡಲಾಯಿತು.

೧೯೮೯ ವೀರ ರಾಜೇಂದ್ರಪೇಟೆಯಲ್ಲಿ(ಕೊಡಗು) ಕರ್ನಾಟಕ ಸಂಘದ ವತಿಯಿಂದ ಕನ್ನಡ ರಾಜ್ಯೋತ್ಸವದಲ್ಲಿ ಸನ್ಮಾನ ಮಾಡಲಾಯಿತು.

೧೯೮೯ ಬೆಂಗಳೂರಿನಲ್ಲಿ ಕರ್ನಾಟಕ ಸಂಘದ ವತಿಯಿಂದ ಕನ್ನಡ ರಾಜ್ಯೋತ್ಸವದಲ್ಲಿ ಸನ್ಮಾನ ಮಾಡಲಾಯಿತು.

೧೯೯೦ ಬೆಂಗಳೂರಿನ ಶ್ರೀ ಗೌರಿಶಂಕರ ದೇವಾಲಯದ ಸಮಿತಿಯಿಂದ ಸನ್ಮಾನ ಮಾಡಲಾಯಿತು.

೧೯೯೧ ಶ್ರೀ ಗೌರಿಶಂಕರದೇವಾಲಯದ ಸಮಿತಿ ಕೊಡಗು ಜಿಲ್ಲೆಯಲ್ಲಿ ಸನ್ಮಾನ ಮಾಡಲಾಯಿತು.

೧೯೯೧ 'ಸಂಶೋಧನ' ಎಂಬ ಸಂಪಾದನ ಕೃತಿಯನ್ನು ಬಿಡುಗಡೆಗೊಳಿಸಿ ಟೆಲಿ ಸಾಕ್ಷ್ಯ ಚಿತ್ರಕ್ಕೆ ನಿರೂಪಣೆ ಸಾಹಿತ್ಯದ ರಚನೆ ಹಾಗೂ ಮಾರ್ಗದರ್ಶನ ಮಾಡಿದರು.

೧೯೯೨–೯೫ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ ಬೆಂಗಳೂರಿನಲ್ಲಿ ಸೇವೆ.

೧೯೯೩ ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾಗಿ ಸೇವೆ.

೧೯೯೩–೯೮ ಹಂಪಿ ಕನ್ನಡ ವಿಶ್ವವಿದ್ಯಾಲಯದ ವತಿಯಿಂದ ೧೯೯೭ರಲ್ಲಿ ಪ್ರಕಟಗೊಂಡ ಸಮಗ್ರ ಕರ್ನಾಟಕ ಚರಿತ್ರೆ ಏಳು ಸಂಪುಟಗಳ ಸಂಯೋಜಕರಾಗಿದ್ದರು.

೧೯೯೪–೨೦೦೦ ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ನಿರೂಪಿತವಾದ 'ಬೇಟೆ ಮತ್ತು ಬೇಡರ ಸಂದರ್ಭಗಳು: ಚಾರಿತ್ರಿಕ ವಿವೇಚನೆ' ಎಂಬ ವಿಷಯದ ಕುರಿತು ಪ್ರೊ. ವಿರೂಪಾಕ್ಷಿ ಪೂಜಾರಹಳ್ಳಿ ಅವರಿಗೆ ಪಿಎಚ್.ಡಿ. ಮಾರ್ಗದರ್ಶನ ಮಾಡಿದರು.

೧೯೯೪ ಐತಿಹಾಸಿಕ ಚಿತ್ರದುರ್ಗವೆಂಬ ಟೆಲಿಸಾಕ್ಷ್ಯ ಚಿತ್ರಕ್ಕೆ ನಿರೂಪಣ ಸಾಹಿತ್ಯದ ರಚನೆ ಮತ್ತು ಮಾರ್ಗದರ್ಶನ ಮಾಡಿದರು.

೧೯೯೪ 'ಹಂಪಿಯ ಬಜಾರಗಳು' ಎಂಬ ಎಂ.ಫಿಲ್.ಗೆ ಮಾರ್ಗದರ್ಶನವನ್ನು ಎಸ್.ವೈ. ಸೋಮಶೇಖರ್ ಅವರಿಗೆ ನೀಡಿದರು.

೧೯೯೪ 'ವಿಜಯನಗರದ ಸಾಮಾಜಿಕ ಪರಿಸ್ಥಿತಿ: ಕೆಲವು ಅನಿಷ್ಟ ಪದ್ಧತಿಗಳು' ಎಂಬ ಎಂ.ಫಿಲ್. ಮಾರ್ಗದರ್ಶನವನ್ನು ಬಸವರಾಜಯ್ಯ ಮಠದ ಅವರಿಗೆ ಮಾಡಿದರು.

೧೯೯೪–೯೫ ಕರ್ನಾಟಕ ಇತಿಹಾಸ ಅಕಾಡೆಮಿಯ ಉಪಾಧ್ಯಕ್ಷರಾಗಿ ಸೇವೆ.

೧೯೯೪–೧೯೯೭ ಅಧ್ಯಯನ ಮಂಡಲಿ, ಇತಿಹಾಸ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯದ ಸದಸ್ಯರಾಗಿ ಸೇವೆ.

೧೯೯೫ 'ಶಿವಮೊಗ್ಗ ಜಿಲ್ಲೆಯಲ್ಲಿ ಸಮಾಜವಾದಿ ಚಳುವಳಿಗಳು' ಎಂಬ ಎಂ.ಫಿಲ್.ಗೆ ಜಿ.ಎನ್. ಕೀರ್ತನಾಥ ಅವರಿಗೆ ಮಾರ್ಗದರ್ಶನ ನೀಡಿದರು.

೧೯೯೫ 'ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನದ ಲೇಖನಗಳು' ಎಂಬ ಸಂಪಾದನ ಕೃತಿಯನ್ನು ಹುಲ್ಲೂರು ಶ್ರೀನಿವಾಸ ಜೋಯಿಸ ಗ್ರಂಥ ಪ್ರಕಟಣ ಸಮಿತಿ ಚಿತ್ರದುರ್ಗದಿಂದ ಪ್ರಕಟಿಸಲಾಯಿತು.

೧೯೯೫ ೪೦ನೇ ಜಿಲ್ಲಾ ಕನ್ನಡ ರಾಜ್ಯೋತ್ಸವ ಸಮಿತಿ ಚಿತ್ರದುರ್ಗದಲ್ಲಿ ಸನ್ಮಾನ ಮಾಡಲಾಯಿತು.

೧೯೯೭ ಸ್ವಾತಿ ಪ್ರಕಾಶನದ ವತಿಯಿಂದ 'ಇದು ಚಿತ್ರದುರ್ಗ' ಎಂಬ ಕೃತಿ ಲೋಕಾರ್ಪಣೆಗೊಳ್ಳಲಾಯಿತು.

೧೯೯೭ 'ಚಿತ್ರದುರ್ಗ ಸಂಶೋಧನ ತಂಡ: ಪಕ್ಷಿನೋಟ' ಎಂಬ ಸಂಶೋಧನ ಕೃತಿ ಹೊರತಲಾಯಿತು.

೧೯೯೭–೨೦೦೧ ಕರ್ನಾಟಕ ಗ್ಯಾಸೆಟಿಯರ್‌ನ ಸಲಹಾ ಸಮಿತಿಯ ಸದಸ್ಯಾರಾಗಿ ಸೇವೆ.

೧೯೯೭ ಚಿತ್ರದುರ್ಗದ ಸಂಶೋಧನ ತಂಡದ ಬೆಳ್ಳಿ ಹಬ್ಬ ಚಿತ್ರದುರ್ಗದಲ್ಲಿ ಸನ್ಮಾನಿಸಲಾಯಿತು.

೧೯೯೭ ರಾಜಾವೀರ ಮದಕರಿನಾಯಕರ ಕಂಚಿನ ಪ್ರತಿಮೆಯ ಪ್ರತಿಷ್ಠಾಪನ ಮಹೋತ್ಸವ ಚಿತ್ರದುರ್ಗದ ವತಿಯಿಂದ ಸನ್ಮಾನಿಸಲಾಯಿತು.

೧೯೯೮–೨೦೦೧ ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಸಮಾಜವಿಜ್ಞಾನಗಳ ನಿಕಾಯದ ಡೀನ್ ಆಗಿ ಸೇವೆ.

೧೯೯೮-೯೯ ರಾಷ್ಟ್ರೀಯ ವೀರರನ್ನು ಕುರಿತ ಚಿರಸ್ಮರಣೆ ಎಂಬ ಟೆಲಿ-ಸಾಕ್ಷ್ಯ ಚಿತ್ರಗಳಿಗೆ ಮಾರ್ಗದರ್ಶನ ಮತ್ತು ಸಹಕಾರ ನೀಡಿದರು.

೧೯೯೯ 'ಪ್ರೊ. ಲಕ್ಷ್ಮಣ್ ತೆಲಗಾವಿ ಜೀವನ ಸಾಧನೆ' ಎಂಬ ಸಂಶೋಧನ ಕೃತಿಯ ಸಂಪಾದನೆಯನ್ನು ಎಸ್.ಆರ್. ಗುರುನಾಥ ಅವರು ಮಾಡಿದ್ದು ಇದನ್ನು ಚಿತ್ರದುರ್ಗದ ಪುರಸಭೆಯ ಪೌರ ಸನ್ಮಾನ ಸಂದರ್ಭದ ನೆನಪಿನ ಪ್ರಕಟಣೆ ಮಾಡಲಾಯಿತು.

೧೯೯೯ ಚಿತ್ರದುರ್ಗದ ಪುರಸಭೆಯಿಂದ ಪೌರ ಸನ್ಮಾನ ಮಾಡಲಾಯಿತು.

೧೯೯೯ ಡಾ. ಬಿ.ಆರ್. ಅಂಬೇಡ್ಕರ್ ರಾಷ್ಟ್ರೀಯ ಫೆಲೋಶಿಪ್, ಭಾರತೀಯ ದಲಿತ ಸಾಹಿತ್ಯ ಅಕಾಡೆಮಿ ದೆಹಲಿಯಲ್ಲಿ ರಾಷ್ಟ್ರೀಯ ಸನ್ಮಾನ ಮಾಡಲಾಯಿತು.

೧೯೯೯ 'ಸಂಶೋಧನ ನಿಧಿ' ಎಂಬ ಬಿರುದನ್ನು ಶ್ರೀ ಮುರುಘಮಠ, ಚಿತ್ರದುರ್ಗದ ವತಿಯಿಂದ ನೀಡಲಾಯಿತು.

೧೯೯೯ ವಾಲ್ಮೀಕಿ ಸಾಹಿತ್ಯ ಸಂಪದ ಹರ್ತಿಕೋಟೆಯಲ್ಲಿ ಪ್ರಕಟಿಸಿದ 'ಬುರುಗು' ಕೃತಿಯನ್ನು ಬಿಡುಗೊಳಿಸಲಾಯಿತು.

೧೯೯೯ 'ಕರ್ನಾಟಕದ ಹಿಂದುಳಿದ ವರ್ಗಗಳ ಮತ್ತು ದಲಿತ ಚಳುವಳಿ' ಎಂಬ ಕೃತಿಯನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯಲ್ಲಿ ಪ್ರಕಟಿಸಲಾಯಿತು.

೨೦೦೦ ಆಗಸ್ಟ್ ೨೧ ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ನಿರೂಪಿತವಾಗಿರುವ ಬೇಟೆ ಮತ್ತು ಬೇಡರ ಸಂದರ್ಭಗಳು : ಚಾರಿತ್ರಿಕ ಅಧ್ಯಯನಕ್ಕೆ ಪಿಎಚ್.ಡಿ. ಪದವಿ ಘೋಷಣೆ.

೨೦೦೩ 'ಶ್ರೀ ಗುರು ರವಿದಾಸ ರತ್ನ' ಎಂಬ ಬಿರುದನ್ನು ಭಾರತೀಯ ದಲಿತ ಸಾಹಿತ್ಯ ಅಕಾಡೆಮಿ, ದೆಹಲಿ ವತಿಯಿಂದ ನೀಡಲಾಯಿತು.

೨೦೦೩ 'ಸ್ಥಳೀಯ ಚರಿತ್ರೆ: ಅಧ್ಯಯನದ ಸ್ವರೂಪ ಮತ್ತು ತಾತ್ವಿಕತೆ' ಎಂಬ ಸಂಪಾದನ ಕೃತಿಯನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯಲ್ಲಿ ಪ್ರಕಟಿಸಲಾಯಿತು.

೨೦೦೩ 'ಹಂಪಿ ಉತ್ಸವದಲ್ಲಿ ವಿಜಯನಗರ' ಎಂಬ ವಿಚಾರ ಸಂಕಿರಣದಲ್ಲಿ ಸರ್ವಾಧ್ಯಕ್ಷತೆಯನ್ನು ವಹಿಸಿದ್ದರು.

೨೦೦೩ ಅಖಿಲ ಕರ್ನಾಟಕ ಡಾ. ರಾಜ್‌ಕುಮಾರ್ ಅಭಿಮಾನಿಗಳ ಸಂಘ, ಹೊಸದುರ್ಗದ ವತಿಯಿಂದ ಸನ್ಮಾನಿಸಲಾಯಿತು.

೨೦೦೩ 'ಚಿತ್ರದುರ್ಗ ಜಿಲ್ಲೆಯಲ್ಲಿ ಅಮೃತಮಹಲ್ ತಳಿ ಸಂವರ್ಧನೆ: ಚಾರಿತ್ರಿಕ ಅಧ್ಯಯನ'ವೆಂಬ ವಿಷಯದ ಕುರಿತು ಕೆ.ಪಿ. ನಾಗೇಂದ್ರಸ್ವಾಮಿ ಅವರಿಗೆ ಎಂ.ಫಿಲ್. ಮಾರ್ಗದರ್ಶನ ಮಾಡಲಾಯಿತು.

೨೦೦೩ 'ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿ ಮಾದಿಗರು: ಚಾರಿತ್ರಿಕ ಅಧ್ಯಯನ' ಎಂಬ ವಿಷಯದ ಕುರಿತು ಕೆ.ಆರ್.ಜೆ. ರಾಜ್‌ಕುಮಾರ್ ಅವರಿಗೆ ಪಿಎಚ್.ಡಿ. ಮಾರ್ಗದರ್ಶನ ಮಾಡಲಾಯಿತು.

೨೦೦೪-೦೫ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯ ಪ್ರಾದೇಶಿಕ ಐತಿಹಾಸಿಕ ದಾಖಲೆಗಳ ಪರಿವೀಕ್ಷಣಾ ಸಮಿತಿಯ ಸದಸ್ಯರಾಗಿ ಸೇವೆ.

೨೦೦೪-೦೬ ಅಧ್ಯಯನ ಮಂಡಲಿಯ ಸದಸ್ಯರು, ಇತಿಹಾಸ ಮತ್ತು ಪ್ರಾಕ್ತಾನಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೦೦೪ ಸುಭದ್ರಕುಮಾರಿ ಚೌಹಾನ್ ಜನ್ಮಶತಾಬ್ಧಿ ಸನ್ಮಾನ, ಜೈಮಿನಿ ಅಕಾಡೆಮಿ ಪಾಣಿಪತ್ ಹರ್ಯಾಣದಲ್ಲಿ ರಾಷ್ಟ್ರೀಯ ಸನ್ಮಾನ ಮಾಡಲಾಯಿತು.

೨೦೦೪ 'ಮೌರ್ಯ ಮತ್ತು ಶಾತವಾಹನಯುಗ(ಕ್ರಿಪೂ. ೩ ರಿಂದ ಕ್ರಿಶ. ೩ನೇ ಶತಮಾನದವರೆಗೆ)' ಎಂಬ ಕೃತಿಯನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯಿಂದ ಪ್ರಕಟಿಸಲಾಯಿತು.

೨೦೦೪ 'ಚಿತ್ರದುರ್ಗ ಜಿಲ್ಲಾ ಇತಿಹಾಸ ಅಧ್ಯಯನದ ವ್ಯಾಪಕತೆ ಮತ್ತು ಸಾಧ್ಯತೆ: ಒಂದು ಶತಮಾನ' ಎಂಬ ಕೃತಿಯನ್ನು ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ ವತಿಯಿಂದ ಪ್ರಕಟಿಸಲಾಯಿತು.

೨೦೦೪ 'ಇತಿಹಾಸಕಾರ ಎಚ್.ವಿ. ವೀರನಾಯಕ ಹರತಿ: ಜೀವನ ಚಿತ್ರ'ವೆಂಬ ಕೃತಿಯನ್ನು ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆವತಿಯಿಂದ ಪ್ರಕಟಿಸಲಾಯಿತು.

೨೦೦೪ 'ಡಾ. ಎಚ್.ಆರ್. ರಘುನಾಥಭಟ್ಟ: ಸ್ಮರಣೆ' ಎಂಬ ಸಂಪಾದನ ಕೃತಿಯನ್ನು ಚಿತ್ರಕಲ್ಲು ಪ್ರಕಾಶನ, ಚಿತ್ರದುರ್ಗ ವತಿಯಿಂದ ಪ್ರಕಟಿಸಲಾಯಿತು.

೨೦೦೪ 'ಎಚ್.ವಿ. ವೀರನಾಯಕ 'ಹರತಿ' ಬದುಕು-ಬರಹ'ವೆಂಬ ಎಂ.ಫಿಲ್. ಮಾರ್ಗದರ್ಶನವನ್ನು ಡಿ. ರಾಮಕೃಷ್ಣ ಅವರಿಗೆ ನೀಡಲಾಯಿತು.

೨೦೦೫ 'ವಿಜಯನಗರೋತ್ತರಕಾಲೀನ ಬೇಡ ಸಮುದಾಯದಲ್ಲಾದ ಸ್ಥಿತ್ಯಂತರಗಳು: ಚಾರಿತ್ರಿಕ ಅಧ್ಯಯನ' ಎಂಬ ಪಿಎಚ್.ಡಿ. ಮಹಾಪ್ರಬಂಧಕ್ಕೆ ಎಂ.ಕೆ. ದುರುಗಪ್ಪ ಅವರಿಗೆ ಮಾರ್ಗದರ್ಶನ ನೀಡಲಾಯಿತು.

೨೦೦೫ ಎಜುಸ್ಯಾಟ್‌ಗಾಗಿ ತಯಾರಿಸಲಾದ ಚಿತ್ರಮಯ ಚಿತ್ರದುರ್ಗ ಮತ್ತು ಓಬವ್ವೆ ಎಂಬ ಟೆಲಿ–ಸಾಕ್ಷ್ಯಚಿತ್ರಕ್ಕೆ ನಿರೂಪಣ ಸಾಹಿತ್ಯ ರಚನೆ ಹಾಗೂ ಮಾರ್ಗದರ್ಶನ ಮಾಡಿದರು.

೨೦೦೫ ಮಹಾತ್ಮ ಜ್ಯೋತಿ ಬಾಪುಲೆ ರಾಷ್ಟ್ರೀಯ ಪ್ರಶಸ್ತಿ, ಭಾರತೀಯ ದಲಿತ ಸಾಹಿತ್ಯ ಅಕಾಡೆಮಿ, ದೆಹಲಿ ನೀಡಲಾಯಿತು.

೨೦೦೫–೦೬ ಚರಿತ್ರೆ ಅಧ್ಯಯನ ಎಂಬ ಸಂಚಿಕೆಯನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗದಿಂದ ಅರ್ಧವಾರ್ಷಿಕ ಸಂಚಿಕೆಯನ್ನು ಪ್ರಕಟಿಸಲಾಯಿತು.

೨೦೦೬ 'ಕೆ. ರಾಮಸ್ವಾಮಯ್ಯಂಗಾರ್ ಅವರ ಜೀರ್ಣವಿಜಯನಗರಾದರ್ಶಂ' ಎಂಬ ಸಂಪಾದಿತ ಕೃತಿಯನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯ ವತಿಯಿಂದ ಪ್ರಕಟಿಸಲಾಯಿತು.

೨೦೦೬ 'ಕರ್ನಾಟಕ ನಾಯಕ ಅರಸರ ಕೆಲವು ವಿಶಿಷ್ಟ ಸಾಂಸ್ಕೃತಿಕಾಚರಣೆಗಳು: ಚಾರಿತ್ರಿಕ ಅಧ್ಯಯನ' ಎಂಬ ವಿಷಯಕ್ಕೆ ಅಮರೇಶ ಯತಗಲ್ ಅವರಿಗೆ ಪಿಎಚ್.ಡಿ. ಮಾರ್ಗದರ್ಶನ ನೀಡಲಾಯಿತು.

೨೦೦೬ ಚಿತ್ರದುರ್ಗ ಉತ್ಸವದಲ್ಲಿ ಸನ್ಮಾನಿಸಲಾಯಿತು.

೨೦೦೬ ಕರ್ನಾಟಕದಲ್ಲಿ ಮರುಳಸಿದ್ಧರ ನೆಲೆಗಳು ಮತ್ತು ಸ್ಮಾರಕಗಳು: ಚಾರಿತ್ರಿಕ ಅಧ್ಯಯನ ಎಂಬ ವಿಷಯಕ್ಕೆ ಎಂ.ಎಚ್. ವಿಜಯ್‌ಕುಮಾರ್ ಅವರಿಗೆ ಪಿಎಚ್.ಡಿ. ಮಾರ್ಗದರ್ಶನ ನೀಡಲಾಯಿತು.

೨೦೦೬ ಡಾ. ಬಿ.ಆರ್. ಅಂಬೇಡ್ಕರ್ ರಾಷ್ಟ್ರೀಯ ಪ್ರಶಸ್ತಿ, ಭಾರತೀಯ ದಲಿತ ಸಾಹಿತ್ಯ ಅಕಾಡೆಮಿ ದೆಹಲಿ ವತಿಯಿಂದ ಮಾಡಲಾಯಿತು.

೨೦೦೬–೦೭ ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿಯಲ್ಲಿ ಸಂದರ್ಶನ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ.

೨೦೦೭ ಇತಿಹಾಸ ಭೂಷಣ ಎಂಬ ಬಿರುದನ್ನು ಶ್ರೀ ಏಕನಾಥೇಶ್ವರಿ ಸಂಗೀತ ವಿದ್ಯಾಲಯ ಹಿರಿಯೂರು ವತಿಯಿಂದ ನೀಡಲಾಯಿತು.

೨೦೦೭ ಕರ್ನಾಟಕ ಇತಿಹಾಸ ಅಕಾಡೆಮಿ ೨೧ನೇ ಅಧಿವೇಶನದ ಸರ್ವಾಧ್ಯಕ್ಷತೆಯನ್ನು ಹಗರಿಬೊಮ್ಮನಹಳ್ಳಿಯಲ್ಲಿ ವಹಿಸಿದ್ದರು.

೨೦೦೮ 'ಕರ್ನಾಟಕ ಪಾಳೆಯಗಾರರ ನ್ಯಾಯಾಡಳಿತ' ಎಂಬ ಜಿ.ಎಚ್. ಪ್ರಸಾದ್ ಅಭಿನಂದನ ಸಂಪುಟವನ್ನು ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ ವತಿಯಿಂದ ಪ್ರಕಟಿಸಲಾಯಿತು.

೨೦೦೮	ಕರ್ನಾಟಕ ಇತಿಹಾಸ ಕಾಂಗ್ರೆಸ್‌ನ ೧೯ನೇ ಸಮ್ಮೇಳನದ ಸರ್ವಾಧ್ಯಕ್ಷತೆಯನ್ನು ತುಮಕೂರಿನಲ್ಲಿ ವಹಿಸಿದ್ದರು.
೨೦೦೯	'ಚಿತ್ರದುರ್ಗ ನಾಯಕ ಅರಸರು: ರಾಜಕೀಯ ಚಿತ್ರ' ಎಂಬ ಕೃತಿಯನ್ನು ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ ವತಿಯಿಂದ ಪ್ರಕಟಿಸಲಾಯಿತು.
೨೦೦೯–೧೧	ಯುಜಿಸಿ ಎಮಿರಿಟಸ್ ಫೆಲೋ ಆಗಿ ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿಯಲ್ಲಿ ಸೇವೆ.
೨೦೦೯	'ವಿಜಯನಗರ ಕಾಲದ ರಾಮಾನುಜಕೂಟಗಳು' ಎಂಬ ಕೃತಿಯನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯ ವತಿಯಿಂದ ಪ್ರಕಟಿಸಲಾಯಿತು.
೨೦೦೯–೧೧	'ಚಿತ್ರದುರ್ಗ ಪರಿಸರದ ಬಯಲು ಬಂಡೆ ರೇಖಾಕೃತಿಗಳು' ಎಂಬ ಯುಜಿಸಿ ಪ್ರಾಯೋಜಿತ ಸಂಶೋಧನ ಯೋಜನೆ ವರದಿ ತಯಾರಿಸಲಾಯಿತು.
೨೦೧೦–೧೧	'೭೭ ಪಾಳೆಯಗಾರರು: ಸಂಖ್ಯಾ ಆಶಯ ನೆಲೆಯ ಚಾರಿತ್ರಿಕ ವಿವೇಚನೆ' ಎಂಬ ಕೃತಿಯನ್ನು ವಾ.ಸಾ.ಸಂ. ಹರ್ತಿಕೋಟೆ ವತಿಯಿಂದ ಪ್ರಕಟಣೆ.
೨೦೧೦	'ಚಿತ್ರದುರ್ಗದ ಒನಕೆ ಓಬವ್ವ: ಚಾರಿತ್ರಿಕ ವಿವೇಚನೆ' ಎಂಬ ಕೃತಿಯನ್ನು ಹಂಪಿ, ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟಣೆ.
೨೦೧೦	'ದೊಡ್ಡೇರಿ ಕದನ: ಚರಿತ್ರೆ ಮತ್ತು ಜಾನಪದಗಳ ನೆಲೆಯಲ್ಲಿ' ಎಂಬ ಕೃತಿಯನ್ನು ಹಂಪಿ, ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟಣೆ.
೨೦೧೦	ಚಿತ್ರದುರ್ಗ ಜಿಲ್ಲಾ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸನ್ಮಾನಿಸ ಲಾಯಿತು.
೨೦೧೦	'ಯಂ. ವೀರಮುದ್ದಣ್ಣ ವಿರಚಿತ ಚಿತ್ರದುರ್ಗದ ಲಡಾಯಿ ಲಾವಣಿ' ಎಂಬ ಸಂಪಾದಿತ ಕೃತಿಯನ್ನು ವಾ.ಸಾ.ಸಂ. ಹರ್ತಿಕೋಟೆ ವತಿಯಿಂದ ಪ್ರಕಟಿಸಲಾಯಿತು.
೨೦೧೧	'ರಾಮಾಜಿ ತಿರುಮಲ ಹರಿಕಾರೆಯ ರಾಮರಾಜನ ಬಖೈರು' ಎಂಬ ಸಂಪಾದಿತ ಕೃತಿಯನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯ ವತಿಯಿಂದ ಪ್ರಕಟಿಸಲಾಯಿತು.
೨೦೧೨	'ದುರ್ಗಾಭಿಜಾತ' ಎಂಬ ಪ್ರೊ. ತೆಲಗಾವಿ ಬದುಕಿನ ಕೆಲವು ನೋಟಗಳು ಕುರಿತಂತೆ ಎಸ್.ಆರ್. ಗುರುನಾಥ ಅವರು ಪ್ರಕಟಿಸಿದರು.
೨೦೧೨	'ತೆಲಗಾವಿಜನ್' ಎಂಬ ಪ್ರೊ. ತೆಲಗಾವಿ ಅವರೊಡನೆ ಸಂವಾದವನ್ನು ಎಸ್.ಆರ್. ಗುರುನಾಥ ಅವರು ಪ್ರಕಟಿಸಿದರು.

೨೦೧೨ ಇತಿಹಾಸ ಸಂಸ್ಕೃತಿ ಶ್ರೀ ಎಂಬ ಬಿರುದನ್ನು ಶ್ರೀಮತಿ ಬೈಸಾನಿ ರುಕ್ಮಣಮ್ಮ ರತ್ನಂಶೆಟ್ಟಿ ನೆನಪಿನ ಬಿರುದನ್ನು ಇತಿಹಾಸ ಅಕಾಡೆಮಿ ವತಿಯಿಂದ ನೀಡಲಾಯಿತು.

೨೦೧೫ ಚಿತ್ರದುರ್ಗದ ಇತಿಹಾಸ ವಿಭಾಗ ಮಹಾಕೂಟದ ವತಿಯಿಂದ ಹಿರಿಯ ಸಂಶೋಧಕ ಎಂಬ ಬಿರುದು ಚಿತ್ರದುರ್ಗದಲ್ಲಿ ನೀಡಿ ಸನ್ಮಾನಿಸಿ ಗೌರವಿಸಲಾಗಿದೆ.

೨೦೧೫ ಚರಿತ್ರೆ ಸಂಶೋಧನೆ, ನಾಡು, ನುಡಿಗೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಕರ್ನಾಟಕ ಸರ್ಕಾರ ಸಂಕೀರ್ಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಿಗೌರವಿಸಿದೆ.

◆◆

ಛಾಯಾಚಿತ್ರಗಳು





ಶಾಸನ ಶೋಧನೆ ಮತ್ತು ಅಧ್ಯಯನದಲ್ಲಿ ನಿರತರಾಗಿರುವ ಲಕ್ಷ್ಮಣ್ ತೆಲಗಾವಿ.



ಬೃಹತ್ ಬಂಡೆಶಾಸನ ಹಾಗೂ ಅಪಿ ಅಧ್ಯಯನದಲ್ಲಿ ತೊಡಗಿರುವುದು.




ಹೊಳಲ್ಕೆರೆಯ ಒಂಟಿಕಂಬದ ಮಠದ ಬಳಿ ದೊರೆತ ಶಾಸನದ ಅಧ್ಯಯನದಲ್ಲಿ ನಿರತರಾಗಿರುವುದು.



ಸಂಶೋಧನೆಗಾಗಿ ಶ್ರೀಗಳೊಬ್ಬರಿಂದ ಹಸ್ತಪ್ರತಿ ಸ್ವೀಕರಿಸುತ್ತಿರುವುದು.



ಬಂಡೆಶಾಸನದಲ್ಲಿ ಪಡಿಯಚ್ಚನ್ನು ತೆಗೆಯುತ್ತಿರುವುದು.



ಲಕ್ಷ್ಮಣ್ ತೆಲಗಾವಿ ಯವರು ಶೋಧಿಸಿದ ಚಿತ್ರಹಳ್ಳಿ ಹಾಗೂ ಮುದ್ದಾಪುರದ ತಾಮ್ರ ಪಟಗಳು



ಚಿತ್ರದುರ್ಗದ ಕೋಟೆಯ ಛಾಯಾಚಿತ್ರಗಳನ್ನು ಸೆರೆಹಿಡಿಯುತ್ತಿರುವ
ಲಕ್ಷ್ಮಣ್ ತೆಲಗಾವಿ ಮತ್ತು ತಂಡ.




ಸಂಶೋಧನ ಛಾಯಗ್ರಹಕರಾಗಿ ಲಕ್ಷ್ಮಣ್ ತೆಲಗಾವಿ.



ಚಿತ್ರದುರ್ಗದ ಸಂಶೋಧನ ತಂಡದೊಂದಿಗೆ ಲಕ್ಷ್ಮಣ್ ತೆಲಗಾವಿ.



"ಚಿತ್ರಮಯಿ ಚಿತ್ರದುರ್ಗ" ಎಂಬ ಟೆಲಿಸಾಕ್ಷ್ಯ ಚಿತ್ರದಲ್ಲಿ ನಟನನಿರತರಾಗಿರುವುದು.



"ಐತಿಹಾಸಿಕ ಚಿತ್ರದುರ್ಗ" ಮತ್ತು "ಖೋಟಾನೋಟು" ಎಂಬ
ಟೆಲಿಸಾಕ್ಷ್ಯ ಚಿತ್ರಗಳಲ್ಲಿ ಅಭಿನಯಸಿರುವುದು.



ಚಿತ್ರದುರ್ಗದಲ್ಲಿ ಏರ್ಪಡಿಸಿದ ಸನ್ಮಾನ ಸಮಾರಭದಲ್ಲಿ ಖ್ಯಾತ ಸಾಹಿತಿಗಳಾದ
ಬಿ.ಎಲ್.ವೇಣು ಅವರಿಂದ ಸನ್ಮಾನಿತರಾಗಿರುವುದು



೧೯೯೭ ರ ಚಿತ್ರದುರ್ಗ ಸಂಪಿಗೆ ಸಿದ್ದೇಶ್ವರ ದೇವಾಲಯದ ಆವರಣದಲ್ಲಿ ಲಕ್ಷ್ಮಣ್ ತೆಲಗಾವಿಯವರ
೫೦ನೇಹುಟ್ಟುಹಬ್ಬ ಹಾಗೂ ಚಿತ್ರದುರ್ಗ ಸಂಶೋಧನಾ ತಂಡದ ೨೫ ನೇ ವರ್ಷದ ಆಚರಣೆ



ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ.ಚಂದ್ರಶೇಖರ ಕಂಬಾರ
ಹಾಗೂ ಎಂ.ಎಂ.ಕಲಬುರ್ಗಿ ಅವರೊಂದಿಗೆ



ಕನ್ನಡ ವಿಶ್ವವಿದ್ಯಾಲಯ ಚರಿತ್ರೆ ವಿಭಾಗದ ಅಧ್ಯಾಪಕ ತಂಡದೊಂದಿಗೆ



೧೯೯೯ ರ ಶರಣ ಸಂಸ್ಕೃತಿ ಉತ್ಸವದಲ್ಲಿ ಚಿತ್ರದುರ್ಗದ ಶ್ರೀ ಮುರುಘಾಮಠದ ವತಿಯಿಂದ ಸಂಶೋಧನನಿಧಿ ಎಂಬ ಪ್ರಶಸ್ತಿ ಸ್ವೀಕರಿಸುತ್ತಿರುವುದು.



೧೯೯೯ ರಲ್ಲಿ ಚಿತ್ರದುರ್ಗದ ನಗರಸಭೆ ವತಿಯಿಂದ ಏರ್ಪಡಿಸಿದ ಸನ್ಮಾನ ಸಮಾರಂಭದಲ್ಲಿ ಸನ್ಮಾನಿತರಾಗಿರುವುದು.



೨೦೦೦ ರ ಕರ್ನಾಟಕ ಇತಿಹಾಸ ಅಕಾಡಮಿಯ ೧೪ನೇ ವಾರ್ಷಿಕ ಸಮ್ಮೇಳನದಲ್ಲಿ ಭಾಷಣ ನಿರತರಾಗಿರುವುದು.



ಕುವೆಂಪು ವಿಶ್ವವಿದ್ಯಾನಿಲಯವು ೨೦೦೪ ರ ಚಿತ್ರದುರ್ಗದಲ್ಲಿ ಏರ್ಪಡಿಸಿದ ಜನಪದ ಸಾಂಸ್ಕೃತಿಕ ವೀರರು ಎಂಬ ವಿಚಾರ ಸಂಕಿರಣದಲ್ಲಿ ಅಧ್ಯಕ್ಷತೆ ವಹಿಸಿರುವುದು.



೨೦೦೬ ರ ರಾಯಚೂರಿನಲ್ಲಿ ಏರ್ಪಡಿಸಿದ ಕಲ್ಯಾಣ ಕರ್ನಾಟಕದ ಸಾಮಂತ ಅರಸು ಮನೆತನಗಳು ಎಂಬ ರಾಷ್ಟ್ರೀಯ ವಿಚಾರ ಸಂಕಿರಣ ದಲ್ಲಿ ಭಾಗಿಯಾಗಿರುವುದು.



೨೦೦೬ ರ ಧಾರವಾಡದಲ್ಲಿ ನಡೆದ ಕರ್ನಾಟಕ ಇತಿಹಾಸ : ವಿಜಯನಗರ ಕಾಲದಿಂದ ಬ್ರಿಟಿಷ್ ಆಡಳಿತ ಅಂತ್ಯದವರೆಗೆ ಹಾಗೂ ಕರ್ನಾಟಕ ಏಕೀಕರಣ. ಎಂಬ ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ ವಿಚಾರ ಮಂಡಿಸುತ್ತಿರುವುದು.



೨೦೦೬ ರ ಕನ್ನಡ ವಿಶ್ವವಿದ್ಯಾಲಯ ಹಂಪಿಯ ಸುವರ್ಣ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ಕುಲಪತಿ ಡಾ॥ ಬಿ.ಎ.ವಿವೇಕ ರೈ ಜೊತೆ ಆಸನರಾಗಿರುವುದು



೨೦೦೬ರ ಚಿತ್ರದುರ್ಗ ಜಿಲ್ಲಾ ಉತ್ಸವದ ವಿಚಾರ ಗೋಷ್ಠಿಯ ಅಧ್ಯಕ್ಷರಾಗಿರುವುದು



೨೦೦೬ ರ ದೆಹಲಿಯಲ್ಲಿ ಜರುಗಿದ ಭಾರತ ದಲಿತ ಸಾಹಿತ್ಯ ಅಕಾಡಮಿ ವತಿಯಿಂದ ಸಭಾಧ್ಯಕ್ಷರಾದ ಡಾ॥ ಮೀರಾ ಕುಮಾರ್ ಅವರಿಂದ ಜ್ಯೋತಿ ಬಾಪುಲೆ ಎಂಬ ರಾಷ್ಟ್ರೀಯ ಪ್ರಶಸ್ತಿ ಸ್ವೀಕರಿಸುತ್ತಿರುವುದು.



೨೦೦೮ ರ ಬೆಂಗಳೂರಿನಲ್ಲಿ ಜರುಗಿದ ಕರ್ನಾಟಕ ಇತಿಹಾಸ ಅಕಾಡೆಮಿ ಯವರು ಏರ್ಪಡಿಸಿದ
೨೨ನೇ ವಾರ್ಷಿಕ ಸಮ್ಮೇಳನದಲ್ಲಿ ಡಾ॥ ವೀರೇಂದ್ರ ಹೆಗಡೆಯವರೊಂದಿಗೆ ಮುಖ್ಯ ಅತಿಥಿಯಾಗಿ ಭಾಗವಹಿಸಿರುವುದು



ತುಮಕೂರಿನಲ್ಲಿ ನಡೆದ ೨೦೦೮ ರ ಕರ್ನಾಟಕ ಇತಿಹಾಸ ಕಾಂಗ್ರೇಸ್‌ನ ೧೯ನೇ ಸಮ್ಮೇಳನದಲ್ಲಿ ಶ್ರೀ ಸಿದ್ದಗಂಗಾ
ಶಿವಕುಮಾರಮಹಾಸ್ವಾಮಿಗಳ ಜೊತೆ ವಿಚಾರ ಸಂಕಿರಣದ ಉಧ್ಘಾಟನಾ ಸಮಾರಂಭದಲ್ಲಿ .



೨೦೦೮ ರ ಹಗರಿಬೊಮ್ಮನಹಳ್ಳಿಯಲ್ಲಿ ಏರ್ಪಡಿಸಿದ ಶ್ರೀ ಕೃಷ್ಣದೇವರಾಯ ಸಭಾಂಗಣದ ೨೧ನೇ ವಾರ್ಷಿಕ
ಸಮ್ಮೇಳನದಲ್ಲಿ ಉಪ ಮುಖ್ಯಮಂತ್ರಿಗಳಾಗಿದ್ದ ಎಂ.ಪಿ.ಪ್ರಕಾಶ್ ಅವರಿಂದ ಸನ್ಮಾನ ಸ್ವೀಕರಿಸುತ್ತಿರುವುದು



೨೦೦೯ ರ ರಾಯಚೂರಿನ ಶಕ್ತಿನಗರದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತೋತ್ಸವದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿರುವುದು



ಗದಗದಲ್ಲಿ ಏರ್ಪಡಿಸಿರುವ ಕರ್ನಾಟಕ ರಾಜ್ಯ ಸಮಗಾರ (ಚಮ್ಮಾರ) ಹರಳಯ್ಯ ಸಮಾಜ ಮಹಾ ಮಂಡಳದ ಪ್ರಥಮ ವಾರ್ಷಿಕೋತ್ಸವದಲ್ಲಿ ಗೌರವ ಪ್ರಶಸ್ತಿಗೆ ಭಾಜನರಾಗಿರುವುದು



ಚಿತ್ರಗುರ್ದದಲ್ಲಿ ನಡೆದ ೨೦೦೯ ರ ೭೫ನೇ ಅಖಿಲಭಾರತ ಕನ್ನಡಸಾಹಿತ್ಯ ಸಮ್ಮೇಳನದಲ್ಲಿ ವಿಷಯ ಮಂಡಿಸುತ್ತಿರುವುದು.



ತುಮಕೂರು ವಿಶ್ವವಿದ್ಯಾಲಯ ವತಿಯಿಂದ ಏರ್ಪಡಿಸಿದ ಕರ್ನಾಟಕ ಇತಿಹಾಸ ಕಾಂಗ್ರೇಸ್‌ನ ೧೯ನೇ ಅಧಿವೇಶನದಲ್ಲಿ ಕುಲಪತಿ ಓ. ಅನಂತರಾಮಯ್ಯ, ಹಾಗೂ ಇತಿಹಾಸ ಕಾಂಗ್ರೇಸ್‌ನ ಪದಾಧಿಕಾರಿಗಳೊಂದಿಗೆ



ಹಂಪಿ ವಿಶ್ವವಿದ್ಯಾಲಯವು ಏರ್ಪಡಿಸಿದ ಸನ್ಮಾನ ಸಮಾರಂಭದಲ್ಲಿ
ಕುಲಪತಿ ಡಾ||ಬಿ.ಎ.ವಿವೇಕ ರೈ ಅವರಿಂದ ಸನ್ಮಾನಿತರಾಗಿರುವುದು



ಅಧ್ಯಾಪಕ ವೃತ್ತಿಯಿಂದ ನಿವೃತ್ತಿಯ ಬೀಳ್ಕೊಡುಗೆ ಪಡೆಯುತ್ತಿರುವುದು

ಚರಿತ್ರೆ ವಿಭಾಗ